
# ಸುಗಮಾ



ಗ್ರಂಥಕರ್ತರು

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಅನುವಾದಕರು

ವೇ। ಬ್ರ। ಶ್ರೀ ಚಂದ್ರಮೌಳಿ ಅವಧಾನಿಗಳು

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ

ಅಧ್ಯಾತ್ಮಗ್ರಂಥಾವಲಿಃ

# ಸುಗಮಾ

(ಅಧ್ಯಾಸಭಾಷ್ಯವ್ಯಾಖ್ಯಾನ)

ಗ್ರಂಥಕರ್ತರು

**ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳು**

ಅನುವಾದಕರು

**ವೇ॥ಬ್ರ॥ಶ್ರೀ॥ ಚಂದ್ರಮೌಳಿ ಅವಧಾನಿಗಳು**

ಕ್ರಮಾಂಕ 242

ಪ್ರಕಾಶಕರು

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

ಹಾಸನ ಜಿಲ್ಲೆ ;

2010

**SUGAMA** - originally written by Poojya **Satchidaanandendra Saraswathi Swamigal,** Holenarasipur, in Sanskrit, now translated to Kannada by **Ve. M.S. Chandramooli Avadhanigalu** of Mattur: Published by Adhyatma Prakasha Karyalaya, Holenarasipur-573211, Karnataka, India. www.adhyatmaprakasha.org

First Edition : 2010

Copies : 1000

**Price Rs. : 100/-**

*All rights reserved by*

**The Adhyatma Prakasha Karyalaya**
Holenarasipura, Hasan (Dis.)

Registered under the copyright Act, 1957

*Printed in INDIA by*

**Sri Rama Printers**
No. 1, SGS Complex
Chunchaghatta Main Road
Bangalore-560 062.
Phone No. 26321267

# ಮೊದಲಮಾತು

ಪ್ರಿಯ ವಾಚಕರಿಗೆ ಇದೊಂದು ಸಂತಸದ ಸುದ್ದಿ. ಅದೇನೆಂದರೆ ಪರಮಪೂಜ್ಯ ಶ್ರೀಶ್ರೀ ಸಚ್ಚಿದಾನಂದೇದ್ರಸರಸ್ವತೀಸ್ವಾಮಿಗಳವರ ಮೇರುಕೃತಿ ಎನಿಸಿದ 'ಸುಗಮಾ' ಎಂಬ ಸಂಸ್ಕೃತಗ್ರಂಥವು ಕನ್ನಡಾನುವಾದದೊಂದಿಗೆ ತಮ್ಮ ಕೈ ಸೇರುತ್ತಲಿದೆ. ಇದರ ಅನುವಾ ದವನ್ನು ಸುಲಭವಾಗಿ ಮಾಡಬಹುದೆಂದು ನಾನು ಎಣಿಸಿದ್ದೆ. ಗ್ರಂಥಶರೀರದ ಒಳಗೆ ಪ್ರವೇಶಿಸಿದಹಾಗೆಲ್ಲಾ, ಇದರ ಗಡುಚುತನವೂ, ಗಾಂಭೀರ್ಯವೂ, ನನ್ನ ಧೃತಿಗೆಡಸಿತು. ಪಂಚಪಾದಿಕಾದಿ ವ್ಯಾಖ್ಯಾನಪ್ರಸ್ಥಾನಗ್ರಂಥಗಳ ಅನುವಾದಭಾಗವು ಅದನ್ನು ಶ್ರೀಶ್ರೀಗಳವರು ವಿಮರ್ಶಿಸಿ ಅದರ ದೋಷಗಳನ್ನು ಹೊರಗೆಡುಹಿದ ಭಾಗವು ನನಗೆ ಬಹಳ ಪರಿಶ್ರಮವನ್ನು ತಂದಿತು. ಅನೇಕ ಸ್ಥಳಗಳಲ್ಲಿ ನನ್ನ ಅಣ್ಣಂದಿರಾದ ವೇ।ಬ್ರ।ಶ್ರೀ ಅಶ್ವತ್ಥನಾರಾಯಣ ಅವಧಾನಿಗಳ ಸಹಾಯವನ್ನು ತೆಗೆದುಕೊಂಡಿರುತ್ತೇನೆ. ಅದರಂತೆಯೇ ಶ್ರೀಶ್ರೀ ಗಳವರ ಸೂತ್ರಭಾಷ್ಯ ಪಂಚಾಧಿಕರಣ ಎಂಬ ಗ್ರಂಥದಲ್ಲಿ ಅನುವಾದವಮಾಡಿಕೊಂಡ ವ್ಯಾಖ್ಯಾನದ ಅನುವಾದಖಂಡನಾಭಾಗವನ್ನು ಉಪಯೋಗಿಸಿಕೊಂಡಿರುತ್ತೇನೆ. ಇಷ್ಟಾದರೂ ಕೆಲವು ಸಂದರ್ಭಗಳಲ್ಲಿ ಇದು ಯಾರ ಪೂರ್ವಪಕ್ಷವು ಎಂದು ತಿಳಿಯಲು ಕಷ್ಟವಾಗಿದೆ. ಶ್ರೀ ಶ್ರೀ ಗಳವರು ಸಹ ಈ ಗ್ರಂಥದಲ್ಲಿ ಅದನ್ನು ಪರಾಮರ್ಶಿಸಿಲ್ಲ. ಬರೀ 'ಕೇಚಿತ್' 'ಅನ್ಯೇ' 'ಅಪರೇ' ಎಂಬುದಾಗಿ ಪರಾಮರ್ಶಿಸಿದ್ದಾರೆಯೋ ಹೊರತು ಯಾರದ್ದೆಂಬುದಾಗಿ ಹೆಸರಿಸಿಲ್ಲ. ಅಷ್ಟೇ ಅಲ್ಲ, ಪೂರ್ವಪಕ್ಷದ ಅನುವಾದದ ಕೊನೆಯಲ್ಲೂ ಆ ಗ್ರಂಥಭಾಗಗಳ ಸಂಖೆಯನ್ನು ಕೊಟ್ಟಿಲ್ಲವಾದ್ದರಿಂದ ಅದನ್ನು ಅನ್ವೇಷಿಸುವುದು ಕಷ್ಟವಾಗಿದೆ.

ಆದರೆ ಪೂಜ್ಯ ಶ್ರೀ ಪ್ರಕಾಶಾನಂದೇಂದ್ರಸರಸ್ವತೀಸ್ವಾಮಿಗಳವರು ನನ್ನ ಪ್ರಾರ್ಥನೆಯಂತೆ ಅನೇಕಸ್ಥಳಗಳಲ್ಲಿ ಪೂರ್ವಪಕ್ಷಗಳ ಹೆಸರನ್ನು ಗುರುತಿಸಿಕೊಟ್ಟಿರುತ್ತಾರೆ. ಅವರು ಈ ವಿಷಯಕ್ಕೆ ಹೇಳಿದ್ದೇನೆಂದರೆ ಶ್ರೀಶ್ರೀಗಳವರು ಕೆಲವು ಸಂದರ್ಭಗಳಲ್ಲಿ ಪೂರ್ವಪಕ್ಷದ ಅಭಿಪ್ರಾಯವನ್ನು ಮಾತ್ರ ತೆಗೆದುಕೊಂಡಿರುತ್ತಾರೆ. ನೇರಾಗಿ ಅವರ ವಾಕ್ಯವನ್ನು ತೆಗೆದುಕೊಂಡಿಲ್ಲ. ಮತ್ತೆ ಕೆಲವುಕಡೆಗಳಲ್ಲಿ ಆರಂಭದ ಎರಡು-ಮೂರು ವಾಕ್ಯಗಳನ್ನು ತೆಗೆದುಕೊಂಡು ಮಧ್ಯದ ವಿಷಯವನ್ನು ವಾಚಕರಿಗೆ ಅರ್ಥವಾಗುವಂತೆ ಸಾರಾಂಶವನ್ನು ಮಾತ್ರ ತೆಗೆದುಕೊಂಡು ಕೊನೆಯಲ್ಲಿ ವ್ಯಾಖ್ಯಾನಕಾರರುಗಳ ವಾಕ್ಯದಿಂದಲೇ ಪೂರ್ವಪಕ್ಷವನ್ನು ಮುಗಿಸಿರುತ್ತಾರೆ. ಅಂತಹ ಸಂದರ್ಭಗಳಲ್ಲಿಯೂ ನಾನು ಪೂರ್ವಪಕ್ಷದ ಸಂಖ್ಯೆಯನ್ನು ಕೊಟ್ಟಿರುತ್ತೇನೆ. ಈ ವಿಷಯವನ್ನು ವಾಚಕರು ನಾನು ಸೂಚಿಸಿದ ಗ್ರಂಥದಲ್ಲಿ

ಪೂರ್ವಪಕ್ಷಿಯಮತವು ಯಾರದ್ದೆಂಬುದು ಊಹೆಮಾಡುವುದಕ್ಕೂ ಕಷ್ಟಕರವಾಗಿದ್ದು ಬಹಳ ಅನ್ವೇಷಣೆ ಮಾಡಿಯೂ ಸಿಗದಿದ್ದಾಗ ಗ್ರಂಥಸಂಖ್ಯೆಯನ್ನು ಕೊಡದೆಯೇ ಬಿಟ್ಟಿರುತ್ತೇವೆ. ಇದನ್ನು ಯಾರಾದರೂ ವಾಚಕಮಹಾಶಯರು ಹುಡುಕಿ ತೋರಿಸಿಕೊಟ್ಟರೆ ಮುಂದಿನ ಮುದ್ರಣದಲ್ಲಿ ಅದನ್ನು ಸೇರಿಸುತ್ತೇವೆಂದು ವಾಚಕಮಹಾಶಯರಲ್ಲಿ ವಿನಂತಿಸಿಕೊಳ್ಳುತ್ತೇವೆ.

ಈ ಗ್ರಂಥವನ್ನು ಬಹಳಮಟ್ಟಿಗೆ ಪೂಜ್ಯ ಶ್ರೀಗಳವರು ಪಂಡಿತರಿಗಾಗಿಯೂ, ಹಾಗೂವಿಮರ್ಶೆಗಾಗಿಯೂ, ಬರೆದಿರುತ್ತಾರೆ. ಆದಕಾರಣ ಇದು ಕನ್ನಡಾನುವಾದ ವಾದರೂ ಆರಂಭವೇದಾಂತಾಭ್ಯಾಸಿಗಳಿಗೆ ಇದರ ಅರ್ಥಬೋಧವಾಗದಿರುವದು ಆಶ್ಚರ್ಯವೇನಲ್ಲ. ವೇದಾಂತಾಭ್ಯಾಸಿಗಳು ಇದನ್ನು ವಿದ್ವಾಂಸರ ಸಹಾಯದಿಂದಲೂ, ಸದ್ಗುರುಗಳ ಸಹಾಯದಿಂದಲೂ ತಿಳಿದುಕೊಳ್ಳಬೇಕೆಂದು ವಿನಂತಿಸಿಕೊಳ್ಳುವೆವು. ಹಾಗೆಯೇ ಈ ಗ್ರಂಥದ ಆಳವಾದ ಅಧ್ಯಯನದಿಂದ ಅಧ್ಯಾಸಭಾಷ್ಯದ ಮರ್ಮವೆಲ್ಲವೂ ಕೈವಶವಾಗುವದೆಂದು ಧಾರಾಳವಾಗಿ ಹೇಳುವೆವು. ತನ್ಮೂಲಕ ಸರ್ವಾನರ್ಥಕರವಾದ ಅಧ್ಯಾಸವು ನಿವೃತ್ತಿಯಾಗುವದರೊಂದಿಗೆ ಪರಮಪುರುಷಾರ್ಥವಾದ ಮೋಕ್ಷಸಾಮ್ರಾಜ್ಯವು ದೊರೆಯುವುದು.

ಕೊನೆಯದಾಗಿ ಈ ಗ್ರಂಥಮುದ್ರಣಕ್ಕೆ ಹೆಚ್ಚಿನ ಧನಸಹಾಯವನ್ನು ಮಾಡಿದವರಾದ ಹಾಲಿ ಬೆಂಗಳೂರಿನಲ್ಲಿರುವ ಸುಪ್ರಸಿದ್ಧ ಮಧುಮೇಹಚಿಕಿತ್ಸಕರಾದ ಶ್ರೀಮಾನ್ ಶ್ರೀ ಡಾ॥ ಅರವಿಂದ್ ಹಾಗೂ ಶ್ರೀಮತಿ ಡಾ॥ ಶೋಭಾ ಅರವಿಂದ್ ಇವರಿಗೆ ಪರಮಾತ್ಮನು ಸಕಲಸನ್ಮಂಗಳವನ್ನು ಉಂಟುಮಾಡಲೆಂದು ನಾವು ಹೃತ್ಪೂರ್ವಕವಾಗಿ ಹರಸುವೆವು. ಹಾಗೆಯೇ ಧನಸಹಾಯ ಮಾಡಿದವರಾದ ಶ್ರೀಮತಿ ಕುಸುಮಾ ಆನಂದ್,ಬೆಂ(೫೦೦೦ರೂ.), ಡಾ॥ ಸಾಂಬಶಿವರಾವ್, ಹೊ(೧೫೦೦ರೂ.), ಲೀಲಾವತಿ ನಾರಾಯಣರಾವ್,ಬೆಂ(೧೦೦೦ರೂ.), ಲಲಿತಮ್ಮ, ಮದನಪಲ್ಲಿ(೨೦೧ರೂ.), ಡಾ॥ ಪೂರ್ಣಚಂದ್ರರಾವ್, ಗುಂಟೂರು(೧೦೦೦ರೂ.) ಇವರಿಗೂ ಭಗವಂತನು ಸಕಲಶ್ರೇಯಸ್ಸನ್ನೂ ಉಂಟುಮಾಡಲೆಂದು ಹರಸುವೆವು.

ವಿರೋಧಿನಾ ಸಂವತ್ಸರ
ಫಾಲ್ಗುಣ ಶುದ್ಧ ಸಪ್ತಮಿ,
ಭಾನುವಾರ
ತಾ॥ 21-2-2010

*ಇಂತಿ ಅನುವಾದಕ*
**ಮ.ಸು.ಚಂ. ಅವಧಾನಿ**

# ವೇ।ಬ್ರ।ಶ್ರೀ ಚಂದ್ರಮೌಳಿ ಅವಧಾನಿಗಳ ಕಿರುಪರಿಚಯ

ಶಿವಮೊಗ್ಗಜಿಲ್ಲೆಯಲ್ಲಿ ಸಂಸ್ಕೃತಗ್ರಾಮವೆಂದು ಹೆಸರುವಾಸಿಯಾದ ಮತ್ತೂರು ಎಂಬ ವೈದಿಕಗ್ರಾಮವಿರುತ್ತದೆ. ಆ ಊರಿನಲ್ಲಿದ್ದ ಪುಣ್ಯದಂಪತಿಗಳಾದ ವೇ।ಬ್ರ।ಶ್ರೀ ಸುಬ್ರಾಯಾವಧಾನಿ ಮತ್ತು ಚೆನ್ನಮ್ಮ ಎಂಬುವರ ಆರು ಜನ ಮಕ್ಕಳಲ್ಲಿ ಈ ಗ್ರಂಥಾನುವಾದಕರು ಐದನೆಯವರು. ತಾ।।೨೪-೨-೧೯೬೦ರಂದು ಇವರ ಜನನವಾಯಿತು. ಇವರು ತಮ್ಮ ಎಂಟನೇ ವಯಸ್ಸಿನಲ್ಲಿಉಪನೀತರಾಗಿ ಸಾಂಪ್ರದಾಯಿಕವಾದ ವೇದಾಧ್ಯಯನವನ್ನು ಮುಂದುವರಿಸಿದರು. ಆಧುನಿಕ ವಿದ್ಯಾಭ್ಯಾಸದ ಕಡೆಗೆ ಗಮನವನ್ನು ಕೊಡದೆ ತಮ್ಮ ಹದಿನೈದನೆಯ ವಯಸಿನಲ್ಲೇಸಂಪೂರ್ಣ ಯಜುರ್ವೇದವನ್ನು ಕ್ರಮಾಂತವಾಗಿ ಮುಗಿಸಿದರು.ಅನಂತರ ಬೆಂಗಳೂರಿನ ಶಾಖಾಕಾರ್ಯಾಲಯದಲ್ಲಿ ಎರಡು ವರ್ಷಗಳ ಕಾಲವಿದ್ದು ವೇ।ಬ್ರ।ಶ್ರೀ ಕೆ.ಜಿ. ಸುಬ್ರಾಯಶರ್ಮರವರಿಂದ ಸಂಸ್ಕೃತ ಮತ್ತು ವೇದಾಂತಾಭ್ಯಾಸವನ್ನು ಮಾಡಿದರು. ಪುನಃ ಹದಿನೆಂಟನೆಯ ವಯಸ್ಸಿನಿಂದ ಇಪ್ಪತ್ತೈದನೆಯ ವಯಸ್ಸಿನವರಗೆ ತಮ್ಮ ಅಣ್ಣನವರಾದ ವೇ।ಬ್ರ।ಶ್ರೀ ಅಶ್ವತ್ಥನಾರಾಯಣಾವಧಾನಿಗಳಿಂದ ಸಂಸ್ಕೃತವ್ಯಾಕರಣ, (ವೇದಾಂತ)ಶಾಂಕರಭಾಷ್ಯವನ್ನು, ವೇದಭಾಷ್ಯದ ಪರಿಚಯುವನ್ನೂ, ತಂದೆಯವರಿಂದ ಜ್ಯೋತಿಶ್ಶಾಸ್ತ್ರದ ಪರಿಚಯುವನ್ನೂ ಹೊಂದಿರುತ್ತಾರೆ. ಮತ್ತೂರಿನಲ್ಲಿ ೧೯೮೯ರಿಂದ ಇವರೇ ಸ್ವತಃ ವೇದಪಾಠಶಾಲೆಯನ್ನೂ ಸ್ಥಾಪಿಸಿ ಅಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಸಂಸ್ಕೃತ, ವೇದ, ವೇದಾಂತ, ಜ್ಯೋತಿಷ್ಯಗಳ ಪಾಠವನ್ನು ಹೇಳಿಕೊಡುತ್ತಿದ್ದರು. ಈಗ ೨೦೦೩ನೇ ಫೆಬ್ರವರಿಯಿಂದ ಅಧ್ಯಾತ್ಮಪ್ರಕಾಶಕಾರ್ಯಾಲಯ ಹೊಳೇನರಸೀಪುರದಲ್ಲಿ ಪ್ರಾಚಾರ್ಯರಾಗಿ ಶಾಂಕರಭಾಷ್ಯಾಧ್ಯಾಪನ, ಸಂಸ್ಕೃತಪಾಠ, ಜ್ಯೋತಿಷ್ಯ ಮತ್ತುವೇದಪಾಠಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇಲ್ಲೂ ಅನೇಕ ವಿದ್ಯಾರ್ಥಿಗಳು ಪ್ರಸ್ಥಾನತ್ರಯಭಾಷ್ಯದ ಅಧ್ಯಯನವನ್ನು ಪೂರ್ಣಗೊಳಿಸಿದ್ದಾರೆ. ಈಗಲೂ ಸಹ ಪ್ರತಿನಿತ್ಯ ಸಾಂಪ್ರದಾಯಿಕವಾಗಿ ಭಾಷ್ಯಪಾಠಾದಿಗಳು ನಡೆಯುತ್ತಿವೆ. ಈ ವಿದ್ವಾಂಸರು ಇಂದಿಗೂ ಅನೇಕ ಕಡೆಗಳಲ್ಲಿ ವೇದಾಂತ ಪ್ರವಚನಗಳನ್ನೂ, ಶಿಬಿರಗಳನ್ನೂ ನಡೆಸಿಕೊಂಡು ಬರುತ್ತಿದ್ದಾರೆ. ಇವರ ವೇದಾಂತ ಬೋಧನೆ ಮತ್ತು ಮತ್ತು ಉಪನ್ಯಾಸಗಳು ಶುದ್ಧಶಾಂಕರ ಪ್ರಕ್ರಿಯಾನುಸಾರವಾಗಿಯೂ, ಪದವಾಕ್ಯ ಪ್ರಮಾಣಭರಿತವಾಗಿಯೂ ಇವೆ. ಇವರು ಶಾಂಕರಭಾಷ್ಯದ ಪಠನ, ಪಾಠನ ಹಾಗೂ ಪ್ರಚಾರಗಳನ್ನೇ ತಮ್ಮ ಉಸಿರನ್ನಾಗಿ ಮಾಡಿಕೊಂಡು, ನೈಷ್ಠಿಕಬ್ರಹ್ಮಚರ್ಯೆಯಿಂದ ಗುರುಸೇವೆಯಲ್ಲೇ ಕಾಲಕಳೆಯುತ್ತಿದ್ದಾರೆ.

# ಪ್ರಸ್ತಾವನಾ

ನಿಶ್ಚಪ್ರಚಮಿದಂ ವೇದಾನ್ತಸಿದ್ಧಾನ್ತನಿಷ್ಣಾತಾನಾಂ ಮಹಾತ್ಮನಾಂ ಯಜ್ಜಾಗ್ರತ್ಸ್ವಪ್ಯನ್ವರ್ಥಜಗದ್ಗುರುಶ್ರೀಶಙ್ಕರಭಗವತ್ಪಾದಾನುಗೃಹೀತೇಷು ಪ್ರಸ್ಥಾನತ್ರಯಭಾಷ್ಯೇಷು ಸರ್ವವೇದಾನ್ತತಾತ್ಪರ್ಯನಿರ್ಣಾಯಕತ್ವೇನ ಮುಮುಕ್ಷುಮನಶ್ಚಕೋರಚನ್ದ್ರಿಕಾಯಮಾಣೇಷು, ಪ್ರಸನ್ನಗಮ್ಭೀರಾಯಾಂ ತದುಪದೇಶಗಂಗಾಯಾಂ ಪೂರ್ಣಾವಗಾಹಮಲಭಮಾನೈಃ ಕೈಶ್ಚಿತ್ಕಾಪಿಲಕಾಣಾದಪಾತಞ್ಜಲಾದಿತನ್ತ್ರಾನ್ತರೀಯದರ್ಶನಸಂಕಲೀ-ಕರಣಮಲೀಮಸಚಿತ್ತೈರನ್ಯಥಾಽನ್ಯಥಾ ವ್ಯಾಖ್ಯಾನಚಾಲಿತಚಿತ್ತತ್ವಾತ್ ಕಾಂದಿಶೀಕತಾಂ ಪ್ರಾಪ್ತಾ ಮೋಮುಹ್ಯನ್ತೇ ವೇದಾನ್ತಾರ್ಥಬುಭುತ್ಸವ ಇತಿ । ತಾಮೇತಾಂ ಜಿಜ್ಞಾಸುಚಿತ್ತದುರವಸ್ಥಾಮಾಲಕ್ಷ್ಯಾಹಂ ವಿವೇಕತೋ

---

# ಪ್ರಸ್ತಾವನೆ

ವೇದಾಂತಸಿದ್ಧಾಂತದಲ್ಲಿ ನಿಷ್ಣಾತರಾದ ಮಹಾತ್ಮರಿಗೆ ಇದು ಸುಪ್ರಸಿದ್ಧವಾದದ್ದು. ಯಾವುದೆಂದರೆ – ಎಲ್ಲಾ ವೇದಾಂತಾರ್ಥದ ತಾತ್ಪರ್ಯಕ್ಕೆ ನಿರ್ಣಾಯಕವಾದ ಅನ್ವರ್ಥ ಜಗದ್ಗುರುಗಳಾದ ಶ್ರೀ ಶಂಕರಭಗವತ್ಪಾದರು ಅನುಗ್ರಹಿಸಿದ್ದಾದ ಪ್ರಸ್ಥಾನತ್ರಯಭಾಷ್ಯಗಳು (ಇನ್ನೂ) ಜೀವಂತವಾದದ್ದಾಗಿದ್ದು (ಅದು) ಮುಮುಕ್ಷುಗಳ ಮನಸ್ಸೆಂಬ ಚಕೋರಪಕ್ಷಿಗೆ ಬೆಳದಿಂಗಳಿನಂತಿದೆ. ಹಾಗೆ (ಅದು) ತಿಳಿಯಾಗಿಯೂ ಆಳವಾದ ಅರ್ಥವುಳ್ಳದ್ದಾಗಿಯೂ (ಇದ್ದರೂ) ಅವರ ಉಪದೇಶವೆಂಬ ಗಂಗೆಯಲ್ಲಿ ಸಂಪೂರ್ಣವಾಗಿ ಇಳಿಯುವುದಕ್ಕೆ ಆಗದೆ ಇದ್ದವರಾದ ಕೆಲವರು ಕಾಪಿಲಕಾಣಾದಪಾತಂಜಲವೇ ಮುಂತಾದ ಶಾಸ್ತ್ರಾಂತರ ದರ್ಶನ(ದ ಸಹವಾಸ) ದಿಂದ ಕಲಬೆರಿಕೆಯಾಗಿ ಕೊಳೆಗೊಂಡ ಮನಸ್ಸಿನವರು ಬೇರೆ ಬೇರೆ ತರಹವಾಗಿ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಹಾಗೆ ತಪ್ಪಾದ ವ್ಯಾಖ್ಯಾನದಿಂದ ಚಂಚಲಮನಸ್ಸಿನವರಾದ್ದರಿಂದ ವೇದಾಂತಾರ್ಥವನ್ನು ತಿಳಿಯಬೇಕೆನ್ನುವವರು ದಿಕ್ಕೆಟ್ಟವರಾಗಿ ಮೋಹಗೊಂಡವರಾಗಿರುತ್ತಾರೆ. ಆ

ಭಾಷ್ಯಕಾರಾಶಯನಿರ್ಧಾರಣಾರ್ಥಂ ಸರ್ವಭಾಷ್ಯದುರ್ಗಪ್ರವೇಶ-ಮರ್ಮಸ್ಥಾನೀಯಶಾರೀರಕಮೀಮಾಂಸಾಭಾಷ್ಯೋಪೋದ್ಘಾತ-ಗ್ರನ್ಥಗ್ರನ್ಥಿಭೇದನಕ್ಷಮಾಂ ಸುಗಮಾಂ ನಾಮ್ನೀಂ ವ್ಯಾಖ್ಯಾಂ ಕತಿಪಯಹಾಯನೇಭ್ಯಃ ಪ್ರಾಗೇವ ವಿರಚಿತಾಮ್ ಇದಾನೀಂ ತತ್ಪ್ರಕಾಶನೇ ಬದ್ಧಾದರಾಣಾಮಧ್ಯಾತ್ಮಪ್ರಕಾಶಕಾರ್ಯಾಲಯಸಮಿತಿಸಭ್ಯಾನಾಮಭ್ಯರ್ಥನಯಾ ಸಪರಿಷ್ಕಾರಂ ಸಂಪಾದಿತವಾನಸ್ಮಿ ॥

ಭಗವದ್ಭಾಷ್ಯಕಾರಾಭಿಮತವೇದಾನ್ತಪ್ರಕ್ರಿಯಾಯಾಃ ಕೇನ್ದ್ರಭೂತೋಪದೇಶೋಽಯಂಯತ್ ಪ್ರತ್ಯಸ್ತಮಿತಾಶೇಷವಿಶೇಷ-ಮವಾಙ್ಮನಸಗೋಚರಂ ವಿಶ್ವಸ್ಯಾಽಽತ್ಮಭೂತಮೇಕಮೇವಾದ್ವಿತೀಯಂ ಸ್ವಯಂಪ್ರಕಾಶಂ ವಸ್ತು ಪರಮಾರ್ಥಸತ್ಯಂ, ತಸ್ಮಿಂಸ್ತು ಪ್ರಮಾತೃಪ್ರಮಾಣಪ್ರಮೇಯವಿಭಕ್ತೋಽಯಂ ಪ್ರಪಞ್ಚೋಽ-

---

ಈ ಜಿಜ್ಞಾಸುಗಳ ಮನಸ್ಸಿನ ದುರವಸ್ಥೆಯನ್ನು ಕಂಡು (ವಿಂಗಡವಾಗಿ) ಭಾಷ್ಯಕಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುವುದಕ್ಕಾಗಿ ನಾನು (ವಿವರಣೆಯನ್ನು ಮಾಡಲು ಹೊರಟಿದ್ದೇನೆ). (ಈ ವಿವರಣೆಯು) ಭಾಷ್ಯವೆಂಬ ಕೋಟೆಯ ಪ್ರವೇಶದ ಮರ್ಮಸ್ಥಾನವಾದ ಶಾರೀರಕ ಮೀಮಾಂಸಾಭಾಷ್ಯಕ್ಕೆ ಉಪೋದ್ಘಾತಗ್ರಂಥದಲ್ಲಿರುವ ಗಂಟನ್ನು ಒಡೆಯುವುದರಲ್ಲಿ ಸಮರ್ಥವಾದ "ಸುಗಮಾ" ಎಂಬ ಹೆಸರಿನ ವ್ಯಾಖ್ಯಾನವು. ಇದನ್ನು ಕೆಲವು ವರ್ಷಗಳ ಹಿಂದೆಯೇ ರಚಿಸಿದ್ದೆನು. ಈಗ ಅದನ್ನು ಮುದ್ರಣ ಮಾಡಬೇಕೆಂದು ಸೊಂಟಕಟ್ಟಿಕೊಂಡವರಾದ ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಮಿತಿ - ಸಭ್ಯರಿಗೆ ಪರಿಷ್ಕಾರದೊಂದಿಗೆ ಸಂಪಾದನೆ ಮಾಡಿಕೊಟ್ಟಿರುತ್ತೇನೆ.

ಸಮಸ್ತ ವಿಶೇಷವೂ ಅಡಗಿದ್ದಾದ, ವಾಕ್ಕಿಗೂ ಮನಸ್ಸಿಗೂ ಗೋಚರವಲ್ಲದ, ಪ್ರಪಂಚಕ್ಕೆಲ್ಲಾ ಆತ್ಮವಾದ, ಎರಡಿಲ್ಲದ ಒಂದಾದ, ಸ್ವಯಂಪ್ರಕಾಶವಾದ, ವಸ್ತುವೇ ಪರಮಾರ್ಥಸತ್ಯವಾದದ್ದು, ಅದರಲ್ಲಿ ಪ್ರಮಾತೃಪ್ರಮಾಣ-ಪ್ರಮೇಯವೆಂಬುದಾಗಿ ವಿಂಗಡಗೊಂಡ ಈ ಪ್ರಪಂಚವು

ವಿದ್ಯಾಪರಿಕಲ್ಪಿತ ಇತಿ । ಸೋಽಯಮವಿದ್ಯಾಽಧ್ಯಾಸಲಕ್ಷಣಾ ಮೃಷಾರೂಪಸ್ಯಾಽನಾತ್ಮನೋ ದೇಹಕರಣಸಂಘಾತ-ಲಕ್ಷಣಸ್ಯಾಽಹನ್ತಾಮಮತಾಭಿಮಾನಗೋಚರತ್ವಮಾಪದ್ಯಾಽಸಙ್ಗೇಽಪಿ ಪರಮಾತ್ಮನಿ ಮಿಥ್ಯಾಪ್ರಮಾತೃತಾಂ ಪ್ರಥಯನ್ತೀ ತಯೋರಾತ್ಮಾ-ನಾತ್ಮನೋರಿತರೇತರತ್ವೇತರೇತರಧರ್ಮವತ್ತ್ವಾಧ್ಯವಸಾನಾತ್ಮಕಮಿಥ್ಯಾ-ಜ್ಞಾನಮಾತ್ರವಿಗ್ರಹಾ ಸತೀ, ಪ್ರತ್ಯಕ್ಷಾದಿಪ್ರಮಾಣಾನಿ ತತ್ಸಂನಿಧಾಪಿ-ತಮನೇಕಕರ್ತೃಭೋಕ್ತೃಗರ್ಭಗೃಹಂ ನಿಯತದೇಶಕಾಲನಿಮಿತ್ತಕ್ರಿಯಾ-ಫಲವೈಚಿತ್ರ್ಯಚಿತ್ರೀಕೃತಂ ಚ ಪ್ರಪಞ್ಚಮವಭಾಸಯತಿ । ತದೇವಂ ಸ್ವಯಂ ನಿತ್ಯಶುದ್ಧಬುದ್ಧಮುಕ್ತಸ್ವಭಾವೋಽಪ್ಯಯಂ ಲೋಕೋ ನೈಸರ್ಗಿಕಾವಿದ್ಯಾವಶಾತ್ ಪ್ರಮಾತೃತ್ವರಾಗದ್ವೇಷಾದಿಮತ್ತ್ವಕರ್ತೃತ್ವ-

---

ಅವಿದ್ಯಾಕಲ್ಪಿತವಾಗಿದೆ ಎಂಬುದು ಭಗವಂತರಾದ ಭಾಷ್ಯಕಾರರಿಗೆ ಒಪ್ಪಿಗೆಯಾದ ವೇದಾಂತಪ್ರಕ್ರಿಯೆಯ ಕೇಂದ್ರವಾಗಿರುವ ಉಪದೇಶವಿದು. ಆ ಅವಿದ್ಯೆಯು ಅಧ್ಯಾಸರೂಪವಾಗಿರುವಂಥದ್ದು, ಸುಳ್ಳಾದ ಅನಾತ್ಮವಾದ ದೇಹೇಂದ್ರಿಯಸಮೂಹದಲ್ಲಿ ನಾನು ನನ್ನದೆಂಬ ಅಭಿಮಾನವನ್ನುಂಟು-ಮಾಡುವಂಥದ್ದು. ಅಸಂಗನಾದ ಪರಮಾತ್ಮನಲ್ಲೂ ಕೂಡ ಸುಳ್ಳಾದ ಪ್ರಮಾತೃತ್ವವನ್ನುಂಟುಮಾಡುವಂಥದ್ದು. ಆ ಆತ್ಮಾನಾತ್ಮರುಗಳಿಗೆ ಒಂದನ್ನಿನ್ನೊಂದಾಗಿಯೂ, ಒಂದರಧರ್ಮವನ್ನು ಇನ್ನೊಂದಾಗಿಯೂ ತಿಳಿಯುವದೆಂಬ ತಪ್ಪಾದ ಅರಿವನ್ನುಂಟುಮಾಡುವ ಸ್ವರೂಪವಾಗಿರುವಂಥದ್ದು. ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ಮತ್ತು ಅದು ಮುಂದೆತಂದೊಡ್ಡಿದ್ದಾದ ಅನೇಕ ಕರ್ತೃಭೋಕ್ತೃವಾದ ಗೊತ್ತಾದ ದೇಶಕಾಲನಿಮಿತ್ತಗಳಿಂದಾಗುವ ಕ್ರಿಯಾಫಲಗಳ ವೈಚಿತ್ರ್ಯದಿಂದ ಕೂಡಿದ ಪ್ರಪಂಚವನ್ನು ತೋರಿಸುತ್ತದೆ. ಹೀಗೆ ತಾನು ನಿತ್ಯಶುದ್ಧಬುದ್ಧಮುಕ್ತಸ್ವಭಾವದವರಾಗಿದ್ದರೂ ಈ ಜನರು ಸ್ವಾಭಾವಿಕವಾದ ಅವಿದ್ಯೆಗೆ ಅಧೀನನಾಗಿ ಪ್ರಮಾತೃವಾಗಿ ರಾಗದ್ವೇಷಾದಿಗಳುಳ್ಳವನಾಗಿ, ಕತೃತ್ವಭೋಕ್ತೃತ್ವವೆಂಬಭಿಮಾನಕ್ಕೆ ಗುರಿಯಾಗಿದ್ದಾನೆ. (ಅವನು) ತನ್ನ

ಭೋಕ್ತೃತ್ವಾಭಿನಿವೇಶಗ್ರಸ್ತಃ ಸ್ವಕರ್ಮಣೋಚ್ಚಾವಚ-ಫಲಾನ್ಯನುಭೂಯಮಾನ ಇವ ಸಂಸಾರಮಹಾಸ್ವಾಪಾನರ್ಥಭಾಗ್ಭವತಿ । ಶಾಸ್ತ್ರಾಚಾರ್ಯಾಭ್ಯಾಂ ಪ್ರತಿಬೋಧಿತಸ್ತ್ವಸಂಸಾರೀ ಪರಮಾತ್ಮೈವಾಽಹಮಿತಿ ವಿದ್ಯಾಂ ಪ್ರಾಪ್ಯ ಪ್ರಮಾತೃತಾಪ್ರಮುಖಕೃತಂ ಬನ್ಧಮವಧೂಯ ಸ್ವಾತ್ಮನ್ಯವಸ್ಥಾನರೂಪಂ ನಿಃಶ್ರೇಯಸಂ ಭಜತೇ ॥

ಯದ್ಯಪಿ ವೇದಾನ್ತಶಾಸ್ತ್ರಮಪಿ ಪ್ರಮಾಣತ್ವಾವಿಶೇಷಾದಧ್ಯಾಸ-ಪುರಃಸರಮೇವ ಪ್ರವೃತ್ತಮ್, ತಥಾಪಿ ಬ್ರಹ್ಮಣಃ ಪ್ರಮೇಯತಾಮಧ್ಯಾರೋಪದೃಷ್ಟ್ಯಾಽಙ್ಗೀಕೃತ್ಯೈವ ಕ್ರಮಕ್ರಮೇಣ ಪ್ರಮಾತೃಪ್ರಮಾಣಪ್ರಮೇಯವ್ಯವಹಾರಸ್ಯ ಸರ್ವಸ್ಯಾಪ್ಯ-ವಿದ್ಯಾಪ್ರತ್ಯುಪಸ್ಥಾಪಿತತ್ವಂ ವಿಜ್ಞಾಪ್ಯ ಜಿಜ್ಞಾಸೋಃ ಪ್ರಮಾತೃತ್ವಮೇವ ನಿವರ್ತಯನ್ ಬ್ರಹ್ಮಣಃ ಪ್ರಮೇಯತಾಮಿವಾತ್ಮನಃ ಪ್ರಮಾಣತಾಮಪಿ

---

ಕರ್ಮದಿಂದ ಮೇಲು ಕೀಳಾದ ಫಲಗಳನ್ನನುಭವಿಸುವವನಂತಾಗಿ ಸಂಸಾರವೆಂಬ ಮಹಾನಿದ್ರೆಯಲ್ಲಿ ಮಲಗುವುದೆಂಬ ಅನರ್ಥಕ್ಕೆ ಭಾಗಿಯಾಗಿರುತ್ತಾನೆ. ಶಾಸ್ತ್ರಾಚಾರ್ಯರಿಂದ ತಿಳಿಸಿದ್ದಾಗಲಾದರೋ ಅಸಂಸಾರಿಯಾದ ಪರಮಾತ್ಮನೇ ನಾನೆಂಬ ತಿಳಿವಳಿಕೆಯನ್ನು ಪಡೆದು ಪ್ರಮಾತೃತ್ವವೇ ಮುಂತಾದದ್ದರಿಂದಾದ ಬಂಧವನ್ನು ಕೊಡವಿಕೊಂಡು ತನ್ನಲ್ಲಿಯೇ ತಾನು ನೆಲೆ ನಿಲ್ಲುವರೂಪದ್ದಾದ ಮೋಕ್ಷವನ್ನು ಹೊಂದುತ್ತಾನೆ.

ವೇದಾಂತಶಾಸ್ತ್ರವೂ ಕೂಡ ಪ್ರಮಾಣವಾಗಿದೆ ಎಂಬುದು ಸಮಾನವಾದ್ದರಿಂದ ಅದೂ ಅಧ್ಯಾಸಪುರಸ್ಸರವಾಗಿಯೇ ಹೊರಟಿದೆ ಎಂಬುದು (ನಿಜವಾದರೂ) ಹಾಗಿದ್ದರೂ, ಬ್ರಹ್ಮವು ಪ್ರಮೇಯವಾಗಿದೆ ಎಂಬುದನ್ನು ಅಧ್ಯಾರೋಪದೃಷ್ಟಿಯಿಂದಒಪ್ಪಿಕೊಂಡೇ ಕ್ರಮಕ್ರಮವಾಗಿ ಪ್ರಮಾತೃಪ್ರಮಾಣಪ್ರಮೇಯವ್ಯವಹಾರವೆಲ್ಲಾ ಅವಿದ್ಯಾ-ಪ್ರತ್ಯುಪಸ್ಥಾಪಿತವಾಗಿದೆ ಎಂಬುದನ್ನು ತಿಳಿಸಿಕೊಟ್ಟು ಜಿಜ್ಞಾಸುವಿನ ಪ್ರಮಾತೃತ್ವವನ್ನೂ ಕಳೆಯುತ್ತಾ, ಬ್ರಹ್ಮದ ಪ್ರಮೇಯತ್ವವನ್ನು (ಹೇಗೆ

ನಿವರ್ತಯತೀತ್ಯನ್ತ್ಯಂ ಪ್ರಮಾಣಮಿತಿ ಪರಿಭಾಷ್ಯತೇ ॥

ಇದಂ ಚ ಶಾಸ್ತ್ರಮಧ್ಯಾರೋಪಿತಸ್ವಪ್ರಾಮಾಣ್ಯದಶಾಯಾಂ ತತ್ತತ್ಪ್ರಮಾತೃಭ್ಯೋ ಯಥಾಧಿಕಾರಂ ಬ್ರಹ್ಮಣೋ ಜೀವಾದ್ಭಿನ್ನತ್ವಂ ಸರ್ವಜ್ಞತ್ವಂ ಸರ್ವಶಕ್ತಿತ್ವಂ ಜಗಜ್ಜನ್ಮಸ್ಥಿತಿಲಯಹೇತುತ್ವಂ ತತ್ತತ್ಫಲಾರ್ಥಿಭಿರುಪಾಸ್ಯತ್ವಂ ತತ್ತದುಪಾಸನಾನುರೂಪರೂಪ-ಗುಣಾದಿವಿಶಿಷ್ಟತ್ವಂ ಸರ್ವಕರ್ಮೋಪಾಸನಾಫಲಾಧ್ಯಕ್ಷತ್ವಂ ಸರ್ವಭೂತಾಧಿವಾಸತ್ವಂ ಮುಮುಕ್ಷುಜನಜಿಜ್ಞಾಸ್ಯತ್ವಂ ಶಾಸ್ತ್ರಪ್ರಮಾಣಕತ್ವಂ ಸತ್ಯಜ್ಞಾನಾನನ್ದಾದಿಸ್ವರೂಪತ್ವಂ ಸರ್ವಭೂತಾನ್ತರಾತ್ಮತ್ವಂ ಸರ್ವಾನ್ತರ್ಯಾಮಿತ್ವಂ ಸರ್ವಸಾಕ್ಷಿತ್ವಂ ಕೇವಲತ್ವಂ ನಿರ್ಗುಣತ್ವಂ ಚೋಪದಿಶತಿ । ಜಗತಶ್ಚ ಪರಮೇಶಿತುರಾತ್ಮಸ್ಥಾಭ್ಯಾಂ ಸ್ವಾತ್ಮನಃ ತತ್ತ್ವಾನ್ಯತ್ವಾಭ್ಯಾಂ

---

ಕಳೆಯುತ್ತದೋ) ಅದರಂತೆ ಶಾಸ್ತ್ರದ ಪ್ರಮಾಣತ್ವವನ್ನೂ ಕಳೆಯುತ್ತದೆಯಾದ್ದರಿಂದ ಅದನ್ನು ಅಂತ್ಯಪ್ರಮಾಣವೆಂದು ಕರೆಯುತ್ತಾರೆ.

ಈ ಶಾಸ್ತ್ರವೂ ಸಹ ಅಧ್ಯಾರೋಪಗೊಂಡ ತನ್ನ ಪ್ರಮಾಣದ ಸ್ಥಿತಿಯಲ್ಲಿ ಆಯಾ ಪ್ರಮಾತೃಗಳಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಬ್ರಹ್ಮವು ಜೀವರಿಗಿಂತ ಬೇರೆಯಾಗಿದೆ, ಸರ್ವಜ್ಞವೂ ಸರ್ವಶಕ್ತವೂ ಆಗಿದೆ, ಜಗತ್ತಿನ ಜನ್ಮಸ್ಥಿತಿಲಯಕ್ಕೆ ಕಾರಣವಾಗಿದೆ, ಆಯಾ ಫಲಾಪೇಕ್ಷೆಯುಳ್ಳವರಿಗೆ ಉಪಾಸ್ಯವಾಗಿದೆ, ಆಯಾ ಉಪಾಸನೆಗನುಗುಣವಾದ ರೂಪ-ಗುಣಾದಿಗಳಿಂದ ಕೂಡಿದ್ದಾಗಿದೆ. ಸಮಸ್ತಕರ್ಮೋಪಾಸನೆಗಳ ಫಲಕ್ಕೆ ಅಧ್ಯಕ್ಷವಾಗಿದೆ, ಸಮಸ್ತ ಭೂತಗಳಲ್ಲೂ ವಾಸಮಾಡಿಕೊಂಡಿದೆ, ಮುಮುಕ್ಷುಗಳಿಗೆ ಜಿಜ್ಞಾಸ್ಯವಾಗಿದೆ, ಶಾಸ್ತ್ರದಿಂದ ತಿಳಿದುಬರುವಂಥದ್ದಾಗಿದೆ, ಸತ್ಯಜ್ಞಾನಾನಂದರೂಪವಾಗಿದೆ, ಎಲ್ಲಾ ಭೂತಗಳಿಗೂ ಅಂತರಾತ್ಮವಾಗಿದೆ, ಸರ್ವಾಂತರ್ಯಾಮಿಯೂ ಸರ್ವಸಾಕ್ಷಿಯೂ ಕೇವಲವೂ ನಿರ್ಗುಣವೂ ಆಗಿದೆ ಎಂದು ಉಪದೇಶವನ್ನು ಮಾಡುತ್ತದೆ. ಜಗತ್ತು ಪರಮೇಶ್ವರಸ್ವರೂಪವಾಗಿದ್ದು, ಅವನೇ ಎಂದಾಗಲೀ ಅವನಿಗಿಂತ ಬೇರೆ

ಅನಿರ್ವಚನೀಯಾಭ್ಯಾಂ ನಾಮರೂಪಾಭ್ಯಾಮವಿದ್ಯಾಕಲ್ಪಿತಾಭ್ಯಾಂ ಮಾಯಾಶಬ್ದ-ವ್ಯಪದೇಶಾಭ್ಯಾಂ ವ್ಯಾಕೃತಾಽವ್ಯಾಕೃತಾವಸ್ಥಾಭ್ಯಾಂ ಪ್ರತೀತಿವತ್ತ್ವಮುಪದಿಶತಿ । ಜೀವಾನಾಂ ಚ ನಾಮರೂಪಕೃತಕಾರ್ಯಕರಣಸಂಘಾತವತ್ತ್ವಂ ರಾಗಾದಿದೋಷವತ್ತ್ವಂ ಕರ್ತೃತ್ವಂ ಭೋಕ್ತೃತ್ವಮ್ ಅವಸ್ಥಾತ್ರಯಸಂಚಾರಿತ್ವಂ ಶಾಸ್ತ್ರಾಧಿಕೃತತ್ವಂ ಕರ್ಮೋಪಾಸನಾನುಷ್ಠಾತೃತ್ವಂ ಸ್ವಾನುಷ್ಠಿತಫಲಭೋಗಾರ್ಥಂ ಜನ್ಮಾನ್ತರಲೋಕಾನ್ತರಗನ್ತೃತ್ವಂ ಚೋಕ್ತ್ವಾ ಯಥಾಯಥಮ್, ಸಂಸಾರೇ ವಿರಕ್ತಾನಾಂ ಮುಮುಕ್ಷುತ್ವಂ ಜಿಜ್ಞಾಸುತ್ವಂ ಗುರೂಪಸರ್ಪಣಾದಿಕಂ ಚೋಪದಿಶ್ಯ, ತದನು ಸರ್ವಾಧ್ಯಾರೋಪಿತಾಪವಾದಾವಸರೇ "ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ । ಆನನ್ದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕುತಶ್ಚನೇತಿ" ॥ (ತೈ. ೩-೯), "ತತ್ಸತ್ಯಂ ಸ

---

ಎಂದಾಗಲೀ ಹೇಳುವುದಕ್ಕೆ ಬಾರದಾಗಿದ್ದು, ಅವಿದ್ಯಾಕಲ್ಪಿತವಾದ ನಾಮರೂಪವಾಗಿದ್ದು, ಮಾಯೆ ಎಂಬ ಶಬ್ದದಿಂದ ಕರೆಸಿಕೊಂಡಿದ್ದು, ವ್ಯಾಕೃತಾವ್ಯಾಕೃತಾವಸ್ಥೆಯನ್ನು ಹೊಂದುವಂಥದ್ದಾದ (ರೂಪದಿಂದ) ತೋರುವಂಥದ್ದೆಂದು ಉಪದೇಶಿಸುತ್ತದೆ. ಜೀವರನ್ನೂ ಸಹ ಅವರವರಿಗೆ ತಕ್ಕ ನಾಮರೂಪದಿಂದಾದ ಶರೀರೇಂದ್ರಿಯಗುಂಪುಳ್ಳವರೆಂದೂ ರಾಗಾದಿದೋಷವುಳ್ಳವರೂ ಕರ್ತೃಗಳೂ ಭೋಕ್ತೃಗಳೂ ಅವಸ್ಥಾತ್ರಯ ಸಂಚಾರಿಗಳೂ ಶಾಸ್ತ್ರಾಧಿಕಾರಿಗಳೂ ಕರ್ಮೋಪಾಸನೆಯನ್ನು ಮಾಡುವವರೂ, ತಾವು ಅನುಷ್ಠಾನಮಾಡಿದ್ದಾದ ಕರ್ಮದ ಫಲವನ್ನನುಭವಿಸುವುದಕ್ಕೆ ಜನ್ಮಾಂತರ ಲೋಕಾಂತರಕ್ಕೆ ಹೋಗುವವರೆಂದೂ ಹೇಳಿ, ಅಷ್ಟಷ್ಟರ ಮಟ್ಟಿಗೆ ಸಂಸಾರದಲ್ಲಿ ವಿರಕ್ತರಾದವರಿಗೆ ಮುಮುಕ್ಷುಗಳೆಂದೂ ಜಿಜ್ಞಾಸುಗಳೆಂದೂ (ಹೇಳಿ) (ಅವರು) ಗುರುಗಳ ಹತ್ತಿರ ಹೋಗಬೇಕೆಂದು ಹೇಳಿ ಕೊನೆಗೆ ಎಲ್ಲಾ ಅಧ್ಯಾರೋಪವನ್ನೂ ತೆಗೆದುಹಾಕುವ ಸಂದರ್ಭದಲ್ಲಿ "ಯಾವಾತನಿಂದ ಮನಸ್ಸಿನೊಡನೆ (ಬ್ರಹ್ಮವನ್ನು) ಮುಟ್ಟದೆ ವಾಕ್ಕು ಹಿಂತಿರುಗುವುದೋ, ಅಂತಹ ಆನಂದರೂಪವಾದ ಬ್ರಹ್ಮವನ್ನರಿತವನು ಯಾವುದರಿಂದಲೂ ಹೆದರುವುದಿಲ್ಲ" (ತೈ-೩-೯), "ಅದು ಸತ್ಯವು ಅದು

ಆತ್ಮಾ ತತ್ತ್ವಮಸಿ" (ಛಾಂ. ೬-೮-೭), "ಅಸ್ಥೂಲಮನಣು" ...... (ಬೃ. ೩-೮-೮), "ಯತ್ರ ನಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ ಸ ಭೂಮಾ" (ಛಾಂ. ೭-೨೪-೧), "ಅಶರೀರಂ ವಾವ ಸನ್ತಂ ನ ಪ್ರಿಯಾಪ್ರಿಯೇ ಸ್ಪೃಶತಃ" (ಛಾಂ. ೮-೧೨-೧), "ಬ್ರಹ್ಮೈವೇದಂ ವಿಶ್ವಮ್" (ಮುಂ. ೩-೧-೧೧), "ಆತ್ಮೈವೇದಂ ಸರ್ವಮ್" (ಛಾಂ. ೭-೨೫-೨), "ಸ ಏಷ ನೇತಿ ನೇತ್ಯಾತ್ಮಾ" (ಬೃ. ೩-೯-೨೬.......) ಇತ್ಯಾದಿವಚನೈಃ ಸರ್ವಾನಪಿ ವಿಶೇಷಾನಪನೂಯ ಪರಮಾರ್ಥಸ್ವಾರಾಜ್ಯ ಏವಾಽಭಿಷೇಚಯತಿ ಜಿಜ್ಞಾಸೂನ್ । ಅಭಿಷೇಚಯದೇವ ಚ ಸ್ವಸ್ಯಾಪಿ ಪ್ರಾಮಾಣ್ಯಮಪಹ್ನುತೇ "ಅತ್ರ ವೇದಾ ಅವೇದಾಃ" (ಬೃ. ೪-೩-೨೨) ಇತಿ ॥

ವಿದ್ಯಾವಿದ್ಯಾವಿಭಾಗಶ್ಚೋಪರಿಪ್ರದರ್ಶಿತಃ ಪರಮಾರ್ಥತೋ ನೈವ

---

ಆತ್ಮವು ಅದೇನೀನಾಗಿರುವೆ"(ಛಾಂ-೬-೮-೭), "ದಪ್ಪ ಅಲ್ಲ, ಸಣ್ಣ ಅಲ್ಲ" (ಬೃ-೩-೮-೮), "ಎಲ್ಲಿ ಇನ್ನೊಂದನ್ನು ನೋಡುವುದಿಲ್ಲವೋ ಕೇಳುವುದಿಲ್ಲವೋ ತಿಳಿಯುವುದಿಲ್ಲವೋ ಅದು ಭೂಮವು" (ಛಾಂ-೮-೧೨-೧), "ಈ ವಿಶ್ವವೆಲ್ಲವೂ ಬ್ರಹ್ಮವೇ" (ಮುಂ-೩-೧-೧೧), "ಇದೆಲ್ಲವೂ ಆತ್ಮವೇ" (ಛಾಂ-೭-೨೫-೨), "ಈತನು ಇದಲ್ಲ ಇದಲ್ಲ"ಎಂಬ ಸ್ವರೂಪದವನು (ಬೃ-೩-೯-೨೬), ಇದೇ ಮೊದಲಾದ ಮಾತುಗಳಿಂದ ಎಲ್ಲಾ ವಿಶೇಷವನ್ನೂ ಅಲ್ಲಗಳೆದು ಜಿಜ್ಞಾಸುಜನರನ್ನು ಪರಮಾರ್ಥವಾದ ಸ್ವಾರಾಜ್ಯದಲ್ಲಿ ಅಭಿಷೇಕವನ್ನು ಮಾಡಿಸುತ್ತದೆ. ಈ ರೀತಿ ಅಭಿಷೇಕವನ್ನು ಮಾಡಿಸುತ್ತಲೇ ತನ್ನ ಪ್ರಾಮಾಣ್ಯವನ್ನೂ-"ಇಲ್ಲಿ ವೇದಗಳು ವೇದಗಳಲ್ಲ" (ಬೃ-೪-೩-೨೨) ಎಂದು ಹೇಳುತ್ತಾ - ತೆಗೆದುಹಾಕುತ್ತದೆ.

ಮೇಲೆ ತೋರಿಸಿದ್ದಾದ ವಿದ್ಯಾವಿದ್ಯಾವಿಭಾಗಗಳೂ (ಸಹ) ನಿಜವಾಗಿ ಇರುವುದೇ ಇಲ್ಲ. ಏಕೆಂದರೆ ಸೂಕ್ಷ್ಮದೃಷ್ಟಿಯುಳ್ಳವರಿಗೆ (ಈ) ಆತ್ಮತತ್ತ್ವವು

ವಿದ್ಯತೇ । ಯತೋ ನಿತ್ಯಶುದ್ಧಬುದ್ಧಮುಕ್ತಸ್ವಭಾವಮೇವಾಽಽತ್ಮತತ್ವಮಿತಿ ಸ್ಫುಟಮೇವೇದಂ ಸೂಕ್ಷ್ಮದೃಶಾಮ್ । ಜೀವೇಷು ಜಿಜ್ಞಾಸುತ್ವ-ಮಧ್ಯಾರೋಪ್ಯ ಹಿ ತೇಷಾಂ ಬ್ರಹ್ಮಾತ್ಮೈಕತ್ವೋಪದೇಶಕ್ರಮೋಽಯಂ ಪ್ರತಾನಿತಃ ಉಪನಿಷತ್ಸು । ತದೇತದ್ರಹಸ್ಯಮಜಾನನ್ತೋ ಜಾನನ್ತೋ ವಾ ವಿಸ್ಮರನ್ತೋಽಸ್ಮದೀಯಾ ಏವ ಕೇಚಿದವಿದ್ಯಾಸ್ವರೂಪೇ ಸರ್ವಾನುಭವವೇದ್ಯೇಽಪಿ ವಿವಿಧಂ ಕಲ್ಪಯನ್ತಃ ಸರ್ವಪ್ರಮಾಣ-ಪ್ರಸೂಮಪ್ಯವಿದ್ಯಾಂ ಪ್ರತ್ಯಕ್ಷಾದಿಭಿಃ ಪ್ರಮಾಣೈಃ ಪ್ರಮಾತುಮೀಹನ್ತೇ । ವಿದೇಹಮುಕ್ತಿರೇವ ಮುಖ್ಯಾ ಮುಕ್ತಿರಿತಿ ಪಶ್ಯನ್ತಿ, ಬೋಧಯನ್ತಿ ಚ ಸ್ವವಿನೇಯಾನಿತ್ಯಹೋ ದೌರ್ಭಾಗ್ಯಮಿದಂ ಪುರಸ್ಥಿತಮಪ್ಯಮೃತಂ ಮೂತ್ರತ್ವಶಙ್ಕಯಾ ಪರಿತ್ಯಕ್ತವತಃ ಉದಙ್ಕಸ್ಯ ವೃತ್ತಮನು-ಸರತಾಮದ್ಯತನಜಿಜ್ಞಾಸೂನಾಂ ಕೇಷಾಂಚಿತ್ । ಯಥಾ ತು ಶಾಙ್ಕರೇ ದರ್ಶನೇ ಶಾಸ್ತ್ರಜನಿತಾತ್ಮೈಕತ್ವವಿದ್ಯಾ ನೈಸರ್ಗಿಕಪ್ರಮಾತೃತ್ವ-

---

ಯಾವಾಗಲೂ ಶುದ್ಧಬುದ್ಧಮುಕ್ತಸ್ವಭಾವದ್ದೇ ಎಂಬುದು ಸ್ಪಷ್ಟವಾಗಿರುತ್ತದೆ. ಜೀವರುಗಳಿಗೆ ಜಿಜ್ಞಾಸುತ್ವವನ್ನು ಅಧ್ಯಾರೋಪಿಸಿಕೊಂಡೇ ಅಲ್ಲವೇ ಉಪನಿಷತ್ತುಗಳಲ್ಲಿ ಬ್ರಹ್ಮಾತ್ಮೈಕತ್ವೋಪದೇಶವನ್ನು ಮಾಡಿರುತ್ತದೆ ತಂದಿರುತ್ತದೆ. ಈ ರಹಸ್ಯವನ್ನು ಅರಿತೋ ಅರಿಯದೆಯೋ ನಮ್ಮವರೇ ಆದವರು ಇದನ್ನು ಮರೆತು ಸರ್ವಾನುಭವದಲ್ಲೂ ತಿಳಿದುಬಂದ ಅವಿದ್ಯಾ-ಸ್ವರೂಪದಲ್ಲಿ ನಾನಾ ಪ್ರಕಾರವಾಗಿ ವಿಕಲ್ಪಿಸುತ್ತಾ, ಅವಿದ್ಯೆಯು ಎಲ್ಲಾ ಪ್ರಮಾಣಗಳುಂಟಾಗುವುದಕ್ಕೂ ಕಾರಣವಾಗಿದ್ದರೂ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಅರಿಯಲು ಪ್ರಯತ್ನಪಡುತ್ತಿದಾರೆ! ವಿದೇಹ ಮುಕ್ತಿಯೇ ಮುಖ್ಯವಾದ ಮುಕ್ತಿಯೆಂದು ತಿಳಿಯುತ್ತಾ ತಮ್ಮ ಶಿಷ್ಯರಿಗೂ ಹಾಗೆಯೇ ಬೋಧಿಸುತ್ತಾರಾದ್ದರಿಂದ ಎದುರಿಗಿರುವ ಅಮೃತವನ್ನೂ ಮೂತ್ರವಾಗಿರಬಹುದೆಂದು ಸಂದೇಹಪಟ್ಟ ಉದಂಕನ ನಡವಳಿಕೆಯನ್ನು ಅನುಸರಿಸುತ್ತಿರುವವರಾದ ಇಂದಿನ ಕೆಲವು ಜಿಜ್ಞಾಸುಜನರ ಎಂಥ ದೌರ್ಭಾಗ್ಯವಿದು! ಆಚಾರ್ಯರ ದರ್ಶನದಂತೆ ಶಾಸ್ತ್ರದಿಂದುಂಟಾದ ಆತ್ಮೈಕತ್ವವಿದ್ಯೆಯೋ ಸ್ವಾಭಾವಿಕವಾದ ಪ್ರಮಾತೃತ್ವವೆಂಬ

ಮಿಥ್ಯಾಬುದ್ಧಿಬಾಧಿಕಾ, ಬ್ರಹ್ಮಾತ್ಮೈಕತ್ವಂ ಚ ಪ್ರತ್ಯಕ್ಷಾವಗಮಂ ಫಲಂ ತಥಾ ಮಯಾಽತ್ರ ಸುಗಮಾಯಾಂ ವ್ಯಾಖ್ಯಾಯಾಂ ಪ್ರತಿಪಾದ್ಯ ತತ್ತ್ವಂ ಬುಭುತ್ಸೂನಾಂ ವಿಚಾರಚಕ್ಷುರೂನ್ಮೀಲಿತಮ್ । ಯಥಾ ಹಿ ಮನ್ದಾನ್ಧಕಾರೇ ದೃಷ್ಟಾ ರಜ್ಜುಃ ಸರ್ಪತ್ವೇನಾಽವಭಾಸಮಾನಾ ಭ್ರಾನ್ತೈಃ ಸಾಕ್ಷಾದನುಭೂಯತೇ ಭಯಕಮ್ಪಾದಿಹೇತುಶ್ಚ ಭವತಿ, ದೀಪಾದಿನಾ ಪ್ರಕಾಶ್ಯ ನಾಯಂ ಸರ್ಪೋ ರಜ್ಜುರೇವೇಯಮ್’’ ಇತಿ ಕೇನಚಿತ್ಕಾರುಣಿಕೇನೋಪದಿಷ್ಟಾ ಚ ತಥೈವಾನುಭೂಯತೇ, ಏವಮೇವ ಖಲು ಸ್ವಾಭಾವಿಕಪ್ರಮಾತೃತ್ವ ಪ್ರತ್ಯಯಾಪಬಾಧಕಃ ಶಾಸ್ತ್ರಜನ್ಯಾಸಂಸಾರಿಪ್ರತ್ಯಯೋಽಪ್ಯನುಭೂಯತ ಏವ ಪ್ರತ್ಯಕ್ಷಮ್ । ನ ಹಿ ದೇಹೇನ್ದ್ರಿಯಾದ್ಯಭಿಮಾನಯುತಾ ಪ್ರಮಾತಾಽಹಮಿತಿ ನೈಸರ್ಗಿಕೀ ಬುದ್ಧಿರ್ನ ದೃಶ್ಯತೇ ಸರ್ವಸ್ಮಿನ್ನಪಿ ಜನೇ ಕೇನಚಿದಶಿಕ್ಷಿತೇಽಪಿ । ನ ಚ

---

ಮಿಥ್ಯಾಬುದ್ಧಿಯನ್ನು ಬಾಧೆಮಾಡುವಂಥದ್ದೋ, ಹಾಗೆಯೇ ಬ್ರಹ್ಮಾತ್ಮೈಕತ್ವವೂ ನೇರಾಗಿ ತೋರಿಬರುವ ಫಲವಾಗಿರುವಂಥದ್ದೋ (ಹಾಗೆ ಅದನ್ನು) ನಾವು ಈ ಸುಗಮಾ ಎಂಬ ವ್ಯಾಖ್ಯಾನದಲ್ಲಿ ತಿಳಿಸಿಕೊಟ್ಟು ತತ್ತ್ವವನ್ನು ತಿಳಿಯಬೇಕೆನ್ನುವವರ ಕಣ್ಣನ್ನು ತೆರೆದಿರುತ್ತೇವೆ. ಹೇಗೆ ನಸುಗತ್ತಲೆಯಲ್ಲಿ ಕಂಡ ಹಗ್ಗವು ಹಾವಾಗಿ ತೋರುತ್ತಲಿದ್ದು ತಪ್ಪಾಗಿ ತಿಳಿದವರು (ಆ ತಪ್ಪುತಿಳಿವಳಿಕೆಯನ್ನು) ನೇರಾಗಿ ತಾವೇ ಅನುಭವಿಸುತ್ತಲಿರುತ್ತಾರೋ ಅದು ಭಯಕ್ಕೂ ನಡುಕವೇ ಮುಂತಾದದ್ದಕ್ಕೂ ಕಾರಣವಾಗುತ್ತದೆಯೋ, (ಆಮೇಲೆ) ದೀಪವೇ ಮುಂತಾದ (ಸಾಧನದಿಂದ) ತೋರಿಸಿ “ಇದು ಹಾವಲ್ಲ ಹಗ್ಗವೇ,” ಎಂದು ಯಾವನೋ ಒಬ್ಬ ಕರುಣಾವಂತನು ಉಪದೇಶವನ್ನು ಮಾಡಿದಾಗ (ಅದು) ಇದ್ದದ್ದು ಇದ್ದಹಾಗೆಯೇ ಗೊತ್ತಾಗುತ್ತದೋ ಅದರಂತಯೇ ಸ್ವಾಭಾವಿಕವಾದ ಪ್ರಮಾತೃತ್ವಜ್ಞಾನವನ್ನು ತೆಗೆದುಹಾಕುವ ಶಾಸ್ತ್ರದಿಂದುಂಟಾದ ಅಸಂಸಾರಿತ್ವಪ್ರತ್ಯಯವೂ ನೇರಾಗಿ ಅನುಭವಕ್ಕೆ ಬಂದೇ ಬರುತ್ತದೆ. ದೇಹೇಂದ್ರಿಯವೇ ಮುಂತಾದಾದವುಗಳಲ್ಲಿ ಅಭಿಮಾನವುಳ್ಳವರಿಗೆ ‘ನಾನು ಪ್ರಮಾತೃವು ಎಂಬ ಸ್ವಾಭಾವಿಕವಾದ ತಿಳಿವಳಿಕೆಯು ಯಾರೂ

ದೇಹೇನ್ದ್ರಿಯಮನೋಬುದ್ಧ್ಯಹಙ್ಕಾರೇಭ್ಯೋ ವ್ಯುತ್ಥಾಪ್ಯ ಶ್ರುತ್ಯಾಚಾರ್ಯಾಭ್ಯಾಂ ಕೂಟಸ್ಥನಿತ್ಯದೃಕ್ಸ್ವರೂಪ ಆತ್ಮಾऽಸೀತಿ ಪ್ರತಿಬೋಧಿತೇನ ತೇನೈವಾऽಪರೋಕ್ಷ್ಯೇಣ ನಾನುಭೂಯತೇ ಸ್ವಾತ್ಮಾ । ನ ಚೈವಮನುಭೂಯಮಾನೇ ಸರ್ವಸಾಕ್ಷಿಣಿ ಸ್ವಾತ್ಮನಿ ದೇಹಾದಿಸಂಸರ್ಗಃ ಶಕ್ಯಶಙ್ಕೋ ಭವತಿ । ಸುಷುಪ್ತಿಸಮಾಧ್ಯಾದೌ ದೇಹಾದಿಪ್ರತೀತೇಃ ಸುತರಾಮಭಾವೇನ ತತ್ಪರಿಭಾವನಯಾऽಶರೀರತ್ವಬುದ್ಧಿದಾರ್ಢ್ಯಾ-ದನತಿಶಙ್ಕನೀಯಾ ಭವತಿ ಶ್ರುತಿಃ ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ (ಮುಂ. ೩-೨-೧) ಇತಿ ವಿಜ್ಞಾಪಯನ್ತೀ । ನ ಚ ತಸ್ಮಿನ್ನಿತ್ಯಕೂಟಸ್ಥಸಚ್ಚಿದಾನನ್ದಸ್ವರೂಪೇऽನಿತ್ಯವಿದ್ಯಾऽವಿದ್ಯಾಧಿಕರಣತ್ವಂ ಸ್ವಪ್ನೇऽಪಿ ಸಂಭಾವಯಿತುಂ ಶಕ್ಯಮಿತಿ ॥

---

ಹೊಂದದಿದ್ದರೂ ಪ್ರತಿಯೊಬ್ಬರಲ್ಲೂ ಇರುವುದಿಲ್ಲವೆಂಬುದಿಲ್ಲವಷ್ಟೇ? ಶ್ರುತಿ ಮತ್ತು ಆಚಾರ್ಯರ (ಸಹಾಯದಿಂದ) ದೇಹ ಇಂದ್ರಿಯ, ಮನಸ್ಸು, ಬುದ್ಧಿ ಅಹಂಕಾರಗಳಿಂದ ಎಬ್ಬಿಸಿ(ದವನಾಗಿ) (ಹಾಗೆಯೇ) "ಕೂಟಸ್ಥವಾದ ನಿತ್ಯ ದೃಕ್ಸ್ವರೂಪನಾದ ಆತ್ಮನೇ ನೀನಾಗಿರುವೆ" ಎಂದು ತಿಳಿದುಕೊಂಡಮೇಲೆ ಆತನೇ ತನ್ನ ಆತ್ಮರೂಪವನ್ನು ನೇರವಾಗಿ ಅರಿಯುತ್ತಾನಲ್ಲವೇ? ಸರ್ವಸಾಕ್ಷಿಯಾದ ತನ್ನ ಸ್ವರೂಪವನ್ನು ಈ ರೀತಿ ಅನುಭವಿಸಿದಮೇಲೂ ದೇಹಾದಿಗಳ ಸಂಸರ್ಗವಿರುತ್ತದೆ ಎಂದು ಸಂದೇಹಿಸುವುದಕ್ಕಾಗುವುದಿಲ್ಲ. ಸುಷುಪ್ತಿ ಸಮಾಧಿಗಳಲ್ಲಿ ದೇಹಾದಿಗಳ ತೋರಿಕೆಯು ಸಂಪೂರ್ಣವಾಗಿ ಇರುವುದಿಲ್ಲವಾದ್ದರಿಂದ ಅದರ ಅಶರೀರತ್ವದ ಭಾವನೆಯಿಂದ ಅಶರೀರತ್ವಬುದ್ಧಿಯು ಗಟ್ಟಿಯಾಗುತ್ತವುದರಿಂದ (ಈ) ಶ್ರುತಿಯನ್ನು ಸಂದೇಹಪಡಬಾರದಷ್ಟೇ? ಶ್ರುತಿಯೂ ಸಹ "ಯಾವನಾದರೂ ಸರಿ ಆ ಪರಬ್ರಹ್ಮವನ್ನು ಅರಿತವನಾದರೆ ಆತನೂ ಬ್ರಹ್ಮವೇ ಆಗುತ್ತಾನೆ" (ಮುಂ-೩-೨-೯) ಎಂದು ತಿಳಿಸುತ್ತಿದೆ. ಎಂದೆಂದಿಗೂ ಕೂಟಸ್ಥ-ಸಚ್ಚಿದಾನಂದಸ್ವರೂಪವಾದ ಆ ಆತ್ಮನು ಅನಿತ್ಯವಾದ ವಿದ್ಯಾವಿದ್ಯೆಗಳಿಗೆ ಆಧಾರನಾಗಿರುತ್ತಾನೆಂದು ಕನಸಿನಲ್ಲೂ ಸಹ ಕಲ್ಪಿಸುವುದಕ್ಕಾಗಲಾರದಷ್ಟೇ?

ಪ್ರಮಾತ್ರಾದಿಪ್ರಪಞ್ಚಸ್ಯ ಪರಮಾತ್ಮನ್ಯಧ್ಯಸ್ತತ್ವೋಕ್ತ್ಯೈವೈತತ್ ಸಿದ್ಧಂ ಭವತಿ ಯದಾತ್ಮಪ್ರಪಞ್ಚಯೋಃ ಸತ್ಯಾನೃತಯೋರ್ನ ಕಶ್ಚನ ವಾಸ್ತವಃ ಸಂಬನ್ಧಃ ಶಕ್ಯಸಮ್ಭಾವನ ಇತಿ । ನ ಹಿ ರಜ್ಜುಸರ್ಪಯೋಃ ಕಶ್ಚನ ಶಬ್ದವ್ಯಪದೇಶಾರ್ಹೋ ಮನಃಪ್ರತ್ಯಯವಿಶೇಷಪರಿಚ್ಛೇದ್ಯೋ ವಾ ಸಂಬನ್ಧಃ ಸಮಸ್ತಿ । ಅತ ಏವ ಪರಮಾರ್ಥವಸ್ತುಭೂತಃ ಪರಮಾತ್ಮಾ ನ ಪ್ರಪಞ್ಚಸ್ಯ ಕೇನಚಿದಪಿ ಧರ್ಮೇಣ ಕದಾಚಿದಪಿ ಕಥಂಚಿದಪಿ ಸಂಪೃಚ್ಯತೇ । ತಥಾ ಚ ಪ್ರಪಞ್ಚಾಧ್ಯಾಸಕೃತಸ್ತದಪವಾದಕೃತೋ ವಾ ನ ಕಶ್ಚಿದಪಿ ವಿಶೇಷಃ ಕದಾಚಿದಪ್ಯಾತ್ಮನಿ ಭವೇತ್ । ನ ಹಿ ಶುಕ್ತಿರಜ್ಜ್ವಾದಿಷು ರಜತಸರ್ಪಾದಿವಿಕಲ್ಪನಯಾ ತದಪಗಮೇನ ವಾ ಕಶ್ಚಿದ್ ವಿಶೇಷಃ ಸ್ಯಾತ್ । ತದ್ವತ್ । ಪರಮಾರ್ಥದೃಷ್ಟ್ಯಾ ತು ಪ್ರಪಞ್ಚಸ್ಯ ಸತತ್ತ್ವನಿರೂಪಣಾಯಾಂ ತಸ್ಯ ಪರಾತ್ಮನಾ ತಾದಾತ್ಮ್ಯಸಂಬನ್ಧ ಏವೇತ್ಯವಗಮ್ಯತೇ । ಯೋ

---

ಪ್ರಮಾತ್ರಾದಿ ಪ್ರಪಂಚವು ಆತ್ಮನಲ್ಲಿ ಅಧ್ಯಸ್ತವಾಗಿದೆ ಎಂದು ಹೇಳಿದ್ದರಿಂದ ಇದು ಸಿದ್ಧವಾಗುತ್ತದೆ – ಏನೆಂದರೆ ಸತ್ಯಾನೃತವಾದ ಆತ್ಮ ಮತ್ತು ಪ್ರಪಂಚಗಳಿಗೆ ಯಾವುದೊಂದು ವಾಸ್ತವಿಕವಾದ ಸಂಬಂಧವನ್ನೂ ಕಲ್ಪಿಸುವುದಕ್ಕಾಗುವುದಿಲ್ಲ. ರಜ್ಜು ಸರ್ಪಾದಿಗಳಿಗೆ ಶಬ್ದದಿಂದ ಹೇಳಬಹುದಾದ ಅಥವಾ ಮನಸ್ಸಿನ ಪ್ರತ್ಯಯವಿಶೇಷದಿಂದ ಪರಿಚ್ಛೇದಗೊಳಿಸುವ ಸಂಬಂಧವು ಹೊಂದುವುದಿಲ್ಲವಷ್ಟೇ? ಆದ್ದರಿಂದಲೇ ಪರಮಾರ್ಥವಾದ ಪರಮಾತ್ಮನು ಪ್ರಪಂಚದ ಯಾವುದೊಂದು ಧರ್ಮದಿಂದಲೂ ಯಾವಾಗಲೂ ಹೇಗೂ ಸಂಬಂಧಪಡುವುದಿಲ್ಲವಷ್ಟೇ? ಹಾಗೆಯೇ ಪ್ರಪಂಚದ ಅಧ್ಯಾಸವನ್ನು ಮಾಡಿದ್ದರಿಂದಾಗಲೀ ಅದರ ಅಪವಾದವನ್ನು ಮಾಡಿದ್ದರಿಂದಲಾಗಲೀ ಯಾವುದೊಂದು ವಿಶೇಷವೂ ಯಾವಾಗಲೂ ಆತ್ಮನಲ್ಲಿ ಇರುವುದಿಲ್ಲ. ಕಪ್ಪೆಚಿಪ್ಪು, ಹಗ್ಗಗಳಿಗೆ ಬೆಳ್ಳಿ, ಹಾವು ಮುಂತಾದ ಕಲ್ಪನೆಯಿಂದಾಗಲೀ ಅದು ಹೋಗುವುದರಿಂದಲಾಗಲೀ ಯಾವುದೊಂದು ವಿಶೇಷವೂ ಹೇಗೆ ಆಗುವುದಿಲ್ಲವೋ ಹಾಗೆಯೇ ಇದು. ಪರಮಾರ್ಥದೃಷ್ಟಿಯಿಂದ ಪ್ರಪಂಚದ ತತ್ತ್ವದ ನಿರೂಪಣೆಯನ್ನು ಮಾಡಲು (ಹೊರಟರೆ) ಆ (ಪ್ರಪಂಚಕ್ಕೆ) ಪರಮಾತ್ಮನೊಡನೆ ತಾದಾತ್ಮ್ಯಸಂಬಂಧವೇ

ಹ್ಯಯಮನಾತ್ಮಪ್ರತ್ಯಯಗೋಚರತ್ವೇನ ಪ್ರತ್ಯವಭಾಸತೇಽಧ್ಯಾಸಕಾಲೇ ವಿವಿಧಃ ಪ್ರಪಞ್ಚಃ, ಸ ತದಾನೀಮಪ್ಯಾತ್ಮೈವ ಪರಮಾರ್ಥತಃ, ನ ತ್ವಾತ್ಮನೋಽನ್ಯಃ ಕಶ್ಚನ ಪ್ರಪಞ್ಚೋ ನಾಮಾಽಸ್ತಿ । ಅನಾತ್ಮಪ್ರತ್ಯಯಸ್ತು ಸರ್ವೋಽಪ್ಯವಿದ್ಯಾತ್ಮಕ ಏವ ರಜ್ಜ್ವಾಮಿವ ಸರ್ಪಪ್ರತ್ಯಯಃ । "ಆತ್ಮೈವಾಽಧಸ್ತಾದಾತ್ಮೋಪರಿಷ್ಟಾದಾತ್ಮಾ ಪಶ್ಚಾದಾತ್ಮಾ ಪುರಸ್ತಾದಾತ್ಮಾ ದಕ್ಷಿಣತ ಆತ್ಮೋತ್ತರತ ಆತ್ಮೈವೇದಂ ಸರ್ವಮ್" (ಛಾಂ. ೭–೨೫–೨) ಇತಿ ಶ್ರುತೇಃ ॥

ತದೇವಂ ಶ್ರುತಿಯುಕ್ತ್ಯನುಭವೈಕಶರಣಂ ಪರಮಂ ಶಿವಂ ಶಾನ್ತಮದ್ವೈತಮಾತ್ಮವಸ್ತುಸಾಕ್ಷಾತ್ಕಾರಣಮನ್ನಯಂ ವೇದಾನ್ತ-ಸೂತ್ರಭಾಷ್ಯೋಪೋದ್ಘಾತಗ್ರನ್ಥೋ ಮೂರ್ತ್ಯಾ ಸ್ವಲ್ಪೋಽಪ್ಯರ್ಥತೋ ನಿರತಿಶಯಮಹಿಮ್ನಾ ವೇದಾನ್ತಗ್ರನ್ಥರಾಶಿಮಧ್ಯೇ ಚಕಾಸ್ತೀತಿ ಮನ್ವಾನೇನ ಮಯಾ ಸರ್ವೈರ್ದುರಾಸದೋಽಯಂ ಶಾಙ್ಕರಭಾಷ್ಯಾಧ್ವಾ

---

ಎಂದು ಗೊತ್ತಾಗುತ್ತದೆ. ಅಧ್ಯಾಸಕಾಲದಲ್ಲಿ ಯಾವ ಈ ವಿವಿಧವಾದ ಪ್ರಪಂಚವು ಅನಾತ್ಮವಾಗಿದೆ ಎಂಬ ಅರಿವಿಗೆ ಗೋಚರವಾಗುತ್ತದೋ, ಅದು ಆಗಲೂ ನಿಜವಾಗಿ ಆತ್ಮವೇ ಆಗಿರುತ್ತದೆಯೇ ಹೊರತು ಆತ್ಮನಿಗಿಂತ ಬೇರೆಯಾದ ಯಾವ ಪ್ರಪಂಚವೆಂಬುದೂ ಇರುವುದಿಲ್ಲ. ಹಗ್ಗದಲ್ಲಿ ಹಾವೆಂಬ ತಿಳಿವಳಿಕೆಯಂತೆ ಅನಾತ್ಮಪ್ರತ್ಯಯವೆಲ್ಲವೂ ಅವಿದ್ಯಾಸ್ವರೂಪವೇ ಆಗಿರುತ್ತದೆ. ಶ್ರುತಿಯೂ ಸಹ "ಆತ್ಮನೇ ಕೆಳಗೆ, ಆತ್ಮನೇ ಮೇಲೆ, ಆತ್ಮನೇ ಹಿಂದೆ, ಆತ್ಮನೇ ಮುಂದೆ ಬಲಕ್ಕೂ ಆತ್ಮನೇ ಎಡಕ್ಕೂ ಆತ್ಮನೇ ಆತ್ಮನೇ ಇದೆಲ್ಲವೂ" (ಛಾಂ–೭–೨೫–೨) ಹೇಳಿದೆ.

ಹೀಗೆ ಈ ವೇದಾಂತಸೂತ್ರಭಾಷ್ಯಕ್ಕೆ ಉಪೋದ್ಘಾತಗ್ರಂಥದ ಈ ಭಾಗವು ಮೂರ್ತಿಯಲ್ಲಿ ಚಿಕ್ಕದಾದರೂ ಅರ್ಥದಿಂದ ಮಿಗಿಲಿಲ್ಲದಷ್ಟು ಮಹಿಮೆಯಿಂದ ಕೂಡಿದ್ದಾಗಿಯೂ ಶ್ರುತಿಯುಕ್ತ್ಯನುಭವಗಳಿಗೆ ಹೊಂದುಗಡೆಯಾಗಿಯೂ ಪರಮ ಮಂಗಲರೂಪವೂ ಶಾಂತವೂ

ಮುಮುಕ್ಷೂಣಾಂ ಸುಗಮೋ ಯಥಾ ಸ್ಯಾತ್ ತಥಾ ನಿಷ್ಕಣ್ಟಕಃ ಕರ್ತವ್ಯ ಇತಿ ತತ್ರ ತತ್ರ ಪರಮತಖಣ್ಡನಮಪಿ ಮನಾಕ್ ಕಟಾಕ್ಷೀಕೃತಂ ನ ತು ಖಣ್ಡನವ್ಯಸನಿತಯೇತಿ ಕ್ಷನ್ತವ್ಯೋऽಯಂ ಮೇऽಪರಾಧಃ ಸದ್ಭಿಃ ॥

ಭಗವತ್ಪಾದಾಭಿಮತವಿಶುದ್ಧವೇದಾನ್ತಪ್ರಕ್ರಿಯಾಭಕ್ತಿಪ್ರಣುನ್ನೇನ ಮಯಾ ತದುಕ್ತ್ಯುಪಜೀವಿನ್ಯೈವ ಕೃತೇಯಮಧ್ಯಾಸಭಾಷ್ಯವ್ಯಾಖ್ಯಾ ಮಮ ತಾವದೇವಂ ಸಂತುಷ್ಟಿಕಾರಣಂ ಯತ್ತ್ವಾಮೇನಾಂ ತೇಭ್ಯ ಏವ ಜಗದ್ಗುರುಭ್ಯಃ ಸಪ್ರಶ್ರಯಂ ಸಮರ್ಪಯಾಮೀತಿ । ಯದಿ ಪುನರಿಯಮನ್ಯೇಷಾಮಪಿ ಕೇಷಾಂಚಿದ್ ವೇದಾನ್ತಪರಿಶೀಲನಕುಶಲಾನಾಂ ಸಹೃದಯಾನಾಂ

---

ಅದ್ವೈತವೂ ಆದ ಆತ್ಮವಸ್ತುವನ್ನು ಸಾಕ್ಷಾತ್ಕರಿಸುತ್ತಾ ವೇದಾಂತಗ್ರಂಥರಾಶಿಗಳ ಮಧ್ಯದಲ್ಲಿ ಹೊಳೆಯುತ್ತಿದೆ. ಹೀಗೆಂದು ತಿಳಿದ ನಾನು ಮುಮುಕ್ಷುಗಳಿಗೆಲ್ಲರಿಗೂ ದುಷ್ಪ್ರವೇಶ್ಯವಾದ ಈ ಶಾಂಕರಭಾಷ್ಯದ ಮಾರ್ಗವು ಯಾವ ರೀತಿಯಾದರೆ ಸುಗಮವೂ ಮುಳ್ಳಿಲ್ಲದ್ದಾಗಿಯೂ ಆಗುವುದೋ ಆ ರೀತಿ ಮಾಡಬೇಕೆಂದುಕೊಂಡಿದ್ದರಿಂದಲೇ ಅಲ್ಲಲ್ಲಿ ಕಿಂಚಿತ್ ಪರಮತಖಂಡನೆಯನ್ನೂ ಮಾಡಿದ್ದೇನೆಯೇ ಹೊರತೂ ಖಂಡನೆ ಮಾಡುವ ಚಟದಿಂದ ಮಾಡಿದ್ದಲ್ಲವಾದ್ದರಿಂದ ಈ ವಿಷಯದಲ್ಲಿ ನನ್ನ ಅಪರಾಧವನ್ನು ಸತ್ಪುರುಷರು ಕ್ಷಮಿಸಬೇಕು.

ಭಗವತ್ಪಾದರಿಗೆ ಒಪ್ಪಿಗೆಯಾದ ಪರಿಶುದ್ಧವಾದ ವೇದಾಂತಪ್ರಕ್ರಿಯೆಯಲ್ಲಿ ಪ್ರೇಮದಿಂದ ಬಾಗಿದವನಾದ ನಾನು ಅವರ ಮಾತನ್ನೇ ಉಪಜೀವಿಸಿಕೊಂಡು ಈ ಅಧ್ಯಾಸಭಾಷ್ಯದ ವ್ಯಾಖ್ಯಾನವನ್ನು ಮಾಡಿರುತ್ತೇನೆ. ಈ ಕೃತಿಯನ್ನು ಜಗದ್ಗುರುಗಳಾದ ಅವರಿಗೇ ವಿನಯಪೂರ್ವಕವಾಗಿ ಸಮರ್ಪಿಸುತ್ತಿದ್ದೇನೆಂಬುದು ಏನುಂಟೋ ಇದೇ ನನ್ನ ಸಂತೋಷಕ್ಕೆ ಕಾರಣವಾದ ವಿಷಯವು. ಇದು ಏನಾದರೂ ಇನ್ನೂ ಕೆಲವು ವೇದಾಂತ ಪರಿಶೀಲನೆಯಲ್ಲಿ ಕುಶಲರಾದವರಾದ ಸಹೃದಯರವರಾದ ಪಂಡಿತರಿಗೂ ಸಂತೋಷಕ್ಕೆ ಅವಕಾಶವಾಗುವುದಾದರೆ,

ಸುಧಿಯಾಮೀಷನ್ಮ್ನೋದಸ್ಥಾನಂ ವಿಚಾರಪ್ರಚೋದನಸ್ಥಾನಂ ವಾ ಭವೇತ್ ತಾವತ್ಯೈವಾಽತೀವ ಧನ್ಯಂ ಮನ್ಯೇಯಾಽಽತ್ಮಾನಮ್ ॥

ತಮಿಮಂ ಗ್ರನ್ಥಮಾಮೂಲಚೂಡಮೇಕವಾರಂ ಪರೀಕ್ಷ್ಯ ತತ್ರ ತತ್ರೋಪಯುಕ್ತಾಂಶಸೂಚನಪೂರ್ವಕಂ ಸ್ವಾಭಿಪ್ರಾಯಾವಿಷ್ಕರಣೇನ ಸಹಾಯೀಭೂತಯೋಃ (೧)ಪಣ್ಡಿತಪ್ರವರಃ ಸಾಹಿತ್ಯವೇದಾನ್ತ-ವಿದ್ವಾನಿತ್ಯಾದಿಬಿರುದಾಙ್ಕಿತೋ ಬ್ರಹ್ಮಶ್ರೀಯುಕ್ತಃ ಕೋಡೂರು ಕೃಷ್ಣಜೋಯಿಸಶರ್ಮಾ ಶ್ರೀಶೃಙ್ಗಗಿರಿಶಙ್ಕರಾಚಾರ್ಯ-ಪೀಠಾಧಿಪಾಸ್ಥಾನವಿದ್ವಾನ್, (೨) ವೇದಾನ್ತ-ಶಿರೋಮಣೀತ್ಯಾದಿಬಿರುದಾಙ್ಕಿತೋ, ಮದ್ರಾಸಸಕಲವಿದ್ಯಾನಿಲಯತೋಽ-ಧಿಗತಪೌರಸ್ತ್ಯವಿದ್ಯಾಪ್ರಾವೀಣ್ಯಪ್ರಶಸ್ತಿಪತ್ರೋ (Certificate of Proficiency in Orientel Learning) ಬ್ರಹ್ಮಶ್ರೀಯುಕ್ತೋ ಎಸ್. ವಿಠ್ಠಲಶಾಸ್ತ್ರೀ ಮಹೀಶೂರರಾಜಾಸ್ಥಾನವಿದ್ವಾಂಶ್ಚೇತ್ಯೇತಯೋಃ

---

ಅಥವಾ ಅವರಿಗೆ ವಿಚಾರಪ್ರಚೋದಕವಾಗಿದ್ದರೆ ಅಷ್ಟರಿಂದಲೇ ನನ್ನನ್ನು ನಾನು ಧನ್ಯನೆಂದು ತಿಳಿಯುವೆನು.

ಆ ಈ ಗ್ರಂಥವನ್ನು ಆಮೂಲಾಗ್ರವಾಗಿ ಒಮ್ಮೆ ಪರೀಕ್ಷಿಸಿ ಅಲ್ಲಲ್ಲಿ ಉಪಯುಕ್ತವಾದ ಅಂಶವನ್ನು ಸೂಚಿಸುವುದರ ಮೂಲಕ ತಮ್ಮ ಅಭಿಪ್ರಾಯವನ್ನು ತೋರಿಸುವುದರೊಂದಿಗೆ ಸಹಾಯಕರಾದ (೧) "ಪಂಡಿತಪ್ರವರ" "ಸಾಹಿತ್ಯ ವೇದಾಂತ ವಿದ್ವಾನ್" ಬ್ರಹ್ಮಶ್ರೀ ಎಂಬಿವೇ ಮೊದಲಾದ ಬಿರುದಾಂಕಿತರಾದ ಶೃಂಗೇರಿ ಶಂಕರಾಚಾರ್ಯ ಪೀಠಾಧಿಪರ ಆಸ್ಥಾನ ವಿದ್ವಾಂಸರಾದ ಕೋಡೂರು ಕೃಷ್ಣಜೋಯಿಸರಿಗೂ (೨) ಹಾಗೂ ವೇದಾಂತ ಶಿರೋಮಣಿ, ಪ್ರಾಚ್ಯವಿದ್ಯಾಪ್ರವೀಣ(ಮದ್ರಾಸಿನ ವಿಶ್ವವಿದ್ಯಾಲಯದಲ್ಲಿ ಪಡೆದ ಪ್ರಶಸ್ತಿ) ಬ್ರಹ್ಮಶ್ರೀ ಮೈಸೂರಿನ ರಾಜಾಸ್ಥಾನದ ವಿದ್ವಾಂಸರಾದ ಆಸ್ಥಾನವಿದ್ವಾನ್ ವಿಟ್ಠಲಶಾಸ್ತ್ರಿಗಳಳೆಂಬ

ಪಣ್ಡಿತಪ್ರಕಾಣ್ಡಯೋರ್ಧನ್ಯವಾದಂ ಸನಾರಾಯಣಸ್ಮರಣಮಿಹೋಲ್ಲಿಖಾಮಿ । ಅನ್ತೇ ಚ ಯತ್ಪ್ರಸಾದಾದಯಂ ಮದೀಯಾಽಲ್ಪಕೃತಿರ್ನಿರ್ವಿಘ್ನಂ ಪರಿಸಮಾಪ್ತಿಮಗಮತ್, ಯಂ ಚ ಸ್ವೇ ಮಹಿಮ್ನಿ ಯದಿ ವಾ ನ ಮಹಿಮ್ನಿ ಪ್ರತಿಷ್ಠಿತಂ ಪ್ರಾಹ ಶ್ರುತೇರಮೋಘವಾಣೀ, ಯಸ್ಯ ಚ ತತ್ಸರ್ವಸ್ಯಾಽಽತ್ಮಭೂತಂ ತತ್ವಂ ಸ್ವೇನೈವ ಶ್ರೀಶಙ್ಕರಾಚಾರ್ಯ-ರೂಪೇಣಾಽವತೀರ್ಣೇನ ಸ್ವನಿರ್ಮಿತಲೋಕೋತ್ತರ-ಭಾಷ್ಯಭಾಸಾ ಮಾದೃಶಾಮಪಿ ಮತೌ ಪ್ರತಿಬಿಮ್ಬಿತಮಕಾರಿ, ತಂ ಪರಮಶಿವಂ ಭಗವನ್ತಂ ಪುರುಷೋತ್ತಮಂ ನಾರಾಯಣಂ ಸಕಾರ್ತಜ್ಞಂ ಸ್ಮಾರಂ ಸ್ಮಾರಂ ಪ್ರಣಮಾಮಿ

ಮನ್ಮಥಸಂವತ್ಸರೇ
ಅಧಿಕಭಾದ್ರಪದ
ಬಹುಲ ತ್ರಯೋದಶ್ಯಾಂ
ಸೌಮ್ಯವಾಸರೇ

ಇತಿ ವಿಜ್ಞಾಪಯತಿ
ಶ್ರೀಶಙ್ಕರಸ್ಮರಣಾವಲಮ್ಬೀ
ಸಚ್ಚಿದಾನನ್ದೇನ್ದ್ರಸರಸ್ವತೀ ಭಿಕ್ಷುಃ

---

ಪಂಡಿತಪ್ರಕಾಂಡರಾದ ಇವರಿಗೆ ಧನ್ಯವಾದವನ್ನು ನಾರಾಯಣಸ್ಮರಣೆಯಪೂರ್ವಕ ಇಲ್ಲಿ ಸೂಚಿಸುತ್ತಿರುವೆನು. ಕೊನೆಯದಾಗಿ ಯಾವಾತನ ಅನುಗ್ರಹದಿಂದ ನನ್ನ ಈ ಅಲ್ಪಕೃತಿಯು ನಿರ್ವಿಘ್ನವಾಗಿ ಪೂರ್ತಿಯಾಯಿತೋ, ಯಾವಾತನು ತನ್ನ ಮಹಿಮೆಯಲ್ಲಿ ಅಥವಾ ಯಾರ ಮಹಿಮೆಯಲ್ಲೂ ಇಲ್ಲವೋ, ಎಂದು ಅಮೋಘವಾದ ಶ್ರುತಿಮಾತೆಯು ಹೇಳುತ್ತಿರುವುದೋ, ಯಾವುದು ಎಲ್ಲಕ್ಕೂ ಆತ್ಮವಾಗಿರುವ ತತ್ತ್ವವೇ ತನ್ನದೇ ಆದ ಶ್ರೀ ಶಂಕರಾಚಾರ್ಯರೂಪದಿಂದ ಇಳಿದುಬಂದಿತೋ, ತಾವು ನಿರ್ಮಾಣಮಾಡಿದ್ದಾದ ಲೋಕೋತ್ತರವಾದ ಭಾಷ್ಯದ ಬೆಳಕಿನಿಂದ ನನ್ನಂಥವರ ಬುದ್ಧಿಯಲ್ಲಿ ಪ್ರತಿಬಿಂಬಿತತ್ವವನ್ನುಂಟುಮಾಡಿತೋ ಅಂತಹ ಪರಮಶಿವನೂ ಭಗವಂತನೂ ಪುರುಷೋತ್ತಮನೂ ಆದ ನಾರಾಯಣನನ್ನು ಕೃತಜ್ಞತಾಪೂರ್ವಕವಾಗಿ ಮತ್ತೆ ಮತ್ತೆ ಸ್ಮರಿಸಿಕೊಳ್ಳುವೆನು.

ಶ್ರೀ ಶಂಕರರ ಸ್ಮರಣೆಯ ಬಲನ್ನವಲಂಬಿಸಿರುವ
ಶ್ರೀ ಸಚ್ಚಿದಾನನ್ದೇಂದ್ರಸರಸ್ವತೀ ಸ್ವಾಮಿಗಳು.

## ದ್ವಿತೀಯಮುದ್ರಣಪ್ರಸ್ತಾವನಮ್

ವೇದಾನ್ತವಿಚಾರಜಿಜ್ಞಾಸೂನಾಮ್ ಮಹಾಜನಾನಾಮ್ ಅಭಿಮಾನಪೂರ್ವಕೇಣ ಸಹಕಾರೇಣ ಗ್ರನ್ಥಸ್ಯಾಸ್ಯ ಪ್ರಥಮಮುದ್ರಣಪ್ರತಿಕೃತಯಃ ಬಹೋಃ ಕಾಲಾತ್ ಪೂರ್ವಮೇವ ವಿಕ್ರೀತಾ ಅಭೂವನ್ । ಅತಶ್ಚೇದಾನೀಂ ದ್ವಿತೀಯವಾರಂ ಗ್ರನ್ಥರತ್ನಸ್ಯಾಸ್ಯ ಪುನರ್ಮುದ್ರಿಕಾಂ ವಾಚಕೇಭ್ಯಃ ಸಮರ್ಪಯಿತುಂ ಮಹಾನ್ತಂ ಮೋದಮಾವಹಾಮಃ ॥

ಪ್ರಮಾಥಿನಾಮ ಸಂವತ್ಸರಸ್ಯ ಮಾರ್ಗಶೀರ್ಷ ಕೃಷ್ಣಾಷ್ಟಮ್ಯಾಂ ಗುರುವಾಸರೇ ೩೦-೧೨-೯೯

ಪ್ರಕಾಶಕಃ

---

## ದ್ವಿತೀಯಮುದ್ರಣದ ಪ್ರಸ್ತಾವನೆಯು.

ವೇದಾನ್ತ ವಿಚಾರದ ಜಿಜ್ಞಾಸುಗಳಾದ ಮಹಾಜನರ ಅಭಿಮಾನಪೂರ್ವಕವಾದ ಸಹಕಾರದಿಂದ ಈ ಗ್ರಂಥದ ಮೊದಲನೆಯ ಮುದ್ರಣದ ಪ್ರತಿಗಳು ಬಹಳಕಾಲದ ಹಿಂದೆಯೇ ಮಾರಾಟವಾದವು. ಆದ್ದರಿಂದ ಈಗ ಎರಡನೆಯ ಸಲ ಈ ಗ್ರಂಥರತ್ನದ ಪುನರ್ಮುದ್ರಣವನ್ನು ಓದುಗರಿಗೆ ಸಮರ್ಪಿಸಲು ಹೆಚ್ಚಿನ ಸಂತೋಷವನ್ನು ತರುವೆವು.

ವಿರೋಧಿನಾಮ ಸಂವತ್ಸರದ ಫಾಲ್ಗುಣ ಶುದ್ಧ ಸಪ್ತಮಿ ಭಾನುವಾರ 20-2-2010ರಂದು ಪ್ರಕಾಶನಗೊಂಡಿತು.

ಪ್ರಕಾಶಕರು

# ವಿಷಯಾನುಕ್ರಮಣಿಕೆ

೧. ಅಥಾಧ್ಯಾಸಪ್ರತಿಜ್ಞಾಭಾಷ್ಯಮ್ ----- ೨

೨. ಅಥಾಧ್ಯಾಸಲಕ್ಷಣಭಾಷ್ಯಮ್ ----- ೩೬

೩. ಅಥಾಧ್ಯಾಸಸಂಭಾವನಾಭಾಷ್ಯಮ್ ----- ೭೨

೪. ಅಥ ವಿದ್ಯಾವಿದ್ಯಾವಿವೇಕಭಾಷ್ಯಮ್ ----- ೯೩

೫. ಅಥ ವ್ಯವಹಾರಮಾತ್ರಸ್ಯಾऽऽವಿದ್ಯಕತ್ವ-
ಪ್ರತಿಪಾದಕಂ ಭಾಷ್ಯಮ್ ----- ೧೨೭

೬. ಶಾಸ್ತ್ರವ್ಯವಹಾರಸ್ಯಾಪ್ಯವಿದ್ಯಾಪುರಸ್ಸರತ್ವ-
ಪ್ರದರ್ಶನಮ್ ----- ೧೭೬

೭. ಅಥಾಧ್ಯಾಸಪ್ರಕಾರಪ್ರದರ್ಶನಭಾಷ್ಯಮ್ - ೨೦೧

೮. ಅಥಾಧ್ಯಾಸವಿಚಾರೋಪಸಂಹಾರಭಾಷ್ಯಮ್ - ೨೨೪

೯. ಅಥ ಮೀಮಾಂಸಾವತರಣಿಕಾಭಾಷ್ಯಮ್ -- ೨೩೭

# ಸಂಕೇತಾಕ್ಷರ ವಿವರಣೆ

| | |
|---|---|
| ವಿ. | ವಿವರಣಮ್–ಮಹೇಶ ರೀಸರ್ಚ್ ಇನ್ಸ್ಟಿಟ್ಯೂಟ್. |
| ರ.ಪ್ರ. ಮತ್ತು ನ್ಯಾ.ನಿ. | ರತ್ನಪ್ರಭಾ ಮತ್ತು ನ್ಯಾಯನಿರ್ಣಯ.<br>ಬ್ರಹ್ಮಸೂತ್ರಶಾಂಕರಭಾಷ್ಯಮ್, ಮೋತಿಲಾಲ್<br>ಬನಾರಸೀದಾಸ್ ಪಬ್ಲಿಕೇಷನ್. |
| ತತ್ತ್ವ. | ತತ್ತ್ವದೀಪನ, ಮಹೇಶ ರೀಸರ್ಚ್ ಇನ್ಸ್ಟಿಟ್ಯೂಟ್. |
| ವೃತ್ತಿ. | ವೃತ್ತಿಪ್ರಭಾಕರ, ಮಹೇಶ ರೀಸರ್ಚ್ ಇನ್ಸ್ಟಿಟ್ಯೂಟ್. |
| ಭಾ. | ಭಾಮತೀ–ಮೋತಿಲಾಲ್ ಬನಾರಸೀದಾಸ್ ಪಬ್ಲಿಕೇಷನ್. |
| ರಾ.ಭಾ. | ರಾಮನುಜೀಯ ಭಾಷ್ಯಮ್–ರಾಮಾನುಜೀಯ<br>ಗ್ರಂಥಮಾಲಾ.ನಡಿಗಡ್ಡೆಪಾಲೆಮ್,ಗುಂಟೂರು. |
| ಶ್ರೀ.ಭಾ. | ಶ್ರೀಭಾಷ್ಯಮ್–ರಾಮಾನುಜೀಯ<br>ಗ್ರಂಥಮಾಲಾ.ನಡಿಗಡ್ಡೆಪಾಲೆಮ್,ಗುಂಟೂರು. |
| ನ್ಯಾ.ಸು. | ಜಯತೀರ್ಥರ ರಚನೆ–(ನಮ್ಮಲ್ಲಿ ಇರುವ ಹಳೆಯ ಪುಸ್ತಕ). |
| ಬೃ.ವಾ. | ಬೃಹದಾರಣ್ಯಕ ವಾರ್ತಿಕ. |
| ತೈ. | ತೈತ್ತಿರೀಯ ಉಪನಿಷತ್ |
| ಬೃ.ಭಾ. | ಬೃಹದಾರಣ್ಯಕ ಶಾಂಕರಭಾಷ್ಯ. |
| ಸೂ.ಭಾ. | ಬ್ರಹ್ಮಸೂತ್ರ ಶಾಂಕರಭಾಷ್ಯ. |

# ಸುಗಮಾ

## (ಶ್ರೀಶಾಂಕರೀಯಾಧ್ಯಾಸಭಾಷ್ಯವ್ಯಾಖ್ಯಾ)

ಸರ್ವಾತ್ಮಾ ಸರ್ವದೃಗ್ಯೋಽಸೌ ಸರ್ವಾಧ್ಯಾಸನಿರಾಸಕೃತ್ ।
ಸತತಂ ಸಂನಿಧತ್ತಾಂ ಮೇ ಹೃದಯೇ ಪರಮಃ ಶಿವಃ ॥೧॥

ಸೂತ್ರಭಾಷ್ಯಪ್ರಣೇತಾರೌ ವೇದಾಂತಾಬ್ಜಪ್ರಭಾಕರೌ ।
ವಂದೇ ಪರಸ್ಪರಾತ್ಮಾನೌ ಬಾದರಾಯಣಶಂಕರೌ ॥೨॥

ಭಾಷ್ಯಂ ಯದ್ಯಪಿ ಪೂರ್ಣಮೇವ ಬಹುಭಿರ್ವ್ಯಾಖ್ಯಾತಪೂರ್ವಂ
ಬುಧೈರಸ್ಮಿಂಸ್ತೇಽಪಿ ತಥಾಪಿ ಮೋಹಮಗಮನ್ ಯದ್ವಾದಿವೈಮತ್ಯತಃ ।
ಅಧ್ಯಾಸೈಕನಿರೂಪಣೇನ ನಿಖಿಲಂ ಭಾಷ್ಯಾರ್ಥಮಾತನ್ವತೀ ಸ್ವಾತ್ಮಾ-
ನಂದವಿಧಾಯಿನೀ ಚ ಸುಗಮಾ ವ್ಯಾಖ್ಯಾ ನ ಕೇಷಾಂ ಮುದೇ ॥೩॥

---

# ಸುಗಮಾ

## (ಶ್ರೀಶಂಕರಾಚಾರ್ಯರ ಅಧ್ಯಾಸಭಾಷ್ಯದ ವಿವರಣೆ)

೧. ಯಾವಾತನು ಎಲ್ಲರಿಗೂ ಆತ್ಮನೋ ಎಲ್ಲವನ್ನೂ ನೋಡುತ್ತಿರುವವನೋ ಎಲ್ಲರ ಅಧ್ಯಾಸವನ್ನು ತೆಗೆದುಹಾಕುವವನೋ ಅಂತಹ ಪರಮಶಿವನು ಯಾವಾಗಲೂ ನನ್ನ ಹೃದಯದಲ್ಲಿ ನೆಲೆಸಿರಲಿ.

೨. (ವೇದಾಂತ) ಸೂತ್ರವನ್ನೂ ಭಾಷ್ಯವನ್ನೂ ರಚಿಸಿದವರೂ ವೇದಾಂತವೆಂಬ ಕಮಲದ ಹೂವಿಗೆ ಸೂರ್ಯರಂತಿರುವವರೂ ಮತ್ತು ಪರಸ್ಪರ ಆತ್ಮರಾಗಿರುವವರೂ ಆದ ಶ್ರೀಬಾದರಾಯಣರನ್ನೂ ಮತ್ತು ಶ್ರೀ ಶಂಕರಾಚಾರ್ಯರನ್ನೂ ನಮಸ್ಕರಿಸುತ್ತೇನೆ.

೩. ಭಾಷ್ಯವು (ಪರಿ) ಪೂರ್ಣವಾದದ್ದೇ (ಆಗಿದ್ದರೂ) ಹಾಗೆಯೇ ಅನೇಕ ವಿದ್ವಾಂಸರೂ ವ್ಯಾಖ್ಯಾನವನ್ನು ಮಾಡಿದ್ದರೂ ಇದರ ವಿಷಯದಲ್ಲಿ ವಾದಿಗಳಿಗೆ

## ೧. ಅಥಾಧ್ಯಾಸಪ್ರತಿಜ್ಞಾಭಾಷ್ಯಮ್

**ಯುಷ್ಮದಸ್ಮತ್ಪ್ರತ್ಯಯಗೋಚರಯೋರ್ವಿಷಯ-
ವಿಷಯಿಣೋಸ್ತಮಃ ಪ್ರಕಾಶವದ್ವಿರುದ್ಧಸ್ವಭಾವಯೋ-
ರಿತರೇತರಭಾವಾನುಪಪತ್ತೌ ಸಿದ್ಧಾಯಾಂ,
ತದ್ಧರ್ಮಾಣಾಮಪಿ ಸುತರಾಮಿತರೇತರಭಾವಾನುಪ-
ಪತ್ತಿಃ । ಇತ್ಯತೋಽಸ್ಮತ್ಪ್ರತ್ಯಯಗೋಚರೇ ವಿಷಯಿಣಿ
ಚಿದಾತ್ಮಕೇ ಯುಷ್ಮತ್ಪ್ರತ್ಯಯಗೋಚರಸ್ಯ ವಿಷಯಸ್ಯ
ತದ್ಧರ್ಮಾಣಾಂ ಚಾಧ್ಯಾಸಸ್ತದ್ವಿಪರ್ಯಯೇಣ
ವಿಷಯಿಣಸ್ತದ್ಧರ್ಮಾಣಾಂ ಚ ವಿಷಯೇಽಧ್ಯಾಸೋ**

---

ವಿಮತಿ (ವಿರುದ್ಧಾಭಿಪ್ರಾಯ)ಇರುವುದರಿಂದ ಪಂಡಿತರೂ ಸಹ ಮೋಹವನ್ನು ಹೊಂದಿದವರಾದರು ! ಅಧ್ಯಾಸ(ಸ್ವರೂಪ)ವನ್ನೇ ಪ್ರಧಾನವಾಗಿ ಗೊತ್ತುಮಾಡುವದರ ಮೂಲಕ ಸಂಪೂರ್ಣವಾಗಿ ಭಾಷ್ಯದ ಅಭಿಪ್ರಾಯವನ್ನು ತರುತ್ತಿರುವಂಥದ್ದೂ, ಮತ್ತು ಸ್ವಾತ್ಮಾನಂದವನ್ನುಂಟುಮಾಡುವಂಥದ್ದೂ ಆದ **ಸುಗಮಾ** ಎಂಬ ವ್ಯಾಖ್ಯಾನವು ಯಾರ ಸಂತೋಷಕ್ಕೆ ತಾನೆ ಕಾರಣವಾಗುವುದಿಲ್ಲ !

### ೧. ಇನ್ನು ಅಧ್ಯಾಸದ ಪ್ರತಿಜ್ಞಾಭಾಷ್ಯದ ಅರ್ಥವು

**"ನೀನು","ನಾನು "** ಎಂಬ ಪ್ರತ್ಯಯಗಳಿಗೆ ಗೋಚರವಾಗಿರುವ ವಿಷಯವಿಷಯಿ(ಇವು)ಗಳು ಕತ್ತಲೆಬೆಳಕುಗಳಂತೆ (ಒಂದಕ್ಕೊಂದು) ವಿರುದ್ಧವಾದ ಸ್ವಭಾವವುಳ್ಳವು (ಗಳಾದ್ದರಿಂದ ಇವುಗಳಲ್ಲಿ) ಒಂದು ಮತ್ತೊಂದರ ಸ್ವಭಾವವಾಗುವುದೆಂಬುದು ಹೊಂದುವುದಿಲ್ಲವೆಂಬುದು ಸಿದ್ಧವಾಗಿರುವಲ್ಲಿ, ಇವುಗಳ ಧರ್ಮಗಳು ಒಂದರವು ಮತ್ತೊಂದರಲ್ಲಿ-ರುವುದೆಂಬುದು ತೀರ ಹೊಂದದ(ಮಾತಾಗಿರುವುದ)ರಿಂದ **ನಾನು** ಎಂಬ ಅರವಿಗೆ ಗೋಚರವಾಗಿಯೂ ಚಿತ್ಸ್ವರೂಪವಾಗಿಯೂ ಇರುವ ವಿಷಯಿಯಲ್ಲಿ, **ನೀನು** ಎಂಬ ಅರಿವಿಗೆ ಗೋಚರವಾದ ವಿಷಯವನ್ನೂ ಅದರ ಧರ್ಮಗಳನ್ನೂ ಅಧ್ಯಾಸ (ಮಾಡುತ್ತಾರೆಂಬುದೂ) ಇದಕ್ಕೆ ವಿಪರೀತವಾಗಿ ವಿಷಯಿಯನ್ನೂ

**ಮಿಥ್ಯೇತಿ ಭವಿತುಂ ಯುಕ್ತಮ್ ॥ ತಥಾಪ್ಯನ್ಯೋನ್ಯ-ಸ್ಮಿನ್ನನ್ಯೋನ್ಯಾತ್ಮಕತಾಮನ್ಯೋನ್ಯಧರ್ಮಾಂಶ್ಚಾಧ್ಯಸ್ಯೇ-ತರೇತರಾವಿವೇಕೇನ, ಅತ್ಯಂತವಿವಿಕ್ತಯೋರ್ಧರ್ಮ-ಧರ್ಮಿಣೋರ್ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ "ಅಹಮಿದಮ್" , "ಮಮೇದಮ್" – ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ॥**

**೧. ವಿಚಾರಾವತರಣಿಕಾ** – ಓಂ ನಮೋ ಬ್ರಹ್ಮವಿದ್ಯಾಸಂಪ್ರದಾಯ-ಕರ್ತೃಭ್ಯೋ ನಮೋ ಮಹದ್ಭ್ಯೋ ನಮೋ ಗುರುಭ್ಯಃ । ಭಗವಾನ್ ಬಾದರಾಯಣೋ ವೇದಾಂತಮೀಮಾಂಸಾಮಾರಭಮಾಣಃ "ಬ್ರಹ್ಮವಿದಾ-ಪ್ನೋತಿ ಪರಮ್" (ತೈ. ೨-೧-೧ ), "ಬ್ರಹ್ಮವಿದ್ಬ್ರಹ್ಮೈವ ಭವತಿ" (ಮುಂ. ೩-೨-೯) – ಇತ್ಯಾದಿಶ್ರುತಿಸಮರ್ಪಿತಂ ನಿಃಶ್ರೇಯಸಪ್ರಯೋಜನಂ

---

ಆದರ ಧರ್ಮಗಳನ್ನೂ ವಿಷಯದಲ್ಲಿ ಅಧ್ಯಾಸಮಾಡುತ್ತಾರೆಂಬುದೂ ಸುಳ್ಳು ಎಂದಾಗಬೇಕು. ಹೀಗಿದ್ದರೂ ಅತ್ಯಂತವಾಗಿ ಬೇರ್ಪಟ್ಟಿರುವ ಈ ಧರ್ಮಧರ್ಮಿಗಳನ್ನು ಒಂದರಿಂದೊಂದನ್ನು ವಿಂಗಡಿಸಿ ತಿಳಿದುಕೊಳ್ಳದ್ದರಿಂದ ಇವುಗಳಲ್ಲಿ ಒಂದರಸ್ವರೂಪವನ್ನು ಮತ್ತೊಂದರಲ್ಲಿಯೂ ಒಂದರ ಧರ್ಮಗಳನ್ನು ಮತ್ತೊಂದರಲ್ಲಿಯೂ ಅಧ್ಯಾಸಮಾಡಿ ತಪ್ಪುತಿಳಿವಳಿಕೆಯ ನಿಮಿತ್ತದಿಂದ ದಿಟವಾದದ್ದನ್ನೂ ಸಟೆಯಾದದ್ದನ್ನೂ ಬೆರೆಯಿಸಿಕೊಂಡು **"ಇದು ನಾನು", "ನನ್ನದಿದು"** ಎಂದೀ ಪರಿಯಾಗಿ ಜನರು ವ್ಯವಹಾರಮಾಡುತ್ತಿ-ರುವದು ಸ್ವಾಭಾವಿಕವಾಗಿರುತ್ತದೆ ॥

**(೧) ವಿಚಾರಕ್ಕೆ ಅವತರಣಿಕೆಯು** – ಬ್ರಹ್ಮವಿದ್ಯಾಸಂಪ್ರದಾಯವನ್ನು ನಡೆಸಿದವರಾದ ಮಹಾತ್ಮರಾದ ಗುರುಗಳಿಗೆ ನಮಸ್ಕಾರವು. ಭಗವಂತರಾದ ಬಾದರಾಯಣಾಚಾರ್ಯರು ವೇದಾಂತ ಮೀಮಾಂಸಾಶಾಸ್ತ್ರವನ್ನು ಆರಂಭಮಾಡಬೇಕೆಂದುಕೊಂಡವರಾಗಿ **"ಬ್ರಹ್ಮವನ್ನು ತಿಳಿದವನು ಹೆಚ್ಚಿನ (ಪುರುಷಾರ್ಥವನ್ನೇ) ಪಡೆಯುವನು"** (ತೈ ೨-೧-೧) **"ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುವನು"** (ಮುಂ. ೩-೨-೯) ಇದೇ ಮೊದಲಾದ ಶ್ರುತಿಯು ತಂದುಕೊಟ್ಟದ್ದಾದ ಮೋಕ್ಷವೆಂಬ ಪ್ರಯೋಜನವನ್ನುಳ್ಳ

ಬ್ರಹ್ಮಜ್ಞಾನಂ ಸಪರಿಕರಂ ನಿರೂಪಯನ್ ಶಾಸ್ತ್ರಾದೌ ಸೂತ್ರಯಾಮಾಸ– "ಅಥಾತೋ ಬ್ರಹ್ಮಜಿಜ್ಞಾಸಾ" (ಬ್ರ. ಸೂ. ೧–೧–೧) ಇತಿ । ಅಸ್ಯಾರ್ಥಃ। ಅಥ ಸಾಧನಚತುಷ್ಟಯಸಂಪತ್ತ್ಯನಂತರಮ್, ಅತಃ ಬ್ರಹ್ಮಜ್ಞಾನಾದೇವ ಪರಮಪುರುಷಾರ್ಥಪ್ರಾಪ್ತಿರಿತಿ ಶ್ರುತಿಸಿದ್ಧತ್ವಾತ್, ಬ್ರಹ್ಮಣೋ ವಕ್ಷ್ಯಮಾಣ-ಲಕ್ಷಣಸ್ಯ ಜಿಜ್ಞಾಸಾ ಕರ್ತವ್ಯಾ ಇತಿ । ಅತ್ರ ಬ್ರಹ್ಮಜ್ಞಾನಾರ್ಥಂ ವಿಚಾರಃ ಕರಣೀಯಃ ಇತ್ಯುಕ್ತ್ವಾ ತಜ್ಜ್ಞಾನಮೇವ ಪರಮಪುರುಷಾರ್ಥಪ್ರಾಪ್ತಿಂ ಪ್ರತಿ ಹೇತುತ್ವೇನ ಸೂಚಯನ್ ಸೂತ್ರಕಾರಃ ಸ್ವಾತ್ಮಭೂತಬ್ರಹ್ಮಪ್ರಾಪ್ತಿರೇವ ಪರಮಪುರುಷಾರ್ಥಃ, ತತ್ಪ್ರಾಪ್ತಿಶ್ಚ ಮಿಥ್ಯಾಜ್ಞಾನವ್ಯವಧಾನನಿಬರ್ಹಣದ್ವಾರಾ ಇತ್ಯರ್ಥಾತ್ ಸೂಚಯತಿ । ನ ಹ್ಯನ್ಯಜ್ಞಾನಾದನ್ಯಪ್ರಾಪ್ತಿರುಪಪದ್ಯತೇ । ನ ಚ ಸ್ವರೂಪಪ್ರಾಪ್ತಿರ್ನಾಮ ಮಿಥ್ಯಾಜ್ಞಾನಾಧ್ಯಸ್ತವ್ಯವಧಾನಹಾನವ್ಯತಿರಿಕ್ತೇನ

---

ಬ್ರಹ್ಮಜ್ಞಾನವನ್ನು ಸಾಧನಸಹಿತವಾಗಿ ತಿಳಿಸಿಕೊಡುತ್ತಾ ಈ ಶಾಸ್ತ್ರದ ಆರಂಭದಲ್ಲಿ (**"ಅಥಾತೋ ಬ್ರಹ್ಮಜಿಜ್ಞಾಸಾ"**) **ಇನ್ನು ಆದ್ದರಿಂದ ಬ್ರಹ್ಮವನ್ನು ತಿಳಿಯಲಿಚ್ಛಿಸಬೇಕು** (ಬ್ರ.ಸೂ ೧–೧–೧) ಎಂದು ಸೂತ್ರವನ್ನು ಮಾಡಿರುತ್ತಾರೆ. ಇದರ ಅರ್ಥವು (ಈ ರೀತಿ ಇರುತ್ತದೆ) – **ಅಥ** (ಎಂದರೆ) ಸಾಧನಚತುಷ್ಟಯಸಂಪತ್ತಿಯಾದ ನಂತರ, **ಅತಃ** (ಎಂದರೆ) ಬ್ರಹ್ಮಜ್ಞಾನದಿಂದಲೇ ಹೆಚ್ಚಿನ ಪುರುಷಾರ್ಥವು ದೊರೆಯುತ್ತದೆ ಎಂದು ಶ್ರುತಿಗಳಲ್ಲಿ ಪ್ರಸಿದ್ಧವಾಗಿದೆಯಾದ್ದರಿಂದ, ಬ್ರಹ್ಮದ ಎಂದರೆ ಮುಂದೆ ಹೇಳುವ ಲಕ್ಷಣವುಳ್ಳ[೧] (ನಿತ್ಯಶುದ್ಧಬುದ್ಧಮುಕ್ತಸ್ವರೂಪವಾದದ್ದು ಎಂದು ತಿಳಿಸಿರುವ ಬ್ರಹ್ಮದ) ಜಿಜ್ಞಾಸೆಯನ್ನು ಮಾಡಬೇಕು ಎಂದರ್ಥವು. ಇಲ್ಲಿ ಸೂತ್ರಕಾರರು ಬ್ರಹ್ಮಜ್ಞಾನಕ್ಕಾಗಿ ವಿಚಾರವನ್ನು ಮಾಡಬೇಕೆಂದು ಹೇಳಿ ಅದರ ಜ್ಞಾನವೇ ಹೆಚ್ಚಿನ ಪುರುಷಾರ್ಥವನ್ನು ಪಡೆಯುವದಕ್ಕೆ ಕಾರಣವೆಂದು ಸೂಚಿಸುತ್ತಾ, ತನ್ನ ಸ್ವರೂಪವೇ ಆದ ಬ್ರಹ್ಮಸ್ವರೂಪವನ್ನು ಪಡೆಯುವುದೇ ಪರಮಪುರುಷಾರ್ಥವೆಂತಲೂ ಅದನ್ನು ಪಡೆಯುವುದೆಂದರೆ ತಪ್ಪು-ತಿಳಿವಳಿಕೆಯೆಂಬ ಅಡ್ಡಿಯನ್ನು ಕಳೆಯುವುದರ ಮೂಲಕವೆಂದು ಅರ್ಥವಶದಿಂದ ಸೂಚಿಸಿರುತ್ತಾರೆ. ಒಂದರ ಜ್ಞಾನದಿಂದ ಮತ್ತೊಂದನ್ನು ಪಡೆಯುವುದೆಂಬುದು ಹೊಂದುವುದಿಲ್ಲವಷ್ಟೇ? ಸ್ವರೂಪಪ್ರಾಪ್ತಿಗೆ ತಪ್ಪುತಿಳಿವಳಿಕೆಯಿಂದ

---

೧. ಈ ಭಾಷ್ಯಾನುವಾದದ ಟಿಪ್ಪಣಿಗಳನ್ನು ವಾಚಕರು ಮೂಲ ಅನುವಾದ ಗ್ರಂಥದಲ್ಲೇ ನೋಡಿಕೊಳ್ಳಬೇಕು. ಅದರಿಂದ ಬಹಳ ವಿಚಾರಗಳು ಮನದಟ್ಟಾಗುವವು.

ಮಾರ್ಗಾಂತರೇಣೇತಿ । ತದೇವಮರ್ಥಾತ್ ಸೂಚಿತಂ ಸಂಸಾರಿತ್ವಸ್ಯಾಧ್ಯಾಸಕೃತತ್ವಂ ಭಗವಾನ್ ಭಾಷ್ಯಕಾರಃ ಸಕಲಶಾಸ್ತ್ರೋಪೋದ್ಘಾತತಯೋಪನಿಬಧ್ನಾತಿ । "ಯುಷ್ಮದಸ್ಮತ್ಪ್ರತ್ಯಯಗೋಚರಯೋಃ" ಇತ್ಯಾದಿನಾ "ಅಸ್ಯಾನರ್ಥಹೇತೋಃ ಪ್ರಹಾಣಾಯಾತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾಂತಾ ಆರಭ್ಯಂತೇ" ಇತ್ಯಂತೇನ ಗ್ರಂಥೇನ। ಅಸ್ಯ ಚ ಭಾಷ್ಯಗ್ರಂಥಸ್ಯ ವಿಭಾಗಶೋಽರ್ಥಂ ಯಥಾಮತಿ ಪ್ರದರ್ಶಯಿಷ್ಯಾಮಃ॥

**೨. ಪ್ರತಿಜ್ಞಾಭಾಷ್ಯವಿಭಾಗಃ** – ತತ್ರ **'ತಥಾಪಿ'** ಇತ್ಯಾರಭ್ಯ **'ನೈಸರ್ಗಿಕೋಽಯಂ ಲೋಕವ್ಯವಹಾರಃ'** ಇತ್ಯೇತದಂತಂ ಭಾಷ್ಯಂ ತಾವದಾತ್ಮಾನಾತ್ಮನೋರಿತರೇತರಾಧ್ಯಾಸಃ ಸ್ವಭಾವತ ಏವ ಲೋಕೇ ಪ್ರವರ್ತಮಾನೋ ದೃಶ್ಯತ ಇತಿ ಪ್ರತಿಜಾನೀತೇ । **'ಯುಷ್ಮದಸ್ಮತ್ಪ್ರತ್ಯಯಗೋಚರಯೋಃ'** ಇತ್ಯಾರಭ್ಯ **'ಮಿಥ್ಯೇತಿ ಭವಿತುಂ ಯುಕ್ತಮ್'** ಇತ್ಯಂತಂ

---

ಹುಟ್ಟುಹಾಕಿದ್ದಾದ (ದೇಹಾದಿಗಳೇ ನಾನೆಂಬ ತಿಳಿವಳಿಕೆಯೆಂಬ) ಅಡ್ಡಿಯನ್ನು ಕಳಚಿಕೊಳ್ಳುವುದಕ್ಕಿಂತ ಬೇರೆಯಾದ ಮಾರ್ಗವೂ ಇಲ್ಲವಷ್ಟೆ ! ಈ ಅಭಿಪ್ರಾಯದಿಂದಲೇ ಭಗವಂತರಾದ ಭಾಷ್ಯಕಾರರು ಸಂಸಾರಿತ್ವವು ಅಧ್ಯಾಸದಿಂದ ಆದ್ದದ್ದೆಂದು ಸೂಚಿಸಿದ್ದು, ಸಕಲಶಾಸ್ತ್ರಕ್ಕೂ (ವೇದಾನ್ತಶಾಸ್ತ್ರಕ್ಕೂ) ಉಪೋದ್ಘಾತವಾಗಿರಲೆಂದು (ಅಧ್ಯಾಸಭಾಷ್ಯವನ್ನು) ಬರೆದಿರುತ್ತಾರೆ. ಅದನ್ನು ಯುಷ್ಮದಸ್ಮತ್ಪ್ರತ್ಯಯ ಎಂದು ಆರಂಭಿಸಿ **"ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ"** ಎಂಬವರೆಗಿನ ಗ್ರಂಥಭಾಗದಿಂದ ತಿಳಿಸಿದ್ದಾಗಿದೆ. ಈ ಭಾಷ್ಯಭಾಗದ ಅಭಿಪ್ರಾಯವನ್ನು (ವಿಷಯವನ್ನು) ವಿಂಗಡಮಾಡುತ್ತಾ ನಮಗೆ ತಿಳಿದಮಟ್ಟಿಗೆ ತಿಳಿಸಿಕೊಡುವೆವು.

(೨)ಪ್ರತಿಜ್ಞಾಭಾಷ್ಯದ ವಿಭಾಗವು – ಮೊದಲು **ತಥಾಪಿ** ಎಂದು ಆರಂಭಿಸಿ **ನೈಸರ್ಗಿಕೋಽಯಂ ಲೋಕವ್ಯವಹಾರಃ** ಎಂಬವರೆಗಿನ ಭಾಷ್ಯವು – ಆತ್ಮಾನಾತ್ಮರುಗಳನ್ನು ಒಂದನ್ನಿನ್ನೊಂದನ್ನಾಗಿ ತಪ್ಪುತಿಳಿಯುವು–ದೆಂಬುದು ಸ್ವಭಾವದಿಂದಲೇ ಲೋಕದವರಿಗೆ ನಡೆದುಕೊಂಡು ಬಂದಿದೆ ಎಂದು (ತಿಳಿಸುವುದಕ್ಕಾಗಿ ಎಂದು ಭಾಷ್ಯಕಾರರು) ಪ್ರತಿಜ್ಞೆಮಾಡಿರುತ್ತಾರೆ. **ಯುಷ್ಮದಸ್ಮತ್ಪ್ರತ್ಯಯಗೋಚರಯೋಃ** ಎಂಬಲ್ಲಿಂದಾರಂಭಗೊಂಡು **ಮಿಥ್ಯೇತಿ ಭವಿತುಂ ಯುಕ್ತಮ್** ಎಂಬುದರವರೆಗಾದರೋ, ಹೇಳಿದ

ತೂಕ್ತಾಧ್ಯಾಸೋ ಯುಕ್ತ್ಯಾ ನಿರೂಪ್ಯಮಾಣೋ ನೋಪಪದ್ಯತ ಇತಿ ಶಂಕಾಸಮುತ್ಥಾಪನಾರ್ಥಮಿತಿ ವಿವೇಕಃ ॥

**೩. ಅಧ್ಯಾಸೇ ಶಂಕಾ** – ತತ್ರ ಶಂಕಾಗ್ರಂಥಸ್ಯಾಯಮಭಿಪ್ರಾಯಃ – ಯದೇತದುಪವರ್ಣ್ಯತ ಆತ್ಮಾನಾತ್ಮನೋರಿತರೇತರಾಧ್ಯಾಸ ಏವ ನಿಮಿತ್ತಂ ಲೋಕವ್ಯವಹಾರಸ್ಯೇತಿ, ತನ್ನೋಪಪದ್ಯತೇ । ಅಧ್ಯಾಸೋ ಹಿ ನಾಮ ಭ್ರಾಂತ್ಯಾ ಸಮಾರೋಪಃ । ಸ ಚ ಸಮಾನಸ್ವಭಾವಯೋರೇವ ಸಂಭವತಿ ನ ತು **ವಿರುದ್ಧಸ್ವಭಾವಯೋಃ** । ವಿರುದ್ಧಸ್ವಭಾವೌ ಚಾತ್ಮಾನಾತ್ಮಾನೌ । ಅತೋ ನಾನ್ಯೋನ್ಯಸಮಾರೋಪಣಾರ್ಹೌ । ಕಥಂ ಪುನಸ್ತಯೋರ್ವಿರುದ್ಧ-ಸ್ವಭಾವತೇತಿ ? **ಯುಷ್ಮದಸ್ಮತ್ಪ್ರತ್ಯಯಗೋಚರತ್ವಾತ್, ವಿಷಯ-ವಿಷಯಿಭಾವಾಚ್ಚ** । ತತ್ರಾತ್ಮಾ ತಾವದಸ್ಮತ್ಪ್ರತ್ಯಯಗೋಚರಃ । ಪ್ರತೀಯ-ತೇಽನೇನಾಸ್ಮಿನ್ನಿತಿ ವಾ ಪ್ರತ್ಯಯಃ । ಅಹಮಿತಿ ಪ್ರತ್ಯಯೋಽಸ್ಮತ್ಪ್ರತ್ಯಯಃ।

---

ಅಧ್ಯಾಸವನ್ನು ಯುಕ್ತಿಯಿಂದ ವಿಚಾರಮಾಡಿದರೆ ಅದು ಹೊಂದುವುದಿಲ್ಲ ಎಂದು ಸಂದೇಹವನ್ನು ಎಬ್ಬಿಸುವುದಕ್ಕಾಗಿ ಎಂದು ವಿಂಗಡಿಸಿಕೊಳ್ಳಬೇಕು.

**(೩) ಅಧ್ಯಾಸವಿಷಯದಲ್ಲಿ ಸಂದೇಹವು** – ಇಲ್ಲಿ ಶಂಕಾಗ್ರಂಥಕ್ಕೆ ಇದು ಅಭಿಪ್ರಾಯವು. ಲೋಕವ್ಯವಹಾರಕ್ಕೆ ಯಾವ ಈ ಆತ್ಮಾನಾತ್ಮರುಗಳ ಪರಸ್ಪರಾಧ್ಯಾಸವೇ ಕಾರಣವೆಂದು ಏನು ವರ್ಣನೆ ಮಾಡಲಾಗಿದೆ. ಅದು ಸರಿಯಲ್ಲ. ಏಕೆಂದರೆ – ಅಧ್ಯಾಸವೆಂದರೆ ಭ್ರಾಂತಿಯಿಂದ ಆರೋಪಿಸಿಕೊಳ್ಳುವುದು. ಅದು ಸಮಾನಸ್ವಭಾವದ್ದಾಗಿರುವುದಕ್ಕೇ ಹೊಂದುತ್ತದೆಯೇ ಹೊರತು ವಿರುದ್ಧಸ್ವಭಾವಕ್ಕೆ ಹೊಂದುವುದಿಲ್ಲ. ಆದರೆ ಆತ್ಮಾನಾತ್ಮರುಗಳು ವಿರುದ್ಧಸ್ವಭಾವದವರಾಗಿರುತ್ತಾರೆ. ಆದ್ದರಿಂದ ಪರಸ್ಪರಾರೋಪಣಕ್ಕೆ ಅರ್ಹರಲ್ಲ. ಅದು ಹೇಗೆ ಪರಸ್ಪರ ವಿರುದ್ಧಸ್ವಭಾವದವರು? ಎಂದು ಕೇಳಬಹುದು, (ಅದಕ್ಕೆ ಉತ್ತರವಿಷ್ಟೆ!) ಆತ್ಮಾನಾತ್ಮರುಗಳಲ್ಲಿ ಒಂದು ನೀನು ಎಂಬ ಅರಿವಿಗೂ ಇನ್ನೊಂದು ನಾನೆಂಬ ಅರಿವಿಗೆ ಗೋಚರವಾಗುತ್ತಲೂ, ವಿಷಯ ವಿಷಯಿ ರೂಪದಿಂದಿರುವುದರಿಂದಲೂ (ಪರಸ್ಪರ ವಿರುದ್ಧಸ್ವಭಾವದವರು). ಇಲ್ಲಿ ಮೊಟ್ಟಮೊದಲು ಆತ್ಮನೆಂಬುವನು ನಾನೆಂಬ ಅರಿವಿಗೆ ತಿಳಿದುಬರುತ್ತಿದ್ದಾನೆ, (ನಾನೆಂ)ಬುದರಿಂದ ಅಥವಾ (ನಾನೆಂ)ಬುದರಲ್ಲಿ ತೋರಿಬರುತ್ತಿದೆ ಎಂಬ ಕಾರಣದಿಂದ (ಅಹಂ) ಪ್ರತ್ಯಯವು. ನಾನೆಂಬ ತಿಳಿವಳಿಕೆಯೇ ಅಸ್ಮತ್ಪ್ರತ್ಯಯವು. ಎಲ್ಲರೂ ತಮ್ಮನ್ನು

ಸರ್ವೋ ಹ್ಯಾತ್ಮಾನಮ್ "ಅಹಮ್, ಅಹಮ್" ಇತಿ ಪ್ರತ್ಯೇತಿ । ನ ಚಾಸ್ಮತ್ಪ್ರತ್ಯಯಂ ವಿನಾ ಕದಾಚಿದ್ಭವತ್ಯಾತ್ಮಾ ವ್ಯವಹಾರಗೋಚರಃ । ಅಸ್ಮತ್ಪ್ರತ್ಯಯ ಏವ ಚ ಗೋಚರೀಭವತ್ಯಸೌ ನ ತು ಪ್ರತ್ಯಯಾಂತರೇ । ಅತೋ ಅಸ್ಮತ್ಪ್ರತ್ಯಯಗೋಚರಃ । ಕಿಂ ಚಾಯಮಾತ್ಮಾ ವಿಷಯಿತ್ವೇನೈವಾಸ್ಮಾಕಂ ಜ್ಞಾನಪಥಮವತರತಿ । ನ ಹಿ ಕಶ್ಚಿದನಾತ್ಮಾ ಜಾತುಚಿದಾತ್ಮಾನಮೇನಂ ಸ್ವಜ್ಞಾನೇನ ವಿಷಯೀಕರ್ತುಮುತ್ಸಹತೇ । ಅನಾತ್ಮನೋ ಜ್ಞಾನಸ್ಯೈವಾಸಂಭವಾತ್ । ಅಯಂ ತ್ವಾತ್ಮಾ ಸರ್ವಮೇವ ಸ್ವಜ್ಞಾನೇನ ವಿಷಯೀಕರೋತಿ ನಿರ್ವಿಕಲ್ಪೇನ ಸ್ವರೂಪಭೂತೇನ, "ಇದಮಹಂ ಜಾನಾಮಿ" ಇತಿ ವಾ ಸವಿಕಲ್ಪೇನ । ಸರ್ವದಾ ಚಾಯಂ ಜ್ಞಾನೇ ಸ್ವಪ್ರಧಾನ ಏವ ಪ್ರಥತೇ ನ ತು ಗುಣಭೂತಃ ಕಸ್ಯಚಿತ್ । ಅತೋ ವಿಷಯೀತ್ಯುಚ್ಯತೇ। ಆತ್ಮಾತಿರಿಕ್ತಂ ತು ಸರ್ವಮಾತ್ಮಚೈತನ್ಯಸ್ಯ ವಿಷಯ ಏವ । ನ ಹಿ ಭವತಿ – ಅಸ್ತಿ ಕಿಂಚಿದ್ಯಜ್ಜ್ಞಾನಸ್ಯ ವಿಷಯೋ ನ ಭವತೀತಿ । ತಸ್ಮಾದ್ವಿಷಯಸ್ವಭಾವ

---

"ನಾನು ನಾನು" ಎಂತಲೇ ತಿಳಿಯುತ್ತಾರೆ. "ನಾನು" ಎಂಬ ಅರಿವಿಲ್ಲದೇ ಆತ್ಮನು ವ್ಯವಹಾರಕ್ಕೆ ತಕ್ಕವನಾಗುವುದಿಲ್ಲ, (ವ್ಯವಹಾರದಲ್ಲಿ ಗೋಚರವಾಗುವಾಗ) ನಾನೆಂಬ ಪ್ರತ್ಯಯದಮೂಲಕವಾಗಿಯೇ ಗೋಚರನಾಗುತ್ತಾನೆಯೇ ಹೊರತು ಬೇರೊಂದು ಪ್ರತ್ಯಯದಿಂದ, (ಎಂದರೆ ಅದು, ನೀನು, ಅವನು, ಎಂಬ ರೂಪದಿಂದ) ತೋರಿಬರುವುದೇ ಇಲ್ಲ. ಆದ್ದರಿಂದ ಅಸ್ಮತ್ಪ್ರತ್ಯಯಗೋಚರನು. ಮತ್ತು ಈ ಆತ್ಮನು ವಿಷಯಿಯಾಗಿಯೇ ನಮ್ಮ ಅರಿವಿಗೆ ತಿಳಿದುಬರುತ್ತಾನೆಯೇ (ಹೊರತು ವಿಷಯನಾಗುವುದಿಲ್ಲ). ಅನಾತ್ಮವಾಗಿರುವುದಕ್ಕೆ ಅರಿವಾಗುವುದೆಂಬುದೇ ಹೊಂದುವುದಿಲ್ಲವಾದ್ದರಿಂದ ಯಾವ ಅನಾತ್ಮವೂ ಸಹ ಈ ಆತ್ಮನನ್ನು ತನ್ನ ಜ್ಞಾನಕ್ಕೆ ವಿಷಯವನ್ನಾಗಿ ಮಾಡಿಕೊಳ್ಳುವುದಕ್ಕೆ ಸಮರ್ಥವಲ್ಲ. ಈ ಆತ್ಮನಾದರೋ ಎಲ್ಲವನ್ನೂ ತನ್ನ ನಿರ್ವಿಕಲ್ಪಕಸ್ವರೂಪವಾದ ಅರಿವಿನಿಂದ ಬೆಳಗುತ್ತಾನೆ, ಹಾಗೆಯೇ ಸವಿಕಲ್ಪಕವಾದ (ಇಂದ್ರಿಯಮನೋರೂಪವಾದ ಅರಿವಿನಿಂದಲೂ) ಇದನ್ನು ನಾನು ಅರಿಯುತ್ತಿದ್ದೇನೆಂದೂ ತಿಳಿಯುತ್ತಾನೆ. ಯಾವಾಗಲೂ ಈತನು ಅರಿವಿನ ವಿಷಯದಲ್ಲಿ ಸ್ವತಂತ್ರನಾಗಿಯೇ ಪ್ರಸಿದ್ಧನಾಗಿರುತ್ತಾನೆಯೇ ಹೊರತು ಯಾವಾಗಲೂ ಇನ್ನೊಂದಕ್ಕೆ ಅಧೀನನಾಗಿರುವುದೆಂಬುದು ಇಲ್ಲವೇ ಇಲ್ಲ. ಆದ್ದರಿಂದ ವಿಷಯಿಯು ಎನಿಸಿಕೊಂಡಿರುತ್ತಾನೆ. ಆತ್ಮನಿಗಿಂತ ಬೇರೆಯಾಗಿ–

ಏವಾನಾತ್ಮಾ । ಯುಷ್ಮತ್ಪ್ರತ್ಯಯಗೋಚರಶ್ಚಾಸೌ । ತ್ವಮಿತಿ ಪ್ರತ್ಯಯೋ ಯುಷ್ಮತ್ಪ್ರತ್ಯಯಃ । ಆತ್ಮಾ ಹಿ ಸರ್ವಮಪ್ಯನಾತ್ಮಾನಂ ಸ್ವಜ್ಞಾನೇನ ವಿಷಯೀಕೃತ್ಯ "ತ್ವಮೇವಂವಿಧಃ, ತ್ವಮೇವಂವಿಧಃ" ಇತಿ ಜ್ಞಾತುಂ ಶಕ್ನೋತಿ। ಅತಃ ಸರ್ವೋಽಪ್ಯನಾತ್ಮಾ ಯುಷ್ಮತ್ಪ್ರತ್ಯಯಯೋಗ್ಯ ಇತಿ ಯುಷ್ಮತ್ಪ್ರತ್ಯಯ-ಗೋಚರ ಇತ್ಯುಚ್ಯತೇ । ನ ಪುನರನಾತ್ಮಾ ಸರ್ವದಾ ತ್ವಂಕಾರವಿಷಯ ಏವ ಸನ್ ಜ್ಞಾನೇ ಪ್ರಥತ ಇತಿ ಕೃತ್ವಾ । ಭವತಿ ಹಿ ಪ್ರತ್ಯಯಾಂತರ-ಗೋಚರೋಽಪ್ಯನಾತ್ಮಾ ಯಥಾ "ಇಮೇ ವಿದೇಹಾಃ" – ಇತ್ಯಾದಿಸ್ಥಲೇ । ಅಪಿ ಚಾಹಂಕಾರಪ್ರತಿಯೋಗೀ ತ್ವಂಕಾರ ಏವ ನೇದಂಕಾರಾದಿಃ। "ಅಯಮಹಮಸ್ಮಿ" ಇತ್ಯಾದಿ ಸಮಾನಾಧಿಕರಣಪ್ರಯೋಗಸ್ಯಾಪಿ ದರ್ಶನಾತ್। ನ ತ್ವೇವಂ "ತ್ವಮಹಂ" ಇತಿ ನಿರುಪಚರಿತಂ ಸಾಮಾನಾಧಿಕರಣ್ಯಂ ಭವತಿ।

---

ರುವುದೆಲ್ಲವೂ ಆತ್ಮನ ಚೈತನ್ಯಕ್ಕೆ ವಿಷಯುವಾಗಿಯೇ ಇರುತ್ತದೆ. **ಒಂದಾನೊಂದು ವಸ್ತುವಿದೆ** ಆದರೆ **ಅದು ಅರಿವಿಗೆ ವಿಷಯುವಾಗಿಲ್ಲ** ಎಂದು ಆಗುವುದಿಲ್ಲವಷ್ಟೆ ? ಆದ್ದರಿಂದ ಅನಾತ್ಮವು ವಿಷಯುವಾಗುವ ಸ್ವಭಾವದ್ದೇ ಆಗಿರುತ್ತದೆ. ಅಷ್ಟೇ ಅಲ್ಲ, ಈ ಅನಾತ್ಮವು **ನೀನು** ಎಂಬ ಅರಿವಿಗೆ ಗೋಚರವಾಗುವಂಥದ್ದಾಗಿದೆ. ನೀನು ಎಂಬ ಅರಿವೇ ಯುಷ್ಮತ್ಪ್ರತ್ಯಯುವು. ಆತ್ಮನು ಎಲ್ಲಾ ಅನಾತ್ಮವನ್ನೂ **ನೀನು ಈ ರೀತಿ ಇರುವವನು, ನೀನೀರೀತಿ ಇರುವವನು** ಎಂದು ತನ್ನ ಅರಿವಿಗೆ ವಿಷಯವನ್ನಾಗಿ ಮಾಡಿಕೊಂಡು ತಿಳಿಯಲು ಸಮರ್ಥನಾಗಿರುತ್ತಾನಲ್ಲವೇ ? ಆದ್ದರಿಂದ ಎಲ್ಲಾ ಅನಾತ್ಮವೂ **ನೀನೆಂಬ** ಅರಿವಿಗೆ ತಕ್ಕದೇ ಆಗಿರುವದರಿಂದ ಯುಷ್ಮತ್ಪ್ರತ್ಯಯಗೋಚರವೆಂದು ಕರೆದಿದೆ. ಇಷ್ಟೇ ಹೊರತು, ಅನಾತ್ಮವು ಯಾವಾಗಲೂ **ನೀನೆಂಬ** ಅರಿವಿಗೆ ವಿಷಯವಾಗುತ್ತಲೇ ಇದ್ದು ಅರಿವಿಗೆ ತೋರುತ್ತಿರುತ್ತದೆ ಎಂಬಭಿಪ್ರಾಯದಿಂದ ಹೇಳಿದ್ದಲ್ಲ[೧]. ಏಕೆಂದರೆ ಅನಾತ್ಮವು **ಇವು ವಿದೇಹದೇಶವು** ಎಂದು ಮತ್ತೊಂದು ಅರಿವಿಗೂ ಗೋಚರವಾಗು-ತ್ತಿರುವುದು ಕಂಡುಬಂದಿದೆ. ಮತ್ತೂ ಏನೆಂದರೆ **ನಾನು** ಎಂಬುದಕ್ಕೆ ವಿರುದ್ಧವಾದದ್ದು **ನೀನು** ಎಂಬುದೇ ಹೊರತು **ಇದು** ಎಂಬುದೇ

---

೧. ಏಕೆಂದರೆ ಸುಷುಪ್ತಿ ಮತ್ತು ಸಮಾಧಿ ಅವಸ್ಥೆಗಳಲ್ಲಿ ಅನಾತ್ಮವು ತೋರುವುದೇ ಇಲ್ಲ.

ತಸ್ಮಾನ್ನ ಕದಾಪ್ಯಸ್ಮತ್ಪ್ರತ್ಯಯವಿರುದ್ಧಯುಷ್ಮತ್ಪ್ರತ್ಯಯಯೋಗ್ಯತಾಂ ವಿಜಹಾತ್ಯನಾತ್ಮಾ । ಅತೋಽಸೌ ಯುಷ್ಮತ್ಪ್ರತ್ಯಯಗೋಚರಃ । ತದೇವಂ ಚಿದಾತ್ಮಾ ವಿಷಯೀ, ಅಸ್ಮತ್ಪ್ರತ್ಯಯಗೋಚರಶ್ಚ । ಅನಾತ್ಮಾ ತು ವಿಷಯೋ ಯುಷ್ಮತ್ಪ್ರಯಗೋಚರಶ್ಚ । ತಸ್ಮಾತ್ಸೂಕ್ತಂ ತಯೋರ್ವಿರುದ್ಧಸ್ವಭಾವತೇತಿ॥

ವಿರುದ್ಧಸ್ವಭಾವತ್ವೇ ನಿದರ್ಶನಂ – "ತಮಃಪ್ರಕಾಶವತ್" ಇತಿ । ತಮಶ್ಚ ಪ್ರಕಾಶಶ್ಚ ತಮಃಪ್ರಕಾಶೌ, ತಾವಿವೇತ್ಯರ್ಥಃ । ತಮಸೋ ಹಿ ಚಕ್ಷುರ್ವೃತ್ತೇರ್ನಿರೋಧಕತ್ವಂ ಸ್ವಭಾವಃ । ಪ್ರಕಾಶಸ್ಯ ಚ ತದನುಗ್ರಾಹಕತ್ವಮ್। ತದಯಮರ್ಥಃ – ಯಥಾ ಚಕ್ಷುರ್ವೃತ್ತಿ-ನಿರೋಧನಸ್ವಭಾವಸ್ಯ ತಮಸಸ್ತದನುಗ್ರಾಹಕಪ್ರಕಾಶಸ್ವಭಾವತ್ವಂ,

---

ಮೊದಲಾದವುಗಳಲ್ಲ. **ನಾನಿಂಥವನು** ಎಂದು ಸಾಮಾನಾಧಿಕರಣ್ಯದ[1] ಪ್ರಯೋಗವು ಕಂಡುಬಂದಿದೆಯೇ ಹೊರತು ಮುಖ್ಯಾರ್ಥದಲ್ಲಿ **ನೀನೇ ನಾನು** ಎಂಬ ಸಾಮಾನಾಧಿಕರಣ್ಯವು ಕಂಡುಬಂದಿಲ್ಲ[2]. ಆದ್ದರಿಂದ ಅನಾತ್ಮವೆಂಬ ಪದಾರ್ಥವು ನಾನೆಂಬುದಕ್ಕೆ ವಿರುದ್ಧವಾದ ನೀನೆಂಬ ಅರಿವಾಗುವದನ್ನು ಎಂದಿಗೂ ಬಿಡುವುದಿಲ್ಲ. ಆದ್ದರಿಂದ ಇದು ಯುಷ್ಮತ್ಪ್ರತ್ಯಯಗೋಚರವು. ಹೀಗೆ ಚಿತ್ಸ್ವರೂಪನಾದ ಆತ್ಮನು ವಿಷಯಿಯು ಮತ್ತು ಅಸ್ಮತ್ಪ್ರತ್ಯಯಗೋಚರನು, ಅನಾತ್ಮವಾದರೋ ವಿಷಯವು ಮತ್ತು ಯುಷ್ಮತ್ಪ್ರಯಗೋಚರವು ಆಗಿರುತ್ತದೆ. ಆದ್ದರಿಂದ ಅವೆರಡಕ್ಕೂ ವಿರುದ್ಧ ಸ್ವಭಾವವಿದೆಯೆಂದು ಹೇಳಿದ್ದು ಸರಿಯಾಗಿದೆ.

(ಈಗ) ವಿರುದ್ಧಸ್ವಭಾವವಾಗಿದೆ ಎಂಬುದಕ್ಕೆ ದೃಷ್ಟಾಂತವನ್ನು **ತಮಃಪ್ರಕಾಶವತ್** ಎಂದು ತೋರಿಸಲಾಗುತ್ತದೆ. ಕತ್ತಲೆ ಮತ್ತು ಬೆಳಕೇ ಕತ್ತಲೆಬೆಳಕುಗಳು, ಅವುಗಳಂತೆ ಎಂದರ್ಥ. ಕಣ್ಣಿನ ವ್ಯಾಪಾರಕ್ಕೆ ಅಡ್ಡಿಯನ್ನುಂಟುಮಾಡುವದೇ ಕತ್ತಲೆಯ ಸ್ವಭಾವವು, ಬೆಳಕು ಅದಕ್ಕೆ ಅನುಗ್ರಹವನ್ನು ಮಾಡುವಂಥದ್ದು, ಇಲ್ಲಿದು ಅಭಿಪ್ರಾಯವು – ಕಣ್ಣಿನ ವ್ಯಾಪಾರವನ್ನು ತಡೆಗಟ್ಟುವ ಸ್ವಭಾವದ್ದಾದ ಕತ್ತಲೆಗೆ ಕಣ್ಣನ್ನು ಅನುಗ್ರಹಿಸುವ

---

೧. 'ನಾನು', 'ಇಂಥವನು' ಎಂಬ ಎರಡು ಪದಕ್ಕೆ ಒಂದೇ ವಸ್ತುವು ಆಶ್ರಯವಾಗಿರುವುದನ್ನು ಸಾಮಾನಾಧಿಕರಣ್ಯ ಎಂದು ಹೇಳುತ್ತಾರೆ.

೨. ಗೌಣವಾಗಿ ಬೇಕಾದರೆ ಹೇಳಿಕೊಳ್ಳಬಹುದು.

ತದ್ವೈಪರೀತ್ಯೇನ ಪ್ರಕಾಶಸ್ಯ ತಮಃಸ್ವಭಾವತ್ವಂ ವಾ ನ ಶಕ್ಯಶಂಕಮ್, ಏವಮಾತ್ಮಾನಾತ್ಮನೋರಪ್ಯನ್ಯೋನ್ಯಸ್ವಭಾವತ್ವಂ ನ ಶಕ್ಯಶಂಕಮ್ । ವಿರುದ್ಧಸ್ವಭಾವತ್ವಾತ್ । ತದೇವಂ **'ಇತರೇತರಭಾವಾನುಪಪತ್ತಿಃ'** । ಇತರಸ್ಯ ವಿಷಯಸ್ಯ ಇತರಭಾವಾನುಪಪತ್ತಿಃ, ವಿಷಯಿತ್ವಾನುಪಪತ್ತಿಃ ॥ ಇತರಸ್ಯ ಚ ವಿಷಯಿಣ ಇತರಭಾವಾನುಪಪತ್ತಿಃ, ವಿಷಯತ್ವಾನುಪಪತ್ತಿರಿತಿ ॥

ತದೇವಂ ವಿರುದ್ಧಸ್ವಭಾವಯೋರಿತರೇತರಭಾವಾನುಪಪತ್ತೌ ಸಿದ್ಧಾಯಾಂ **ತದ್ಧರ್ಮಾಣಾಮಪಿ ಸುತರಾಮಿತರೇತರಭಾವಾನುಪಪತ್ತಿಃ** । ತಯೋರ್ವಿಷಯವಿಷಯಿಣೋರ್ಧರ್ಮಾಃ, ತದ್ಧರ್ಮಾಃ । ತೇಷಾಮ್ ಇತರೇತರಭಾವಾನುಪಪತ್ತಿಃ । ಇತರೇಷಾಂ ವಿಷಯಧರ್ಮಾಣಾಮ್ ಇತರ-ಭಾವಾನುಪಪತ್ತಿಃ ವಿಷಯಿಧರ್ಮತ್ವಾನುಪಪತ್ತಿಃ । ತಥೇತರೇಷಾಂ ವಿಷಯಿ-ಧರ್ಮಾಣಾಮ್ ಇತರಭಾವಾನುಪಪತ್ತಿಃ ವಿಷಯಧರ್ಮತ್ವಾನುಪಪತ್ತಿಶ್ಚ । ತಸ್ಮಾದ್ಯ ಧರ್ಮಾಣಾಮಿತರೇತರಭಾವಸ್ಯಾನುಪಪತ್ತಿಃ ಸುತರಾಂ ಸಿದ್ಧಾ ಭವತಿ।

---

ಬೆಳಕಿನ ಸ್ವಭಾವವು ಬರುವುದಾಗಲೀ, ಇದಕ್ಕೆ ವಿರುದ್ಧವಾಗಿ ಬೆಳಕಿಗೆ ಕತ್ತಲೆಯ ಸ್ವಭಾವವು ಬರುವುದಾಗಲೀ ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಆತ್ಮಾನಾತ್ಮರುಗಳಿಗೆ ಒಂದಕ್ಕಿನ್ನೊಂದರ ಸ್ವಭಾವವು ಬರುವುದೆಂಬುದು ಸಾಧ್ಯವಿಲ್ಲ. ಏಕೆಂದರೆ ವಿರುದ್ಧಸ್ವಭಾವದಾದ್ದರಿಂದಲೇ, ಇದನ್ನೇ **'ಇತರೇತರಾನುಪಪತ್ತಿಃ'** ಎಂದು ಹೇಳಿರುತ್ತಾರೆ. ಅಂದರೆ ವಿಷಯ-ವೆನಿಸಿಕೊಂಡಿರುವುದಕ್ಕೆ ವಿಷಯಿಯಾಗುವುದಾಗಲೀ, ವಿಷಯಿಯಾಗಿರುವುದಕ್ಕೆ ವಿಷಯವಾಗುವುದಾಗಲೀ ಹೊಂದುವುದಿಲ್ಲವೆಂದಭಿಪ್ರಾಯ.

ಹೀಗೆ ವಿರುದ್ಧಸ್ವಭಾವವಾಗಿರುವುದಕ್ಕೆ ಒಂದು ಇನ್ನೊಂದಾಗುವುದೆಂಬುದು ಹೊಂದುವುದಿಲ್ಲವೆಂಬುದು ಸಿದ್ಧವಾಗಲಾಗಿ **ಅದರ ಧರ್ಮವಾಗಿರುವುದಕ್ಕೂ ಖಿಡಾಖಂಡಿತವಾಗಿ ಒಂದಿನ್ನೊಂದಾಗುವುದೆಂಬುದು ಹೊಂದುವದಿಲ್ಲ. 'ತದ್ಧರ್ಮಾಃ** ಎಂದರೆ ವಿಷಯವಿಷಯಿಗಳಾಗಿರುವ ಅವೆರಡರ ಧರ್ಮಗಳೇ ತದ್ಧರ್ಮಗಳು, ಅವುಗಳಿಗೆ ಒಂದಿನ್ನೊಂದಾಗುವುದೆಂಬುದು ಹೊಂದದೇ ಇರುವದು, (ಅಂದರೆ) ವಿಷಯವೆನಿಸಿಕೊಂಡ ಒಂದು ವಸ್ತುವಿನ ಧರ್ಮವು ವಿಷಯಿಧರ್ಮವೆಂದಾಗುವುದಿಲ್ಲ, ಹಾಗೆಯೇ ವಿಷಯಿಧರ್ಮವೂ ವಿಷಯಧರ್ಮವಾಗುವುದಿಲ್ಲ. ಆ ಈ ಧರ್ಮಗಳಿಗೆ ಒಂದಿನ್ನೊಂದಾಗು-

ನನು ಕಥಮನುಪಪತ್ತಿಃ ? ದೃಶ್ಯತೇ ಹಿ ಜಪಾಕುಸುಮಧರ್ಮಸ್ಯ ಲೌಹಿತ್ಯಸ್ಯ ಭಾವಃ ಸ್ಫಟಿಕೇ ಕುಸುಮಭಿನ್ನೇಽಪಿ । ಸತ್ಯಮ್ । ನ ತು ತತ್ರ ಸ್ಫಟಿಕಕುಸುಮಯೋರ್ಧರ್ಮಿಣೋರತ್ಯಂತಂ ವಿರುದ್ಧಸ್ವಭಾವತಾ । ತೇನ ತದ್ಧರ್ಮಾಣಾಂ ಪರಸ್ಪರತ್ರ ಗತಿಃ ಸರ್ವಥಾ ನಾಸಂಭಾವಿತಾ । ಪ್ರತ್ಯುತ ಸ್ವಚ್ಛದ್ರವ್ಯೇ ಸ್ಫಟಿಕೇ ರಕ್ತಾದಿವರ್ಣಸಂಕ್ರಾತಿಃ ಸಂಭಾವಿತೈವ । ಇಹ ಪುನರ್ನ ಕೇವಲಂ ಭಿನ್ನಸ್ವಭಾವಯೋಃ ಕಿಂ ತರ್ಹ್ಯತ್ಯಂತವಿರುದ್ಧಸ್ವಭಾವ-ಯೋರ್ಧರ್ಮಿಣೋಃ ಕಥಂ ಧರ್ಮಾಣಾಂ ಪರಸ್ಪರತ್ರ ಭಾವಃ ಶಕ್ಯತೇ ಶಂಕಿತುಮಪಿ ? ಯತ್ರ ಖಲು ಧರ್ಮಿಣೋಃ ಪರಸ್ಪರಸಂಭೇದಃ ಸಂಭಾವಿತಃ, ಯಥಾ ತಂತುಪಟಯೋಃ, ತತ್ರ ತದ್ಧರ್ಮಾಣಾಮಪಿ ಸಂಭೇದ ಉಪಪದ್ಯೇತಾಪಿ ಯಥಾ ತಂತುಧರ್ಮಾಣಾಂ ಪಟೇ ಸಂಕ್ರಾಂತಿಃ । ಯತ್ರ ಪುನರ್ಧರ್ಮಿಣೌ ಪರಸ್ಪರಮತ್ಯಂತವಿರುದ್ಧಸ್ವಭಾವೌ ತಮಃಪ್ರಕಾಶವತ್, ತತ್ರ ಸುತರಾಂ ವಿಪ್ರಕೃಷ್ಟಾಸ್ತದ್ಧರ್ಮಾ ಇತ್ಯೇವ ನ್ಯಾಯಮ್ । ಧರ್ಮ್ಯಧೀನಾ

---

ವುದಿಲ್ಲವೆಂಬುದು ಚೆನ್ನಾಗಿ ಸಿದ್ಧವಾಯಿತು. ಅದು ಹೇಗೆ ಹೊಂದುವುದಿಲ್ಲ? ಏಕೆಂದರೆ ದಾಸಿವಾಳದ ಧರ್ಮವಾದ ಕೆಂಪೆಂಬುದು ಆ ಹೂವಿಗಿಂತ ಬೇರೆಯಾದ ಸ್ಫಟಿಕದಲ್ಲಿ ಕಂಡುಬಂದಿದೆಯಲ್ಲ ! ಎಂದರೆ ಹೌದು, ಆದರೆ ಆ ದೃಷ್ಟಾಂತದಲ್ಲಿ ಸ್ಫಟಿಕ ಮತ್ತು ದಾಸಿವಾಳದ ಹೂವೆಂಬ ಎರಡುಪದಾರ್ಥಗಳಿಗೆ ಅತ್ಯಂತವಾದ ವಿರುದ್ಧಸ್ವಭಾವವೆಂಬುದೇನಿಲ್ಲ, ಆದ್ದರಿಂದ ಅವುಗಳ ಧರ್ಮಗಳಿಗೆ ಒಂದಿನ್ನೊಂದರಲ್ಲಿ ಸೇರುವಿಕೆಯೆಂಬುದು ಸಂಪೂರ್ಣವಾಗಿ ಹೊಂದದೇ ಇರುವಂಥದ್ದೇನಲ್ಲ. ಅಷ್ಟೇ ಅಲ್ಲ, ಅದಕ್ಕೆ ಬದಲಾಗಿ ಸ್ವಚ್ಛದ್ರವ್ಯವಾದ ಸ್ಫಟಿಕದಲ್ಲಿ ಕೆಂಪೇ ಮುಂತಾದ ಬಣ್ಣಗಳು ಸೇರುವುದು ಎಂಬುದು ಕಲ್ಪಿಸಬಹುದಾದದ್ದೇ ಆಗಿದೆ. ಈ ದಾರ್ಷ್ಟಾನ್ತಿಕದಲ್ಲಾದರೋ ಬರೀ ಭಿನ್ನಸ್ವಭಾವವಷ್ಟೇ ಅಲ್ಲ, ಮತ್ತೇನೆಂದರೆ ಅತ್ಯಂತವಾಗಿ ವಿರುದ್ಧಸ್ವಭಾವದ್ದಾದ ಎರಡು ಪದಾರ್ಥಗಳಿಗೆ ಅದು ಹೇಗೆ ತಾನೆ ಗುಣಗಳು ಒಂದರದ್ದು ಇನ್ನೊಂದರಲ್ಲಿ ಬರಬಹುದೆಂದು ಕಲ್ಪಿಸುವುದಕ್ಕೆ ಬರುತ್ತದೆ ? ಯಾವ ಬಟ್ಟೆ ಮತ್ತು ನೂಲುಗಳೆಂಬ ಪದಾರ್ಥಗಳೆರಡರಲ್ಲಿ ಪರಸ್ಪರಭೇದವನ್ನು ಕಾಣಬಹುದೋ ಅಲ್ಲಿ ಅದರ ಧರ್ಮಿಗಳಿಗೂ ಭೇದವು ಹೊಂದೀತು ! ಆಗ ಹೇಗೆ ನೂಲಿನ ಧರ್ಮಗಳು ಬಟ್ಟೆಯಲ್ಲಿ ಬಂದಿವೆ ಎಂದು ತಿಳಿಯುವೆವೋ ಹಾಗೆಯೇ. ಎಲ್ಲಾದರೋ ಎರಡುಪದಾರ್ಥಗಳಿಗೇ ಪರಸ್ಪರ ಅತ್ಯಂತವಾಗಿ ವಿರುದ್ಧಸ್ವಭಾವವೆಂಬುದಿದೆಯೋ (ಇದಕ್ಕೆ ಉದಾ)

**ಹಿ ಧರ್ಮಾಣಾಂ ಸ್ಥಿತಿರಿತಿ । ಅತ್ರ ಚ ಧರ್ಮಿಣಾವಾತ್ಮಾನಾತ್ಮಾನೌ ಪರಸ್ಪರಮತ್ಯಂತವಿರುದ್ಧಸ್ವಭಾವೌ ಸಮಧಿಗತೌ । ತಸ್ಮಾತ್ತದ್ಧರ್ಮಾಣಾಮಪಿ ಸ್ವಸ್ವಧರ್ಮಿಣ್ಯೇವ ಸ್ಥಿತಿರ್ಯುಕ್ತಾ ನ ತು ಸ್ವಸಾಮಾನಾಧಿಕರಣ್ಯಾಕ್ಷಮೇ ಧರ್ಮ್ಯಂತರೇ ಸಂಕ್ರಾಂತಿಃ । ತಸ್ಮಾತ್ ಸಾಧೂಕ್ತಂ 'ತದ್ಧರ್ಮಾಣಾಂ ಸುತರಾಮಿತರೇತರಭಾವಾನುಪಪತ್ತಿ'ರಿತಿ॥**

ಕಿಮತೋ ಯದ್ಯೇವಮ್ ? ತತ್ರಾಹ – **ಇತ್ಯತೋಽಸ್ಮತ್ಪ್ರತ್ಯಯ-ಗೋಚರೇ ವಿಷಯಿಣಿ ಚಿದಾತ್ಮಕೇ ಯುಷ್ಮತ್ಪ್ರತ್ಯಯಗೋಚರಸ್ಯ ವಿಷಯಸ್ಯ ತದ್ಧರ್ಮಾಣಾಂ ಚಾಧ್ಯಾಸಃ, ತದ್ವಿಪರ್ಯಯೇಣ ವಿಷಯಿಣಸ್ತದ್ಧರ್ಮಾಣಾಂ ಚ ವಿಷಯೇಽಧ್ಯಾಸೋ ಮಿಥ್ಯೇತಿ ಭವಿತುಂ ಯುಕ್ತಮ್** । ಇತ್ಯತಃ ವರ್ಣಿತಹೇತೋಃ, ಅಧ್ಯಾಸೋ ಮಿಥ್ಯೇತಿ ಭವಿತುಂ ಯುಕ್ತಮ್ । ಅಸ್ಮತ್ಪ್ರತ್ಯಯಯೋಗ್ಯೇ ಹಿ ವಿಷಯಿಣ್ಯಾತ್ಮನಿ ಚಿತ್ಸ್ವರೂಪೇ ತದ್ವಿರುದ್ಧೋ ಯುಷ್ಮತ್ಪ್ರತ್ಯಯಯೋಗ್ಯೋ ವಿಷಯೋ ಜಡಸ್ವರೂಪೋ

---

ಕತ್ತಲೆ ಬೆಳಕುಗಳಂತೆ, ಅಲ್ಲಿ ಅವುಗಳ ಧರ್ಮಗಳು ಸೇರುವುದೆಂಬುದು ತುಂಬಾ ದೂರದ (ಮಾತಾಗಬೇಕೆಂಬುದೇ) ನ್ಯಾಯವಾಗುತ್ತದೆ. ಧರ್ಮಿಗೆ ಅಧೀನವಾಗಿಯೇ ಅಲ್ಲವೇ ಧರ್ಮಗಳ ಇರುವಿಕೆಯು. ಇಲ್ಲಿ ಧರ್ಮಿಗಳಾದ ಆತ್ಮಾನಾತ್ಮರುಗಳಿಗೆ ಪರಸ್ಪರ ಅತ್ಯಂತವಿರುದ್ಧಸ್ವಭಾವವೆಂಬುದು ಗೊತ್ತಾಗಿದೆ. ಆದ್ದರಿಂದ ಅದರ ಧರ್ಮಗಳಿಗೂ ತಮ್ಮತಮ್ಮ ಧರ್ಮಿಯಾದ ವಸ್ತುವಿನಲ್ಲೇ ಇರುವಿಕೆಯಾಗಬೇಕೆಂಬುದು ನ್ಯಾಯವೇ ಹೊರತು ತನ್ನೊಡನೆ ಸಾಮಾನಾಧಿಕರಣ್ಯವನ್ನು ಸಹಿಸದ ಬೇರೊಂದು ಧರ್ಮಿಯಲ್ಲಿ ಸೇರುವುದೆಂಬುದು ಸರಿಯಲ್ಲ. ಆದ್ದರಿಂದ **ತದ್ಧರ್ಮಾಣಾಮಪಿ ಸುತರಾಂ ಇತರೇತರಭಾವಾನುಪಪತ್ತಿಃ** ಎಂದು ಹೇಳಿದ್ದು ಸರಿಯಾಯಿತು.

ಇದರಿಂದ ಏನು ಸಿದ್ಧವಾಯಿತು ? ಎಂದು ಕೇಳಿದರೆ ಅದಕ್ಕೆ ಹೇಳುತ್ತಾರೆ **ಇತ್ಯತೋಽಸ್ಮತ್ಪ್ರತ್ಯಯಗೋಚರೇ ವಿಷಯಿಣಿ....ಮಿಥ್ಯೇತಿ ಭವಿತುಂ ಯುಕ್ತಮ್** ಎಂದು. **ಇತ್ಯತಃ** ಎಂದರೆ ಮೇಲೆ ವರ್ಣನೆಮಾಡಿದ ಪ್ರಕಾರದಂತೆ, ಅಧ್ಯಾಸವು ಸುಳ್ಳಾಗಬೇಕೆಂಬುದು ಸರಿಯೇ. ನಾನೆಂಬ ಅರಿವಿಗೆ ತಕ್ಕವನಾದ ವಿಷಯಿಯೂ ಚಿತ್ಸ್ವರೂಪನೂ ಆದ ಆತ್ಮನಲ್ಲಿ ಅದಕ್ಕೆ ವಿರುದ್ಧವಾದ ನೀನೆಂಬ ಅರಿವಿಗೆ ತಕ್ಕದ್ದಾದ ವಿಷಯವೂ ಜಡಸ್ವಭಾವವೂ

ದೇಹಾದಿಃ, ತದ್ಧರ್ಮಾಶ್ಚ ಯುಷ್ಮತ್ಪ್ರತ್ಯಯಗೋಚರಸ್ಯ ಜಡಸ್ಯ ಧರ್ಮಾಃ ಸ್ಥೂಲತ್ವಕೃಶತ್ವಕಾಣತ್ವಬಧಿರತ್ವಮೂಕತ್ವಾದಯೋಽಧ್ಯಸ್ಯಂತ ಇತ್ಯೇತತ್ ಕಥಂ ಯುಕ್ತಂ ಸ್ಯಾತ್ ? ಪ್ರತ್ಯುತ ವಿರುದ್ಧಸ್ವಭಾವತ್ವಾತ್ ತೇಷಾಮಧ್ಯಾಸೋ ಮಿಥ್ಯೈವ, ಚಿತ್ಸ್ವರೂಪೇ ಧರ್ಮಿಣಿ ಜಡಸ್ವರೂಪಸ್ಯ ದೇಹಾದೇರಧ್ಯಾಸೋ ನಾಸ್ತ್ಯೇವ ದೇಹಾದಿಧರ್ಮಾಣಾಂ ಚಾಧ್ಯಾಸೋ ನಾಸ್ತ್ಯೇವೇತಿ ಭವಿತುಂ ಯುಕ್ತಮ್ । ಕಿಂಚ ತದ್ವಿಪರ್ಯಯೇಣ ವಿಷಯಿಣಿ ವಿಷಯೋಽಧ್ಯಸ್ಯತೇ ತದ್ಧರ್ಮಾಶ್ಚಾಧ್ಯಸ್ಯಂತ ಇತಿ ಯತ್, ತದ್ವೈಪರೀತ್ಯೇನ ವಿಷಯಿಣಸ್ತದ್ಧರ್ಮಾಣಾಂ ಚಾಧ್ಯಾಸೋಽಪಿ ಮಿಥ್ಯಾ ಸೋಽಪ್ಯಧ್ಯಾಸೋ ನಾಸ್ತ್ಯೇವ ಲೋಕವ್ಯವಹಾರೇ ಇತಿ ಭವಿತುಂ ಯುಕ್ತಮ್ । ವಿಷಯೀ ವಿಷಯೇಽಧ್ಯಸ್ಯತೇ ವಿಷಯಿಧರ್ಮಾಶ್ಚ ವಿಷಯೇಽಧ್ಯಸ್ಯಂತ ಇತಿ ಯದುಚ್ಯತೇ ಭವತಾ ತದಪಿ ನ ಯುಕ್ತಿಮತ್ । ವಿರುದ್ಧಸ್ವಭಾವತ್ವಾದೇವ ವಿಷಯ-ವಿಷಯಿಣೋರಿತ್ಯರ್ಥಃ ॥ ಅಯಮತ್ರ ಸಾರಃ । ಯತ್ರ ಧರ್ಮಿಣೋಸ್ತಾ-ದಾತ್ಮ್ಯಸಂಭವಸ್ತಂತುಪಟಾದಾವಿವ, ಯತ್ರ ವಾ ಕೇವಲಂ ತದ್ಧರ್ಮಾಣಾಂ ಪರಸ್ಪರತ್ರ ಸಂಕ್ರಾತಿಸಂಭವಃ ಸ್ಫಟಿಕಜಪಾಕುಸುಮಾದಾವಿವ, ತತ್ರೈವ

---

ಆದ ದೇಹಾದಿಗಳು ಮತ್ತು ಅದರ ಧರ್ಮಗಳಾದ – ನೀನೆಂಬ ಅರಿವಿಗೆ ಗೋಚರವಾದ ಜಡದ ಧರ್ಮಗಳಾದ ಸ್ಥೂಲತ್ವ, ಕೃಶತ್ವ, ಒಕ್ಕಣ್ಣು, ಕಿವುಡು, ಮೂಕತನ, ಮುಂತಾದವುಗಳು ಹುಟ್ಟುಹಾಕಿದೆ ಎಂದರೆ ಅದು ಹೇಗೆ ಸರಿಯಾಗುತ್ತದೆ ? ಅಷ್ಟೇ ಅಲ್ಲ, ಅದಕ್ಕೆ ವಿರುದ್ಧಸ್ವಭಾವದ್ದಾದ್ದರಿಂದ ಅವುಗಳ ಅಧ್ಯಾಸವಾಗುವುದೆಂಬುದು ಸುಳ್ಳೇ ಆಗಿರುತ್ತದೆ. ಚಿತ್ಸ್ವರೂಪನಾದ ಆತ್ಮನಲ್ಲಿ ಜಡಸ್ವಭಾವವಾದ ದೇಹಾದಿಗಳ ಅಧ್ಯಾಸವಾಗಲೀ ದೇಹಾದಿಗಳ ಧರ್ಮದ ಅಧ್ಯಾಸವಾಗಲೀ ಆಗುವುದಿಲ್ಲವೆಂಬುದೇ ಯುಕ್ತವಾದದ್ದು, ಹಾಗೆಯೇ ಅದಕ್ಕೆ ವಿರುದ್ಧವಾಗಿ ವಿಷಯಿಯಾದ ಆತ್ಮನ ಮತ್ತು ಅವನ ಧರ್ಮಗಳ ಅಧ್ಯಾಸವಾಗಿರುವುದೆಂಬುದೂ ಲೋಕವ್ಯವಹಾರದಲ್ಲಿ ಇಲ್ಲವೇ ಇಲ್ಲವೆಂಬುದೂ ಯುಕ್ತವೇ ಆಗಿದೆ. ವಿಷಯಿಯನ್ನು ವಿಷಯದಲ್ಲಿಯೂ ಮತ್ತು ಅವನ ಧರ್ಮಗಳನ್ನು ವಿಷಯಧರ್ಮದಲ್ಲಿಯೂ ಅಧ್ಯಾಸಮಾಡಲ್ಪಡುತ್ತದೆ ಎಂದು ಏನು ಹೇಳಿದಿರಿ ಅದೂ ಯುಕ್ತಿಯುಕ್ತವಾದದ್ದಲ್ಲ. ಅವೆರಡಕ್ಕೂ ವಿರುದ್ಧಸ್ವಭಾವವಿರುವುದೇ (ಅಧ್ಯಾಸವು ಆಗದೇ ಇರುವುದಕ್ಕೆ ಕಾರಣವು). ಇಲ್ಲಿದು ಸಾರವು, ಎಲ್ಲಿ ನೂಲು, ಬಟ್ಟೆಯಂತೆ ಪದಾರ್ಥಗಳಿಗೆ ತಾದಾತ್ಮ್ಯವು ಹೊಂದುತ್ತದೆಯೋ, ಅಥವಾ ಎಲ್ಲಿ ಸ್ಫಟಿಕಕ್ಕೂ ದಾಸಿವಾಳ ಹೂವಿಗೂ ಇರುವ

ಧರ್ಮಿಣೋಃ ಪರಸ್ಪರಾಧ್ಯಾಸೋ ಧರ್ಮಾಣಾಂ ವಾ ಪರಸ್ಪರತ್ರಾಧ್ಯಾಸಃ ಸಂಭವತಿ ನಾನ್ಯತ್ರ । ಯತ್ರ ಪುನಸ್ತಯೋರ್ಧರ್ಮಿಣೋರ್ನ ಸರ್ವಥಾ ತಾದಾತ್ಮ್ಯಸಂಭವಃ, ಅತ್ಯಂತವಿರುದ್ಧಸ್ವಭಾವತ್ವಾತ್ತಮಃಪ್ರಕಾಶಯೋರಿವ, ತತ್ರ ನ ಧರ್ಮ್ಯಧ್ಯಾಸೋ ನ ವಾ ಧರ್ಮಾಧ್ಯಾಸಃ । ವಿರುಧ್ಯೇತೇ ಚಾತ್ಯಂತಂ ಸ್ವಭಾವೇನಾತ್ಮಾನಾತ್ಮಾನೌ ವಿಷಯಿತ್ವೇನ ವಿಷಯತ್ವೇನ ಚ ಪ್ರತೀಯಮಾನೌ, ಅತೋ ನ ತಯೋರನ್ಯೋನ್ಯಾಧ್ಯಾಸೋ ನ ವಾ ತದ್ಧರ್ಮಾಣಾ-ಮನ್ಯೋನ್ಯಸ್ಮಿನ್ನಧ್ಯಾಸಃ ಸಂಭವತೀತಿ ॥

ಅತ್ರ ತಾವದುಕ್ತಂ ಭವತ್ಯಾತ್ಮಾನಾತ್ಮನೋರನ್ಯೋನ್ಯಾಧ್ಯಾಸೋ ಮಿಥ್ಯೇತಿ ಯಾವದುಕ್ತಂ ಭವತಿ ಸಂಸಾರಾನರ್ಥಸ್ಯ ನಾಧ್ಯಾಸಿಕತ್ವಂ ಕಿಂ ತು ವಸ್ತುಕೃತತ್ವಮ್, ಆತ್ಮಾನಾತ್ಮನೋಃ ಸ್ವರೂಪೇಣ ವಿಜ್ಞಾಯಮಾನಯೋರಪಿ ತಸ್ಯಾಸ್ಯಾನರ್ಥಸ್ಯಾನುವರ್ತನಾದಿತಿ । ಯದಾ ಚೈವಮ್, ತದಾ ನಾಸ್ತಿ

---

ಹಾಗೆ ಗುಣದ ಸೇರುವಿಕೆಯು ಆಗಬಹುದೋ ಅಲ್ಲೇ ಧರ್ಮಿಗಳಿಗೂ ಮತ್ತು ಧರ್ಮಗಳಿಗೂ ಪರಸ್ಪರ ಅಧ್ಯಾಸವಾಗಬಹುದೇ ಹೊರತು ಬೇರೆ ಕಡೆಯಲ್ಲಾಗುವುದಿಲ್ಲ. ಎಲ್ಲಾದರೋ ಎರಡು ಧರ್ಮಿಗಳಿಗೆ ಹೇಗೂ ತಾದಾತ್ಮ್ಯವು ಹೊಂದುವುದಿಲ್ಲವೋ, ಏಕೆಂದರೆ ಕತ್ತಲೆಬೆಳಕುಗಳಂತೆ ಅತ್ಯಂತ ವಿರುದ್ಧಸ್ವಭಾವವಾದ್ದರಿಂದ (ತಾದಾತ್ಮ್ಯವಾಗುವುದಿಲ್ಲವೋ) ಅಲ್ಲಿ ಧರ್ಮ್ಯಧ್ಯಾಸವಾಗಲೀ ಧರ್ಮಾಧ್ಯಾಸವಾಗಲೀ ಆಗುವುದಿಲ್ಲ. ಆತ್ಮಾನಾತ್ಮರುಗಳು ಸ್ವಭಾವದಿಂದ ವಿಷಯಿಯಾಗಿಯೂ ವಿಷಯವಾಗಿಯೂ ತೋರುತ್ತಲಿದ್ದು, ವಿರುದ್ಧವಾದವುಗಳಾಗಿವೆ, ಆದ್ದರಿಂದ ಅವೆರಡಕ್ಕೆ ಅನ್ಯೋನ್ಯಾಧ್ಯಾಸವಾಗಲೀ ಅವುಗಳ ಗುಣಕ್ಕೆ ಅಧ್ಯಾಸವಾಗಲೀ ಹೊಂದುವದಿಲ್ಲ.

ಇಲ್ಲಿ ಆತ್ಮಾನಾತ್ಮರುಗಳು ಸ್ವರೂಪದಿಂದ (ಬೇರೆ ಬೇರೆಯಾಗಿ) ತೋರಿಬರುತ್ತಿದ್ದರೂ ಅವಕ್ಕೆ ಅನರ್ಥವು ಸೇರಿಕೊಂಡಿರುವುದು ಕಂಡುಬರುತ್ತಿದೆಯಾದ್ದರಿಂದ, ಆತ್ಮಾನಾತ್ಮರುಗಳಿಗೆ ಅನ್ಯೋನ್ಯಾಧ್ಯಾಸವಾಗಿದೆ ಎಂಬುದು ಸುಳ್ಳು ಎಂದು ಎಲ್ಲಿಯವರೆಗೆ ಹೇಳಲಾಗುತ್ತದೋ ಅಲ್ಲಿಯವರೆಗೂ ಇದನ್ನು ಹೇಳಲಾಗುತ್ತದೆ. ಸಂಸಾರದಲ್ಲಾಗುವ ಅನರ್ಥವು ಸುಳ್ಳಲ್ಲ. ಮತ್ತೇನೆಂದರೆ ನಿಜವಾಗಿಯೇ ಆಗುತ್ತಿರುತ್ತದೆ. ಯಾವಾಗ ಇದು ಹೀಗೆ

ಕೇವಲೇನಾತ್ಮಜ್ಞಾನೇನ ಪ್ರಯೋಜನಮ್ । ನ ಹಿ ವಸ್ತುಕೃತಂ ಬಂಧಂ ಜ್ಞಾನಮಾತ್ರಂ ನಿವರ್ತಯಿತುಮಲಮ್ । ಅತೋ ವೃಥೈವ ಬ್ರಹ್ಮ-ಜಿಜ್ಞಾಸೋಪನ್ಯಾಸಪ್ರಯಾಸ ಇತಿ ಶಂಕಿತುರಾಶಯಃ ॥

**೪. ಉತ್ಥಾಪಿತಶಂಕಾಪರಿಹಾರಃ** – ಅಥ ಪರಿಹಾರಭಾಷ್ಯಾಭಿಪ್ರಾಯೋ ವರ್ಣ್ಯತೇ । ಸ್ಯಾದೇತದೇವಂ ಯದಿ ಲೋಕವ್ಯವಹಾರೋ ನಾಧ್ಯಾಸಿಕೋ ದೃಶ್ಯೇತ । ದೃಶ್ಯತೇ ತು ಸರ್ವತ್ರ **'ಅಹಮಿದಂ' 'ಮಮೇದಂ'** ಇತಿ **ನೈಸರ್ಗಿಕೋಽಯಂ ವ್ಯವಹಾರಃ** । ನಿಸರ್ಗಾಜ್ಜಾಯಮಾನೋ ನೈಸರ್ಗಿಕಃ । ನಿಸರ್ಗತ ಏವ ಹ್ಯವಿಚಾರಸ್ವಭಾವಾತ್ ಸರ್ವೋಽಪಿ ವ್ಯವಹರನ್ ದೃಶ್ಯತೇ ಅಹಮಿದಮಿತಿ ಮಮೇದಮಿತಿ ಚ । ನ ಚ ದೃಷ್ಟೇಽನುಪಪನ್ನಂ ನಾಮ ॥

ಕಥಂ ಪುನರಾಧ್ಯಾಸಿಕೋಽಯಂ ವ್ಯವಹಾರ ಇತಿ ? ಉಚ್ಯತೇ । **'ಅಹಮ್'**

---

(ವಸ್ತುಕೃತವೆಂದಾಗುವುದೋ) ಆಗ ಕೇವಲವಾದ ಆತ್ಮಜ್ಞಾನದಿಂದ ಪ್ರಯೋಜನವಿಲ್ಲವೆಂತಲೂ ಆಗುತ್ತದೆ. ಏಕೆಂದರೆ, ನಿಜವಾಗಿ ಆದ ಬಂಧವನ್ನು ಜ್ಞಾನಮಾತ್ರದಿಂದ ಕಳೆಯುವುದಕ್ಕಾಗುವುದಿಲ್ಲವಷ್ಟೇ ? ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು (ಮಾಡಬೇಕೆಂದು) ಹೇಳುವ ಪ್ರಯತ್ನವು ವ್ಯರ್ಥವೆಂದು ಸಂದೇಹಮಾಡುವಾತನ ಅಭಿಪ್ರಾಯವು.

**೪. ಮೇಲೆ ಎಬ್ಬಿಸಿದ ಸಂದೇಹಕ್ಕೆ ಪರಿಹಾರವು** – ಇನ್ನು (ಇದಕ್ಕೆ) ಪರಿಹಾರವನ್ನು ಹೇಳುವ ಭಾಷ್ಯವನ್ನು ವರ್ಣಿಸಲಾಗುತ್ತದೆ. (ಉತ್ತರ:–) ಲೋಕವ್ಯವಹಾರವು ಆಧ್ಯಾಸಿಕವಾದದ್ದಲ್ಲವೆಂದು ತಿಳಿದುಬಂದಿದ್ದರೆ (ಅವನು ಹೇಳುವ ಹಾಗೆಯೇ) ಆಗಬಹುದಾಗಿತ್ತು, ಆದರೆ ಎಲ್ಲಾ ಕಡೆಯಲ್ಲೂ **ನಾನಿದು ನನ್ನದಿದು** ಎಂದು ಸ್ವಾಭಾವಿಕವಾದ ವ್ಯವಹಾರವು ಕಂಡುಬಂದಿದೆ. ಸ್ವಭಾವದಿಂದ ಹುಟ್ಟಿಕೊಂಡಿದ್ದೇ ನೈಸರ್ಗಿಕವು. ಸ್ವಭಾವದಿಂದಲೇ ಅಂದರೆ ವಿಚಾರವನ್ನು ಮಾಡದಿರುವ ಸ್ವಭಾವದಿಂದಲೇ ಎಲ್ಲರೂ **ನಾನಿದು, ನನ್ನದಿದು** ಎಂದು ವ್ಯವಹರಿಸುತ್ತಿರುವುದು ಕಂಡುಬಂದಿದೆ. ಕಂಡಮೇಲೂ ಹೊಂದುವುದಿಲ್ಲವಲ್ಲಾ ! ಎನ್ನುವುದು ಸರಿಯಲ್ಲವಷ್ಟೆ ?

ಈ ವ್ಯವಹಾರವು ಅಧ್ಯಾಸಪುರಸ್ಸರವೇ ಎಂಬುದು ಹೇಗೆ ? ಎಂದರೆ –

ಇತ್ಯಸ್ಮತ್ಪ್ರತ್ಯಯಗೋಚರಸ್ಯಾತ್ಮನೋ ವ್ಯವಹಾರಃ । **'ಇದಮ್'** ಇತಿ ತು ವಿಷಯಾಂಶಸ್ಯ ಯುಷ್ಮತ್ಪ್ರತ್ಯಯಗೋಚರಸ್ಯ ತತ್ಸಂಭಿನ್ನಸ್ಯ ವ್ಯವಹಾರಃ। ಅತೋಽಯಮಾಧ್ಯಾಸಿಕಃ । ನನು ನ ಕೋಽಪಿ ವ್ಯವಹರತ್ಯಹಮಿದಮಿತಿ । ತತ್ರ ಕಿಮಿದಮುಚ್ಯತೇ ನೈಸರ್ಗಿಕೋಽಯಂ ಲೋಕವ್ಯವಹಾರ ಇತಿ ? ಬಾಢಮ್ । ತಥಾಪಿ ತು ವ್ಯವಹರತ್ಯೇವ ಸರ್ವೋ ಲೋಕಃ **'ಅಹಂ ಮನುಷ್ಯಃ', 'ಅಹಂಬ್ರಾಹ್ಮಣಃ', 'ಅಹಂ ಬ್ರಹ್ಮಚಾರೀ'** ಇತ್ಯಾದಿರೀತ್ಯಾ। ತಸ್ಯಾಸ್ಯ ವ್ಯವಹಾರಸ್ಯ ಸಾಮಾನ್ಯಾಕಾರಪ್ರದರ್ಶನಮ್ **'ಅಹಮಿದಮ್'** ಇತಿ। **"ಅಹಮಿತ್ಥಂಭೂತ"** ಇತ್ಯೇವ ಖಲು ಪ್ರತ್ಯಯೋ ವ್ಯಪದೇಶಶ್ಚ ಲೋಕಸ್ಯ, ತತ್ರ **'ಅಹಮ್'** ಇತ್ಯಸ್ಮತ್ಪ್ರತ್ಯಯಗೋಚರಮಾತ್ಮಾನಮುದ್ದಿಶ್ಯ ಇತ್ಥಂಭೂತಃ ಇತಿ ಯತ್ ಪ್ರತ್ಯೇತಿ ವ್ಯಪದಿಶತಿ ಚ ಲೋಕಃ, ಸೋಽಧ್ಯಾಸನಿಬಂಧನ ಏವ ವ್ಯವಹಾರ ಇತಿ ಪ್ರತಿಜಾನೀಮಹೇ । ತಥಾ ಹಿ । **'ಅಹಂ ಮನುಷ್ಯಃ'** ಇತ್ಯತ್ರಾಸ್ಮತ್ಪ್ರತ್ಯಯಗಮ್ಯಶ್ಚಿದಾತ್ಮಾ । ತಸ್ಯ ನಾಸ್ತಿ ಮನುಷ್ಯತ್ವಂ, ಮನುಷ್ಯತ್ವಸ್ಯ

---

ಹೇಳುತ್ತೇವೆ. **ನಾನು** ಎಂದು ಅಸ್ಮತ್ಪ್ರತ್ಯಯಗೋಚರನಾದ ಆತ್ಮನ ವ್ಯವಹಾರವು. **ಇದಂ** ಎಂಬ ಸ್ಥಳದಲ್ಲಾದರೋ ವಿಷಯದ ಅಂಶವಾದ (ನಾನೆಂಬುದಕ್ಕಿಂತ) ಬೇರೆಯಾದ ಯುಷ್ಮತ್ಪ್ರತ್ಯಯಗೋಚರವಾದದ್ದರ ವ್ಯವಹಾರವು. ಆದ್ದರಿಂದ ಇದು ಅಧ್ಯಾಸದಿಂದಾದದ್ದು. ಅಲ್ಲಾ ! ಯಾವನೊಬ್ಬನೂ **ನಾನಿದು** ಎಂದು ವ್ಯವಹರಿಸುವುದಿಲ್ಲವಲ್ಲಾ ! ಹೀಗಿರುವಾಗ ಇದೇನು ಹೇಳುತ್ತಿರುವಿರಿ, **ಈ ವ್ಯವಹಾರವು ನೈಸರ್ಗಿಕವಾದದ್ದು** ಎಂದು? (ಎಂದರೆ ಉತ್ತರ) ಹೌದು, ಆದರೂ ಪ್ರತಿಯೊಬ್ಬನೂ ನಾನು ಮನುಷ್ಯನು, ನಾನು ಬ್ರಾಹ್ಮಣನು, ನಾನು ಬ್ರಹ್ಮಚಾರಿಯು, ಎಂಬೀ ರೀತಿಯಿಂದ ವ್ಯವಹರಿಸುತ್ತಲೇ ಇದ್ದಾನೆ. ಆ ಈ ವ್ಯವಹಾರದ ಸಾಮಾನ್ಯವಾದ ಆಕಾರವನ್ನು ಮಾತ್ರ **ಅಹಮಿದಂ** ಎಂದು ತೋರಿಸುತ್ತಿದ್ದಾರೆ. ನಾನು ಹೀಗಿರುವವನು ಎಂದಲ್ಲವೆ ಜನರು ಹೇಳಿಕೊಳ್ಳುವುದು ? ಅಲ್ಲಿ **ನಾನು** ಎಂದು ಅಸ್ಮತ್ಪ್ರತ್ಯಯಗೋಚರನಾದ ಆತ್ಮನನ್ನು ಉದ್ದೇಶಿಸಿಕೊಂಡು **ಹೀಗಿರುವವನು** ಎಂದು ಏನು ತಿಳಿಯುತ್ತಿರುತ್ತಾನೆ, ಅದು ಅಧ್ಯಾಸವನ್ನು ಹಿಡಿದುಕೊಂಡ ವ್ಯವಹಾರವೆಂದೇ ನಾವು ಪ್ರತಿಜ್ಞೆಮಾಡುತ್ತೇವೆ. ಹಾಗೆಯೇ ಅಲ್ಲವೇ ? **ನಾನು ಮನುಷ್ಯನು** ಎಂಬಲ್ಲಿ ನಾನೆಂಬ ಬುದ್ಧಿಗೆ ತಿಳಿದುಬರುವವನು

ದೇಹಧರ್ಮತ್ವಾತ್ । ನ ಚ ಯುಷ್ಮತ್ಪ್ರತ್ಯಯಯೋಗ್ಯಸ್ಯ ವಿಷಯಭೂತಸ್ಯ ದೇಹಸ್ಯ ಮುಖ್ಯವೃತ್ತ್ಯಾ ಅಸ್ಮತ್ಪ್ರತ್ಯಯಯಗೋಚರತಾ ಸಂಭವತಿ । ಅಥ ಚ "ಅಹಂ ಮನುಷ್ಯಃ" ಇತಿ ನಿಸರ್ಗತ ಏವ ಸಾಮಾನಾಧಿಕರಣ್ಯೇನ ಪ್ರತ್ಯಯವ್ಯಪದೇಶೌ ಭವಂತೌ ದೃಶ್ಯೇತೇ ಲೋಕೇ । ಏವಂ "ಮಮೇದಮ್" ಇತಿ ಪ್ರತ್ಯಯವ್ಯಪದೇಶಾವಪಿ ವ್ಯಾಖ್ಯೇಯೌ । ಪ್ರತ್ಯೇತಿ ಹಿ ವ್ಯಪದಿಶತಿ ಚ ಲೋಕೋ "ಮಮಾಯಂ ಪುತ್ರಃ", "ಮಮೇದಂ ಮಿತ್ರಮ್", "ಮಮೇದಂ ಗೃಹಮ್" ಇತ್ಯೇವಮ್ । ತತ್ರ "ಮಮ" ಇತ್ಯಸ್ಮತ್ಪ್ರತ್ಯಯಗೋಚರಸ್ಯಾತ್ಮನಃ ಸಂಬಂಧಪ್ರತ್ಯಯವ್ಯಪದೇಶೌ । ನ ಚ ತಸ್ಯಾತ್ಮನಃ ಪುತ್ರಾದಿಸಂಬಂಧಃ ಸಾಕ್ಷಾದ್ವರ್ತತೇ । ಅಥ ಚ ತತ್ಸಂಬದ್ಧತ್ವಮಾತ್ಮನಃ ಪ್ರತ್ಯೇತಿ ವ್ಯಪದಿಶತಿ ಚ ಲೋಕಃ । ಪುತ್ರಾದಿಸಂಬಂಧವತಶ್ಚ ದೇಹಸ್ಯ ನಾಸ್ತಿ ಮುಖ್ಯವೃತ್ತ್ಯಾ ಅಸ್ಮತ್ಪ್ರತ್ಯಯವಿಷಯತೇತಿ ಸ್ಪಷ್ಟಮೇವ । ಅಥ ಚ ಮಮ ಇತಿ

---

ಚಿನ್ಮಾತ್ರನಾದ ಆತ್ಮನು. ಅವನಿಗೆ (ನಿಜವಾಗಿ) ಮನುಷ್ಯತ್ವವೆಂಬುದಿಲ್ಲ, ಏಕೆಂದರೆ ಮನುಷ್ಯತ್ವವೆಂಬುದು ದೇಹದ ಧರ್ಮವಾಗಿರುತ್ತದೆ. ನೀನೆಂಬ ಅರಿವಿಗೆ ಯೋಗ್ಯವಾಗಿ ವಿಷಯವಾಗಿರುವ ದೇಹಕ್ಕೆ ಮುಖ್ಯಾರ್ಥದಲ್ಲಿ ಅಸ್ಮತ್ಪ್ರತ್ಯಯಗೋಚರವಾಗುವುದೆಂಬುದು ಹೊಂದಲಾರದಷ್ಟೇ ? ಆದರೂ ನಾನು ಮನುಷ್ಯನು ಎಂದು ಸ್ವಾಭಾವಿಕವಾಗಿಯೇ ಸಾಮಾನಾಧಿಕರಣ್ಯರೂಪದಿಂದ ತಿಳಿಯುವುದು, ಹೇಳುವುದು, ಎಂದಾಗುತ್ತಿರುವುದು ಲೋಕದಲ್ಲಿ ಕಂಡುಬಂದಿದೆ. ಹೀಗೆಯೇ **ಮಮೇದಂ** (ನನ್ನದಿದು) ಎಂಬ ಪ್ರತ್ಯಯವ್ಯಪದೇಶವನ್ನೂ ವ್ಯಾಖ್ಯಾನ ಮಾಡಿಕೊಳ್ಳಬೇಕು. ಜನರು **ನನ್ನ ಮಗ, ನನ್ನ ಗೆಳೆಯ, ನನ್ನ ಮನೆ** ಎಂದೀ ರೀತಿಯಾಗಿ ತಿಳಿಯುತ್ತಲೂ ಇದ್ದಾರೆ ಮತ್ತು ಹೇಳುತ್ತಲೂ ಇದ್ದಾರೆ. ಅಲ್ಲಿ "ನನ್ನದು" ಎಂಬುದು ಅಸ್ಮತ್ಪ್ರತ್ಯಯಕ್ಕೆ ಗೋಚರನಾದ ಆತ್ಮನಿಗೆ ಸಂಬಂಧಪಟ್ಟದ್ದಾದ ಅರಿವು, ಹೇಳಿಕೆಗಳೆಂದಾಗಿದೆ. ಆ ಆತ್ಮನಿಗೆ ಮಗನೇ ಮುಂತಾದವರೊಡನೆ ನೇರಾಗಿ ಸಂಬಂಧವಿರುವುದಿಲ್ಲ. ಆದರೂ ಜನರು ತಮ್ಮನ್ನು ಅದಕ್ಕೆ ಸಂಬಂಧಪಟ್ಟುಕೊಂಡಿರುವವರು ಎಂದು ಅರಿಯುತ್ತಲೂ ಹೇಳುತ್ತಲೂ ಇದ್ದಾರೆ. ಮಗನೇ ಮುಂತಾದದ್ದರ ಸಂಬಂಧವನ್ನು ಹೊಂದಿರುವ ದೇಹಕ್ಕೆ ಮುಖ್ಯಾರ್ಥದಲ್ಲಿ ನಾನೆಂಬ ಅರಿವಿಗೆ ವಿಷಯವಾಗಿರುವುದೆಂಬುದಿಲ್ಲ ಎಂಬುದು ಸ್ಪಷ್ಟವಾಗಿಯೇ ಇದೆ. ಆದರೂ **ನನ್ನದು** ಎಂದು ನಿಶ್ಚಿತವಾದ

ನಿಶ್ಚಿತಪ್ರತ್ಯಯವ್ಯಪದೇಶೌ ಕರೋತಿ ಲೋಕಃ ॥

ಸ ಚಾಯಂ ಪ್ರತ್ಯಯವ್ಯಪದೇಶರೂಪೋ ವ್ಯವಹಾರೋ ವರ್ಣಿತದಿಶಾ ಅನ್ಯೋನ್ಯಸ್ಮಿನ್ನನ್ಯೋನ್ಯಾತ್ಮಕತಾಮನ್ಯೋನ್ಯಧರ್ಮಾಂಶ್ಚಾಧ್ಯಸ್ಯ ಪ್ರವರ್ತತೇ । ತಸ್ಮಾತ್ ಅಸ್ಮತ್ಪ್ರತ್ಯಯಗೋಚರಯುಷ್ಮತ್ಪ್ರತ್ಯಯಗೋಚರಯೋರನ್ಯಸ್ಮಿನ್ ಅನ್ಯಾತ್ಮಕತಾಮ್ ಅಧ್ಯಸ್ಯ ಅಸ್ಮತ್ಪ್ರತ್ಯಯಗೋಚರೇ ಯುಷ್ಮತ್ಪ್ರತ್ಯಯಗೋಚರತಾಮ್, ವಿಷಯಿಣಿ ವಿಷಯಾತ್ಮಕತಾಮ್, ಚಿದಾತ್ಮಕೇ ಜಡಾತ್ಮಕತಾಮ್, ತದ್ವೈಪರೀತ್ಯೇನ ಯುಷ್ಮತ್ಪ್ರತ್ಯಯಗೋಚರೇ ಅಸ್ಮತ್ಪ್ರತ್ಯಯಗೋಚರತಾಮ್, ವಿಷಯೇ ವಿಷಯಿತಾಮ್, ಜಡಾತ್ಮಕೇ ಚಿದಾತ್ಮಕತಾಂ ಚಾಧ್ಯಸ್ಯೈವ ವ್ಯವಹರತಿ ಲೋಕಃ । ತಥಾನ್ಯೋನ್ಯಧರ್ಮಾಂ-ಶ್ಚಾಧ್ಯಸ್ಯೈವ ವ್ಯವಹರತಿ । ಅನ್ಯಸ್ಮಿನ್ ಹಿ ವಿಷಯಿಣಿ ಅನ್ಯಧರ್ಮಾನ್ ವಿಷಯಧರ್ಮಾನ್, ತದ್ವೈಪರೀತ್ಯೇನ ಚಾನ್ಯಸ್ಮಿನ್ ವಿಷಯೇ ಅನ್ಯಸ್ಯ ವಿಷಯಿಣೋ ಧರ್ಮಾಂಶ್ಚಾಧ್ಯಸ್ಯೈವ ವ್ಯವಹರತೀತಿ ಸಿದ್ಧಮ್॥

---

ಅರಿವನ್ನೂ ಹೇಳಿಕೆಯನ್ನೂ ಜನರು ಮಾಡುತ್ತಲಿದ್ದಾರೆ.

ಈ ಪ್ರತ್ಯಯವ್ಯಪದೇಶರೂಪವಾದ ವ್ಯವಹಾರವು ಮೇಲೆ ವರ್ಣನೆಮಾಡಿದ ರೀತಿಯಿಂದ ಪರಸ್ಪರ ಧರ್ಮಧರ್ಮಿಗಳ ಅಧ್ಯಾಸವನ್ನು ಮಾಡಿಕೊಂಡೇ ಹೊರಟಿರುತ್ತದೆ. ಆದ್ದರಿಂದ ನಾನು ನೀನೆಂಬುದರೆಡರಲ್ಲೂ ಒಂದರಲ್ಲಿ ಇನ್ನೊಂದರ ಸ್ವರೂಪವನ್ನು ಹುಟ್ಟುಹಾಕಿ, ಅಂದರೆ ನಾನಾಗಿರುವುದನ್ನು ನೀನಾಗಿ ತೋರುತ್ತಿದೆಯೆಂತಲೂ, ವಿಷಯಿಯಾದದ್ದನು ವಿಷಯವೆಂತಲೂ, ಚಿತ್ಸ್ವರೂಪವನ್ನು ಜಡಸ್ವರೂಪವೆಂತಲೂ ಇದಕ್ಕೆ ವಿರುದ್ಧವಾಗಿ ನೀನಾಗಿ ತೋರುತ್ತಿರುವುದನ್ನು ನಾನಾಗಿ ತೋರುತ್ತಿದೆಯೆಂತಲೂ, ವಿಷಯವಾದದ್ದನ್ನು ವಿಷಯಿ ಎಂತಲೂ ಜಡವಾದದ್ದನ್ನು ಅರಿವಿನ ಸ್ವರೂಪವೆಂತಲೂ ತಪ್ಪಾಗಿ ತಿಳಿದೇ ಜನರು ವ್ಯವಹರಿಸುತ್ತಿದ್ದಾರೆ. ಹಾಗೆಯೇ ಒಂದರಲ್ಲಿ ಇನ್ನೊಂದರ ಧರ್ಮಗಳನ್ನು ಹುಟ್ಟುಹಾಕಿಕೊಂಡೇ ವ್ಯವಹರಿಸುತ್ತಾರೆ. ವಿಷಯಿಯಾದ ಒಂದರಲ್ಲಿ ಮತ್ತೊಂದಾದ ವಿಷಯಧರ್ಮವನ್ನು ಅದಕ್ಕೆ ವಿರುದ್ಧವಾಗಿ ವಿಷಯವಾದ ಒಂದರಲ್ಲಿ ವಿಷಯಿಯಾದ ಇನ್ನೊಂದರ ಧರ್ಮವನ್ನು ತಪ್ಪಾಗಿ ತಿಳಿದುಕೊಂಡೇ ವ್ಯವಹರಿಸುತ್ತಿದ್ದಾರೆಂಬುದು ಸಿದ್ಧವಾಗುತ್ತದೆ.

ತತ್ರ ಕಿಂನಿಮಿತ್ತಂ ಲೋಕ ಏವಮಧ್ಯಸ್ಯ ವ್ಯವಹರತೀತಿ ? ಉಚ್ಯತೇ । **ಇತರೇತರಾವಿವೇಕೇನಾತ್ಯಂತವಿವಿಕ್ತಯೋರ್ಧರ್ಮಧರ್ಮಿಣೋರ್ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯಾಹಮಿದಂ ಮಮೇದಮಿತಿ ನೈಸರ್ಗಿಕೋಽಯಂ ಲೋಕವ್ಯವಹಾರಃ** । ಚಿದಾತ್ಮಾ ತಾವದೇಕೋ ಧರ್ಮೀ, ಅನಾತ್ಮಾ ಚಾಪರಃ । ತಯೋರಿತರೇತರಾವಿವೇಕೋ ನಾಮ ಇತರಸ್ಮಾದಿತರಸ್ಯ ಯೋ ವಿವೇಕಃ "ಏವಂಸ್ವಭಾವಶ್ಚಿದಾತ್ಮಾ, ತದ್ವಿರುದ್ಧಸ್ವಭಾವಶ್ಚಾನಾತ್ಮಾ" ಇತಿ ವಿವಿಚ್ಯ ನಿರ್ಧಾರಣಮ್, ತದಭಾವಃ। ತಥಾ ಧರ್ಮಾಂಶ್ಚ ಚಿದಾತ್ಮನಃ ಚೈತನ್ಯಮ್, ಕೂಟಸ್ಥತ್ವಮ್, ವಿಷಯಿತ್ವಮ್, ಸತ್ಯತ್ವಮ್, ಸುಖದುಃಖಸಂಸ್ಪರ್ಶವಿಧುರತ್ವಮ್, ನಿರಂಶತ್ವಮ್ – ಇತ್ಯೇವಮಾದಯಃ । ಅನಾತ್ಮನಸ್ತು ಜಡತ್ವಮ್, ವಿಕಾರಿತ್ವಮ್, ವಿಷಯತ್ವಮ್, ಮಿಥ್ಯಾತ್ವಮ್, ಸುಖದುಃಖಾತ್ಮಕತ್ವಮ್, ಸಾಂಶತ್ವಮ್ – ಇತ್ಯೇವಮಾದಯಃ। ಅಮೀಷಾಂ ಧರ್ಮಾಣಾಮವಿವೇಕಃ "ಅಸ್ಯ ಧರ್ಮಿಣ ಇಮೇ ಧರ್ಮಾಃ" ಇತಿ ನಿರ್ಧಾರಣಾಭಾವಃ । ಸೋಽಯಮವಿವೇಕಃ ಅಧ್ಯಾಸೇ ನಿಮಿತ್ತಮ್ । ತದುಕ್ತಂ ಗೀತಾಭಾಷ್ಯೇ – "ಕ್ಷೇತ್ರಕ್ಷೇತ್ರಜ್ಞಯೋರ್ವಿಷಯವಿಷಯಿ–

---

ಇಲ್ಲಿ ಏತಕ್ಕೆ ಜನರು (ಹೀಗೆ) ತಪ್ಪಾಗಿ ತಿಳಿದು ವ್ಯವಹರಿಸುತ್ತಿದ್ದಾರೆ ? ಎಂದರೆ ಹೇಳುತ್ತೇವೆ. "ಇತರೇತರಾವಿವೇಕೇನ ಅತ್ಯನ್ತವಿವಿಕ್ತಯೋ..... ಲೋಕವ್ಯವಹಾರಃ" (ಇದರ ವಿವರ) – ಮೊಟ್ಟಮೊದಲು ಚಿತ್ಸ್ವರೂಪನಾದ ಧರ್ಮಿಯು ಒಬ್ಬನು, ಇನ್ನೊಂದು ಅನಾತ್ಮವು, ಅವೆರಡರ **ಇತರೇತರಾವಿವೇಕ** ಎಂದರೆ ಒಬ್ಬನಿಂದ ಮತ್ತೊಬ್ಬನನ್ನು ವಿಂಗಡಿಸಿಕೊಳ್ಳುವದು, (ಅಂದರೆ) **ಚಿದಾತ್ಮನು ಈಸ್ವಭಾವದವನು, ಅದಕ್ಕೆ ವಿರುದ್ಧಸ್ವಭಾವವು ಅನಾತ್ಮದ್ದು** ಎಂದೀರೀತಿಯಾಗಿ ವಿಂಗಡಿಸಿಕೊಳ್ಳದಿರುವುದು, ಹಾಗೆಯೇ ಚಿದಾತ್ಮನ ಧರ್ಮವೂ ಸಹ ಚೈತನ್ಯವಾಗಿರುವುದು, ಕೂಟಸ್ಥವಾಗಿರುವುದು, ವಿಷಯಿಯೂ, ಸತ್ಯನೂ, ಸುಖದುಃಖಸಂಬಂಧವಿಲ್ಲದವನೂ, ನಿರವಯವನು ಇದೇ ಮೊದಲಾದವುಗಳಾಗಿರುತ್ತವೆ. ಅನಾತ್ಮದ್ದಾದರೋ ಜಡವಾಗಿರುವುದು, ವಿಕಾರಿಯಾಗಿರುವುದು, ವಿಷಯವಾಗಿರುವುದು, ಸುಳ್ಳಾಗಿರುವುದು, ಸುಖದುಃಖರೂಪದ್ದು, ಅವಯವವುಳ್ಳದ್ದೇ ಮೊದಲಾದವುಗಳಾಗಿವೆ. **ಈ** ಧರ್ಮಗಳನ್ನು ವಿಂಗಡಿಸಿಕೊಳ್ಳದೇ ಇರುವುದೆಂದರೆ **ಈ ಧರ್ಮಿಯ ಧರ್ಮಗಳು ಇವುಗಳು** ಎಂದು ನಿರ್ಧರಿಸಿಕೊಳ್ಳದಿರುವುದು. ಈ ಅವಿವೇಕವೇ ತಪ್ಪುತಿಳಿವಳಿಕೆಗೆ ನಿಮಿತ್ತವು. ಇದನ್ನು ಗೀತಾಭಾಷ್ಯದಲ್ಲೂ ಹೇಳಿದೆ.

ಣೋರ್ಭಿನ್ನಸ್ವಭಾವಯೋರಿತರೇತರತದ್ಧರ್ಮಾಧ್ಯಾಸಲಕ್ಷಣಃ ಸಂಯೋಗಃ ಕ್ಷೇತ್ರಕ್ಷೇತ್ರಜ್ಞಸ್ವರೂಪವಿವೇಕಾಭಾವನಿಬಂಧನಃ, ರಜ್ಜುಶುಕ್ತಿಕಾದೀನಾಂ ತದ್ವಿವೇಕಜ್ಞಾನಾಭಾವಾದಧ್ಯಾರೋಪಿತಸರ್ಪರಜತಾದಿಸಂಯೋಗವತ್" (ಗೀ. ಭಾ. ೧೩-೨೬) ಇತಿ । ಯದ್ಯಪ್ಯಾತ್ಮಾನಾತ್ಮಾನಾವತ್ಯಂತಂ ವಿವಿಕ್ತೌ, ಪರಸ್ಪರವಿರುದ್ಧಸ್ವಭಾವತ್ವಾತ್ । ಅತ ಏವ ಚ ತದ್ಧರ್ಮಾ ಅಪ್ಯತ್ಯಂತಂ ವಿವಿಕ್ತಾ ಏವ । ತಥಾಪಿ ತಯೋರ್ಧರ್ಮಧರ್ಮಿಣೋರ್ವಿವೇಕೇನ ನಿರೂಪಣಾಭಾವನಿಮಿತ್ತ ಏವ ವರ್ಣಿತಾಧ್ಯಾಸಃ । ತತಶ್ಚ ವ್ಯವಹಾರ ಇತ್ಯನವದ್ಯಮ್ । ಯದ್ಯಪಿ ಚೈತನ್ಯಾದಯೋ ನಾಮ ನಾತ್ಮಾನಃ ಸಕಾಶಾತ್ ಪೃಥಗ್ವಿದ್ಯಂತೇ ಧರ್ಮಾಃ । ನಿತ್ಯನಿರ್ವಿಶೇಷಚೈತನ್ಯಸ್ವರೂಪತ್ವಾದಾತ್ಮನಃ। ನ ಚಾನಾತ್ಮನಿ ದ್ರವ್ಯಗುಣಕರ್ಮಾದಿಭೇದೇನ ಧರ್ಮಧರ್ಮಿಭಾವಂ

---

"ವಿಷಯವಿಷಯಿಗಳೆಂಬ ಭಿನ್ನಸ್ವಭಾವದ್ದಾದ ಕ್ಷೇತ್ರಕ್ಷೇತ್ರಜ್ಞರನ್ನು ಒಂದರ ಧರ್ಮವನ್ನು ಇನ್ನೊಂದಕ್ಕೆ ಹುಟ್ಟುಹಾಕಿಕೊಳ್ಳುವುದೆಂಬ ರೂಪದ್ದಾದ ಸಂಯೋಗವೆಂಬುದೇನಿದೆ, ಅದು ಕ್ಷೇತ್ರಕ್ಷೇತ್ರಜ್ಞರ ಸ್ವರೂಪದ ವಿವೇಕಜ್ಞಾನ ವಿಲ್ಲದಿರುವುದೆಂಬುದನ್ನು ಕಟ್ಟುವಡೆದಿದೆ. (ಅದು ಹೇಗೆಂದರೆ) ಹಗ್ಗ, ಕಪ್ಪೆಚಿಪ್ಪುಗಳಿಗೆ (ಅದರ ಸ್ವರೂಪದ) ವಿಂಗಡಜ್ಞಾನವಿಲ್ಲದಿರುವುದರಿಂದ ಹುಟ್ಟುಹಾಕಿದ್ದಾದ ಹಾವು, ಬೆಳ್ಳಿ, ಮುಂತಾದವುಗಳ ಸಂಬಂಧದಂತೆ" (ಆಗಿರುತ್ತದೆ) (ಗೀ.ಭಾ. ೧೩-೨೬). ಆತ್ಮಾನಾತ್ಮರುಗಳು ಅತ್ಯಂತವಾಗಿ ಬೇರೆ ಬೇರೆಯಾದವುಗಳಾಗಿದ್ದರೂ - ಏಕೆಂದರೆ ಪರಸ್ಪರ ಭಿನ್ನಸ್ವಭಾವದವಾದ್ದರಿಂದ, ಅದರಿಂದಲೇ ಅವುಗಳ ಧರ್ಮಗಳೂ (ಗುಣಗಳೂ ಸಹ) ಸಂಪೂರ್ಣವಾಗಿ ಬೇರೆ ಬೇರೆಯಾದವುಗಳೇ ಆಗಿದ್ದರೂ ಆ ಎರಡು ಧರ್ಮಿಗಳನ್ನು (ವಸ್ತುಗಳನ್ನು) ವಿಂಗಡಿಸಿ ಗೊತ್ತುಮಾಡಿಕೊಳ್ಳದಿರುವುದರ ನಿಮಿತ್ತವಾಗಿಯೇ (ನಾವು) ಮೇಲೆ ವರ್ಣನೆ ಮಾಡಿದ ಅಧ್ಯಾಸವಾಗಿರುತ್ತದೆ. ಅದರಿಂದ ವ್ಯವಹಾರವೂ (ನಡೆಯುತ್ತಿದೆ) ಎಂದಾದ್ದರಿಂದ ಇಲ್ಲಿ ಯಾವ ದೋಷವೂ ಇರುವುದಿಲ್ಲ. ಆತ್ಮನು ಯಾವಾಗಲೂ ಯಾವ ವಿಶೇಷವೂ ಇಲ್ಲದ ಚೈತನ್ಯದ (ಅರಿವಿನ) ಸ್ವಭಾವದವನಾದ್ದರಿಂದ ಅರಿವೇ ಮುಂತಾದವುಗಳು ಆತ್ಮಸ್ವರೂಪಕ್ಕಿಂತ ಬೇರೆಯಾದ ಧರ್ಮಗಳಾಗಿರುವುದೇ ಇಲ್ಲವೆಂಬುದು ನಿಜವಾದರೂ, ಹಾಗೆಯೇ ತಾರ್ಕಿಕರೇ ಮುಂತಾದವರು ಹೇಳುವ ಹಾಗೆ ಅನಾತ್ಮದಲ್ಲಿ ದ್ರವ್ಯ, ಗುಣ, ಕ್ರಿಯಾ - ಮುಂತಾದ ಭೇದದಿಂದ (ಅದಕ್ಕೆ) ಧರ್ಮಧರ್ಮಿರೂಪವನ್ನು (ಪರಮಾರ್ಥವಾಗಿ) ನಿಜವಾಗಿ

ವೈಶೇಷಿಕಾದಿವದಭ್ಯುಪಯಂತಿ ವೇದಾಂತಿನಃ ಪರಮಾರ್ಥತಃ । ನ ಚಾಪ್ಯನಾತ್ಮಾ ನಾಮಾತ್ಮನೋಽತ್ಯಂತಭಿನ್ನಃ ಏವ । ತತ್ತ್ವಾನ್ಯತ್ವಾಭ್ಯಾಮ-ನಿರ್ವಚನೀಯಸ್ವರೂಪತ್ವಾತ್ ಸಲಿಲಫೇನವತ್ । ತಥಾಪಿ ಚಿತ್ಸ್ವರೂಪಾನೇವ ಚೈತನ್ಯಾದೀನ್ ಉಪಾಧ್ಯಪೇಕ್ಷಯಾ ತತ್ಪೃಥಗ್ಭೂತಾನಿವ ಪ್ರಕಲ್ಪ್ಯ ತೇಷಾಂ ತದ್ಧರ್ಮತ್ವೇನ ವ್ಯಪದೇಶಃ । ವ್ಯಾವಹಾರಿಕಂ ಚಾನಾತ್ಮಾನಃ ಪ್ರಾತೀತಿಕಸತ್ತ್ವಂ ಧರ್ಮಧರ್ಮಿಭಾವಂ ಚ ಯಥಾಪ್ರಸಿದ್ಧಮೇವಾಭ್ಯುಪಗಮ್ಯ ಜಡತ್ವಾದೀನಾಂ ತದ್ಧರ್ಮತ್ವೇನ ವ್ಯಪದೇಶಶ್ಚೇತಿ ನಾತ್ರ ವ್ಯಾಘಾತಶಂಕಾವಕಾಶಃ ॥

"ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ ವ್ಯವಹಾರಃ" ಇತ್ಯೇತತ್ತು ವಿಸ್ಪಷ್ಟಕಥನಾರ್ಥಮ್ । "ಇತರೇತರಾವಿವೇಕೇನ ಮಿಥ್ಯಾಜ್ಞಾನ-ನಿಮಿತ್ತಃ" ಇತಿ "ಅವಿವೇಕೋತ್ಥಂ ಯನ್ಮಿಥ್ಯಾಜ್ಞಾನಂ ತನ್ನಿಮಿತ್ತಃ" ಇತ್ಯರ್ಥಃ। ಗಮಕತ್ವಾತ್ ಸಮಾಸಃ । ಅಥವಾ ಅವಿವೇಕೇನಾಧ್ಯಸ್ಯೇತಿ ಪೂರ್ವೇಣೈವಾ-

---

ವೇದಾಂತಿಗಳು ಒಪ್ಪುವುದಿಲ್ಲವಾದರೂ, (ಅಷ್ಟೇ ಅಲ್ಲ) ಅನಾತ್ಮವೆಂಬುದು ಆತ್ಮನಿಗಿಂತ ಅತ್ಯಂತ ಬೇರೆಯಲ್ಲವಾದರೂ ನೀರು ಮತ್ತು ನೊರೆಗಳಂತೆ ಅದೇ ಎಂತಾಗಲೀ ಬೇರೆ ಎಂದಾಗಲೀ ಹೇಳುವುದಕ್ಕೆ ಬಾರದ, ಉಪಾಧಿಗಳ ಅಪೇಕ್ಷೆಯಿಂದ ಚಿತ್ಸ್ವರೂಪವೇ ಆದ ಚೈತನ್ಯವೇ ಮುಂತಾದವುಗಳನ್ನು[೧] (ಆತ್ಮನಿಗಿಂತ) ಬೇರೆ ಎಂಬುವಂತೆ ಕಲ್ಪಿಸಿ ಅವುಗಳು ಆತ್ಮನ ಧರ್ಮವೆಂದು ಕರೆದಿದೆ. ಹಾಗೆಯೇ ಅನಾತ್ಮವೂ ಸಹ ವ್ಯಾವಹಾರಿಕವಾಗಿ ತೋರುತ್ತಿ-ರುವುದನ್ನು ಒಪ್ಪಿ ಲೋಕಪ್ರಸಿದ್ಧವಾದ ಧರ್ಮಧರ್ಮಿಭಾವವನ್ನು ಅಂಗೀಕರಿಸಿ ಜಡತ್ವಾದಿಗಳು ಅದರ ಧರ್ಮವೆಂದು ಹೇಳಿರುತ್ತದೆಯಾದ್ದರಿಂದ ಇಲ್ಲಿ ಯಾವ ವಿರೋಧಕ್ಕೂ ಅವಕಾಶವಿರುವುದಿಲ್ಲ.

**ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ ವ್ಯವಹಾರಃ** ಎಂಬೀ (ಭಾಷ್ಯಭಾಗವೋ) ವಿಸ್ಪಷ್ಟತೆಯನ್ನು ತಿಳಿಸುವುದಕ್ಕಾಗಿ ಬಂದಿದೆ. **ಇತೇತರಾವಿವೇಕೇನ ಮಿಥ್ಯಾಜ್ಞಾನನಿಮಿತ್ತಃ** ಎಂಬ ಸ್ಥಳದಲ್ಲಿ (ಅನ್ವಯವು ಹೇಗೆಂದರೆ) ಅವಿವೇಕದಿಂದ ಎದ್ದುಕೊಂಡ ಯಾವ ಮಿಥ್ಯಾಜ್ಞಾನವಿದೆ, ಅದರ

---

೧. ಅರಿವು, ಇರವು, ಆನಂದ, ಶುದ್ಧ ಎಂಬ ವಿಶೇಷಣಗಳನ್ನು ಆದಿಪದದಿಂದ ಗ್ರಹಿಸಬೇಕು.

ನ್ವಯಃ । ಅಧ್ಯಾಸಮಿಥ್ಯಾಜ್ಞಾನಯೋರ್ಐಕ್ಯಾದುಭಯಥಾಪಿ ಯಥೋಕ್ತ ಏವಾಭಿಪ್ರಾಯಃ । ಅವಿವೇಕೋತ್ಥಂ ಮಿಥ್ಯಾಜ್ಞಾನಂ ಇತ್ಯುಕ್ತ್ವಾ ಅವಿವೇಕಮಿಥ್ಯಾಜ್ಞಾನಯೋರುಪಾದಾನೋಪಾದೇಯಭಾವೋ ನೋಪೇಯಃ, ಕಿಂ ತರ್ಹ್ಯಾತ್ಮೈವ ಸತ್ಯಂ ವಸ್ತು ನಾನ್ಯದತೋಽಸ್ತೀತಿ ಜ್ಞಾನಾಭಾವಾದ-ಜ್ಞಾತಾತ್ಮೈವಾನಾತ್ಮರೂಪೇಣ ಪ್ರತಿಭಾಸತ ಇತಿ ನಿಮಿತ್ತನೈಮಿತ್ತಿಕ-ಭಾವೋಽವಸೇಯಃ । ಯಥೋಕ್ತಂ **ವಾರ್ತಿಕಕಾರೈಃ** "ಸರ್ಪಾದಯೋ ಯಥಾ ರಜ್ಜ್ವಾ ವಿಕಾರಾ ಸ್ಯುರಬೋಧತಃ । ಅಜ್ಞಾನಾದಾತ್ಮನಸ್ತದ್ವತ್ತೇಜೋ-ಽಬನ್ನಾದಿವಿಕ್ರಿಯಾ ॥ ನ ಹಿ ವೇದಾಂತಸಿದ್ಧಾಂತೇ ಹ್ಯಜ್ಞಾತಾತ್ಮಾತಿರೇಕತಃ।

---

ನಿಮಿತ್ತದಿಂದ ಎಂದರ್ಥವು. ಈ ತರಹದ ಸಮಾಸಕ್ಕೆ ಆಧಾರವಿದೆಯಾದ್ದರಿಂದ[1] (ಸಮಾಸವನ್ನು ಮಾಡಬಹುದು). (ಅಥವಾ) ಹಿಂದಿರುವ **ಅವಿವೇಕೇನ** ಎಂಬ ಪದವನ್ನು (ಅದಕ್ಕೂ) ಹಿಂದಿರುವ **ಅಧ್ಯಸ್ಯ** ಎಂಬ ಪದದೊಡನೆ ಅನ್ವಯವನ್ನಾದರೂ ಮಾಡಬಹುದು. ಅಧ್ಯಾಸ, ಮಿಥ್ಯಾಜ್ಞಾನಗಳೆರಡೂ ಒಂದೇ ಆದ್ದರಿಂದ ಹೇಗೆ (ಅನ್ವಯಮಾಡಿದರೂ) ಮೇಲೆ ಹೇಳಿದ ಅಭಿಪ್ರಾಯವೇ (ಬರುತ್ತದೆ). (ಆದರೆ ಇಲ್ಲಿ) ಅವಿವೇಕದಿಂದ ಎದ್ದುಕೊಂಡ ಮಿಥ್ಯಾಜ್ಞಾನ ಎಂದು ಹೇಳಿದ್ದರಿಂದ ಅಜ್ಞಾನಮಿಥ್ಯಾಜ್ಞಾನಗಳಿಗೆ ಉಪಾದಾನೋಪಾದೇಯ-ಭಾವವನ್ನು ಮಾತ್ರ ಸ್ವೀಕರಿಸಬಾರದು, ಹಾಗಾದರೆ ಹೇಗೆ ತೆಗೆದುಕೊಳ್ಳಬೇಕೆಂದರೆ – ಆತ್ಮನೇ ಸತ್ಯವಾದ ಪದಾರ್ಥವು, ಅದಕ್ಕಿಂತ ಬೇರೆ ಯಾವುದೂ ಇಲ್ಲವೇ ಇಲ್ಲ ಎಂಬ ತಿಳಿವಳಿಕೆಯಿಲ್ಲದ್ದರಿಂದ ಅಜ್ಞಾತನಾದ ಆತ್ಮನೇ ಅನಾತ್ಮರೂಪದಿಂದ ತೋರುತ್ತಾನೆ ಎಂದು (ಅಜ್ಞಾನಕ್ಕೂ ಮಿಥ್ಯಾಜ್ಞಾನಕ್ಕೂ) ನಿಮಿತ್ತನೈಮಿತ್ತಿಕಭಾವವನ್ನು ತಿಳಿಯಬೇಕು (ಅಂದರೆ ತಿಳಿಯದ್ದರಿಂದ ತಪ್ಪಾಗಿ ತಿಳಿಯುತ್ತಾನೆ ಎಂದರ್ಥ). ಇದನ್ನು ವಾರ್ತಿಕಕಾರರೂ (ಸಹ) ಹೇಳಿರುತ್ತಾರೆ – **ಹೇಗೆ ಹಗ್ಗವನ್ನರಿಯದೇ ಇರುವುದರಿಂದ ಹಾವೇ ಮುಂತಾದ ವಿಕಾರಗಳು ಆಗುವವೋ ಅದರಂತೆ ಆತ್ಮನನ್ನು ತಿಳಿಯದೇ ಇರುವುದರಿಂದ ತೇಜಸ್ಸು, ಅಪ್ಪು, ಪೃಥಿವೀ**

---

೧. "ಮಿಥ್ಯಾಜ್ಞಾನನಿಮಿತ್ತಃ" ಎಂಬ ಸಮಸ್ತಪದದಲ್ಲಿ "ನಿಮಿತ್ತಃ" ಎಂಬ ಪದವನ್ನು ಬಿಡಿಸಿ ಕೇವಲ ಮಿಥ್ಯಾಜ್ಞಾನ ಎಂಬ ಪದವನ್ನು ಹಿಂದಿರುವ ಅವಿವೇಕೇನ ಎಂಬ ಪದದೊಡನೆ ಆಕಾಂಕ್ಷಿಸಿ ಅವಿವೇಕೋತ್ಥಂ ಮಿಥ್ಯಾಜ್ಞಾನಂ ಎಂದು ಹೇಗೆ ಸಮಾಸವಾಗುತ್ತದೆ ? ಎಂಬ ಆಕ್ಷೇಪಕ್ಕೆ ಪರಿಹಾರವಿದು. ವಿಶೇಷಸಂದರ್ಭದಲ್ಲಿ ವ್ಯಾಕರಣಶಾಸ್ತ್ರದಲ್ಲಿ ಒಪ್ಪಿಗೆ ಇರುವುದೇ ಇದಕ್ಕೆ ಪರಿಹಾರ.

ಸಾಂಖ್ಯಾನಾಮಿವ ಸಿದ್ಧಾಂತೇ ಲಭ್ಯತೇ ಕಾರಣಾಂತರಮ್" ॥ (ಬೃ. ವಾ. ೪-೪-೧೭೮, ೧೭೯) ಇತಿ । ಯದಿ ಹ್ಯಯಂ ಲೋಕೋ ವಿವಿಚ್ಯಾತ್ಮಾನ-ಮನಾತ್ಮಾನಂ ಚ ಸ್ವರೂಪತೋ ನಿರ್ಧಾರಣಂ ಕುರ್ಯಾತ್, ತತ ಏವಂ ವಿರುದ್ಧಸ್ವಭಾವಯೋರಿತರೇತರತ್ವಂ ಇತರೇತರಧರ್ಮವತ್ತ್ವಂ ಚಾರೋಪ್ಯ ನ ವ್ಯವಹರೇತ್ । ವಿವೇಕಾಭಾವಾತ್ತು ತಯೋಃ ಸ್ವಭಾವಮಜಾನನ್ ಮಿಥ್ಯೈವಾತತ್ಸ್ವಭಾವಂ ಸಮಾರೋಪಯನ್ ಸತ್ಯಸ್ವರೂಪೇ ಚಿದಾತ್ಮನ್ಯ-ನೃತಸ್ಯ ದೇಹಾದೇರ್ಜನ್ಮಮರಣಜರಾವ್ಯಾಧ್ಯಾದಿಧರ್ಮಾನಧ್ಯಸ್ಯ, ತದ್ವೈಪರೀತ್ಯೇನ ಚೈತನ್ಯಾದೀಂಶ್ಚ ವಿಷಯಿಧರ್ಮಾನ್ ದೇಹಾದಿಷ್ವಧ್ಯಸ್ಯ ವ್ಯವಹರನ್ ಸಂಸಾರಾನರ್ಥಮನುಭವತೀತಿ ನ ಚಿತ್ರಮ್ । ಅತೋ ಮಿಥ್ಯಾಜ್ಞಾನನಿಮಿತ್ತ ಏವಾಯಂ ವ್ಯವಹಾರಃ ॥

ಯತ್ತೂಕ್ತಂ – ಚಿದಾತ್ಮಸ್ವಭಾವೋ ವಿರುಣದ್ಧಿ ಜಡಸ್ವಭಾವಂ, ತತ್ಕಥಂಚನ

---

**ಎಂಬ ವಿಕಾರಗಳು (ತೋರುತ್ತವೆ). (ಇಡೀ) ವೇದಾಂತಸಿದ್ಧಾಂತದಲ್ಲಿ ಗೊತ್ತಿಲ್ಲದ ಆತ್ಮನಿಗಿಂತ ಬೇರೆಯಾಗಿ ಸಾಂಖ್ಯರು ಹೇಳುವ ಹಾಗೆ ಬೇರೊಂದು ಕಾರಣವು ಸಿಗುವುದಿಲ್ಲವಷ್ಟೇ ?** (ಬೃ. ವಾ ೪-೪-೧೭೮,೧೭೯.). ಒಂದು ವೇಳೆ ಜನರು ಆತ್ಮಾನಾತ್ಮರುಗಳನ್ನು ವಿಂಗಡಿಸಿಕೊಂಡು ಸ್ವರೂಪದಿಂದ (ಯಥಾವತ್ತಾಗಿ) ನಿರ್ಧರಿಸಿಕೊಂಡವ-ರಾದರೆ, ಆಗ ವಿರುದ್ಧಸ್ವಭಾವದ್ದಾದ ಒಂದನ್ನಿನ್ನೊಂದನ್ನಾಗಿ ಆಗಲೀ ಒಂದರಲ್ಲಿ ಇನ್ನೊಂದರ ಧರ್ಮವನ್ನು ಹುಟ್ಟುಹಾಕಿಕೊಂಡಾಗಲೀ ವ್ಯವಹರಿಸುತ್ತಿರಲಿಲ್ಲ. ವಿವೇಕವಿಲ್ಲದ್ದರಿಂದಲಾದರೋ ಅವೆರಡರ ಸ್ವಭಾವವನ್ನು ತಿಳಿಯದೇ ಸುಳ್ಳು ಸುಳ್ಳಾಗಿಯೇ – ಸತ್ಯಸ್ವರೂಪನಾದ ಚಿದಾತ್ಮನಾದ (ಸ್ವರೂಪದಲ್ಲಿ) ಸುಳ್ಳಾದ ದೇಹವೇ ಮುಂತಾದವುಗಳ ಹುಟ್ಟು, ಸಾವು, ಮುಪ್ಪು, ರೋಗವೇ ಮುಂತಾದ ಧರ್ಮಗಳನ್ನು ಹುಟ್ಟುಹಾಕಿಕೊಂಡು, ಆದಕ್ಕೆ ವಿರುದ್ಧವಾಗಿ ದೇಹಾದಿಗಳಲ್ಲಿ – ವಿಷಯಿಯಾದ ಆತ್ಮನ ಚೈತನ್ಯವೇ ಮುಂತಾದ ಧರ್ಮಗಳನ್ನು ಹುಟ್ಟುಹಾಕಿಕೊಂಡು ವ್ಯವಹರಿಸುತ್ತಾ ಸಂಸಾರಾನರ್ಥವನ್ನು ಅನುಭವಿ-ಸುತ್ತಿದ್ದಾರೆ ಎಂಬುದರಲ್ಲಿ ಆಶ್ಚರ್ಯವೇನಿಲ್ಲ. ಆದ್ದರಿಂದ ಮಿಥ್ಯಾಜ್ಞಾನ-ನಿಮಿತ್ತವಾಗಿಯೇ ಈ ವ್ಯವಹಾರವು ಎಂಬುದು (ಸಿದ್ಧವಾಯಿತು).

ಚಿದಾತ್ಮಸ್ವಭಾವವು ಜಡಸ್ವಭಾವವನ್ನು ತಡೆಗಟ್ಟುತ್ತದೆ, ಆದರಿಂದ

ಪರಸ್ಪರತಾದಾತ್ಮ್ಯಂ ಪರಸ್ಪರತ್ರ ಧರ್ಮಸಂಕ್ರಮಣಂ ವಾ ನ ಸಂಭವತೀತಿ, ತತ್ತಥೈವಾಸ್ತು । ಯತ್ಪುನಸ್ತತ ಏವ ಹೇತೋರಧ್ಯಾಸೋ ನಾಸ್ತೀತಿ ಭವಿತುಂ ಯುಕ್ತಮಿತಿ, ತತ್ತರ್ಕಮಾತ್ರಮಿತಿ ನಾದ್ರಿಯತೇ, ದೃಷ್ಟವಿರೋಧಾತ್ । ನ ಹಿ ನ ದೃಶ್ಯತೇಽಧ್ಯಾಸಃ । ನ ಚ ಮಿಥ್ಯಾಜ್ಞಾನಸ್ಯ ಯುಕ್ತ್ಯನುಸರಣಂ ಸ್ವಭಾವಃ, ಯೇನ ಯುಕ್ತಿವಿಹೀನತ್ವಾನ್ನಾಸ್ತ್ಯಧ್ಯಾಸ ಇತ್ಯಪಿ ಸ್ಯಾತ್ । ತಥಾಚೋಕ್ತಂ ನೈಷ್ಕರ್ಮ್ಯಸಿದ್ಧೌ – "ಸೇಯಂ ಭ್ರಾಂತಿರ್ನಿರಾಲಂಬಾ ಸರ್ವನ್ಯಾಯವಿರೋಧಿನೀ । ಸಹತೇ ನ ವಿಚಾರಂ ಸಾ ತಮೋ ಯದ್ವದ್ದಿವಾಕರಮ್" (ನೈ. ಸಿ. ೩–೬೬) ಇತಿ । ತಸ್ಮಾನ್ಮಿಥ್ಯಾಜ್ಞಾನ-ಮಧ್ಯಾಸಾಪರಪರ್ಯಾಯಂ ಯಥಾವರ್ಣಿತಮಸ್ತೀತಿ ತನ್ನಿಮಿತ್ತಶ್ಚ ಲೋಕವ್ಯವಹಾರಃ ಇತಿ ಚ ತ್ವಯಾಪ್ಯಂಗೀಕರಣೀಯಂ ದೃಷ್ಟಮನುಸರತೇತಿ

---

ಒಂದಿನ್ನೊಂದಾಗುವುದಾಗಲೀ ಒಂದರ ಧರ್ಮವು ಇನ್ನೊಂದಕ್ಕೆ ಸೇರುವುದಾಗಲೀ ಹೇಗೂ ಆಗಲಾರದು ಎಂದು ಏನು ಹೇಳಿತ್ತು; ಆ ವಿಷಯವು, (ಸದ್ಯಕ್ಕೆ) ಹಾಗೇಯೇ ಇರಲಿ, ಇನ್ನೇನು ಅದೇ ಕಾರಣದಿಂದಲೇ ಅಧ್ಯಾಸವು ಇರುವುದಕ್ಕೆ ಕಾರಣವಿಲ್ಲವೆಂಬುದೇ ಸರಿಯಾದದ್ದು ಎಂದು (ಏನು ಹೇಳಲಾಗುತ್ತದೆ) – ಅದು ಕೇವಲ ತರ್ಕವಷ್ಟೇ ಆದ್ದರಿಂದ – ಅದನ್ನು ಒಪ್ಪುವುದಕ್ಕಾಗುವುದಿಲ್ಲ, ಏಕೆಂದರೆ ಅದು ಕಂಡದ್ದಕ್ಕೆ ವಿರುದ್ಧವಾಗುತ್ತದೆ. ಅಧ್ಯಾಸವು ಕಂಡುಬರುವುದಿಲ್ಲವೆಂಬುದು ಇಲ್ಲವಷ್ಟೆ ? ಮತ್ತು ಮಿಥ್ಯಾಜ್ಞಾನಕ್ಕೆ ಯುಕ್ತಿಯನ್ನು ಅನುಸರಿಸುವ ಸ್ವಭಾವವಿಲ್ಲ, ಹಾಗೇನಾದರೂ ಇದ್ದಿದ್ದರೆ (ಇಂಥ) ಅಧ್ಯಾಸವು (ಇರುವುದೆಂಬುದು) ಯುಕ್ತಿಹೀನವಾದ್ದರಿಂದ ಇಲ್ಲವೇ ಇಲ್ಲವೆಂತಲೂ ಹೇಳಬಹುದಾಗಿತ್ತು. (ಆದರೆ ಹಾಗಿಲ್ಲ), ಇದೇ ವಿಷಯವನ್ನು ನೈಷ್ಕರ್ಮ್ಯಸಿದ್ಧಿಯಲ್ಲೂ ಹೇಳಿದೆ. "ಆ ಈ ಭ್ರಾಂತಿಯು ಆಶ್ರಯವಿಲ್ಲದ್ದು, ಎಲ್ಲಾ ಯುಕ್ತಿಗೂ ವಿರುದ್ಧವಾದದ್ದು, ಸೂರ್ಯನನ್ನು ಕತ್ತಲೆಯು ಹೇಗೆ ಸಹಿಸಿಕೊಳ್ಳುವುದಿಲ್ಲವೋ ಅದರಂತೆ ವಿಚಾರವನ್ನು ಸಹಿಸಿಕೊಳ್ಳುವಂಥದ್ದಲ್ಲ" (ನೈ. ಸಿ. ೩–೬೬) (ಎಂದಿದೆ). ಆದ್ದರಿಂದ ನಾವು ಮೇಲೆ ವರ್ಣನೆ ಮಾಡಿದಂತೆ ಅಧ್ಯಾಸ ಎಂಬುದಕ್ಕೆ ಇನ್ನೊಂದು ಪರ್ಯಾಯಪದವಾದ ಮಿಥ್ಯಾಜ್ಞಾನವೆಂಬುದು ಇದೆಯೆಂತಲೂ ಅದರ ನಿಮಿತ್ತವಾಗಿ ಲೋಕವ್ಯವಹಾರವು ಸಾಗುತ್ತಿದೆಯೆಂತಲೂ ಕಂಡದ್ದಕ್ಕೆ ಅನುಗುಣವಾಗಿರುವುದನ್ನು ಒಪ್ಪಬೇಕೆಂದು ಒಪ್ಪುವ (ಪೂರ್ವಪಕ್ಷಿಯಾದ)

ಭಾವಃ ॥

**ಅಪಿ ಚ ಸತ್ಯಾನೃತೇ ಮಿಥುನೀಕೃತ್ಯಾಯಂ ವ್ಯವಹಾರಃ** । ಯದ್ರೂಪೇಣ ನಿಶ್ಚಿತಂ ಸದ್ಯತ್ ತದ್ರೂಪಂ ನ ವ್ಯಭಿಚರತಿ ತತ್ಸತ್ಯಮ್ । ಯತ್ತು ಯದ್ರೂಪೇಣ ನಿಶ್ಚಿತಂ ತದ್ರೂಪಂ ವ್ಯಭಿಚರತಿ ತದನೃತಮಿತ್ಯಭಿಯುಕ್ತಾಃ । ತಥಾ ಚ ಚಿದಾತ್ಮಾ ಸ್ವರೂಪಾವ್ಯಭಿಚಾರಾತ್ ಸತ್ಯಃ । ಅನೃತಶ್ಚಾನಾತ್ಮಾ, ಸ್ವರೂಪವ್ಯಭಿಚಾರಾತ್ । ಯದ್ಯಪ್ಯಾತ್ಮಾ ಅಸ್ಮತ್ಪ್ರತ್ಯಯಗೋಚರತ್ವಂ ವ್ಯಭಿಚರತಿ ಸುಷುಪ್ತ್ಯಾದೌ, ಅನಾತ್ಮಾಪಿ ಸ್ವಂ ದೇಹಾದಿರೂಪಂ ನ ವ್ಯಭಿಚರತಿ ಯಾವದ್ವ್ಯವಹಾರಮ್ । ತಥಾಪಿ ನಾಸ್ಮತ್ಪ್ರತ್ಯಯಗೋಚರತ್ವಮಾತ್ಮನೋ ನಿಶ್ಚಿತಂ ಸ್ವರೂಪಮ್ । ಚಿತ್ತ್ವಂ ತು ತಸ್ಯ ಸ್ವಂ ನಿಶ್ಚಿತಂ ರೂಪಂ, ತಚ್ಚ ನ ವ್ಯಭಿಚರತಿ ಸಃ । ಏವಂ ದೇಹಾದಿರಪಿ ಕೇನಚಿನ್ನಿಶ್ಚಿತೇನ ರೂಪೇಣ ನ ತಿಷ್ಠತಿ ಸಮ್ಯಙ್ನಿರೂಪ್ಯಮಾಣಃ । ಸರ್ವೋ ಹ್ಯನಾತ್ಮಾ ನ ಕೇನಚಿದೇಕೇನ

---

ನೀನೂ ಸಹ ಒಪ್ಪಲೇಬೇಕು.

ಇನ್ನೂ ಒಂದು ಏನೆಂದರೆ – ಸತ್ಯಾನೃತಗಳನ್ನು ಕಲೆಬೆರಕೆ ಮಾಡಿಕೊಂಡು ಈ ವ್ಯವಹಾರವು (ಎಂದು ಆಚಾರ್ಯರು ತಿಳಿಸಿರುತ್ತಾರೆ, ಅದರ ಅಭಿಪ್ರಾಯವನ್ನು ನೋಡೋಣ). ಯಾವುದು ಯಾವ ರೂಪದಿಂದಿದೆಯೆಂದು ನಿಶ್ಚಿತವಾಗಿದೆಯೋ ಆ ರೂಪವನ್ನು ಬಿಡದೇ ಇದ್ದರೆ ಅದು ಸತ್ಯವೆ(ನಿಸುತ್ತದೆ). ಯಾವುದು ಯಾವ ರೂಪದಿಂದಿರುವುದೆಂದು ತಿಳಿದುಬಂದು ಪುನಃ ಅದು ಆ ರೂಪವನ್ನು ಬದಲಾಯಿಸಿದರೆ ಅದು ಸುಳ್ಳೆಂದು ತಿಳಿದವರು ಹೇಳುತ್ತಾರೆ. (ಹೀಗಿರುವಾಗ) ಚಿದಾತ್ಮನು ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳದೇ ಇರುವುದರಿಂದ ಸತ್ಯವು, ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುವುದರಿಂದ ಅನಾತ್ಮವು ಅನೃತವು. ಆತ್ಮನು ನಾನೆಂಬ ರೂಪದಿಂದ ಗೋಚರ-ವಾಗುತ್ತಿರುವುದನ್ನು ಸುಷುಪ್ತ್ಯಾದಿ (ಅವಸ್ಥೆಗಳಲ್ಲಿ) ಕಳಚಿಕೊಳ್ಳುವವನಾದರೂ, ಹಾಗೆಯೇ ಅನಾತ್ಮವಾದ ದೇಹಾದಿಗಳು ವ್ಯವಹಾರವಿರುವವರೆಗೆ ತಮ್ಮ ರೂಪವನ್ನು ಕಳಚಿಕೊಳ್ಳುವದಿಲ್ಲವೆಂಬುದಿದ್ದರೂ, ನಾನೆಂಬ ರೂಪದಿಂದ ಗೋಚರವಾಗುತ್ತಿರುವುದು ಆತ್ಮನ ನಿಶ್ಚಿತ ಸ್ವರೂಪವೇನಲ್ಲ. "ಅರಿವು" ಎಂಬುದು ಅವನ ನಿಶ್ಚಿತಸ್ವರೂಪವು, ಅದು ಬಿಟ್ಟುಹೋಗುವುದಿಲ್ಲ. ಹೀಗೆಯೇ ದೇಹಾದಿಗಳು ಸರಿಯಾಗಿ ನಿರೂಪಿಸಲ್ಪಟ್ಟದ್ದಾದರೆ ಯಾವುದೊಂದು ನಿಶ್ಚಿತರೂಪದಿಂದಲೂ ಇರುವಂಥವುಗಳಲ್ಲ. ಯಾವಾಗಲೂ

ರೂಪೇಣಾವಸ್ಥಾತುಂ ಶಕ್ನೋತಿ, ನಿತ್ಯವಿಕಾರಿತ್ವಾತ್ । ಯೇನಕೇನ-ಚಿದ್ರೂಪೇಣಾವಸ್ಥಿತಮಿವಾತ್ಮಾನಂ ದರ್ಶಯನ್ ತದಾತ್ವ ಏವ ಸಮ್ಯಙ್ನಿರೂಪಣೇನ ತದ್ರೂಪಂ ವ್ಯಭಿಚರತೀತ್ಯವಗಮ್ಯತೇ। ಸ್ವಕಾರಣವ್ಯತಿರೇಕೇಣಾನುಪಲಬ್ಧೇಃ । ಅನಾತ್ಮಸ್ವರೂಪಮಾತ್ರಂ ಚಾತ್ಯಂತಂ ವ್ಯಭಿಚರತಿ ಸುಷುಪ್ತ್ಯಾದಾವಿತಿ ಸುಪ್ರಸಿದ್ಧಮೇತತ್ । ತದೇವಂ ಸತ್ಯ ಆತ್ಮಾ, ಅನೃತಶ್ಚಾನಾತ್ಮೇತ್ಯವಸೀಯತೇ। ತಯೋಶ್ಚ ಯನ್ಮಿಥುನೀಕರಣಂ ಬುದ್ಧೌ ಮಿಥಃಸಂಬಂಧತಾಪಾದನಮ್, ತದೇತನ್ಮಿಥ್ಯಾಜ್ಞಾನಮಧ್ಯಾಸ-ಶಬ್ದವ್ಯಪದೇಶ್ಯಮ್ । ಅತಶ್ಚ ಸಿದ್ಧಂ ಮಿಥ್ಯಾಜ್ಞಾನನಿಮಿತ್ತೋ ಲೋಕವ್ಯವಹಾರ ಇತಿ । ಮಿಥ್ಯಾವಿಷಯಕಂ ಹಿ ಜ್ಞಾನಂ ಮಿಥ್ಯೇತ್ಯುಚ್ಯತೇ । ಮಿಥ್ಯಾ ಚಾತ್ರ ವಿಷಯವಿಷಯಿಣೋರ್ಮಿಥುನೀಭಾವಃ । ಅಮಿಥುನಸ್ಯ ಸತೋ ಮಿಥುನಸ್ಯೇವ ಭಾವೋ ಹಿ ಮಿಥುನೀಭಾವೋ ನಾಮ । ನ ಚ ಸತ್ಯಾನೃತಯೋಃ

---

ವಿಕಾರವಾಗುತ್ತಿರುವುದೇ ಎಲ್ಲಾ ಅನಾತ್ಮವಸ್ತುವಿನ ಸ್ವಭಾವವಾದ್ದರಿಂದ ಯಾವ ಒಂದು ನಿಶ್ಚಿತರೂಪದಿಂದಲೂ ಅದು ನಿಂತಿರುವುದಕ್ಕೆ ಸಮರ್ಥವಲ್ಲ. (ಅನಾತ್ಮವು) ಯಾವದೋ ಒಂದು ರೂಪದಿಂದಿರುವಂತೆ ತನ್ನನ್ನು ತೋರಿಸಿಕೊಂಡಿದ್ದು, ಆಗಲೇ ಅದನ್ನು ಸರಿಯಾಗಿ ಪರೀಕ್ಷೆಮಾಡಿ ಗೊತ್ತುಮಾಡುವುದರಿಂದ ಆ ರೂಪವನ್ನು ಅದು ಕಳಚಿಕೊಳ್ಳುತ್ತದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ (ಅದು) ತನ್ನ ಕಾರಣಕ್ಕಿಂತ ಬೇರೆಯಾಗಿ ತೋರದೇ ಇರುವುದರಿಂದ (ಹಾಗಿರುತ್ತದೆ). ಸುಷುಪ್ತಿಯೇ ಮುಂತಾದ (ಅವಸ್ಥೆಯಲ್ಲಿ) ಅನಾತ್ಮಸ್ವರೂಪವೇ ಸಂಪೂರ್ಣವಾಗಿ ಇಲ್ಲವಾಗಿರುತ್ತದೆ ಎಂಬುದು ಸುಪ್ರಸಿದ್ಧವಾಗಿರುತ್ತದೆ. ಈ ರೀತಿಯಾಗಿ ಆತ್ಮನು ಸತ್ಯನು ಅನಾತ್ಮವು ಸುಳ್ಳು ಎಂದು ಗೊತ್ತಾಗುತ್ತದೆ. ಅವೆರಡನ್ನು ಕಲಬೆರಕೆ ಮಾಡುವುದು ಎಂದರೆ ಬುದ್ಧಿಯಲ್ಲಿ ಪರಸ್ಪರ ಅವೆರಡಕ್ಕೆ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಎಂಬುದೇನಿದೆ ಅದು ಮಿಥ್ಯಾಜ್ಞಾನ, ಅಧ್ಯಾಸ ಎನ್ನಿಸಿಕೊಳ್ಳುತ್ತದೆ. ಆದ್ದರಿಂದ ಮಿಥ್ಯಾಜ್ಞಾನನಿಮಿತ್ತವಾಗಿಯೇ ಲೋಕವ್ಯವಹಾರವು ಎಂಬುದು ಸಿದ್ಧವಾಯಿತು. ಸುಳ್ಳಾದ (ವಸ್ತುವನ್ನು) ವಿಷಯಮಾಡಿಕೊಂಡಿರುವ ಜ್ಞಾನವೇ ಅಲ್ಲವೆ ಮಿಥ್ಯೆ ಎನ್ನಿಸಿಕೊಳ್ಳುತ್ತದೆ. ಇಲ್ಲಿ ವಿಷಯವನ್ನೂ ವಿಷಯಿಯನ್ನೂ ಕಲಬೆರಕೆಮಾಡುವುದೆಂಬುದು ಸುಳ್ಳಾದದ್ದು, ಬೆರಿಕೆಯಾಗದಿರುವುದನ್ನು ಬೆರಿಕೆಯಾದಂತೆ ಮಾಡಿಕೊಳ್ಳುವುದೇ ಮಿಥುನೀಭಾವವು. ಸುಳ್ಳನ್ನೂ ನಿಜವನ್ನೂ

ಮಿಥುನೀಕರಣೇ ವಾಸ್ತವಿಕಂ ತಾದಾತ್ಮ್ಯಂ ವಾಸ್ತವಿಕಸ್ತದ್ಧರ್ಮಾಣಾಂ ಪರಸ್ಪರತ್ರ ಭಾವೋ ವಾ ಅಪೇಕ್ಷ್ಯತೇ । ಯಥಾ ಹಿ ರಜ್ಜುಶುಕ್ತಿಕಾದಿಷು ಸರ್ಪರಜತಾದಿಸಮಾರೋಪಃ ಸಂಭವತಿ ತಾದಾತ್ಮ್ಯಂ ವಾಸ್ತವಂ ಧರ್ಮಸಂಕ್ರಾಂತಿಂ ಚ ವಿನಾಪಿ ವಿವೇಕಜ್ಞಾನಾಭಾವಾದೇವ ಕೇವಲಾತ್, ಏವಂ ಪ್ರಕೃತೇಽಪ್ಯಾತ್ಮಾನಾತ್ಮನೋರ್ಮಿಥಃಸಮಾರೋಪಃ ಸಂಭವತ್ಯೇವ ತದ್ವಿವೇಕಜ್ಞಾನಾಭಾವಾದಿತಿ ಜ್ಞೇಯಮ್ ॥

ಅಥ ವಿವೇಕ ಏವ ಕಸ್ಮಾನ್ನ ಭವತಿ ತಥಾ ಚ ನಾಧ್ಯಾಸ ಇತ್ಯತ್ರೋತ್ತರಂ **ನೈಸರ್ಗಿಕೋಽಯಂ ಲೋಕವ್ಯವಹಾರ** ಇತಿ । ಯದ್ಯಪಿ ನೈಸರ್ಗಿಕ ಇತಿ ವ್ಯವಹಾರವಿಶೇಷಣಂ ಲಕ್ಷ್ಯತೇ ಭಾಷ್ಯೇ, ತಥಾಪಿ ವ್ಯವಹಾರಸ್ಯ ನೈಸರ್ಗಿಕತ್ವೋಕ್ತ್ಯಾ ತತ್ಕಾರಣಸ್ಯಾಧ್ಯಾಸಸ್ಯೈವಾವಿವೇಕನಿಮಿತ್ತಸ್ಯ ನೈಸರ್ಗಿಕತ್ವಮುಕ್ತಮಿತಿ ಧ್ಯೇಯಮ್ । ಇದಮುಕ್ತಂ ಭವತಿ । ನಿಸರ್ಗತ

---

ಬೆರಿಕೆಮಾಡುವದಕ್ಕೆ ನಿಜವಾದ ತಾದಾತ್ಮ್ಯವಾಗುವುದಾಗಲೀ ಅಥವಾ ನಿಜವಾಗಿ ಅವುಗಳ ಧರ್ಮವನ್ನು ಒಂದನ್ನು ಇನ್ನೊಂದರಲ್ಲಿ ಸೇರಿಸುವುದಾಗಲೀ ಬೇಕಾಗಿರುವುದಿಲ್ಲ. ಹೇಗೆ ಹಗ್ಗ, ಕಪ್ಪೆಚಿಪ್ಪು ಮುಂತಾದವುಗಳಲ್ಲಿ ಕೇವಲ ವಿವೇಕಜ್ಞಾನವಿಲ್ಲದಿರುವುದೆಂಬ ಒಂದೇ ಕಾರಣದಿಂದ ಅವುಗಳಿಗೆ ವಾಸ್ತವಿಕವಾಗಿ ತಾದಾತ್ಮ್ಯವಾಗಲೀ ಗುಣಸಂಬಂಧವಾಗಲೀ ಇಲ್ಲವಾದರೂ ಹಾವು, ಬೆಳ್ಳಿ ಮುಂತಾದ ಆರೋಪವು ಆಗುತ್ತದೆಯೋ ಹಾಗೆಯೇ ಇಲ್ಲಿಯೂ ಆತ್ಮಾನಾತ್ಮರುಗಳಿಗೆ ವಿವೇಕಜ್ಞಾನವಿಲ್ಲದಿರುವುದರಿಂದ ಪರಸ್ಪರ ಆರೋಪವಾಗುತ್ತದೆ ಎಂಬುದು ಹೊಂದಿಯೇ ಹೊಂದುತ್ತದೆ ಎಂದು ತಿಳಿಯಬೇಕು.

ಇನ್ನು ವಿವೇಕವೇ ಏತಕ್ಕಾಗುವುದಿಲ್ಲ ? ಆದಾಗಿ ಬಿಟ್ಟರೆ ಅಧ್ಯಾಸವೇ ಆಗುವುದಿಲ್ಲವಲ್ಲ ! ಎಂದರೆ ಅದಕ್ಕೆ ಉತ್ತರವು **"ನೈಸರ್ಗಿಕೋಽಯಂ ಲೋಕವ್ಯವಹಾರಃ (ಈ ಲೋಕವ್ಯವಹಾರವು ಸ್ವಾಭಾವಿಕವಾಗಿದೆ)."** (ಎಂಬುದು). ಭಾಷ್ಯದಲ್ಲಿ **"ಸ್ವಾಭಾವಿಕವಾದ"** ಎಂಬುದು ವ್ಯವಹಾರಕ್ಕೆ ವಿಶೇಷಣವಾಗಿ ಹೇಳಿದರೂ ಅದನ್ನು ಹೇಳುವುದರ ಮೂಲಕ ಅದಕ್ಕೆ ಕಾರಣವಾದ ಅವಿವೇಕನಿಮಿತ್ತವಾದ ಅಧ್ಯಾಸವೇ ಸ್ವಾಭಾವಿಕವಾದದ್ದೆಂದು ಹೇಳಿದೆ ಎಂದು ತಿಳಿಯಬೇಕು. ಇಲ್ಲಿ ಇಷ್ಟು ಹೇಳಿದಂತಾಗುತ್ತದೆ –

ಏವಾಯಮವಿವೇಕಸ್ತತ್ಕೃತಾಧ್ಯಾಸಶ್ಚ ನಾತ್ರ ಕಾರಣಮನ್ವೇಷ್ಟವ್ಯಯಮ್ । ನ ಹ್ಯಸ್ತಿ ಕಾರಣಮವಿವೇಕೇಽತ್ಯಂತಂ ವಿವಿಕ್ತಯೋಃ । ನಾಪ್ಯಧ್ಯಾಸೇಽತ್ಯಂತ-ವಿರುದ್ಧಸ್ವಭಾವಯೋಃ । ಅವಿಚಾರಸ್ವಭಾವ ಏವ ತ್ವತ್ರಾಪರಾಧ್ಯತಿ । ಇತ್ಥಂಸ್ವಭಾವೋ ಹಿ ಲೋಕೋ ಯದಯಮನುಪಪನ್ನಮಪ್ಯತ್ಮಾ-ನಾತ್ಮನೋರಧ್ಯಾಸಮವಿವೇಕೇನ ಕೃತ್ವಾ ವ್ಯವಹರತ್ಯಹಮಿದಂ ಮಮೇದಮಿತಿ ಚೇತಿ ॥

ತದೇವಂ ಮಿಥ್ಯಾಧ್ಯಾಸನಿಬಂಧನತ್ವಾಲ್ಲೋಕವ್ಯವಹಾರಸ್ಯ, ಸಿದ್ಧಮಿದಂ ನ ವಸ್ತುಸನ್ ಸಂಸಾರಃ, ಅಪಿ ತು ಭ್ರಾಂತಿಕೃತ ಏವೇತಿ । ದೃಷ್ಟಂ ಚ ಮಿಥ್ಯಾಜ್ಞಾನಸ್ಯ ಸಮ್ಯಗ್ಜ್ಞಾನವಿನಾಶ್ಯತ್ವಮ್ । ಅತಃ ಸಂಸಾರಾನರ್ಥಸ್ಯ ಮಿಥ್ಯಾಜ್ಞಾನಕೃತಸ್ಯ ವಿನಾಶಾಂಯ ಕ್ರಿಯಮಾಣೋಽರ್ಥವಾನೇವ ಜ್ಞಾನೋಪದೇಶಃ । ಅತಃ ಸಪ್ರಯೋಜನೋಽಯಂ ತತ್ತ್ವಜ್ಞಾನಾರ್ಥಂ

---

ಅಜ್ಞಾನವೂ ಅದರಿಂದಾದ ಅಧ್ಯಾಸವೂ (ಜನರಿಗೆ) ಸ್ವಭಾವದಿಂದಲೇ ಇರುತ್ತದೆ, ಇದಕ್ಕೆ ಕಾರಣವನ್ನು ಹುಡುಕಬೇಕಾಗಿಲ್ಲ. ಅತ್ಯಂತವಾಗಿ ಬೇರೆ ಬೇರೆಯಾಗಿರುವ ಸ್ಥಳದಲ್ಲಿ ಅವಿವೇಕವಾಗಿರುವುದಕ್ಕೆ ಕಾರಣವೇನೂ ಇಲ್ಲವಷ್ಟೆ ? ಅತ್ಯಂತ ವಿರುದ್ಧಸ್ವಭಾವವಾದ ಸ್ಥಳದಲ್ಲೂ ಅಧ್ಯಾಸವಾಗುವುದಕ್ಕೆ ಕಾರಣದ (ಅವಶ್ಯಕತೆ ಇಲ್ಲ). ವಿಚಾರವನ್ನು ಮಾಡದೇ ಇರುವುದೆಂಬ ಸ್ವಭಾವವೇ ಇಲ್ಲಿ ಅಪರಾಧಿಯಾಗಿರುತ್ತದೆ. ಆತ್ಮಾನಾತ್ಮರುಗಳ ಅಧ್ಯಾಸವು ಹೊಂದದೇ ಇದ್ದರೂ ಅದನ್ನು ಅವಿವೇಕದಿಂದ ಮಾಡಿಕೊಂಡು "ನಾನಿಂಥವನು", "ನನ್ನದಿದು" ಎಂದು ಏನು ವ್ಯವಹಾರವನ್ನು ಮಾಡುತ್ತಿದ್ದಾರೆ, ಇದೇ ಅಲ್ಲವೇ ? ಎಲ್ಲಾ ಜನರ ಸ್ವಭಾವವು.

ಹೀಗೆ ಲೋಕವ್ಯವಹಾರವು ಸುಳ್ಳಾದ ಅಧ್ಯಾಸಕ್ಕೆ ಕಟ್ಟುವಡೆದದ್ದಾದ್ದರಿಂದ (ಈ ಸಂಸಾರವು) ವಸ್ತುರೂಪದಿಂದಿರುವುದಲ್ಲವೆಂತಲೂ ಭ್ರಾಂತಿಯಿಂದಲೇ ಆದದ್ದೆಂತಲೂ ಸಿದ್ಧವಾಯಿತು. ಮಿಥ್ಯಾಜ್ಞಾನವು ಸಮ್ಯಗ್ಜ್ಞಾನದಿಂದಲೇ ಹೋಗುವಂಥದ್ದೆಂತಲೂ ಸಿದ್ಧವಾಯಿತು. ಆದ್ದರಿಂದ ಮಿಥ್ಯಾಜ್ಞಾನದಿಂದಾದ ಸಂಸಾರವೆಂಬ ಅನರ್ಥದ ನಿವಾರಣೆಗಾಗಿ (ಯಾವ) ಜ್ಞಾನೋಪದೇಶವನ್ನು ಮಾಡುತ್ತಾರೆ ಅದೂ ಅರ್ಥವುಳ್ಳದ್ದೆಂದಾಯಿತು. ಆದ್ದರಿಂದ ತತ್ತ್ವಜ್ಞಾನಕ್ಕಾಗಿ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಿರುವುದು ಪ್ರಯೋಜನವುಳ್ಳದ್ದೆಂದು

ಜಿಜ್ಞಾಸೋಪನ್ಯಾಸ ಇತ್ಯಭಿಪ್ರಾಯಃ ॥

**೫. ಅವಿದ್ಯೋಪಾದಾನವಾದನಿರಾಕರಣಮ್**–"ಮಿಥ್ಯಾಜ್ಞಾನ-ನಿಮಿತ್ತಃ" ಇತ್ಯೇತದ್ಭಾಷ್ಯಂ ಕೇಚಿದನ್ಯಥಾ ವ್ಯಾಚಕ್ಷತೇ । ಕಥಮ್ ? ಮಿಥ್ಯಾ ಚ ತದಜ್ಞಾನಂ ಚ ಮಿಥ್ಯಾಜ್ಞಾನಂ । ಮಿಥ್ಯಾಜ್ಞಾನಂ ನಿಮಿತ್ತಮ್ ಉಪಾದಾನಂ ಯಸ್ಯ ಸೋಽಯಮಧ್ಯಾಸೋ ಮಿಥ್ಯಾಜ್ಞಾನನಿಮಿತ್ತಃ । ಅಜ್ಞಾನಂ ಜ್ಞಾನಾಭಾವ ಇತಿ ಶಂಕಾನಿರಾಸಾರ್ಥಂ ಕಿಲ ಮಿಥ್ಯಾಪದಮ್, ಭಾವರೂಪತ್ವಾದಜ್ಞಾನಸ್ಯ। ಅಜ್ಞಾನಸ್ಯೋಪಾದಾನತ್ವೇಽಪಿ ಸಂಸ್ಕಾರಕಾಲಕರ್ಮಾದಿರೂಪೇಣ ಪರಿಣತಮೇತದೇವಾಧ್ಯಾಸನಿಮಿತ್ತಂ ಭವತೀತಿ ದ್ಯೋತಯಿತುಂ ಕಿಲ ನಿಮಿತ್ತಪದಗ್ರಹಣಮ್ । ಸ್ವೇನ ತು ರೂಪೇಣೇದಮಜ್ಞಾನಮುಪಾದಾನ-ಮೇವಾಧ್ಯಾಸಸ್ಯೇತಿ (ರ.ಪ್ರ,ನ್ಯಾ.ನಿ. ಪುಟ ೧೦) । ತದೇತದ್ವ್ಯಾಖ್ಯಾನಂ ನಿಷ್ಪ್ರಯೋಜನಂ ಭಾಷ್ಯಾಕ್ಷರಬಾಹ್ಯಂ ಯುಕ್ತಿಬಾಹ್ಯಂ ಚೇತಿ ಶ್ರೇಯಸ್ಕಾಮ್ಯೈ-

---

ತೀರ್ಮಾನವಾಯಿತು.

**೫. ಅವಿದ್ಯೆಯೇ (ಸಂಸಾರಕ್ಕೆ) ಉಪಾದಾನಕಾರಣವೆಂಬ ವಾದದ ನಿರಾಕರಣೆಯು** – "ಮಿಥ್ಯಾಜ್ಞಾನನಿಮಿತ್ತಃ" ಎಂಬ ಭಾಷ್ಯವನ್ನು ಕೆಲವರು ತಪ್ಪಾಗಿ ವ್ಯಾಖ್ಯಾನಮಾಡುತ್ತಾರೆ. ಹೇಗೆಂದರೆ ?– "(ಮಿಥ್ಯಾ ಚ ತತ್ ಅಜ್ಞಾನಂ ಚ ಮಿಥ್ಯಾಜ್ಞಾನಮ್)" "ಸುಳ್ಳಾದದ್ದೂ ಮತ್ತು ಅದು ಅಜ್ಞಾನವು ಆದದ್ದೇ ಮಿಥ್ಯಾಜ್ಞಾನವು". ಮಿಥ್ಯಾಜ್ಞಾನವು ನಿಮಿತ್ತವು ಎಂದರೆ ಉಪಾದಾನವು ಯಾವ (ಅಧ್ಯಾಸಕ್ಕೋ) ಆ ಈ ಅಧ್ಯಾಸವು ಮಿಥ್ಯಾಜ್ಞಾನನಿಮಿತ್ತವು. ಅಜ್ಞಾನವು ಎಂದರೆ ಜ್ಞಾನದ ಅಭಾವವು ಎಂದು (ಯಾರಾದರೂ) ಸಂದೇಹವನ್ನು ಮಾಡಿಯಾರು, ಅದನ್ನು ಕಳೆಯುವದಕ್ಕಂತೆ ಈ ಮಿಥ್ಯಾ ಎಂಬ ಪದವನ್ನು ಉಪಯೋಗಿಸಿರುವುದು ! ಏಕೆಂದರೆ ಅಜ್ಞಾನವು ಭಾವರೂಪವಾದದ್ದಾದ್ದರಿಂದ (ಇದು ಹೀಗೆ). ಅಜ್ಞಾನವು ಉಪಾದಾನ-ವಾಗಿದ್ದರೂ ಸಂಸ್ಕಾರ, ಕಾಲ, ಕರ್ಮವೇ ಮುಂತಾದ ರೂಪದಿಂದ ಇದು ಪರಿಣಾಮಗೊಂಡು ಅಧ್ಯಾಸಕ್ಕೆ ನಿಮಿತ್ತವಾಗಿದೆ ಎಂಬುದನ್ನು ತೋರಿಸುವುದಕ್ಕಂತೆ ಈ ನಿಮಿತ್ತವೆಂಬ ಪದವನ್ನು (ಭಾಷ್ಯದಲ್ಲಿ) ಗ್ರಹಿಸಿರುವುದು ! ತನ್ನ ರೂಪದಿಂದಲಾದರೋ ಈ ಅಜ್ಞಾನವು ಅಧ್ಯಾಸಕ್ಕೆ ಉಪಾದಾನವಾಗಿಯೇ ಇರುತ್ತದೆ. ಈ ವ್ಯಾಖ್ಯಾನವು ನಿಷ್ಪ್ರಯೋಜನವೂ,

ರುಪೇಕ್ಷ್ಯಮ್ । ಸರ್ವಸ್ಯಾನಾತ್ಮಪ್ರಪಞ್ಚಸ್ಯಾಧ್ಯಾಸಿಕತ್ವಮುಪವರ್ಣಯಿತುಂ ಭಾಷ್ಯಪ್ರವೃತ್ತಿರಿತ್ಯತಿರೋಹಿತಮ್ । ತದುಪವರ್ಣನೇ ಚ ಪ್ರಯೋಜನಂ ಸಕಲಸಂಸಾರಸ್ಯ ಮಿಥ್ಯಾತ್ವಸಿದ್ಧಿರ್ಜ್ಞಾನಬಾಧ್ಯತ್ವಸಿದ್ಧಿಶ್ಚೇತಿ ಸರ್ವಸಂಪ್ರತಿ-ಪನ್ನಮೇತತ್ । ತದತ್ರ ಪ್ರಕೃತಂ ಸಪ್ರಯೋಜನಂ ಚಾಧ್ಯಾಸೋಪವರ್ಣನಂ ವಿಹಾಯಾಪ್ರಕೃತಮಪ್ರಸಿದ್ಧಮಧ್ಯಾಸೋಪಾದಾನಮಜ್ಞಾನಂ ಮುಧೈವ ವರ್ಣ್ಯತ ಇತಿ ನಿಷ್ಪ್ರಯೋಜನಂ ತಾವದ್ವ್ಯಾಖ್ಯಾನಮ್ । ನನು ನಾಪ್ರಕೃತಮಜ್ಞಾನಮ್, ಬ್ರಹ್ಮಜ್ಞಾನನಿಬರ್ಹಣೀಯತಯಾ ತಸ್ಯೈವ ಸಂಸೂತ್ರಣಾತ್ ಪ್ರಥಮಸೂತ್ರೇ । ನಾಪ್ಯಪ್ರಸಿದ್ಧಮ್ । "ಅಹಮಜ್ಞಃ" ಇತ್ಯನುಭವಾದೇವ ತತ್ಪ್ರಸಿದ್ಧೇಃ । ಅತ ಏವ ನ ನಿಷ್ಪ್ರಯೋಜನಂ ತದುಪವರ್ಣನಮ್ । ಅಧ್ಯಾಸಕಾರಣನಿರೂಪಣಾರ್ಥತ್ವಾತ್ । ವಿದಿತಕಾರಣಸ್ಯ

---

ಭಾಷ್ಯಾಕ್ಷರಕ್ಕೆ ಹೊರಚ್ಚಾದದ್ದೂ, ಯುಕ್ತಿಗೂ ಹೊರಚ್ಚಾದ್ದರಿಂದ ಶ್ರೇಯಸ್ಕಾಮರಾದವರು ಅದನ್ನು ತಾತ್ಸಾರಮಾಡತಕ್ಕದ್ದು. ಅದು-ಎಲ್ಲಾ ಅನಾತ್ಮಪ್ರಪಂಚವೂ ಅಧ್ಯಾಸಪೂರ್ವಕವಾದದ್ದೆಂದು ವರ್ಣಿಸುವುದಕ್ಕಾಗಿ ಭಾಷ್ಯವು ಹೊರಟಿರುವುದು ಎಂಬುದನ್ನು-ಮೀರಿಹೋದಂತಾಯಿತು. ಅಧ್ಯಾಸವನ್ನು ವರ್ಣನೆ ಮಾಡುವುದಾದರೋ ಎಲ್ಲಾ ಸಂಸಾರವೂ ಮಿಥ್ಯಾರೂಪವಾದದ್ದೇ ಎಂಬುದು ಸಿದ್ಧವಾಗುವುದು ಮತ್ತು ಅದು ಜ್ಞಾನದಿಂದಲೇ ಬಾಧೆಯಾಗುವುದೆಂಬುದು ಸಿದ್ಧವಾಗುವುದೆಂಬುದೇ ಪ್ರಯೋಜನವೆಂಬುದು ಎಲ್ಲರಿಗೂ ಒಪ್ಪಿಗೆಯಾಗಿರುವ ವಿಚಾರವಿದು. ಆದ್ದರಿಂದ ಪ್ರಕೃತವೂ ಪ್ರಯೋಜನವುಳ್ಳದ್ದೂ ಆದ ಅಧ್ಯಾಸದ ವರ್ಣನೆಯನ್ನು ಬಿಟ್ಟು ವ್ಯರ್ಥವಾಗಿ ಅಪ್ರಕೃತವೂ ಅಪ್ರಸಿದ್ಧವೂ ಆದ ಅಧ್ಯಾಸಕ್ಕೆ ಉಪಾದಾನವಾದ ಅಜ್ಞಾನವನ್ನು ವರ್ಣಿಸುವುದೂ ಆಗಿದೆ ಎಂದಾದ್ದರಿಂದ ಆ ವ್ಯಾಖ್ಯಾನವು ನಿಷ್ಪ್ರಯೋಜನವಾದದ್ದೆಂದು (ತಿಳಿಯಬೇಕು). ಅಲ್ಲಾ ! ಅಜ್ಞಾನವು ಅಪ್ರಕೃತವಾದದ್ದೇನಲ್ಲ, ಏಕೆಂದರೆ ಮೊದಲನೆಯ ಸೂತ್ರದಲ್ಲಿ ಬ್ರಹ್ಮಜ್ಞಾನದಿಂದ ಕಳೆದುಕೊಳ್ಳಬೇಕಾದದ್ದೆಂದು "ಅದನ್ನೇ"ಎಂದು ಹೇಳಿರುವುದರಿಂದ. ಅಷ್ಟೇ ಅಲ್ಲ, ಅಪ್ರಸಿದ್ಧವೂ ಅಲ್ಲ. ಏಕೆಂದರೆ "ನಾನು ಅಜ್ಞನು" ಎಂಬ ಅನುಭವದಿಂದಲೇ ಅದು ಪ್ರಸಿದ್ಧವಾಗಿರುವುದರಿಂದ, ಆದ್ದರಿಂದಲೇ ಅದನ್ನು ವರ್ಣನೆಮಾಡುವುದರ (ಮೂಲಕ) ಅಧ್ಯಾಸಕ್ಕೆ ಕಾರಣವನ್ನು ನಿರೂಪಣೆ ಮಾಡಿರುವುದರಿಂದ ನಿಷ್ಪ್ರಯೋಜನವೂ ಅಲ್ಲವಲ್ಲಾ!.

ಹ್ಯಧ್ಯಾಸಸ್ಯ ಸಮೂಲಘಾತೇ ಪಯತ್ನಃ ಸಫಲ ಇತಿ । ನೈತದೇವಮ್ । ಲೋಕಪ್ರಸಿದ್ಧಮಜ್ಞಾನಂ ಮುಕ್ತ್ವಾ ತ್ವದಭಿಮತಮಜ್ಞಾನಂ ಸೂತ್ರಕಾರೇಣ ಸೂಚಿತಮಿತ್ಯತ್ರ ಗಮಕಾಭಾವಾತ್ । ನ ಚ "ಅಹಮಜ್ಞಃ" ಇತ್ಯನುಭವಾತ್ ತ್ವದುಕ್ತಾಜ್ಞಾನಸಿದ್ಧಿಃ । ಲೋಕಪ್ರಸಿದ್ಧಾಜ್ಞಾನವಿಷಯಕತ್ವೇನೈವ ಯಥೋಕ್ತಾನುಭವಸ್ಯೋಪಪಕ್ಷಯಾತ್। ನ ಹಿ "ಅಹಮಜ್ಞಃ" ಇತ್ಯನುಭವೇ ತ್ವದುತ್ಪ್ರೇಕ್ಷಿತಮಜ್ಞಾನಂ ಪ್ರತಿಯಂತಿ ಲೌಕಿಕಾಃ ಪರೀಕ್ಷಕಾ ವಾ । ನ ಚಾಧ್ಯಾಸಕಾರಣಗವೇಷಣಂ ಯುಕ್ತಿಮತ್ । ಅಧ್ಯಾಸಸ್ಯಾನಾದಿತ್ವಾತ್ । ಯಥಾ ಚೈತತ್ತಥಾಗ್ರೇ ಸ್ಫುಟಯಿಷ್ಯತೇ । ತಸ್ಮಾತ್ ಸುಷ್ಠೂಕ್ತಂ ತ್ವದಭಿಮತಾಜ್ಞಾನಮಪ್ರಕೃತಮಪ್ರಸಿದ್ಧಂ ನಿಷ್ಪ್ರಯೋಜನಂ ಚ ತದ್ವರ್ಣನಮಿತಿ । ಭಾಷ್ಯಾಕ್ಷರಬಾಹ್ಯಂ ಚೈತದ್ವ್ಯಾಖ್ಯಾನಮ್ । ನ ಹಿ ಭಾಷ್ಯೇ ಕ್ವಚಿದಪ್ಯಧ್ಯಾಸೋಪಾದಾನಮಜ್ಞಾನಮಿತಿ ವರ್ಣಿತಮುಪಲಭ್ಯತೇ । ಮಿಥ್ಯಾಜ್ಞಾನ-

---

ಅಧ್ಯಾಸಕ್ಕೆ ಮೂಲವು ಗೊತ್ತಾದರೆ ಬೇರು ಸಮೇತ ಕಿತ್ತುಹಾಕುವುದಕ್ಕೆ (ಮಾಡುವ) ಪ್ರಯತ್ನವು ಸಫಲವಾಗುತ್ತದೆಯಲ್ಲವೆ ? ಎಂದರೆ ಇದು ಸರಿಯಲ್ಲ. ಲೋಕಪ್ರಸಿದ್ಧವಾದ ಅಜ್ಞಾನವನ್ನು ಬಿಟ್ಟು ನಿಮಗೆ ಒಪ್ಪಿಗೆಯಾದ ಅಜ್ಞಾನವನ್ನು ಕುರಿತು ಸೂತ್ರಕಾರರೂ (ಸೂತ್ರದಲ್ಲಿ) ಸೂಚಿಸಿದ್ದಾರೆಂಬುದಕ್ಕೆ (ಯಾವ) ಪ್ರಮಾಣವೂ ಇರುವುದಿಲ್ಲ. "ನಾನು ಅಜ್ಞನು" ಎಂಬ ಅನುಭವದಿಂದ ನೀವು ಹೇಳುವ ಅಜ್ಞಾನವೇನೂ ಸಿದ್ಧಿಯಾಗುವುದಿಲ್ಲ. ಏಕೆಂದರೆ ಲೋಕಪ್ರಸಿದ್ಧವಾದ ಅಜ್ಞಾನವನ್ನು ವಿಷಯಮಾಡಿಕೊಳ್ಳುವುದರಿಂದಲೇ (ನಾನು ಅಜ್ಞನು) ಎಂಬ ಅನುಭವವು ಕೊನೆಗಾಣುತ್ತದೆ. ವಿಚಾರವನ್ನು ಮಾಡುವವರಾಗಲೀ ಲೋಕದ (ಸಾಮಾನ್ಯ) ಜನರಾಗಲೀ "ನಾನು ಅಜ್ಞನು" ಎಂಬ ಅನುಭವದಲ್ಲಿ ನೀವು ಊಹೆಮಾಡಿರುವ ಅಜ್ಞಾನವನ್ನು ತಿಳಿಯುವುದಿಲ್ಲವಷ್ಟೆ? (ಇನ್ನೊಂದು ಮಾತೇನೆಂದರೆ) ಅಧ್ಯಾಸವು ಅನಾದಿಯಾಗಿರುವುದರಿಂದ ಅಧ್ಯಾಸಕ್ಕೆ ಕಾರಣವನ್ನು ಹುಡುಕುವುದೆಂಬುದೂ ಯುಕ್ತಿಗೆ ಹೊಂದುವದಲ್ಲವಷ್ಟೆ ? ಇದು ಹೇಗೆ ಎಂಬುದನ್ನು ಮುಂದೆ ಸ್ಪಷ್ಟಪಡಿಸಲಾಗುವದು. ಆದ್ದರಿಂದ ನೀವು ಇಷ್ಟಪಟ್ಟು ವರ್ಣಿಸಿರುವ ಅಜ್ಞಾನವು ಅಪ್ರಕೃತವೂ, ಅಪ್ರಸಿದ್ಧವೂ, ನಿಷ್ಪ್ರಯೋಜನವಾದದ್ದೆಂದು ನಾವು ಹೇಳಿದ್ದು ಸರಿಯಾಯಿತು. ಭಾಷ್ಯಾಕ್ಷರಕ್ಕೂ ಈ ವ್ಯಾಖ್ಯಾನವು ಹೊರಚ್ಚಾಗಿದೆ. (ಪ್ರಸ್ಥಾನತ್ರಯ)ಭಾಷ್ಯದಲ್ಲೆಲ್ಲೂ ಅಜ್ಞಾನವು ಅಧ್ಯಾಸಕ್ಕೆ ಉಪಾದಾನ

ನಿಮಿತ್ತೋ ವ್ಯವಹಾರ ಇತ್ಯೇವ ತು ಭಾಷ್ಯಮ್ । ತತ್ರ ಮಿಥ್ಯಾಜ್ಞಾನಂ ನಾಮಾಧ್ಯಾಸ ಏವೇತ್ಯವಗಮ್ಯತೇ । "ಅಧ್ಯಾಸೋ ಮಿಥ್ಯಾಪ್ರತ್ಯಯರೂಪಃ", (ಭಾ.ಭಾ. ೫೮) "ಸಶರೀರತ್ವಸ್ಯ ಮಿಥ್ಯಾಜ್ಞಾನನಿಮಿತ್ತತ್ವಾತ್," "ಮಿಥ್ಯಾ-ಪ್ರತ್ಯಯನಿಮಿತ್ತತ್ವಾತ್ ಸಶರೀರತ್ವಸ್ಯ" (ಸೂ.ಭಾ. ೧-೧-೪) "ಮಿಥ್ಯಾ-ಜ್ಞಾನನಿಮಿತ್ತಃ ಶರೀರಸ್ಯೋಪಭೋಗಃ" (ಸೂ.ಭಾ. ೧-೨-೮, ಭಾ.ಭಾ. ೧೬೨) "ಮಿಥ್ಯಾಜ್ಞಾನಕಲ್ಪಿತ ಉಪಭೋಗಃ" (ಸೂ.ಭಾ. ೧-೨-೮,ಭಾ.ಭಾ ೧೬೨) "ಮಿಥ್ಯಾಭಿಮಾನಭ್ರಮನಿಮಿತ್ತ ಏವ ದುಃಖಾನುಭವಃ" (ಸೂ.ಭಾ. ೧-೨-೮) "ಯಥಾರ್ಥಬುದ್ಧಿಃ ಪೂರ್ವನಿವಿಷ್ಟಾಂ ಯಾ ಮಿಥ್ಯಾಬುದ್ಧೇರ್ನಿವರ್ತಿಕಾ ಭವತಿ" (ಸೂ.ಭಾ. ೩-೩-೯, ಭಾ.ಭಾ ೩೩೧) ಇತ್ಯಾದಿಪ್ರಯೋಗ-ದರ್ಶನಾತ್ । ತಥಾ ಚ ಮಿಥ್ಯಾಜ್ಞಾನನಿಮಿತ್ತೋ ವ್ಯವಹಾರ ಇತ್ಯಧ್ಯಾಸಪೂರ್ವಕೋಽಯಂ ವ್ಯವಹಾರ ಇತ್ಯೇವ ವ್ಯಾಖ್ಯಾನೇ ಸ್ವಾರಸ್ಯೇನ ಸಂಭವತಿ ಕಿಮಿತ್ಯಕ್ಷರಬಾಹ್ಯಮೇವ ಮಿಥ್ಯಾಭೂತಾಜ್ಞಾನೋ-

---

ಕಾರಣವು ಎಂದು ವರ್ಣಿಸಿರುವದು ಕಂಡುಬರುವುದಿಲ್ಲವಷ್ಟೆ ? ಮಿಥ್ಯಾಜ್ಞಾನ ನಿಮಿತ್ತವಾಗಿಯಾದರೋ ವ್ಯವಹಾರವು ಎಂದಿಷ್ಟೇ (ಇಲ್ಲಿ) ಭಾಷ್ಯವಿರುವುದು. ಇಲ್ಲಿ ಮಿಥ್ಯಾಜ್ಞಾನವೆಂದರೆ ಅಧ್ಯಾಸವು ಎಂದೇ ಗೊತ್ತಾಗುತ್ತದೆ. "ಅಧ್ಯಾಸವು ಮಿಥ್ಯಾಪ್ರತ್ಯಯರೂಪವು", "ಸಶರೀರನಾಗಿರುವೆನೆಂಬುದು ಮಿಥ್ಯಾಜ್ಞಾನನಿಮಿತ್ತವಾದ್ದರಿಂದ", "ಸಶರೀರತ್ವವು ಮಿಥ್ಯಾಪ್ರತ್ಯಯ-ನಿಮಿತ್ತವಾದ್ದರಿಂದ" (ಸೂ. ಭಾ ೧-೧-೪, ಭಾ.ಭಾ. ೫೮), "ಮಿಥ್ಯಾಜ್ಞಾನ-ನಿಮಿತ್ತವಾಗಿಯೇ ಶರೀರದ ಉಪಭೋಗವು" ಎಂಬುದು, (ಸೂ. ಭಾ ೧-೨-೮, ಭಾ.ಭಾ. ೧೬೨) "ಉಪಭೋಗವು ತಪ್ಪುತಿಳಿವಳಿಕೆಯಿಂದ ಕಲ್ಪಿತವಾಗಿದೆ" (ಸೂ.ಭಾ. ೧-೨-೮, ಭಾ.ಭಾ. ೧೬೨) "ದುಃಖಾನುಭವವು ಹುಸಿಯಾದ ಅಭಿಮಾನದಿಂದಾದ ಭ್ರಮೆಯ ನಿಮಿತ್ತವಾಗಿಯೇ ಆಗುತ್ತದೆ" (೧-೨-೮), "ಮೊದಲು ಹೊಕ್ಕದ್ದಾದ ತಪ್ಪುತಿಳಿವಳಿಕೆಯನ್ನು ಸರಿಯಾದ ತಿಳಿವಳಿಕೆಯು ಕಳೆಯುತ್ತದೆ" (ಸೂ. ಭಾ. ೩-೩-೯, ಭಾ.ಭಾ. ೩೩೧), ಇದೇ ಮೊದಲಾದ (ಸ್ಥಳಗಳಲ್ಲಿ) ಈ ರೀತಿ ಪ್ರಯೋಗವನ್ನು ಮಾಡಿರುವುದರಿಂದ (ಇದು ಗೊತ್ತಾಗುತ್ತದೆ). ಮಿಥ್ಯಾಜ್ಞಾನನಿಮಿತ್ತವಾದವ್ಯವಹಾರವು (ಎಂಬ ಭಾಷ್ಯವಾಕ್ಯಕ್ಕೆ) ಅಧ್ಯಾಸಪೂರ್ವಕವಾದದ್ದಾಗಿದೆ ಈ ವ್ಯವಹಾರವು ಎಂದು ವಿವರಣೆ (ಕೊಟ್ಟರೆ) ಸರಳವಾಗಿ ಹೊಂದುತ್ತದೆ (ಎಂದು ಗೊತ್ತಾಗುವಾಗ)

ಪಾದಾನಕ ಇತಿ ವ್ಯಾಖ್ಯಾಯತ ಇತಿ ಪ್ರಷ್ಟವ್ಯೋ ಭವಾನ್ । ಯುಕ್ತಿಬಾಹ್ಯಂ ಚೈತದ್ವ್ಯಾಖ್ಯಾನಮ್ । ಕಥಮ್ ? ಅಧ್ಯಾಸೋಪಾದಾನತ್ವೇ-ನಾಭಿಮತಮಜ್ಞಾನಂ ಕಿಮಾಧ್ಯಾಸಿಕಮ್ ಉತ ನೇತಿ ವಕ್ತವ್ಯಮ್ । ತತ್ರಾಧ್ಯಾಸಿಕತ್ವೇ ಕಥಂ ಪೂರ್ವಸಿದ್ಧಸ್ಯಾಧ್ಯಾಸಸ್ಯ ಸ್ವಕಲ್ಪಿತಾಜ್ಞಾನೋ-ಪಾದಾನಕತ್ವಂ ಸಂಭವಿ ? ಅನಾಧ್ಯಾಸಿಕತ್ವೇ ತ್ವಾತ್ಮವತ್ ತಸ್ಯಾಪಿ ಸತ್ಯತ್ವಮೇವ ಪ್ರಾಪ್ನೋತ್ಯನಿಷ್ಟಪ್ರಸಂಗಃ । ಯಚ್ಚೋಕ್ತಂ ಕಾಲಕರ್ಮಾದೇರ-ಧ್ಯಾಸನಿಮಿತ್ತತ್ವಮ್ ಅಜ್ಞಾನಸ್ಯ ಚ ಕಾಲಕರ್ಮಾದಿರೂಪೇಣ ಪರಿಣಾಮ ಇತಿ । ನ ತತ್ರ ಕಿಂಚಿನ್ಮಾನಮುಪಲಭಾಮಹೇ । ಕಿಂಚ ಕಾಲಕರ್ಮಾದೀನಾ-ಮಧ್ಯಾಸನಿಮಿತ್ತತ್ವಮಭ್ಯುಪಗಚ್ಛತಾ ತೇಷಾಮಾಧ್ಯಾಸಿಕತ್ವಮಭ್ಯುಪಗಮ್ಯತೇ ನ ವೇತಿ ವಕ್ತವ್ಯಮ್ । ಯದ್ಯಭ್ಯುಪಗಮ್ಯತೇ ಕಥಮಧ್ಯಾಸಕಲ್ಪಿತಾನಾಂ ತೇಷಾಂ ತಮೇವಾಧ್ಯಾಸಂ ಪ್ರತಿ ನಿಮಿತ್ತಕಾರಣತ್ವಮ್ ? ಅಥ ನಾಭ್ಯುಪ-ಗಮ್ಯತೇ, ತೇಷಾಮಪ್ಯಾತ್ಮವತ್ ಸತ್ಯತ್ವಂ ಪ್ರಾಪ್ನೋತೀತ್ಯನಿಷ್ಟಪ್ರಸಂಗಃ ।

---

ಅದೇತಕ್ಕೆ ಭಾಷ್ಯಾಕ್ಷರಕ್ಕೂ ಹೊರಚ್ಚಾದ (ಅಧ್ಯಾಸಕ್ಕೆ) **ಮಿಥ್ಯಾಭೂತವಾದ ಅಜ್ಞಾನವು ಕಾರಣವು** ಎಂಬ – ವ್ಯಾಖ್ಯಾನವನ್ನು ನೀವು ಮಾಡುತ್ತಿರುವಿರಿ? ಎಂದು ಕೇಳಬೇಕಾಗುತ್ತದೆ. ಇದು ಯುಕ್ತಿಗೂ ಹೊರಚ್ಚಾಗಿದೆ. ಹೇಗೆಂದರೆ – ಅಧ್ಯಾಸಕ್ಕೆ ಉಪಾದಾನಕಾರಣವೆಂದು ನೀವು ಒಪ್ಪಿರುವ ಅಜ್ಞಾನವು ಅಧ್ಯಾಸ (ಕಲ್ಪಿತ)ವಾದದ್ದೆ ಅಥವಾ ಅಲ್ಲವೇ? ಅದೂ ಕಲ್ಪಿತವಾದದ್ದೆ-ನ್ನುವುದಾದರೆ ಮೊದಲು ಸಿದ್ಧವಾದ ಅಧ್ಯಾಸವು ತನ್ನಿಂದ ಸಿದ್ಧವಾಗುವ ಅಜ್ಞಾನವನ್ನು ಉಪಾದಾನಕಾರಣವುಳ್ಳದ್ದಾಗುವುದೆಂಬುದು ಹೇಗೆ? (ಅದು) ಅಧ್ಯಸ್ತವಲ್ಲವೆನ್ನುವುದಾದರೆ ಆತ್ಮನಂತೆ ಅದೂ ಸತ್ಯವೇ ಎಂಬ ಅನಿಷ್ಟಪ್ರಸಂಗವು ಬಂದೊದಗುತ್ತದೆ. ಅಜ್ಞಾನವು ಕಾಲಕರ್ಮಾದಿರೂಪದಿಂದ ಪರಿಣಾಮಗೊಳ್ಳುವುದಾದ್ದರಿಂದ ಅಧ್ಯಾಸಕ್ಕೆ ಕಾಲಕರ್ಮಾದಿಗಳು ನಿಮಿತ್ತವು ಎಂದು (ಹಿಂದೆ ಪೂ.ಪ. ಏನು) ಹೇಳಿತ್ತು, ಅದಕ್ಕೆ ಯಾವ ಪ್ರಮಾಣವನ್ನೂ ನಾವು ಕಾಣೆವು, ಅಷ್ಟೇ ಅಲ್ಲ, ಕಾಲಕರ್ಮಾದಿಗಳು ಅಧ್ಯಾಸಕ್ಕೆ ನಿಮಿತ್ತಗಳು ಎಂದು ಒಪ್ಪುವವರು ಆ (ಕಾಲಕರ್ಮಾದಿಗಳು) ಅಧ್ಯಾಸದಿಂದ (ತೋರುವಂಥವುಗಳು) ಎಂದು ಒಪ್ಪುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕು. ಒಪ್ಪಿಕೊಂಡರೆ ಅಧ್ಯಾಸದಿಂದ ತೋರುವ ಅವುಗಳೇ ಪುನಃ ಅಧ್ಯಾಸಕ್ಕೆ ಕಾರಣವೆಂಬುದು ಹೇಗೆ? ಎಂಬುದನ್ನು ಹೇಳಬೇಕಾಗುತ್ತದೆ.

ಕಿಂ ಚಾನ್ಯತ್ । ಮಿಥ್ಯಾಭೂತಮಜ್ಞಾನಮಧ್ಯಾಸೋಪಾದಾನಕಾರಣಮಿತಿ ಕಾಲಕರ್ಮಾದಿಲಕ್ಷಣತನ್ನಿಮಿತ್ತರೂಪೇಣಾಪಿ ಪರಿಣಮತ ಇತಿ ಚ ಬ್ರುವತಾ ವಕ್ತವ್ಯಮ್, ಕಿಂ ಕಾರ್ಯಕಾರಣಭಾವೋ ನಾಧ್ಯಾಸಿಕಃ, ಪರಿಣಾಮಕ್ರಿಯಾ ವಾ ನಾಧ್ಯಾಸಿಕೀತಿ । ಯದ್ಯುಭಯತ್ರಾಪ್ಯಾಧ್ಯಾಸಿಕತ್ವಾಭ್ಯುಪಗಮಃ, ತತೋಽಧ್ಯಾಸಕೃತಸ್ಯ ಕಥಮಧ್ಯಾಸಹೇತುತ್ವಮ್ ? ಅಥಾನಭ್ಯುಪಗಮಃ, ತರ್ಹಿ ಸಂಸಾರಕಾರಣಮಜ್ಞಾನಮಧ್ಯಾಸಾದಿರೂಪೇಣ ಸದೈವ ಪರಿಣಂಸ್ಯತೇ ಕಸ್ತಸ್ಯ ನಿವಾರಕಃ ಸ್ಯಾತ್ ? ನ ಹ್ಯನಧ್ಯಸ್ತಂ ಜ್ಞಾನೇನ ಶಕ್ಯನಿವರ್ತನಮಿತಿ ವೃಥೈವ ಜ್ಞಾನೋಪದೇಶ ಇತಿ ಪುನರಪ್ಯನಿಷ್ಟಪ್ರಸಂಗ ಏವ । ಅಪಿ ಚಾಧ್ಯಾಸಸ್ಯ ಕಾರಣಮವಿದ್ಯೇತಿ ವದಂತಸ್ತತ ಏವ ಕಾಲೇ ತಯೋರವಿದ್ಯಾಧ್ಯಾಸಯೋಃ ಪೂರ್ವಾಪರೀಭಾವಂ ಪ್ರಸಞ್ಜಯಂತಃ, ಪುನರಪ್ಯವಿದ್ಯಾ ಕಾಲರೂಪೇಣ ಪರಿಣಮತ ಇತಿ ಕಾಲಸ್ಯಾಪಿ ಕಾರ್ಯತಾಂ ಸ್ವಪ್ರಾಕ್ಕಾಲಾಪೇಕ್ಷತಾಂ ಚ

---

ಇನ್ನು ಒಪ್ಪುವುದಿಲ್ಲವೆಂದರೆ ಆತ್ಮನಂತೆ ಅವೂ ಸತ್ಯವಾದವುಗಳೆಂಬ ಅನಿಷ್ಟವು ಬಂದೊದಗುತ್ತದೆ. ಇನ್ನೂ ಏನೆಂದರೆ – ಸುಳ್ಳಾದ ಅಜ್ಞಾನವು ಅಧ್ಯಾಸಕ್ಕೆ ಉಪಾದಾನಕಾರಣವೆಂತಲೂ ಕಾಲಕರ್ಮವೇ ಮುಂತಾದ ಅದರ ನಿಮಿತ್ತರೂಪದಿಂದಲೂ ಪರಿಣಾಮಗೊಳ್ಳುತ್ತದೆ ಎಂದು ಹೇಳುವವರಾದ ನೀವು ಕಾರ್ಯಕಾರಣಭಾವವು ಮತ್ತು ಪರಿಣಾಮಕ್ರಿಯೆಯು (ಇವೆರಡೂ) ಅಧ್ಯಾಸಪೂರ್ವಕವಾದದ್ದೇ ಅಥವಾ ಅಲ್ಲವೇ ? ಎಂಬುದನ್ನು ಹೇಳಬೇಕು. ಇವೆರಡೂ ಅಧ್ಯಾಸಪೂರ್ವಕವಾದದ್ದೇ ಎನ್ನುವುದಾದರೆ ಆಗ ಅಧ್ಯಾಸ- ದಿಂದಾದದ್ದು ಹೇಗೆ ತಾನೆ ಅಧ್ಯಾಸಕ್ಕೆ ಕಾರಣವಾಗುತ್ತದೆ ? ಇನ್ನು (ಅಧ್ಯಾಸಪೂರ್ವಕವಾದದ್ದೆಂದು) ಒಪ್ಪಿಕೊಳ್ಳದೇ ಹೋದರೆ ಆಗ ಅಧ್ಯಾಸಕ್ಕೆ ಕಾರಣವಾದ ಅಜ್ಞಾನವು ಯಾವಾಗಲೂ ಅಧ್ಯಾಸರೂಪದಿಂದ ಪರಿಣಾಮ- ಗೊಳ್ಳುತ್ತಲೇ ಇರುತ್ತದೆ. ! ಇದನ್ನು ತಡೆಗಟ್ಟುವವರು ಯಾರು? ಅಧ್ಯಸ್ತವಲ್ಲದ್ದು ಜ್ಞಾನದಿಂದ ತೊಲಗುವುದೆಂಬುದು ಹೊಂದುವುದಿಲ್ಲವಾದ್ದರಿಂದ ಆ ಪಕ್ಷದಲ್ಲಿ ಜ್ಞಾನೋಪದೇಶವು ವ್ಯರ್ಥವೆಂದಾಗುತ್ತದೆಯೆಂಬ ಅನಿಷ್ಟವು ಮತ್ತೆ ಬಂದೊದಗುತ್ತದೆ. ಮತ್ತೂ ಏನೆಂದರೆ – ಅಧ್ಯಾಸಕ್ಕೆ ಕಾರಣವು ಅವಿದ್ಯೆಯು ಎಂದು ಹೇಳುತ್ತಾ ಅದರಿಂದಲೇ ಅವೆರಡಕ್ಕೂ ಪೌರ್ವಾಪರ್ಯವನ್ನು ಕಾಲದಿಂದಲೇ ತೋರಿಸುತ್ತಾ (ಮತ್ತೆ) ಪುನಃ ಅವಿದ್ಯೆಯು ಕಾಲರೂಪದಿಂದ ಪರಿಣಾಮಗೊಳ್ಳುತ್ತದೆ ಎಂದು ಕಾಲವು ಕಾರ್ಯವಾಗಿದೆ ಮತ್ತು ತನ್ನ ಹಿಂದಿನ

ಬ್ರುವಂತೋ ಭವಂತಃ ಕಥಂ ನಾಪತ್ರಪಂತೇ ? ತದೇವಂ ನಿಷ್ಪ್ರಯೋಜನಂ ಭಾಷ್ಯಬರ್ಹಿಭೂತಂ ಯುಕ್ತಿವಿರುದ್ಧಂ ಚೇದಂ ಮಿಥ್ಯಾಭೂತಭಾವಾಜ್ಞಾನ-ವರ್ಣನಮಿತ್ಯಾಸ್ತಾಂ ತಾವತ್ ॥

---

ಕಾಲವನ್ನು ಅಪೇಕ್ಷಿಸಿಕೊಂಡದ್ದಾಗಿದೆ ಎಂದು ಹೇಳುತ್ತಾ ನೀವು ಹೇಗೆ ತಾನೆ ನಾಚಿಕೆಯನ್ನು ಪಡದೇ ಇದ್ದೀರಿ ? ಹೀಗೆ ನಿಷ್ಪ್ರಯೋಜನವೂ ಭಾಷ್ಯಕ್ಕೆ ಹೊರಚ್ಚಾದದ್ದೂ ಯುಕ್ತಿಗೆ ವಿರುದ್ಧವಾದದ್ದಾಗಿದೆ ಈ ಸುಳ್ಳಾದ ಭಾವರೂಪವಾದ ಅಜ್ಞಾನದ ವರ್ಣನೆಯು, ಎಂದು ತಿಳಿಸುತ್ತಾ (ಈ ವಿಚಾರವನ್ನು) ನಿಲ್ಲಿಸುವೆವು.

✸✸✸✸✸✸✸✸✸✸

# ೨. ಅಥಾಧ್ಯಾಸಲಕ್ಷಣಭಾಷ್ಯಮ್

ಆಹ – ಕೋಽಯಮಧ್ಯಾಸೋ ನಾಮೇತಿ? ಉಚ್ಯತೇ। ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ । ತಂ ಕೇಚಿದನ್ಯತ್ರಾನ್ಯಧರ್ಮಾಧ್ಯಾಸ ಇತಿ ವದಂತಿ । ಕೇಚಿತ್ತು ಯತ್ರ ಯದಧ್ಯಾಸಸ್ತದ್ವಿವೇಕಾಗ್ರಹನಿಬಂಧನೋ ಭ್ರಮ ಇತಿ । ಅನ್ಯೇ ತು ಯತ್ರ ಯದಧ್ಯಾಸಸ್ತಸ್ಯೈವ ವಿಪರೀತ-ಧರ್ಮತ್ವಕಲ್ಪನಾಮಾಚಕ್ಷತ ಇತಿ । ಸರ್ವಥಾಪಿ ತ್ವನ್ಯಸ್ಯಾನ್ಯಧರ್ಮಾವಭಾಸತಾಂ ನ ವ್ಯಭಿಚರತಿ । ತಥಾ ಚ ಲೋಕೇಽನುಭವಃ "ಶುಕ್ತಿಕಾ ಹಿ ರಜತವದವ-ಭಾಸತೇ", "ಏಕಶ್ಚಂದ್ರಃ ಸದ್ವಿತೀಯವದಿತಿ" ॥೨॥

---

# ೨. ಅಧ್ಯಾಸದ ಲಕ್ಷಣಭಾಷ್ಯವು

ಭಾಷ್ಯಾರ್ಥವು.– ಈ ಅಧ್ಯಾಸ ಎಂಬುದು ಯಾವುದು ? ಹೇಳುತ್ತೇವೆ. (ಕೇಳಿ). ಹಿಂದೆ ಕಂಡ (ಒಂದು ವಸ್ತು) ಮತ್ತೊಂದರಲ್ಲಿ ಸ್ಮೃತಿರೂಪವಾಗಿ ತೋರುವುದೇ (ಅಧ್ಯಾಸವು). ಇದನ್ನು ಕೆಲವರು ಒಂದು(ವಸ್ತು)ವಿನಲ್ಲಿ ಇನ್ನೊಂದರ ಧರ್ಮದ ಅಧ್ಯಾಸವು ಎನ್ನುತ್ತಾರೆ. (ಇನ್ನು) ಕೆಲವರಾದರೋ ಯಾವದರಲ್ಲಿ ಯಾವದರ ಅಧ್ಯಾಸ(ವಾಗುವದೋ) ಆ (ಎರಡನ್ನೂ) ವಿಂಗಡಿಸಿ ತಿಳಿದುಕೊಳ್ಳದ ನಿಮಿತ್ತದಿಂದ (ಆಗುವ) ಭ್ರಮೆ (ಎನ್ನುತ್ತಾರೆ). ಮತ್ತೆ ಕೆಲವರಾದರೋ ಯಾವದರಲ್ಲಿ ಯಾವದರ ಅಧ್ಯಾಸ(ವಾಗುತ್ತದೆಯೋ) ಅದಕ್ಕೇ ಬೇರೊಂದು ಧರ್ಮ(ವಿರುವಂತೆ) ಕಲ್ಪಿಸುವದು ಎಂದು ಹೇಳುತ್ತಾರೆ. ಇದು ಹೇಗೇ ಆಗಲಿ, ಒಂದು (ವಸ್ತು) ಮತ್ತೊಂದರ ಧರ್ಮವುಳ್ಳದ್ದಾಗಿ ತೋರುವದೆಂಬುದನ್ನು (ಅಧ್ಯಾಸವು) ಬಿಟ್ಟಿರುವದಿಲ್ಲ. 'ಕಪ್ಪೆಚಿಪ್ಪೇ ಬೆಳ್ಳಿಯಂತೆ ತೋರುತ್ತದೆ', 'ಒಬ್ಬ ಚಂದ್ರನೇ ಎರಡನೆಯ(ಚಂದ್ರ)ನೊಡನಿರುವಂತೆ (ತೋರುತ್ತಿದಾನೆ)' ಎಂದು ಲೋಕದಲ್ಲಿ ಅನುಭವವೂ ಹಾಗೆಯೇ (ಇರುತ್ತದೆ).

**೬. ಭಾಷ್ಯಸಂಬಂಧಃ** – ಏವಂ ತಾವದಹಂ ಮಮೇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ ಇತ್ಯೇತದಂತೇನ ಭಾಷ್ಯೇಣಾತ್ಮಾನಾತ್ಮನೋಸ್ತದ್ಧರ್ಮಾಣಾಂ ಚ ಪರಸ್ಪರಾಧ್ಯಾಸಃ ಸರ್ವಾನುಭವಸಿದ್ಧ ಇತ್ಯುಕ್ತಂ, ಪ್ರತಿಜ್ಞಾಮಾತ್ರಂ ತು ತತ್ । ಅಥ ತಾಮೇವ ಪ್ರತಿಜ್ಞಾಮಧ್ಯಾಸಲಕ್ಷಣನಿರೂಪಣಸಂಭಾವನಾಭ್ಯಾ-ಮುಪಪಾದ್ಯ ವ್ಯವಹಾರಸ್ಯ ಸರ್ವಸ್ಯೈವಾಧ್ಯಾಸಪೂರ್ವಕತ್ವಂ ಪ್ರದರ್ಶಯಿಷ್ಯನ್ ಲಕ್ಷಣನಿರೂಪಣಂ ತಾವದಾರಭತೇ ॥

**೭. ಅಧ್ಯಾಸಲಕ್ಷಣಂ ಬುಭುತ್ಸೋಃ ಪ್ರಶ್ನಃ** – "ಆಹ ಕೋಽಯ-ಮಧ್ಯಾಸೋ ನಾಮ" ಇತಿ ಲಕ್ಷಣಪ್ರಶ್ನೋ ಲಕ್ಷಣಾಕ್ಷೇಪೋ ವಾ । ನ ಹ್ಯಧ್ಯಾಸೋ ನಾಮೇದೃಶ ಇತ್ಯವಿಜ್ಞಾಯ "ಆತ್ಮಾನಾತ್ಮನೋರಿತರೇತರಾ-ಧ್ಯಾಸಃ ಸಂಭವತಿ ವಾ ನ ವಾ, ತತ್ಸಂಭವೇಽಪಿ ಲೋಕವ್ಯವಹಾರಸ್ತತ್ಪೂರ್ವಕ

---

**೬. ಭಾಷಕ್ಕೆ ಸಂಬಂಧವು** – ಹೀಗೆ – (ಇಷ್ಟರವರೆಗಿನ ವಿಚಾರದಿಂದ) "ನಾನು ನನ್ನದು ಎಂಬುದು (ಎಲ್ಲಾ ಜನರಿಗೂ) ಸ್ವಾಭಾವಿಕವಾಗಿ ಬಂದ ವ್ಯವಹಾರವು" ಎಂಬ ಭಾಷ್ಯಭಾಗದಿಂದ ಆತ್ಮಾನಾತ್ಮರುಗಳಿಗೂ ಮತ್ತು ಅವುಗಳ ಧರ್ಮಕ್ಕೂ ಇರುವ ಪರಸ್ಪರವಾದ ಅಧ್ಯಾಸವು ಎಲ್ಲರ ಅನುಭವದಲ್ಲೂ ಸಿದ್ಧವಾದದ್ದು, ಎಂಬುದನ್ನು ಹೇಳಿದ್ದಾಯಿತು. ಇದು ಪ್ರತಿಜ್ಞಾಮಾತ್ರವಾಗಿ ಹೇಳಿದಂತಾಗಿದೆ. ಇನ್ನು ಇದೇ ಪ್ರತಿಜ್ಞೆಯನ್ನು (ಮತ್ತು) ಅಧ್ಯಾಸದ ಲಕ್ಷಣವನ್ನೂ ನಿರೂಪಣೆಮಾಡುವುದು ಮತ್ತು ಸಂಭಾವನೆಮಾಡುವುದು ಎಂಬೆರಡರಿಂದ ತೋರಿಸಿಕೊಟ್ಟು, ಎಲ್ಲಾ ವ್ಯವಹಾರವೂ ಅಧ್ಯಾಸಪೂರ್ವಕವಾಗಿಯೇ ಇದೆ ಎಂಬುದನ್ನು ತೋರಿಸುತ್ತಾ ಮೊಟ್ಟಮೊದಲು ಲಕ್ಷಣದ ನಿರೂಪಣೆಯನ್ನು ಮಾಡುತ್ತಾರೆ.

**೭. ಅಧ್ಯಾಸದ ಲಕ್ಷಣವನ್ನು ಕೇಳುವಾತನ ಪ್ರಶ್ನೆಯು** – "ಆಹ-ಕೋಽಯಂ ಅಧ್ಯಾಸೋ ನಾಮ" ಎಂದು ಕೇಳುತ್ತಾನೆ – ಅಧ್ಯಾಸವೆಂದರೆ ಏನು ? ಎಂಬ ವಿಷಯದಲ್ಲಿ (ಅಧ್ಯಾಸಕ್ಕೆ) ಲಕ್ಷಣವೇನು ? ಎಂದು ಪ್ರಶ್ನೆಯೋ ಅಥವಾ ಲಕ್ಷಣದ ಬಗ್ಗೆಯ ಆಕ್ಷೇಪವೇ ? ಅಧ್ಯಾಸ ಎಂದರೆ ಈ ತರಹದ್ದು ಎಂದು ತಿಳಿಯದೆ ; ಆತ್ಮಾನಾತ್ಮರುಗಳಿಗೆ ಇತರೇತರಾಧ್ಯಾಸವು ಹೊಂದುತ್ತದೆಯೋ ಇಲ್ಲವೆ ? ಎಂದಾಗಲೀ ಹೊಂದುವುದಾದರೂ ಲೋಕವ್ಯವಹಾರವು ಅದನ್ನು ಮುಂದುಮಾಡಿಕೊಂಡೇ ಆಗಿರುವುದೆಂಬುದು

ಏವ ದೃಶ್ಯತೇ ನ ವಾ" ಇತ್ಯೇತನ್ನಿರ್ಣೇತುಂ ಶಕ್ಯತೇ । ಅತೋಽಧ್ಯಾಸಲಕ್ಷಣಂ ತಾವದಾದೌ ಕಥನೀಯಮಿತಿ ಪ್ರಷ್ಟುರಭಿಪ್ರಾಯಃ । ಅಥವಾ ಕೋಽಯಮಧ್ಯಾಸೋ ನಾಮ ? ನಾಸ್ತ್ಯೇವಾಧ್ಯಾಸೋ ನಾಮ ಕಶ್ಚಿತ್, ಲಕ್ಷಣಾಭಾವಾದಿತ್ಯಾಕ್ಷೇಪಃ ಕ್ರಿಯತೇ । ಏವಂ ಹಿ ತತ್ತ್ವನಿರ್ಣಯಾರ್ಥಸ್ಯ ಶಾಸ್ತ್ರಸ್ಯ ಸುಖಪ್ರತಿಪತ್ತ್ಯರ್ಥಂ ಪ್ರಷ್ಟಾರಮಾಕ್ಷೇಪ್ತಾರಂ ವಾ ಪುರತಃ ಸ್ಥಿತಮಿವ ಸಮುಪಕಲ್ಪ್ಯ ಪ್ರತಿವಚನಂ ಪರಿಹಾರವಚನಂ ವಾ ವರ್ಣಯಂತಿ ತಜ್ಜ್ಞಾಃ ॥

**೮. ಅಧ್ಯಾಸಲಕ್ಷಣಮ್** – ಪ್ರತ್ಯಾಹ ಸಿದ್ಧಾಂತೀ – **ಉಚ್ಯತೇ। ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ** । ಪರತ್ರ ವಸ್ತುನಿ ಪರಸ್ಯ ಅತದ್ರೂಪಸ್ಯ ಅವಭಾಸೋಽಧ್ಯಾಸಃ । ಇದಂ ಚಾಧ್ಯಾಸಸಾಮಾನ್ಯಲಕ್ಷಣಮ್। ತತ್ರಾತ್ಮಾನಾತ್ಮನೋರನ್ಯೋನ್ಯಾಧ್ಯಾಸೋಽನಾದಿರಿತಿ ವಕ್ಷ್ಯತೇ । ಶುಕ್ತಿರಜತಾದಿಸಾಧ್ಯಧ್ಯಾಸಸ್ಯಾಪಿ ಲೋಕಸಿದ್ಧಸ್ಯ ಸಂಗ್ರಹಾರ್ಥಂ ತದುದಾಹರಣೇನ

---

ಕಂಡುಬಂದಿದೆಯೇ ಇಲ್ಲವೆ ? ಎಂಬುದನ್ನಾಗಲೀ ನಿರ್ಣಯಿಸುವುದಕ್ಕಾಗುವುದಿಲ್ಲ. ಆದ್ದರಿಂದ ಅಧ್ಯಾಸದ ಲಕ್ಷಣವನ್ನು ಮೊದಲು ಹೇಳಬೇಕೆಂಬುದೇ ಕೇಳುವಾತನ ಅಭಿಪ್ರಾಯವು. ಅಥವಾ ಅಧ್ಯಾಸ ಎಂದರೆ ಏನು ? ಯಾವ ಅಧ್ಯಾಸವೆಂಬುದೂ ಇಲ್ಲವೇ ಇಲ್ಲ. ಏಕೆಂದರೆ ಅದಕ್ಕೆ ಲಕ್ಷಣವೇ ಇಲ್ಲ, ಎಂಬುದಾಗಿ ಆಕ್ಷೇಪವೆಂದು (ತಿಳಿಯಬಹುದು). ಹೀಗೆ (ಪ್ರಶ್ನೆ – ಆಕ್ಷೇಪಗಳನ್ನು ಮಾಡಿಕೊಂಡಲ್ಲವೆ ?) ತತ್ತ್ವವನ್ನು ನಿರ್ಣಯಮಾಡುವುದಕ್ಕಾಗಿಯೂ, ಶಾಸ್ತ್ರವನ್ನು ಸುಲಭವಾಗಿ ತಿಳಿಯುವುದಕ್ಕಾಗಿಯೂ (ಒಬ್ಬ) ಕೇಳುವಾತನನ್ನಾಗಲೀ ಅಥವಾ ಆಕ್ಷೇಪಿಸುವಾತನನ್ನಾಗಲೀ ಮುಂದುಗಡೆ ನಿಂತುಕೊಂಡಿದ್ದಾನೆಂಬಂತೆ ಕಲ್ಪಿಸಿಕೊಂಡು ಉತ್ತರವನ್ನೋ ಪರಿಹಾರವನ್ನೋ ಬಲ್ಲವರು ತಿಳಿಸಿಕೊಡುತ್ತಾರೆ.

**೮. ಅಧ್ಯಾಸಲಕ್ಷಣವು** – ಸಿದ್ಧಾಂತಿಯು ಉತ್ತರವನ್ನು ಹೇಳುತ್ತಾನೆ. ಹೇಳುತ್ತೇವೆ – ನೆನಪಿನಂತಿದ್ದು ಅದಲ್ಲದ್ದರಲ್ಲಿ ಹಿಂದೆ ಕಂಡ ವಸ್ತುವಿನಂತೆ ಕಾಣುವದು (ಅಧ್ಯಾಸವು). ಒಂದು ವಸ್ತುವಿನಲ್ಲಿ ಅದಲ್ಲದ್ದಾದ ಬೇರೆ ರೂಪದ ವಸ್ತುವನ್ನು ಕಾಣುವುದೇ ಅಧ್ಯಾಸವು. ಇದು ಅಧ್ಯಾಸದ ಸಾಮಾನ್ಯಲಕ್ಷಣವು. ಇಲ್ಲಿ ಮುಂದೆ ಆತ್ಮಾನಾತ್ಮರುಗಳ ಅನ್ಯೋನ್ಯಾಧ್ಯಾಸವು ಅನಾದಿಯೆಂದು ಹೇಳಲಾಗುತ್ತದೆ. ಕಪ್ಪೇಚಿಪ್ಪೆ ಮುಂತಾದ ಲೋಕಸಿದ್ಧವಾದ ಕಾರಣವುಳ್ಳ

ಪ್ರಕೃತಾಧ್ಯಾಸಸ್ವರೂಪನಿರ್ಧಾರಣಾರ್ಥಂ ಚ ವಿಶೇಷಣದ್ವಯುವಮ್ । ಸ್ಮೃತಿರೂಪಃ" ಇತಿ "ಪೂರ್ವದೃಷ್ಟಾವಭಾಸಃ" ಇತಿ ಚ । ಸ್ಮೃತೇಃ ರೂಪಮಿವ ರೂಪಮಸ್ಯೇತಿ ಸ್ಮೃತಿರೂಪಃ । ಇದಮೇವ ಖಲು ಸ್ಮೃತೇಃ ರೂಪಂ ಯತ್ ಪುರೋಽನವಸ್ಥಿತವಿಷಯತ್ವಮ್ । ಅಧ್ಯಾಸೇ ತ್ವಯಂ ವಿಶೇಷೋ ಯತ್ ಪುರೋಽನವಸ್ಥಿತವಿಷಯತ್ವೇಽಪಿ ಪುರೋಽವಸ್ಥಿತವಿಷಯವದವಭಾಸಃ । ಪೂರ್ವದೃಷ್ಟಮಿವ ಪೂರ್ವದೃಷ್ಟವಮ್ । ತಸ್ಯಾವಭಾಸಃ । ನ ಹಿ ಪೂರ್ವದೃಷ್ಟಮೇವ ವಸ್ತು ಪುರೋಽವಭಾಸತೇಽತ್ರ ಯಥಾ ಪ್ರತ್ಯಭಿಜ್ಞಾಯಾಮ್, ಪೂರ್ವದೃಷ್ಟಸದೃಶಂ ವಸ್ತು ಪುರೋಽವಸ್ಥಿತಮಿತಿ ತು ಕೇವಲಂ ಭ್ರಾಂತ್ಯಾ ವಿಕಲ್ಪ್ಯತೇ । ಏವಂ ಚ ಸ್ಮೃತಾವಿವ ವಿಷಯಸಾಂನಿಧ್ಯಾಭಾವೋಽಥ ಚಾನುಭೂತಾವಿವ ವಸ್ತುನಃ ಪುರೋಽವಸ್ಥಿತತ್ವೇನಾವಭಾಸನಂ ಚಾಧ್ಯಾಸ ಇತ್ಯುಕ್ತಂ ಭವತಿ । ಪರತ್ರೇತಿ ತು

---

ಅಧ್ಯಾಸವನ್ನೂ ಸೇರಿಸಿಕೊಳ್ಳುವುದಕ್ಕಾಗಿಯೂ ಅದನ್ನು ಉದಾಹರಣೆಯಾಗಿ ಕೊಡುವುದರ ಮೂಲಕ ಪ್ರಕೃತವಾದ ಅಧ್ಯಾಸದ ಸ್ವರೂಪವನ್ನು ನಿರ್ಣಯಮಾಡುವುದಕ್ಕಾಗಿಯೂ ಈ ಎರಡು ವಿಶೇಷಣವನ್ನು ಕೊಟ್ಟಿರುತ್ತದೆ. (ಈ ವಿಶೇಷಣದ್ವಯವು ಯಾವುದೆಂದರೆ–) "ಸ್ಮೃತಿರೂಪಃ" ಎಂಬುದೊಂದು, "ಪೂರ್ವದೃಷ್ಟಾವಭಾಸಃ" ಎಂಬುದಿನ್ನೊಂದು. ನೆನಪಿನ ರೂಪದಂತೆ ಇದರ ರೂಪವಾದ್ದರಿಂದ ಇದು ಸ್ಮೃತಿರೂಪವು. ಸ್ಮೃತಿಯ ಸ್ವರೂಪವೆಂದರೆ ಇದೇ ಅಲ್ಲವೆ, ಯಾವುದು ಎದುರಿಗೆ (ವಸ್ತುವು) ಇಲ್ಲದೇ (ಬರೀ ಮನಸ್ಸಿನಲ್ಲಿ ಮಾತ್ರ) ತೋರುವದು ? ಅಧ್ಯಾಸದಲ್ಲಾದರೋ ಇದು ವಿಶೇಷವು, ಮುಂದುಗಡೆ ವಸ್ತುವಿಲ್ಲವಾದರೂ ಮುಂದುಗಡೆ ಇರುವಂತೆ ಕಾಣುವುದು. ಹಿಂದೆ ಕಂಡಂತೆ (ಕಾಣುವುದು) ಅಂದರೆ ಅದರ ತೋರಿಕೆಯು. ಪ್ರತ್ಯಭಿಜ್ಞೆಯಲ್ಲಿ ಹೇಗೆ ಹಿಂದೆ ಕಂಡ ವಸ್ತುವನ್ನೇ ಕಾಣುತ್ತಾನೋ ಹಾಗೆ ಇಲ್ಲಿ (ಅಧ್ಯಾಸದಲ್ಲಿ ಹಿಂದೆ ಕಂಡದ್ದೇ) ಮುಂದೆ ತೋರುತ್ತದೆ ಎಂಬುದಿಲ್ಲ. ಹಿಂದೆ ಕಂಡದ್ದಕ್ಕೆ ಸಮಾನವಾದ ವಸ್ತು ಮುಂದೆ ಇದೆ ಎಂದು ಕೇವಲ ಭ್ರಾಂತಿಯಿಂದ ವಿಕಲ್ಪಿಸುತ್ತಾನೆ. ಹೀಗೆ ಸ್ಮೃತಿಯಂತೆ ವಿಷಯವಿಲ್ಲದಿರುವುದು, (ಹಿಂದೆ) ಅನುಭವಿಸಿದಂತೆ (ವಸ್ತುವು) ಮುಂದುಗಡೆಯಲ್ಲಿ ಕಾಣುವುದು ಅಧ್ಯಾಸವು ಎಂದು ಹೇಳಿದಂತಾಗುವುದು. ಅದಲ್ಲದ್ದರಲ್ಲಿ ಎಂದು ಹೇಳಿರುವುದು ಆ

ತದ್ರೂಪರಹಿತೇಽಪಿ ತತ್ಪ್ರತೀತಿರಿತಿ ವಕ್ತುಮಿತ್ಯುಕ್ತಮ್ । ತಥಾ ಚ "ಪರತ್ರ ಪರಾವಭಾಸಃ" ಇತ್ಯನೇನ ಕುಣ್ಡೇ ಬದರಾಣಾಮಿವಾಧಾರಾಧೇಯಭಾವೇನ ಪ್ರತೀತಿರ್ನಾವಗಂತವ್ಯಾ । ಯದ್ಯಪಿ ತತ್ರ ಪರತ್ರ ಕುಣ್ಡೇ ಪರೇಷಾಂ ಬದರಾಣಾಮವಭಾಸೋ ವರ್ತತೇ, ತಥಾಪಿ ನ ಸ್ಮೃತಿರೂಪತ್ವಮವ-ಭಾಸಸ್ಯೇತಿ ವಿಶೇಷಃ । ನಾಪಿ ಪರತ್ರೇತಿ ಪೂರ್ವದೃಷ್ಟಭಿನ್ನವಸ್ತು-ಮಾತ್ರಕಥನಮ್ । ತಜ್ಜಾತೀಯೇಽಪಿ ಪರತ್ರ ವಸ್ತುನ್ಯವಭಾಸಸ್ಯಾಧ್ಯಾಸತ್ವ-ಪ್ರಸಂಗಾತ್ । ತದ್ಯಥಾ ಪೂರ್ವಂ ಭುಜಂಗಮೇಕಂ ದೃಷ್ಟ್ವಾ ಪಶ್ಚಾದಪರಸ್ಮಿನ್ ಭುಜಂಗೇ ಯಾ ಭುಜಂಗಬುದ್ಧಿಃ, ಸ ನಾಧ್ಯಾಸಃ । ತತ್ರ ಹಿ ಭುಜಂಗಬುದ್ಧೇ-ರನುಭವರೂಪತ್ವಮೇವ, ನ ಸ್ಮೃತಿರೂಪತ್ವಮ್ । ನ ಹಿ ತತ್ರ ಭುಜಂಗತ್ವಶೂನ್ಯೇ ಭುಜಂಗಬುದ್ಧಿಃ । ಅತ ಏವ ಪೂರ್ವದೃಷ್ಟೇ ಭುಜಂಗೇ ಪುನರಪಿ ಯಾ ಭುಜಂಗಬುದ್ಧಿಃ, ಸೋಽಪಿ ನಾಧ್ಯಾಸಃ । ನ ಹಿ ತತ್ರ ಬುದ್ಧೇಃ ಸ್ಮೃತಿರೂಪತ್ವಮ್, ಕಿಂ ತು ಪ್ರತ್ಯಭಿಜ್ಞಾರೂಪತ್ವಮ್ । ನ ಚ

---

ರೂಪವಿಲ್ಲದಿದ್ದರೂ ಅದರಲ್ಲಿ (ಅದನ್ನು) ಕಾಣುವುದೆಂದು ಹೇಳುವುದಕ್ಕೆ ಎಂದು ಹೇಳಿದೆ. ಒಂದರಲ್ಲಿ ಇನ್ನೊಂದನ್ನು ಕಾಣುವುದೆಂದರೆ ಕುಡಿಕೆಯಲ್ಲಿ ಬೋರೆಹಣ್ಣು ಇರುವಂತೆ ಆಧಾರಾಧೇಯಭಾವದಿಂದ ತೋರುತ್ತಿರುತ್ತದೆ ಎಂದು ತಿಳಿದುಕೊಳ್ಳಬಾರದು. ಆ ದೃಷ್ಟಾಂತದಲ್ಲಿ ಒಂದು ಕುಡಿಕೆಯೊಳಗೆ ಬೇರೆಯಾದ ಬೋರೆಹಣ್ಣುಗಳನ್ನು ಕಾಣುವುದೆಂಬುದಿದ್ದರೂ ಆ ತೋರಿಕೆಯು ಸ್ಮೃತಿಯಂತೆ ಇದೆ ಎಂಬುದಿಲ್ಲ ಎಂಬುದೇ ವಿಶೇಷವು. ಪರತ್ರ ಎಂಬಲ್ಲಿ ಹಿಂದೆ ಕಂಡದ್ದಕ್ಕಿಂತ ಬೇರೆಯಾದ ವಸ್ತುವಷ್ಟೇ ಎಂದು ಹೇಳುತ್ತಲಿಲ್ಲ. ಏಕೆಂದರೆ ಆಗ ಅದೇ ಜಾತಿಯದಾದ ಬೇರೆ ವಸ್ತುವಿನಲ್ಲಿ ಕಾಣುವ ದೃಷ್ಟಿಯೂ ತಪ್ಪಾದ ತಿಳಿವಳಿಕೆಯೆಂದಾಗಿಬಿಡುತ್ತದೆ ! ಅದು ಹೇಗೆಂದರೆ – ಮೊದಲು ಒಂದು ಹಾವನ್ನು ಕಂಡು ಆಮೇಲೆ ಇನ್ನೊಂದು ಹಾವಿನಲ್ಲಿ ಹಾವೆಂಬ ಬುದ್ಧಿಯು ಏನಿದೆ, ಅದು ಅಧ್ಯಾಸವಾದದ್ದಲ್ಲ. ಅಲ್ಲಿ ಹಾವೆಂಬ ಬುದ್ಧಿಯು ಅನುಭವ-ರೂಪವಾಗಿಯೇ ಇದೆ. ನೆನಪಿನ ರೂಪವೇನಲ್ಲ. ಅಲ್ಲೇನೂ ಹಾವಿಲ್ಲದ ಜಾಗದಲ್ಲಿ ಹಾವನ್ನು ಕಾಣುತ್ತಲಿಲ್ಲ. ಆದ್ದರಿಂದ ಮೊದಲು ಕಂಡ ಹಾವಿನಲ್ಲಿ ಮತ್ತೆ ಯಾವ ಹಾವೆಂಬ ಬುದ್ಧಿ ಇದೆ ಅದು ಅಧ್ಯಾಸವಲ್ಲ, ಅದು ಸ್ಮೃತಿರೂಪವಲ್ಲ, ಮತ್ತೇನೆಂದರೆ ಅದು ಪ್ರತ್ಯಭಿಜ್ಞೆಯು. ಅಲ್ಲೇನೂ

ತತ್ರಾಭುಜಂಗಭೂತೇ ಭುಜಂಗಬುದ್ಧಿಃ । ಭುಜಂಗಸ್ಮೃತಿಸ್ತು ಸರ್ವಥಾ ನಾಧ್ಯಾಸಃ । ಪುರೋಽವಸ್ಥಿತಭುಜಂಗಾವ-ಭಾಸಸ್ಯೈವಾಭಾವಾತ್ । ಯಃ ಪುನರಸತ್ಯಪಿ ಭುಜಂಗೇಽಭುಜಂಗಭೂತೇ ರಜ್ಜ್ವಾದೌ ಭುಜಂಗಸ್ಯಾವಭಾಸರೂಪಃ ಪ್ರತ್ಯಯಃ, ಸೋಽಧ್ಯಾಸ ಏವ । ತಾದೃಶಪ್ರತ್ಯಯಸ್ಯ ಸ್ಮೃತಿರೂಪತ್ವಾತ್ ಪರತ್ರ ಪೂರ್ವದೃಷ್ಟಾವಭಾಸತ್ವಾಚ್ಚೇತಿ ಸಾರಃ ॥

ಅಧ್ಯಾಸಃ, ಅಧ್ಯಾರೋಪಃ, ಭ್ರಾಂತಿಃ, ಮಿಥ್ಯಾಜ್ಞಾನಮ್, ಮಿಥ್ಯಾಬುದ್ಧಿಃ, ಮಿಥ್ಯಾಪ್ರತ್ಯಯಃ, ಮಿಥ್ಯಾಭಿಮಾನಃ, ಅನ್ಯಥಾಗ್ರಹಣಮ್, ವಿಪರೀತಜ್ಞಾನಮ್-ಇತಿ ಪರ್ಯಾಯಾಃ । ಏವಂ ಚಾಧ್ಯಾಸಸ್ಯ ಭ್ರಾಂತಿತ್ವೇನ ಲೋಕಸಿದ್ಧತ್ವಾತ್, ಭ್ರಾಂತೇಶ್ಚಾತಥಾಭೂತೇ ತಥಾಜ್ಞಾನತ್ವೇನ ಸರ್ವಸಂಮತತ್ವಾತ್, ಇದಮೇವ ಲಕ್ಷಣಂ ಪ್ರಕೃತಾಧ್ಯಾಸಸ್ಯಾಪೀತಿ ಬೋಧ್ಯಮ್ । "ಸ್ಮೃತಿರೂಪಃ ಪೂರ್ವದೃಷ್ಟಾವಭಾಸಃ" ಇತಿ ತು ಸಾದ್ಯಧ್ಯಾಸಲಕ್ಷಣಸ್ಪಷ್ಟೀಕರಣಾರ್ಥ-ಮೇವೇತಿ ನ ತಸ್ಯಾಧ್ಯಾಸಲಕ್ಷಣಶರೀರೇ ಪ್ರವೇಶ ಇತಿ ನ ಪ್ರಸ್ಮರ್ತವ್ಯಮ್॥

---

ಹಾವಲ್ಲದ್ದರಲ್ಲಿ ಹಾವೆಂಬ ಬುದ್ಧಿಯಿಲ್ಲ. ಕೇವಲ ಹಾವಿನ ನೆನಪೂ ಸಹ ಸರ್ವಥಾ ಅಧ್ಯಾಸರೂಪವಲ್ಲ. (ಏಕೆಂದರೆ ಆ ನೆನಪಿನಲ್ಲಿ) ಮುಂದಿರುವ ಹಾವು ಎಂಬುದೇ ಇರುವುದಿಲ್ಲ. ಇನ್ನು ಹಾವೇ ಇಲ್ಲದೇ ಹಾವಲ್ಲದ್ದಾದ ಹಗ್ಗದಲ್ಲಿ ಹಾವಿನಂತೆ ಕಾಣುವುದೇನಿದೆ? ಅದು ಅಧ್ಯಾಸವೇ. ಆ ರೀತಿಯ ಅರಿವಿನಲ್ಲಿ ಸ್ಮೃತಿಯ ಅಂಶವೂ ಪ್ರತ್ಯಭಿಜ್ಞಾಂಶವೂ ತೋರುತ್ತದೆ ಎಂಬುದೇ ಒಟ್ಟು ಸಾರವು.

ಅಧ್ಯಾಸ, ಅಧ್ಯಾರೋಪ, ಭ್ರಾಂತಿ, ಮಿಥ್ಯಾಜ್ಞಾನ, ಮಿಥ್ಯಾಬುದ್ಧಿ, ಮಿಥ್ಯಾ-ಪ್ರತ್ಯಯ, ಮಿಥ್ಯಾಭಿಮಾನ, ಅನ್ಯಥಾಗ್ರಹಣ, ವಿಪರೀತಜ್ಞಾನ – ಇವುಗಳೆಲ್ಲಾ ಪರ್ಯಾಯಪದಗಳು. ಅಧ್ಯಾಸವು ಭ್ರಾಂತಿಯೆಂಬುದು ಲೋಕಸಿದ್ಧ-ವಾಗಿರುವುದರಿಂದಲೂ, ಭ್ರಾಂತಿಯು (ಎಂದರೆ) ವಸ್ತುವು ಹಾಗಿಲ್ಲವಾದರೂ ಹಾಗಿರುವಂತೆ ತೋರುವುದೆಂಬುದು ಎಲ್ಲರಿಗೂ ಗೊತ್ತಾಗಿರುವುದರಿಂದಲೂ, ಪ್ರಕೃತವಾದ ಅಧ್ಯಾಸಕ್ಕೂ ಇದೇ ಲಕ್ಷಣವು ಎಂದು ತಿಳಿಯಬೇಕು. "ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾಭಾಸಃ" ಎಂದು (ಅಧ್ಯಾಸಕ್ಕೆ ಲಕ್ಷಣವನ್ನು ಹೇಳಿರುವುದು) ಸಾದಿಯಾದ ಅಧ್ಯಾಸದ ಸ್ವರೂಪವನ್ನು ಸ್ಪಷ್ಟೀಕರಿಸುವುದಕ್ಕಾಗಿಯೇ ಹೊರತು ಅದು (ಸಂಪೂರ್ಣ) ಅಧ್ಯಾಸದ ಲಕ್ಷಣದ ಸ್ವರೂಪದಲ್ಲೇ ಪ್ರವೇಶಿಸುವುದಕ್ಕಲ್ಲವೆಂಬುದನ್ನು ಮರೆಯಬಾರದು.

**೯. ಅಧ್ಯಾಸೇ ವಾದಿವಿಪ್ರತಿಪತ್ತಯಃ – "ತಂ ಕೇಚಿದಿ"**ತ್ಯಾದಿನಾ ಮತಭೇದಾನಾಂ ಕಥನಂ ಸ್ವಾಭಿಪ್ರಾಯಸ್ಯ ಸರ್ವತಂತ್ರಸಿದ್ಧಾಂತತ್ವಾವಿಷ್ಕರಣಾರ್ಥಮ್ । **ತಂ ಕೇಚಿದನ್ಯತ್ರಾನ್ಯಧರ್ಮಾಧ್ಯಾಸ ಇತಿ ವದಂತಿ।** ಅಧಿಕರಣಮನ್ಯತ್, ಧರ್ಮಸ್ತ್ವನ್ಯಸ್ಯ । ತಯೋರ್ಧರ್ಮಧರ್ಮಿಣೋಃ ಮಿಥಃ ಸಂಬಂಧಾಭಾವೇಽಪಿ ಸಂಬಂಧಕಲ್ಪನಮಧ್ಯಾಸ ಇತಿ ತೇ ವದಂತಿ । ಯಥಾ ಸ್ಫಟಿಕೇ ಜಪಾಕುಸುಮಾದಿಲೌಹಿತ್ಯಸ್ಯ ಸಂಬಂಧಕಲ್ಪನಮ್ । ಸ್ಫಟಿಕಸ್ಯ ಹಿ ಸ್ವಚ್ಛದ್ರವ್ಯತ್ವಾತ್ ತತ್ರ ಸಂನಿಧಿಮಾತ್ರೇಣ ಸಂಕ್ರಾಂತಂ ಜಪಾಕುಸುಮಾದಿಲೌಹಿತ್ಯಂ ಸ್ಫಟಿಕಧರ್ಮ ಇತ್ಯೇವ ಗೃಹ್ಣಂತಿ ಕೇಚಿದವಿವೇಕಿನಃ । ತದೇವಮನ್ಯಧರ್ಮಸ್ಯಾನ್ಯಸ್ಮಿನ್ ಕಲ್ಪನಮಧ್ಯಾಸ ಇತಿ ತೇಷಾಮಭಿಪ್ರಾಯಃ। ಅತ್ರ ಧರ್ಮಗ್ರಹಣಮುಪಲಕ್ಷಣಾರ್ಥಂ ಧರ್ಮಿಣೋಽಪಿ । ಶುಕ್ತಿರಜತಾದಿಕಲ್ಪನಸ್ಯಾಪ್ಯಧ್ಯಾಸತ್ವೇನೇಷ್ಟತ್ವಾತ್ । ಅಥವಾ ಅನ್ಯಸ್ಮಿನ್ ಅನ್ಯಸ್ಯ ಧರ್ಮಸ್ಯ ಅರ್ಥಾಂತರಸ್ಯ ಕಲ್ಪನಮ್ – ಇತ್ಯೇವಂ ವ್ಯಾಖ್ಯೇಯಂ ಭಾಷ್ಯಮ್ । **ಕೇಚಿತ್ತು**

---

**೯. ಅಧ್ಯಾಸದ ವಿಷಯದಲ್ಲಿ ವಾದಿಗಳ ವಿರುದ್ಧವಾದ ಅಭಿಪ್ರಾಯಗಳು – ತಂ ಕೇಚಿತ್** ಎಂದು ಮುಂತಾಗಿ ಬೇರೆ ಬೇರೆ ಮತಗಳನ್ನು (ಭಾಷ್ಯಕಾರರು) ಹೇಳಿರುವುದು ತಮ್ಮ ಅಭಿಪ್ರಾಯವು ಎಲ್ಲಾ ಶಾಸ್ತ್ರಕ್ಕೂ ಸಿದ್ಧಾಂತವಾಗಿದೆ ಎಂಬುದನ್ನು ತೋರಿಸುವುದಕ್ಕೆ. ಅದನ್ನು ಕೆಲವರು ಒಂದರಲ್ಲಿ ಇನ್ನೊಂದರ ಧರ್ಮಾಧ್ಯಾಸವೆಂದು ಹೇಳುತ್ತಾರೆ. ಒಂದರ ಧರ್ಮಕ್ಕೆ ಮತ್ತೊಂದು ಆಶ್ರಯವಾಗಿರುವುದು. ಆ ಧರ್ಮಧರ್ಮಿಗಳಿಗೆ ಪರಸ್ಪರ ಸಂಬಂಧವಿಲ್ಲವಾದರೂ ಸಂಬಂಧವನ್ನು ಕಲ್ಪಿಸುವುದು ಅಧ್ಯಾಸವೆಂದು ಅವರು ಹೇಳುತ್ತಾರೆ. ಇದು ಹೇಗೆಂದರೆ – ಸ್ಫಟಿಕದಲ್ಲಿ ದಾಸಿವಾಳದ ಹೂವಿನ ಕೆಂಪು ಬಣ್ಣದ ಸಂಬಂಧವನ್ನು ಕಲ್ಪಿಸುವುದು. ಕೆಲವರು ವಿವೇಕವಿಲ್ಲದವರು – ಸ್ಫಟಿಕವು ಸ್ವಚ್ಛವಾದುದರಿಂದ ಸಮೀಪಮಾತ್ರದಿಂದ ಸೇರಿಕೊಂಡ ದಾಸಿವಾಳ ಹೂವಿನ ಕೆಂಪುಬಣ್ಣವನ್ನು ಸ್ಫಟಿಕದ್ದೇ ಎಂದು ತಿಳಿಯುತ್ತಾರೆ. ಹೀಗೆ ಒಂದರ ಧರ್ಮವನ್ನು (ಮಾತ್ರ) ಮತ್ತೊಂದರಲ್ಲಿ ಕಲ್ಪನೆಮಾಡುವುದು ಅಧ್ಯಾಸವೆಂದು ಅವರ ಅಭಿಪ್ರಾಯವು. ಇಲ್ಲಿ ಧರ್ಮವೆಂದು ಹೇಳಿರುವುದು ಉಪಲಕ್ಷಣಕ್ಕಾಗಿ ಎಂದರಿಯಬೇಕು. (ಆಗ) ಧರ್ಮಿಯನ್ನೂ ಸೇರಿಸಿಕೊಳ್ಳಬೇಕು. ಏಕೆಂದರೆ ಶುಕ್ತಿರಜತಾದಿಕಲ್ಪನೆಯೂ ಸಹ ಅಧ್ಯಾಸವೆಂದು ಹೇಳುವುದೇ ಇಷ್ಟವಾಗಿದೆ. ಅಥವಾ ಒಂದರಲ್ಲಿ ಬೇರೊಂದು ವಸ್ತುವಿನ ಧರ್ಮದ, ಕಲ್ಪನಾಮಾತ್ರವೇ

**ಯತ್ರ ಯದಧ್ಯಾಸಸ್ತದ್ವಿವೇಕಾಗ್ರಹನಿಬಂಧನೋ ಭ್ರಮ ಇತಿ ವದಂತಿ ।** ಯತ್ರಾಧ್ಯಾಸೋ ಯಸ್ಯ ಚಾಧ್ಯಾಸಃ, ತಯೋರ್ದ್ವಯೋರಪಿ ಜ್ಞಾನಮಧ್ಯಾಸಕಾಲೇ ವರ್ತತೇ । ಜ್ಞಾನದ್ವಯಮಿದಮಿತಿ ವಿವಿಚ್ಯಾಗ್ರಹಣಾತ್ತು ತಯೋರೇಕತ್ವಗ್ರಹಣಾಗ್ರಹಃ । ಯಥಾ ದೂರಸ್ಥಯೋರ್ದ್ವಯೋರ್ವನಸ್ಪ-ತ್ಯೋರ್ಜ್ಞಾತಯೋರ್ವಿವೇಕಾಗ್ರಹಣೇನ ತಯೋರೇಕತ್ವಗ್ರಹಣಾಭಿಮಾನಃ। ಯಥಾ ವಾ ಶುಕ್ತಿಜ್ಞಾನಮನುಭವಾತ್ಮಕಂ ರಜತಜ್ಞಾನಂ ಚ ಸ್ಮರಣಾತ್ಮಕಂ – ಇತ್ಯುಭೇ ಅಪಿ ಜ್ಞಾನೇ ಸಮೀಚೀನೇ ಏವ, ತಥಾಪಿ ರಜತಜ್ಞಾನೇ ಸ್ಮರಣಾಭಿಮಾನಭಂಗಾತ್ ಜ್ಞಾನದ್ವಯಾವಿವೇಕಾಚ್ಚೈಕಮೇವೇದಂ ರಜತಾತ್ಮಕಂ ವಸ್ತು ಜ್ಞಾತಮಿತಿ ಬುದ್ಧಿಃ । ತದೇವಂ ಸರ್ವತ್ರಾಧ್ಯಾಸೇ ಜ್ಞಾನದ್ವಯಾವಿವೇಕ ಏವ ನ ಪುನರೇಕಸ್ಮಿನ್ನಪರಸ್ಯಾತದ್ರೂಪಸ್ಯ ಜ್ಞಾನಮಸ್ತೀತಿ ತೇಷಾಮಾಶಯಃ ॥ **ಅನ್ಯೇ ತು ಯತ್ರ ಯದಧ್ಯಾಸಸ್ತಸ್ಯೈವ ವಿಪರೀತ-**

---

ಅಧ್ಯಾಸವೆಂದೂ, ಭಾಷ್ಯವನ್ನು ವ್ಯಾಖ್ಯಾನಿಸಬಹುದು. **ಕೆಲವರಾದರೋ ಯಾವುದರಲ್ಲಿ ಯಾವುದರ ತಪ್ಪುತಿಳಿವು ಬಂದಿದೆಯೋ ಅಲ್ಲಿ ಅದನ್ನು ವಿಂಗಡವಾಗಿ ಅರಿಯದಿರುವ ಭ್ರಮೆಯೇ (ಅಧ್ಯಾಸ)ವೆನ್ನುತ್ತಾರೆ.** ಎಲ್ಲಿ ಯಾವುದರ ಅಧ್ಯಾಸವೋ ಆ ಅಧ್ಯಾಸದ ಕಾಲದಲ್ಲಿ ಅವೆರಡರ ಜ್ಞಾನವೂ ಇರುತ್ತದೆ. ಆದರೆ "ಇದು ಎರಡು ಜ್ಞಾನವು" ಎಂದು ವಿಂಗಡವಾಗಿ ತಿಳಿಯದೇ ಇರುವುದರಿಂದಲಾದರೋ ಅವೆರಡರ ಏಕತ್ವಗ್ರಹಣದ ಆಗ್ರಹವುಂಟಾಗುತ್ತದೆ. ಹೇಗೆಂದರೆ ದೂರದಲ್ಲಿರುವ ಎರಡು (ಹತ್ತಿರ ಇರುವ) ಮರಗಳನ್ನು ಕಂಡು ವಿಂಗಡವಾಗಿ ಅರಿಯದ್ದರಿಂದ ಒಂದೇ ಎಂದು ತಿಳಿವಳಿಕೆಯು ಉಂಟಾಗುತ್ತದೆ. ಅಥವಾ ಎದುರು ಇರುವ ಕಪ್ಪೆಚಿಪ್ಪಿನ ಜ್ಞಾನವು ಅನುಭವರೂಪವಾಗಿರುವಂಥದ್ದು, ಬೆಳ್ಳಿಯಜ್ಞಾನವು ಸ್ಮರಣರೂಪದಲ್ಲಿರು-ವಂಥದ್ದು, ಎರಡು ಜ್ಞಾನವೂ ಸರಿಯಾದದ್ದೇ ಆದರೂ ಬೆಳ್ಳಿಯ ಜ್ಞಾನದಲ್ಲಿ ಸ್ಮರಣಕ್ಕೆ ಭಂಗವಿರುವುದರಿಂದಲೂ ಎರಡು ಜ್ಞಾನದ ವಿವೇಕವಿಲ್ಲದ್ದರಿಂದಲೂ ಬೆಳ್ಳಿ ಎಂಬ ಒಂದೇ ವಸ್ತು ತಿಳಿಯಿತೆಂಬ ಬುದ್ಧಿಯುಂಟಾಗುವದು ಅಧ್ಯಾಸವು. ಹೀಗೆ ಎಲ್ಲರ ಅಭಿಪ್ರಾಯದಲ್ಲೂ ಅಧ್ಯಾಸದಲ್ಲಿ ಎರಡು ಜ್ಞಾನದ ವಿವೇಕವಿಲ್ಲದಿರುವುದೇ (ಅಧ್ಯಾಸವೇ ಹೊರತು) ಒಂದರಲ್ಲೇ ಅದಲ್ಲದ್ದರ ರೂಪದ ಜ್ಞಾನವಿರುತ್ತದೆ ಎಂದೇನೂ ಅವರ ಅಭಿಪ್ರಾಯವಿರುವುದಿಲ್ಲ.

ಧರ್ಮತ್ವಕಲ್ಪನಾಮಾಚಕ್ಷತೇ । ಅಸ್ಮಿನ್ ಪಕ್ಷೇ ತ್ವಯಂ ವಿಶೇಷಃ । ಅನ್ಯತ್ರಾನ್ಯಧರ್ಮವಾದೀ ವಿವೇಕಾಗ್ರಹನಿಬಂಧನಭ್ರಮವಾದೀ ಚ ಸಮಾರೋಪಿತವಸ್ತುನಃ ಕುತ್ರಚಿತ್ ಕಥಂಚಿತ್ ಸತ್ವಮಂಗೀಕುರುತಃ । ಪರಮಾರ್ಥಸತೋ ಹಿ ಕುಸುಮಸ್ಯ ಲೌಹಿತ್ಯಂ ಸಾನಿಧ್ಯವಶಾತ್ ಸ್ಫಟಿಕೇ ಸಂಕ್ರಾಮತೀತಿ ಪ್ರಥಮಪಕ್ಷೇಽಭಿಮಾನಃ । ಶುಕ್ತಿರಜತಯೋಃ ಪರಮಾರ್ಥಸತೋರೇವ ಗ್ರಹಣಸ್ಮರಣೇ, ಸ್ಮರಣಾಭಿಮಾನಭಂಗಾತ್ತು ಗ್ರಹಣಸ್ಮರಣಯೋರವಿವೇಕಾತ್ ತತ್ರೈಕತ್ವಕಲ್ಪನಮಿತಿ ದ್ವಿತೀಯಪಕ್ಷೇಽಭಿಮಾನಃ । ಅತ್ರ ತು ಪಕ್ಷೇ ಸಮಾರೋಪಿತಸ್ಯ ಸತ್ವಮೇವ ನಾಭ್ಯುಪಗಮ್ಯತೇ । ಅಧಿಷ್ಠಾನಮೇವ ತಥಾ ತಥಾ ಭ್ರಾಂತ್ಯಾ ಪ್ರತಿಭಾಸತ ಇತಿ ಚ ಕಲ್ಪ್ಯತ ಇತಿ ವಿಶೇಷಃ । ಏಷ್ವೇವ ತ್ರಿಷು ಪ್ರಕಾರೇಷು ಸರ್ವೇಷಾಂ ದಾರ್ಶನಿಕಾನಾಂ ಭ್ರಾಂತಿಖ್ಯಾತಿವಾದಾ ಅಂತರ್ಭವಂತಿ । ತತ್ರ ಶೂನ್ಯವಾದೀ ವೇದಾಂತೀ ಚ ತೃತೀಯಪಕ್ಷ–

---

ಇನ್ನು ಕೆಲವರಾದರೋ ಎಲ್ಲಿ ಯಾವುದರ ಅಧ್ಯಾಸವಿರುವುದೋ ಅದಕ್ಕೆ ಬೇರೊಂದು ಧರ್ಮವಿರುವುದೆಂದು ಕಲ್ಪಿಸುವುದೇ (ಅಧ್ಯಾಸ)ವೆನ್ನುತ್ತಾರೆ. ಈ ಪಕ್ಷದಲ್ಲಾದರೋ ಇದು ವಿಶೇಷವು. ಒಂದರಲ್ಲಿ ಇನ್ನೊಂದರ ಧರ್ಮವನ್ನು ವಾದಮಾಡುವವನು ಮತ್ತು ವಿಂಗಡವಾಗಿ ತಿಳಿಯದೇ ಇರುವುದರಿಂದ ಭ್ರಮೆಯಾಗಿದೆ ಎಂದು ವಾದಮಾಡುವವನು (ಈ ಇಬ್ಬರೂ) (ಯಾವುದರಲ್ಲಿ ಏನನ್ನು) ಆರೋಪಿಸಿರುತ್ತಾರೋ ಅದು ಎಲ್ಲೋ ಹೇಗೋ ಇರುವಂಥದ್ದಾಗಿರುತ್ತದೆ ಎಂದು ಒಪ್ಪಿರುತ್ತಾರೆ. ನಿಜವಾಗಿರುವ ಹೂವಿನ ಕೆಂಪುಬಣ್ಣವು ಸನ್ನಿಧಿವಶದಿಂದ ಸ್ಫಟಿಕದಲ್ಲಿ ಸೇರಿರುತ್ತದೆ ಎಂದು ಮೊದಲನೆಯ ಪಕ್ಷದವನಲ್ಲಿ ಅಭಿಮಾನವು, ನಿಜವಾಗಿಯೇ ಇರುವಂಥದ್ದಾದ ಕಪ್ಪೆಚಿಪ್ಪು ಮತ್ತು ಬೆಳ್ಳಿಯ ಅರಿವು, ನೆನಪುಗಳು, (ರಜತಜ್ಞಾನಕಾಲದಲ್ಲಿ) ಸ್ಮರಣದ ಸ್ವರೂಪಕ್ಕೆ ಭಂಗವುಂಟಾದ್ದರಿಂದ ಆ ಅರಿವನ್ನೂ ಸ್ಮರಣೆಯನ್ನೂ ವಿಂಗಡಿಸಿಕೊಳ್ಳದೇ ಇರುವುದರಿಂದ ಆ ರಜತಜ್ಞಾನದಲ್ಲಿ ಒಂದು ಎಂಬ ಭ್ರಾಂತಿಯಾಗಿರುತ್ತದೆ ಎಂಬುದು ಎರಡನೇ ಪಕ್ಷದ ಅಭಿಪ್ರಾಯವು. ಈ (ಮೂರನೇ) ಪಕ್ಷದಲ್ಲಾದರೋ, (ಏನನ್ನು) ಆರೋಪಿಸಿರುತ್ತೇವೆಯೋ ಅದರ ಇರುವಿಕೆಯನ್ನು (ಅಲ್ಲಿ) ಒಪ್ಪಿಕೊಳ್ಳುವುದೇ ಇಲ್ಲ. ಅಧಿಷ್ಠಾನವೇ ಹಾಗೆ ಭ್ರಾಂತಿಯಿಂದ ತೋರುತ್ತದೆ ಎಂದು ಕಲ್ಪಿಸಲಾಗಿದೆ ಎಂಬುದೇ ವಿಶೇಷವು. ಈ ಮೂರು ಪ್ರಕಾರದಲ್ಲಿಯೇ ಎಲ್ಲಾ ದಾರ್ಶನಿಕರ ಭ್ರಾಂತಿಖ್ಯಾತಿವಾದಗಳು

ಮಾಲಂಬೇತೇ । ತದಿತರೇ ತು ಪ್ರಥಮದ್ವಿತೀಯಪಕ್ಷಯೋರನ್ಯತರಮಿತಿ ವಿವೇಕಃ । ತಯೋಃ ಪಕ್ಷಯೋಃ ಸಮಾರೋಪಿತಂ ವಸ್ತು ಸರ್ವಥಾ ನಾಸ್ತೀತಿ ನಾನುಮನ್ಯತೇ । ಅನ್ಯಥಾಗ್ರಹಣಪ್ರಕಾರೇ ಪರಂ ವಿವಾದ ಇತಿ ರಾಶಿದ್ವಯಕರಣಮ್ । ಶೂನ್ಯವಾದಬ್ರಹ್ಮವಾದಯೋರುಭಯೋರಪಿ ಚರಮಪಕ್ಷೇ ಸಮಾವೇಶೇಽಪ್ಯಸ್ತಿ ವಿಶೇಷಃ । ತತ್ರ ಶೂನ್ಯವಾದಿನೋ ವದಂತಿ – ಅಧ್ಯಾರೋಪಿತಂ ಯಥಾ ನ ಸತ್ ತಥಾ ಯತ್ರ ತದಧ್ಯಾರೋಪ್ಯತೇ ತದಪಿ ನ ಸತ್ । ಕಲ್ಪಿತತ್ವಾವಿಶೇಷಾದಿತಿ । ವೇದಾಂತಿನಸ್ತು ಬ್ರುವತೇ – ಯದ್ಯಪ್ಯಧ್ಯಾರೋಪಿತಂ ಸರ್ವಂ ಕಲ್ಪಿತಮೇವ, ತಥಾಪಿ ಸರ್ವಕಲ್ಪನಾಕ್ಷಯೇಽವಿಕಲ್ಪಿತಸ್ಯಾವಿಕಲ್ಪಿತತ್ವಾದೇವ ಪರಮಾರ್ಥಸತ್ತ್ವಂ ಸೇತ್ಸ್ಯತಿ । ನ ಚ ತಸ್ಯಾಪಿ ಕಲ್ಪಿತತ್ವಂ । ಅಸತಿ ಸಮ್ಯಗ್ಜ್ಞಾನೇ ಮಿಥ್ಯಾಜ್ಞಾನಸ್ಯೈವಾಸಂಭವಾದ್ ಯತ್ರ ಕ್ವಚಿದಕಲ್ಪಿತತ್ವಸ್ಯಾವಶ್ಯಾಂಗೀಕರಣೀಯತ್ವಾತ್ । ನ ಚ

---

ಅನ್ತರ್ಗತವಾಗಿರುತ್ತವೆ. ಇಲ್ಲಿ (ಬೌದ್ಧ) ಶೂನ್ಯವಾದಿಯೂ ವೇದಾಂತಿಗಳೂ ಮೂರನೆಯ ಪಕ್ಷವನ್ನವಲಂಬಿಸಿರುತ್ತಾರೆ. (ಇನ್ನು) ಬಾಕಿ ಎಲ್ಲಾ (ವಾದಿಗಳೂ) ಮೊದಲನೆಯ ಮತ್ತು ಎರಡನೆಯದರಲ್ಲಿಯೇ ಅಡಕವಾಗುತ್ತಾರೆಂದು ತಿಳಿಯಬೇಕು. ಈ ಎರಡುಪಕ್ಷದಲ್ಲೂ ಆರೋಪಿತ ವಸ್ತುವು ಎಲ್ಲೂ ಇಲ್ಲವೇ ಇಲ್ಲ ಎಂದು ಒಪ್ಪುವುದಿಲ್ಲ. ತಪ್ಪುತಿಳಿವಳಿಕೆಯ ಪ್ರಕಾರದಲ್ಲಿ ಮಾತ್ರ ವಿವಾದವೆಂದಾದ್ದರಿಂದ ಎರಡು ರಾಶಿಯು. ಕೊನೆಯ ಪಕ್ಷದಲ್ಲಿ ಶೂನ್ಯವಾದಿ ಮತ್ತು ಬ್ರಹ್ಮವಾದಿಗಳಿಬ್ಬರೂ ಸೇರಿದ್ದರೂ (ಅವರಲ್ಲಿ) ವಿಶೇಷವಿದೆ. ಶೂನ್ಯವಾದಿಗಳು ಹೇಳುವುದೇನೆಂದರೆ – ಅಧ್ಯಾರೋಪಿತವಾದದ್ದು, ಹೇಗೆ ಇರುವುದಿಲ್ಲವೋ ಹಾಗೆಯೇ ಅಧಿಷ್ಠಾನವೂ ಇರುವುದಿಲ್ಲ. (ಏಕೆಂದರೆ) ಎರಡೂ ಕಲ್ಪಿತವಾಗಿರುವುದೆಂಬುದು ಸಮಾನವಾಗಿದೆ. ವೇದಾಂತಿಗಳು ಹೇಳುವುದಾದರೋ, ಅಧ್ಯಾರೋಪಿತವಾದದ್ದು ಎಲ್ಲವೂ ಕಲ್ಪಿತವಾದರೂ ಎಲ್ಲಾ ಕಲ್ಪನೆಯೂ ಹೋದಮೇಲೆ ಕಲ್ಪಿತವಲ್ಲದ್ದು ಕಲ್ಪಿತವಲ್ಲದ್ದಾದ್ದರಿಂದಲೇ ಪರಮಾರ್ಥವಾಗಿರುವುದೆಂಬುದು ಸಿದ್ಧವಾಗುತ್ತದೆ. ಸಮ್ಯಗ್ಜ್ಞಾನವೆಂಬುದಿಲ್ಲದೇ ಮಿಥ್ಯಾಜ್ಞಾನವೆಂಬುದೇ ಹೊಂದುವುದಿಲ್ಲವಾದ್ದರಿಂದಲೂ, ಎಲ್ಲೋ ಆದರೂ ಕಲ್ಪಿತವಲ್ಲದ್ದನ್ನು ಅವಶ್ಯವಾಗಿ ಒಪ್ಪಲೇಬೇಕಾಗಿರುವುದರಿಂದಲೂ ಪರಮಾರ್ಥಸತ್ತಿಗೂ ಕಲ್ಪಿತತ್ತ್ವವನ್ನು

ಲೋಕೇ ದೃಷ್ಟೋ ನಿರವಧಿಕೋ ಬಾಧ ಇತಿ । ತದೇವಂ ಮತಭೇದೇ ಸ್ಥಿತೇ ಸಮಾರೋಪಿತಸ್ಯ ಮಿಥ್ಯಾತ್ವೇ ತು ನಾಸ್ತಿ ವಿಪ್ರತಿಪತ್ತಿರಿತ್ಯೇತಯೋ-ರುಭಯೋರಪಿ ತೃತೀಯಪಕ್ಷ ಏವ ಪ್ರವೇಶೋಽನುಮತಃ । ಉಭಯೇಽಪಿ ಹಿ ಯತ್ರ ಯದಧ್ಯಾಸಸ್ತಸ್ಯೈವ ವಿಪರೀತಧರ್ಮತ್ವಕಲ್ಪನಾಮ-ಧ್ಯಾಸಮಾಚಕ್ಷತೇ । ಯತ್ರ ಶುಕ್ತ್ಯಾದೌ ಯದಧ್ಯಾಸಃ, ಯಸ್ಯ ರಜತಾದೇರಧ್ಯಾಸಃ, ತಸ್ಯೈವಾಧಾರಭೂತಶುಕ್ತ್ಯಾದೇಃ, ವಿಪರೀತಧರ್ಮತ್ವಕಲ್ಪನಾಂ ಸ್ವಾತ್ಮನೋ ವಿಪರೀತೋ ಯೋ ಧರ್ಮೋ ರಜತಾದಿಸ್ವಭಾವಃ ತದ್ವತ್ತ್ವೇನ ಕಲ್ಪನಾಂ ಮಿಥ್ಯಾಭೂತಸ್ಯೈವ ಗೃಹೀತಿಮ್ ಅಧ್ಯಾಸಮಾಚಕ್ಷತ ಇತ್ಯರ್ಥಃ ॥

**೧೦. ಇದಮಧ್ಯಾಸಲಕ್ಷಣಂ ಸರ್ವತಂತ್ರಾವಿರುದ್ಧಮ್** – ನನು ಸಂತು ವಾದಿನಾಂ ವಿಪ್ರತಿಪತ್ತಯಃ । ಪ್ರಕೃತೇ ಕಿಮಾಯಾತಮ್ ? **ಸರ್ವಥಾಪಿ ತ್ವನ್ಯಸ್ಯಾನ್ಯಧರ್ಮಾವಭಾಸತಾಂ ನ ವ್ಯಭಿಚರತಿ** । ಯದ್ಯಪಿ ವಾದಿನಃ

---

ಹೇಳಬಾರದು. ನಿಶ್ಶೇಷವಾಗಿ (ಏನೂ ಉಳಿಯದೇ) ಬಾಧೆಯಾಗುವುದೆಂಬುದು ಲೋಕದಲ್ಲಿ ಕಂಡುಬಂದಿಲ್ಲ. ಹೀಗೆ (ವೇದಾಂತಿಗಳಿಗೂ, ಬೌದ್ಧರಿಗೂ) ಮತಭೇದವು ಸಿದ್ಧವಾಗಿರಲಾಗಿ, ಆರೋಪಿತವಾದದ್ದು ಸುಳ್ಳು ಎಂಬ ಅಂಶದಲ್ಲಿ (ಈ ಇಬ್ಬರಿಗೂ) ಭಿನ್ನಾಭಿಪ್ರಾಯವಿಲ್ಲದಿರಲಾಗಿ ಈ ಮೂರನೇ ಪಕ್ಷದಲ್ಲೇ ಇವರಿಬ್ಬರನ್ನೂ ಸೇರಿಸಬಹುದಾಗಿದೆ. (ಈ) ಇಬ್ಬರೂ ಎಲ್ಲಿ ಏನೆಂದು ಅಧ್ಯಾಸವಾಗಿರುತ್ತದೋ ಅದರದ್ದೇ ವಿಪರೀತವಾದ ಧರ್ಮತ್ವವನ್ನು ಕಲ್ಪನೆಮಾಡುವುದನ್ನೇ ಅಧ್ಯಾಸವೆಂದು ಹೇಳುತ್ತಾರಲ್ಲವೆ ? ಅಂದರೆ – ಯಾವ ಕಪ್ಪೆಚಿಪ್ಪೇ ಮುಂತಾದದ್ದರಲ್ಲಿ ಬೆಳ್ಳಿಯೇ ಮುಂತಾದವುಗಳ ಅಧ್ಯಾಸವಿದೆಯೋ ಆ ಬೆಳ್ಳಿಗೆ ಆಧಾರವಾದ ಕಪ್ಪೆಚಿಪ್ಪೇ ಮುಂತಾದದ್ದಕ್ಕೆ ವಿರುದ್ಧವಾದ ಕಲ್ಪನೆಯು ಏನಿದೆಯೋ ತನ್ನ ಸ್ವರೂಪಕ್ಕೆ ವಿರುದ್ಧವಾದ ಬೆಳ್ಳಿಯೇ ಮುಂತಾದ ಯಾವ ಧರ್ಮವಿದೆಯೋ ಅದನ್ನುಳ್ಳದ್ದಾಗಿ ಸುಳ್ಳಾದದ್ದರ ಗ್ರಹಣೆ ಮಾಡುವದನ್ನೇ (ಈ ಇಬ್ಬರೂ) ಅಧ್ಯಾಸವೆಂದು ಹೇಳುತ್ತಾರೆ.

**೧೦. ಈ ಅಧ್ಯಾಸದ ಲಕ್ಷಣವು ಎಲ್ಲಾ ಶಾಸ್ತ್ರಕ್ಕೂ ಅವಿರುದ್ಧವು** – ವಾದಿಗಳಿಗೆ ಭಿನ್ನಾಭಿಪ್ರಾಯವಿದೆಯೆಂದೇ ಆಗಲಿ ! ಪ್ರಕೃತಕ್ಕೆ (ಅದರಿಂ)ದೇನಾಯಿತು? ಏನೇ ಹೇಳಿದರೂ ಒಂದಕ್ಕೆ ಇನ್ನೊಂದರ ಸ್ವಭಾವದಿಂದ ತೋರುವುದೆಂಬುದೇನೂ ಬಿಟ್ಟುಹೋಗುವುದಿಲ್ಲ.

ಸಮಾರೋಪಿತಪ್ರತಿಭಾಸೇ ನಿಮಿತ್ತಮನ್ಯಥಾನ್ಯಥಾ ವ್ಯಾಚಕ್ಷತೇ, ಯದ್ಯಪಿ ಚಾಧಿಷ್ಠಾನಾರೋಪ್ಯಸ್ವರೂಪವಿಶೇಷೇ ತೇ ವಿಪ್ರವದಂತೇ, ತಥಾಪ್ಯನ್ಯಸ್ಯ ಅಧ್ಯಾರೋಪಾಸ್ಪದಸ್ಯ ಅನ್ಯಧರ್ಮಾವಭಾಸತಾಮ್, ಅರ್ಥಾಂತರತ್ವೇನ ಪ್ರತಿಭಾಸತಾಮ್, ಅತಸ್ಮಿಂಸ್ತತ್ಪ್ರತ್ಯಯರೂಪತಾಮ್ ಕ್ವಚಿದಪಿ ವಾದೀ ನ ವ್ಯಭಿಚರತ್ಯಧ್ಯಾಸಃ । ವಾದಿನಾಂ ವಿವಿಧಮತವಿವರಣೇ ತದ್ವಿವಾದವಿವರಣೇ ವಾ ನಾದರಃ ಕೃತಃ । ಫಲ್ಗುಪ್ರಯೋಜನತ್ವಾತ್ । ಸಂತು ತೇಷಾಮವಾಂತರ-ವಿವಾದಾಃ ಪರಃ ಶತಮ್ । ಅತಸ್ಮಿಂಸ್ತತ್ಕಲ್ಪನಮಧ್ಯಾಸ ಇತ್ಯತ್ರ ತು ನ ಕೋಽಪಿ ವಾದೀ ವಿಪ್ರತಿಪದ್ಯತೇ । ಅತಃ ಸರ್ವತಂತ್ರಾವಿರುದ್ಧೋಽಯ-ಮಸ್ಮತ್ಸಿದ್ಧಾಂತ ಇತ್ಯಭಿಪ್ರಾಯಃ । ನ ಹಿ ಸ್ಫಟಿಕೇ ಲೌಹಿತ್ಯಸಂಕ್ರಾಂತಿಂ ಬ್ರುವಾಣೋ ವಾದೀ ವಾಸ್ತವಿಕಮೇವ ಸ್ಫಟಿಕಲೌಹಿತ್ಯಯೋರ್ಧರ್ಮ-ಧರ್ಮಿಭಾವಂ ಮನ್ಯತೇ । ನಾಪಿ ಶುಕ್ತೌ ರಜತಪ್ರತಿಭಾಸಂ ಸ್ವೀಕುರ್ವಾಣೋ

---

ವಾದಿಗಳೇನೋ ಆರೋಪಿತವಾದದ್ದರ ತೋರಿಕೆಯ ಬಗ್ಗೆ ಬೇರೆ ಬೇರೆ ತರಹ ವ್ಯಾಖ್ಯಾನವನ್ನು ಮಾಡುವವರಾದರೂ, (ಅಷ್ಟೇ ಅಲ್ಲದೆ) ಅಧಿಷ್ಠಾನ ಮತ್ತು ಆರೋಪಿತಸ್ವರೂಪದ ವಿಷಯದಲ್ಲಿ ವಿರುದ್ಧವಾಗಿ ಹೇಳುವವರಾದರೂ, ಅಧ್ಯಾರೋಪಕ್ಕೆ ಆಸ್ಪದವಾದ ಒಂದರ ಧರ್ಮಗಳು ಇನ್ನೊಂದರ ಧರ್ಮವಾಗಿಯೂ, (ಒಂದು ವಸ್ತುವು) ಇನ್ನೊಂದಾಗಿಯೂ ತೋರುವು-ದೆಂಬುದೇನಿದೆ, (ಇದನ್ನು ಅಂದರೆ) **ಅದಲ್ಲದ್ದರಲ್ಲಿ ಅದೆಂಬ ತಿಳಿವಳಿಕೆಯ ರೂಪ(ಲಕ್ಷಣ)ವನ್ನು** ಅಧ್ಯಾಸವು ಬಿಟ್ಟಿರುವುದಿಲ್ಲ. ವಾದಿಗಳ ಬೇರೆ ಬೇರೆ ಮತದ (ಅಭಿಪ್ರಾಯದ) ವಿವರಣೆಯಲ್ಲಾಗಲೀ ಅವರ ವಿವಾದದ ವಿವರಣೆಯಲ್ಲಾಗಲೀ (ನಮಗೆ) ಆದರವಿರುವುದಿಲ್ಲ. (ಏಕೆಂದರೆ) ಅದು ಅತ್ಯಲ್ಪಪ್ರಯೋಜನ-ವುಳ್ಳದ್ದಾಗಿರುತ್ತದೆ. ಅವರಲ್ಲಿ ಅವಾಂತರ ವಿವಾದಗಳು (ಬೇಕಾದರೆ) ನೂರಕ್ಕೂ ಹೆಚ್ಚಿರಲಿ, ಆದರೆ ಅದಲ್ಲದ್ದರಲ್ಲಿ ಅದೆಂದು ಕಲ್ಪನೆಮಾಡುವುದೇ ಅಧ್ಯಾಸವು ಎನ್ನುವ ವಿಷಯದಲ್ಲಿ ಯಾವ ವಾದಿಯೂ ವಿರುದ್ಧವಾಗಿರುವುದಿಲ್ಲ. ಆದ್ದರಿಂದ ಈ ನಮ್ಮ ಸಿದ್ಧಾಂತವು ಎಲ್ಲಾಶಾಸ್ತ್ರಕ್ಕೂ ಅವಿರುದ್ಧವು. ಸ್ಫಟಿಕದಲ್ಲಿ ಕೆಂಪು ಬಣ್ಣವನ್ನು ಕಾಣುವ ಮನುಷ್ಯನು ನಿಜವಾಗಿಯೋ ಸ್ಫಟಿಕ ಮತ್ತು ಕೆಂಪಿಗೆ ಧರ್ಮಧರ್ಮಿಭಾವವನ್ನು ತಿಳಿಯುವುದಿಲ್ಲವಷ್ಟೆ ? (ಹಾಗೆಯೇ) ಕಪ್ಪೇಚಿಪ್ಪಿನಲ್ಲಿ ಬೆಳ್ಳಿಯ ಆಭಾಸವನ್ನು

ವಾಸ್ತವಿಕಮೇವ ಶುಕ್ತೇ ರಜತರೂಪತಾಂ ಮನ್ಯತೇ । ಯದ್ಯಪಿ ಕೇಚಿತ್ ಸತ್ಖ್ಯಾತಿವಾದಿನೋ ದುರಾಗ್ರಹವಿಷ್ಟಾಃ ಶುಕ್ತಿಕೈವ ರಜತಾಕಾರೇಣಾಧ್ಯಾಸ-ಕಾಲೇ ಪರಿಣಮತ ಇತಿ ವದಂತಿ, ಅನ್ಯೇ ಚ ರಜತಾಂಶೋಽಪ್ಯಲ್ಪೀಯಾನ್ ಶುಕ್ತಿಕಾಯಾಂ ವಿದ್ಯಮಾನ ಏವ ಭ್ರಾಂತಿಕಾಲೇ ಪ್ರತಿಭಾಸತ ಇತಿ, ತಥಾಪಿ ತೇ ರಜತಪ್ರತಿಭಾಸವ್ಯತಿರಿಕ್ತಾಂ ರಜತಸತ್ತಾಂ ಸಾಧಯಿತುಂ ನೈವ ಪಾರಯಂತಿ । ರಜತಾಕಾರಪರಿಣತೀ ರಜತಪ್ರತಿಭಾಸೋ ವಾ ಭ್ರಾಂತಿ-ಕಾಲಮಾತ್ರೇ ಶಕ್ಯದರ್ಶನ ಇತಿ ಹಿ ತೇಽಭ್ಯುಪಗಚ್ಛಂತಿ । ತಸ್ಮಾದ್ವ್ಯವಹಾರೇ ಸದಾತನಸತ್ವಮನುಭವನ್ತ್ಯಾಃ ಶುಕ್ತಿಕಾಯಾಃ ಸಕಾಶಾನ್ನ್ಯೂನಮೇವ ಸತ್ವಂ ರಜತಸ್ಯ, ಲೌಕಿಕಪರಮಾರ್ಥರಜತಸತ್ವವಿಲಕ್ಷಣಮಿತಿ ತೈರಪ್ಯಾಶ್ರಯಣೀಯಂ ಭವತಿ । ತಾದೃಶಪ್ರತೀತಿಮಾತ್ರಸತ್ವಂ ಹಿ ಮಿಥ್ಯಾತ್ವಮುಚ್ಯತೇಽಸ್ಮಾಭಿರಿತಿ ಸಂಜ್ಞಾಮಾತ್ರೇ ವಿವಾದಃ। ತದೇವಂ ಸತ್ಯಮಿಥ್ಯಾಮಿಥುನೀಕರಣಮೇವಾಧ್ಯಾಸ

---

ಕಾಣುವವನೂ ನಿಜವಾಗಿಯೇ ಕಪ್ಪೇಚಿಪ್ಪಿಗೆ ಬೆಳ್ಳಿತ್ವ ಬಂದಿದೆ ಎಂದೇನೂ ತಿಳಿಯುವುದಿಲ್ಲವಷ್ಟೆ ? ಕೆಲವರೇನೋ ದುರಾಗ್ರಹದಿಂದ ಕೂಡಿದವರಾದ ಸತ್‌ಖ್ಯಾತಿಯನ್ನು ವಾದಮಾಡುವವರು ಅಧ್ಯಾಸಕಾಲದಲ್ಲಿ ಕಪ್ಪೆಚಿಪ್ಪೇ ಬೆಳ್ಳಿಯ ಆಕಾರದಿಂದ ಪರಿಣಾಮಗೊಳ್ಳುತ್ತದೆ ಎಂದು ಹೇಳುವವರಾದರೂ, ಹಾಗೆಯೇ ಮತ್ತೆ ಕೆಲವರು ಕಪ್ಪೆಚಿಪ್ಪಿನಲ್ಲಿ ಅಲ್ಪವಾಗಿ ಬೆಳ್ಳಿಯ ಅಂಶವು ಇದ್ದೇ ಇದ್ದು, (ಅದು) ಭ್ರಾಂತಿಕಾಲದಲ್ಲಿ (ಬೆಳ್ಳಿಯಂತೆ) ತೋರುತ್ತದೆ ಎಂದು ಹೇಳುವವ-ರಾದರೂ, ಬೆಳ್ಳಿಯಂತೆ ತೋರುವುದೆಂಬುದಕ್ಕಿಂತ ಬೇರೆಯಾಗಿ ಬೆಳ್ಳಿಯ ಇರುವಿಕೆಯನ್ನು ಸಾಧಿಸಲು (ಅವರೂ ಸಹ) ಸಮರ್ಥರಾಗಿರುವುದಿಲ್ಲ. ಬೆಳ್ಳಿಯ ಆಕಾರವಾಗಿ ಪರಿಣಾಮಗೊಂಡಿದೆ ಎಂದೋ ಬೆಳ್ಳಿಯ ತೋರಿಕೆ ಎಂದೋ, ಭ್ರಾಂತಿಕಾಲದಲ್ಲಿ ಮಾತ್ರ ತೋರಿಸಲು ಸಾಧ್ಯವೆಂತಲ್ಲವೆ ಅವರು ಒಪ್ಪಿರುವುದು? ಆದ್ದರಿಂದ ವ್ಯವಹಾರದಲ್ಲಿ ಯಾವಾಗಲೂ ಇದೆ ಎಂದು ಅನುಭವಕ್ಕೆ ಬರುವ ಕಪ್ಪೇಚಿಪ್ಪಿಗಿಂತ ಬೆಳ್ಳಿಯ ಇರುವಿಕೆಯು ಕೀಳಾದ ಮಟ್ಟ-ದ್ದೆಂತಲೂ ನಿಜವಾಗಿರುವ ಬೆಳ್ಳಿಗಿಂತ ವಿಲಕ್ಷಣವಾದದ್ದೆಂತಲೂ ಅವರೂ ಸಹ ಒಪ್ಪಲೇಬೇಕು. ಆ ರೀತಿಯಾಗಿ ತೋರಿಕೆಮಾತ್ರದಿಂದ ಇರುವುದನ್ನೇ ಅಲ್ಲವೆ ನಾವು ಸುಳ್ಳು ಎಂದು ಹೇಳುತ್ತಿರುವುದು ? ಎಂದಾದ್ದರಿಂದ ಹೆಸರುಮಾತ್ರದಲ್ಲಿ ವಿವಾದವಾಗಿರುತ್ತದೆ ಅಷ್ಟೆ ! ಹೀಗೆ ನಿಜವನ್ನೂ ಸುಳ್ಳನ್ನೂ ಕಲಬೆರಕೆಮಾಡುವುದೇ ಅಧ್ಯಾಸದ ಲಕ್ಷಣವೆಂಬುದು ಎಲ್ಲಾ ಶಾಸ್ತ್ರಕ್ಕೂ

ಇತಿ ಲಕ್ಷಣಂ ಸರ್ವತಂತ್ರಸಿದ್ಧಾಂತ ಇತಿ ಸಿದ್ಧಮ್ ॥

**೧೧. ಲೌಕಿಕಾನುಭವಾನುಸಾರಿ ಚೇದಂ ಲಕ್ಷಣಮ್** – ನ ಕೇವಲಂ ಸರ್ವವಾದಿಸಂಮತಮಿದಮಧ್ಯಾಸಲಕ್ಷಣಮ್, ಕಿಂ ತು ಪ್ರತಿಪತ್ರನುಭವಾನುಸಾರಿ ಚೇತ್ಯಾಹ – **ತಥಾ ಚ ಲೋಕೇಽನುಭವ; ಶುಕ್ತಿಕಾ ಹಿ ರಜತವದವಭಾಸತ ಇತಿ ।** ಅತ್ರ ಶುಕ್ತಿಕಾ ತಾವತ್ ಪರಮಾರ್ಥವಸ್ತು । ತಸ್ಯಾಃ ಚ ನ ರಜತತ್ವಮಸ್ತಿ; ಅಥ ಚ ಸಾ ರಜತವದವಭಾಸತೇ ಪೂರ್ವದೃಷ್ಟರಜತಬುದ್ಧಿಸಂಸ್ಕಾರಾತ್ । ತಸ್ಮಾದಸತಿ ರಜತೇ ಯದ್ರಜತವದವಭಾಸನಂ ಶುಕ್ತೇಃ ಸೋಽಧ್ಯಾಸೋ ಭ್ರಾಂತಿಃ । ವಿದಿತಶುಕ್ತಿಕಾತತ್ತ್ವಸ್ಯ ವಿಗಲಿತರಜತಭ್ರಾಂತೇರನುಭವೋಽಯಂ "ಶುಕ್ತಿಕಾ ಹಿ ರಜತವದವಭಾಸತ" ಇತಿ । ಭ್ರಾಂತಿಕಾಲೇ ತು "ರಜತಮಿದಮ್" ಇತ್ಯೇವ ಪ್ರತ್ಯಯ ಇತೀದಮನುಭವಸಿದ್ಧಮ್ । ಅತ್ರೋದಾಹರಣೇ ಯದ್ಯಪಿ

---

ಒಪ್ಪಾದ ಸಿದ್ಧಾಂತವು ಎಂದು ಸಿದ್ಧವಾಯಿತು.

**೧೧. ಈ ಲಕ್ಷಣವು ಲೌಕಿಕವಾದ ಅನುಭವಕ್ಕೂ ಹೊಂದುಗಡೆಯಾಗಿರುವಂಥದ್ದು** – ಈ ಅಧ್ಯಾಸಲಕ್ಷಣವು ಎಲ್ಲಾ ವಾದಿಗಳಿಗೂ ಬರೀ ಒಪ್ಪಾಗಿರುವಂಥದ್ದು ಎಂಬುದಷ್ಟೇ ಅಲ್ಲ, ಮತ್ತೇನೆಂದರೆ ತಿಳಿಯುವವರಾದ (ಲೌಕಿಕಸಾಮಾನ್ಯಜನರ) ಅನುಭವಕ್ಕೂ ಹೊಂದುಗಡೆಯಾಗಿರುವಂಥದ್ದು ಎಂಬುದನ್ನು "ಹಾಗೆಯೇ ಲೋಕದಲ್ಲಿ ಅನುಭವವಿರುವುದು, ಕಪ್ಪೇಚಿಪ್ಪೇ ಅಲ್ಲವೆ ಬೆಳ್ಳಿಯಂತೆ ತೋರುವುದು" ಎಂದು ಹೇಳಿರುತ್ತಾರೆ. ಈ ದೃಷ್ಟಾಂತದಲ್ಲಿ ಕಪ್ಪೆಚಿಪ್ಪೆಂಬುದು ನಿಜವಾದ ವಸ್ತುವು, ಅದರಲ್ಲಿ (ಯಾವಾಗಲೂ) ಬೆಳ್ಳಿಯೆಂಬುದಿಲ್ಲ, ಆದರೂ ಹಿಂದೆ ಕಂಡ ಬೆಳ್ಳಿಯ ಸಂಸ್ಕಾರದಿಂದ ಅದು ಬೆಳ್ಳಿಯಂತೆ ತೋರುತ್ತದೆ. ಆದ್ದರಿಂದ ಬೆಳ್ಳಿ ಇಲ್ಲದೆ ಕಪ್ಪೇಚಿಪ್ಪು ಬೆಳ್ಳಿಯಂತೆ ತೋರುವುದೆಂಬುದೇನಿದೆ ಅದೇ ಭ್ರಾಂತಿರೂಪವಾದ ಅಧ್ಯಾಸವು. ಕಪ್ಪೇಚಿಪ್ಪಿನ ನಿಜವನ್ನು ಅರಿತವನಿಗೆ ಬೆಳ್ಳಿಯೆಂಬ ಭ್ರಾಂತಿಯು ತೊಲಗುವುದರಿಂದ "ಕಪ್ಪೇಚಿಪ್ಪೇ ಬೆಳ್ಳಿಯಂತೆ ತೋರುತ್ತದೆ" ಎಂಬ ಅನುಭವವುಂಟಾಗುತ್ತದೆ. ಭ್ರಾಂತಿಕಾಲದಲ್ಲಾದರೋ "ಇದು ಬೆಳ್ಳಿ" ಎಂತಲೇ ತಿಳಿವಳಿಕೆಯು ಎಂಬುದು ಅನುಭವಸಿದ್ಧವಾದದ್ದು. ಈ ಉದಾಹರಣೆಯಲ್ಲಿ

ಶುಕ್ತಿಕಾಯಾಂ ರಜತಂ ನಾಸ್ತಿ ತಥಾಪಿ ಸ್ಥಲಾಂತರೇ ತದ್ವರ್ತತ ಏವ, ತದ್ದರ್ಶನಕೃತಸಂಸ್ಕಾರವಶಾದ್ಧಿ ಶುಕ್ತಾವರಜತರೂಪಾಯಾಮಪಿ ರಜತಬುದ್ಧಿರುದೇತಿ । ತೇನ ಯತ್ರ ಯತ್ರ ಭ್ರಾಂತಿಸ್ತತ್ರ ತತ್ರ ಸಮಾರೋಪಿತೇ-ನಾನ್ಯತ್ರ ಕುತ್ರಚಿತ್ ವಸ್ತುತಃ ಸ್ಥಿತೇನ ಭಾವ್ಯಮಿತಿ ಸ್ಯಾತ್ ಕಸ್ಯಚಿನ್ಮತಿಃ । ತಾಮಪಾಕರ್ತುಂ ಲೋಕಾನುಭವಾಂತರೋದಾಹರಣಮ್ – **"ಏಕಶ್ಚಂದ್ರಃ ಸದ್ವಿತೀಯವದಿತಿ"** । ನ ಹಿ ದ್ವಿತೀಯಚಂದ್ರಃ ಕುತ್ರಚಿದಪಿ ದೃಷ್ಟಪೂರ್ವಃ। ತಥಾಪಿ ಪೂರ್ವದೃಷ್ಟ ಇವ, ವಾಸ್ತವಿಕಚಂದ್ರಸದೃಶ ಇವ ಚ ವ್ಯೋಮ್ನಿ ಭಾಸತೇ ತೈಮಿರಿಕಸ್ಯ । ಅತಃ ಸದ್ವಿತೀಯತ್ವಂ ಚಂದ್ರೇಽಸದಪ್ಯವಭಾಸತ ಇತಿ ಸೋಽಪ್ಯಧ್ಯಾಸಃ । ತದೇವ ಹಿ ದ್ವಿತೀಯಚಂದ್ರಸ್ಯಾಸತ್ವಂ ನಾಮ ಯದತೈಮಿರಿಕೇಣ ಪುರುಷೇಣ ಕುತ್ರಾಪ್ಯಶಕ್ಯದರ್ಶನತ್ವಮ್ । ತಸ್ಮಾದಧಿಷ್ಠಾನೇ ತದನ್ಯತ್ರ ವಾ ಯತ್ ಕ್ವಚಿದಪ್ಯದೃಷ್ಟಪೂರ್ವಂ ತಸ್ಯಾಪಿ ಸಂಭಾವಿತ ಏವಾಧ್ಯಾರೋಪ ಇತಿ ಸಿದ್ಧಮ್। ತಸ್ಮಾದನುಭವಾನುಸಾರ್ಯ-

---

ಕಪ್ಪೇಚಿಪ್ಪಿನಲ್ಲಿ ಬೆಳ್ಳಿ ಇಲ್ಲವಾದರೂ ಬೆಳ್ಳಿ ಎಂಬ ಪದಾರ್ಥವು ಲೋಕದಲ್ಲಿ ಬೇರೆ ಕಡೆ ಇದ್ದೇ ಇರುವುದಾದರೂ, ಅದನ್ನು ನೋಡಿದ್ದರ ಸಂಸ್ಕಾರದಿಂದಲೇ ಬೆಳ್ಳಿಯಲ್ಲದ ಕಪ್ಪೇಚಿಪ್ಪಿನಲ್ಲಿ ಬೆಳ್ಳಿ ಎಂಬ ಬುದ್ಧಿಯೂ ಉಂಟಾಗಿರುತ್ತದೆ. ಇದರಿಂದ ಎಲ್ಲೆಲ್ಲಿ ಭ್ರಾಂತಿಯುಂಟಾಗುವುದೋ ಅಲ್ಲೆಲ್ಲಾ ಆರೋಪಿತವಾದ ವಸ್ತುವೂ ನಿಜವಾಗಿಯೇ ಲೋಕದಲ್ಲಿರಬೇಕೆಂಬ ತಿಳಿವಳಿಕೆಯು ಯಾರಿಗಾದರೂ ಬರಬಹುದೆಂಬ ಕಾರಣದಿಂದ ಅದನ್ನು ತೆಗೆದುಹಾಕುವುದಕ್ಕಾಗಿ "ಒಬ್ಬ ಚಂದ್ರನೇ ಎರಡನೆಯ ಚಂದ್ರನೊಡನಿರುವಂತೆ ಕಾಣುತ್ತಾನೆ" ಎಂಬುದಾಗಿ ಇನ್ನೊಂದು ಉದಾಹರಣೆಯನ್ನು ತೋರಿಸುತ್ತಾರೆ. ಎರಡನೇ ಚಂದ್ರನೆಂಬುದನ್ನು ಲೋಕದಲ್ಲಿ ಯಾರೂ ಕಂಡಿಲ್ಲವಷ್ಟೆ ? ಆದರೂ ಹಿಂದೆ ಕಂಡಂತೆಯೂ ನಿಜವಾದ ಚಂದ್ರನಂತೆಯೂ ಕಣ್ಣಿನ ಪೊರೆ ಬಂದವನಿಗೆ ಆಕಾಶದಲ್ಲಿ ತೋರುತ್ತದೆ. ಆದ್ದರಿಂದ ಎರಡನೆಯ ಚಂದ್ರನಿಲ್ಲವಾದರೂ ಇರುವಂತೆ ಏನು ತೋರುತ್ತದೆ, ಅದೂ ಅಧ್ಯಾಸವೇ. ಕಣ್ಣಿನ ಪೊರೆ ಇಲ್ಲದವನು ಎರಡನೆಯ ಚಂದ್ರನನ್ನು ಕಾಣುವುದಿಲ್ಲವೆಂಬುದೇನಿದೆ, ಅದೇ ಅಲ್ಲವೆ ಆ ಎರಡನೆಯ ಚಂದ್ರನ ಇಲ್ಲದಿರುವಿಕೆಯು ? ಆದ್ದರಿಂದ ಆಶ್ರಯದಲ್ಲಾಗಲೀ ಬೇರೆ ಕಡೆಯಲ್ಲಾಗಲೀ ಏನಾದರೊಂದು ಹಿಂದೆ ಕಾಣದೇ ಇದ್ದುದನ್ನು (ಕಾಣುವುದೇನಿದೆ) ಅದೂ ಸಹ ಅಧ್ಯಾರೋಪವೇ ಎಂದು ಸಿದ್ಧವಾಗುತ್ತದೆ.

ಪೀದಮಧ್ಯಾಸಲಕ್ಷಣಮಿತಿ ಸ್ಥಿತಮ್ ॥

**೧೨. ಏಕೀಯವರ್ಣನಮಧ್ಯಾಸಸ್ಯ** – ಅತ್ರ ಕೇಚಿದ್ವರ್ಣಯಂತಿ । ಜ್ಞಾನಸ್ಯ ವಿಷಯಪಕ್ಷಪಾತಿತ್ವಾತ್, ಅರಜತಸ್ಯ ಚ ರಜತವದವಭಾಸನೇ ಶುಕ್ತಿರಾಲಂಬನಂ ರಜತಂ ತ್ವವಭಾಸತ ಇತಿ ವೈಪರೀತ್ಯಾಪತ್ತೇಃ, "ಮಿಥ್ಯೈವ ರಜತಮಭಾತ್" ಇತಿ ವ್ಯವಹಾರಾನುಸಾರೇಣ ಮಿಥ್ಯಾರಜತಂ ಲೌಕಿಕಪರ-ಮಾರ್ಥರಜತವಿಲಕ್ಷಣಮಭಿನವಮೇವ ರಜತಜ್ಞಾನಾವಲಂಬನಂ ತತ್ಕಾಲೇ ಸಮುತ್ಪದ್ಯತ ಇತಿ ಕಲ್ಪನೀಯಮ್ । ನ ಚೋಪಾದಾನಂ ವಿನಾ ಕಿಂಚಿತ್ ಸಮುತ್ಪತ್ತುಮಲಮ್ । ಅತೋ ಮಿಥ್ಯಾರಜತೋಪಾದಾನಭೂತಂ ಭಾವರೂಪಂ ಕಿಂಚಿನ್ಮಿಥ್ಯಾಭೂತಮೇವಾಂಗೀಕಾರ್ಯಮ್ । ತದೇವಾಜ್ಞಾನ-ಮಿತ್ಯುಚ್ಯತೇಽಸ್ಮಾಭಿಃ । ತಚ್ಚಾಜ್ಞಾನಂ ಶುಕ್ತಿರಜತಪ್ರತಿಭಾಸಸ್ಥಲೇ ಶುಕ್ತ್ಯವಚ್ಛಿನ್ನಚೈತನ್ಯಾಶ್ರಿತಮ್ । ಇಯಂ ಹಿ ಪ್ರತ್ಯಕ್ಷಪ್ರಕ್ರಿಯಾ ಸಂಕ್ಷೇಪತಃ।

---

ಆದ್ದರಿಂದ ಈ ಅಧ್ಯಾಸದ ಲಕ್ಷಣವು ಅನುಭವಾನುಸಾರಿಯಾಗಿಯೂ ಇದೆ ಎಂದು ಸಿದ್ಧವಾಗುತ್ತದೆ.

**೧೨. ಅಧ್ಯಾಸವನ್ನು ಕುರಿತು ಕೆಲವರವಿವರಣೆಯು** – ಇಲ್ಲಿ ಕೆಲವರು (ಈ ರೀತಿ) ವರ್ಣಿಸುತ್ತಾರೆ. ಜ್ಞಾನವು ವಿಷಯಪಕ್ಷವಾದ್ದರಿಂದ (ಅಂದರೆ ವಿಷಯುವಿಲ್ಲದೇ ಜ್ಞಾನವುಂಟಾಗಲಾರದ್ದಾದರಿಂದ) ರಜತವಲ್ಲದ್ದು ರಜತದಂತೆ ತೋರುವುದಕ್ಕೆ ಅಲ್ಲಿ ಕಪ್ಪೇಚಿಪ್ಪು ಅವಲಂಬನೆಯು, ಅಲ್ಲಿ ಬೆಳ್ಳಿಯಾದರೋ ತೋರುತ್ತದೆ ಎಂದರೆ (ಅದು) ವಿಪರೀತವಾಗುತ್ತದೆಯಾದ್ದ-ರಿಂದಲೂ, (ಲೋಕದಲ್ಲೂ) "ಸುಳ್ಳಾಗಿಯೇ ರಜತವು ತೋರಿತೆಂಬ" ವ್ಯವಹಾರವಿರುವುದರಿಂದಲೂ, ಲೋಕದಲ್ಲಿರುವ ನಿಜವಾದ ರಜತಕ್ಕಿಂತ ಬೇರೆಯಾದ ಸುಳ್ಳಾದ ರಜತವು ತತ್ಕಾಲಕ್ಕೆ ರಜತಜ್ಞಾನಕ್ಕೆ ಆಶ್ರಯವಾಗಿ ಉಂಟಾಗುತ್ತದೆ ಎಂದು ಕಲ್ಪಿಸಬೇಕು. ಉಪಾದಾನವಿಲ್ಲದೇ (ಏನೂ) ಹುಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ಸುಳ್ಳಾದ ರಜತಕ್ಕೆ ಉಪಾದಾನವಾದ (ಮೂಲಕಾರಣವಾದ) ಭಾವರೂಪವಾದ ಮಿಥ್ಯಾಭೂತವಾದ ಒಂದಾ-ನೊಂದಿರಬೇಕು. ಅದನ್ನೇ ನಾವು ಅಜ್ಞಾನವೆನ್ನುತ್ತೇವೆ. ಆ ಅಜ್ಞಾನವು ಶುಕ್ತಿರಜತವು ತೋರುವ ಸ್ಥಳದಲ್ಲಿ ಶುಕ್ತಿಯನ್ನು ಪರಿಚ್ಛೇದಗೊಳಿಸಿದ ಚೈತನ್ಯವನ್ನು ಆಶ್ರಯಿಸಿಕೊಂಡಿರುವಂಥದ್ದು. ಇದು ಸಂಕ್ಷೇಪವಾದ

ಅಂತಕರಣವೃತ್ತಿರ್ವಿಷಯದೇಶಂ ಗತ್ವಾ ವಿಷಯಾಕಾರಂ ಭಜತೇ । ತದನು ತತ್ಸ್ಥಚಿದಾಭಾಸೇನ ವಿಷಯಾವರಣಮಪಾಕ್ರಿಯತೇ । ತತೋ ವಿಷಯದೇಶಸ್ಥಚೈತನ್ಯಸ್ಯ ಪ್ರಮಾತೃಚೈತನ್ಯಸ್ಯ ಚಾಭೇದಾದ್ವಿಷಯಪ್ರತ್ಯಕ್ಷತಾ ಸಮುಪಜಾಯತೇ । ಶುಕ್ತಿರಜತಾದಿಮಿಥ್ಯಾವಸ್ತುಪ್ರತಿಭಾಸಸ್ಥಲೇ ಪುನಃ ಶುಕ್ತ್ಯವಚ್ಛಿನ್ನಚೈತನ್ಯಾಶ್ರಿತಾವಿದ್ಯಾ ರಜತರೂಪೇಣ ಪರಿಣಮತೇ । ದೋಷಪ್ರತಿಬಂಧಾತ್ತು ವೃತ್ತಿರತ್ರ ಶುಕ್ತಿಕಾದಿವಿಷಯಾಕಾರಂ ನ ಭಜತೇ । ಯದಾ ಚಾತ್ರ ಶುಕ್ತ್ಯವಚ್ಛಿನ್ನಚೈತನ್ಯಸ್ಥಾಽವಿದ್ಯಾ ರಜತಾಕಾರೇಣ ಪರಿಣಮತೇ ತದೈವ ಮಿಥ್ಯಾವಸ್ತುಪ್ರತಿಭಾಸಾರ್ಥಂ ಸಾಕ್ಷಿಚೈತನ್ಯಸ್ಥಾಽವಿದ್ಯಾ ರಜತ-ಜ್ಞಾನಾಕಾರೇಣ ಪರಿಣಮತೇ । ತದೇವಂ ರಜತಾಕಾರಸ್ಯ ರಜತಜ್ಞಾನಾಕಾರಸ್ಯ ಚಾವಿದ್ಯಾಪರಿಣಾಮತ್ವಾದ್ರಜತತಜ್ಜ್ಞಾನಯೋಃ ಶುಕ್ತಿಜ್ಞಾನತಿರಸ್ಕಾರ್ಯ-ತ್ವಾಚ್ಚ ರಜತಂ ತಜ್ಜ್ಞಾನಂ ಚ ಮಿಥ್ಯೇತ್ಯುಚ್ಯೇತೇ । ಅಸತಃ ಪ್ರತಿಭಾಸಾ-

---

ಪ್ರತ್ಯಕ್ಷಪ್ರಕ್ರಿಯೆಯು. ಇದರ ವಿವರಣೆಯು – ಅಂತಃಕರಣವೃತ್ತಿಯು ವಿಷಯಜಾಗಕ್ಕೆ ಹೋಗಿ (ಆ) ವಿಷಯಾಕಾರವನ್ನು ಹೊಂದುತ್ತದೆ. ಅದನ್ನು ಅನುಸರಿಸಿ ಆ ವೃತ್ತಿಯಲ್ಲಿರುವ ಚಿದಾಭಾಸದಿಂದ ವಿಷಯದ ಆವರಣವು ಹೋಗಲಾಡಿಸಲ್ಪಡುತ್ತದೆ. ಆಮೇಲೆ ವಿಷಯದೇಶ (ದಿಂದ ಅವಚ್ಛಿನ್ನವಾದ) ಚೈತನ್ಯವೂ ಪ್ರಮಾತೃಚೈತನ್ಯವೂ ಒಂದಾಗಿ ವಿಷಯವು ಪ್ರತ್ಯಕ್ಷವಾಗುತ್ತದೆ. ಆದರೆ ಶುಕ್ತಿರಜತವೇ ಮುಂತಾದ ಸುಳ್ಳಾದ ವಿಷಯದ ಪ್ರತ್ಯಕ್ಷವಾಗುವಾಗಲಾದರೋ ಶುಕ್ತಿದೇಶದಲ್ಲಿರುವ ಚೈತನ್ಯವನ್ನಾಶ್ರಯಿಸಿರುವ ಅವಿದ್ಯೆಯು ಬೆಳ್ಳಿಯ ರೂಪದಿಂದ ಪರಿಣಾಮಗೊಳ್ಳುತ್ತದೆ. (ಅಂತಃಕರಣ) ವೃತ್ತಿಯು (ನೇತ್ರ) ದೋಷದಿಂದೊಡಗೂಡಿರುವುದರಿಂದ ಶುಕ್ತಿಯ ರೂಪವನ್ನು ಪಡೆಯುವುದಿಲ್ಲ. ಯಾವಾಗ ಇಲ್ಲಿ ಶುಕ್ತ್ಯವಚ್ಛಿನ್ನವಾದ ಚೈತನ್ಯದಲ್ಲಿರುವ ಅವಿದ್ಯೆಯು ಬೆಳ್ಳಿಯ ಆಕಾರದಿಂದ ಪರಿಣಾಮಗೊಳ್ಳುತ್ತದೆಯೋ ಆಗಲೇ ಸುಳ್ಳಾದ ವಸ್ತುವು ತೋರುವುದಕ್ಕಾಗಿ ಸಾಕ್ಷಿಚೈತನ್ಯದಲ್ಲಿದ್ದ ಅವಿದ್ಯೆಯು ಬೆಳ್ಳಿಯ ಜ್ಞಾನಾಕಾರವಾಗಿ ಪರಿಣಾಮಗೊಳ್ಳುತ್ತದೆ. ಹೀಗೆ ಬೆಳ್ಳಿಯ ಆಕಾರವೂ, ಬೆಳ್ಳಿಯ ಜ್ಞಾನದ ಆಕಾರವೂ, ಅವಿದ್ಯೆಯ ಪರಿಣಾಮವಾದ್ದರಿಂದಲೂ ಬೆಳ್ಳಿ ಮತ್ತು ಅದರ ಜ್ಞಾನಗಳೆರಡೂ ಕಪ್ಪೇಚಿಪ್ಪೆಂಬ ಜ್ಞಾನದಿಂದ ತೊಲಗುವಂಥದ್ದಾದ್ದರಿಂದ ಬೆಳ್ಳಿ ಎಂಬುದೂ, ಅದರ ಜ್ಞಾನವೂ ಸಹ ಸುಳ್ಳೆಂದು ಕರೆಸಿಕೊಂಡಿರುತ್ತದೆ. ಸುಳ್ಳಾದದ್ದು ತೋರಬಾರದಾದ್ದರಿಂದಲೂ

ನುಪಪತ್ತೇಃ ಸತಶ್ಚ ಬಾಧಾನುಪಪತ್ತೇರ್ಮಿಥ್ಯಾರಜತಂ ತಜ್ಜ್ಞಾನಂ ಚ ಸದಸದ್ಭ್ಯಾಮನಿರ್ವಚನೀಯೋ ಭವತಃ । ತದೇವಂ ಕಿಲ ಶುಕ್ತಿಕಾರಜತ-ಪ್ರತಿಭಾಸಸ್ಥಲೇ ಮಿಥ್ಯಾರಜತಮನಿರ್ವಚನೀಯಮವಿದ್ಯಾಪರಿಣಾಮೋ-ನೋತ್ಪದ್ಯತ ಇತ್ಯವಗಮ್ಯತೇ । ಕಥಂ ಪುನರಧಿಷ್ಠಾನಜ್ಞಾನಂ ವಿನಾ ತಾದೃಶ ಮಿಥ್ಯಾಜ್ಞಾನನಿವೃತ್ತಿಃ ? ನ ಹಿ ಶುಕ್ತ್ಯವಚ್ಛಿನ್ನಚೈತನ್ಯಪ್ರಕಾಶೇನ ತತ್ರೋತ್ಪನ್ನರಜತಸ್ಯ ನಿವೃತ್ತಾವಪಿ ರಜತಜ್ಞಾನಸ್ಯ ನಿವೃತ್ತಿರುಪಪದ್ಯತೇ । ತದಧಿಷ್ಠಾನಸ್ಯ ಸಾಕ್ಷಿಚೈತನ್ಯಸ್ಯ ಪ್ರತಿಭಾಸಾಭಾವಾದಿತಿ ಚೇತ್ । ಅತ್ರ ವದಂತಿ । ಜ್ಞಾನಸ್ಯ ವಿಷಯಾಧೀನತ್ವಾತ್, ವಿಷಯಸ್ಯ ಚ ರಜತಸ್ಯ ನಿವೃತ್ತತ್ವಾತ್, ರಜತಜ್ಞಾನಸ್ಯ ನಿವೃತ್ತಿರುಪಪದ್ಯತೇ । ಅಥವಾ ನಿವೃತ್ತಿರ್ದ್ವಿವಿಧಾ । ಏಕಾ, ಸರ್ವಥಾಪಿ ನಿವೃತ್ತಿಃ । ಅಪರಾ, ತು ಕಾರಣೇ ಲಯಃ । ಯತ್ರ ಸರ್ವಥಾ ನಿವೃತ್ತಿಃ, ತತ್ರೈವ ತದಧಿಷ್ಠಾನಜ್ಞಾನಾಪೇಕ್ಷಾ । ಯತ್ರ ಪುನಃ ಕಾರಣೇ ಲಯ ಏವ, ನ ಸರ್ವಥಾ ನಿವೃತ್ತಿಃ, ತತ್ರ ತು

---

ಇರುವಂಥದ್ದಕ್ಕೆ ಬಾಧೆಯಾಗುವುದೆಂಬುದು ಹೊಂದುವಂತಿಲ್ಲವಾದ್ದರಿಂದಲೂ ಮಿಥ್ಯಾರಜತವೂ ಅದರ ಜ್ಞಾನವೂ ಸಹ ಸತ್ತು ಅಸತ್ತುಗಳಿಗಿಂತ ಬೇರೆಯಾಗಿ ಅನಿರ್ವಚನೀಯವೇ ಆಗಿರುತ್ತದೆ. ಹೀಗೇ ಅಲ್ಲವೆ ಕಪ್ಪೇಚಿಪ್ಪು, ಬೆಳ್ಳಿ ಎಂದು ತೋರುವ ಜಾಗದಲ್ಲಿ ಮಿಥ್ಯಾರೂಪವಾದ ಅನಿರ್ವಚನೀಯವಾದ ರಜತವು ಅವಿದ್ಯೆಯ ಪರಿಣಾಮದಿಂದ ಹುಟ್ಟುತ್ತದೆ ಎಂದು ತಿಳಿಯುತ್ತದೆ ? ಹಾಗಾದರೆ, ಅಧಿಷ್ಠಾನದ ಜ್ಞಾನವಿಲ್ಲದೇ ಆ ರೀತಿಯ ಮಿಥ್ಯಾಜ್ಞಾನವು ಹೇಗೆ ತೊಲಗುತ್ತದೆ? ಕಪ್ಪೇಚಿಪ್ಪಿನ ಜಾಗದಲ್ಲಿರುವ ಅರಿವೆಂಬುದರ ಬೆಳಕಿನಿಂದ, ಅಲ್ಲುಂಟಾದ ಬೆಳ್ಳಿಯು ತೊಲಗಿದರೂ ಬೆಳ್ಳಿಯ ಜ್ಞಾನವು ಹೋಗುವುದಿಲ್ಲವಲ್ಲವೆ ? ಏಕೆಂದರೆ ಅದಕ್ಕೆ ಅಧಿಷ್ಠಾನವಾದ ಸಾಕ್ಷಿಚೈತನ್ಯದ ಪ್ರತಿಭಾಸವು ಇರುವುದಿಲ್ಲ ಎಂದು (ಕೇಳಿದರೆ) ಅದಕ್ಕೆ ಹೇಳುತ್ತಾರೆ – ಜ್ಞಾನವು ವಿಷಯಕ್ಕೆ ಅಧೀನವಾಗಿರುವುದರಿಂದಲೂ ವಿಷಯವಾದ ಬೆಳ್ಳಿಯು ತೊಲಗಿರುವುದರಿಂದಲೂ ಬೆಳ್ಳಿಯಜ್ಞಾನದ ನಿವೃತ್ತಿಯು ಹೊಂದುತ್ತದೆ. ಅಥವಾ ನಿವೃತ್ತಿಯು ಎರಡು ಪ್ರಕಾರವಾಗಿದೆ, ಒಂದು – ಸಂಪೂರ್ಣವಾಗಿ ಇಲ್ಲವಾಗುವುದು, ಇನ್ನೊಂದು – ಕಾರಣದಲ್ಲಿ ಇಲ್ಲವಾಗುವುದು. ಎಲ್ಲಿ ಸಂಪೂರ್ಣ ನಿವೃತ್ತಿಯಾಗುತ್ತದೋ, ಅಲ್ಲೇ ಅಧಿಷ್ಠಾನಜ್ಞಾನದ ಅಪೇಕ್ಷೆಯು ಇರುತ್ತದೆ. ಎಲ್ಲಾದರೋ ಕಾರಣದಲ್ಲಿ ಲಯವಾಗುವದೇ ಆಗಿರುತ್ತದೋ,

ನಾಪೇಕ್ಷತೇऽಧಿಷ್ಠಾನಜ್ಞಾನಮ್ । ತದ್ಯಥಾ – ಸುಷುಪ್ತೌ ಸರ್ವಪದಾರ್ಥಾನಾಂ ಭವತಿ ಕಾರಣೇ ಲಯಃ । ತತ್ರ ಭೋಗಕಾರಣಸ್ಯ ಕರ್ಮಣೋऽಭಾವ ಏವ ಹೇತುರ್ಲಯೇ ನಾಧಿಷ್ಠಾನಜ್ಞಾನಮ್ । ಏವಮತ್ರಾಪಿ ರಜತಜ್ಞಾನಸ್ಯ ನಾತ್ಯಂತಿಕೀ ನಿವೃತ್ತಿಃ ಯೇನಾಧಿಷ್ಠಾನಜ್ಞಾನಮಪೇಕ್ಷ್ಯತೇ । ಅಪಿ ತು ಕಾರಣೇऽಜ್ಞಾನೇ ಲಯ ಏವೇತಿ ಕಲ್ಪ್ಯತೇ । ಯಥಾ ಮುಸಲಪ್ರಹಾರೇಣ ಘಟಸ್ಯ ಸ್ವಕಾರಣೇ ಲಯಸ್ತದ್ವತ್ । ತಥಾ ಚ ಶುಕ್ತಿಕಾಜ್ಞಾನೇನ ರಜತನಿವೃತ್ತಿಃ। ರಜತಾಭಾವೇನ ಚ ರಜತಜ್ಞಾನನಿವೃತ್ತಿರಿತ್ಯುಪಪದ್ಯತೇ । ಪ್ರಕಾರಾಂತರೇಣಾಪಿ ರಜತಜ್ಞಾನನಿವೃತ್ತಿರುಪಪಾದಯಿತುಂ ಶಕ್ಯತೇ । ಕಥಮ್? ಶುಕ್ತಿಜ್ಞಾನಕಾಲೇ ಹಿ ಶುಕ್ತ್ಯವಚ್ಛಿನ್ನಚೈತನ್ಯಂ ಶುಕ್ತಿರೂಪಾಂತಃ-ಕರಣವೃತ್ತ್ಯವಚ್ಛಿನ್ನಚೈತನ್ಯಂ ಚಾಭಿನ್ನೇ ಭವತಃ । ಸ್ವತೋ ಭೇದಾಭಾವಾಚ್ಚೈತನ್ಯಸ್ಯ, ಉಪಾಧಿಭೇದೇನೈವ ತದ್ಭೇದಾವಭಾಸಾತ್ ।

---

ಸಂಪೂರ್ಣನಿವೃತ್ತಿಯಾಗಿರುವುದಿಲ್ಲವೋ ಅಲ್ಲಿ ಅಧಿಷ್ಠಾನಜ್ಞಾನದ ಅಪೇಕ್ಷೆಯು ಇರುವುದಿಲ್ಲ. ಅದು ಹೇಗೆಂದರೆ – ಸುಷುಪ್ತಿಯಲ್ಲಿ ಎಲ್ಲಾ ಪದಾರ್ಥಗಳೂ ಕಾರಣದಲ್ಲಿ ಲಯವಾಗಿರುತ್ತವೆ, ಅಲ್ಲಿ ಭೋಗಕ್ಕೆ ಕಾರಣವಾದ ಕರ್ಮವು ಇಲ್ಲದಿರುವುದೇ ಲಯಕ್ಕೆ ಕಾರಣವಾಗಿರುತ್ತದೆ, ಅಧಿಷ್ಠಾನಜ್ಞಾನವಲ್ಲ. ಇದೇ ರೀತಿ ಇಲ್ಲೂ, ರಜತಜ್ಞಾನವು ಅತ್ಯಂತವಾಗಿ ನಿವೃತ್ತಿಯಾಗಿರುವುದಿಲ್ಲ. ಹಾಗಿದ್ದರೆ ಅಧಿಷ್ಠಾನದ ಅಪೇಕ್ಷೆಯು ಇದ್ದೀತು ! ಆದರೆ ಇಲ್ಲಿ ಕಾರಣವಾದ ಅಜ್ಞಾನದಲ್ಲಿ ಲಯವೇ ಎಂದು ಕಲ್ಪಿಸಲಾಗುತ್ತದೆ. ಹೇಗೆ ಒನಕೆಯಿಂದ ಹೊಡೆಯುವದರಿಂದ ಗಡಿಗೆಯು ತನ್ನ ಕಾರಣವಾದ (ಮಣ್ಣಿ)ನಲ್ಲಿ ಲಯವಾಗುತ್ತದೋ, ಹಾಗೆಯೇ ಕಪ್ಪೇಚಿಪ್ಪಿನ ಜ್ಞಾನದಿಂದ ಬೆಳ್ಳಿಯು ತೊಲಗುತ್ತದೆ. ಬೆಳ್ಳಿಯು ಇಲ್ಲದ್ದರಿಂದ ಬೆಳ್ಳಿಯ ಜ್ಞಾನದ ನಿವೃತ್ತಿಯು ಹೊಂದುತ್ತದೆ. ಬೇರೊಂದು ರೀತಿಯಿಂದಲೂ ಬೆಳ್ಳಿಯ ಜ್ಞಾನದ ನಿವೃತ್ತಿಯನ್ನು ಹೊಂದಿಸುವುದಕ್ಕೆ ಆಗುತ್ತದೆ. ಹೇಗೆಂದರೆ – ಕಪ್ಪೇಚಿಪ್ಪಿನ ಜ್ಞಾನಕಾಲದಲ್ಲಿ ಶುಕ್ತ್ಯವಚ್ಛಿನ್ನಚೈತನ್ಯವೂ ಶುಕ್ತಿರೂಪವಾದ ಅಂತಃಕರಣ ವೃತ್ತ್ಯವಚ್ಛಿನ್ನವಾದ ಚೈತನ್ಯವೂ, ಅಭಿನ್ನವಾಗಿರುತ್ತವೆ. ಚೈತನ್ಯಕ್ಕೆ ಸ್ವತಃ ಭೇದವಿಲ್ಲವಾದ್ದರಿಂದಲೂ ಉಪಾಧಿಭೇದದಿಂದಲೇ ಆ ಭೇದವು ತೋರುವುದರಿಂದಲೂ ಹೀಗೆಯೇ. ಸಾಕ್ಷಿಚೈತನ್ಯವೇ ವೃತ್ತ್ಯುಪಾಧಿಗೆ

ವೃತ್ತ್ಯವಚ್ಛಿನ್ನಚೈತನ್ಯಮೇವ ತು ಸಾಕ್ಷಿಚೈತನ್ಯಂ ನಾನ್ಯತ್, ಸಾಕ್ಷಿಚೈತನ್ಯಸ್ಯೈವ ವೃತ್ತ್ಯುಪಾಧಿವಶಾದ್ವೃತ್ತ್ಯವಚ್ಛಿನ್ನಚೈತನ್ಯಮಿತಿ ವ್ಯವಹಾರಾತ್ । ತಥಾ ಚ ಶುಕ್ತಿಕಾಪ್ರತ್ಯಕ್ಷಸ್ಥಲೇ ಸಾಕ್ಷಿಚೈತನ್ಯಸ್ಯ ಶುಕ್ತ್ಯವಚ್ಛಿನ್ನಚೈತನ್ಯಸ್ಯ ಚಾಭೇದಾತ್, ತಾವದುಕ್ತಂ ಭವತಿ ಶುಕ್ತ್ಯವಚ್ಛಿನ್ನಂ ಚೈತನ್ಯಂ ಪ್ರಕಾಶತ ಇತಿ, ಯಾವದುಕ್ತಂ ಭವತಿ ಸಾಕ್ಷಿಚೈತನ್ಯಂ ಪ್ರಕಾಶತ ಇತಿ । ತದೇವಂ ಶುಕ್ತಿಕಾಜ್ಞಾನೇನಾಧಿಷ್ಠಾನಭೂತಸಾಕ್ಷಿಚೈತನ್ಯಸ್ಯಾಪಿ ಪ್ರತಿಭಾಸಾದುಪಪದ್ಯತೇ ಮಿಥ್ಯಾಭೂತರಜತಜ್ಞಾನನಿವೃತ್ತಿರಿತಿ ॥ ಅನ್ಯೋಽಪಿ ಪ್ರಕಾರ ಉಪವರ್ಣ್ಯತೇ ಯಥೈತದುಪಪದ್ಯತೇ । ಶುಕ್ತಿಸ್ಥೇದಮಾಕಾರವೃತ್ತ್ಯುಪಹಿತಚೈತನ್ಯಸ್ಥಾಽವಿದ್ಯಾ ರಜತತಜ್ಜ್ಞಾನಾಕಾರಪರಿಣಾಮಂ ಭಜತ ಇತ್ಯೇವ ಕಲ್ಪ್ಯತಾಮ್ । ತತ್ರ ತದವಿದ್ಯಾತಮೋಂಽಶಸ್ಯ ರಜತರೂಪೇಣ ಸತ್ವಾಂಶಸ್ಯ ಚ ತಜ್ಜ್ಞಾನರೂಪೇಣ ಪರಿಣಾಮೋಪಪತ್ತೇಃ । ಶುಕ್ತಿಕಾಪ್ರತ್ಯಕ್ಷಸ್ಥಲೇ ಚ ಪೂರ್ವಮೇವ ವರ್ಣಿತಪ್ರಕಾರೇಣ ಶುಕ್ತಿತದಾಕಾರವೃತ್ತ್ಯುಪಹಿತಚೈತನ್ಯಯೋರೈಕ್ಯಾತ್

---

ಅಧೀನವಾಗಿ ವೃತ್ತ್ಯವಚ್ಛಿನ್ನಚೈತನ್ಯವೆಂದು ವ್ಯವಹರಿಸುತ್ತಿರುವುದರಿಂದ ವೃತ್ತ್ಯವಚ್ಛಿನ್ನವಾದ ಚೈತನ್ಯವೇ ಸಾಕ್ಷಿಚೈತನ್ಯವೇ ಹೊರತು ಬೇರೆಯದಲ್ಲ. ಆಗ ಶುಕ್ತಿಪ್ರತ್ಯಕ್ಷಜಾಗದಲ್ಲಿ ಸಾಕ್ಷಿಚೈತನ್ಯಕ್ಕೂ ಶುಕ್ತ್ಯವಚ್ಛಿನ್ನಚೈತನ್ಯಕ್ಕೂ ಭೇದವಿಲ್ಲವಾದ್ದರಿಂದ ಸಾಕ್ಷಿಚೈತನ್ಯವು ತೋರುತ್ತಿದೆ ಎಂದರೆ ಏನರ್ಥ-ವಾಗುತ್ತದೋ ಶುಕ್ತ್ಯವಚ್ಛಿನ್ನವಾದ ಚೈತನ್ಯವು ತೋರುತ್ತಿದೆ ಎಂದರೂ ಅದೇ ಅರ್ಥವಾಗುತ್ತದೆ. ಹೀಗೆ ಶುಕ್ತಿಜ್ಞಾನದಿಂದ ಅದರ ಅಧಿಷ್ಠಾನವಾಗಿರುವ ಸಾಕ್ಷಿಚೈತನ್ಯವೂ ತೋರುವುದರಿಂದ ಮಿಥ್ಯೆಯಾಗಿರುವ ರಜತದ ನಿವೃತ್ತಿ ಎಂಬುದೂ ಹೊಂದುತ್ತದೆ. ಇದು ಹೇಗೆ ಹೊಂದುತ್ತದೆ ಎಂಬುದಕ್ಕೆ ಮತ್ತೊಂದು ಪ್ರಕಾರವನ್ನು ವರ್ಣಿಸಲಾಗುತ್ತದೆ. ಶುಕ್ತಿಯಲ್ಲಿರುವ "ಇದಂ" ಆಕಾರದ ವೃತ್ತಿಯಲ್ಲಿ ತೋರಿಕೊಳ್ಳುವ ಚೈತನ್ಯದಲ್ಲಿರುವ ಅವಿದ್ಯೆಯು ಬೆಳ್ಳಿ ಮತ್ತು ಅದರ ಜ್ಞಾನದ ಆಕಾರದ ಪರಿಣಾಮವನ್ನು ಹೊಂದುತ್ತದೆ ಎಂದೇ ಕಲ್ಪಿಸಿರಿ ! ಅಲ್ಲಿ ಆ ಅವಿದ್ಯೆ ಎಂಬ ತಮಸ್ಸಿನ ಅಂಶವಾದ ಬೆಳ್ಳಿಯ ರೂಪದಿಂದಲೂ ಸತ್ವದ ಅಂಶವಾದ ಅದರ ಜ್ಞಾನದ ರೂಪದಿಂದಲೂ ಪರಿಣಾಮವು ಹೊಂದುತ್ತದೆ ಎಂಬುದು (ಯುಕ್ತವಾಗಿದೆ.) ಶುಕ್ತಿಕೆಯ ಪ್ರತ್ಯಕ್ಷಜಾಗದಲ್ಲಿ ಹಿಂದೆ ವರ್ಣನೆ ಮಾಡಿದ ರೀತಿಯಿಂದ ಶುಕ್ತಿಯೂ ಅದರ ಆಕಾರವಾದ ವೃತ್ತಿಯಲ್ಲಿ ತೋರುವ ಚೈತನ್ಯವೂ (ಎರಡೂ) ಒಂದೇ

ಶುಕ್ತಿಕಾಜ್ಞಾನೇನ ರಜತಂ ತಜ್ಜ್ಞಾನಂ ಚ ನಿವರ್ತ್ಯೇತೇ ಇತಿ ನಾನುಪಪನ್ನಂ ಕಿಂಚಿತ್ । ತದೇವಂ ಸರ್ವತ್ರಾಧ್ಯಾಸೇ ವೃತ್ತ್ಯುಪಹಿತಚೈತನ್ಯಮೇವ ಭವತ್ಯಧಿಷ್ಠಾನಮ್ । ತಜ್ಜ್ಞಾನಾದೇವ ಚ ಸರ್ವತ್ರಾಧ್ಯಾರೋಪಿತಂ ರಜತಾದಿಕಂ ತಜ್ಜ್ಞಾನಂ ಚ ಬಾಧ್ಯೇತೇ ಇತಿ ಸರ್ವಮನವದ್ಯಮಿತಿ ॥(ವಿ,ತತ್ತ್ವ ಪು ೨೬, ವೃತ್ತಿ).

**೧೩. ಉಕ್ತಾಧ್ಯಾಸವರ್ಣನಸ್ಯಾಸಾಂಗತ್ಯಮ್** – ಸರ್ವಮೇವೈತ-ದ್ವರ್ಣನಮಸಂಗತಮ್ । "ತಥಾ ಹಿ ಲೋಕೇಽನುಭವಃ" ಇತಿ ಲೋಕಸಿದ್ಧಸ್ಯ ಶುಕ್ತಿರಜತಾಧ್ಯಾಸಸ್ಯೋದಾಹರಣೇನ ಹಿ ಸ್ವೋಕ್ತಸ್ಯಾಧ್ಯಾಸಲಕ್ಷಣಸ್ಯಾನು-ಭವಾನುಸಾರಿತ್ವಂ ಪ್ರದರ್ಶಯಿತುಂ ಭಾಷ್ಯಕಾರಸ್ಯ ಪ್ರವೃತ್ತಿರಿತಿ ತಾವನ್ನೋಪ-ಪಾದನಮಪೇಕ್ಷತೇ । ಅನೇನ ತು ಭಾಷ್ಯೇಣ ಕಥಮಪಿ ನ ಸಂಗಚ್ಛತ ಇದಮೇಕದೇಶಿಭಿಃ ಕೃತಮಧ್ಯಾಸವರ್ಣನಮ್ । ಅನುಭವಾನಾರೂಢತ್ವಾತ್,

---

ಆಗಿರುವದರಿಂದ ಶುಕ್ತಿಕಾಜ್ಞಾನದಿಂದ ರಜತವೂ ಅದರ ಜ್ಞಾನವೂ (ಎರಡೂ) ತೊಲಗಿಯೇ ತೊಲಗುತ್ತದೆ ಎಂದಾದ್ದರಿಂದ ಇಲ್ಲಿ ಯಾವುದೂ ಹೊಂದದೇ ಇರುವುದೆಂಬುದಿಲ್ಲ. ಹೀಗೆ ಎಲ್ಲಾ ಕಡೆಯಲ್ಲೂ ಅಧ್ಯಾಸದಲ್ಲಿ ವೃತ್ತ್ಯುಪಹಿತವಾದ ಚೈತನ್ಯವೇ ಅಧಿಷ್ಠಾನವಾಗಿರುತ್ತದೆ. ಅದರ ಜ್ಞಾನದಿಂದಲೇ ಎಲ್ಲಾ ಜಾಗದಲ್ಲೂ ಅಧ್ಯಾರೋಪಿತವಾದ ರಜತವೇ ಮುಂತಾದದ್ದೂ ಮತ್ತು ಅದರ ಜ್ಞಾನವೂ ಸಹ ಬಾಧಿತವಾಗಿಯೇ ತೀರುತ್ತದೆ ಎಂದಾದ್ದರಿಂದ ಎಲ್ಲವೂ ಇಲ್ಲಿ ನಿರ್ದುಷ್ಟವಾಗಿರುತ್ತದೆ. (ವಿ,ತತ್ತ್ವದೀಪನ ಪು. ೨೬), (ವೃತ್ತಿ).

**೧೩. ಮೇಲೆ ವರ್ಣಿಸಿದ ಅಧ್ಯಾಸದ ಅಸಂಗತೆಯು** – ಇದೆಲ್ಲವೂ ಹೊಂದದೇ ಇರುವ ವರ್ಣನೆಯು. ಮೊಟ್ಟಮೊದಲನೆಯದಾಗಿ **ತಥಾ ಹಿ ಲೋಕೇ ಅನುಭವಃ** ಎಂದು ಲೋಕಸಿದ್ಧವಾದ ಶುಕ್ತಿರಜತಾಧ್ಯಾಸದ ಉದಾಹರಣೆಯಿಂದ ತಾವು ಹೇಳುತ್ತಿರುವ ಅಧ್ಯಾಸದ ಲಕ್ಷಣವು ಅನುಭವಾನುಸಾರಿಯಾಗಿದೆ ಎಂದು ತೋರಿಸಲು ಭಾಷ್ಯಕಾರರು ಹೊರಟಿರು-ವುದು ಎಂದಾದ್ದರಿಂದ (ಅದು) ಯುಕ್ತಿಯನ್ನು ಅಪೇಕ್ಷಿಸುವುದಿಲ್ಲ. ಈ ಏಕದೇಶಿಗಳು ಮಾಡಿದ ಅಧ್ಯಾಸದ ವರ್ಣನೆಯು ಈ ಭಾಷ್ಯದೊಡನೆ ಹೇಗೂ ಹೊಂದುವದಿಲ್ಲ. (ಅವರು ಹೇಳುತ್ತಿರುವುದು) ಅನುಭವಕ್ಕೂ ಬರುವುದಿಲ್ಲ

ವಿಪ್ರತಿಪತ್ತಿಸ್ಥಾನತ್ವಾಚ್ಚ । ನ ಹಿ ರಜತತಜ್ಜ್ಞಾನೋಪಾದಾನಭೂತಮಜ್ಞಾನಂ ಕೇನಚಿದನುಭೂತಮ್, ಅಭ್ಯುಪಗತಂ ವಾ ಸರ್ವೈರ್ವಾದಿಭಿಃ । ನ ಚ ಕೇವಲಂ ಪರಿಭಾಷಾಸಿದ್ಧಸ್ಯ ಪ್ರಸಿದ್ಧವತ್ ದೃಷ್ಟಾಂತಾರ್ಥಮುಪಾದಾನಂ ಯುಜ್ಯತೇ । ಅಪಿ ಚ ಸರ್ವಂ ಜಗದಾತ್ಮ-ನ್ಯಧ್ಯಸ್ತಮ್, ಆತ್ಮಚೈತನ್ಯಂ ಚೈಕಮೇವಾದ್ವಿತೀಯಮಿತಿ ಚ ಪ್ರತಿಪಾದಯಿತುಂ ಖಲು ದೃಷ್ಟಾಂತ-ಪ್ರಣಯನಮ್ "ಶುಕ್ತಿಕಾ ಹಿ ರಜತವದವಭಾಸತೇ" ಇತಿ। ತತ್ರ ಕಥಮ-ದ್ಯಾಪ್ಯಸಿದ್ಧಂ ತದೇವ ಚೈತನ್ಯೈಕ್ಯಮಂಗೀಕೃತ್ಯ ಶುಕ್ತಿಕಾರಜತೋದಾಹರಣ-ಮಿತಿ ಪ್ರಷ್ಟವ್ಯಾ ಭವಂತಃ । "ಚೈತನ್ಯಮೇಕಮೇವ ತತ್ತದುಪಾಧಿವಶಾದ್ಭಿನ್ನಮಿವ ಪ್ರತಿಭಾಸತೇ ಮಹಾಕಾಶ ಇವ ಘಟೋದಙ್ಚನಾದ್ಯುಪಹಿತಃ । ಪ್ರಮಾಣಪ್ರಮೇಯವ್ಯವಹಾರೇ ಚ ಪ್ರಮಾತ್ರ-ವಚ್ಛಿನ್ನಂ ಚೈತನ್ಯಂ ವೃತ್ತ್ಯವಚ್ಛಿನ್ನಂ ಚೈತನ್ಯಂ ವಿಷಯಾವಚ್ಛಿನ್ನಂ ಚೈತನ್ಯಮಿತಿ ಚ ವಿಭಕ್ತಂ ಸತ್ ತತ್ತತ್ಪ್ರತ್ಯಕ್ಷಸಮಯೇ ಚಾಭೇದತಾಂ ಗಚ್ಛತಿ" – ಇತ್ಯೇವಂ ವರ್ಣನಂ

---

ಮತ್ತು ವಿರುದ್ಧತಿಳಿವಳಿಕೆಗೂ (ಅವಕಾಶ ಮಾಡಿಕೊಡುತ್ತಿದೆ). ಯಾವ ವಾದಿಗಳೂ ಬೆಳ್ಳಿ ಮತ್ತು ಅದಕ್ಕೆ ಉಪಾದಾನವಾಗಿರುವ ಅಜ್ಞಾನವನ್ನು ಒಪ್ಪಿರುವುದಿಲ್ಲ, ಯಾರ ಅನುಭವದಲ್ಲೂ ಇಲ್ಲ, ಬರೀ ಪರಿಭಾಷೆಯಿಂದ ಸಿದ್ಧವಾಗಿರುವ (ಆ ಅಜ್ಞಾನವನ್ನು), ಪ್ರಸಿದ್ಧವಾಗಿರುವಂತೆ ದೃಷ್ಟಾಂತಕ್ಕಾಗಿ ಸ್ವೀಕಾರಮಾಡುವುದು ಯುಕ್ತವಾಗುವುದಿಲ್ಲವಷ್ಟೆ ? ಅಷ್ಟೆ ಅಲ್ಲ **ಶುಕ್ತಿಕಾ ಹಿ ರಜತವದವಭಾಸತೇ** ಎಂದು ದೃಷ್ಟಾಂತವನ್ನು ತೆಗೆದುಕೊಂಡಿರುವುದು, ಸಂಪೂರ್ಣ ಜಗತ್ತು ಆತ್ಮನಲ್ಲಿ ಅಧ್ಯಸ್ತವಾಗಿದೆ, ಆತ್ಮಚೈತನ್ಯವಾದರೋ ತನಗೆ ಎರಡಿಲ್ಲದ ಒಂದು ಎಂಬುದನ್ನು ತಿಳಿಸಿಕೊಡುವುದಕ್ಕೆ ತಾನೆ ? ಹೀಗಿರುವಾಗ ಅದು ಹೇಗೆ ಇನ್ನೂ ಸಿದ್ಧವಾಗದ ಚೈತನ್ಯದ ಐಕ್ಯವನ್ನಿಟ್ಟು-ಕೊಂಡು ಶುಕ್ತಿರಜತೋದಾಹರಣೆಯನ್ನು ತರುವಿರೆಂದು ನಿಮ್ಮನ್ನು ಕೇಳಬೇಕಾಗುತ್ತದೆ ? ಚೈತನ್ಯವೊಂದೇ ಆಯಾ ಉಪಾಧಿಗೆ ಅನುಗುಣವಾಗಿ ಭಿನ್ನವಾಗಿರುವಂತೆ – ಮಹಾಕಾಶವು ಘಟಾಕಾಶದಿಂದ ಭಿನ್ನವಾಗಿರುವಂತೆ – ತೋರುತ್ತದೆ. ಪ್ರಮಾಣಪ್ರಮೇಯವ್ಯವಹಾರದಲ್ಲೂ ಪ್ರಮಾತ್ರವಚ್ಛಿನ್ನ-ಚೈತನ್ಯವು, ವೃತ್ತ್ಯವಚ್ಛಿನ್ನಚೈತನ್ಯವು, ವಿಷಯಾವಚ್ಛಿನ್ನಚೈತನ್ಯವೆಂದು ವಿಭಕ್ತವಾಗಿದ್ದು ಅದದರ ಪ್ರತ್ಯಕ್ಷಸಮಯದಲ್ಲಿ ಅಭೇದವನ್ನು ಹೊಂದುತ್ತದೆ

ಕಿಂ ಚೈತನ್ಯೈಕ್ಯಂ ಜ್ಞಾನಿಪ್ರಬೋಧಾಯ ಆಹೋಸ್ವಿತ್ ತದಜ್ಞಾನಿ-ಪ್ರಬೋಧಾಯ ಇತಿ ವಕ್ತವ್ಯಮ್ । ಉಭಯಥಾಪಿ ವ್ಯರ್ಥಪ್ರಯಾಸ ಏಷಃ । ನ ಹಿ ಪ್ರತಿಪಾದ್ಯಂ ಚೈತನ್ಯೈಕ್ಯಂ ವಿದಿತವತಃ ಪ್ರಮಾಣಾದಿನಿರೂಪಣೇಚ್ಛಾ ಜಾಯತೇ । ಅವಿದಿತವತಸ್ತು ನ ಕಶ್ಚಿದರ್ಥೋ ವರ್ಣನೇನ । ಪ್ರಮಾತ್ರವಚ್ಛಿನ್ನಂ ಚೈತನ್ಯಮ್, ಪ್ರಮೇಯಾವಚ್ಛಿನ್ನಂ ಚೈತನ್ಯಂ – ಇತ್ಯಾದಿವಿಭಾಗಸ್ಯ ದುರ್ಜ್ಞಾನತ್ವಾತ್ ತೇನ । ನ ಹಿ ಲೋಕೇಽಸ್ತ್ಯನುಭವಃ ಶುಕ್ತಿಪ್ರತ್ಯಕ್ಷವತಃ "ಶುಕ್ತ್ಯವಚ್ಛಿನ್ನಂ ಚೈತನ್ಯಂ ಮಯಾ ಜ್ಞಾತಮ್" ಇತಿ । ನ ಚ ವಾಚ್ಯಮ್-ಏಷಾ ತಾವದ್ವಸ್ತುಸ್ಥಿತಿಃ, ಲೋಕೇ ತಥಾ ವ್ಯವಹಾರೋಽಸ್ತು ಮಾ ವೇತಿ । ವಸ್ತುಸ್ಥಿತೇರದ್ಯಾಪ್ಯಸಾಧಿತತ್ವಾತ್ । ಅಸಿದ್ಧಸ್ಯ ಚಾಂಗೀಕಾರೇ ಯಸ್ಯ ಕಸ್ಯಾಪಿ ದರ್ಶನಸ್ಯ ಸೂಪಪಾದತ್ವಾತ್ । ತಸ್ಮಾದನುಭವಾನಾರೂಢತ್ವಾ-ದ್ಭಾವಾಜ್ಞಾನಸ್ಯ ಸರ್ವಥಾಪ್ಯಸಂಗತಂ ತಸ್ಯಾರೋಪಿತರಜತಾದಿರೂಪೇಣ

---

ಎಂಬೀ ಚೈತನ್ಯೈಕ್ಯದ ವರ್ಣನೆಯು ಜ್ಞಾನಿಗಳಿಗೆ ತಿಳಿವಳಿಕೆ ಕೊಡುವುದಕ್ಕಾಗಿಯೋ ಅಥವಾ ಅಜ್ಞಾನಿಗಳಿಗೆ ತಿಳಿವಳಿಕೆಗಾಗಿಯೋ ಎಂಬುದನ್ನು ಹೇಳಬೇಕು ! ಎರಡು ರೀತಿಯಿಂದಲೂ ವ್ಯರ್ಥಪ್ರಯಾಸವೇ ಸರಿ. ಏಕೆಂದರೆ ಪ್ರತಿಪಾದ್ಯವಾದ ಚೈತನ್ಯೈಕ್ಯವನ್ನು ಕಂಡುಕೊಂಡವನಿಗೆ ಪ್ರಮಾಣವೇ ಮುಂತಾದವುಗಳನ್ನು ಪರೀಕ್ಷೆಮಾಡಬೇಕೆಂಬ ಇಚ್ಛೆಯು ಹೊಂದುವದಿಲ್ಲ. ತಿಳಿಯದವನಿಗಂತೂ ವರ್ಣನೆಮಾಡಿದ್ದರಿಂದ ಏನೂ ಪ್ರಯೋಜನವಿಲ್ಲ. ಅವನಿಗೆ ಪ್ರಮಾತ್ರವಚ್ಛಿನ್ನಚೈತನ್ಯವೆಂದರೂ ಪ್ರಮೇಯಾವಚ್ಛಿನ್ನಚೈತನ್ಯವೆಂದರೂ ಈ ವಿಭಾಗವು ಏನೂ ಅರ್ಥವಾಗುವುದಿಲ್ಲ. ಶುಕ್ತಿಪ್ರತ್ಯಕ್ಷಜ್ಞಾನವುಳ್ಳವನಿಗೆ ಶುಕ್ತ್ಯವಚ್ಛಿನ್ನವಾದ ಚೈತನ್ಯವನ್ನು ನಾನು ಅರಿತೆನು ಎಂದು ಲೋಕದಲ್ಲಿ (ಯಾರಿಗೂ) ಅನುಭವವಿರುವುದಿಲ್ಲ. "ಇದು ವಸ್ತುಸ್ಥಿತಿಯು, ಲೋಕದಲ್ಲಿ ಹಾಗೆ ವ್ಯವಹಾರವಿದೆಯೋ ಇಲ್ಲವೋ ಎಂಬ ವಿಷಯವು ಬೇಡ" ಎಂದೂ ಹೇಳುವ-ಹಾಗಿಲ್ಲ, ಏಕೆಂದರೆ "ಹಾಗಿದೆ" ಎಂಬುದು ಇನ್ನೂ ಸಿದ್ಧವಾಗಿರುವುದಿಲ್ಲ. ಅಸಿದ್ಧವಾದದ್ದನ್ನು ಅಂಗೀಕರಿಸುವುದಾದರೆ ಏನನ್ನು ಬೇಕಾದರೂ ಸಿದ್ಧಿಸ-ಬಹುದಾಗಿದೆ. ಆದ್ದರಿಂದ ಭಾವಾಜ್ಞಾನವು ಮತ್ತು ಅದು ಆರೋಪಿತವಾದ ರಜತಾದಿರೂಪದಿಂದ ಪರಿಣಾಮಗೊಳ್ಳುತ್ತದೆ ಎಂಬುದೂ ಮತ್ತು ತಾವು

ಪರಿಣತಿವರ್ಣನಂ ಸ್ವೋತ್ಪ್ರೇಕ್ಷಿತಪ್ರಕ್ರಿಯಯಾ ತನ್ನಿವೃತ್ತಿವರ್ಣನಂ ಚೇತಿ। ವಿಪ್ರತಿಪತ್ತಿಸ್ಥಾನಂ ಚೇದಂ ವರ್ಣನಂ ವಾದಿನಾಮ್ । ನ ಹಿ ವೇದಾಂತಿಭಿರಪಿ ಸರ್ವೈರಭ್ಯುಪಗಮ್ಯತೇ ರಜತಾದ್ಯುತ್ಪತ್ತಿರಿತಿ ॥

ಅತ್ರಾಹ – ಸರ್ವಮೇತದಕಾಂಡತಾಂಡವಿತಮ್ । ಕುತಃ ? ಶುಕ್ತಿರಜತ-ತಜ್ಜ್ಞಾನಯೋರ್ನಿರೂಪಣೇನೈವೋಕ್ತಾಜ್ಞಾನಸಿದ್ಧೇಃ । ತಥಾ ಹಿ ಶುಕ್ತಿರಜತಂ ತಾವತ್ ಖ್ಯಾತೇರ್ನಾಸತ್ ಬಾಧಾಚ್ಚ ನ ಸದಿತಿ ಲೌಕಿಕೈಃ ಪರೀಕ್ಷಕೈಶ್ಚ ಸರ್ವೈಸ್ತಸ್ಯಾನಿರ್ವಚನೀಯತ್ವಮಭ್ಯುಪಗಂತವ್ಯಮ್ । ಅತ ಏವ ತಜ್ಜ್ಞಾನ-ಸ್ಯಾಪಿ ತತ್ತ್ವಮಭ್ಯುಪಗಂತವ್ಯಮ್ । ಅನಿರ್ವಚನೀಯವಿಷಯಕಜ್ಞಾನಸ್ಯ ನಿರ್ವಚನೀಯತ್ವಾಯೋಗಾತ್ । ಏತಯೋಶ್ಚ ರಜತತಜ್ಜ್ಞಾನಯೋಃ ಕಾದಾಚಿತ್ಕತ್ವಾತ್ ಕಾರ್ಯತ್ವಮಿತಿ ತತ್ಕಾರಣಂ ಮೃಗ್ಯಮ್ । ನ ಚಾನಿರ್ವಚ-ನೀಯಸ್ಯೋಪಾದಾನಂ ನಿರ್ವಚನೀಯಂ ಸಂಭವತೀತಿ ಕಾರ್ಯಾನುರೂಪ-

---

ಊಹೆ ಮಾಡಿದ ರೀತಿಯಿಂದ ತೋಲಗುತ್ತದೆ ಎಂಬುದು ಯಾವುದೂ ಅನುಭವಕ್ಕೆ ಬರದ ವಿಚಾರವಾದ್ದರಿಂದ (ಇದು) ಹೇಗೂ ಹೊಂದದ ವಿಚಾರವು. ಈ ವರ್ಣನೆ ವಾದಕ್ಕೂ ಅವಕಾಶಮಾಡಿಕೊಡುವಂಥದ್ದಾಗಿದೆ. (ಭ್ರಾಂತಿಕಾಲದಲ್ಲಿ) ರಜತೋತ್ಪತ್ತಿಯಾಗುತ್ತದೆ ಎಂಬುದನ್ನು ಎಲ್ಲಾ ವೇದಾಂತಿಗಳೂ ಸಹ ಒಪ್ಪಿರುವುದಿಲ್ಲ.

**ಇಲ್ಲಿ ಪೂರ್ವಪಕ್ಷಿ ಹೇಳುತ್ತಾನೆ** – ಇದೆಲ್ಲಾ ಅಸ್ಥಾನದಲ್ಲಿ ಕುಣಿದಾಡಿದ್ದು, ಏಕೆಂದರೆ – ಶುಕ್ತಿರಜತ ಮತ್ತು ಅದರ ಜ್ಞಾನವನ್ನು ನಿರೂಪಣೆ ಮಾಡುವುದರಿಂದಲೇ ಮೇಲೆ ಹೇಳಿದ ಅಜ್ಞಾನವು ಸಿದ್ಧವಾಗುತ್ತದೆ. ಹಾಗೆಯೇ ಅಲ್ಲವೆ – ಶುಕ್ತಿರಜತವು ತೋರುತ್ತಿರುವುದರಿಂದ ಸುಳ್ಳಲ್ಲ, ಬಾಧೆಯಾಗುವುದರಿಂದ ಸತ್ತೂ ಅಲ್ಲ, ಎಂದಾದ್ದರಿಂದ ಎಲ್ಲಾ ಲೌಕಿಕರೂ ಪರೀಕ್ಷಕರೂ ಅದನ್ನು ಅನಿರ್ವಚನೀಯವೆಂದು ಒಪ್ಪಿರುತ್ತಾರೆ. ಆದ್ದರಿಂದಲೇ ಅದರ ಜ್ಞಾನದ ತತ್ತ್ವವನ್ನೂ ಒಪ್ಪಲೇಬೇಕು. ಏಕೆಂದರೆ ಅನಿರ್ವಚ-ನೀಯವಾದ ಜ್ಞಾನವು ನಿರ್ವಚನೀಯವೆಂಬುದು ಹೊಂದುವುದಿಲ್ಲ. ಈ ರಜತ ಮತ್ತು ಅದರ ಜ್ಞಾನವು ಕೆಲವೊಮ್ಮೆ ಮಾತ್ರ ಆಗುವುದಾದ್ದರಿಂದ ಅದು ಕಾರ್ಯವಾಗಿದೆ ಎಂದಾಗಿ ಅದರ ಕಾರಣವನ್ನು ಹುಡುಕಬೇಕಾಗುತ್ತದೆ. ಅನಿರ್ವಚನೀಯವಾದದ್ದಕ್ಕೆ ಉಪಾದಾನವು ನಿರ್ವಚನೀಯವಾದದ್ದು

ಮನಿರ್ವಚನೀಯಮೇವೋಪಾದಾನಮಪ್ಯೇಷ್ಟವ್ಯಮ್ । ತಚ್ಚ ನಾನ್ಯದಜ್ಞಾನಾದನಾದೇಃ ಸಮಸ್ತಿ । ನ ಚ ಭ್ರಾಂತಿಸಂಶಯೌ ತಥಾವಿಧಂ ಕಾರಣಂ ಭವಿತುಮರ್ಹತಃ । ತಯೋಃ ಸಾದಿತ್ವೇನ ಕಾರ್ಯಾಂತರೋಪಾದಾನತ್ವಾಸಂಭವಾತ್ । ನ ಹ್ಯನನುಗತಂ ಕಾರ್ಯಾಣಾಂ ಕಾರಣಂ ನಾಮ। ಅನ್ಯಥಾ ಮೃದಾದಿವತ್ ಮೃತ್ಪಿಂಡಾದೀನಾಮಪಿ ಘಟಾದಿಕಾರಣತ್ವಪ್ರಸಕ್ತೇಃ। ನ ಚ ಭ್ರಾಂತಿಸಂತಾನಸ್ಯ ಭ್ರಾಂತಿತತ್ಸಂಸ್ಕಾರಸಂತಾನಸ್ಯ ವಾ ಬೀಜಾಂಕುರವತ್ ಕಾರ್ಯಕಾರಣತ್ವಸಂಭವ ಇತಿ ಶಂಕ್ಯಮ್ । ಭ್ರಾಂತಿಸಂಸ್ಕಾರಾಣಾಂ ಕಾರ್ಯತ್ವೇ ಸಿದ್ಧೇ ತೇಷಾಮನ್ಯೋನ್ಯೋಪಾದಾನತ್ವಸ್ವೀಕಾರಸ್ಯಾನ್ಯಾಯ್ಯತ್ವಾತ್, ಭ್ರಾಂತಿಸಂಸ್ಕಾರಸಂತಾನಾಭ್ಯುಪಗಮೇಽಪ್ಯನವಸ್ಥಾದೌಸ್ಥ್ಯಚ್ಚ । ಅತೋ ಯತ್ತೇಷ್ವಾಗಮಾಪಾಯಿಷ್ವನುಗತಂ ತದೇವ ತೇಷಾಮುಪಾದಾನಮ್। ತಚ್ಚಾಜ್ಞಾನಮಿತ್ಯಕಾಮೇನಾಪಿ ಸ್ವೀಕರ್ತವ್ಯಂ ಭವತಿ । ನನು ಜ್ಞಾನಾಭಾವ-

---

ಆಗಲಾರದಾದ್ದರಿಂದ ಕಾರ್ಯಕ್ಕೆ ಅನುಗುಣವಾದ ಅನಿರ್ವಚನೀಯವಾದ ಉಪಾದಾನವನ್ನೇ ಇಷ್ಟಪಡಬೇಕಾಗುತ್ತದೆ. ಅದು ಅನಾದಿಯಾದ ಅಜ್ಞಾನಕ್ಕಿಂತ ಮತ್ತೊಂದಾದದ್ದು (ಎಂಬುದು) ಹೊಂದುವುದಿಲ್ಲ. ಆದರೆ ಭ್ರಾಂತಿ-ಸಂಶಯಗಳು ಆ ರೀತಿಯಾದ ಕಾರಣವಾಗುವುದಕ್ಕೆ ಅರ್ಹವಲ್ಲ. ಅವು ಸಾದಿಯಾಗಿರುವುದರಿಂದ ಬೇರೊಂದು ಕಾರ್ಯಕ್ಕೆ ಉಪಾದಾನವಾಗುವುದು ಹೊಂದುವುದಿಲ್ಲ. ಕಾರ್ಯಗಳಲ್ಲಿ ಸೇರದೇ ಇದ್ದದ್ದು ಕಾರಣವೆಂದಾಗುವುದಿಲ್ಲವಲ್ಲವೆ ? ಹಾಗಿಲ್ಲವಾದರೆ ಮಣ್ಣಿನಂತೆ, ಮಣ್ಣಿನಮುದ್ದೆಯೇ ಮುಂತಾದವೂ ಗಡಿಗೆ ಮುಂತಾದವುಗಳಿಗೆ ಕಾರಣವಾಗಿದೆ ಎಂಬ ಪ್ರಸಂಗವು ಬಂದೀತು ! ಭ್ರಾಂತಿಸಂತಾನಕ್ಕಾಗಲೀ ಭ್ರಾಂತಿಯ ಸಂಸ್ಕಾರದ ಸಂತಾನಕ್ಕಾಗಲೀ ಬೀಜಾಂಕುರದಂತೆ ಕಾರ್ಯಕಾರಣಭಾವವನ್ನು ಸಂದೇಹಪಡುವುದಕ್ಕೆ ಬರುವುದಿಲ್ಲ. ಭ್ರಾಂತಿಯೂ ಅದರ ಸಂಸ್ಕಾರಗಳೂ ಕಾರ್ಯವೆಂದು ಸಿದ್ಧವಾದ ಮೇಲೆ ಪುನಃ ಅವುಗಳಿಗೆ ಪರಸ್ಪರ ಉಪಾದಾನತ್ವವನ್ನು ಸ್ವೀಕಾರಮಾಡುವುದೆಂಬುದು ಅನ್ಯಾಯವಾಗಿರುವುದರಿಂದಲೂ ಭ್ರಾಂತಿಸಂಸ್ಕಾರಗಳಿಗೆ ಸಾಲನ್ನು ಒಪ್ಪಿದರೆ ಅನವಸ್ಥೆಯು (ಗಂಟು) ಬೀಳುವುದರಿಂದ (ಹಾಗೆ ಕಲ್ಪಿಸಬಾರದು). ಆದ್ದರಿಂದ ಆ ಆಗಮಾಪಾಯಿಗಳಲ್ಲಿ ಯಾವುದು ಅನುಗತವಾಗಿರುವುದೋ ಅದೇ ಉಪಾದಾನವಾಗಿರಬೇಕು. ಅದಾದರೋ ಅಜ್ಞಾನವೇ ಎಂದು

ವ್ಯತಿರೇಕೇಣ ತಾದೃಶಾಜ್ಞಾನಂ ನ ಪ್ರಸಿದ್ಧಮ್ । ಮೈವಂ ವೋಚಃ। "ನಾಜ್ಞಾಸಿಷಂ ಶುಕ್ತಿಮ್, ಇದಾನೀಂ ತು ಜಾನಾಮಿ, ಅಜ್ಞಾನಂ ನಿವೃತ್ತಮ್" ಇತ್ಯಜ್ಞಾನತನ್ನಿವೃತ್ತ್ಯೋಃ ಸುಪ್ರಸಿದ್ಧತ್ವಾತ್ । ನ ಚಾಯಂ ಜ್ಞಾನಾಭಾವಃ। ಅಪರೋಕ್ಷತ್ವಾತ್ । ಆತ್ಮನೋಽಭಾವಪ್ರಮಾಣಾಪ್ರಮೇಯತ್ವಾತ್ತದಾ-ಶ್ರಿತಾಜ್ಞಾನಸ್ಯಾಪ್ಯಭಾವಪ್ರಮಾಣಪ್ರಮೇಯತ್ವಾಯೋಗಾಚ್ಚ । ಜ್ಞಾನಾಭಾವ ಏವ ಚೇದಜ್ಞಾನಮ್, ತರ್ಹಿ ಕತಮೋಽಯಮಭಾವ ಇತಿ ವಿವೇಕ್ತವ್ಯಂ ಭವತಿ। ನ ತಾವದನ್ಯೋನ್ಯಾಭಾವಃ, ತಸ್ಯ ವಿಷಯೇಽಪ್ಯಾಶ್ರಿತತ್ವಾದಾತ್ಮೈಕ-ತ್ವಾಶ್ರಿತಾಜ್ಞಾನತ್ವಾನುಪಪತ್ತೇಃ । ನ ಪ್ರಧ್ವಂಸಃ, ತಸ್ಯೋತ್ಪತ್ತಿಮತ್ವಾತ್ ಅಜ್ಞಾನಸ್ಯ ಚ ತದಪ್ರತೀತೇಃ । ನಾಪಿ ಪ್ರಾಗಭಾವಃ, ಜ್ಞಾನಾಭಾವತ್ವಾತ್, ಅಭಾವಾಂತರವತ್ । ತಸ್ಯಾಜ್ಞಾನತ್ವೇನಾಪ್ರತೀಯಮಾನತ್ವಾಚ್ಚ । ಜ್ಞಾನಪ್ರಾಗಭಾವ ಏವಾಜ್ಞಾನಮ್, ಜ್ಞಾನಭಾವೇ ತನ್ನಿವೃತ್ತೇರಿತಿ ಚೇತ್।

---

ಇಷ್ಟವಿಲ್ಲವಾದರೂ ಒಪ್ಪಿಕೊಳ್ಳಲೇಬೇಕು. ಜ್ಞಾನಾಭಾವಕ್ಕಿಂತ ಬೇರೆಯಾಗಿ ಆ ರೀತಿಯ ಅಜ್ಞಾನವು ಪ್ರಸಿದ್ಧವಾಗಿಲ್ಲವಲ್ಲ! ಎಂದರೆ ಹಾಗೆನ್ನಬೇಡ – "ಶುಕ್ತಿಯನ್ನು ಅರಿತಿರಲಿಲ್ಲ ಈಗಲಾದರೋ ಅರಿಯುತ್ತಿದ್ದೇನೆ, ಅಜ್ಞಾನವು ತೊಲಗಿತು" ಎಂದು ಅಜ್ಞಾನವೂ ಅದರ ನಿವೃತ್ತಿಯೂ ಸುಪ್ರಸಿದ್ಧವಾಗಿದೆ. ಇದು ಜ್ಞಾನಾಭಾವವಲ್ಲ, ಏಕೆಂದರೆ ಅಪರೋಕ್ಷವಾಗಿದೆಯಾದ್ದರಿಂದ, ಆತ್ಮನು ಅಭಾವಪ್ರಮಾಣಕ್ಕೆ ವಿಷಯನಲ್ಲವಾಗಿರುವುದರಿಂದ ಅದನ್ನಾಶ್ರಯಿಸುವ ಅಜ್ಞಾನವೂ ಸಹ ಅಭಾವಪ್ರಮಾಣಕ್ಕೆ ಪ್ರಮೇಯವಾಗಿದೆ ಎಂಬುದು ಹೊಂದುವುದಿಲ್ಲ. ಜ್ಞಾನಾಭಾವವಷ್ಟೇ ಅಜ್ಞಾನವಾಗಿದ್ದರೆ ಈ ಅಭಾವವು ಯಾವ ತರಹದ್ದು ? ಎಂಬುದನ್ನು ವಿಂಗಡಿಸಬೇಕಾಗುತ್ತದೆ. ಇದು ಅನ್ಯೋನ್ಯಾಭಾವವಲ್ಲ. ಏಕೆಂದರೆ ಅದು ವಿಷಯವನ್ನು ಆಶ್ರಯಿಸಿರುವುದರಿಂದಲೂ ಆತ್ಮೈಕತ್ವವನ್ನು ಆಶ್ರಯಿಸಿದ್ದಾದ ಅಜ್ಞಾನವೆಂಬುದು ಹೊಂದುವುದಿಲ್ಲವಾದ್ದರಿಂದಲೂ (ಹೀಗೆಯೇ). ಅದಕ್ಕೆ ಉತ್ಪತ್ತಿ ಇರುವುದರಿಂದಲೂ, ಅಜ್ಞಾನಕ್ಕೆ (ಉತ್ಪತ್ತಿಯು) ತೋರುವುದಿಲ್ಲವಾದ್ದರಿಂದಲೂ (ಅದು) ಪ್ರಧ್ವಂಸವೂ ಅಲ್ಲ. ಅದು ಪ್ರಾಗಭಾಗವೂ ಅಲ್ಲ, ಬೇರೆ ಅಭಾವದಂತೆ ಜ್ಞಾನಾಭಾವವಾಗಿರುವದರಿಂದ ಅದು ಅಜ್ಞಾನವಾಗಿ ತೋರುತ್ತಿಲ್ಲವಾದ್ದರಿಂದಲೂ (ಹೀಗೆಯೇ). ಜ್ಞಾನದ ಪ್ರಾಗಭಾವವೇ ಅಜ್ಞಾನವು, ಜ್ಞಾನವಾದ ಕೂಡಲೇ ಅದು ತೊಲಗುತ್ತದೆ

ನ । ಅತತ್ಪ್ರಾಗಭಾವಸ್ಯಾಪಿ ಜ್ಞಾನಭಾವೇ ನಿವೃತ್ತ್ಯುಪಪತ್ತೇಃ, ಪ್ರದೀಪಭಾವೇನೇವ ತಮಸಃ । ತಸ್ಮಾಚ್ಛುಕ್ತಿರಜತತಜ್ಜ್ಞಾನಯೋರ್ನಿರೂಪಣಾದೇವಾಭಾವವಿಲಕ್ಷಣಾನಿರ್ವಚನೀಯಾಜ್ಞಾನಸಿದ್ಧೇರಕಾಂಡತಾಂಡವಿತಮೇವೇದಮಜ್ಞಾನವಾದಾನಾಂ ವಿಕಲ್ಪನಂ ತನ್ನಿರಸನಂ ಚೇತಿ ॥ (ವಿ).

ಅತ್ರೋಚ್ಯತೇ – ಅಭಿತ್ತಿಚಿತ್ರಮೇತದ್ವರ್ಣಿತಮ್ । ಶುಕ್ತಿರಜತೋತ್ಪತ್ತೇರೇವ ತಾವದಸಿದ್ಧೇಃ । ನ ಹಿ ಶುಕ್ತಿರಜತಮುತ್ಪನ್ನಮ್, ತತೋ ಜ್ಞಾತಂ ಮಯಾ, ತದನು ಶುಕ್ತಿಜ್ಞಾನಾದ್ವಿನಷ್ಟಂ ಚೇತಿ ಮನ್ಯತೇ ಕಶ್ಚಿದಪಿ ಲೋಕೇ। ರಜತವತ್ಪ್ರತೀತಿಸ್ತು ಭ್ರಾಂತಿಕಾಲೇ ಸಾರ್ವಜನೀನಾ । ತಥಾ ಚ ವಕ್ಷ್ಯತಿ ಭಗವಾನ್ ಭಾಷ್ಯಕಾರಃ – "ಶುಕ್ತಿಕಾಂ ರಜತಂ ಪ್ರತ್ಯೇತೀತ್ಯತ್ರ ಶುಕ್ತಿವಚನ ಏವ ಶುಕ್ತಿಕಾಶಬ್ದಃ । ರಜತಶಬ್ದಸ್ತು ರಜತಪ್ರತೀತಿಲಕ್ಷಣಾರ್ಥಃ । ಪ್ರತ್ಯೇತ್ಯೇವ

---

ಎಂದರೆ ಹಾಗಲ್ಲ. ಏಕೆಂದರೆ, ಬೇರೆಯದರ ಪ್ರಾಗಭಾವವೂ ಜ್ಞಾನವಾದರೆ ನಿವೃತ್ತಿಯಾಗುವುದೆಂಬುದು ಹೊಂದುತ್ತದೆ. ಬೆಳಕುಂಟಾದ ಕೂಡಲೇ ಕತ್ತಲೆ ಹೋಗುವಂತೆ ಇದು. ಆದ್ದರಿಂದ ಶುಕ್ತಿರಜತ ಮತ್ತು ಅದರ ಜ್ಞಾನವನ್ನು ನಿರೂಪಣೆ ಮಾಡುವುದರಿಂದ ಅಭಾವಕ್ಕೆ ವಿಲಕ್ಷಣವಾದ ಅನಿರ್ವಚನೀಯವಾದ ಅಜ್ಞಾನವು ಸಿದ್ಧಿಸುವುದರಿಂದ ಈ ಅಜ್ಞಾನವಾದವನ್ನು ವಿಕಲ್ಪಿಸಿರುವುದು ಮತ್ತು ಖಂಡಿಸಿರುವುದೆಲ್ಲಾ ವೃಥಾ ಕುಣಿದಾಟವಾದಂತಾಯಿತೆಂದು ತಿಳಿಯಬೇಕು (ವಿ).

ಇದಕ್ಕೆ ಹೇಳುತ್ತೇವೆ – ಈ ವರ್ಣನೆಯು ಗೋಡೆ ಇಲ್ಲದೆ ಚಿತ್ರವನ್ನು ಬರೆದದ್ದಕ್ಕೆ ಸಮಾನವಾದದ್ದು. ಮೊದಲನೆಯದಾಗಿ ಶುಕ್ತಿಯಲ್ಲಿ ರಜತದ ಉತ್ಪತ್ತಿಯಾಗುತ್ತದೆ ಎಂಬುದೇ ಹೊಂದುವುದಿಲ್ಲ. ಲೋಕದಲ್ಲಿ ಯಾರೂ, "ಶುಕ್ತಿರಜತವುಂಟಾಯಿತು, ಅನಂತರ ನಾನು ತಿಳಿದೆನು ಆಮೇಲೆ ಶುಕ್ತಿಜ್ಞಾನದಿಂದ ನಾಶವಾಯಿತು" ಎಂದು ತಿಳಿಯುವುದಿಲ್ಲವಷ್ಟೆ ? ಬೆಳ್ಳಿಯಂತೆ ತೋರಿತು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವು. ಹಾಗೆಯೇ ಅಲ್ಲವೆ ಭಗವಂತರಾದ ಭಾಷ್ಯಕಾರರು ಹೇಳುತ್ತಿರುವುದು – "ಕಪ್ಪೆಯಚಿಪ್ಪನ್ನು ಬೆಳ್ಳಿ ಎಂದು ತಿಳಿಯುತ್ತಾನೆ" ಎಂಬಲ್ಲಿ ಕಪ್ಪೆಯಚಿಪ್ಪೆಂಬ ಶಬ್ದವು ಕಪ್ಪೆಯಚಿಪ್ಪನ್ನೇ ಹೇಳುತ್ತದೆ, ಬೆಳ್ಳಿಯೆಂಬ ಶಬ್ದವಾದರೋ ಬೆಳ್ಳಿಯೆಂಬ ತಿಳಿವಳಿಕೆಗೆ ಲಕ್ಷಣವಾಗಿ (ಪ್ರಯೋಗಿಸಿದ್ದು), ಏಕೆಂದರೆ ಬರೀ ಬೆಳ್ಳಿ ಎಂದು

ಹಿ ಕೇವಲಂ ರಜತಮಿತಿ, ನ ತು ತತ್ರ ರಜತಮಸ್ತಿ" (ಸೂ. ಭಾ. ೪-೧-೫, ಭಾ.ಭಾ. ೫೧೫) ಇತಿ । ನನ್ವಸ್ಯ ಪ್ರತೀತೇಃ ಕಾರ್ಯತ್ವಾತ್ ಕಾರಣಾಪೇಕ್ಷಾ, ತತಶ್ಚಾಜ್ಞಾನಸಿದ್ಧಿರಿತ್ಯಧ್ಯವಸಿತಮ್ । ನಾಯಂ ಸಾಧುರಧ್ಯವಸಾಯಃ । ಅಂತಃಕರಣೇಂದ್ರಿಯದೋಷನಿಮಿತ್ತಾದೇವ ಶುಕ್ತಿಜ್ಞಾನಾಭಾವೇ ಪ್ರತೀತ್ಯುಪಪತ್ತೇಃ । ನನು ಕಾರ್ಯಸ್ಯ ನಿಮಿತ್ತವದುಪಾದಾನಸ್ಯಾಪ್ಯಪೇಕ್ಷಣಾಸ್ತೀತ್ಯಜ್ಞಾನಾಕಾಂಕ್ಷಾ ಸ್ಯಾತ್। ನ ಸ್ಯಾತ್। ಭ್ರಾಂತಿತ್ವಾದೇವ ಪ್ರತೀತ್ಯುಪಪತ್ತೇಃ । ಲೋಕಸಿದ್ಧಸತ್ಯವಸ್ತುವತ್ ಸರ್ವವಿಧಕಾರಣಾಪೇಕ್ಷತ್ವೇ ತತ ಏವ ಸತ್ಯತ್ವಾಪತ್ತೇಃ । ನನು ಭ್ರಾಂತಿಜ್ಞಾನಸ್ಯಾಪ್ಯಸ್ತಿ ಕಾರಣಾಪೇಕ್ಷಾ, ಕಾದಾಚಿತ್ಕತ್ವಾತ್ । ಅತಃ ಸಿಧ್ಯತಿ ತದುಪಾದಾನಮಜ್ಞಾನಮ್ । ಭ್ರಾಂತಿಸಂಸ್ಕಾರಜ್ಞಾನಾಭಾವಾನಾಂ ಹಿ ನಾಸ್ತಿ ಕಾರಣತೇತ್ಯುಪಪಾದಿತಮ್ । ಪರಿಶೇಷಾದಜ್ಞಾನಮೇಷ್ಟವ್ಯಂ ಭವತಿ ತದುಪಾದಾನಕಾರಣತ್ವೇನ ।

---

ತಿಳಿಯುತ್ತಾನಷ್ಟೆ ! ಅಲ್ಲೇನೂ ಬೆಳ್ಳಿ ಇಲ್ಲ. (ಸೂ. ಭಾ. ೪-೧-೫, ಭಾ.ಭಾ. ೫೧೫). ಇದು ತೋರುತ್ತಿರುವುದರಿಂದಲೂ ಮತ್ತು ಇದು ಕಾರ್ಯವೂ ಆಗಿರುವುದರಿಂದಲೂ, ಕಾರಣವು ಇದಕ್ಕೆ ಬೇಕಲ್ಲವೆ? ಆದರಿಂದ ಅಜ್ಞಾನವು ಸಿದ್ಧಿಸುತ್ತದೆ ಎಂದು ಹೇಳಿದೆವಲ್ಲ ? ಎಂದರೆ ಹೇಳಿದಿರಿ, ನಿಜ, ಆದರೆ ಇದು ಸರಿಯಲ್ಲ, ಅಂತಃಕರಣ ಮತ್ತು ಇಂದ್ರಿಯದೋಷದಿಂದಲೇ ಶುಕ್ತಿಜ್ಞಾನವಿಲ್ಲವಾದರೆ (ಹಾಗೆ) ತೋರಬಹುದಾಗಿದೆ; (ಪೂ. ಪ) ಅಲ್ಲಾ ! ಕಾರ್ಯವಾದುದಕ್ಕೆ ನಿಮಿತ್ತದಂತೆ ಉಪಾದಾನವಾದದ್ದೂ ಸಹ ಬೇಕಾಗಿದೆಯೆಂದಾದ್ದರಿಂದ ಅಜ್ಞಾನವು ಬೇಕಾಗುತ್ತದೆಯಲ್ಲವೆ ? ಎಂದರೆ ಹಾಗೇನಿಲ್ಲ, ಭ್ರಾಂತಿಯಾದ್ದರಿಂದಲೇ ಹಾಗೆ ತೋರಬಹುದೆಂಬುದು ಹೊಂದುತ್ತದೆ. ಲೋಕದಲ್ಲಿರುವ ನಿಜವಾದ ವಸ್ತುವಿನಂತೆ ಎಲ್ಲಾ ತರಹದ ಕಾರಣದ ಅಪೇಕ್ಷೆ ಇದೆ ಎಂದಾದರೆ ಆದರಿಂದಲೇ ಸತ್ಯವೆಂದಾಗುತ್ತದೆ. (ಪೂ.ಪ.) ಕೆಲವೊಮ್ಮೆಮಾತ್ರ ತೋರುವುದೆಂಬುದಿದೆಯಾದ್ದರಿಂದ ಭ್ರಾಂತಿಜ್ಞಾನಕ್ಕೂ ಕಾರಣದ ಅಪೇಕ್ಷೆಯು ಇದೆಯಲ್ಲಾ ! ಆದ್ದರಿಂದ ಆ ಉಪಾದಾನವಾದ ಅಜ್ಞಾನವು ಸಿದ್ಧವಾಗುತ್ತದೆಯಲ್ಲಾ ! ಭ್ರಾಂತಿ, ಸಂಸ್ಕಾರ, ಜ್ಞಾನಾಭಾವಗಳಿಗೆ ಕಾರಣತ್ವವೆಂಬುದು ಇರುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಪಾರಿಶೇಷ್ಯದಿಂದ (ಅಧ್ಯಾಸಕ್ಕೆ) ಉಪಾದಾನವಾಗಿ

ಏವಂ ಶುಕ್ತಿರೂಪ್ಯಮಪಿ ಭವತಾ ಭ್ರಾಂತಿವಿಷಯತ್ವೇನ ಸ್ವೀಕರಣೀಯ-ಮೇವ । ವಿಷಯಮಂತರಾ ತಸ್ಯ ಜ್ಞಾನತ್ವಾಸಂಭವಾತ್ । ನ ಚೈವಂ "ನ ತು ತತ್ರ ರಜತಮಸ್ತಿ" ಇತಿ ಭಾಷ್ಯವಿರೋಧಃ । ಲೌಕಿಕಪರಮಾರ್ಥ-ರಜತನಿಷೇಧಪರತ್ವಾದುದಾಹೃತವಚನಸ್ಯೇತಿ ಚೇತ್ । ಭ್ರಾಂತೋಽಸಿ । ನ ಹಿ ಭ್ರಾಂತೇರ್ಜ್ಞಾನತ್ವಸಿದ್ಧ್ಯರ್ಥಂ ವಿಷಯೋಽಂಗೀಕಾರ್ಯ ಇತಿ ನಿರ್ಬಂಧನೀಯಾ ವಯಮ್ । "ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ" ಇತ್ಯುಕ್ತವಿಧಯಾ ವಿಷಯಾಸನ್ನಿಧಾನೇಽಪಿ ವಿಷಯಾವಭಾಸನಮೇವ ಭ್ರಾಂತಿರಿತ್ಯಭ್ಯುಪಗಮಾತ್ । ಭ್ರಾಂತಿತ್ವಮೇವ ಹಿ ತಸ್ಯಾ ಹೀಯೇತ ಯದಿ ಭ್ರಾಂತೇರಪಿ ವಿಷಯಾನುಕಾರಿತ್ವಮಂಗೀಕ್ರಿಯೇತ। ನ ಚ ಭಾಷ್ಯಕಾರೇಣ ಕುತ್ರಾಪಿ ಪ್ರಾತಿಭಾಸಿಕೋತ್ಪತ್ತಿರಂಗೀಕೃತಾ ದೃಶ್ಯತೇ, ಯೇನೋಕ್ತವಚನೇ ಲೌಕಿಕಪರಮಾರ್ಥರಜತವಿಷಯತ್ವಂ ನಿಷೇಧಸ್ಯ ವರ್ಣ್ಯೇತ । ಪ್ರತ್ಯುತ ಪ್ರಾತಿಭಾಸಿಕಸ್ಯೋತ್ಪತ್ತೇಃ ಪ್ರತ್ಯಾಖ್ಯಾನಮೇವ

---

ಅಜ್ಞಾನವನ್ನು ಒಪ್ಪಬೇಕು. ಹೀಗೆಯೇ ಶುಕ್ತಿಯ ರೂಪ್ಯವನ್ನು ನೀನು ಭ್ರಾಂತಿರೂಪವೆಂದು ಒಪ್ಪಲೇಬೇಕು. ವಿಷಯವಿಲ್ಲದೆ ಅದಕ್ಕೆ ಜ್ಞಾನವೆಂಬುದು ಹೊಂದುವುದಿಲ್ಲ. ಇದರಿಂದ "ನ ತು ತತ್ರ ರಜತಮಸ್ತಿ" ಎಂಬ ಭಾಷ್ಯಕ್ಕೆ ವಿರೋಧವಿಲ್ಲ. ಏಕೆಂದರೆ ಆ ಭಾಷ್ಯಕ್ಕೆ ಲೌಕಿಕವಾದ ನಿಜವಾದ ಬೆಳ್ಳಿ ಇಲ್ಲ ಎಂದಿಷ್ಟೇ ಅರ್ಥ ಮಾಡಬಹುದಲ್ಲಾ ! ಎಂದರೆ, ನೀನು ಭ್ರಾಂತನಾಗಿರುವೆ. ಭ್ರಾಂತಿಯೂ ಜ್ಞಾನವಾಗಿದೆ ಎಂಬುದು ಸಿದ್ಧವಾಗುವುದಕ್ಕೆ ಅದಕ್ಕೊಂದು ವಿಷಯವಿರಬೇಕು ಎಂದು ಹಟ ಹಿಡಿಯಬಾರದು. "ಸ್ಮೃತಿರೂಪವಾಗಿ ಅದಲ್ಲದ್ದರಲ್ಲಿ ಹಿಂದೆ ಕಂಡದ್ದನ್ನು (ಅಲ್ಲಿ) ಕಾಣುವುದೇ ಅಧ್ಯಾಸವು". ಎಂದು ಹೇಳಿದ ರೀತಿಯಂತೆ ವಿಷಯವಿಲ್ಲದಿದ್ದರೂ ವಿಷಯವಿರುವಂತೆ ತೋರುವುದೇ ಭ್ರಾಂತಿ ಎಂದು ಒಪ್ಪಿರುವುದರಿಂದ ಹೀಗೆಯೇ ಸರಿ. ಭ್ರಾಂತಿಜ್ಞಾನವೂ ವಿಷಯಕ್ಕೆ ತಕ್ಕ ಹಾಗೆ ಉಂಟಾಗುವುದು ಎಂದು ಹೇಳಿದರೆ ಅದು ಭ್ರಾಂತಿಯಲ್ಲದೇ ಹೋಗುತ್ತದೆ. ಭಾಷ್ಯಕಾರರು ಎಲ್ಲೂ ಪ್ರಾತಿಭಾಸಿ-ಕೋತ್ಪತ್ತಿಯನ್ನು ಒಪ್ಪಿಕೊಂಡೇ ಇಲ್ಲ, ಹಾಗೇನಾದರೂ ಒಪ್ಪಿದ್ದರೆ ಹಿಂದೆ ಹೇಳಿದ್ದಕ್ಕೆ "ಲೋಕದಲ್ಲಿರುವ ನಿಜವಾದ ಬೆಳ್ಳಿಯು ವಿಷಯವೆಂದು ಹೇಳುವುದಕ್ಕೆ ಹೇಳಿದ್ದು" ಎಂದು ನಿಷೇಧಕ್ಕೆ ವ್ಯಾಖ್ಯಾನವನ್ನು ಮಾಡಬಹುದಾಗಿತ್ತು. ಅಷ್ಟೇ ಅಲ್ಲ, ಪ್ರಾತಿಭಾಸಿಕವಾದದ್ದು ತತ್ಕಾಲಕ್ಕೆ

ದರೀದೃಶ್ಯತೇ ಭಾಷ್ಯೇ ಪ್ರತ್ಯಕ್ಷತಃ । "ನ ಹಿ ರಜ್ಜ್ವಾಂ ಭ್ರಾಂತಿಬುದ್ಧ್ಯಾ ಕಲ್ಪಿತಃ ಸರ್ಪೋ ವಿದ್ಯಮಾನಃ ಸನ್ ವಿವೇಕತೋ ನಿವೃತ್ತಃ" (ಮಾಂ. ಕಾ. ಭಾ. ೧-೧೩), "ನ ಹಿ ಮನೋವಿಕಲ್ಪನಾಯಾ ರಜ್ಜುಸರ್ಪಲಕ್ಷಣಾಯಾ ರಜ್ಜ್ವಾಂ ಪ್ರಲಯ ಉತ್ಪತ್ತಿರ್ವಾ" (ಮಾಂ. ಕಾ. ಭಾ. ೨-೩೨ ಭಾ.ಭಾ. ೧೧೩) ಇತ್ಯಾದಿಸ್ಥಲೇಷು । ಏವಂ ವಾರ್ತಿಕೇಽಪಿ – "ರಜ್ಜುಸರ್ಪೋ ಯಥಾ ಲೋಕೇಽಜ್ಞಾತರಜ್ಜುಸತತ್ತ್ವಕಃ । ನೋತ್ಕ್ರಾಮತಿ ನ ಚಾಪ್ಯಾಸ್ತೇ ನ ಚ ನಶ್ಯತಿ ರಜ್ಜುತಃ"॥ (ಬೃ.ವಾ. ೪-೪-೨೮೯) ಇತ್ಯಾದಿ । ತಸ್ಮಾನ್ನ ಭ್ರಾಂತಿವಿಷಯಸಮರ್ಪಕತ್ವೇನಾಜ್ಞಾನಸಿದ್ಧಿಃ । ನಾಪಿ ಭ್ರಾಂತ್ಯುಪಾದಾನತ್ವೇನ ತತ್ಸಿದ್ಧಿಃ । ಲೋಕಸಿದ್ಧೇಷ್ವಂತಃಕರಣಾದಿಷು ಸತ್ಸು ತದ್ವ್ಯತಿರೇಕೇಣ ತ್ವದುಕ್ತಾಜ್ಞಾನೋತ್ಪ್ರೇಕ್ಷಣೇ ಹೇತ್ವಭಾವಾತ್ । ನಾಪಿ ಭ್ರಾಂತಿಸಂಸ್ಕಾರ-ಜ್ಞಾನಾಭಾವಾನಾಂ ಕಾರಣತ್ವನಿರಾಕರಣೇಽಪಿ ಪರಿಶೇಷಾದಜ್ಞಾನಸಿದ್ಧಿಃ । ನ ಹಿ ತ್ವದಿಷ್ಟಮಜ್ಞಾನಂ ತೇಷ್ವಾಗಮಾಪಾಯಿಷ್ವನುಗತಮಿತಿ ಕೇನಾಪ್ಯ-

---

ಹುಟ್ಟಿರುತ್ತದೆ ಎಂಬುದನ್ನು ಖಂಡಿಸಿರುವುದನ್ನು, "ಹಗ್ಗದಲ್ಲಿ ಭ್ರಾಂತಿಯಿಂದ ಕಲ್ಪಿತವಾದ ಹಾವು ನಿಜವಾಗಿದ್ದು, ವಿವೇಕದಿಂದ ಹೋಗುತ್ತದೆ ಎಂಬುದು ಹೊಂದುವುದಿಲ್ಲವಷ್ಟೆ", (ಮಾಂ. ಕಾ. ೧-೧೩)! "ಮನೋವಿಕಲ್ಪನಾ-ಮಾತ್ರವಾದ ರಜ್ಜುಸರ್ಪವೆಂಬುದು ಹಗ್ಗದಲ್ಲಿ ಅಡಗುವುದಾಗಲೀ ಉತ್ಪತ್ತಿಯಾಗುವುದಾಗಲೀ ಆಗುವುದಿಲ್ಲವಷ್ಟೆ" (ಮಾಂ. ಕಾಂ. ೨-೩೨)? ಇದೇ ಮೊದಲಾದ ಸ್ಥಳದಲ್ಲಿ ಕಾಣಬಹುದು. ಹೀಗೆಯೇ ವಾರ್ತಿಕದಲ್ಲೂ – "ಹೇಗೆ ಲೋಕದಲ್ಲಿ ಅಜ್ಞಾತವಾದ ಹಗ್ಗದ ಸ್ವರೂಪವಾದ ರಜ್ಜುಸರ್ಪವು ಹಗ್ಗದಿಂದ ಎದ್ದುಕೊಳ್ಳುವುದಿಲ್ಲ, ಅಲ್ಲಿರುವುದೂ ಇಲ್ಲ, ಹಾಗೆಯೇ ಹಗ್ಗ(ಜ್ಞಾನ)ದಿಂದ ನಾಶವೂ ಆಗುವುದಿಲ್ಲ." (ಬೃ. ವಾ. ೪-೪-೨೮೯) ಎಂದು ಹೇಳಿದೆ. ಆದ್ದರಿಂದ ಭ್ರಾಂತಿಗೆ ವಿಷಯವನ್ನು ಸಮರ್ಪಣೆ ಮಾಡುವುದರಿಂದ ಅಜ್ಞಾನದ ಸಿದ್ಧಿ ಎಂಬುದಿಲ್ಲ, ಭ್ರಾಂತಿಯನ್ನು ಉತ್ಪತ್ತಿಮಾಡುವುದರಿಂದಲೂ ಅದು ಸಿದ್ಧಿಯಾಗುವುದಿಲ್ಲ. ಲೋಕಸಿದ್ಧವಾದ ಅಂತಃಕರಣಾದಿಗಳು ಇರುವಾಗ ಅದಕ್ಕಿಂತ ಬೇರೆಯಾಗಿ ನೀನು ಉತ್ಪ್ರೇಕ್ಷೆಮಾಡಿದ ಅಜ್ಞಾನಕ್ಕೆ ಕಾರಣವಿರುವುದಿಲ್ಲ. ಭ್ರಾಂತಿ, ಸಂಸ್ಕಾರ, ಜ್ಞಾನಾಭಾವಗಳಿಗೆ ಕಾರಣತ್ವವನ್ನು ಅಲ್ಲಗಳೆದರೂ ಪಾರಿಶೇಷ್ಯದಿಂದ (ನಿನ್ನ) ಅಜ್ಞಾನವು ಸಿದ್ಧಿಸುವುದಿಲ್ಲ. ನಿನಗೆ ಒಪ್ಪಿಗೆಯಾದ ಅಜ್ಞಾನವು ಅವುಗಳಲ್ಲಿ

ನುಭೂತಮ್ । ನ ಚ ವಯಮಜ್ಞಾನಂ ಭ್ರಾಂತೇರುಪಾದಾನಮಿತ್ಯುರರೀ-ಕುರ್ಮಃ, ಯೇನ ಜ್ಞಾನಾಭಾವಸ್ಯ ಭ್ರಾಂತ್ಯುಪಾದಾನತ್ವನಿರಾಕರಣಂ ಸ್ಥಾನೇ ಸ್ಯಾತ್। ಯತ್ತೂಕ್ತಂ "ನಾಜ್ಞಾಸಿಷಂ ಶುಕ್ತಿಮ್, ಇದಾನೀಂ ತು ಜಾನಾಮಿ" ಇತ್ಯನು-ಭವಬಲಾದ್ಭ್ರಾಂತಿತತ್ಸಂಸ್ಕಾರಸಂಶಯಜ್ಞಾನಾಭಾವೇಭ್ಯೋ ವ್ಯತಿರಿಕ್ತ-ಮಜ್ಞಾನಂ ಸಿಧ್ಯತೀತಿ । ತದಸತ್ । ಜ್ಞಾನಾಭಾವವಿಷಯಕತ್ವೇನೈವ ಚಾರಿತಾರ್ಥ್ಯಾತ್ ತಾದೃಶಾನುಭವಸ್ಯ । ನನು ನಾಯಂ ಜ್ಞಾನಾಭಾವಃ, ಅಭಾವಪ್ರಮಾಣೇನಾನವಗಮಾದಿತ್ಯುಕ್ತಮ್ । ಸತ್ಯಮುಕ್ತಮ್, ದುರುಕ್ತಂ ತು ತತ್ । ನ ಹಿ ಜ್ಞಾನಂ ಪ್ರಮಾಣಗಮ್ಯಮ್ । ಯೇನ ತದಭಾವೋಽಪಿ ಪ್ರಮಾಣಗಮ್ಯಃ ಸ್ಯಾದಿತಿ ಶಂಕ್ಯೇತ । ಯೇನೈವ ತ್ವನುಭವೇನ ಗಮ್ಯತೇ ಜ್ಞಾನಮ್, ತೇನೈವ ಜ್ಞಾನಾಭಾವಸ್ಯಾಪ್ಯವಗಮಾನ್ನ ಕಸ್ಯಾಪಿ ಕುಚೋದ್ಯಸ್ಯಾತ್ರ ಸಂಭವೋಽಸ್ತಿ । ತರ್ಹಿ ಕತಮೋಽಯಂ ಜ್ಞಾನಾಭಾವ ಇತಿ ಚೇತ್ । ಪ್ರಾಗಭಾವ ಏವಾಸ್ತು । ನನು ತಸ್ಯಾಪ್ಯಜ್ಞಾನತ್ವೇನಾಪ್ರತೀಯಮಾನ-

---

ಅನುಗತವಾಗಿದೆ ಎಂದು ಯಾರೂ ಅನುಭವಿಸಿಲ್ಲ. ನಾವು ಅಜ್ಞಾನವನ್ನು ಭ್ರಾಂತಿಗೆ ಉಪಾದಾನವೆಂದು ಒಪ್ಪಿಕೊಳ್ಳುವುದೂ ಇಲ್ಲ, ಹಾಗೇನಾದರೂ ಇದ್ದಿದ್ದರೆ ಜ್ಞಾನಾಭಾವವು ಭ್ರಾಂತಿಗೆ ಉಪಾದಾನವೆಂಬುದನ್ನು ಅಲ್ಲಗಳೆದಿರುವುದು ಯುಕ್ತವಾಗುತ್ತಿತ್ತು. "ಶುಕ್ತಿಯನ್ನು ಅರಿತಿರಲಿಲ್ಲ, ಈಗ ಅರಿಯುತ್ತಿದ್ದೇನೆ" ಎಂಬ ಅನುಭವದ ಬಲದಿಂದ ಭ್ರಾಂತಿ ಮತ್ತು ಅದರ ಸಂಸ್ಕಾರವಾದ ಸಂಶಯ, ಜ್ಞಾನಾಭಾವ ಇವುಗಳಿಗಿಂತ ಬೇರೆಯಾದ ಅಜ್ಞಾನವು ಸಿದ್ಧಿಯಾಗುತ್ತದೆ ಎಂದು ಏನು ನೀನು ಹೇಳುವೆ – ಅದು ಸರಿಯಲ್ಲ, ಏಕೆಂದರೆ ಆ ರೀತಿಯ ಅನುಭವವು ಜ್ಞಾನಾಭಾವವೆಂಬುದಕ್ಕೆ ವಿಷಯವಾಗಿದೆ ಎನ್ನುವುದರಿಂದಲೇ ಅದು ಚರಿತಾರ್ಥವಾಗುವುದಾಗಿದೆ. (ಪೂ.ಪ.) – ಇದು ಜ್ಞಾನಾಭಾವವಲ್ಲ, ಏಕೆಂದರೆ ಅಭಾವಪ್ರಮಾಣದಿಂದ ಗೊತ್ತಾಗುವುದಿಲ್ಲ ಎಂದು ಹೇಳಿದ್ದೇವಲ್ಲ ! (ಸಿ) – ಹೌದು ಹೇಳಿದಿರಿ, ಅದು ಸರಿಯಾದದ್ದಲ್ಲ, ಏಕೆಂದರೆ ಜ್ಞಾನವು ಪ್ರಮಾಣಗಮ್ಯವಲ್ಲ, ಹಾಗಿದ್ದರೆ ಅದರ ಅಭಾವವನ್ನು ಪ್ರಮಾಣಗಮ್ಯವೆಂದು ಶಂಕಿಸಬಹುದಾಗಿತ್ತು. ಯಾವ ಅನುಭವದಿಂದ ಜ್ಞಾನವು ತಿಳಿದುಬರುತ್ತದೋ ಅದರಿಂದಲೇ ಜ್ಞಾನಾಭಾವವೂ ತಿಳಿದುಬರುವುದರಿಂದ ಇಲ್ಲಿ ಯಾವ ಆಕ್ಷೇಪಕ್ಕೂ ಅವಕಾಶವಿರುವುದಿಲ್ಲ. ಹಾಗಾದರೆ ಈ ಜ್ಞಾನಾಭಾವವು ಯಾವ ತರಹದ್ದು ? ಎಂದರೆ ಪ್ರಾಗಭಾವವಾಗಿರಲಿ. ಅಲ್ಲಾ!

ತ್ವಾದಜ್ಞಾನತ್ವಾನುಪಪತ್ತಿಃ ಜ್ಞಾನೇನ ನಿವೃತ್ತ್ಯನುಪಪತ್ತಿಶ್ಚ ಜ್ಞಾನಾಭಾವತ್ವಾ-ದಭಾವಾಂತರವತ್ ಇತ್ಯುಕ್ತಮ್ । ಬಾಢಮುಕ್ತಮ್, ಅಯುಕ್ತಂ ತು ತತ್। ನ ಹಿ ಜ್ಞಾನಾಭಾವವ್ಯತಿರಿಕ್ತಮಜ್ಞಾನಮದ್ಯಾಪಿ ಸಿದ್ಧಮ್, ಯೇನಾಜ್ಞಾನತ್ವೇ-ನಾಪ್ರತೀಯಮಾನತ್ವಾದಿತಿ ವಾಚೋಯುಕ್ತಿಃ ಶೋಭೇತ । ನ ಚ ದೃಷ್ಟೇ ಜ್ಞಾನನಿವರ್ತ್ಯತ್ವೇಽನುಪಪತ್ತಿಃ ಶಕ್ಯಾ ಚೋದಯಿತುಮ್ । ನ ಚ "ಅಜ್ಞಾನಂ ಮೇ ನಿವೃತ್ತಮ್" ಇತ್ಯನೇನಾನುಭವೇನ ಜ್ಞಾನೋದಯವ್ಯತಿರೇಕೇಣಾ-ಜ್ಞಾನನಿವೃತ್ತಿರನ್ಯಾ ಕಲ್ಪಯಿತುಂ ಶಕ್ಯತೇ । ತಸ್ಮಾತ್ "ಶುಕ್ತಿಕಾ ಹಿ ರಜತವದವಭಾಸತೇ" ಇತ್ಯತ್ರ ವಿಪರೀತಗ್ರಹಣಮಾತ್ರಮ್ । "ಶುಕ್ತ್ಯಜ್ಞಾನಂ ನಿವೃತ್ತಮ್" ಇತ್ಯತ್ರ ಚ ಶುಕ್ತಿಜ್ಞಾನೋದಯಮಾತ್ರಂ ಪರಾಮೃಶ್ಯತ ಇತ್ಯಭ್ಯುಪಗಂತವ್ಯಂ ಲೋಕಪ್ರಸಿದ್ಧಮನುಸರತಾ । ಯಥೋಕ್ತಂ **ಭಾಷ್ಯಕಾರೈಃ** "ಯಥಾ ಗೃಹ್ಯಮಾಣಾಯಾ ಅಪಿ ಶುಕ್ತಿಕಾಯಾ ವಿಪರ್ಯಯೇಣ ರಜತಾಭಾಸಾಯಾ

---

ಅದು ಅಜ್ಞಾನವಾಗಿ ತೋರಿಬರುತ್ತಿಲ್ಲವಾದ್ದರಿಂದ ಅಜ್ಞಾನತ್ವವೆಂಬುದು ಸರಿಯಲ್ಲ. ಜ್ಞಾನದಿಂದ ನಿವೃತ್ತಿಯಾಗುವದೂ ಹೊಂದುತ್ತಿಲ್ಲವಾದ್ದರಿಂದ ಬೇರೆಯ ಅಭಾವದಂತೆ (ಅದೂ) ಜ್ಞಾನಾಭಾವವಾಗಿದೆ ಎಂದು ನಾವು ಹೇಳಿದ್ದೇವಲ್ಲಾ ! ಹೌದು ಹೇಳಿದಿರಿ, ಆದರೆ ಅದು ಸರಿಯಲ್ಲ, ಜ್ಞಾನಾಭಾವಕ್ಕಿಂತ ಬೇರೆಯಾಗಿ ಅಜ್ಞಾನವು ಈವರೆಗೂ ಸಿದ್ಧಿಯಾಗಿಲ್ಲ, ಹಾಗಿದ್ದರೆ "ಅಜ್ಞಾನದಂತೆ ತೋರುತ್ತಿಲ್ಲವಾದ್ದರಿಂದ" ಎಂಬ ಈ ವಾಚೋಯುಕ್ತಿಯು ಶೋಭಿಸುತ್ತಿತ್ತು. ಜ್ಞಾನದಿಂದ ನಿವೃತ್ತಿಯಾಗುತ್ತಿರುವುದು ಕಂಡುಬರುತ್ತಿರುವಾಗ ಹೊಂದುವುದಿಲ್ಲವಲ್ಲಾ ! ಎನ್ನುವುದು ಸರಿಯಲ್ಲ. ನನಗೆ ಅಜ್ಞಾನವು ನಿವೃತ್ತವಾಯಿತು ಎಂಬೀ ಅನುಭವದಲ್ಲಿ ಜ್ಞಾನೋತ್ಪತ್ತಿಗಿಂತ ಬೇರೆಯಾದ ಅಜ್ಞಾನನಿವೃತ್ತಿ ಎಂಬುದು ಬೇರೊಂದು ಎಂದು ಕಲ್ಪಿಸುವುದಕ್ಕೆ ಬರುವುದಿಲ್ಲ. ಆದ್ದರಿಂದ ಲೋಕಪ್ರಸಿದ್ಧಿಯನ್ನು ಅನುಸರಿಸುವವನು ಶುಕ್ತಿಯೇ ರಜತದಂತೆ ತೋರುತ್ತದೆ ಎಂಬ ಜಾಗದಲ್ಲಿ, ಇದು ವಿಪರೀತಗ್ರಹಣಮಾತ್ರವೆಂತಲೂ ಶುಕ್ತ್ಯಜ್ಞಾನವು ತೊಲಗಿತು ಎಂಬಲ್ಲಿಯಾದರೋ ಶುಕ್ತಿಜ್ಞಾನದ ಉದಯವಷ್ಟೇ ಪರಾಮರ್ಶಿಸಲ್ಪಡುತ್ತಿದೆ ಎಂಬುದನ್ನು ಒಪ್ಪಬೇಕು. ಇದನ್ನು ಭಾಷ್ಯಕಾರರು (ಇನ್ನೊಂದು) ಕಡೆಯಲ್ಲಿ ತಿಳಿಸಿರುತ್ತಾರೆ. "ಹೇಗೆ ಕಪ್ಪೇಚಿಪ್ಪು ಗ್ರಹಿಸುತ್ತಿದ್ದರೂ ವಿಪರೀತವಾಗಿ

ಅಗ್ರಹಣಮ್, ವಿಪರೀತಜ್ಞಾನವ್ಯವಧಾನಮಾತ್ರಮ್, ತಥಾ ಗ್ರಹಣಂ ಜ್ಞಾನಮಾತ್ರಮೇವ, ವಿಪರೀತಜ್ಞಾನವ್ಯವಧಾನಾಪೋಹಾರ್ಥ-ತ್ವಾಜ್ಜ್ಞಾನಸ್ಯ" (ಬೃ. ಭಾ. ೧-೪-೭) ಇತಿ । **ವಾರ್ತಿಕಕಾರೈಶ್ಚ** "ನ ಚಾವಿದ್ಯಾಸಮುಚ್ಛಿತ್ತಿರ್ಜ್ಞಾನೋತ್ಪತ್ತ್ಯತಿರೇಕತಃ" (ಬೃ. ವಾ. ೩-೪-೧೯೫) ಇತಿ । ಏತೇನ ತಮೋನಿವೃತ್ತಿದೃಷ್ಟಾಂತಬಲಾತ್ ಪ್ರಾಗಭಾವವ್ಯತಿರಿಕ್ತಸ್ಯಾಪಿ ನಿವೃತ್ತಿರಸ್ತೀತ್ಯಜ್ಞಾನಾವಷ್ಟಂಭೋಽಪಿ ಪ್ರತ್ಯಾಖ್ಯಾತಃ । ತಮಸಃ ಪ್ರಕಾಶಾಭಾವವಿಲಕ್ಷಣತ್ವೇ ವಾದಿವಿಪ್ರತಿಪತ್ತೇಃ, ಪ್ರಕಾಶಸ್ಯಾತ್ಮಲಾಭ-ವ್ಯತಿರೇಕೇಣ ತಮೋನಿವೃತ್ತೇರನುಪಲಂಭಾಚ್ಚ । ತಸ್ಮಾತ್ "ನಾಜ್ಞಾಸಿಷಂ ಶುಕ್ತಿಮ್, ಅಜ್ಞಾನಂ ಮೇ ನಿವೃತ್ತಮ್" ಇತ್ಯನುಭವಮಾತ್ರೇಣ ನ ವಿಪರೀತಜ್ಞಾನಾಭಾವವಿಲಕ್ಷಣಸ್ಯ ಕಸ್ಯಚಿದಪ್ಯಜ್ಞಾನಸ್ಯ ಸಿದ್ಧಿರಿತಿ ಸ್ಥಿತಮ್ । ತದೇವಂ ಲೋಕಸಿದ್ಧಾಜ್ಞಾನವಿಲಕ್ಷಣಸ್ಯ ಭಾವರೂಪಾಜ್ಞಾನಸ್ಯ

---

ರಜತರೂಪದಿಂದ ತೋರುತ್ತಿರುವಲ್ಲಿ ಅದನ್ನು ಗ್ರಹಿಸುವುದಿಲ್ಲವೆಂಬುದಕ್ಕೆ ವಿಪರೀತಜ್ಞಾನವೊಂದೇ ಮರೆಯಾಗಿರುತ್ತದೋ ಮತ್ತು ಅದನ್ನು ಗ್ರಹಿಸುವುದೆಂಬುದು ಜ್ಞಾನಮಾತ್ರವಾಗಿರುತ್ತದೋ, (ಏಕೆಂದರೆ) ವಿಪರೀತಜ್ಞಾನವೆಂಬ ಮರೆಯನ್ನು ತೆಗೆದುಹಾಕುವುದಕ್ಕಾಗಿಯೇ ಜ್ಞಾನವು ಬೇಕಾಗಿರುತ್ತದೆ" (ಬೃ. ಭಾ. ೧-೪-೭). "ಹಾಗೆಯೇ ಅವಿದ್ಯೆಯು ನಾಶವೆಂಬುದು ಜ್ಞಾನೋತ್ಪತ್ತಿಗಿಂತ ಬೇರೆಯಾಗಿರುವುದಿಲ್ಲ (ಬೃ. ವಾ. ೨-೪-೧೯೫)" ಎಂದು ವಾರ್ತಿಕಕಾರರೂ ಸಹ ಹೇಳಿರುತ್ತಾರೆ. ಇದರಿಂದ-ಕತ್ತಲೆಯು ನಿವೃತ್ತಿಯಾಗಬಹುದೆಂಬ ದೃಷ್ಟಾಂತಬಲದಿಂದ ಪ್ರಾಗಭಾವಕ್ಕಿಂತ ಬೇರೆಯಾದದ್ದಾದರೂ ನಿವೃತ್ತಿಯಾಗುತ್ತದೆ ಎಂದು (ಹೇಳುತ್ತಾ) ಅಜ್ಞಾನವೆಂಬುದನ್ನು ಆಶ್ರಯಿಸಿಕೊಳ್ಳುವುದನ್ನೂ ತಿರಸ್ಕರಿಸಿದಂತಾಯಿತು. "ಕತ್ತಲೆಯು ಪ್ರಕಾಶದ ಅಭಾವಕ್ಕಿಂತ ಬೇರೆ" ಎಂಬ ವಿಷಯದಲ್ಲಿ ವಾದಿಗಳಿಗೆ ವಿಪ್ರತಿಪತ್ತಿ ಇದ್ದರೂ ಪ್ರಕಾಶಸ್ವರೂಪವು ತೋರಿಕೊಳ್ಳುವುದು ಎಂಬುದಕ್ಕಿಂತ ಬೇರೆಯಾಗಿ ಕತ್ತಲೆಯು ಹೋಗುವುದು ಎಂಬುದು ಕಂಡಿರುವುದಿಲ್ಲ, ಆದ್ದರಿಂದ "ನಾನು ಶುಕ್ತಿಯನ್ನು ತಿಳಿದಿರಲಿಲ್ಲ", "ನನ್ನ ಅಜ್ಞಾನವು (ಈಗ) ತೊಲಗಿದೆ" ಎಂಬ ಅನುಭವಮಾತ್ರದಿಂದ ವಿಪರೀತಜ್ಞಾನಾಭಾವಕ್ಕೆ ವಿಲಕ್ಷಣವಾದ ಯಾವುದೊಂದು ಅಜ್ಞಾನವೂ ಸಿದ್ಧಿಸುವುದಿಲ್ಲ ಎಂಬುದು ಸಿದ್ಧವಾಯಿತು. ಆದ್ದರಿಂದ ಲೋಕಸಿದ್ಧವಾದ ಅಜ್ಞಾನಕ್ಕಿಂತ ವಿಲಕ್ಷಣವಾದ ಭಾವರೂಪವಾದ

ಸರ್ವಥಾಪ್ಯಸಿದ್ಧೇರಭಿತ್ತಿಚಿತ್ರಮೇವ ತತ್ಕಾರ್ಯತ್ವೇನ ಭ್ರಾಂತಿತದ್ವಿಷಯ-ಯೋರ್ವರ್ಣನಮಿತಿ ನ ಕುತ್ರಾಪ್ಯಕಾಂಡತಾಂಡವಿತಮಸ್ಮಾಕಮ್ ॥

ಅಪಿ ಚ "ಶುಕ್ತಿಕಾ ಹಿ ರಜತವದವಭಾಸತೇ" ಇತಿ ವಿದಿತಶುಕ್ತಿಕಾತತ್ತ್ವಸ್ಯ ವಿಗಲಿತರಜತಭ್ರಾಂತೇರನುಭವೋಽಯಮಿತ್ಯುಕ್ತಮ್ । ತಚ್ಚ ಸ್ಮರ್ತುಮರ್ಹಸಿ। ಅವಶ್ಯಂ ಚ ತ್ವಯಾಪ್ಯೇವಮೇವಾಭ್ಯುಪಗಂತವ್ಯಮ್ । ಭ್ರಾಂತಪುರುಷಸ್ಯ ಹಿ ನಾನುಭವಃ ಸ್ಯಾತ್ ಶುಕ್ತಿಕಾ ಹೀತಿ । ತಸ್ಯ ಶುಕ್ತಿಕಾಪ್ರತೀತೇರೇವಾ-ಭಾವಾತ್ । ನ ವಾ ರಜತವದಿತಿ । "ರಜತಮೇವ ಭಾಸತೇ" ಇತಿ ಖಲು ತಸ್ಯ ಭ್ರಾಂತಿಃ । ತಥಾ ಚ ವಿಗಲಿತರಜತಭ್ರಾಂತೇರಪಿ ರಜತಪ್ರತೀತಿಃ ಕದಾಚಿದನುವರ್ತತ ಏವ, ದೂರಾದಿದೋಷಾತ್ । ತತ್ರ ಸತ್ಯತ್ವಬುದ್ಧಿಸ್ತು ಶುಕ್ತಿಕಾಬುದ್ಧ್ಯಾ ನಿವರ್ತ್ಯತ ಇತ್ಯನ್ಯದೇತತ್ । ಏವಂ ಸ್ಥಿತೇ ರಜತಪ್ರತೀತೇರಜ್ಞಾನಮುಪಾದಾನಮಿತಿ ನೈವ ಸಿಧ್ಯತಿ । ಯತ್ಕಾರಣಂ

---

ಅಜ್ಞಾನವು ಯಾವ ರೀತಿಯಿಂದಲೂ ಸಿದ್ಧಿಸದೇ ಇರುವುದರಿಂದ ಭ್ರಾಂತಿಜ್ಞಾನಕ್ಕೂ ಅದರ ಕಾರ್ಯವಾದ ವಿಷಯಗಳಿಗೂ ಭಾವರೂಪಾ-ಜ್ಞಾನವನ್ನು ಕಾರಣವಾಗಿ ವರ್ಣಿಸಿರುವುದು ಅಭಿತ್ತಿಚಿತ್ರ (ಗೋಡೆ ಇಲ್ಲದೇ ಚಿತ್ರ ಬರೆದದ್ದಕ್ಕೆ) ಸಮಾನವೆಂದಾಗುವುದರಿಂದ ನಮ್ಮದು ಅಸ್ಥಾನದ ಕುಣಿದಾಟವಲ್ಲ.

ಶುಕ್ತಿಯೇ ರಜತವಾಗಿ ತೋರುತ್ತದೆ ಎಂಬ ಮಾತು ಶುಕ್ತಿತತ್ತ್ವವನ್ನು ತಿಳಿದವನಿಗೆ, ರಜತಭ್ರಾಂತಿ ಇಲ್ಲದವನಿಗೆ ಆಗುವ ಅನುಭವವಿದು ಎಂದಿದ್ದೇವೆ. ಅದನ್ನು ಸ್ಮರಿಸುವದಕ್ಕೆ ತಕ್ಕವನಾಗಿರುವೆ. ನೀನೂ ಸಹ ಇದನ್ನು ಹೀಗೆಯೇ ಒಪ್ಪಬೇಕು. "ಶುಕ್ತಿಯೇ" ಎಂಬ ಅನುಭವವು ಭ್ರಾಂತಪುರುಷನ ಅನುಭವ-ವಾಗುವುದಕ್ಕೆ ಸಾಧ್ಯವಿಲ್ಲ. (ಏಕೆಂದರೆ) ಅವನಿಗೆ ಶುಕ್ತಿಯೇ ತೋರುವುದಿಲ್ಲ. ರಜತದಂತೆ ಎಂತಲೂ ಅವನಿಗೆ ತೋರುವುದಿಲ್ಲ. ಬೆಳ್ಳಿಯೇ ತೋರುತ್ತಿ-ರುವುದು ಎಂದಲ್ಲವೆ, ಅವನ ಭ್ರಾಂತಿಯು. ರಜತಭ್ರಾಂತಿಯನ್ನು ಕಳೆದು-ಕೊಂಡವನಿಗೂ ಕೆಲವೊಮ್ಮೆ ರಜತಪ್ರತೀತಿಯು ಅನುವೃತ್ತವಾಗುತ್ತದೆ. ದೂರವೇ ಮುಂತಾದ ದೋಷದಿಂದ (ಹಾಗಾಗಬಹುದು). ಅಲ್ಲಿ ಸತ್ಯತ್ವ-ಬುದ್ಧಿಯೂ ಶುಕ್ತಿಕಾಬುದ್ಧಿಯಿಂದ ತೊಲಗಿಯೇ ತೊಲಗುತ್ತದೆ ಎಂಬುದೇನಿದೆ, ಇದು ಬೇರೆ ವಿಷಯು. ಹೀಗಾಗಲಾಗಿ ರಜತಪ್ರತೀತಿಗೆ ಅಜ್ಞಾನವು

ಶುಕ್ತಿಜ್ಞಾನೇನ ಬಾಧಿತಾಜ್ಞಾನಸ್ಯಾಪಿ ರಜತಪ್ರತೀತಿರ್ದೃಷ್ಟಾ । ತಸ್ಮಾದ್ಭ್ರಾಂತೇರಜ್ಞಾನಮುಪಾದಾನಂ ಭವತು ಮಾ ವಾ, ಪ್ರತೀತೇಸ್ತಾವನ್ನಾಸ್ತ್ಯಜ್ಞಾನಾಪೇಕ್ಷೇತಿ ಸಿದ್ಧಮ್ । ಅಭ್ಯುಪಗಮ್ಯೈವಮುಚ್ಯತೇ । ವಸ್ತುತಸ್ತು ಭ್ರಾಂತೇರಪಿ ರಜತಸತ್ಯತ್ವಬುದ್ಧಿಮಾತ್ರತ್ವಾದಧಿಷ್ಠಾನಭೂತಶುಕ್ತಿಬುದ್ಧ್ಯೈವ ನಿವೃತ್ತಿರಿತಿ ನಾನ್ತಃಕರಣಾದ್ಯತಿರಿಕ್ತಮಪ್ರಸಿದ್ಧಮಜ್ಞಾನಮುಪಾದಾನತ್ವೇನ ಕಲ್ಪ್ಯಂ ಭವತೀತ್ಯಲಂ ಪ್ರಪಞ್ಚೇನ ॥

ತಸ್ಮಾದನಿರ್ವಚನೀಯಮನಾದ್ಯಜ್ಞಾನಂ ತತ್ತದ್ಭ್ರಾಂತೌ ಲೌಕಿಕರಜತಾದಿವಿಲಕ್ಷಣಮಿಥ್ಯಾರಜತಾದ್ಯನಿರ್ವಚನೀಯವಿಷಯರೂಪೇಣ ತತ್ತಜ್ಜ್ಞಾನರೂಪೇಣ ಚ ಪರಿಣತಂ ತತ್ತದಧಿಷ್ಠಾನಭೂತಶುಕ್ತ್ಯಾದಿಜ್ಞಾನಾದ್ವಿನಾಶ್ಯತ ಇತ್ಯೇತತ್ಸರ್ವಂ ವಂಧ್ಯಾಪುತ್ರಸ್ಯ ಜನನವೃದ್ಧಿರಾಜ್ಯಾಭಿಷೇಕಸುಖದುಃಖಾನು-

---

ಉಪಾದಾನವೆಂಬುದು ಸಿದ್ಧವಾಗುವುದಿಲ್ಲ. ಶುಕ್ತಿಜ್ಞಾನದಿಂದ ಅಜ್ಞಾನವು ಬಾಧಿತವಾಗಿದ್ದರೂ ರಜಪ್ರತೀತಿಯು ಆಗುವದು ಕಂಡಿದೆ. ಆದ್ದರಿಂದ ಭ್ರಾಂತಿಗೆ ಅಜ್ಞಾನವು ಉಪಾದಾನವಾಗಿರಲಿ ಅಥವಾ ಇಲ್ಲದಿರಲಿ, ತೋರುವುದಕ್ಕೆ ಅಜ್ಞಾನದ ಅಪೇಕ್ಷೆ ಏನಿರುವುದಿಲ್ಲ ಎಂಬುದು ಸಿದ್ಧವಾಯಿತು. (ಇದಿಷ್ಟೂ) ಒಪ್ಪಿಹೇಳಿದ ಮಾತಿದು. ನಿಜವಾಗಿಯಾದರೋ, ಭ್ರಾಂತಿ ಎಂಬುದೂ ರಜತಸತ್ಯತ್ವಬುದ್ಧಿಯಾದ್ದರಿಂದ ಅದಕ್ಕೆ ಅಧಿಷ್ಠಾನವಾದ ಶುಕ್ತಿಬುದ್ಧಿಯಿಂದಲೇ ತೊಲಗುತ್ತದೆ ಎಂದಾದ್ದರಿಂದ ಅಂತಃಕರಣವೇ ಮುಂತಾದದ್ದಕ್ಕಿಂತ ಬೇರೆಯದಾದ ಅಪ್ರಸಿದ್ಧವಾದ ಅಜ್ಞಾನಕ್ಕೆ ಉಪಾದಾನವಾಗಿರುವುದನ್ನು ಕಲ್ಪಿಸಬಾರದೆಂದು ಸಿದ್ಧವಾಯಿತಾದ್ದರಿಂದ ಇಲ್ಲಿ ಹೆಚ್ಚಾಗಿ ವಿಸ್ತರಿಸುವುದು ಸಾಕು.

ಆದ್ದರಿಂದ ಅನಿರ್ವಚನೀಯವಾದ ಅನಾದ್ಯವಿದ್ಯೆಯು ಆಯಾಯಾ ಭ್ರಾಂತಿ ಕಾಲದಲ್ಲಿ ಲೋಕದಲ್ಲಿರುವ ರಜತಕ್ಕಿಂತ ವಿಲಕ್ಷಣವಾದ ಮಿಥ್ಯಾರಜತವೇ ಮುಂತಾದ ಅನಿರ್ವಚನೀಯವಾದ ವಿಷಯರೂಪದಿಂದಲೂ ಆಯಾ ಜ್ಞಾನರೂಪದಿಂದಲೂ ಪರಿಣಾಮಗೊಂಡದ್ದಾಗಿ ಆಯಾ (ಮಿಥ್ಯಾಜ್ಞಾನಕ್ಕೆ) ಅಧಿಷ್ಠಾನವಾದ ಶುಕ್ತಿಯೇ ಮುಂತಾದ ಜ್ಞಾನದಿಂದ ನಾಶವಾಗುತ್ತದೆ ಎಂಬುದೇ ಮುಂತಾಗಿರುವ ವಿಚಾರವೆಲ್ಲಾ ಬಂಜೆಮಗನ ಹುಟ್ಟು, ಬೆಳವಣಿಗೆ, ರಾಜ್ಯಾಭಿಷೇಕ, (ಅವನ) ಸುಖದುಃಖಗಳ ಅನುಭವ, ಮತ್ತು ಮರಣ

ಭವಮರಣಾದಿವದತ್ಯಂತಾಸಂಭಾವಿತಂ ಕಲ್ಪಿತಂ ಧೃಷ್ಟೈರ್ವಾದಿಭಿಃ । ನೈಷಾ ಪ್ರಕ್ರಿಯಾ ಲೋಕಸಿದ್ಧಭ್ರಾಂತಿನಿದರ್ಶನಾರ್ಥಂ ಪ್ರವೃತ್ತಸ್ಯ ಭಾಷ್ಯಕಾರಸ್ಯ ಹೃದಯಮಾರೂಢೇತ್ಯಲಂ ಕುದೃಷ್ಟಿಪರೀಕ್ಷಣೇನ ॥

**೧೪. ಲಕ್ಷಣವಿಚಾರೋಪಸಂಹಾರಃ** – ಇದಮತ್ರ ಪ್ರಕೃತಮ್ । ಸರ್ವಾನುಭವಸಿದ್ಧದೃಷ್ಟಾಂತದ್ವಯಗ್ರಹಣೇನ "ಅತಸ್ಮಿಂಸ್ತದ್ಬುದ್ಧಿರೇವಾಧ್ಯಾಸ" ಇತಿ ಲಕ್ಷಣಂ ನ ಕೇವಲಂ ಪರೀಕ್ಷಕಾಣಾಂ ಸಮ್ಮತಮ್, ಕಿಂ ತು ಲೋಕಾನುಭವಾನುಸಾರಿ ಚೇತ್ಯಾದರ್ಶಿತಮ್ । ತದಯಮಭಿಪ್ರಾಯಃ । ಯಥಾ ಹಿ ಲೋಕೇ ಶುಕ್ತೌ ರಜತಾಧ್ಯಾಸಃ, ಏಕಸ್ಮಿನ್ನೇವ ಚಂದ್ರೇ ಸದ್ವಿತೀಯತಾಧ್ಯಾಸಶ್ಚ, ಏವಮೇವ ವಿಷಯಿಣಿ ಚಿದಾತ್ಮಕೇ ಸತ್ಯರೂಪೇ ವಿಷಯಸ್ಯಾನೃತಸ್ಯ ತದ್ಧರ್ಮಾಣಾಂ ಚಾಧ್ಯಾಸಃ, ತದ್ವಿಪರ್ಯಯೇಣ ವಿಷಯೇ ವಿಷಯಿತದ್ಧರ್ಮಾಣಾಂ ಚೇತಿ ॥

---

ಇವುಗಳಿಗೆ ಸಮಾನವಾಗಿ, ಅತ್ಯಂತವಾಗಿ ಹೊಂದದೇ ಇರುವುದಾಗಿ ಈ ಕೊಬ್ಬಿದ ವಾದಿಗಳು ಕಲ್ಪಿಸಿರುತ್ತಾರೆನ್ನಬೇಕು. ಈ ಪ್ರಕ್ರಿಯೆಯು ಲೋಕಸಿದ್ಧವಾದ ಭ್ರಾಂತಿಗೆ ದೃಷ್ಟಾಂತವನ್ನು ತೋರಿಸುವುದಕ್ಕೆ ಹೊರಟವರಾದ ಭಾಷ್ಯಕಾರರ ಹೃದಯದಲ್ಲಿ ಹೊಕ್ಕಿರುವುದಲ್ಲ ಎಂದಾದ್ದರಿಂದ ಈ ಕುದೃಷ್ಟಿಯನ್ನು ಪರೀಕ್ಷಿಸುವದು ಸಾಕು.

**೧೪. ಲಕ್ಷಣವಿಚಾರದ ಉಪಸಂಹಾರವು** – ಇದಿಲ್ಲಿ ಪ್ರಕೃತವಾದದ್ದು. "ಅದಲ್ಲದ್ದರಲ್ಲಿ ಅದೆಂಬ ಬುದ್ಧಿಯೇ ಅಧ್ಯಾಸವು" ಎಂಬುದನ್ನು ಎಲ್ಲರ ಅನುಭವದಲ್ಲಿ ಸಿದ್ಧವಾದ ಎರಡು ದೃಷ್ಟಾಂತವನ್ನು ತೋರಿಸುವುದರ ಮೂಲಕ ಹೇಳಿರುವುದು ಬರೀ ಪರೀಕ್ಷಕರಿಗೆ ಮಾತ್ರವಲ್ಲದೆ ಎಲ್ಲಾ ಜನರ ಅನುಭವಕ್ಕೆ ಅನುಗುಣವಾದದ್ದು ಎಂಬುದನ್ನು ತೋರಿಸಿರುತ್ತದೆ. ಇಲ್ಲಿದು ಅಭಿಪ್ರಾಯವು – ಹೇಗೆ ಶುಕ್ತಿಯಲ್ಲಿ ರಜತಾಧ್ಯಾಸವಿದೆಯೋ ಅಥವಾ ಒಂದೇ ಚಂದ್ರನಲ್ಲಿ ಸದ್ವಿತೀಯತ್ವವು ತೋರುವ ಅಧ್ಯಾಸವಿದೆಯೋ ಅದೇರೀತಿ ವಿಷಯಿಯೂ ಚಿದಾತ್ಮಕನೂ ಸತ್ಯರೂಪನೂ ಆದ (ಆತ್ಮನಲ್ಲಿ) ಸುಳ್ಳಾದ ವಿಷಯದ ಮತ್ತು ಅದರ ಧರ್ಮದ ಅಧ್ಯಾಸವು, ಅದಕ್ಕೆ ವಿಪರೀತವಾಗಿ ವಿಷಯದಲ್ಲಿ ವಿಷಯಿಯ ಮತ್ತು ಅದರ ಧರ್ಮದ ಅಧ್ಯಾಸವಿರುತ್ತದೆ.

* * * * * * * * * *

# ೩. ಅಥಾಧ್ಯಾಸಸಂಭಾವನಾಭಾಷ್ಯಮ್

ಕಥಂ ಪುನಃ ಪ್ರತ್ಯಗಾತ್ಮನ್ಯವಿಷಯೇಽಧ್ಯಾಸೋ ವಿಷಯತದ್ಧರ್ಮಾಣಾಮ್ ? ಸರ್ವೋ ಹಿ ಪುರೋಽವಸ್ಥಿತೇ ವಿಷಯೇ ವಿಷಯಾಂತರಮಧ್ಯಸ್ಯತಿ । ಯುಷ್ಮತ್ಪ್ರತ್ಯಯಾಪೇತಸ್ಯ ಚ ಪ್ರತ್ಯಗಾತ್ಮನೋಽವಿಷಯತ್ವಂ ಬ್ರವೀಷಿ ॥

ಉಚ್ಯತೇ । ನ ತಾವದಯಮೇಕಾಂತೇನಾವಿಷಯಃ । ಅಸ್ಮತ್ಪ್ರತ್ಯಯವಿಷಯತ್ವಾತ್, ಅಪರೋಕ್ಷತ್ವಾಚ್ಚ ಪ್ರತ್ಯಗಾತ್ಮಪ್ರಸಿದ್ಧೇಃ । ನ ಚಾಯಮಸ್ತಿ ನಿಯಮಃ ಪುರೋಽವಸ್ಥಿತ ಏವ ವಿಷಯೇ ವಿಷಯಾಂತರಮಧ್ಯಸಿತವ್ಯಮಿತಿ । ಅಪ್ರತ್ಯಕ್ಷೇಽಪಿ ಹ್ಯಾಕಾಶೇ ಬಾಲಾಸ್ತಲ-

---

# ೩. ಅಧ್ಯಾಸದ ಸಂಭಾವನಾಭಾಷ್ಯವು

(ಭಾಷ್ಯಾರ್ಥ)

(ಆಕ್ಷೇಪ) – ಹಾಗಾದರೆ ವಿಷಯನಲ್ಲದ ಪ್ರತ್ಯಗಾತ್ಮನಲ್ಲಿ ವಿಷಯದ (ಮತ್ತು) ಆದರ ಧರ್ಮಗಳ ಅಧ್ಯಾಸ(ವಾಗಿರುವದೆಂಬುದು) ಹೇಗೆ ? ಎದುರಿಗಿರುವ ವಿಷಯದಲ್ಲಲ್ಲವೆ, ಎಲ್ಲರೂ ಮತ್ತೊಂದು ವಿಷಯವನ್ನು ಅಧ್ಯಾಸಮಾಡುತ್ತಾರೆ ? ಆದರೆ "ನೀನು" ಎಂಬ ಪ್ರತ್ಯಯದ (ಸಂಬಂಧ) ವಿಲ್ಲದ (ಕಾರಣ) ಪ್ರತ್ಯಗಾತ್ಮನು ವಿಷಯನಲ್ಲವೆಂದೂ ಹೇಳುತ್ತಿರುವೆಯಲ್ಲ!

(ಪರಿಹಾರ)–ಹೇಳುತ್ತೇವೆ, (ಕೇಳು) ಮೊದಲನೆಯದಾಗಿ ಈ (ಆತ್ಮನು) ನಿಯಮದಿಂದ ವಿಷಯನಲ್ಲದವನಾಗಿರುವುದಿಲ್ಲ. ಏಕೆಂದರೆ ಇವನು "ನಾನು" ಎಂಬ ಪ್ರತ್ಯಯಕ್ಕೆ ವಿಷಯನಾಗಿರುತ್ತಾನೆ. ಇದಲ್ಲದೆ ಅಪರೋಕ್ಷನಾಗಿರುವುದರಿಂದ ಪ್ರತ್ಯಗಾತ್ಮನು ಪ್ರಸಿದ್ಧನಾಗಿರುವನು. ಎದುರಿಗಿರುವ ವಿಷಯದಲ್ಲಿಯೇ ಮತ್ತೊಂದು ವಿಷಯವನ್ನು ಅಧ್ಯಾಸಮಾಡಬೇಕು ಎಂದೇನೂ ನಿಯಮವು ಇರುವದೂ ಇಲ್ಲ. ಆಕಾಶವು ಅಪ್ರತ್ಯಕ್ಷವಾಗಿದ್ದರೂ ಅವಿವೇಕಿಗಳು (ಅದರಲ್ಲಿ)

**ಮಲಿನತಾದ್ಯಧ್ಯಸ್ಯಂತಿ। ಏವಮವಿರುದ್ಧಃ ಪ್ರತ್ಯಗಾತ್ಮನ್ಯಪ್ಯ-ನಾತ್ಮಾಧ್ಯಾಸಃ ॥**

**೧೫. ಭಾಷ್ಯಸಂಬಂಧಃ** – ಆತ್ಮಾನಾತ್ಮನೋರಿತರೇತರಾಧ್ಯಾಸಕೃತೋ ಲೋಕವ್ಯವಹಾರ ಇತಿ ಪ್ರತಿಜ್ಞಾತಮ್ । ಅಧ್ಯಾಸಸ್ಯ ಚ ಲಕ್ಷಣಮುಕ್ತಂ "ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ" ಇತಿ । ತಚ್ಚ ಲಕ್ಷಣಂ ಸರ್ವತಂತ್ರಾವಿರುದ್ಧಂ ಲೋಕಾನುಭವಸಂವಾದಿ ಚೇತಿ ಪ್ರತಿಪಾದಿತಮ್ । ತತ್ರಾಧ್ಯಾಸಸಾಮಾನ್ಯಲಕ್ಷಣಮಂಗೀಕೃತ್ಯ ತದ್ವಿಶೇಷೇ ಸ್ವಾಕ್ಷೇಪಂ ಪ್ರದರ್ಶಯಿತುಮಾಹ ಪೂರ್ವಪಕ್ಷೀ **ಕಥಂ ಪುನರಿತ್ಯಾದಿನಾ॥**

**೧೬. ಆತ್ಮಾ ನಾಧ್ಯಾಸಾರ್ಹಃ, ಅವಿಷಯತ್ವಾದಿತ್ಯಾಕ್ಷೇಪಃ** – ಅಯಮಭಿಪ್ರಾಯಃ । ಅಸ್ತು ವಾದಿನಾಮವಿಪ್ರತಿಪತ್ತಿರಧ್ಯಾಸಸಾಮಾನ್ಯಲಕ್ಷಣೇ। ಅಸ್ತು ಚ ಲೋಕೇಽನುಭವಃ ಶುಕ್ತಿರಜತಾದಿವಿಷಯಕೋ ಯತ್ಸಂವಾದೇನ

---

ತಲವು, ಮಲಿನವಾಗಿರುವದು. ಮುಂತಾದ (ಧರ್ಮ) ವನ್ನು ಅಧ್ಯಾಸ-ಮಾಡುತ್ತಾರಲ್ಲವೆ ? ಇದರಂತೆ ಪ್ರತ್ಯಗಾತ್ಮನಲ್ಲಿಯೂ ಅನಾತ್ಮವನ್ನು ಅಧ್ಯಾಸಮಾಡುತ್ತಾರೆಂಬುದು ವಿರುದ್ಧವಲ್ಲ.

೧೫. **ಭಾಷ್ಯಕ್ಕೆ ಸಂಬಂಧವು** – ಲೋಕವ್ಯವಹಾರವು ಆತ್ಮಾನಾ-ತ್ಮರುಗಳ ಒಂದಿನ್ನೊಂದರ ಅಧ್ಯಾಸದಿಂದಾದದ್ದು ಎಂಬುದನ್ನು ಪ್ರತಿಜ್ಞೆ ಮಾಡಿದ್ದಾಯಿತು. "ಸ್ಮತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ" ಎಂದು ಅಧ್ಯಾಸಕ್ಕೆ ಲಕ್ಷಣವನ್ನೂ ಹೇಳಿದ್ದಾಯಿತು. ಆ ಲಕ್ಷಣವು ಎಲ್ಲಾ ಶಾಸ್ತ್ರಕ್ಕೂ ಅವಿರುದ್ಧವು ಮತ್ತು ಲೋಕಾನುಭವಕ್ಕೂ ಹೊಂದುಗಡೆಯಾದದ್ದು ಎಂದು ತಿಳಿಸಿದ್ದಾಯಿತು. ಇಲ್ಲಿ ಅಧ್ಯಾಸದ ಸಾಮಾನ್ಯಲಕ್ಷಣವನ್ನು ಒಪ್ಪಿಕೊಂಡು ಅದರ ವಿಶೇಷದಲ್ಲಿ ತನ್ನ ಆಕ್ಷೇಪವನ್ನು ತೋರಿಸುವುದಕ್ಕಾಗಿ ಪೂರ್ವಪಕ್ಷಿಯು "ಕಥಂ ಪುನಃ" ಎಂದೀ ರೀತಿಯಾಗಿ ಕೇಳುತ್ತಿದ್ದಾನೆ.

**೧೬. ಆತ್ಮನು ಅವಿಷಯನಾದ್ದರಿಂದ ಅಧ್ಯಾಸಕ್ಕೆ ಅರ್ಹನಲ್ಲ ಎಂದು ಆಕ್ಷೇಪ** – ಇದು ಅಭಿಪ್ರಾಯವು. ಅಧ್ಯಾಸದ ಸಾಮಾನ್ಯಲಕ್ಷಣದಲ್ಲಿ ವಾದಿಗಳಿಗೆ ವಿರುದ್ಧಾಭಿಪ್ರಾಯವಿಲ್ಲವೆಂಬುದಿರಲಿ, ಹಾಗೆಯೇ ಯಾವದರ ಹೊಂದಾಣಿಕೆಯಿಂದ ಲಕ್ಷಣವು ನಿರ್ದುಷ್ಟವಾಗಿದೆ ಎಂದು

ಲಕ್ಷಣಂ ನಿರ್ದುಷ್ಟಂ ಭವತಿ । ತಥಾಪಿ ಪ್ರಕೃತೇ ತಾವದಧ್ಯಾಸವಿಶೇಷೇ ನ ಸಂಭಾವನಾಸ್ಮಾಕಮ್ । ಕುತಃ ? ವಿರುದ್ಧಸ್ವಭಾವತ್ವಾದಾತ್ಮಾನಾತ್ಮನೋಃ । ಶುಕ್ತಿರಜತಾದಿಸ್ಥಲೇ ಹಿ ವಿಷಯಸ್ಯ ಕಸ್ಯಚಿತ್ ವಿಷಯಾಂತರೇ ಕಸ್ಮಿಂಶ್ಚಿದ-ಧ್ಯಾಸೋ ಭವತಿ । ತಥಾ ವಿಷಯಸ್ಯೈವ ಕಸ್ಯಚಿದ್ಧರ್ಮಾ ವಿಷಯಾಂತರ ಏವ ಕಸ್ಮಿಂಶ್ಚಿದಧ್ಯಸ್ಯಂತ ಇತಿ ದೃಷ್ಟಮ್, ಅತ್ರ ಪುನರ್ವಿಷಯವಿಷಯಿಣೋ-ರ್ವಿರುದ್ಧಸ್ವಭಾವಯೋರಪಿ ಪರಸ್ಪರಾಧ್ಯಾಸಃ ಪರಸ್ಪರಧರ್ಮಾಧ್ಯಾಸಶ್ಚೇತ್ಯು-ಚ್ಯತೇ ಭವತಾ । ಅತಃ ಪೃಚ್ಛಾಮಃ – **ಕಥಂ ಪುನಃ ಪ್ರತ್ಯಗಾತ್ಮನ್ಯ-ವಿಷಯೇಽಧ್ಯಾಸೋ ವಿಷಯತದ್ಧರ್ಮಾಣಾಮ್ ?** ಇತಿ । ಯತ್ತಾವದುಕ್ತಂ ಪ್ರತಿಜ್ಞಾಭಾಷ್ಯೇ ನೈಸರ್ಗಿಕೋಽಯಂ "ಅಹಮಿದಮ್", "ಮಮೇದಮ್" ಇತಿ ಚ ಲೋಕವ್ಯವಹಾರಃ – ಇತಿ । ತನ್ಮೃಷ್ಯಾಮಹೇ, ತಥಾ ಲೋಕೇ ದೃಷ್ಟತ್ವಾತ್ । ಯತ್ಪುನರುಕ್ತಮ್ –"ಅನ್ಯೋನ್ಯಸ್ಮಿನ್ನನ್ಯೋ-ನ್ಯಾತ್ಮಕತಾಮನ್ಯೋನ್ಯಧರ್ಮಾಂಶ್ಚಾಧ್ಯಸ್ಯಾಯಂ ವ್ಯವಹಾರಃ" ಇತಿ, ತನ್ನ

---

ಒಪ್ಪಿಗೆಯಾಗಿದೆಯೋ ಆ ಶುಕ್ತಿರಜತಾದಿಗಳನ್ನು ವಿಷಯುಮಾಡಿಕೊಂಡ ಅನುಭವವೂ ಇರಲಿ, ಆದರೂ ಪ್ರಕೃತವಾದ ಅಧ್ಯಾಸವಿಶೇಷದಲ್ಲಿ ನಮಗೆ ಒಪ್ಪಿಗೆ ಇರುವುದಿಲ್ಲ. ಏಕೆ ? ಎಂದರೆ – ಆತ್ಮಾನಾತ್ಮರುಗಳಿಗೆ ವಿರುದ್ಧ-ಸ್ವಭಾವವಿರುತ್ತದೆ. ಶುಕ್ತಿರಜತಾದಿಸ್ಥಳದಲ್ಲಿ, ಒಂದು ವಿಷಯದಲ್ಲಿ ಮತ್ತೊಂದು ವಿಷಯುದ ಅಧ್ಯಾಸವಾಗುತ್ತದೆ ಎಂಬುದು ಹೊಂದುತ್ತದೆ. ಹಾಗೆಯೇ ವಿಷಯದ್ದೇ ಆದ ಕೆಲವು ಧರ್ಮಗಳು ಬೇರೊಂದು ವಿಷಯದಲ್ಲೇ ಹುಟ್ಟು-ಹಾಕಲ್ಪಡುತ್ತವೆ ಎಂಬುದು ಕಂಡಿದೆ. ಆದರೆ ಇಲ್ಲಾದರೋ ನೀವು – ವಿಷಯ-ವಿಷಯಿಗಳಿಗೆ ವಿರುದ್ಧಸ್ವಭಾವವಿದ್ದರೂ ಅವುಗಳಿಗೆ ಒಂದಕ್ಕೊಂದಕ್ಕೆ ಮತ್ತು ಅವುಗಳ ಧರ್ಮಗಳಿಗೆ ಅಧ್ಯಾಸವನ್ನು ಹೇಳುತ್ತಿರುವಿರಿ ! ಆದ್ದರಿಂದ ಇಲ್ಲಿ ನಾವು ಕೇಳುವೆವು – ಅದು ಹೇಗೆ ಅವಿಷಯನಾದ ಪ್ರತ್ಯಗಾತ್ಮನಲ್ಲಿ ಅವುಗಳಿಗೂ ಮತ್ತು ಅವುಗಳ ಧರ್ಮಗಳಿಗೂ ಅಧ್ಯಾಸವೆಂಬುದು ಹೊಂದುತ್ತದೆ ? ಎಂದು. ಪ್ರತಿಜ್ಞಾಭಾಷ್ಯದಲ್ಲಿ "ನಾನಿದು", "ನನ್ನದಿದು", ಎಂದು ಲೋಕದ ಜನರಿಗೆ ಸ್ವಾಭಾವಿಕವಾಗಿ ಈ ಭಾವನೆ ಬಂದಿದೆ ಎಂದು ನೀವು ಏನು ಹೇಳಿದಿರಿ, ಅದನ್ನು ನಾವು ಒಪ್ಪಿಕೊಳ್ಳುವೆವು. ಏಕೆಂದರೆ ಲೋಕದಲ್ಲಿ ಹಾಗೆ ಕಂಡಿದೆ. ಆದರೆ "ಒಂದನ್ನಿನ್ನೊಂದರಲ್ಲೂ ಒಂದರ ಧರ್ಮವನ್ನು ಇನ್ನೊಂದರಲ್ಲೂ ಹುಟ್ಟುಹಾಕಿಕೊಂಡು ವ್ಯವಹಾರವನ್ನು ಮಾಡುತ್ತಾರೆ" ಎಂದು ಏನು

ಮೃಷ್ಯಾಮಃ । ತಾದೃಶಾಧ್ಯಾಸಸ್ಯಾದೃಷ್ಟತ್ವಾತ್ । ಅಸಂಭವಾಚ್ಚ । ನ ಹ್ಯಾತ್ಮಾನಾತ್ಮಾನೌ ವಿವಿಕ್ತತಯಾ ನ ಗೃಹ್ಯೇತೇ । ಪ್ರತ್ಯಕ್ಪರಾಕ್ತ್ವೇನ ವಿಷಯಿವಿಷಯತ್ವೇನ ಚ ಸದಾ ಸುವಿವಿಕ್ತತ್ವಾತ್ । ಅಧ್ಯಾಸೋ ಹಿ ವಿವೇಕಾಗ್ರಹನಿಬಂಧನಃ ಸರ್ವತ್ರ । ಆತ್ಮಾನಾತ್ಮಾನೌ ತು ಸುವಿವಿಕ್ತಾವಿತಿ ಕಥಂ ತಯೋಃ ಪರಸ್ಪರಾಧ್ಯಾಸಃ ಸಂಭವೀತಿ ? ಕಥಂ ಪುನಸ್ತೌ ಸುವಿವಿಕ್ತಾ-ವಿತಿ ? ಉಚ್ಯತೇ । ಅನಾತ್ಮಾ ತಾವತ್ ಪರಾಙ್, ಬಹಿರೇವ ಪರಿದೃಶ್ಯಮಾನತ್ವಾತ್ । ವಿಷಯಶ್ಚಾಸೌ, ಯುಷ್ಮತ್ಪ್ರತ್ಯಯಗೋಚರತ್ವಾತ್। ಆತ್ಮಾ ತು ತತ್ಪ್ರತೀಪತ್ವೇನ ಸ್ಥಿತಃ ಪ್ರತ್ಯಙ್ ಸರ್ವಾಂತರತ್ವಾತ್ । ಅವಿಷಯಶ್ಚಾಯಮ್ । ವಿಷಯಿತ್ವೇನೈವ ಭವತಾ ಸ್ವೀಕಾರಾತ್ । ತದೇವಂ-ರೂಪೇ ಪ್ರತ್ಯಗಾತ್ಮನ್ಯವಿಷಯೇಽನಾತ್ಮನೋ ವಿಷಯಸ್ಯ ತದ್ಧರ್ಮಾಣಾಂ ಚಾಧ್ಯಾಸಃ ಕಥಂ ಸಂಭವೇತ್ ? **ಸರ್ವೋ ಹಿ ಪುರೋಽವಸ್ಥಿತೇ ವಿಷಯೇ**

---

ಹೇಳುತ್ತಿರುವಿರಿ ಅದನ್ನು ಒಪ್ಪುವುದಿಲ್ಲ, ಏಕೆಂದರೆ ಆ ರೀತಿಯದಾದ ಅಧ್ಯಾಸವು ಕಂಡಿಲ್ಲವಾದ್ದರಿಂದಲೂ, ಅದು ಹೊಂದುವುದಿಲ್ಲವಾದ್ದರಿಂದಲೂ (ಸರಿಯಾಗುವುದಿಲ್ಲ). ಆತ್ಮಾನಾತ್ಮರುಗಳು ವಿಂಗಡವಾಗಿ ಕಂಡು ಬಂದಿಲ್ಲ ಎಂಬುದಿಲ್ಲವಷ್ಟೇ ? ಇವುಗಳೊಳಗೆ ಒಂದು ಒಳಗೆ ಇನ್ನೊಂದು ಹೊರಗೆ ಎಂತಲೂ, ಹಾಗೆಯೇ (ಒಂದನ್ನು) ವಿಷಯ (ಇನ್ನೊಂದನ್ನು) ವಿಷಯಿ ಎಂತಲೂ ಸುಲಭವಾಗಿ ವಿಂಗಡಿಸಬಹುದಾಗಿದೆ. ಅಧ್ಯಾಸವೆಂದರೆ ಎಲ್ಲಾ ಕಡೆಯಲ್ಲೂ ವಿಂಗಡವಾಗಿ ಗೊತ್ತಾಗದಿರುವುದೆಂಬುದೇ ಆಗಿದೆ. ಆತ್ಮಾನಾತ್ಮರುಗಳು ಸುಸ್ಪಷ್ಟವಾಗಿ ವಿಂಗಡವಾಗಿ ತೋರುತ್ತಿರುವಾಗ ಹೇಗೆ ತಾನೆ ಅಧ್ಯಾಸವೆಂಬುದಾಗುತ್ತದೆ ? ಅದು ಹೇಗೆ ಅವು ವಿಂಗಡವಾಗಿರ-ತಕ್ಕವುಗಳು ? ಎಂದರೆ ಹೇಳುತ್ತೇವೆ. ಹೊರಗಡೆಯಲ್ಲೇ ಕಂಡುಬರುತ್ತಿರು-ವುದರಿಂದ ಅನಾತ್ಮವು ಹೊರಗಿರುವಂಥದ್ದಾಗಿದೆ. ನೀನು ಎಂಬ ಪ್ರತ್ಯಯಕ್ಕೆ ತೋರಿಬರುತ್ತಿರುವುದರಿಂದ ವಿಷಯವೂ ಆಗಿದೆ. ಆತ್ಮನಾದರೋ ಅದಕ್ಕೆ ವಿರುದ್ಧವಾಗಿ ಒಳಗಿರುವುದರಿಂದ ಎಲ್ಲಕ್ಕೂ ಅಂತರತಮನಾಗಿದ್ದಾನೆ. ಅವಿಷಯನೂ ಆಗಿರುತ್ತಾನೆ. ನೀನೂ ಸಹ (ಇವನನ್ನು) ವಿಷಯಿ ಎಂತಲೇ ಸ್ವೀಕರಿಸಿರುವೆ. ಹೀಗಿರುವ ಅವಿಷಯನಾದ ಪ್ರತ್ಯಗಾತ್ಮನಲ್ಲಿ (ಅದಕ್ಕೆ ವಿರುದ್ಧವಾದ) ವಿಷಯದ ಮತ್ತು ಅದರ ಧರ್ಮದ ಅಧ್ಯಾಸವಾಗಿದೆ ಎಂದರೆ ಅದು ಹೇಗೆ ಹೊಂದುತ್ತದೆ ? ಎಲ್ಲರೂ ಮುಂದಿರುವ (ಒಂದು) ವಿಷಯದಲ್ಲಿ

**ವಿಷಯಾಂತರಮಧ್ಯಸ್ಯತಿ** । ಯತ್ರ ಯತ್ರಾಧ್ಯಾಸಸ್ತತ್ರತತ್ರಾಧಿಷ್ಠಾನಸ್ಯ ಪುರೋಽವಸ್ಥಿತತ್ವಂ ವಿಷಯತ್ವಂ ಚೇತ್ಯುಭಯಂ ದೃಷ್ಟಮ್ । ಯಥಾ ಶುಕ್ತಿಕೋದಾಹರಣೇ, ತತ್ರ ಹಿ ಶುಕ್ತಿಕಾ ಪುರೋಽವಸ್ಥಿತಾ ವಿಷಯಭೂತ ಚ ಸತೀ ರಜತಾಧ್ಯಾಸೇಽಧಿಷ್ಠಾನಂ ಭವತಿ । ಏವಂ ಚಂದ್ರೋದಾಹರಣೇಽಪಿ ಪುರೋಽವಸ್ಥಿತಸ್ಯೈವ ವಿಷಯಸ್ಯ ಚಂದ್ರಸ್ಯ ಸದ್ವಿತೀಯತ್ವಾಧ್ಯಾಸಾಧಿಷ್ಠಾನ-ತ್ವಮ್ । ನ ತು ತಥಾತ್ಮನಿ ಪುರೋಽವಸ್ಥಿತತ್ವಂ ವಿಷಯತ್ವಂ ವಾ ದೃಷ್ಟಮಿತಿ ವ್ಯಾಪಕವಿರುದ್ಧೋಪಲಬ್ಧಿಃ । ತಸ್ಮಾನ್ನಾಸ್ತಿ ಪ್ರತ್ಯಗಾತ್ಮನ್ಯವಿಷಯೇ ವಿಷಯ-ತದ್ಧರ್ಮಾಣಾಮಧ್ಯಾಸಃ ಸಂಭಾವಿತಃ । ಅತ್ರಾವಿಷಯಸ್ಯಾಪುರೋಽವಸ್ಥಿತ-ಸ್ಯಾತ್ಮನಸ್ತದ್ಧರ್ಮಾಣಾಂ ವಾ ಕಥಮಧ್ಯಾಸೋಽನಾತ್ಮನೀತ್ಯಪ್ಯಾಕ್ಷೇಪೋ ದ್ರಷ್ಟವ್ಯಃ । ನ ಹ್ಯವಿಷಯಸ್ಯ ಸರ್ವಥಾ ಪರೋಕ್ಷಸ್ವಭಾವಸ್ಯ ವಾಧ್ಯಾಸಃ ಸಂಭವತಿ । ವಿಷಯಸ್ಯೈವ ತು ಪ್ರತ್ಯಕ್ಷಾರ್ಹಸ್ಯಾಧ್ಯಾಸಃ ಸರ್ವತ್ರ ದೃಶ್ಯತೇ।

---

ಮತ್ತೊಂದು ವಿಷಯವನ್ನಲ್ಲವೆ ಅಧ್ಯಾಸಮಾಡುವುದು ? ಎಲ್ಲೆಲ್ಲಿ ಅಧ್ಯಾಸವು ಕಂಡಿದೆಯೋ ಅಲ್ಲಲ್ಲಿ ಅಧಿಷ್ಠಾನವಾದದ್ದು, (೧) ಮುಂದಿರುವಂಥದ್ದು, (೨) ವಿಷಯವಾಗಿರುವುದು ಎಂಬುದಾಗಿ ಎರಡೂ ಕಂಡಿದೆ. ಹೇಗೆ ಕಪ್ಪೇಚಿಪ್ಪಿನ ಉದಾಹರಣೆಯಲ್ಲಿ ಕಪ್ಪೇಚಿಪ್ಪು ಮುಂದಿರುವಂಥದ್ದೂ, ವಿಷಯವಾಗಿರುವುದು, ಎಂಬುದು ಎರಡೂ ಕಂಡಿದ್ದು ಬೆಳ್ಳಿಯ ಅಧ್ಯಾಸಕ್ಕೆ ಅಧಿಷ್ಠಾನವಾಗಿರುತ್ತದೋ, ಹೇಗೆ ಚಂದ್ರನ ಉದಾಹರಣೆಯಲ್ಲೂ ಮುಂದಿರುವ ವಿಷಯನಾದ ಚಂದ್ರನೇ ಸದ್ವಿತೀಯತ್ವದ ಅಧ್ಯಾಸಕ್ಕೆ ಅಧಿಷ್ಠಾನವು. ಆದರೆ ಆ ರೀತಿ ಆತ್ಮನಲ್ಲಿ ಮುಂದಿರುವುದಾಗಲೀ, ವಿಷಯುವಾಗಿರುವುದಾಗಲೀ ಕಂಡಿಲ್ಲವಾದ್ದರಿಂದ ಸ್ಪಷ್ಟವಾಗಿ ವಿರುದ್ಧವು ತೋರಿಬರುವುದು. ಆದ್ದರಿಂದ ಅವಿಷಯನಾದ ಪ್ರತ್ಯಗಾತ್ಮನಲ್ಲಿ ವಿಷಯದ ಮತ್ತು ಅದರ ಧರ್ಮದ ಅಧ್ಯಾಸವೆಂಬುದಿಲ್ಲ. ಈ ಸ್ಥಳದಲ್ಲಿ ಅವಿಷಯನೂ ಮುಂದಿಲ್ಲದವನೂ ಆದ ಆತ್ಮನಲ್ಲಿಯಾಗಲೀ ಅವನ ಧರ್ಮಕ್ಕಾಗಲೀ ಅನಾತ್ಮದ ಮತ್ತು ಅದರ ಧರ್ಮದ ಅಧ್ಯಾಸವೆಂಬು-ದಾದರೂ ಹೇಗೆ? ಎಂದೂ ಆಕ್ಷೇಪಾರ್ಥವನ್ನು ಇಟ್ಟುಕೊಳ್ಳಬೇಕು. ಸಂಪೂರ್ಣ ಪರೋಕ್ಷಸ್ವಭಾವನಾದ ವಿಷಯನಲ್ಲದ (ಆತ್ಮನಲ್ಲಿ) ಅಧ್ಯಾಸವು (ಹೇಗೂ) ಹೊಂದುವುದಿಲ್ಲ, ಎಲ್ಲಾ ಕಡೆಯಲ್ಲೂ ಪ್ರತ್ಯಕ್ಷಕ್ಕೆ ಅರ್ಹವಾದ ವಿಷಯದಲ್ಲಿ

ತಸ್ಮಾನ್ನಾಸ್ತ್ಯಾತ್ಮನೋಽನಾತ್ಮನ್ಯಧ್ಯಾಸಃ, ನ ಚ ತದ್ಧರ್ಮಾಧ್ಯಾಸಸ್ತತ್ರೇತಿ ಭಾವಃ ॥

**೧೭. ಆತ್ಮನೋಽವಿಷಯತ್ವಂ ಕುತಃ ?** ನನ್ವವಿಷಯತ್ವಮೇವಾತ್ಮನ ಇತಿ ಕಥಂ ? ತತ್ರಾಹ – **"ಯುಷ್ಮತ್ಪ್ರತ್ಯಯಾಪೇತಸ್ಯ ಚ ಪ್ರತ್ಯಗಾತ್ಮ-ನೋಽವಿಷಯತ್ವಂ ಬ್ರವೀಷಿ"** ಇತಿ । ಯುಷ್ಮತ್ಪ್ರತ್ಯಯಾದಪೇತಃ, ತದಗೋಚರ ಆತ್ಮಾ । ತಸ್ಯ ಚ ಪರಾಗ್ಭೂತೇಭ್ಯೋ ವಿಷಯೇಭ್ಯಃ ಪ್ರತೀಪತ್ವೇನಾತ್ಮಾನಮಂಚತೋ, ಜಾನತಃ ಪ್ರತ್ಯಗ್ಭೂತಸ್ಯ, ಪ್ರತ್ಯಗ್-ಭೂತತ್ವೇ, ಹೇತುಮಾಹ – "ಆತ್ಮನಃ" ಇತಿ, ಸರ್ವಸ್ಯ ಹಿ ವಿಷಯಸ್ಯಾತ್ಮಾಽಸೌ। ಆತ್ಮಾ ಚ ಸನ್ ಕಥಂ ಪರಾಗ್ಭಾವೇನೇದಂತಾಬುದ್ಧಿಸಮುಲ್ಲೇಖ್ಯತಾಂ ವ್ರಜೇತ್? ತದಭಾವೇ ಚ ಕಾ ನಾಮ ವಿಷಯತಾಸ್ಯೇತಿ ಭಾವಃ । ತದೇವಂ ಯುಷ್ಮತ್ಪ್ರತ್ಯಯಾಗೋಚರತ್ವಾತ್ ಪ್ರತ್ಯಗಾತ್ಮನೋಽವಿಷಯತ್ವಂ ಬ್ರವೀಷಿ

---

ಅಧ್ಯಾಸವಾಗುವುದೆಂಬುದು ಕಂಡಿದೆ. ಆದ್ದರಿಂದ ಆತ್ಮನಿಗೆ ಅನಾತ್ಮದಲ್ಲಿ ಮತ್ತು ಅದರ ಧರ್ಮದಲ್ಲಿ ಅಧ್ಯಾಸವೆಂಬುದು ಇಲ್ಲ ಎಂದು ಭಾವವು.

**೧೭. ಆತ್ಮನು ಅವಿಷಯನೆಂಬುದು ಹೇಗೆ ?** – ಆತ್ಮನು ಅವಿಷಯನೆಂಬುದಾದರೂ ಹೇಗೆ ? ಎಂದರೆ ಅದಕ್ಕೆ ಹೇಳುತ್ತಾರೆ. – "ನೀನೆಂಬ ಅರಿವಿಗಿಂತ ಬೇರೆಯಾದ ಪ್ರತ್ಯಗಾತ್ಮನನ್ನು ಅವಿಷಯನೆಂದು ಹೇಳುವೆ" ಎಂದು. ಯುಷ್ಮತ್ಪ್ರತ್ಯಯಾಪೇತಃ ಎಂದರೆ ನೀನೆಂಬ ಅರಿವಿಗೆ ಗೋಚರನಲ್ಲದವನು. ಹೊರಗಿರುವ ವಿಷಯಕ್ಕೆ ವಿರುದ್ಧವಾಗಿ, ಆತ್ಮನನ್ನು ಕುರಿತು ಹೋಗುವವನಿಗೆ, ತಿಳಿಯುವವನಿಗೆ, ಒಳಗಿರುವ ರೂಪದವ-ನಾಗಿರುವನೆಂದು (ತಿಳಿದು ಬರುವವನಾಗಿದ್ದಾನೆ). ಒಳಗಿದ್ದಾನೆನ್ನುವುದಕ್ಕೆ "ಆತ್ಮನು" ಎಂಬ ಪದವೇ ಕಾರಣವು. ಎಲ್ಲವಿಷಯಕ್ಕೂ ಈತನು ಆತ್ಮನಾಗಿದ್ದಾನಲ್ಲವೇ ? ಆತ್ಮನಾಗಿದ್ದುಕೊಂಡು ಅದು ಹೇಗೆ ಹೊರಗಡೆಯಲ್ಲಿ ಇದು ಎಂಬ ಬುದ್ಧಿಯಿಂದ ತೋರಿಯಾನು ? ಅದಿಲ್ಲವಾದರೆ "ಈತನು ವಿಷಯನಾದವನು" ಎಂಬ ಮಾತಿಗಾದರೂ ಏನರ್ಥವಿರುತ್ತದೆ ? ಹೀಗೆ ಸಿದ್ಧಾಂತಿಯಾದ ನೀನು, "ನೀನೆಂಬ ಅರಿವಿಗೆ ಗೋಚರನಲ್ಲವಾದ್ದರಿಂದ"

ತ್ವಂ ಸಿದ್ಧಾಂತೀ । ತಥಾ ಚ ವಿಷಯಭಾವಾಭಾವಾತ್ ಅಪುರೋಽವಸ್ಥಿತತ್ವಾಚ್ಚ ಪ್ರತ್ಯಗಾತ್ಮನೋ ನಾಧ್ಯಾಸಕರ್ಮತಾ ತದಧಿಷ್ಠಾನತಾ ವಾ ಸಂಭವತೀತ್ಯರ್ಥಃ॥

ಏತದುಕ್ತಂ ಭವತಿ । ಆತ್ಮಾನಾತ್ಮಾನೌ ಪ್ರತ್ಯಕ್ಪರಾಕ್ತ್ವೇನ ವಿಷಯ-ವಿಷಯಿತ್ವೇನ ಚಾತ್ಯಂತವಿರುದ್ಧಸ್ವಭಾವತ್ವಾತ್ ಸುವಿವಿಕ್ತಾವಿತಿ ಭವತೋಽಪಿ ಸಂಮತಮ್ । ಅತ ಏವ ತು ತೌ ಪರಸ್ಪರಾಧ್ಯಾಸಾನರ್ಹಾವಿತಿ ವಯಂ ಬ್ರೂಮಃ । ತಸ್ಮಾದಹಂಮಮೇತಿ ವ್ಯವಹಾರೇ ನ ಕಂಚಿದಧ್ಯಾಸಂ ಪಶ್ಯಾಮಃ। ತಥಾ ಚ ಯದಾದೌ ಪ್ರತಿಜ್ಞಾತಮಸ್ಮಾಭಿಃ ಸಂಸಾರಾನರ್ಥಸ್ಯ ನಾಧ್ಯಾಸಿಕತ್ವಂ ವಸ್ತುಕೃತತ್ವಾದಿತಿ, ತತ್ ತಥೈವ ಸ್ಥಿತಮ್ । ತಸ್ಮಾನ್ನಾಸ್ತಿ ಕೇವಲೇನಾತ್ಮ-ಜ್ಞಾನೇನ ವೇದಾಂತವಿಹಿತೇನಾತ್ರ ಪ್ರಯೋಜನಮಿತಿ ತದರ್ಥಂ ಬ್ರಹ್ಮ-ಜಿಜ್ಞಾಸೋಪನ್ಯಾಸಪ್ರಯಾಸೋ ಮುಧೈವೇತಿ ॥

---

ಪ್ರತ್ಯಗಾತ್ಮನು ಅವಿಷಯವೆನ್ನುತ್ತಿರುವೆ. ಹೀಗೆ ವಿಷಯವಲ್ಲವಾದ್ದರಿಂದಲೂ, ಮುಂದುಗಡೆತೋರುವುದಿಲ್ಲವಾದ್ದರಿಂದಲೂ, ಪ್ರತ್ಯಗಾತ್ಮನು ಅಧ್ಯಾಸಕ್ಕೆ ವಿಷಯನಾಗಿದ್ದಾನೆಂದಾಗಲೀ ಅದಕ್ಕೆ ಆಶ್ರಯನಾಗಿದ್ದಾನೆಂದಾಗಲೀ ಹೊಂದುವುದಿಲ್ಲ ಎಂದರ್ಥವು.

ಇಷ್ಟು ಹೇಳಿದಂತಾಗುತ್ತದೆ, ಆತ್ಮಾನಾತ್ಮರುಗಳು ಒಳಗೆ ಹೊರಗೆ ಇರುವವುಗಳಾಗಿ ಪರಸ್ಪರ ವಿಷಯವಿಷಯಿಗಳಾಗಿರುವುದರಿಂದ ಅತ್ಯಂತವಿರುದ್ಧ ಸ್ವಭಾವವುಗಳು, ಮತ್ತು ಸುಲಭವಾಗಿ ವಿಂಗಡಿಸಬಹುದಾಗಿರುವಂಥವುಗಳು ಎಂಬುದು ನಿಮಗೂ ಒಪ್ಪಿಗೆಯಾಗಿದೆ. ಆದ್ದರಿಂದಲೇ ಅವು ಪರಸ್ಪರ ಅಧ್ಯಾಸಕ್ಕೆ ಅನರ್ಹವಾದವುಗಳೆಂದು ನಾವು ಹೇಳುವೆವು. ಆದ್ದರಿಂದ "ನಾನು" "ನನ್ನದೆಂಬ" ವ್ಯವಹಾರದಲ್ಲಿ ಯಾವ ಅಧ್ಯಾಸವನ್ನೂ ಕಾಣೆವು. ಹಾಗಾಗಿ ನಾವು ಏನು ಪ್ರಾರಂಭದಲ್ಲಿ ಸಂಸಾರಾನರ್ಥವು ಆಧ್ಯಾಸಿಕವಲ್ಲ, ನಿಜವಾಗಿ ಆದವುಗಳೇ ಎಂದು ಹೇಳಿದೆವೋ ಅದು ಹಾಗೆಯೇ ನಿಂತಿತು. ಆದ್ದರಿಂದ ಕೇವಲವಾದ ವೇದಾಂತವಿಹಿತವಾದ ಆತ್ಮಜ್ಞಾನದಿಂದ ಪ್ರಯೋಜನವೇನಿಲ್ಲ, ಅದಕ್ಕಾಗಿ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಿರುವದು ವ್ಯರ್ಥಪ್ರಯಾಸಮಾತ್ರವಾಗಿದೆ.

**೧೮. ಆತ್ಮನೋಽಸ್ಮತ್ಪ್ರತ್ಯಯವಿಷಯತ್ವಾದಧ್ಯಾಸಾರ್ಹತೇತಿ ಸಿದ್ಧಾಂತಃ** – ಅತ್ರ ಸಮಾಧಾನಮ್, ಯತ್ತಾವದುಕ್ತಮವಿಷಯತ್ವಾ-ದಾತ್ಮನೋಽಧ್ಯಾಸೋ ನ ಸಂಭವತೀತಿ । ಅತ್ರೋಚ್ಯತೇ, **ನ ತಾವದಯ-ಮೇಕಾಂತೇನಾವಿಷಯಃ ಅಸ್ಮತತ್ಪ್ರತ್ಯಯವಿಷಯತ್ವಾತ್** । ತಾವದಿತಿ ಕ್ರಮೇ । ಅಭ್ಯುಪಗಮ್ಯೈವ ಭವದುಕ್ತಂ ನಿಯಮಂ ಪ್ರಥಮಂ ಸಮಾಧಾನ-ಮುಚ್ಯತೇ । ತತಃ ಪರಮಸಮಾಧಾನಂ ವಕ್ಷ್ಯಾಮ ಇತಿ ಭಾವಃ । ಅಯಮಾತ್ಮಾ ನೈಕಾಂತೇನಾವಿಷಯಃ । ನಾವಿಷಯತ್ವಮೇಕ ಏವಾಂತೋಽತ್ರ, ಕಿಂ ತು ವಿಷಯತ್ವಮಪ್ಯಪರೋಽಂತೋ ವಿದ್ಯತೇ । ತಸ್ಮಾದೇಕಾಂತೇನ ನಿಯಮೇನ ನಾಯಮವಿಷಯ ಇತ್ಯರ್ಥಃ । ಯದಿ ಹಿ ನಿಯಮೇನ ವಿಷಯತ್ವಾಭಾವಮಾತ್ಮನೋ ವಯಮಾತಿಷ್ಠೇಮಹಿ ಪ್ರಸಂಜಯೇಮಾಪಿ ತದಧ್ಯಾಸವಿರೋಧಮ್ । ನ ತ್ವಾತಿಷ್ಠಾಮಹೇ । ನನು ಯುಷ್ಮತ್ಪ್ರತ್ಯಯಾಪೇತ

---

**೧೮. ಆತ್ಮನು ಅಸ್ಮತ್ಪ್ರಯಕ್ಕೆ ವಿಷಯನಾಗಿರುವುದರಿಂದ ಅಧ್ಯಾಸಕ್ಕೆ ಅರ್ಹನಾಗಿರುತ್ತಾನೆಂಬ ಸಿದ್ಧಾಂತವು** – ಅವಿಷಯನಾದ್ದರಿಂದ ಆತ್ಮನ ಬಗ್ಗೆ ಅಧ್ಯಾಸವಾಗಲು ಸಾಧ್ಯವಿಲ್ಲ ಎಂದು ಏನು (ಪೂರ್ವಪಕ್ಷಿಯು) ಹೇಳಿರುತ್ತಾನೆ, ಅದಕ್ಕೆ ಈಗ ಸಮಾಧಾನವನ್ನು ಇಲ್ಲಿ ಹೇಳಲಾಗುತ್ತದೆ. (ಏನೆಂದರೆ) "ಮೊಟ್ಟ ಮೊದಲನೆಯದಾಗಿ ಏಕಾಂತವಾಗಿ ಆತ್ಮನು ವಿಷಯನಲ್ಲವೆಂಬುದೇನಲ್ಲ. ಏಕೆಂದರೆ ನಾನೆಂಬ ಪ್ರತ್ಯಯಕ್ಕೆ ವಿಷಯನಾಗಿರುತ್ತಾನೆ." (ಭಾಷ್ಯದಲ್ಲಿ) "ತಾವತ್" ಎಂಬ ಪದವು "ಕ್ರಮ" ಎಂಬರ್ಥದಲ್ಲಿ ಬಂದಿದೆ. ಮೊದಲು ನೀನು ಹೇಳಿದ ನಿಯಮವನ್ನು ಒಪ್ಪಿಕೊಂಡು ಸಮಾಧಾನವನ್ನು ಹೇಳುವೆವು. ಆಮೇಲೆ ಪರಮಸಿದ್ಧಾಂತವನ್ನು ತಿಳಿಸುವೆವು ಎಂದು ಭಾವ. ಈ ಆತ್ಮನು ಏಕಾಂತವಾಗಿ ಅವಿಷಯನೇನಲ್ಲ. ಅಂದರೆ ವಿಷಯವನಲ್ಲವೇ ಅಲ್ಲ ಎಂಬ ಒಂದೇ ತೀರ್ಮಾನವೇನಲ್ಲ. ಮತ್ತೇನೆಂದರೆ ವಿಷಯನೂ ಆಗಿರುತ್ತಾನೆ (ಎಂಬ) ಇನ್ನೊಂದು ನಿರ್ಣಯವೂ ಇದೆ. ಆದ್ದರಿಂದ ನಿಯಮವಾಗಿ ಅವಿಷಯನೆಂದೇನೂ (ಅರ್ಥ)ವಲ್ಲ. ಹಾಗೇನಾದರೂ ಏಕಾಂತವಾಗಿ ವಿಷಯನಲ್ಲವೇ ಅಲ್ಲ ಎಂಬುದನ್ನೇ ನಾವು ಹೇಳುವವರಾಗಿದ್ದರೆ ಆಗ ಅಧ್ಯಾಸವಿರೋಧವನ್ನೂ ಒಪ್ಪಿಕೊಳ್ಳುತ್ತಿದ್ದೆವು ! ಆದರೆ ಹಾಗೇನೂ ಹೇಳುವುದಿಲ್ಲ. ಅಲ್ಲಾ ! ನಿಮ್ಮ ಮತದಂತೆ ಆತ್ಮನು

ಆತ್ಮೇತಿ ಭವತಾಂ ಮತಮ್ । ಬಾಢಮ್ । ತಥಾಪ್ಯವಿರೋಧಃ । ಕಥಮೇತತ್? ಅಸ್ಮತ್ಪ್ರತ್ಯಯವಿಷಯತ್ವಾದಾತ್ಮನಃ । ತದ್ವಿಷಯತ್ವಂ ಚ ಭವತೋಽಪಿ ಸಂಮತಮ್ । ಅತೋ ನಿಯಮೇನಾವಿಷಯತ್ವಾಭಾವಾತ್ ಸಂಭವತ್ಯಧ್ಯಾಸಃ। ನನು ಪ್ರತ್ಯಗಾತ್ಮಾ ಸದಾ ವಿಷಯ್ಯೇವೇತ್ಯುಕ್ತಂ ಭವದ್ಭಿರೇವ । ಸತ್ಯಮುಕ್ತಮ್। ನ ತೂಕ್ತಪೂರ್ವಮಸ್ಮಾಭಿರಾತ್ಮಾ ಕದಾಪಿ ವ್ಯವಹಾರೇ ವಿಷಯತಾಂ ನಾಪಾದ್ಯತ ಇತಿ । ಯದ್ಯಪ್ಯಯಮಾತ್ಮಾ ಸ್ವಭಾವತೋ ವಿಷಯಿ, ತಥಾಪ್ಯಸ್ಮತ್ಪ್ರತ್ಯಯ-ವಿಷಯತ್ವಮಾಪಾದಿತ ಏವ ವ್ಯವಹಾರಗೋಚರೋ ಭವತಿ ನಾನ್ಯಥಾ । ತೇನೋಚ್ಯತೇ ನಾಯಮೇಕಾಂತೇನಾವಿಷಯ ಇತಿ । ಅಹಂಪ್ರತ್ಯಯವಿಷಯ ಆತ್ಮನಿ ದೇಹತದ್ಧರ್ಮಾಣಾಮಧ್ಯಾಸಸ್ತದ್ವಿಪರ್ಯಯೇಣಾಹಂಪ್ರತ್ಯಯ-ವಿಷಯಾತ್ಮತದ್ಧರ್ಮಾಣಾಂ ಚ ದೇಹೇಽಧ್ಯಾಸೋ ನ ಭವತೋಽಪ್ಯಸಂಮತಃ। ನನು ಮಮ ನಿತ್ಯಮಹಂಪ್ರತ್ಯಯವಿಷಯ ಏವಾತ್ಮಾ, ಭವತ್ಸಿದ್ಧಾಂತೇ ತು

---

ನೀನೆಂಬ ಅರಿವಿಗಿಂತ ಬೇರೆಯವನೆಂದು ಅಭಿಪ್ರಾಯವಿದೆಯಲ್ಲಾ? ಹೌದು, ಆದರೂ ವಿರೋಧವಿಲ್ಲ. ಇದು ಹೇಗೆ ? ಎಂದರೆ – ಆತ್ಮನು ನಾನೆಂಬ ಅರಿವಿಗೂ ವಿಷಯನಾಗಿರುತ್ತಾನೆ. ಅದಕ್ಕೆ ವಿಷಯನೆಂಬುದು (ಪೂ. ಪ. ಯಾದ) ನಿನಗೂ ಒಪ್ಪಿಗೆ ಇದೆ. ಆದ್ದರಿಂದ ನಿಯಮದಿಂದ ಅವಿಷಯನೇ-ನಲ್ಲವಾದ್ದರಿಂದ ಅಧ್ಯಾಸವು ಹೊಂದುತ್ತದೆ. ಅಲ್ಲಾ ! ಪ್ರತ್ಯಗಾತ್ಮನು ಯಾವಾಗಲೂ "ವಿಷಯಿಯೇ" ಎಂದು ನೀವೇ ಹೇಳಿರುತ್ತೀರಲ್ಲ! ಹೌದು ಹೇಳಿದ್ದೇವೆ. ಆದರೆ ವ್ಯವಹಾರದಲ್ಲಿ ಯಾವಾಗಲೂ ಆತ್ಮನು ವಿಷಯ-ನಾಗುವುದೇ ಇಲ್ಲ ಎಂದೇನೂ ನಾವು ಹೇಳಿಲ್ಲ. ಸ್ವಭಾವದಿಂದ ಆತ್ಮನು ವಿಷಯಿಯಾದರೂ ನಾನೆಂಬ ಅರಿವಿಗೆ ವಿಷಯನಾಗಿ ಬಿದ್ದುಕೊಂಡೇ ವ್ಯವಹಾರದಲ್ಲಿ ಗೋಚರನಾಗುತ್ತಾನೆ – ಬೇರೊಂದು ರೀತಿಯಿಂದಲ್ಲ. ಆದ್ದರಿಂದ ಈತನು ಏಕಾಂತವಾಗಿ ಅವಿಷಯನೇನಲ್ಲ ಎಂದಿರುತ್ತೇವೆ. ಆತ್ಮನಲ್ಲಿ ಅಹಂಪ್ರತ್ಯಯವಾಗಿರುವುದು ಮತ್ತು ದೇಹದ ಹಾಗೂ ಅದರ ಧರ್ಮದ ಅಧ್ಯಾಸವೂ, ಅದಕ್ಕೆ ವಿರುದ್ಧವಾಗಿ ಅಹಂಪ್ರತ್ಯಯವಿಷಯನಾಗಿಯೂ ಅದರ ಧರ್ಮದಿಂದ ಕೂಡಿದ್ದಾಗಿ ದೇಹದಲ್ಲಿ ಅಧ್ಯಾಸವಾಗಿರುವುದು ನಿಮಗೂ ಒಪ್ಪಿಗೆ ಇಲ್ಲವೆಂಬುದೇನಿಲ್ಲ. ನನ್ನ ಸಿದ್ಧಾಂತದಂತೆ ಯಾವಾಗಲೂ ಆತ್ಮನು ಅಹಂಪ್ರತ್ಯಯಕ್ಕೆ ವಿಷಯನಾಗಿಯೇ ಇರುವವನು, ನಿನ್ನ ಸಿದ್ಧಾಂತದ

ಸದಾ ವಿಷಯ್ಯೇವ ಸನ್ವಿಷಯೋಽಪೀತಿ ವೈಷಮ್ಯಮ್ । ನ । ತ್ವಯಾಪಿ ಜ್ಞಾತೃತ್ವೇನ ವಿಷಯಿತ್ವಾಭ್ಯುಪಗಮಾತ್ । ಅಯಂ ತ್ವತ್ರ ವಿಶೇಷಃ । ಅತ್ಯಂತವಿರುದ್ಧಂ ಯುಗಪದೇಕಸ್ಯ ನಿರಂಶಸ್ಯ ಚಾತ್ಮನೋ ವಿಷಯವಿಷಯಿತ್ವಂ ಸ್ವೀಕ್ರಿಯತೇ ಭವತಾ । ಅಸ್ಮಾಭಿಸ್ತು ವಿಷಯಿತ್ವಮೇವ ಸ್ವಾಭಾವಿಕಮಾತ್ಮನ ಇತೀತಿ । ತಥಾ ಹಿ । ಯತ್ರ ಯೋ ದೃಶ್ಯತೇ ಧರ್ಮಸ್ತಸ್ಯೈವ ಸ ಇತಿ ಯುಕ್ತಮ್, ದೃಷ್ಟಾನುಸಾರಿತ್ವಾತ್ । ಅಂತಃಕರಣಸ್ಥಾ ಏವೇಯಮಹಂಪ್ರತ್ಯಯ-ವಿಷಯತಾ ದೃಶ್ಯತೇ । ಅತೋಽಂತಃಕರಣಸ್ಯೈವಾಯಂ ಧರ್ಮೋ ಭವಿತುಮರ್ಹತಿ, ನ ತು ದ್ರಷ್ಟುರಾತ್ಮನಃ । ನ ಹ್ಯಾತ್ಮೈವಾಽಽತ್ಮಧರ್ಮಂ ದ್ರಷ್ಟುಮರ್ಹತಿ । ಏಕಸ್ಯೈವ ಕರ್ತೃಕರ್ಮತ್ವವಿರೋಧಾತ್ । ನ ಚಾತ್ಮನೋ ಜ್ಞಾತ್ರಂಶಃ ಪಶ್ಯತೀತಿ ಯುಕ್ತಿಮತ್ । ಅನಂಶತ್ವಾದಾತ್ಮನಃ । ಯಥೋಕ್ತಂ **ನೈಷ್ಕರ್ಮ್ಯಸಿದ್ಧೌ** – "ನಾತ್ಮನಾ ನ ತದಂಶೇನ ಗುಣಃ ಸ್ವಸ್ಥೋಽವಗಮ್ಯತೇ।

---

ಪ್ರಕಾರವಾದರೋ ಆತ್ಮನು ವಿಷಯಿಯೋ ಆಗಿದ್ದು ವಿಷಯನೂ ಆಗಿರುತ್ತಾನೆಂಬುದು ವ್ಯತ್ಯಾಸವಿದೆಯಲ್ಲಾ! ಇದು ಸರಿಯಲ್ಲ, ನೀನೂ ಸಹ ಆತ್ಮನು ಜ್ಞಾತೃವಾಗಿ "ವಿಷಯಿ" ಎಂತಲೂ ಒಪ್ಪಿರುವೆ. ಇಲ್ಲಿ ವಿಶೇಷವಿಷ್ಟೆ! ಒಬ್ಬನೇ ಆದ ಆತ್ಮನಿಗೆ ಅತ್ಯಂತ ವಿರುದ್ಧವಾದ ವಿಷಯವಿಷಯಿತ್ವವನ್ನು ಒಟ್ಟಿಗೆ ನೀನು ಒಪ್ಪಿರುತ್ತೀಯೆ. ನಾವಾದರೋ ವಿಷಯಿತ್ವವೇ ಅವನ ಸ್ವಭಾವವೆಂದು ಸ್ವೀಕರಿಸಿರುತ್ತೇವೆ. ಕಂಡದ್ದಕ್ಕೆ ಅನುಗುಣವಾಗಿ (ಯೋಚಿಸಿದರೆ) ಎಲ್ಲಿ ಯಾವ ಧರ್ಮವು ಕಂಡುಬರುತ್ತದೋ ಅದು ಅದರದ್ದೆಂದು ತಿಳಿಯಬೇಕು. ಈ ಅಹಂಪ್ರತ್ಯಯವಿಷಯವೆಂಬುದು ಅಂತಃಕರಣದಲ್ಲಿದ್ದು-ಕೊಂಡಿರುವುದಾಗಿಯೇ ತೋರಿಬರುತ್ತದೆ. ಆದ್ದರಿಂದ ಅಂತಃಕರಣದ್ದೇ ಧರ್ಮವಾಗಿರಬೇಕೇ ಹೊರತು ದ್ರಷ್ಟೃವಾದ ಆತ್ಮನ ಧರ್ಮವಾಗಿರಲು ಸಾಧ್ಯವಿಲ್ಲ. ತನ್ನ ಧರ್ಮವನ್ನು ತಾನೇ ನೋಡುವುದಕ್ಕೆ ಸಮರ್ಥನಾಗುವು-ದಿಲ್ಲವಷ್ಟೇ ? ಏಕೆಂದರೆ ಒಬ್ಬನಿಗೇ ಕರ್ತೃಕರ್ಮತ್ವವಿರುವುದೆಂಬುದು ವಿರೋಧವಾಗಿರುತ್ತದೆ. ಆತ್ಮನು ನಿರಂಶನಾದ್ದರಿಂದ ಅವನ ಜ್ಞಾತ್ರಂಶವು (ಅವನನ್ನೇ) ನೋಡುತ್ತದೆ ಎಂಬುದೂ ಯುಕ್ತಿಯುಕ್ತವಾದದ್ದಲ್ಲ. ಇದನ್ನು ನೈಷ್ಕರ್ಮ್ಯಸಿದ್ಧಿಯಲ್ಲಿಯೂ ಹೇಳಿರುತ್ತಾರೆ. "ತನ್ನಲ್ಲಿರುವ ಗುಣವು ತನ್ನಿಂದಲಾಗಲೀ ತನ್ನ ಅಂಶದಿಂದಲಾಗಲೀ ಅರಿಯುವುದಕ್ಕಾಗುವುದಿಲ್ಲ.

ಅಭಿನ್ನತ್ವಾತ್ ಸಮತ್ವಾಚ್ಚ ನಿರಂಶತ್ವಾದಕರ್ಮತಃ॥" (ನೈ. ಸಿ. ೨-೨೬) ಇತಿ । ತಸ್ಮಾದಹಂಪ್ರತ್ಯಯಾಶ್ರಯತ್ವಂ ತದ್ವಿಷಯತ್ವಂ ಚಾತ್ಮನ ಇತ್ಯತ್ಯಂತಮೇವ ದೃಷ್ಟವಿರುದ್ಧಮ್ ॥

ಕಶ್ಚಾತ್ರ ಭವತೋಽಭಿಪ್ರಾಯ ಇತಿ ವಕ್ತವ್ಯಮ್; ಅಧ್ಯಾಸೋಽವಿಷಯತ್ವ-ಮಾತ್ಮನೋ ನೈವ ಸಹತ ಇತಿ, ಆಹೋಸ್ವಿತ್ ತಸ್ಯ ವಿಷಯತ್ವಮನಾಪಾದ್ಯ ನ ಸಂಭವತೀತಿ ? ಯದ್ಯವಿಷಯತ್ವಂ ನ ಸಹತ ಏವೇತಿ, ತರ್ಹಿ ಪ್ರಷ್ಟವ್ಯೋ ಭವಾನ್, ಕಿಮಧ್ಯಾಸಃ ಸ್ವಕಾಲಮತೀತ್ಯಾಪ್ಯಧಿಷ್ಠಾನಾರೋಪ್ಯಯೋಃ ಸ್ವರೂಪಂ ನಿಯಂತುಂ ಕ್ಷಮತ ಇತಿ । ನೋ ಚೇದಧ್ಯಾಸಕಾಲೇ ವಿಷಯತ್ವಮ-ಪೇಕ್ಷ್ಯತ ಇತಿ ದ್ವಿತೀಯಪಕ್ಷ ಏವಾಶ್ರಯಣೀಯಃ । ತತ್ತು ವಿದ್ಯತ ಏವ ಪ್ರತ್ಯಗಾತ್ಮನೋಽಪಿ । ಪ್ರತ್ಯಗಾತ್ಮನೋ ವಿಷಯತ್ವಮಾಪಾದ್ಯೈವ ಹ್ಯಧ್ಯಾಸಃ। ಅತೋ ನಾಸ್ತಿ ಕಶ್ಚಿದ್ವಿರೋಧಃ ॥

---

ಏಕೆಂದರೆ ಅಭಿನ್ನನಾಗಿರುವುದರಿಂದಲೂ, ಸಮನಾಗಿರುವುದರಿಂದಲೂ, ತನ್ನಲ್ಲಿ ಅಂಶವೆಂಬುದಿಲ್ಲವಾದ್ದರಿಂದಲೂ ಕರ್ಮವಾಗುವುದೆಂಬುದು ತನಗೆ ತಾನು (ವಿಷಯವಾಗುವುದೆಂಬುದು) ಹೊಂದುವುದಿಲ್ಲ". (ನೈ. ಸಿ. ೨-೨೬). ಆದ್ದರಿಂದ ಆತ್ಮನು ಅಹಂಪ್ರತ್ಯಯಕ್ಕೆ ಆಶ್ರಯನಾಗಿರುವುದು ಅದಕ್ಕೆ ವಿಷಯನಾಗುವುದೆಂಬುದು ಸಂಪೂರ್ಣವಾಗಿ ಕಂಡದ್ದಕ್ಕೆ ವಿರುದ್ಧವೆಂದು (ಭಾವ). ಇಲ್ಲಿ ನಿಮ್ಮ ಅಭಿಪ್ರಾಯವೇನೆಂಬುದನ್ನು ಹೇಳಬೇಕು. ಅಧ್ಯಾಸವು ಆತ್ಮನು ವಿಷಯನಲ್ಲ ಎಂಬುದನ್ನು ಸಹಿಸುವುದಿಲ್ಲವೆಂತಲೋ ಅಥವಾ ಅವನನ್ನು ವಿಷಯವನ್ನಾಗಿ ಮಾಡಿಕೊಳ್ಳದೇ ಹೊಂದುವುದಿಲ್ಲವೆಂತಲೋ? ವಿಷಯನಾಗದಿರುವುದನ್ನು (ಅಧ್ಯಾಸವು) ಸಹಿಸಿಕೊಳ್ಳುವುದಿಲ್ಲವೆಂದಾದರೆ, ಆಗ ನೀನು (ಇದನ್ನು) ಹೇಳಬೇಕಾಗುತ್ತದೆ, (ಏನೆಂದರೆ) ಅಧ್ಯಾಸವು (ತಾನು ತೋರುವುದಲ್ಲದೆ) ತನ್ನ ಕಾಲವನ್ನು ಮೀರಿ ಅಧಿಷ್ಠಾನ ಮತ್ತು ಆರೋಪ್ಯಗಳೆರಡರ ಸ್ವರೂಪವನ್ನು ನಿಯಂತ್ರಿಸಲು ಸಮರ್ಥವಾಗಿದೆಯೇ ? ಹಾಗಿಲ್ಲದೆ ಅಧ್ಯಾಸಕಾಲದಲ್ಲಿ ವಿಷಯವಾಗುವುದನ್ನು ಅಪೇಕ್ಷಿಸುತ್ತದೆ ಎಂಬ ಎರಡನೆಯ ಪಕ್ಷವನ್ನೇ ಆಶ್ರಯಿಸುವುದಾದರೆ ಆಗ ಅದು ಪ್ರತ್ಯಗಾತ್ಮನನ್ನು ವಿಷಯವನ್ನಾಗಿ ಮಾಡಿಕೊಂಡೇ ಅಧ್ಯಾಸವಾಗುವುದು. ಆದ್ದರಿಂದ ಯಾವ ವಿರೋಧವೂ ಇಲ್ಲ.

**೧೯. ಆತ್ಮನೋ ವಿಷಯಿತ್ವಂ ಸ್ವಭಾವತಃ, ವಿಷಯತ್ವಂ ತ್ವಧ್ಯಾಸಾತ್** – ಅತ್ರಾಹ – ಕಸ್ತರ್ಹಿ ಪ್ರತ್ಯಗಾತ್ಮಾನಾತ್ಮನೋರ್ಭೇದಃ, ಯೇನಾನಾತ್ಮೈವ ವಿಷಯ ಇತ್ಯುಚ್ಯತೇ, ಆತ್ಮಾ ತು ವಿಷಯೀತಿ ? ಉಚ್ಯತೇ –ಪ್ರತ್ಯಗಾತ್ಮಾ ತಾವತ್ ಸ್ವಭಾವತೋ ವಿಷಯೀ, ಚಿದಾತ್ಮಕತ್ವಾತ್ । ವಿಷಯತ್ವಂ ತು ತಸ್ಯಾಧ್ಯಾಸಿಕಮ್, ಅಧ್ಯಾಸಸಮಕಾಲನಿರ್ವರ್ತ್ಯಮಧ್ಯಾಸ-ನಿರ್ವಾಹಾರ್ಥಮ್ । ಅನಾತ್ಮಾ ಪುನರ್ಯುಷ್ಮತ್ಪ್ರತ್ಯಯವಿಷಯ ಏವ ಸ್ವಭಾವತಃ। ಸ ಚಾಧ್ಯಾಸಕಾಲೇ ಕ್ವಚಿದ್ಯದ್ಯಪಿ ವಿಷಯಿತ್ವೇನ ಪ್ರತಿಭಾಸತೇ, ತಥಾಪಿ ನ ತತ್ಸ್ವರೂಪಂ ತಸ್ಯ । ನ ಹಿ ತದಾಪಿ ತಸ್ಯ ವಿಷಯತ್ವಸ್ವರೂಪಂ ಹೀಯತೇ ಯಥಾಽಽತ್ಮನೋ ವಿಷಯಿತ್ವಸ್ವರೂಪಮ್ । ಕಿಂಚ ಯದಾಪ್ಯಾತ್ಮಾ ವಿಷಯತ್ವಮಾಪಾದ್ಯತೇಽಧ್ಯಾಸನಿರ್ವಾಹಾರ್ಥಮ್, ತದಾಪ್ಯಸ್ಮತ್ಪ್ರತ್ಯಯ-ಗೋಚರ ಏವ ಭವತಿ ನ ತು ಯುಷ್ಮತ್ಪ್ರತ್ಯಯಗೋಚರ ಇತ್ಯಸ್ತಿ ಸುಮಹದ್ವೈ-

---

**೧೯. ಆತ್ಮನಿಗೆ ವಿಷಯಿತ್ವವು ಸ್ವಭಾವದಿಂದಲೂ ವಿಷಯತ್ವವು ಅಧ್ಯಾಸದಿಂದಲೂ (ಆದದ್ದೆಂದು ತಿಳಿಯಬೇಕು)** – ಹಾಗಾದರೆ ಆತ್ಮಾನಾತ್ಮರುಗಳಿಗೆ ಏನು ವ್ಯತ್ಯಾಸ ? ಯಾವುದರಿಂದ ಅನಾತ್ಮವೇ ವಿಷಯವೆಂತಲೂ ಆತ್ಮನು ವಿಷಯಿ ಎಂತಲೂ ಹೇಳುವಿರಿ ? ಎಂದರೆ ಹೇಳುತ್ತೇವೆ – ಪ್ರತ್ಯಗಾತ್ಮನು ಚಿದಾತ್ಮಕನಾಗಿರುವುದರಿಂದ ಸ್ವಭಾವದಿಂದಲೇ ವಿಷಯಿಯು. ಅವನು ವಿಷಯನಾಗಿರುವುದೆಂಬುದು ಅಧ್ಯಾಸದಿಂದ. (ಆತ್ಮನ ವಿಷಯತ್ವವು) ಅಧ್ಯಾಸದ ಸಮಾನಕಾಲದಲ್ಲಿ ಉಂಟಾಗುವಂಥದ್ದು, ಅಧ್ಯಾಸವನ್ನು ನಿರ್ವಹಿಸುವುದಕ್ಕಾಗಿ (ಆದದ್ದು). ಅನಾತ್ಮವಾದರೋ ಯಾವಾಗಲೂ ಸ್ವಭಾವದಿಂದಲೇ "ನೀನೆಂಬ" ಪ್ರತ್ಯಯಕ್ಕೆ ವಿಷಯವಾಗಿ-ರುವದು. ಅಧ್ಯಾಸಕಾಲದಲ್ಲಿ ಕೆಲವೊಮ್ಮೆ (ಅದು) ವಿಷಯಿಯಂತೆ ತೋರಿದರೂ ಅದು ಅದರ ಸ್ವರೂಪವಲ್ಲ. ಹೇಗೆ ಆತ್ಮನಿಗೆ ವಿಷಯಿತ್ವ-ಸ್ವರೂಪವು ಬಿಟ್ಟುಹೋಗುವುದಿಲ್ಲವೋ ಹಾಗೆ ಆಗಲೂ ಅನಾತ್ಮಕ್ಕೆ ವಿಷಯಸ್ವರೂಪವು ಬಿಟ್ಟುಹೋಗುವುದಿಲ್ಲ. ಮತ್ತೂ ಏನೆಂದರೆ ಅಧ್ಯಾಸವನ್ನು ನಿರ್ವಾಹಮಾಡಲು ಆತ್ಮನು ಯಾವಾಗ ವಿಷಯತ್ವವನ್ನು ಹೊಂದುತ್ತಾನೋ ಆಗಲೂ ಅಸ್ಮತ್ಪ್ರತ್ಯಯಗೋಚರನಾಗಿಯೇ ಇರುತ್ತಾನೆಯೇ ಹೊರತು ಯುಷ್ಮತ್ಪ್ರತ್ಯಯಗೋಚರನಾಗಿರುವುದಿಲ್ಲ ಎಂದಾದ್ದರಿಂದ ತುಂಬಾ

ಷಮ್ಯಮ್ । ತಮಿಮಂ ಭೇದಮಾಶ್ರಿತ್ಯೋಚ್ಯತೇಽಸ್ಮಾಭಿಃ – ಅನಾತ್ಮೈವ ವಿಷಯಃ, ಆತ್ಮಾ ತು ವಿಷಯೀತಿ । ಅತೋ ನ ದೋಷಃ ॥

**೨೦. ಅಸ್ಮತ್ಪ್ರತ್ಯಯವಿಷಯತ್ವಾಧ್ಯಾಸಯೋರ್ನಾನ್ಯೋನ್ಯಾಶ್ರಯತಾ** – ನನ್ವೇವಮಸ್ಮತ್ಪ್ರತ್ಯಯವಿಷಯತಾಂ ವಿನಾ ನಾಧ್ಯಾಸ ಇತ್ಯುಕ್ತಂ ಭವತಿ । ತದ್ವಿಷಯತಾಪ್ಯಧ್ಯಾಸಕಾರ್ಯಮೇವೇತಿ ಪರಸ್ಪರಾಶ್ರಯಃ ಸ್ಯಾತ್। ಅಸ್ಮತ್ಪ್ರತ್ಯಯವಿಷಯತಾಮಾಶ್ರಿತ್ಯಾಧ್ಯಾಸಃ, ತಮೇವ ಚಾಧ್ಯಾಸಮಾಶ್ರಿತ್ಯಾಸ್ಮತ್ಪ್ರತ್ಯಯವಿಷಯತೇತಿ । ನೇತಿ ಬ್ರೂಮಃ । ಅಧ್ಯಾಸಸಮಕಾಲಮೇವೋಭಯನಿರ್ವೃತ್ತೇಃ । ಮಾಯಾನಿರ್ಮಿತಧೇನುತದ್ವತ್ಸಯೋರಿವ ಯುಗಪದೇವ ಉಭಯೋರಪಿ ಪ್ರತಿಭಾಸಸಂಭವಾತ್ । ಯದಾ ಖಲ್ವಧ್ಯಾಸಃ, ತದಾಽಽತ್ಮನ್ಯಧ್ಯಾಸವಿಷಯತಾ ಅನಾತ್ಮಾಧ್ಯಾಸಸಂಬಂಧಶ್ಚೇತ್ಯುಭಯಮಪಿ ಸಮಕಾಲಮೇವ

---

ವ್ಯತ್ಯಾಸವಿದೆ. ಈ ಭೇದವನ್ನು ಆಶ್ರಯಿಸಿಕೊಂಡೇ ನಾವು ಹೇಳಿರುವುದು, – "ಅನಾತ್ಮವೇ ವಿಷಯ, ಆತ್ಮನಾದರೋ ವಿಷಯಿಯು" ಎಂದು ಆದ್ದರಿಂದ ಇಲ್ಲಿ ಏನೂ ದೋಷವಿಲ್ಲ.

**೨೦. ಅಸ್ಮತ್ಪ್ರತ್ಯಯಕ್ಕೆ ವಿಷಯವಾಗಿರುವುದಕ್ಕೂ ಅಧ್ಯಾಸಕ್ಕೂ ಅನ್ಯೋನ್ಯಾಶ್ರಯತ್ವವೆಂಬುದಿಲ್ಲ** – ಅಸ್ಮತ್ಪ್ರತ್ಯಯಕ್ಕೆ ವಿಷಯನಾಗದೇ ಹೋದರೆ ಅಧ್ಯಾಸವಾಗುವುದಿಲ್ಲ ಎಂದು ಹೇಳಿದಂತಾಗುವುದಿಲ್ಲವೆ ? ಹಾಗೆಯೇ ಅಸ್ಮತ್ಪ್ರತ್ಯಯಕ್ಕೆ ವಿಷಯನಾಗುವುದೆಂಬುದೂ ಅಧ್ಯಾಸದ ಕಾರ್ಯವೆಂದಾಗಿ ಅನ್ಯೋನ್ಯಾಶ್ರಯವಾಗುತ್ತದೆಯಲ್ಲಾ ! ಅಸ್ಮತ್ಪ್ರತ್ಯಯಕ್ಕೆ ವಿಷಯನಾಗುವುದನ್ನಾಶ್ರಯಸಿ ಅಧ್ಯಾಸವು, ಆ ಅಧ್ಯಾಸವನ್ನಾಶ್ರಯಿಸಿಯೇ (ಆತ್ಮನು) ಅಸ್ಮತ್ಪ್ರತ್ಯಯಕ್ಕೆ ವಿಷಯನಾಗುವುದು (ಎಂದು ಹೇಳಿದರೆ ಸರಿಯಾಗುವುದಿಲ್ಲವಲ್ಲ?) ಎಂದರೆ ಹಾಗಲ್ಲವೆನ್ನುತ್ತೇವೆ. ಅಧ್ಯಾಸದ ಸಮಕಾಲದಲ್ಲೇ ಎರಡೂ ಉಂಟಾಗಬಹುದಾಗಿದೆ. ಮಾಯೆಯಿಂದುಂಟಾದ ಹಸು ಮತ್ತು ಅದರ ಕರುಗಳಂತೆ ಒಂದೇ ಕಾಲದಲ್ಲಿ ಎರಡೂ ತೋರುವುದೆಂಬುದು ಹೊಂದುತ್ತದೆ. ಯಾವಾಗ ಅಧ್ಯಾಸವೋ ಆಗಲೇ ಆತ್ಮನಲ್ಲಿ ಅಧ್ಯಾಸಕ್ಕೆ ವಿಷಯತ್ವವೆಂಬುದೂ, ಅನಾತ್ಮದೊಡನೆ ಅಧ್ಯಾಸದ ಸಂಬಂಧವೂ, ಎರಡೂ ಒಂದೇ ಕಾಲದಲ್ಲಿ ಉಂಟಾಗುತ್ತದೆ ಎಂಬುದನ್ನು

ನಿರ್ವರ್ತ್ಯತ ಇತ್ಯನುಭವಾನುಸಾರೇಣ ಕಲ್ಪ್ಯತೇ ನ ಪೂರ್ವಾಪರೀಭಾವೋಽಪಿ ಕಶ್ಚಿತ್ । ಯತ್ಪುನರ್ವಿಷಯತ್ವಮನಾಪಾದ್ಯ ನಾತ್ಮನ್ಯಧ್ಯಾಸ ಇತ್ಯುಕ್ತಮ್, ತತ್ರ ಪ್ರತಿಪತ್ತಿಕ್ರಮಮೇವಾಶ್ರಿತ್ಯ ತಥೋಕ್ತಮ್, ನ ತು ಕಾಲಕೃತಕ್ರಮಮಪೀತಿ ನ ದೋಷಃ । ನ ಚಾಸ್ಮತ್ಪ್ರತ್ಯಯವಿಷಯತಾಸ್ವರೂಪಮೇವಾಸ್ತು ಪ್ರತ್ಯಗಾತ್ಮನಃ ಕಿಮನೇನ ಕಲ್ಪನೇನೇತಿ ಸಾಂಪ್ರತಮ್ । ಅನನ್ವಯಾತ್ । ನ ಹಿ ಯಾವದಾತ್ಮಭಾವಮಸ್ಮತ್ಪ್ರತ್ಯಯಸ್ಯಾನ್ವಯೋಽಸ್ತಿ । ಯಥೋಕ್ತಂ ನೈಷ್ಕರ್ಮ್ಯಸಿದ್ಧೌ –"ಆತ್ಮನಶ್ಚೇದಹಂ ಧರ್ಮೋ ಯಾಯಾನ್ಮುಕ್ತಿ-ಸುಷುಪ್ತಯೋಃ । ಯತೋ ನಾನ್ವೇತಿ ತೇನಾಯಮನ್ಯದೀಯೋ ಭವೇದಹಮ್॥" (ನೈ. ಸಿ. ೨-೩೨) ಇತಿ ॥

ಏತಾವದತ್ರೋಕ್ತಮ್ – ಅಭ್ಯುಪಗಮ್ಯಾಪಿ ಸರ್ವತ್ರ ವಿಷಯೇ ವಿಷಯಾಂ-ತರಮೇವಾಧ್ಯಸ್ಯತ ಇತಿ ಭವದುಕ್ತಂ ನಿಯಮಂ ನಾತ್ರ ವಿರೋಧಂ ಪಶ್ಯಾಮಃ।

---

ಅನುಭವಾನುಸಾರಿಯಾಗಿ ಕಲ್ಪಿಸಲಾಗುತ್ತದೆಯಾದ್ದರಿಂದ (ಇವೆರಡಕ್ಕೆ) ಪೂರ್ವಾಪರಭಾವವು ಯಾವುದೂ ಇರುವುದಿಲ್ಲ. (ನಾವು ಹಿಂದೆ) ವಿಷಯತ್ವವನ್ನು ಮಾಡಿಕೊಳ್ಳದೇ ಹೋದರೆ ಆತ್ಮನಲ್ಲಿ ಅಧ್ಯಾಸವಾಗುವುದಿಲ್ಲ ಎಂದು ಏನು ಹೇಳಿರುತ್ತೇವೆ, ಅದು ತಿಳಿವಳಿಕೆಗೋಸ್ಕರ ಕ್ರಮವನ್ನಿಟ್ಟುಕೊಂಡು ಹೇಳಿದ್ದೇ ಹೊರತು ಕಾಲದಿಂದಾದ ಕ್ರಮವನ್ನು ಇಟ್ಟುಕೊಂಡು ಹೇಳಿದ್ದಲ್ಲ ಎಂದಾದ್ದರಿಂದ ಇಲ್ಲೇನೂ ದೋಷವಿಲ್ಲ. ಅಸ್ಮತ್ಪ್ರತ್ಯಯಕ್ಕೆ ವಿಷವಾಗಿದ್ದು-ಕೊಂಡಿರುವುದೆಂಬುದೆ ಪ್ರತ್ಯಗಾತ್ಮನ ಸ್ವಭಾವವೆಂದಾಗಲಿ, ಈ ಕಲ್ಪನೆ ಏತಕ್ಕೆ? ಎನ್ನುವ ಹಾಗಿಲ್ಲ. (ಏಕೆಂದರೆ) ಅದು ಹಾಗಿಲ್ಲವಾಗಿದೆ. ಆತ್ಮನಿರುವವರೆಗೂ ಅಸ್ಮತ್ಪ್ರತ್ಯಯದ ಅನ್ವಯವಿರುತ್ತದೆ ಎಂಬುದಿಲ್ಲ. ಇದನ್ನು ನೈಷ್ಕರ್ಮ್ಯಸಿದ್ಧಿಯಲ್ಲಿ ಹೇಳಿರುತ್ತಾರೆ – "ನಾನೆಂಬುದು ಆತ್ಮನ ಧರ್ಮವಾಗಿದ್ದರೆ ಮುಕ್ತಿಯಲ್ಲೂ ಸುಷುಪ್ತಿಯಲ್ಲೂ ಅನುವೃತ್ತವಾಗಿ ಬರಬೇಕಾಗಿತ್ತು, ಅದು ಬರುವುದಿಲ್ಲ-ವಾದ್ದರಿಂದ ನಾನೆಂಬುದು ಮತ್ತೊಂದರದ್ದೇ ಆಗಿರುವುದಕ್ಕೆ ಅರ್ಹವಾಗಿದೆ" (ನೈ. ೨-೩೨). ಇಷ್ಟನ್ನು ಇಲ್ಲಿ ಹೇಳಿರುವುದು – (ಏನೆಂದರೆ) – ಎಲ್ಲಾಕಡೆಯಲ್ಲೂ ವಿಷಯವಾಗಿರುವ ಒಂದರಲ್ಲಿಯೇ ಮತ್ತೊಂದು ವಿಷಯದ ಅಧ್ಯಾಸವನ್ನು ಮಾಡುತ್ತಾರೆಂದು ನೀನು ಹೇಳಿದ ನಿಯಮವನ್ನು ಒಪ್ಪಿಕೊಂಡು ಹೇಳಿದರೂ ಇಲ್ಲಿ ಯಾವ ವಿರೋಧವನ್ನೂ ಕಾಣೆವು. ಆತ್ಮನು ವಿಷಯನೂ

ಆತ್ಮಾ ಹಿ ವಿಷಯೋಽಪಿ ಭವತಿ, ನ ತ್ವವಿಷಯ ಏವಾಧ್ಯಾಸಕಾಲೇಽಪೀತಿ॥

**೨೧. ಆತ್ಮನಃ ಪ್ರಸಿದ್ಧೇರೇವಾಲಮಧ್ಯಾಸನಿರ್ವಾಹಾಯ** – ಅಧ್ಯಾಸೇ ಸಂಭಾವನಾಯುಕ್ತ್ಯಂತರಮಾಹ – **"ಅಪರೋಕ್ಷತ್ವಾಚ್ಚ ಪ್ರತ್ಯಗಾತ್ಮ-ಪ್ರಸಿದ್ಧೇಃ"** ಇತಿ । ಅಯಮಭಿಸಂಧಿಃ – ಅಧಿಷ್ಠಾನಸ್ಯಾರೋಪ್ಯಸ್ಯ ವಾ ವಿಷಯತ್ವಂ ನ ವ್ಯಸನಿತಯಾ ರೋಚಯತೇ ಭವಾನಪಿ । ಕಿಂ ತು ವಿಷಯತ್ವಮಂತರೇಣ ಕಸ್ಯಚಿದಪಿ ವಸ್ತುನೋಽಪ್ರಸಿದ್ಧೇಃ ಪ್ರಸಿದ್ಧಿಮಂತರೇಣ ಚಾಧ್ಯಾಸನಿರ್ವಾಹಾಭಾವಾತ್ ತದರ್ಥಂ ವಿಷಯತ್ವಂ ತಯೋರಪೇಕ್ಷ್ಯತ ಇತ್ಯಭಿಪ್ರಾಯೋ ಭವತಃ । ತತ್ರ ಪ್ರಸಿದ್ಧಿರೇವ ಕೀದೃಶೀ ಸಮಭೀಷ್ಟೇತಿ ವಕ್ತವ್ಯಮ್ । ಯದಿ ವಿವಿಕ್ತಪ್ರತ್ಯಯವಿಷಯತಯಾ ಸರ್ವಲೋಕಪ್ರಸಿದ್ಧಿಃ, ನ ತರ್ಹಿ ದೇಹಾತ್ಮಾಧ್ಯಾಸೇಽಪಿ ಸಾ ವಿದ್ಯತೇ । ನ ಹ್ಯಯಂ ದೇಹಃ, ಅಯಂ ಚಾಽಽತ್ಮಾ – ಇತಿ ವಿವಿಕ್ತಪ್ರತ್ಯಯವಿಷಯತಯಾ ಪ್ರಸಿದ್ಧಿರಸ್ತಿ ಲೋಕೇ ।

---

ಆಗಿರುತ್ತಾನಲ್ಲವೆ, ಅಧ್ಯಾಸಕಾಲದಲ್ಲೂ ಅವಿಷಯನಾಗಿಯೇ ಇರುತ್ತಾ-ನೆಂಬುದೇನಿಲ್ಲ ಎಂದು (ಅಭಿಪ್ರಾಯವು).

**೨೧. ಆತ್ಮನು ಪ್ರಸಿದ್ಧನಾಗಿರುವುದರಿಂದಲೇ ಅಧ್ಯಾಸವನ್ನು ನಿರ್ವಹಿಸುವುದಕ್ಕೆ ಸಾಕಾಗಿರುತ್ತಾನೆ.** – ಅಪರೋಕ್ಷನಾಗಿ ಪ್ರತ್ಯಗಾತ್ಮನಾಗಿರುವುದರಿಂದ ಎಂದು ಹೇಳುತ್ತಾ ಅಧ್ಯಾಸದ ವಿಷಯಕ್ಕೆ ಮತ್ತೊಂದು ಸಂಭಾವನಾಯುಕ್ತಿಯು ಇದೆ "ಪ್ರತ್ಯಗಾತ್ಮಪ್ರಸಿದ್ಧಿಯು ಅಪರೋಕ್ಷವಾಗಿರುವುದರಿಂದ" ಎಂದು ಹೇಳುತ್ತಾರೆ. ಇದು ಅದರ ಅಭಿಪ್ರಾಯ. ಅಧಿಷ್ಠಾನವಾಗಲೀ ಆರೋಪ್ಯವಾಗಿರುವುದಾಗಲೀ ವಿಷಯ-ವಾಗಿರಲೇಬೇಕೆಂದು ಹವ್ಯಾಸದಿಂದ ನೀನು ಸಹ ಇಷ್ಟಪಡುತ್ತಿಲ್ಲ ಅಲ್ಲವೇ? ಆದರೆ ಯಾವ ವಸ್ತುವೇ ಆಗಲಿ ವಿಷಯವಾಗದಿದ್ದರೆ ಪ್ರಸಿದ್ಧಿಯೇ ಆಗುವದಿಲ್ಲ. ಪ್ರಸಿದ್ಧಿಯಾಗದಿದ್ದರೆ ಅಧ್ಯಾಸವನ್ನು ನಿರ್ವಹಿಸುವುದೆಂಬುದಾಗುವುದಿಲ್ಲ. ಅದಕ್ಕಾಗಿ ಅವೆರಡೂ ವಿಷಯವಾಗಿರಬೇಕೆಂದು ನಿನ್ನ ಅಭಿಪ್ರಾಯವಷ್ಟೇ ? ಇಲ್ಲಿ ಪ್ರಸಿದ್ಧಿ ಎಂಬುದು ಯಾವ ತರಹದ್ದು ? ಎಂದು ನಿನ್ನ ಅಭಿಪ್ರಾಯವನ್ನು ತಿಳಿಸಬೇಕು. ಒಂದು ವೇಳೆ ವಿಂಗಡವಾದ ಪ್ರತ್ಯಯಕ್ಕೆ ವಿಷಯವಾಗಿದ್ದು ಎಲ್ಲಾ ಜನರಿಗೂ ಪ್ರಸಿದ್ಧಿಯಾಗಿರಬೇಕೆಂದರೆ ಅದು ದೇಹಾತ್ಮಾಧ್ಯಾಸದಲ್ಲೂ ಇರುವುದಿಲ್ಲ. ಲೋಕದಲ್ಲಿ ಯಾರಿಗೂ ಇದು ದೇಹವು, ಇವನು

ಅಥ ಚ ಭವತಿ ತಯೋರಧ್ಯಾಸ ಇತಿ ಸರ್ವಸಂಪ್ರತಿಪನ್ನಮೇತದನ್ಯತ್ರ ವೇದಾಬಾಹ್ಯಬೌದ್ಧಚಾರ್ವಾಕಾದೇಃ । ಅತೋ ನ ವಿವಿಕ್ತಪ್ರತ್ಯಯವಿಷಯತಾ ನಿಯತಂ ಸಮಪೇಕ್ಷ್ಯತೇಽಧ್ಯಾಸ ಇತ್ಯವಶ್ಯಮಂಗೀಕರ್ತವ್ಯಂ ಭವತಾಪಿ । ಅಥ ಕಥಂಚಿತ್ ಪ್ರಸಿದ್ಧಿರಭಿಪ್ರೇತಾ, ವಿದ್ಯತ ಏವ ಸಾ ಪ್ರಕೃತೇಽಪೀತಿ ಕಿಂ ವಿಷಯತ್ವಪರ್ಯಂತಾನುಧಾವನೇನ ? ನನು ಪ್ರಮಾಣೈಃ ಸಿದ್ಧಿಃ ಪ್ರಸಿದ್ಧಿಃ । ಸಾ ಹಿ ಪ್ರಕರ್ಷೇಣ ಸಿದ್ಧಿರ್ವಸ್ತುನಃ । ಪ್ರಕರ್ಷತ್ವಂ ಚ ಸಿದ್ಧೇಃ ಸಂಶಯ-ವಿಪರ್ಯಯಾಸಂಬಂಧೇನ ಯಥಾರ್ಥರೂಪತ್ವೈವೇತಿ ಕಥಂ ಸರ್ವ-ಪ್ರಮಾಣಾಗೋಚರಸ್ಯ ಪ್ರಸಿದ್ಧಿಃ ? ದೇಹಾತ್ಮಾಧ್ಯಾಸೇ ತು ಪ್ರಸಿದ್ಧಿರಸ್ತ್ಯಸ್ಯಾ-ಽಽತ್ಮನೋಽಹಂಪ್ರತ್ಯಯವಿಷಯತಯಾ । ತವ ತ್ವಹಂತ್ಪ್ರತ್ಯಯವಿಷಯತಾ-ಮಪ್ಯಪಹ್ನುವಾನಸ್ಯ ಕಥಂ ಪ್ರಸಿದ್ಧಿರಾತ್ಮನ ಇತಿ ಚೇತ್ । ನ ತರ್ಹಿ ಪ್ರಮಾಣಾನಾಂ ಪ್ರಸಿದ್ಧಿಃ । ನ ಹಿ ಪ್ರಮಾಣವಿಷಯಕಾಣಿ ಪ್ರಮಾಣಾಂತರಾಣಿ

---

ಆತ್ಮನು ಎಂದು ವಿಂಗಡವಾಗಿ ಅರಿವಿಗೆ ವಿಷಯವಾಗಿ ಪ್ರಸಿದ್ಧಿಯಾಗಿರುವು-ದೆಂಬುದಿಲ್ಲ. ಆದರೆ ವೇದಬಾಹ್ಯರಾದ ಬೌದ್ಧರನ್ನೂ ಚಾರ್ವಾಕರನ್ನೂ ಬಿಟ್ಟರೆ ಬಾಕಿ ಎಲ್ಲರಿಗೂ ಅವೆರಡಕ್ಕೂ ಅಧ್ಯಾಸವಿದೆ ಎಂಬುದು ಒಪ್ಪಿಗೆ ಇದೆ. ಆದ್ದರಿಂದ ಅಧ್ಯಾಸವು ನಿಯತವಾಗಿ ವಿಂಗಡವಾದ ಅರಿವಿಗೆ ವಿಷಯವಾಗಿ ಇರಲೇಬೇಕೆಂದು ಬಯಸುವುದಿಲ್ಲವೆಂಬುದನ್ನು ನೀನೂ ಅವಶ್ಯವಾಗಿ ಒಪ್ಪಲೇಬೇಕು. ಇನ್ನು ಅವೆರಡೂ ಹೇಗಾದರೂ ಪ್ರಸಿದ್ಧಿಯಾಗಿದ್ದರೆ ಸಾಕೆಂಬ ಅಭಿಪ್ರಾಯವಾದರೆ, ಆಗ ಅದು ಪ್ರಕೃತವಾದ ಅಧ್ಯಾಸದಲ್ಲಿ ಇದ್ದೇ ಇದೆ ಎಂದಾಗಿ ವಿಷಯವಾಗಿರಲೇಬೇಕೆಂಬುವವರೆಗೆ ಅನುಸರಿಸಿ ಓಡುವುದೇಕೆ? ಅಲ್ಲಾ ! ಪ್ರಸಿದ್ಧಿ ಎಂದರೆ ಪ್ರಮಾಣಗಳಿಂದ ಪ್ರಸಿದ್ಧಿಯಾಗಿರುವುದು ಎಂದರ್ಥ, ಅದೇ ಅಲ್ಲವೆ, ನಿಶ್ಚಿತವಾದ ವಸ್ತುವಿನಸಿದ್ಧಿಯು ಎಂದಾಗುವುದು ? ಚೆನ್ನಾಗಿ ಸಿದ್ಧಿಯಾಗುವುದು ಎಂದರೆ ಸಂಶಯವಿಪರ್ಯಯವಿಲ್ಲದೆ ನಿಜವಾದ ರೂಪದಿಂದ ತಿಳಿದುಬರುವುದೇ – ಎಂದಾಗಲಾಗಿ, ಯಾವ ಪ್ರಮಾಣಕ್ಕೂ ಗೋಚರವಲ್ಲದ್ದು ಹೇಗೆ (ತಾನೆ) ಪ್ರಸಿದ್ಧಿಯಾದೀತು ! ಈ ಆತ್ಮನು ಅಹಂಪ್ರತ್ಯಯಕ್ಕೆ ವಿಷಯನಾಗಿರುವುದರಿಂದ ದೇಹಾತ್ಮರುಗಳ ಅಧ್ಯಾಸದಲ್ಲಿ ಪ್ರಸಿದ್ಧಿ ಇದೆ. ಅಹಂಪ್ರತ್ಯಯಕ್ಕೆ ವಿಷಯನಾಗಿದ್ದಾನೆಂಬುದನ್ನು ಅಲ್ಲಗಳೆಯುವ ನಿನಗೆ ಆತ್ಮನ ಪ್ರಸಿದ್ಧಿಯು ಹೇಗೆ ? ಹಾಗಾದರೆ ಪ್ರಮಾಣಗಳಿಗೇ ಪ್ರಸಿದ್ಧಿ

ಸಂತಿ ಯ್ಯೈರಮೀಷಾಂ ಪ್ರಸಿದ್ಧಿಃ ಸ್ಯಾದಿತಿ । ಸ್ಯಾದೇತತ್ – ಪ್ರಮಾಣವ್ಯತಿರಿಕ್ತ-ವಿಷಯಕ ಏವಾಯಂ ಪ್ರಸಿದ್ಧಾಪ್ರಸಿದ್ಧವ್ಯವಹಾರಃ । ನ ಹಿ ಸ್ವಯಮಪ್ರಸಿದ್ಧಾನಿ ಪ್ರಮಾಣಾನಿ ವಿಷಯಪ್ರಸಿದ್ಧಿಂ ಸಂಪಾದಯಿತುಮಲಮಿತಿ । ನ ತರ್ಹಿ ಪ್ರಮಾಣೈಃ ಪ್ರಸಿಧ್ಯನ್ನೇವಾರ್ಥಃ ಪ್ರಸಿದ್ಧೋ ಭವತಿ । ಅನ್ಯಥಾಪಿ ಪ್ರಸಿದ್ಧೇರ್ಭವತ್ಯೈವಾನುಜ್ಞಾನಾತ್ । ಕಿಂ ಚಾತಃ ? ಅತಃ ಇದಮಾಯಾತಂ ಯದಾತ್ಮನೋಽಪಿ ಪ್ರಮಾಣೈರ್ವಿನಾ ಪ್ರಸಿದ್ಧೌ ನ ಕೋಽಪಿ ದೋಷಾತಂಕ ಇತಿ । ನ ಹಿ ಕಸ್ಯಚಿದಾತ್ಮಾ ಭವತಿ ಪರೋಕ್ಷಃ । ಅವ್ಯವಹಿತತ್ವಾತ್ । ನ ಹಿ ಸ್ವರೂಪಮೇವ ಸ್ವಸ್ಯ ಕೇನಚಿದ್ವ್ಯವಹಿತಂ ಶಕ್ಯಂ ಕಲ್ಪಯಿತುಮ್ । ಆತ್ಮಾ ಚ ಸ್ವರೂಪಮಿತಿ ನ ಕೇನಚಿದ್ವ್ಯವಹಿತಃ । ಅತ ಏವ ಚ ನ ಪ್ರಮಾಣೈಃ ಸಿದ್ಧಿಸ್ತಸ್ಯಾಪೇಕ್ಷಿತಾ। ವ್ಯವಹಿತಪ್ರಮೇಯವಿಷಯತ್ವಾತ್

---

ಎಂಬುದು ಇಲ್ಲ. ಯಾವುದರಿಂದ ಪ್ರಮಾಣಗಳು ಸಿದ್ಧಿಯಾಗುತ್ತದೋ (ಅಂತಹ) ಪ್ರಮಾಣಗಳನ್ನು ವಿಷಯವಾಡಿಕೊಂಡ ಮತ್ತೊಂದು ಪ್ರಮಾಣಗಳೆಂಬುದಿರುವುದಿಲ್ಲ, ಹೀಗೆನ್ನಬಹುದು – ಏನೆಂದರೆ ಈ ಪ್ರಸಿದ್ಧಿ ಅಪ್ರಸಿದ್ಧಿ ಎಂಬ ವ್ಯವಹಾರವು ಪ್ರಮಾಣಕ್ಕಿಂತ ಬೇರೆಯಾದ ವಿಷಯಗಳಲ್ಲಿ ಆಗಬಹುದು. ಏಕೆಂದರೆ ಪ್ರಮಾಣಗಳು ತಾವು ಮೊದಲು ಅಪ್ರಸಿದ್ಧವಾದವು-ಗಳಾಗಿದ್ದರೆ ವಿಷಯದ ಸಿದ್ಧಿಯನ್ನು ಹೇಗೆ (ತಾನೆ) ಉಂಟುಮಾಡುವವು? (ಎನ್ನುವುದಾದರೆ), ಆಗ ಹಾಗಾದರೆ ಪ್ರಮಾಣಗಳಿಂದ ಪ್ರಸಿದ್ಧವಾಗಿಯೇ ವಿಷಯಸಿದ್ಧವಾಗಬೇಕೆಂಬುದಿಲ್ಲ ಎಂದಾಗುತ್ತದೆ. ಏಕೆಂದರೆ ಬೇರೊಂದು ರೀತಿಯಿಂದಲೂ ಪದಾರ್ಥಗಳು ಪ್ರಸಿದ್ಧಿಯಾಗಬಹುದೆಂದು ನೀನೇ ಒಪ್ಪಿರುವುದರಿಂದ. ಆಗಲಿ ಇದರಿಂದೇನಾಯಿತು ? ಎಂದರೆ – ಆಗ ಇದು ಸಿದ್ಧವಾಗುತ್ತದೆ. ಏನೆಂದರೆ – ಆತ್ಮನೂ ಪ್ರಮಾಣಗಳಿಲ್ಲದೆ ಸಿದ್ಧವಾಗುವುದಕ್ಕೆ ಏನೂ ಅಡ್ಡಿ ಇಲ್ಲವೆಂದಾಗುತ್ತದೆ. ಆತ್ಮನು ಅವ್ಯವಹಿತನಾಗಿರುವುದರಿಂದ ಯಾರಿಗೂ ಪರೋಕ್ಷನಾದವನಲ್ಲ. ತನಗೆ ತನ್ನ ಸ್ವರೂಪವೇ ಯಾವುದಾದ-ರೊಂದರಿಂದ ವ್ಯವಹಿತವಾಗಿರುತ್ತದೆ ಎಂದು ಕಲ್ಪಿಸುವುದಕ್ಕಾಗುವುದಿಲ್ಲವಷ್ಟೆ? ಆತ್ಮನೆಂಬುವನು ಸ್ವರೂಪವೇ ಎಂದಾದ್ದರಿಂದ ಅದು ಯಾವುದರಿಂದಲೂ ವ್ಯವಧಾನಗೊಂಡಿಲ್ಲ. ಆದ್ದರಿಂದಲೇ ಪ್ರಮಾಣಗಳು ಬೇರೆಯಾಗಿರುವ ಪ್ರಮೇಯವಸ್ತುವನ್ನು ವಿಷಯಮಾಡಿಕೊಂಡಿರುತ್ತವೆಯಾದ್ದರಿಂದ ಆತ್ಮನ

ಪ್ರಮಾಣಾನಾಂ । ತದೇವಮಪರೋಕ್ಷತ್ವಾದೇವ ಪ್ರತ್ಯಗಾತ್ಮಪ್ರಸಿದ್ಧಿರಿತಿ ನ ಪ್ರಸಿದ್ಧ್ಯರ್ಥಂ ತಸ್ಯ ವಿಷಯತ್ವಮಪೇಕ್ಷಿತಮ್ । ಪ್ರಸಿದ್ಧಿಶ್ಚೇದಧ್ಯಾಸೇ ಪುಷ್ಕಲಂ ಕಾರಣಂ ತರ್ಹ್ಯಪರೋಕ್ಷತ್ವಾತ್ ಪ್ರಸಿದ್ಧೇಃ, ಸಂಭವತ್ಯೇವಾತ್ಮನ್ಯನಾತ್ಮಾಧ್ಯಾಸಃ, ಅನಾತ್ಮನಿ ಚಾತ್ಮಾಧ್ಯಾಸಃ । ಪ್ರಸಿದ್ಧೇರೇವೇತಿ ॥

**೨೨. ಅಧಿಷ್ಠಾನಸ್ಯ ಪುರೋಽವಸ್ಥಿತತ್ವಮಪಿ ನ ನಿಯಮೇನಾಪೇಕ್ಷ್ಯತೇಽಧ್ಯಾಸೇ** – ಅಥ ಯದುಕ್ತಂ ಪುರೋಽವಸ್ಥಿತ ಏವ ಸರ್ವೋಽಧ್ಯಸ್ಯತಿ । ನ ಚಾಯಮಾತ್ಮಾ ಪುರೋಽವಸ್ಥಿತಃ । ಪ್ರತ್ಯಕ್ಸ್ವಭಾವತ್ವಾತ್ । ಪ್ರತ್ಯಕ್ಷಸಿದ್ಧೇ ವಾದಿವಿಪ್ರತಿಪತ್ತ್ಯಸಂಭವಾಚ್ಚ । ದೃಶ್ಯತೇ ಹಿ ವಾದಿನಾಂ ವಿಪ್ರತಿಪತ್ತಿರೇವಮಾತ್ಮಾ ನೈವಮಾತ್ಮೇತಿ । ತಸ್ಮಾನ್ನಾಯಮಾತ್ಮಾ ಪುರೋಽವಸ್ಥಿತಃ । ಅಪುರೋಽವಸ್ಥಿತಸ್ಯ ಚ ಕಥಮಪ್ಯಧ್ಯಾಸಾಧಿಷ್ಠಾನತ್ವಂ ನ ಸಂಭವತೀತಿ । ಅತ್ರೋಚ್ಯತೇ – **ನ ಚಾಯಮಸ್ತಿ ನಿಯಮಃ**

---

ಸಿದ್ಧಿಯು ಪ್ರಮಾಣಗಳ ಅಪೇಕ್ಷೆಯಿಂದ ಎಂಬುದಿಲ್ಲ. ಹೀಗೆ ಅಪರೋಕ್ಷವಾಗಿ ಪ್ರತ್ಯಗಾತ್ಮನಾಗಿ ಪ್ರಸಿದ್ಧಿಯಾಗಿರುವುದರಿಂದ ಅವನು ಪ್ರಸಿದ್ಧನಾಗುವುದಕ್ಕೆ ವಿಷಯನಾಗಿರಬೇಕೆಂಬ ನಿಯಮವಿಲ್ಲ. ಪ್ರಸಿದ್ಧಿಯಾಗಿರುವದೇ ಅಧ್ಯಾಸಕ್ಕೆ ಸಾಕಷ್ಟು ಕಾರಣವೆನ್ನುವುದಾದರೆ ಅಪರೋಕ್ಷನಾಗಿ ಪ್ರಸಿದ್ಧನಾಗಿರುವುದರಿಂದ ಆತ್ಮನಲ್ಲಿ ಅನಾತ್ಮಾಧ್ಯಾಸವು ಹೊಂದಿಯೇ ಹೊಂದುತ್ತದೆ. ಹಾಗೆಯೇ ಅನಾತ್ಮದಲ್ಲಿ ಆತ್ಮಾಧ್ಯಾಸವೂ ಸಹ ಹೊಂದುತ್ತದೆ.

**೨೨. ಅಧ್ಯಾಸ(ವಿಷಯ)ದಲ್ಲಿ ಅಧಿಷ್ಠಾನವು ಮುಂದಿರಲೇಬೇಕೆಂಬ ಏಕಾಂತವಾದ ಅಪೇಕ್ಷೆ ಇರುವುದಿಲ್ಲ** – ಮುಂದಿರುವುದರಲ್ಲಿಯೇ ಎಲ್ಲರೂ ಅಧ್ಯಾಸಮಾಡುತ್ತಾರೆಂದು, ಪೂರ್ವಪಕ್ಷಿಯು ಏನು ಹೇಳಿದ್ದನು, ಆದರೆ ಈ ಆತ್ಮನು ಒಳಗಿನ ಸ್ವಭಾವದವನಾದ್ದರಿಂದ ಮುಂದಿರುವವನಲ್ಲ. ಪ್ರತ್ಯಕ್ಷಸಿದ್ಧನಾಗಿದ್ದರೆ ವಾದಿಗಳಲ್ಲಿ ವಿಪ್ರತಿಪತ್ತಿಯೂ ಹೊಂದುತ್ತಿರುವುದಿಲ್ಲ. ಆದರೆ ವಾದಿಗಳಲ್ಲಿ ಆತ್ಮನು "ಹೀಗಿದ್ದಾನೆ", "ಹೀಗಿಲ್ಲ" ಎಂಬೀ ರೀತಿಯಾಗಿ ವಿರುದ್ಧಾಭಿಪ್ರಾಯವಿದೆ. ಆದ್ದರಿಂದ ಈತನು "ಮುಂದಿರುವವನಲ್ಲ. ಮುಂದಿಲ್ಲದ ಮೇಲೆ ಅದು ಹೇಗೆ ಅಧ್ಯಾಸಕ್ಕೆ ಅಧಿಷ್ಠಾನವಾಗುವುದೆಂಬುದು ಹೊಂದುತ್ತದೆ ? (ಎಂದು ಪೂ. ಪ. ಹಿಂದೆ ಏನು ಹೇಳಿತ್ತು) ಇದಕ್ಕೆ ಹೇಳುತ್ತೇವೆ. ಮುಂದಿರುವ ಒಂದು ವಿಷಯದಲ್ಲಿಯೇ ಮತ್ತೊಂದು

**ಪುರೋಽವಸ್ಥಿತ ಏವ ವಿಷಯೇ ವಿಷಯಾಂತರಮಧ್ಯಸಿತವ್ಯಮಿತಿ।** ವಿಷಯೇ ವಿಷಯಾಂತರಮಧ್ಯಸಿತವ್ಯಮಿತಿ ನಿಯಮಃ ಪ್ರತ್ಯುಕ್ತ ಏವಾಧಸ್ತಾತ್। ಪುರೋಽವಸ್ಥಿತ ಏವಾಧ್ಯಸಿತವ್ಯಮಿತಿ ತ್ವಧುನಾ ಪ್ರತ್ಯುಚ್ಯತೇ । ನ ಚಾಯಮಸ್ತಿ ನಿಯಮಃ । ಕಸ್ಮಾತ್ ? **ಅಪ್ರತ್ಯಕ್ಷೇಽಪಿ ಹ್ಯಾಕಾಶೇ ಬಾಲಾಸ್ತಲಮಲಿನತಾ-ದ್ಯಧ್ಯಸ್ಯಂತಿ ।** ನ ಖಲ್ವಾಕಾಶಃ ಪ್ರತ್ಯಕ್ಷಃ, ಶಬ್ದಾಧಾರತ್ವೇನಾನುಮೇಯತ್ವಾ-ಭ್ಯುಪಗಮಾತ್ । ತಸ್ಯಾಕಾಶಸ್ಯಾಽಪ್ರತ್ಯಕ್ಷತ್ವೇನ ಪ್ರತಿವಾದಿಸಂಮತಸ್ಯಾಪ್ಯ-ಧಿಷ್ಠಾನತ್ವಂ ದೃಷ್ಟಮಧ್ಯಾಸೇ । ತಸ್ಮಿನ್ ಹಿ ಬಾಲಾ ಅವಿವೇಕಿನೋಽಧ್ಯಸ್ಯಂತಿ ತಲಮ್, ತನ್ಮಲಿನತಾದಿ ಚ । ತದೇವಂ ಪ್ರಸಿದ್ಧಿಮಾತ್ರಮಪೇಕ್ಷತೇಽಧ್ಯಾಸಃ, ನ ಪುನಃ ಪುರೋಽವಸ್ಥಿತತ್ವಂ ಪ್ರಮಾಣಸಿದ್ಧತ್ವಂ ವಾ ನಿಯಮೇನ ಕಾಂಕ್ಷತೇ। ಉಪಲಕ್ಷಣಮೇತತ್ । ಅಧ್ಯಸ್ತಸ್ಯ ಪ್ರತೀತೇಃ ಸ್ವರೂಪತೋ ನಿವೃತ್ತಿಮಪಿ ನ ನಿಯತಮಪೇಕ್ಷತ ಇತಿ ದ್ರಷ್ಟವ್ಯಮ್ । ನಾಸ್ತಿ ತಲಮಾಲಿನ್ಯಾದ್ಯಾಕಾಶ

---

ವಿಷಯವನ್ನು ಅಧ್ಯಾಸಮಾಡುತ್ತಾರೆಂಬ ನಿಯಮವಿಲ್ಲ". ವಿಷಯವಾದದ್ದ-ರಲ್ಲಿಯೇ ವಿಷಯಾಂತರದ ಅಧ್ಯಾಸವಾಗಬೇಕೆಂಬ ನಿಯಮವನ್ನು ಹಿಂದೆ ತಳ್ಳಿಹಾಕಲಾಗಿದೆ. ಈಗ ಮುಂದಿರುವುದರಲ್ಲಿಯೇ ಆಗಬೇಕೆಂಬುದನ್ನು ತಳ್ಳಿಹಾಕಲಾಗುತ್ತದೆ ಎಂಬುದು ವಿಶೇಷವು. ಈ ನಿಯಮವೂ ಸರಿಯಲ್ಲ. ಏಕೆಂದರೆ – "ಪ್ರತ್ಯಕ್ಷವಲ್ಲವಾಗಿದ್ದರೂ ಆಕಾಶದಲ್ಲಿ ಹುಡುಗರು ತಲ-ಮಲಿನಾದಿಗಳನ್ನು ಹುಟ್ಟುಹಾಕುವುದು ಕಂಡು ಬಂದಿದೆ". ಶಬ್ದಾಧಾರವಾಗಿ ಅನುಮೇಯವಾದ್ದರಿಂದ ಆಕಾಶವೇನೂ ಪ್ರತ್ಯಕ್ಷವಲ್ಲ. ಪ್ರತಿವಾದಿಗೂ ಒಪ್ಪಿಗೆಯಾಗಿರುವ ಅಪ್ರತ್ಯಕ್ಷವಾದ ಆಕಾಶವು ಅಧ್ಯಾಸಕ್ಕೆ ಅಧಿಷ್ಠಾನ-ವಾಗಿರುವುದು ಕಂಡುಬಂದಿದೆ. ಆ ಆಕಾಶದಲ್ಲಿ ಅವಿವೇಕಿಗಳಾದ ಹುಡುಗರು ತಲವಿದೆ, ಅದು ಮಲಿನವಾಗಿದೆ ಎಂದು ಅಧ್ಯಾಸಮಾಡುತ್ತಾರಲ್ಲವೇ ? ಹೀಗೆ ಅಧ್ಯಾಸವು ಪ್ರಸಿದ್ಧಿಯಾಗಿರಬೇಕೆಂಬುದನ್ನು ಮಾತ್ರ ಅಪೇಕ್ಷಿಸುತ್ತದೆಯೇ ಹೊರತು, ಮುಂದಿರಲೇಬೇಕು, ಪ್ರಮಾಣಸಿದ್ಧವಾಗಿರಲೇಬೇಕು , ಎಂಬುದನ್ನೇನೂ ಬಯಸುವುದಿಲ್ಲ. ಇದನ್ನು ಉಪಲಕ್ಷಣವಾಗಿ ಹೇಳಿದ್ದೆಂದು ತಿಳಿಯಬೇಕು, ಹೇಗೆಂದರೆ – ಅಧ್ಯಸ್ತವಾದದ್ದು ತೋರಿಕೆಮಾತ್ರವಾದ್ದರಿಂದ (ಆ ತೋರಿದ ರೂಪವು) ಸ್ವರೂಪದಿಂದ ನಿವೃತ್ತಿಯಾಗಬೇಕೆಂಬುದನ್ನು ಏಕಾಂತವಾಗಿ ಅಪೇಕ್ಷಿಸುವುದಿಲ್ಲ ಎಂದು ತಿಳಿಯಬೇಕು. ಹೇಗೆಂದರೆ –

ಏವಾಯಮಿತಿ ಬಾಧದಶಾಯಾಮಪಿ ತಲಮಾಲಿನ್ಯಾದ್ಯಾಭಾಸಾನುವೃತ್ತೇರಿತಿ॥

**೨೩. ಸಂಭಾವನಾಗ್ರಂಥಸ್ಯೋಪಸಂಹಾರಃ – ಏವಮವಿರುದ್ಧಃ** ಪ್ರತ್ಯಗಾತ್ಮನ್ಯಪ್ಯನಾತ್ಮಾಧ್ಯಾಸ ಇತಿ ಪ್ರಕೃತಾಕ್ಷೇಪಸಮಾಧಾನಾ-ಗ್ರಂಥೋಪಸಂಹಾರಃ । ತದೇವಂ ಸ್ವತೋಽವಿಷಯಸ್ಯಾಪಿ ಪ್ರತ್ಯಗಾತ್ಮನಃ ಕಥಂಚಿದಸ್ಮತ್ಪ್ರತ್ಯಯವಿಷಯತ್ವಸಂಭವಾತ್, ವಿಷಯತ್ವಾಭಾವೇಽಪ್ಯ-ಪರೋಕ್ಷತ್ವಾದೇವ ಸ್ವಯಂಪ್ರಸಿದ್ಧತ್ವಾತ್, ಅಧಿಷ್ಠಾನಸ್ಯಾರೋಪ್ಯಸ್ಯ ವಾ ವಿಷಯತ್ವಸ್ಯ ಪುರೋಽವಸ್ಥಿತತ್ವಸ್ಯ ವಾ ನಿಯಮೇನಾನಪೇಕ್ಷಣಾತ್, ನಾಸಂಭಾವಿತಃ ಪ್ರತೀಚ್ಯಪ್ಯಾತ್ಮನ್ಯನಾತ್ಮನೋಽಧ್ಯಾಸ ಇತ್ಯರ್ಥಃ । ಅತ್ರಾ-ನಾತ್ಮನಃ – ಇತಿ ತದ್ಧರ್ಮಾಣಾಮಪ್ಯಧ್ಯಾಸಃ ಸಂಗ್ರಹೀತೋ ವೇದಿತವ್ಯಃ ।

---

ತಲವಾಗಲೀ ಮಾಲಿನ್ಯವಾಗಲೀ ಇಲ್ಲವೇ ಇಲ್ಲ, ಇದು ಆಕಾಶ ಮಾತ್ರವೇ ಎಂದು ಬಾಧೆಯಾದ ಕಾಲದಲ್ಲೂ ತಲಮಲಿನಾದಿಗಳ ಆಭಾಸವು ಅನುವೃತ್ತವಾಗಿರುವುದು ಕಂಡುಬರುತ್ತದೆ.

**೨೩. ಸಂಭಾವನಾಗ್ರಂಥದ ಉಪಸಂಹಾರವು** – ಹೀಗೆ ಪ್ರತ್ಯಗಾತ್ಮನಲ್ಲಿ ಅನಾತ್ಮಾಧ್ಯಾಸವು ಅವಿರುದ್ಧವಾಗಿದೆ ಎಂಬುದು ಪ್ರಕೃತವಾದ ಆಕ್ಷೇಪಸಮಾಧಾನದ ಗ್ರಂಥದ ಉಪಸಂಹಾರವು. ಹೀಗೆ ಸ್ವಭಾವದಿಂದ ಪ್ರತ್ಯಗಾತ್ಮನು ವಿಷಯನಲ್ಲವಾದರೂ, ಹೇಗೋ ನಾನೆಂಬ ಪ್ರತ್ಯಯಕ್ಕೆ ವಿಷಯನಾಗಿದ್ದಾನೆಂಬುದು ಹೊಂದುತ್ತದೆಯಾದ್ದರಿಂದಲೂ, ವಿಷಯತ್ವ-ವೆಂಬುದಿಲ್ಲವಾದರೂ ಅಪರೋಕ್ಷನಾಗಿರುವುದರಿಂದಲೂ ಸ್ವಯಂಪ್ರಸಿದ್ಧನಾಗಿ-ರುವುದರಿಂದಲೂ ಅಧಿಷ್ಠಾನವಾಗಲೀ ಆರೋಪ್ಯವಾಗಲೀ ವಿಷಯವಾಗಿರ-ಬೇಕೆಂಬುದನ್ನಾಗಲೀ ಮುಂದೆ ಇರಬೇಕೆಂಬುದನ್ನಾಗಲೀ ಏಕಾಂತವಾಗಿ ಅಪೇಕ್ಷಿಸುವುದಿಲ್ಲವಾದ್ದರಿಂದ ಒಳಗಿರುವ ಆತ್ಮನಲ್ಲೂ ಅನಾತ್ಮಾಧ್ಯಾಸವು ಹೊಂದದೇ ಇರುವುದೇನಲ್ಲ ಎಂದರ್ಥವು. ಇಲ್ಲಿ "ಅನಾತ್ಮದರ" ಎಂದು (ಹೇಳುತ್ತಾ) ಅದರ ಧರ್ಮಗಳ ಅಧ್ಯಾಸವನ್ನೂ ಸೇರಿಸಿಕೊಂಡಿದೆ ಎಂದು ತಿಳಿಯಬೇಕು. ಅನಾತ್ಮದಲ್ಲಿ ಆತ್ಮನ ಮತ್ತು ಅದರ ಧರ್ಮದ ಅಧ್ಯಾಸವೂ ಅವಿರುದ್ಧವಾದದ್ದು ಎಂಬುದಕ್ಕೆ ಉಪಲಕ್ಷಣವಾಗಿ ಹೇಳಿದ್ದೆಂದು ತಿಳಿಯಬೇಕು.

ಉಪಲಕ್ಷಣಂ ಚೈತತ್ । ಅನಾತ್ಮನ್ಯಾತ್ಮತದ್ಧರ್ಮಾಣಾಮಪ್ಯಧ್ಯಾಸೋಽ-ವಿರುದ್ಧ ಇತ್ಯಪಿ ದ್ರಷ್ಟವ್ಯಮ್ । "ಅವಿರುದ್ಧಃ" ಇತ್ಯನೇನೇದಂ ಸೂಚಿತಮ್ – ಸಂಭಾವನಾರ್ಥಮೇವೇದಮಾಕ್ಷೇಪಪರಿಹರಣಮಸ್ಮಾಭಿಃ ಕೃತಮ್ । ನ ತ್ವಯಮಾಕ್ಷೇಪೋ ಯುಕ್ತಃ, ದೃಷ್ಟತ್ವಾಲ್ಲೋಕೇಽಧ್ಯಾಸಪೂರ್ವಕಸ್ಯ ವ್ಯವಹಾರಸ್ಯ । ನ ಚ ದೃಷ್ಟೇಽನುಪಪನ್ನಂ ನಾಮೇತಿ ॥

---

"ಅವಿರುದ್ಧವಾಗಿದೆ" ಎಂಬುದರಿಂದ ಇದು ಸೂಚಿತವಾಗಿದೆ ಎಂದು ತಿಳಿಯಬೇಕು – ಯಾವುದೆಂದರೆ – ಸಂಭಾವನೆಗೋಸ್ಕರವಾಗಿಯೇ (ಆಗಿರಬಹುದು ಎಂದು ತಿಳಿಸುವುದಕ್ಕಾಗಿಯೇ) ಈ ಆಕ್ಷೇಪಪರಿಹಾರವನ್ನು ನಾವು ಮಾಡಿರುತ್ತೇವೆಯೇ ಹೊರತು ಇದು (ನಿಜವಾಗಿ) ಸರಿಯಲ್ಲ. ಏಕೆಂದರೆ ಅಧ್ಯಾಸಪೂರ್ವಕವಾಗಿಯೇ ವ್ಯವಹಾರವಾಗಿರುತ್ತದೆ ಎಂಬುದು (ಲೌಕಿಕಾನು-ಭವದಲ್ಲೇ) ಕಂಡುಬಿಟ್ಟಿದೆ. (ಅನುಭವದಲ್ಲಿ) ಕಂಡವೇಲೂ ಹೊಂದುವುದಿಲ್ಲವಲ್ಲ ಎಂಬುದು ಸರಿಯಲ್ಲ ಎಂದು ಭಾವ.

**********

## ೪. ಅಥ ವಿದ್ಯಾವಿದ್ಯಾವಿವೇಕಭಾಷ್ಯಮ್

**ತಮೇತಮೇವಂಲಕ್ಷಣಮಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ । ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಮಾಹುಃ । ತತ್ರೈವಂ ಸತಿ ಯತ್ರ ಯದಧ್ಯಾಸಸ್ತತ್ಕೃತೇನ ದೋಷೇಣ ಗುಣೇನ ವಾಣುಮಾತ್ರೇಣಾಪಿ ಸ ನ ಸಂಬಧ್ಯತೇ ॥**

**೨೪. ಆತ್ಮಾನಾತ್ಮಾಧ್ಯಾಸ ಏವಾವಿದ್ಯಾ** – ನನು ಶಾಸ್ತ್ರಕಾರೇಣ ತಾವತ್ "ಅಥಾತೋ ಬ್ರಹ್ಮಜಿಜ್ಞಾಸಾ" ಇತಿ ಬ್ರಹ್ಮಜ್ಞಾನಾಯ ವಿಚಾರಃ ಕರ್ತವ್ಯತಯೋಪನ್ಯಸ್ತಃ । ಶಾಸ್ತ್ರಸ್ಯ ಚಾಸ್ಯ ವೇದಾಂತಮೀಮಾಂಸಾರೂಪತ್ವಾತ್, ವೇದಾಂತೇಷು ಚ "ಬ್ರಹ್ಮವಿದಾಪ್ನೋತಿ ಪರಮ್" (ತೈ. ೨–೧), "ತರತಿ ಶೋಕಮಾತ್ಮವಿತ್" (ಛಾಂ ೭–೧–೩) ಇತ್ಯಾದಿಷು ಬ್ರಹ್ಮವಿದ್ಯಾಯಾ ಏವ

---

## ೪. ಇನ್ನು ವಿದ್ಯಾವಿದ್ಯೆಗಳ ವಿಂಗಡದ ಭಾಷ್ಯವು

ಆ ಈ ಲಕ್ಷಣದ ಅಧ್ಯಾಸವನ್ನು ಪಂಡಿತರು **ಅವಿದ್ಯೆ** ಎಂದು ಕರೆಯುತ್ತಾರೆ. ಅವುಗಳ ವಿವೇಕದಿಂದ ವಸ್ತುಸ್ವರೂಪವನ್ನು ಗೊತ್ತುಮಾಡುವುದನ್ನು **ವಿದ್ಯೆ** ಎನ್ನುವರು. ಹೀಗಿರಲಾಗಿ ಎಲ್ಲಿ ಯಾವುದನ್ನು ಏನೆಂದು ಅಧ್ಯಾಸ-ಮಾಡುತ್ತಾರೋ ಅದರಿಂದಾದ ದೋಷದಿಂದಲಾಗಲೀ ಗುಣದಿಂದಲಾಗಲೀ ಅಣು ಮಾತ್ರದಿಂದಲೂ ಅದು ಸಂಭಂಧಪಟ್ಟಿರುವುದಿಲ್ಲ.

**೨೪. ಆತ್ಮಾನಾತ್ಮರುಗಳ ಅಧ್ಯಾಸವೇ ಅವಿದ್ಯೆಯು** – ಶಾಸ್ತ್ರಕಾರರಾದ (ಬಾದರಾಯಣರು) ಅಥಾತೋ ಬ್ರಹ್ಮಜಿಜ್ಞಾಸಾ (ಇನ್ನು ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು)ಎಂದು ಬ್ರಹ್ಮಜ್ಞಾನಕ್ಕಾಗಿ ವಿಚಾರವನ್ನು ಮಾಡಬೇಕೆಂದು ಹೇಳಿರುತ್ತಾರಲ್ಲವೆ ? ಈ ಶಾಸ್ತ್ರವಾದರೋ ವೇದಾಂತ (ವಾಕ್ಯಗಳ) ವಿಚಾರರೂಪವಾಗಿರುವುದರಿಂದ ಉಪನಿಷತ್ತುಗಳಲ್ಲಿ ಬ್ರಹ್ಮವನ್ನು ತಿಳಿದವನು ಹೆಚ್ಚಿನ ಪುರುಷಾರ್ಥವನ್ನು ಹೊಂದುವನು (ತೈ. ೨–೧), "ಆತ್ಮನನ್ನು ತಿಳಿದವನು ಶೋಕವನ್ನು ದಾಟುವನು", (ಛಾಂ. ೭–೧–೩) ಇದೇ ಮೊದಲಾದ ಸ್ಥಳದಲ್ಲಿ ಬ್ರಹ್ಮವಿದ್ಯೆಯೇ ಪುರುಷಾರ್ಥಕ್ಕೆ ಹೇತುವೆಂದು

ಪುರುಷಾರ್ಥಹೇತುತ್ವಕಥನಾತ್, ಸೈವ ಬ್ರಹ್ಮವಿದ್ಯಾ ಪ್ರದರ್ಶಯಿತವ್ಯಾ ಭಾಷ್ಯಕಾರೇಣಾಪಿ । ತದತ್ರ ಪ್ರಸಕ್ತಂ ವಿದ್ಯಾಪ್ರತಿಪಾದನಂ ವಿಹಾಯ ಕಿಮಿದಮಪ್ರಸಕ್ತಮ್ ಅಧ್ಯಾಸಸ್ಯ ಲಕ್ಷಣಸಂಭಾವನಾದಿನಿರೂಪಣಮಿತಿ ಚೇತ್। ನೈಷ ದೋಷಃ । ಅಧ್ಯಾಸನಿರೂಪಣಸ್ಯೈವ ಪ್ರಸಕ್ತತರತ್ವಾತ್ । ಕಥಮ್ ? ಬ್ರಹ್ಮವಿದ್ಯಾಯಾಃ ಪುರುಷಾರ್ಥಹೇತುತ್ವಂ ತದೈವ ಹಿ ಸಂಗಚ್ಛತೇ ಯದಾ ಅವಿದ್ಯಾಮಾತ್ರವ್ಯವಹಿತಃ ಪುರುಷಾರ್ಥಃ । ಸಾ ಚಾವಿದ್ಯಾ ಭಾಷ್ಯೋಪವರ್ಣಿತಾಧ್ಯಾಸಮಾತ್ರಶರೀರಾ । ಯದಿ ಪುನರ್ವಾಸ್ತವ ಏವ ಕಶ್ಚಿದ್ಬಂಧೋ ನಾಮ, ತದ್ಧೇತುಭೂತಾ ವಾಽವಿದ್ಯಾ ಯಥಾವರ್ಣಿತಾಧ್ಯಾಸವ್ಯತಿರಿಕ್ತಾ, ತತೋ ನೈವ ಪ್ರತ್ಯಾಶಾ ವಿದ್ಯಾಮಾತ್ರೇಣ ಬಂಧನಾಶಸ್ಯ । ನ ಹಿ ವಸ್ತುಕೃತಂ ಬಂಧಂ ವಿದ್ಯಾ ನಾಶಯಿತುಮಲಮ್ । ಅವಿದ್ಯಾಮಾತ್ರವಿನಾಶನಸಮರ್ಥತ್ವಾತ್ ತಸ್ಯಾಃ । ತಸ್ಮಾತ್ಪ್ರಸಕ್ತತರಮೇವೇದಮವಿದ್ಯಾಯಾ ಬ್ರಹ್ಮವಿದ್ಯಾ-

---

ಹೇಳಿರುವದರಿಂದ ಭಾಷ್ಯಕಾರರೂ ಅದನ್ನೇ ಅಲ್ಲವೆ ತೋರಿಸಬೇಕಾಗಿರುವದು ? ಆದ್ದರಿಂದ ಪ್ರಕೃತವಾದ ವಿದ್ಯೆಯನ್ನು ತಿಳಿಸುವದನ್ನು ಬಿಟ್ಟು ಅಪ್ರಕೃತವಾದ ಅಧ್ಯಾಸದ ಲಕ್ಷಣ, ಅದಕ್ಕೆ ಸಂಭಾವನಾಯುಕ್ತಿ ಮುಂತಾದ ನಿರೂಪಣೆ ಮಾಡಿರುತ್ತಾರಲ್ಲಾ ! ಇದೇನು ? (ಸರಿಯೇ?) ಎಂದರೆ ಇದೇನು ದೋಷವಲ್ಲ. (ಇಲ್ಲಿ) ಅಧ್ಯಾಸವನ್ನು ನಿರೂಪಣೆಮಾಡಿರುವುದೇ ಹೆಚ್ಚು ಹೊಂದುಗಡೆಯಾದದ್ದಾಗಿರುತ್ತದೆ. ಹೇಗೆಂದರೆ – ಪುರುಷಾರ್ಥಕ್ಕೆ ಯಾವಾಗ ಅವಿದ್ಯಾಮಾತ್ರವಷ್ಟೆ ಅಡ್ಡಿಯಾಗಿದೆ ಎಂದು (ತೀರ್ಮಾನವಾಗುತ್ತದೋ) ಆಗಲೇ ಬ್ರಹ್ಮವಿದ್ಯೆಯು ಪುರುಷಾರ್ಥಕ್ಕೆ ಕಾರಣವಾದದ್ದೆಂದು ತೀರ್ಮಾನವಾಗುತ್ತದೆ. ಆ ಅವಿದ್ಯೆಯು ಭಾಷ್ಯದಲ್ಲಿ ವರ್ಣನೆಮಾಡಿದ ಅಧ್ಯಾಸಮಾತ್ರಸ್ವರೂಪದ್ದಾಗಿರುತ್ತದೆ. ಒಂದು ವೇಳೆ ನಿಜವಾಗಿಯೇ ಒಂದಾನೊಂದು ಬಂಧವಿದೆ ಎಂದಾದರೆ, ಅದಕ್ಕೆ ಕಾರಣವಾಗಿ ನಾವು ವರ್ಣನೆ ಮಾಡಿದ ಅಧ್ಯಾಸಕ್ಕಿಂತ ಬೇರೆಯಾದ ಅವಿದ್ಯೆಯೆಂಬುದು (ನಿಜವಾಗಿದೆ) ಎಂದಾದರೆ ಆಗ ವಿದ್ಯಾಮಾತ್ರದಿಂದ ಬಂಧನವು ನಿವೃತ್ತಿಯಾಗುತ್ತದೆ ಎಂಬ ಆಸೆಯನ್ನು ಬಿಟ್ಟರಾಯಿತು ! ನಿಜವಾಗಿ ಆದ ಬಂಧವನ್ನು ವಿದ್ಯೆಯು ನಾಶಪಡಿಸುವುದಕ್ಕೆ ಸಮರ್ಥವಲ್ಲವಷ್ಟೆ ! ಅದಕ್ಕೆ ಅವಿದ್ಯೆಯೊಂದನ್ನು ಮಾತ್ರ ನಾಶಪಡಿಸುವ ಸಾಮರ್ಥ್ಯವು ಕಂಡುಬಂದಿದೆ. ಆದ್ದರಿಂದ ಈ ಅವಿದ್ಯೆಯನ್ನು ಅಧ್ಯಾಸಮಾತ್ರ-

ನಿಬರ್ಹಣೀಯತ್ವೋಪಪಾದನಾರ್ಥಮಧ್ಯಾಸಮಾತ್ರಶರೀರತ್ವೇನೋಪ-ವರ್ಣನಮ್॥

ತದೇತದಾಹ – **ತಮೇತಮೇವಂಲಕ್ಷಣಮಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತ** ಇತಿ । ತಮ್ ನೈಸರ್ಗಿಕೋಽಯಂ ಲೋಕವ್ಯವಹಾರ ಇತ್ಯಂತೇನ ಗ್ರಂಥೇನ ಪ್ರತಿಜ್ಞಾತಮ್, ಏತಮ್ ಅತಂಸ್ಮಿಸ್ತದ್ಬುದ್ಧಿತ್ವೇನ ಪ್ರದರ್ಶಿತಸಾಮಾನ್ಯಲಕ್ಷಣಮ್, ಶಂಕಾಪರಿಹಾರಪುರಸ್ಸರಂ ಚ ಕೃತ-ಸಂಭಾವನಮ್ ಅಧ್ಯಾಸಂ, ಪಂಡಿತಾ ಜ್ಞಾನಿನೋ ವೇದಾಂತಾಭಿಯುಕ್ತಾ ಅವಿದ್ಯೇತಿ ಮನ್ಯಂತೇ । "ಅವಿದ್ಯಾಯಾಮಂತರೇ ವರ್ತಮಾನಾಃ" (ಮುಂ. ೧–೨–೮) ಇತ್ಯಾದಿಷು ವೇದಾಂತೇಷು ಪರಾಮೃಷ್ಟಾ ಯಾ ಅವಿದ್ಯಾ ಸೈವಾತ್ರಾಧ್ಯಾಸತ್ವೇನ ವ್ಯಾಖ್ಯಾತಾಸ್ಮಾಭಿಃ ನ ತು ಕ್ವಚಿದಪಿ ವೇದಾಂತ-ನಯೇ ಅಸ್ಮಾದಧ್ಯಾಸಾದ್ವಿಲಕ್ಷಣಾ ಕಾಚಿದನ್ಯಾಽವಿದ್ಯಾ ಬ್ರಹ್ಮವಿದ್ಯಾ-ವಿನಾಶ್ಯಾಽಭ್ಯುಪಗತಾಽಸ್ತೀತಿ ಭಾವಃ ॥

---

ಸ್ವರೂಪದ್ದೆಂದು ವರ್ಣನೆ ಮಾಡಿರುವುದು ಬ್ರಹ್ಮವಿದ್ಯೆಯಿಂದ ಕಳೆಯ-ಬೇಕಾಗಿದೆ ಎಂದು ತಿಳಿಸುವುದಕ್ಕಾಗಿ ಎಂಬುದು ಹೆಚ್ಚು ಯುಕ್ತವೇ ಆಗಿದೆ.

ಅದನ್ನೇ ಹೇಳುತ್ತಾರೆ – "ಈ ರೀತಿಯದಾದ ಲಕ್ಷಣವನ್ನುಳ್ಳ ಅಧ್ಯಾಸವನ್ನು ಪಂಡಿತರು ಅವಿದ್ಯೆ ಎಂದು ಕರೆಯುತ್ತಾರೆ". (ಭಾಷ್ಯದ) ತಂ ಎಂದರೆ ಈ ವ್ಯವಹಾರವು ಸ್ವಾಭಾವಿಕವಾಗಿದೆ ಎಂಬವರೆಗಿನ ಗ್ರಂಥದಿಂದ ಪ್ರತಿಜ್ಞೆ-ಮಾಡಿದ್ದನ್ನು, "ಏತಂ" ಎಂಬುದು ಅದಲ್ಲದ್ದರಲ್ಲಿ ಅದೆಂಬ ಬುದ್ಧಿ ಎಂಬ ಸಾಮಾನ್ಯಲಕ್ಷಣವನ್ನು, ಮತ್ತು ಶಂಕಾಪರಿಹಾರವನ್ನು ಮುಂದುಮಾಡಿಕೊಂಡು ಸಂಭಾವನೆಮಾಡಿದ್ದಾದ (ಇದಿಷ್ಟೂ) ಅಧ್ಯಾಸವನ್ನು ವೇದಾಂತದಲ್ಲಿ ಅಭಿಯುಕ್ತರಾದ ಜ್ಞಾನಿಗಳು ಅವಿದ್ಯೆ ಎಂದು ಹೇಳುತ್ತಾರೆ. ಅವಿದ್ಯೆಯ ನಡುವೆಯಲ್ಲಿ ಇದ್ದುಗೊಂಡವರಾಗಿ (ಮು. ೧–೨–೮) ಎಂದು ಮುಂತಾದ ವೇದಾಂತಗಳಲ್ಲಿ ಯಾವ ಅವಿದ್ಯೆಯು ಪರಾಮರ್ಶಿಸಲ್ಪಟ್ಟಿದೆಯೋ ಅದನ್ನೇ ಅಧ್ಯಾಸವೆಂದು ನಾವು ವ್ಯಾಖ್ಯಾನವನ್ನು ಮಾಡುರುತ್ತೇವೆ. (ಇಡೀ) ವೇದಾಂತಶಾಸ್ತ್ರದಲ್ಲಿ ನಾವು (ಈವರೆಗೆ) ವ್ಯಾಖ್ಯಾನಮಾಡಿದ್ದಾದ ಅಧ್ಯಾಸಕ್ಕಿಂತ ವಿಲಕ್ಷಣವಾದ ಒಂದಾನೊಂದು "ಅವಿದ್ಯೆ" ಇದೆ ಎಂದಾಗಲೀ ಅದೇ ಬ್ರಹ್ಮವಿದ್ಯೆಯಿಂದ ಹೋಗುವುದೆಂದು ಒಪ್ಪಿರುವುದಾಗಲೀ ಇಲ್ಲವೆಂದು ಭಾವ.

**೨೫. ಅಧ್ಯಾಸೇऽವಿದ್ಯಾಶಬ್ದಪ್ರವೃತ್ತಿನಿಮಿತ್ತಮ್ । ತತ್ರೈಕೀಯ-ಮತೋಪನ್ಯಾಸಃ** – ಕಸ್ಮಾತ್ಪುನರೇತಮಧ್ಯಾಸಮವಿದ್ಯೇತಿ ಮನ್ಯಂತೇ ಪಂಡಿತಾಃ ? ಅವಿದ್ಯಾಕಾರ್ಯತ್ವಾದಿತಿ ಕೇಚಿತ್ । ಕಾ ಪುನರಸಾವವಿದ್ಯಾ ನಾಮ ? ಇಯಮೇವ ಯಾ ಚಿನ್ಮಾತ್ರಾಶ್ರಯವಿಷಯಾ ಜಡಾತ್ಮಿಕಾ ಅವಿದ್ಯಾಶಕ್ತಿಃ। ಸಾ ಹಿ ಜಡವಸ್ತುರೂಪೇಣೋಪವರ್ಣಿತಾಧ್ಯಾಸರೂಪೇಣ ಚ ಪರಿಣಮತೇ। ಅತ ಏವ ಹಿ ಸಾ ಕಾರಣಾವಿದ್ಯಾ, ಮೂಲಾವಿದ್ಯಾ, ಇತ್ಯಾದಿಭಿರ್ನಾಮಭಿ-ರುಪಚರ್ಯತೇ । ಅಥ ಭಾಷ್ಯಕಾರೇಣ ಕಿಮಿತಿ ತಾಂ ತ್ಯಕ್ತ್ವಾ ಕಾರ್ಯಾವಿದ್ಯಾಭಿಧಾನೀಯಕೋऽಧ್ಯಾಸ ಏವ ವರ್ಣಿತ ಇತಿ ಚೇತ್। ಮೂಲಾವಿದ್ಯಾಯಾಃ ಸುಷುಪ್ತಾದಾವನರ್ಥಕಾರಿತ್ವಾದರ್ಶನಾತ್ ಕಾರ್ಯಾವಿದ್ಯಾರೂಪೇಣ ಪರಿಣತ್ಯೈವ ಸಾನರ್ಥಕಾರಿಣೀತಿ ಜ್ಞಾಪನಾರ್ಥ-ಮಿತಿ ಬ್ರೂಮಃ । ವಕ್ಷ್ಯತಿ ಹಿ "ಅಸ್ಯಾನರ್ಥಹೇತೋಃ ಪ್ರಹಾಣಾಯ" ಇತ್ಯಾದಿ। ಅತೋऽಧ್ಯಾಸೋऽವಿದ್ಯಾಕಾರ್ಯತ್ವಾದವಿದ್ಯೇತಿ ॥ (ಪಂ.ಪಾ, ರ.ಪ್ರಾ.)

---

**೨೫. ಅಧ್ಯಾಸದ ವಿಷಯಕ್ಕೆ "ಅವಿದ್ಯೆ" ಎಂಬ ಶಬ್ದವು ಬಂದಿರುವುದಕ್ಕೆ ಕಾರಣವು – ಇಲ್ಲಿ ಕೆಲವರ ಪಕ್ಷವು (ಹೀಗಿದೆ)** – ಈ ಅಧ್ಯಾಸವನ್ನೇ ಅವಿದ್ಯೆ ಎಂದು ಪಂಡಿತರು ಏತಕ್ಕೆ ತಿಳಿದಿರುತ್ತಾರೆ ? ಎಂದರೆ ಅದು ಅವಿದ್ಯೆಯ ಕಾರ್ಯವಾದ್ದರಿಂದ ಎಂದು ಕೆಲವರು (ಹೇಳುತ್ತಾರೆ). ಈ ಅವಿದ್ಯೆ ಎಂದರೇನು? ಎಂದರೆ ಯಾವುದು ಚಿನ್ಮಾತ್ರವನ್ನು ಆಶ್ರಯಿಸಿದ್ದಾಗಿಯೂ ವಿಷಯೀಕರಿಸಿದ್ದಾಗಿಯೂ ಆ ಜಡಸ್ವರೂಪವಾದ ಅವಿದ್ಯಾಶಕ್ತಿಯೇ ಇದು ಎನ್ನುವರು. ಅದು ಜಡಸ್ವರೂಪದಿಂದಲೂ ಮೇಲೆ ವರ್ಣಿಸಿದ ಅಧ್ಯಾಸರೂಪದಿಂದಲೂ ಪರಿಣಾಮಗೊಳ್ಳುವುದಂತೆ ! ಆದ್ದರಿಂದಲೇ ಅದನ್ನು "ಕಾರಣಾವಿದ್ಯಾ", "ಮೂಲಾವಿದ್ಯಾ" ಎಂಬಿದೇ ಮೊದಲಾದ ಹೆಸರುಗಳಿಂದ ಕರೆಯಲಾಗಿದೆ. ಆದರೆ ಭಾಷ್ಯಕಾರರು ಏತಕ್ಕೆ ಅದನ್ನು ಬಿಟ್ಟು ಕಾರ್ಯಾವಿದ್ಯೆ ಎಂದೆನಿಸಿಕೊಂಡ ಅಧ್ಯಾಸವನ್ನೇ ವರ್ಣನೆಮಾಡಿರುತ್ತಾರೆ ? ಎಂದರೆ ಮೂಲಾವಿದ್ಯೆಯು ಸುಷುಪ್ತಿಯೇ ಮುಂತಾದ ಅವಸ್ಥೆಯಲ್ಲಿ ಅನರ್ಥವನ್ನು ಮಾಡುತ್ತದೆ ಎಂಬುದಿಲ್ಲವಾದ್ದರಿಂದಲೂ ಅದು ಕಾರ್ಯಾವಿದ್ಯಾರೂಪವಾಗಿ ಪರಿಣಾಮಗೊಂಡಾಗಲೇ ಅನರ್ಥಕಾರಿಯಾಗಿರುವುದರಿಂದ – ಎಂದು ಹೇಳುವರು. ಮುಂದೆ ("ಅಸ್ಯಾನರ್ಥಹೇತೋಃ ಪ್ರಹಾಣಾಯ") ಅನರ್ಥಕ್ಕೆ ಕಾರಣವಾ ಇದರ (ಅಧ್ಯಾಸದ) ನಾಶಕ್ಕಾಗಿ ಎಂದು ಹೇಳುವವರಾಗಿದ್ದಾರೆ !

**೨೬. ಉಕ್ತಮತನಿರಾಕರಣಮ್** – ತದಸತ್ । ಕಾರಣಾವಿದ್ಯಾಯಾ ಅಪ್ರಕೃತತ್ವಾತ್ । ತಸ್ಯಾಃ ಪರಿಣಾಮಸ್ಯ ಚ ಪ್ರತ್ಯಾಖ್ಯಾತತ್ವಾತ್ । ಯತ್ತೂಚ್ಯತೇ – ಅಧ್ಯಾಸರೂಪಾವಿದ್ಯಾಯಾ ಅನರ್ಥಕಾರಿತ್ವಮಿತಿ, ತದಂಗೀ-ಕ್ರಿಯತೇ । ಭಾಷ್ಯಕಾರೇಣ ತಥಾ ವಕ್ಷ್ಯಮಾಣತ್ವಾತ್ । ಯತ್ಪುನಃ ಕಾರಣಾವಿದ್ಯಾ ಸುಷುಪ್ತೌ ಸತ್ಯಪಿ ನಾನರ್ಥಕಾರಿಣೀತ್ಯತೋ ಭಾಷ್ಯಕಾರೇಣ ನಾತ್ರ ವರ್ಣಿತೇತಿ । ತನ್ನ ಕ್ಷಮ್ಯತೇ । ಏತಾದೃಶ್ಯಾಃ ಕಾರಣಾವಿದ್ಯಾಯಾಃ ಕುತ್ರಾಪಿ ಭಾಷ್ಯೇ ಸ್ವೀಕಾರಾಭಾವಾತ್ । ನನು "ಪ್ರಾಜ್ಞಃ ಕಾರಣಬದ್ಧಸ್ತು" (ಮಾಂ. ಕಾ. ೧-೧೧) ಇತಿ ಕಾರಿಕಾಯಾಂ **ಶ್ರೀಗೌಡಪಾದೈಃ** ಕಾರಣಾವಿದ್ಯಾ ನಿರ್ದಿಷ್ಟಾ । ತದ್ಭಾಷ್ಯೇ ಚ "ತತ್ತ್ವಾಗ್ರಹಣಾನ್ಯಥಾಗ್ರಹಣಾಭ್ಯಾಂ ಬೀಜಫಲಭಾವಾಭ್ಯಾಂ ತೌ ಯಥೋಕ್ತೌ ವಿಶ್ವತೈಜಸೌ ಬದ್ಧೌ ಸಂಗ್ರಹೀತಾ-ವಿಷ್ಯೇತೇ । ಪ್ರಾಜ್ಞಸ್ತು ಬೀಜಭಾವೇನೈವ ಬದ್ಧಃ" ಇತಿ । ತತ್ಕಥಮುಚ್ಯತೇ

---

ಆದ್ದರಿಂದ ಅಧ್ಯಾಸವು ಅವಿದ್ಯಾಕಾರ್ಯವಾದ್ದರಿಂದ ಅವಿದ್ಯೆ ಎಂದು ಕರೆದಿದೆ! ಎನ್ನುವರು. (ಪಂ.ಪಾ, ರ.ಪ್ರಾ).

**೨೬. ಈ ಮೇಲೆ ಹೇಳಿದ ಮತದ ನಿರಾಕರಣೆಯು** – ಇದು ಸರಿಯಲ್ಲ. ಕಾರಣಾವಿದ್ಯೆಯು ಪ್ರಕೃತವಾಗಿಯೇ ಇಲ್ಲ. "ಅದರ ಪರಿಣಾಮವು" ಎಂಬುದನ್ನೂ ತಿರಸ್ಕರಿಸಿದ್ದಾಗಿದೆ. ಅಧ್ಯಾಸರೂಪವಾದ ಅವಿದ್ಯೆಯೋ ಅನರ್ಥಕಾರಿ ಎಂದು ಏನು ಹೇಳುವಿರಿ ಅದನ್ನು ಒಪ್ಪಿಕೊಳ್ಳುವೆವು. ಹಾಗೆಯೇ ಭಾಷ್ಯಕಾರರು ಹೇಳಿಯೂ ಇರುತ್ತಾರೆ. ಇನ್ನೇನು ಕಾರಣಾವಿದ್ಯೆ ಎಂಬುದು ಸುಷುಪ್ತಿಯಲ್ಲಿದ್ದರೂ ಅನರ್ಥಕಾರಿಯಲ್ಲವಾದ್ದರಿಂದ ಭಾಷ್ಯಕಾರರು ವರ್ಣಿಸಿಲ್ಲ ಎಂದು ಏನು ಹೇಳಿರುತ್ತೀರಿ, ಇದನ್ನು ಮಾತ್ರ ಸಹಿಸಲಾಗುವುದಿಲ್ಲ. ಈ ತರಹದ್ದಾದ ಕಾರಣಾವಿದ್ಯೆಯನ್ನು ಎಲ್ಲೂ ಭಾಷ್ಯದಲ್ಲಿ ಸ್ವೀಕರಿಸಿಲ್ಲ.("ಪ್ರಾಜ್ಞಃ ಕಾರಣಬದ್ಧಸ್ತು (ಮಾ.ಕಾ.೧-೧೧))" ಪ್ರಾಜ್ಞನು ಕಾರಣಾ(ವಿದ್ಯೆಯಿಂದ)ಬದ್ಧನಾಗಿರುವನು ಎಂದು ಗೌಡಪಾದಾಚಾರ್ಯರು ಕಾರಣಾವಿದ್ಯೆಯನ್ನು ಹೇಳಿದ್ದಾರಲ್ಲಾ! ಅದರ ಭಾಷ್ಯದಲ್ಲೂ "ಬೀಜ ಮತ್ತು ಫಲರೂಪವಾಗಿರುವ ತತ್ತ್ವವನ್ನು ಅರಿಯದಿರುವುದು, ತತ್ತ್ವವನ್ನು ತಪ್ಪಾಗಿ ಅರಿಯುವುದು ಎಂಬಿವುಗಳಿಂದ ವಿಶ್ವತೈಜಸರು ಬದ್ಧರಾಗಿರುವರು ಎಂಬುದು ಇಷ್ಟವಾಗಿದೆ. ಪ್ರಾಜ್ಞನಾದರೋ ಬೀಜಭಾವದಿಂದ ಮಾತ್ರ ಬದ್ಧನು" ಎಂದು

ಕಾರಣಾವಿದ್ಯಾಯಾಃ ಕುತ್ರಾಪಿ ಭಾಷ್ಯೇ ಸ್ವೀಕಾರಾಭಾವ ಇತಿ ? ನೈಷ ದೋಷಃ । "ಅಗ್ರಹಣಮ್" ಇತಿ ಭಾಷ್ಯೋಕ್ತಸ್ಯ ತ್ವದಭ್ಯೂಹಿತಾಧ್ಯಾಸೋಪಾದಾನಾರ್ಥಕತ್ವೇ ಮಾನಾಭಾವಾತ್ । ತತ್ರೈವ ಚ **ಕಾರಿಕಾಯಾಂ** "ದ್ವೈತಸ್ಯಾಗ್ರಹಣಂ ತುಲ್ಯಮುಭಯೋಃ ಪ್ರಾಜ್ಞತುರ್ಯಯೋಃ" (ಮಾಂ. ಕಾ. ೧–೧೩) ಇತ್ಯಗ್ರಹಣಶಬ್ದಸ್ಯ ಗ್ರಹಣಾಭಾವೇ ಪ್ರತ್ಯುಕ್ತತ್ವಾತ್ । "ಅನ್ಯಥಾ ಗೃಹ್ಣತಃ ಸ್ವಪ್ನೋ ನಿದ್ರಾ ತತ್ತ್ವಮಜಾನತಃ । ವಿಪರ್ಯಾಸೇ ತಯೋಃ ಕ್ಷೀಣೇ ತುರೀಯಂ ಪದಮಶ್ನುತೇ"॥ (ಮಾಂ. ಕಾ. ೧–೧೫) ಇತಿ ಚಾಜ್ಞಾನಸ್ಯ ವಿಪರ್ಯಾಸಮಾತ್ರತ್ವೇನ ವರ್ಣನಾಚ್ಚ । **ಭಾಷ್ಯೇಽಪಿ** "ತತ್ತ್ವಾಪ್ರತಿಬೋಧಮಾತ್ರಮೇವ ಹಿ ಬೀಜಂ ಪ್ರಾಜ್ಞತ್ವೇ ನಿಮಿತ್ತಮ್" (ಮಾಂ.ಕಾ.ಭಾ. ೧–೧೧) ಇತಿ ಕಾರಣಬಂಧಸ್ಯಾಪ್ರತಿಬೋಧಸ್ಯ ನಿಮಿತ್ತಮಾತ್ರತ್ವೇನೋಪವರ್ಣನಾದಧ್ಯಾಸೋಪಾದಾನಾವಿದ್ಯಾಯಾ ನೈವಾತ್ರಾವಕಾಶ ಇತಿ ಸ್ಫುಟತ್ವಾತ್ । ತಸ್ಮಾತ್ ಸಮ್ಯಗೇವೋಕ್ತಂ ಕಾರಣಾವಿದ್ಯಾ ಭಾಷ್ಯೇ ಕ್ವಚಿದಪಿ

---

ಹೇಳಿದೆ. ಹೀಗಿರುವಾಗ ಆ "ಕಾರಣಾವಿದ್ಯೆಯು ಭಾಷ್ಯದಲ್ಲಿ ಎಲ್ಲೂ ಇಲ್ಲ ಎಂದು ಹೇಗೆ ಹೇಳುವಿರಿ?" ಎಂದರೆ ಇದೇನು ತಪ್ಪಲ್ಲ, ಏಕೆಂದರೆ ಇಲ್ಲಿರುವ ಅಗ್ರಹಣ ಎಂಬ ಪದದಿಂದ ನೀನು ಊಹೆಮಾಡಿದ್ದಾದ ಅಧ್ಯಾಸಕ್ಕೆ ಕಾರಣವಾದ(ಮೂಲಾವಿದ್ಯೆಯನ್ನು) ಹೇಳಿದೆ ಎಂಬುದಕ್ಕೆ ಪ್ರಮಾಣವಿಲ್ಲ. ಏಕೆಂದರೆ ಅಲ್ಲೇ ಕಾರಿಕೆಯಲ್ಲಿ ತುರೀಯನಿಗೂ ಪ್ರಾಜ್ಞನಿಗೂ ದ್ವೈತವನ್ನರಿಯದಿರುವುದೆಂಬ ಅಗ್ರಹಣವು ಸಮಾನವಾಗಿದೆ(ಮಾಂ.ಕಾ. ೧–೧೩), ಎಂದು ಅಗ್ರಹಣಶಬ್ದಕ್ಕೆ ಗ್ರಹಣದ ಅಭಾವವೆಂಬರ್ಥದಲ್ಲಿ ಪ್ರಯೋಗಮಾಡಿರುತ್ತದೆ. "ತಪ್ಪಾಗಿ ಅರಿಯುವವನಿಗೆ ಸ್ವಪ್ನವೂ, ತತ್ತ್ವವನ್ನು ಅರಿಯದವನಿಗೆ ನಿದ್ರೆಯು, ಈ ಎರಡೂ ತಪ್ಪುತಿಳಿವಳಿಕೆಯು ಕ್ಷೀಣವಾದರೆ ತುರೀಯಸ್ಥಾನವನ್ನು ಪಡೆಯುತ್ತಾನೆ (ಮಾಂ.ಕಾ. ೧–೧೫), ಎಂದು ಅಜ್ಞಾನವನ್ನು ವಿಪರೀತಜ್ಞಾನವೆಂಬರ್ಥದಲ್ಲೇ ವರ್ಣಿಸಿರುತ್ತದೆ. ಭಾಷ್ಯದಲ್ಲೂ ಸಹ "ತತ್ತ್ವವನ್ನರಿಯದಿರುವುದೆಂಬುದಷ್ಟೇ ಬೀಜವು ಪ್ರಾಜ್ಞನಾಗಿರುವುದಕ್ಕೆ ನಿಮಿತ್ತವು" (ಮಾಂ.ಕಾ. ೧–೧೧), ಎಂದು ಕಾರಣಬಂಧವಾದ ಅಜ್ಞಾನವು ನಿಮಿತ್ತಮಾತ್ರವು ಎಂದು ವರ್ಣಿಸಿರುವುದರಿಂದ ಅಧ್ಯಾಸಕ್ಕೆ ಉಪಾದಾನವಾದ ಅವಿದ್ಯೆಗೆ ಇಲ್ಲಿ ಅವಕಾಶವಿಲ್ಲವೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ಭಾಷ್ಯದಲ್ಲಿ ಎಲ್ಲೂ

ನ ಸ್ವೀಕೃತೇತಿ । ಯುಕ್ತಿವಿರುದ್ಧಶ್ಚಾಯಂ ಸುಷುಪ್ತೌ ಕಾರಣಾವಿದ್ಯಾಂಗೀಕಾರವಾದಃ । ಸುಷುಪ್ತಾವಪಿ ತತ್ಸತ್ತ್ವೇಽನಾತ್ಮನಃ ಕಾರ್ಯಕಾರಣಾನ್ಯಂತರರೂಪೇಣಾವಿಚ್ಛಿನ್ನಸತ್ತಾಲಾಭಪ್ರಸಂಗಾದಾತ್ಮಾನಾತ್ಮನೋಃ ಸತ್ಯಾನೃತಯೋರ್ಮಿಥುನೀಕರಣಮೇವಾಧ್ಯಾಸ ಇತಿ ಸಿದ್ಧಾಂತಃ ಕದರ್ಥಿತಃ ಸ್ಯಾತ್ । ಪ್ರತಿಕ್ಷಿಪ್ತಶ್ಚಾಯಂ ಕಾರಣಾವಿದ್ಯಾವಾದೋ ವಿಸ್ತರೇಣ **ಶಂಕರಹೃದಯಾ**ಪರನಾಮಕೇ **ಮೂಲಾವಿದ್ಯಾನಿರಾಸನಿಬಂಧೇ** ಇತ್ಯುಪರಮ್ಯತೇ। ತಸ್ಮಾದವಿದ್ಯಾಕಾರ್ಯತ್ವಾದಧ್ಯಾಸೋಽವಿದ್ಯೇತಿ ನ ಸಮ್ಯಕ್ ॥

**೨೭. ತತ್ರೈವ ಮತಾಂತರಮ್, ತನ್ನಿರಾಕರಣಂ ಚ** – ಅನ್ಯೇ ತ್ವಾಹುಃ– ರಜತಾದ್ಯಧ್ಯಾಸಾನಾಮನರ್ಥಕಾರಿತ್ವಾಭಾವಾದಮುಮೇವ ಪ್ರಕೃತಮಿತರೇತರಾಧ್ಯಾಸಮವಿದ್ಯೇತಿ ಮನ್ಯಂತ ಇತಿ । ತದಪಿ ನ ಚಾರು । ಕೋ ಹಿ ಬ್ರೂಯಾದ್ರಜತಾದ್ಯಧ್ಯಾಸಾ ನ ಭವನ್ತ್ಯನರ್ಥಕಾರಿಣ ಇತಿ ।

---

"ಕಾರಣಾವಿದ್ಯೆಯನ್ನು ಸ್ವೀಕರಿಸಿಲ್ಲ" ಎಂದು ಹೇಳಿದ್ದು ಸರಿಯಾಗಿಯೇ ಇದೆ. ಅಷ್ಟೇ ಅಲ್ಲ, ಸುಷುಪ್ತಿಯಲ್ಲಿ ಕಾರಣಾವಿದ್ಯೆಯನ್ನು ಸ್ವೀಕರಿಸುವುದು ಯುಕ್ತಿಗೂ ವಿರುದ್ಧವಾಗಿದೆ. ಸುಷುಪ್ತಿಯಲ್ಲೂ ಅದು ಇದ್ದು ಬಿಟ್ಟರೆ ಅನಾತ್ಮವಾದದ್ದು, "ಕಾರ್ಯ" ಅಥವಾ "ಕಾರಣ"ವೆಂಬ ಯಾವುದಾದರೊಂದು ರೂಪದಿಂದ ಸಂತತವಾಗಿ ಇರುತ್ತದೆಯಾಗಿ ಸತ್ಯಾನೃತವನ್ನು ಕಲೆಬೆರಿಕೆಮಾಡುವದೇ ಅಧ್ಯಾಸವು ಎಂಬ ಸಿದ್ಧಾಂತವನ್ನೇ ಕೆಡಸಿದಂತಾಗುತ್ತದೆ. "**ಶಂಕರಹೃದಯ**" ಎಂಬ ಮತ್ತೊಂದು ಹೆಸರಿನ "**ಮೂಲಾವಿದ್ಯಾನಿರಾಸ**" ವೆಂಬ ಗ್ರಂಥದಲ್ಲಿ ಈ ಕಾರಣವಿದ್ಯಾವಾದವನ್ನು ವಿಸ್ತಾರವಾಗಿ ಚರ್ಚಿಸಿ ತಳ್ಳಿಹಾಕಿದ್ದಾಗಿದೆಯಾದ್ದರಿಂದ ಇಲ್ಲಿ ಹೆಚ್ಚಿಗೆ ಬರೆಯುವುದಿಲ್ಲ. ಆದ್ದರಿಂದ ಅವಿದ್ಯೆಯ ಕಾರ್ಯವಾದ್ದರಿಂದ ಅಧ್ಯಾಸವು ಅವಿದ್ಯೆ ಎಂದೆನಿಸಿಕೊಂಡಿದೆ ಎಂಬುದು ಸರಿಯಲ್ಲ.

**೨೭. ಇಲ್ಲಿಯೇ ಇನ್ನೊಂದು ಮತ, ಅದರ ನಿರಾಕರಣೆ** – ಇನ್ನು ಕೆಲವರು ಹೇಳುತ್ತಾರೆ, "ಬೆಳ್ಳಿಯೇ ಮುಂತಾದ ಅಧ್ಯಾಸಗಳು ಅನರ್ಥಕಾರಿ ಎಂಬುದು ಅಲ್ಲವಾದ್ದರಿಂದ ಆ ಈ ಪ್ರಕೃತವಾದ ಇತರೇತರಾಧ್ಯಾಸವನ್ನೇ ಅವಿದ್ಯೆ ಎಂದು ಕರೆಯುತ್ತಾರೆ" ಎಂಬುದೂ ಸರಿಯಲ್ಲ. ರಜತಾದ್ಯಧ್ಯಾಸವು ಅನರ್ಥಕಾರಿಯಲ್ಲ ಎಂದು ಯಾರು ತಾನೇ ಹೇಳಿಯಾರು ? ಬೆಳ್ಳಿ ಬೇಕೆಂಬ

ಪ್ರಸಿದ್ಧಂ ಹಿ ಲೋಕೇ ಶುಕ್ತಿಕಾಯಾಂ ರಜತಮಧ್ಯಸ್ಯ ರಜತಾರ್ಥೀ ತದಾಕೃಷ್ಟಚೇತಾಸ್ತತ್ರ ತದಾದಾನಾಯ ಪ್ರವರ್ತತೇ, ಭಗ್ನೇಚ್ಛಶ್ಚ ದುಃಖಂ ಪ್ರಾಪ್ನೋತೀತಿ । ರಜ್ಜ್ವಾಂ ಚ ಸರ್ಪಮಧ್ಯಸ್ಯ ತಂ ಹಾತುಕಾಮಃ ಪಲಾಯತೇ ಭೀತಭೀತ ಇತಿ ಚ । ಪ್ರಸಿದ್ಧಂ ಚ ಸ್ವಪ್ನೇ ಜಾಗರಿತತ್ವಮಧ್ಯಸ್ಯ ಸ್ವಪ್ನದೃಗ್ವಿವಿಧಾನನರ್ಥಾನ್ ಭಜತ ಇತಿ । ಶತ್ರವೋ ಮಾಮಾಗತ್ಯ ಘ್ನಂತೀತಿ ಮನ್ಯತೇ । ತಸ್ಕರಾ ಮಾಂ ವಶೀಕುರ್ವಂತೀತಿ ಭ್ರಾಮ್ಯತಿ । ತಥಾ ಹಸ್ತ್ಯಾದಯೋ ಮಾಂ ಪ್ರತಿ ಧಾವಂತೀತಿ ಮಿಥ್ಯೈವಾಕಲಯತಿ ಪಲಾಯತೇ ಚ । ಜೀರ್ಣಕೂಪಾದಿಕಂ ಪತಂತಮಿವಾತ್ಮಾನಮುಪಲಕ್ಷಯತಿ । ಯದಾಪಿ ಸ್ವಪ್ನೇ ವಿವಿಧಭೋಗಭಾಜಮಿವಾತ್ಮಾನಮುಪಲಭತೇ ತದಾಪಿ ಭೋಗಮಧ್ಯೇ ಪ್ರತಿಬುದ್ಧೋ ದುಃಖ್ಯತಿ – ಅಹೋ ನಷ್ಟಂ ಮೇ ತತ್ತಾದೃಶಂ ಸುಖಮಿತಿ । ಲಜ್ಜಿತೋ ವಾ ಭವತ್ಯಾತ್ಮನಃ ಪ್ರವೃತ್ತಿನಿವೃತ್ತೀ ಸ್ವಪ್ನಮಧ್ಯಗೇ ಸ್ಮೃತ್ವೇತಿ

---

ಆಸೆಯುಳ್ಳವನು ಬೆಳ್ಳಿಯನ್ನು ಹುಡುಕುತ್ತಾ ಕಪ್ಪೇಚಿಪ್ಪಿನಲ್ಲೇ ಬೆಳ್ಳಿಯನ್ನು ಕಂಡವನಾಗಿ ಆಕರ್ಷಿತನಾಗಿ ಅದನ್ನು ತೆಗೆದುಕೊಳ್ಳಲು ಹೋಗುತ್ತಾನೆ, ಆಮೇಲೆ (ನಿಜವು ಗೊತ್ತಾದನಂತರ) ಭಗ್ನವಾದ ಆಸೆಯುಳ್ಳವನಾಗಿ ದುಃಖಿತನಾಗುತ್ತಾನೆ ಎಂಬುದು ಲೋಕದಲ್ಲಿ ಪ್ರಸಿದ್ಧವಾಗಿದೆ. ಹಗ್ಗದಲ್ಲಿ ಹಾವನ್ನು ಕಂಡವನಾಗಿ ಹೆದರಿಕೊಂಡು ಅದರಿಂದ ತಪ್ಪಿಸಿಕೊಳ್ಳಲು ಓಡಿಹೋಗುತ್ತಾನೆ ಎಂಬುದೂ ಪ್ರಸಿದ್ಧವಾಗಿದೆ. ಸ್ವಪ್ನದಲ್ಲಿ – ತತ್ಕಾಲಕ್ಕೆ ಎಚ್ಚರವೆಂತಲೇ ತಿಳಿದು – ಸ್ವಪ್ನದಲ್ಲಿ ಕಾಣುವ ನಾನಾ ಪ್ರಕಾರವಾದ ಅನರ್ಥಗಳನ್ನು ಹೊಂದುತ್ತಾನೆ. ಶತ್ರುಗಳು ನನ್ನ ಹತ್ತಿರ ಬಂದು ನನ್ನನ್ನು ಕೊಲ್ಲುತ್ತಿದ್ದಾರೆಂದು ತಿಳಿಯುವನು, ಕಳ್ಳರು ತನ್ನನ್ನು ವಶದಲ್ಲಿಟ್ಟು-ಕೊಂಡಿದ್ದಾರೆಂದು ತಿಳಿಯುವನು. ಹಾಗೆಯೇ ಆನೆಯೇ ಮುಂತಾದವುಗಳು ನನ್ನ ಹತ್ತಿರ ಓಡಿಬರುತ್ತಿವೆ ಎಂದು ಸುಳ್ಳುಸುಳ್ಳಾಗಿಯೇ ತಿಳಿಯುತ್ತಾನೆ, ಓಡುತ್ತಿರುತ್ತಾನೆ. ತಾನು ಹಳೆಯಬಾವಿಯೇ ಮುಂತಾದದ್ದಕ್ಕೆ ಬೀಳುತ್ತಿರುವಂತೆ (ಕನಸನ್ನು) ಕಾಣುತ್ತಾನೆ. ಹಾಗೆಯೇ ಯಾವಾಗ ಕನಸಿನಲ್ಲಿ ನಾನಾ ಪ್ರಕಾರವಾದ ಭೋಗವನ್ನು ಹೊಂದಿದವನಂತೆ ತನ್ನನ್ನು ತಿಳಿಯುತ್ತಾನೋ ಆಗೇನಾದರೂ ಭೋಗಮಧ್ಯದಲ್ಲಿ ಎಚ್ಚರವಾದರೆ ಅಯ್ಯೋ ಎಂತಹ ಸುಖವು ಬಿಟ್ಟುಹೋಯಿತು! ಎಂದು ದುಃಖಪಡುತ್ತಾನೆ. ಅಥವಾ ಸ್ವಪ್ನಕಾಲದ ಪ್ರವೃತ್ತಿನಿವೃತ್ತಿಗಳನ್ನು ನೆನಸಿಕೊಂಡು ನಾಚಿಕೆಪಡುತ್ತಾನೆ !

ಸರ್ವೇಷಾಂ ನಃ ಪ್ರತ್ಯಕ್ಷಮೇತತ್ । ನನು ಸರ್ವಮೇತದ್ದುಃಖಂ ಮೃಷಾವಾಸನೋದ್ಭವಂ । ಸತ್ಯಮ್ । ಅತ ಏವ ಲೌಕಿಕೈಃ ಪರಮಾರ್ಥತ್ವೇನ ಮತಃ ಸಾಂಸಾರಿಕಾನರ್ಥೋಽಪ್ಯೇತಾದೃಶ ಏವೇತ್ಯಾದರ್ಶಯಿತುಂ ವೇದಾಂತವೃದ್ಧಾಃ ಸಂಪ್ರತಿಪನ್ನಾಧ್ಯಾಸದುಃಖಾನ್ಯುದಾಹರಂತಿ । ಅತೋ ನ ದೋಷಃ । ತದೇವಮಿತರಾಧ್ಯಾಸಾನಾಮಪ್ಯನರ್ಥಕಾರಿತ್ವಂ ಸಮಮೇವೇತಿ ನ ಕಶ್ಚಿದ್ವಿಶೇಷೋಽತ್ರ ಯೇನೇಮಮೇವಾಧ್ಯಾಸಮವಿದ್ಯೇತಿ ಮನ್ಯಂತ ಇತಿ ಸುವ್ಯಾಖ್ಯಾನಂ ಭವೇದಿತಿ ॥ (ಭಾ । ಪುಟ-೧೯)

**೨೮. ಅಧ್ಯಾಸಸ್ಯಾವಿದ್ಯಾತ್ವಂ ವಿದ್ಯಾವಿರೋಧಿತ್ವಾತ್ ತನ್ನಿವರ್ತ್ಯತ್ವಾಚ್ಚ** – ಕಿಂ ತರ್ಹಿ ಪ್ರಕೃತಾಧ್ಯಾಸೇಽವಿದ್ಯಾಶಬ್ದಪ್ರವೃತ್ತಿನಿಮಿತ್ತಮಿತಿ। ಉಚ್ಯತೇ । ವಿದ್ಯಾವಿರೋಧಿತ್ವಾದವಿದ್ಯಾ । ಶುಕ್ತಿಕಾಸ್ವರೂಪಾಧಿಗಮರೂಪವಿದ್ಯಾಯಾ ಹಿ ರಜತಾಧ್ಯಾಸೋ ವಿರುಧ್ಯತೇ । ಅತೋಽವಿದ್ಯಾ

---

ಎಂಬಿವೇ ಮುಂತಾದವುಗಳು ಆಗುವುದು ನಮಗೆಲ್ಲರಿಗೂ ಪ್ರತ್ಯಕ್ಷವಾಗಿದೆ. ಈ ಎಲ್ಲ ದುಃಖವೂ ಸುಳ್ಳಾದ ವಾಸನೆಯಿಂದ ಎದ್ದದ್ದಲ್ಲವೆ ? ಎಂದರೆ ಹೌದು, ಆದ್ದರಿಂದಲೇ ಲೋಕದವರು ಸಾಂಸಾರಿಕ ಅನರ್ಥವು ನಿಜವಾಗಿರುವಂಥದ್ದು ಎಂದು ಏನು ತಿಳಿದುಕೊಂಡಿದ್ದಾರೆ, ಅದೂ ಕೂಡ ಈ ತರಹದ್ದೇ ಎಂದು ತೋರಿಸುವುದಕ್ಕಾಗಿ ವೇದಾಂತದಲ್ಲಿ ಹಿರಿಯವರಾದವರು ಎಲ್ಲರಿಗೂ ಒಪ್ಪಿಗೆಯಾದ ಅಧ್ಯಾಸದುಃಖವನ್ನು ಉದಾಹರಿಸುತ್ತಾರೆ. ಆದ್ದರಿಂದ ದೋಷವಿಲ್ಲ. ಹೀಗೆ ಬೇರೆ ಅಧ್ಯಾಸಗಳು ಸಹ ಅನರ್ಥವನ್ನುಂಟುಮಾಡುವುದೆಂಬುದು ಸಮಾನವಾದ್ದರಿಂದ ಯಾವ ವಿಶೇಷವೂ ಇಲ್ಲಿರುವುದಿಲ್ಲ. ಹಾಗಿದ್ದರೆ ಆ ಅಧ್ಯಾಸವನ್ನೇ ಅವಿದ್ಯೆ ಎಂದು ಕರೆಯುತ್ತಾರೆ ಎಂಬುದು ಸರಿಯಾದ ವ್ಯಾಖ್ಯಾನವಾದೀತು. (ಭಾ, ಪುಟ ೧೯).

**೨೮. ಅಧ್ಯಾಸವನ್ನು ಅವಿದ್ಯೆ (ಎಂದಿರುವದು) ವಿದ್ಯೆಗೆ ವಿರೋಧಿಯಾದ್ದರಿಂದಲೂ ಅದರಿಂದ ತೊಲಗುವದಾದ್ದರಿಂದಲೂ (ಹಾಗೆ ಹೇಳಿದೆ)** – ಪ್ರಕೃತವಾದ ಅಧ್ಯಾಸದಲ್ಲಿ ಅವಿದ್ಯಾಶಬ್ದಕ್ಕೆ ನಿಮಿತ್ತವು ಯಾವುದು? ಎಂದರೆ, ಹೇಳುತ್ತೇವೆ, ವಿದ್ಯೆಗೆ ವಿರೋಧಿಯಾದ್ದರಿಂದ ಅವಿದ್ಯೆಯು. ಕಪ್ಪೇಚಿಪ್ಪನ್ನು ಅರಿಯುವುದು ಎಂಬ ರೂಪದ ವಿದ್ಯೆಗೆ ಬೆಳ್ಳಿ ಎಂಬ ತಪ್ಪುತಿಳಿವಳಿಕೆಯು ವಿರುದ್ಧವಾಗಿರುತ್ತದೆ. ಆದ್ದರಿಂದ ರಜತಾಧ್ಯಾಸವು

ರಜತಾಧ್ಯಾಸಃ । ಯದ್ಯಪಿ ಶುಕ್ತಿವಿದ್ಯಾಭಾವೋऽಪಿ ಶುಕ್ತ್ಯವಿದ್ಯಾ ಭವಿತು-ಮರ್ಹತಿ । ತಥಾಪಿ ಶುಕ್ತಿವಿದ್ಯಾವಿಪರೀತಂ ರಜತಜ್ಞಾನಂ ಯಥಾ ತತ್ಪ್ರತಿಬಂಧಕಮನರ್ಥಕಾರಿ ಚ ನ ತಥಾ ತದ್ವಿದ್ಯಾಭಾವ ಇತಿ ರಜತಾಧ್ಯಾಸ ಏವ ವಿಶೇಷತಃ ಶುಕ್ತ್ಯವಿದ್ಯೇತ್ಯುಚ್ಯತೇ । ಏವಂ ಸರ್ವತ್ರಾಧ್ಯಾಸೇ ತತ್ತದಾರೋಪ್ಯಜ್ಞಾನಂ ತತ್ತದಧಿಷ್ಠಾನಾವಿದ್ಯಾತ್ವೇನ ವ್ಯವಹರ್ತುಂ ಯೋಗ್ಯಂ ಭವತಿ । ತಥಾ ವೇದಾಂತವಿಹಿತವಿದ್ಯಾವಿರೋಧಿತ್ವಾತ್ ತನ್ನಿವರ್ತ್ಯತ್ವಾಚ್ಚ ಪ್ರಕೃತಾಧ್ಯಾಸಸ್ಯಾಪ್ಯವಿದ್ಯಾತ್ವಮ್ । ಇಯಾಂಸ್ತು ವಿಶೇಷಃ । ಲೋಕೇ ತತ್ತದ್ವಿದ್ಯಾಯಾಮುದಿತಾಯಾಮಪಿ ನಾವಿದ್ಯೋದಯಹೇತುರಶೇಷತೋ ನಿವರ್ತತೇ । ಅಧ್ಯಾಸಸಾಮಗ್ರ್ಯಾ ಅವಿನಾಶಾತ್ । ಬ್ರಹ್ಮವಿದ್ಯಾಯಾಂ ತೂದಿ-ತಾಯಾಮಶೇಷದ್ವೈತಜ್ಞಾನಸ್ಯಾತ್ಯಂತಂ ನಿವೃತ್ತೇರ್ನ ಪುನರವಿದ್ಯಾಸಂಭವಃ। ಅತಃ ಸರ್ವಾನರ್ಥಹೇತುರಿಯಮೇವೇತಿ ವಿಶೇಷತ ಇಮಾಮೇವಾವಿದ್ಯಾಂ

---

ಅವಿದ್ಯೆಯು. ಶುಕ್ತಿಜ್ಞಾನವಿಲ್ಲದಾಗಲೂ ಶುಕ್ತ್ಯವಿದ್ಯೆಯು ಇರುವುದಾದರೂ ಶುಕ್ತಿಜ್ಞಾನಕ್ಕೆ ವಿರುದ್ಧವಾದ ರಜತಜ್ಞಾನವು ಹೇಗೆ ಪ್ರತಿಬಂಧಕವಾಗಿದೆಯೋ ಮತ್ತು ಅನರ್ಥವನ್ನುಂಟುಮಾಡುತ್ತದೋ ಆ ರೀತಿ ಆ ಜ್ಞಾನಾಭಾವವು ಮಾಡುವುದಿಲ್ಲವಾದ್ದರಿಂದ ರಜತಾಧ್ಯಾಸವನ್ನೇ ವಿಶೇಷವಾಗಿ "ಶುಕ್ತ್ಯವಿದ್ಯಾ" ಎಂದು ಕರೆಯಲಾಗುತ್ತದೆ. ಹೀಗೆ ಎಲ್ಲ ಅಧ್ಯಾಸದಲ್ಲೂ ಆಯಾ ಆರೋಪ್ಯಜ್ಞಾನವೇ ಅದದರ ಅಧಿಷ್ಠಾನದ ಅವಿದ್ಯೆ ಎಂದು ವ್ಯವಹರಿಸುವುದಕ್ಕೆ ತಕ್ಕದ್ದಾಗಿರುತ್ತದೆ. ಹಾಗೆಯೇ ವೇದಾಂತದಲ್ಲಿ ವಿಧಿಸಿರುವ ವಿದ್ಯೆಗೆ ವಿರೋಧವಾದ್ದರಿಂದಲೂ, ಅದರಿಂದ ತೊಲಗುವದಾದ್ದರಿಂದಲೂ ಪ್ರಕೃತವಾದ ಅಧ್ಯಾಸವೂ "ಅವಿದ್ಯೆ" ಎಂಬ ಹೆಸರನ್ನು ಹೊಂದಬಹುದಾಗಿದೆ. ವಿಶೇಷ-ವಾದರೋ ಇಷ್ಟು – ಏನೆಂದರೆ ಲೋಕದಲ್ಲಿ ಅದದರ ವಿಷಯದ ಜ್ಞಾನವು ಉಂಟಾದಮೇಲೂ ಸಂಪೂರ್ಣವಾಗಿ ಅವಿದ್ಯೆಯು ಹುಟ್ಟುವದಕ್ಕಿರುವ ಕಾರಣವು ನಾಶವಾಗಿರುವುದಿಲ್ಲ, (ಏಕೆಂದರೆ) ಅಧ್ಯಾಸದ ಸಾಮಗ್ರಿಯು (ಪೂರ್ತಿ) ಹೋಗಿರುವುದಿಲ್ಲ. ಬ್ರಹ್ಮವಿದ್ಯೆಯು ಉದಯವಾದಮೇಲಾದರೋ ಸಂಪೂರ್ಣ ದ್ವೈತಜ್ಞಾನವು ಆತ್ಯಂತಿಕವಾಗಿ ತೊಲಗುವುದರಿಂದ ಮತ್ತೆ ಅವಿದ್ಯೆಯು ಹುಟ್ಟುವ ಸಂದರ್ಭವಿರುವುದಿಲ್ಲ. ಆದ್ದರಿಂದ ಎಲ್ಲರ (ಎಲ್ಲಾ) ಅನರ್ಥಕ್ಕೂ ಕಾರಣವಾಗಿರುವುದು ಈ ಅವಿದ್ಯೆಯೇ ಎಂದಾದ್ದರಿಂದ ವಿಶೇಷವಾಗಿ ಇದನ್ನೇ ಪಂಡಿತರು "ಅವಿದ್ಯೆ" ಎಂದು ಕರೆಯುತ್ತಾರೆ. ಇದು

ಮನ್ಯಂತೇ ಪಂಡಿತಾ ಇತಿ । ಯಥಾ ಚೇದಂ ತಥಾಗ್ರೇ ಸ್ಫುಟಯಿಷ್ಯತೇ ॥

**೨೯. ವಿದ್ಯಾಸ್ವರೂಪಮ್** – ವಿದ್ಯಾವಿರೋಧಿತ್ವಾತ್ ತನ್ನಿವರ್ತ್ಯತ್ವಾಚ್ಚಾಧ್ಯಾಸಮೇವಾವಿದ್ಯಾಂ ಮನ್ಯಂತ ಇತ್ಯುಕ್ತಮ್ । ಕಾ ಪುನರಸೌ ವಿದ್ಯಾ ? ತತ್ರಾಹ– **ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಮಾಹುಃ।** ತದ್ವಿವೇಕೇನ ತಸ್ಯಾ ಅವಿದ್ಯಾಯಾ ಅಧ್ಯಾಸಲಕ್ಷಣಾಯಾ ವಿವೇಕೇನ ವಸ್ತುಸ್ವರೂಪಸ್ಯ ಯಥಾವದವಧಾರಣಂ ನಿಶ್ಚಯಂ ವಿದ್ಯಾಮಾಹುಃ। ಅವಿದ್ಯಾಯಾಃ ಸಕಾಶಾದ್ವಿವೇಕೋ ನಾಮ ತದ್ವೈಪರೀತ್ಯೇನ ವಿಭಜ್ಯಜ್ಞಾನಮ್। ತಸ್ಯಾ ಅವಿದ್ಯಾಯಾ ವಿವೇಕಃ, ನೇದಂ ಸಮ್ಯಗ್ಜ್ಞಾನಮಿತಿ ವಿವೇಚನಮ್ । ತೇನೇತಿ ವಾಽರ್ಥಃ । ಯದ್ವಾ ತಯೋರ್ವಿವೇಕಸ್ತದ್ವಿವೇಕಃ । ಪ್ರಕೃತಯೋರ್ಧರ್ಮಧರ್ಮಿಣೋರ್ಬುದ್ಧಿಸ್ಥತ್ವಾತ್ ತಚ್ಛಬ್ದೇನ ಪರಾಮರ್ಶಃ ಕ್ರಿಯತೇ । ಅತ್ಯಂತವಿವಿಕ್ತಯೋರ್ಧರ್ಮಧರ್ಮಿಣೋರಿತರೇತರಾವಿವೇಕೇನ

---

ಹೇಗೆ ಎಂಬುದನ್ನು ಮುಂದೆ ಸ್ಪಷ್ಟಪಡಿಸಲಾಗುವುದು.

**೨೯. ವಿದ್ಯಾಸ್ವರೂಪವು** – ವಿದ್ಯೆಗೆ ವಿರೋಧವಾದ್ದರಿಂದಲೂ ವಿದ್ಯೆಯಿಂದ ತೊಲಗುವದಾದ್ದರಿಂದಲೂ "ಅಧ್ಯಾಸವನ್ನೇ, ಅವಿದ್ಯೆ" ಎಂದು ತಿಳಿಯುತ್ತಾರೆ ಎಂದು ಹೇಳಿದ್ದಾಯಿತು. ಹಾಗಾದರೆ ವಿದ್ಯೆ ಎಂಬುದು ಯಾವುದು ? ಅದಕ್ಕೆ ಹೇಳುತ್ತಾರೆ – "ಅದರ ವಿವೇಕದಿಂದ, ವಸ್ತುಸ್ವರೂಪವನ್ನು ಗೊತ್ತುಮಾಡುವುದನ್ನೇ ವಿದ್ಯೆ ಎನ್ನುತ್ತಾರೆ". ಅದರ ವಿವೇಕವೆಂದರೆ ಅಧ್ಯಾಸರೂಪವಾದ ಅವಿದ್ಯೆಯ ವಿವೇಕದಿಂದ, ವಸ್ತುಸ್ವರೂಪವನ್ನು ಇದ್ದದ್ದು ಇದ್ದಹಾಗೆ ನಿಶ್ಚಯಮಾಡುವುದನ್ನು ವಿದ್ಯೆ ಎನ್ನುತ್ತಾರೆ. ಅವಿದ್ಯೆಯ ದೆಸೆಯಿಂದ ವಿವೇಕವೆಂದರೆ ಅವಿದ್ಯೆಗೆ ವಿಪರೀತವಾಗಿ ವಿಂಗಡಿಸಿ ಅರಿಯುವುದು. ಆ ಅವಿದ್ಯೆಯ ವಿವೇಕವೆಂದರೆ ಇದು ಸರಿಯಾದ ಜ್ಞಾನವಲ್ಲ ಎಂದು ತಿಳಿಯುವುದು. ಅದರಿಂದ ವಿಂಗಡಿಸುವುದು ಎಂದಾದರೂ ಅರ್ಥಮಾಡಬಹುದು. ಅಥವಾ ಅವುಗಳೆರಡರ ವಿವೇಕವೇ ತದ್ವಿವೇಕವು ಎಂದೂ ಅರ್ಥಮಾಡಬಹುದು. ಪ್ರಕೃತವಾದ ಧರ್ಮಧರ್ಮಿಗಳು ಬುದ್ಧಿಯಲ್ಲಿರುವುದಾದ್ದರಿಂದ "ತತ್" ಎಂಬ, ಶಬ್ದದಿಂದ ಪರಾಮರ್ಶಿಸುತ್ತಿದ್ದಾರೆ. ಅತ್ಯಂತವಾಗಿ ವಿಂಗಡವಾಗಿರುವ ಧರ್ಮಧರ್ಮಿಗಳನ್ನು ಒಂದನ್ನಿನ್ನೊಂದನ್ನಾಗಿ

ಹ್ಯಧ್ಯಾಸೋ ಭವತೀತ್ಯುಕ್ತಮ್ । ತದ್ವಿಪರ್ಯಯೇಣ ತಯೋರನ್ಯೋನ್ಯ-ವಿವೇಕೇನ ಸತ್ಯಾನೃತಬುದ್ಧಿಗೋಚರತ್ವಪ್ರತಿಪತ್ತ್ಯಾ ವಸ್ತುಸ್ವರೂಪಸ್ಯ ನಿರ್ಧಾರಣಂ ವಿದ್ಯಾಮಾಹುಃ ಇತಿ ಯೋಜನೀಯಮ್ । "ಇದಂ ಸತ್ಯಮಿದಂ ಮಿಥ್ಯಾ", "ಅಯಮಾತ್ಮಾಯಮನಾತ್ಮಾ" ಇತಿ ವಿವೇಕಾಭಾವಾದೇವೈತಯೋಃ ಪರಸ್ಪರಾತ್ಮತಾ ಪರಸ್ಪರಧರ್ಮವತ್ತ್ವಂ ಚ ಪ್ರತೀಯತ ಇತಿ ನಿಶ್ಚಯಂ ವಿದ್ಯಾಮಾಹುಃ, ಪೂರ್ವೋಕ್ತಾವಿದ್ಯಾನಿವರ್ತಕತ್ವಾದಿತಿ ಭಾವಃ । ಯಥೋಕ್ತಂ ಪೂಜ್ಯಪಾದೈರೇವಾನ್ಯತ್ರ- "ಯಥಾಶಾಸ್ತ್ರಂ ಕ್ಷೇತ್ರಕ್ಷೇತ್ರಜ್ಞಲಕ್ಷಣಭೇದ-ಪರಿಜ್ಞಾನಪೂರ್ವಕಂ ಪ್ರಾಗ್ದರ್ಶಿತರೂಪಾತ್ ಕ್ಷೇತ್ರಾತ್ ಮುಂಜಾದಿ-ವೇಷೀಕಾಂ ಯಥೋಕ್ತಲಕ್ಷಣಂ ಕ್ಷೇತ್ರಜ್ಞಂ ಪ್ರವಿಭಜ್ಯ 'ನ ಸತ್ತನ್ನಾಸದುಚ್ಯತ' ಇತ್ಯನೇನ ನಿರಸ್ತಸರ್ವೋಪಾಧಿವಿಶೇಷಂ ಜ್ಞೇಯಂ ಬ್ರಹ್ಮ ಸ್ವರೂಪೇಣ ಯಃ ಪಶ್ಯತಿ, ಕ್ಷೇತ್ರಂ ಚ ಮಾಯಾನಿರ್ಮಿತಹಸ್ತಿಸ್ವಪ್ನದೃಷ್ಟವಸ್ತುಗಂಧರ್ವ-

---

ವಿಂಗಡಿಸಿಕೊಳ್ಳದೇ ಇರುವುದರಿಂದ ಅಧ್ಯಾಸವಾಗುತ್ತದೆ ಎಂದಲ್ಲವೆ ಹೇಳಿರುವುದು? ಅದಕ್ಕೆ ವಿರುದ್ಧವಾಗಿ ಅವೆರಡನ್ನು ವಿಂಗಡಿಸಿಕೊಳ್ಳುವುಧರಿಂದ, ಸತ್ಯವಾದ ಮತ್ತು ಸುಳ್ಳಾದ ಬುದ್ಧಿಗೆ ಗೋಚರವಾಗುತ್ತಿದೆ ಎಂಬ ತಿಳುವಳಿಕೆಯಿಂದ ವಸ್ತುಸ್ವರೂಪವನ್ನು ಗೊತ್ತುಪಡಿಸುವುದನ್ನು ವಿದ್ಯೆ ಎನ್ನುತ್ತಾರೆ ಎಂದೂ ಅನ್ವಯಿಸಬಹುದು. ಹಿಂದೆ ಹೇಳಿದ ಅವಿದ್ಯೆಯನ್ನು ಕಳೆಯುವದಾದ್ದರಿಂದ "ಇದು ಸತ್ಯ", "ಇದು ಸುಳ್ಳು" "ಇವನು ಆತ್ಮನು", "ಇದು ಅನಾತ್ಮವು" ಎಂಬ ವಿವೇಕವಿಲ್ಲದ್ದರಿಂದಲೇ ಇವೆರಡಕ್ಕೆ ಒಂದಿನ್ನೊಂದಾಗುವುದೆಂಬುದಾಗಿದೆ, ಮತ್ತು ಒಂದರ ಧರ್ಮವು ಇನ್ನೊಂದಕ್ಕೆ ಉಂಟಾಗಿದೆ ಎಂದು ನಿಶ್ಚಯಮಾಡಿಕೊಳ್ಳುವುದನ್ನೇ ವಿದ್ಯೆ ಎನ್ನುತ್ತಾರೆ. ಈ ವಿಷಯಕ್ಕೆ ಪೂಜ್ಯರಾದ ಭಗವತ್ಪಾದರೇ ಮತ್ತೊಂದು ಕಡೆಯಲ್ಲಿ ಹೀಗೆ ಹೇಳಿರುತ್ತಾರೆ. "ಶಾಸ್ತ್ರದಲ್ಲಿ ಹೇಳಿರುವಂತೆ ಕ್ಷೇತ್ರಕ್ಷೇತ್ರಜ್ಞರ ಲಕ್ಷಣ-ಭೇದವನ್ನು ತಿಳಿದುಕೊಳ್ಳುವ ಮೂಲಕ ಹಿಂದೆ ತಿಳಿಸಿರುವರೂಪದ ಕ್ಷೇತ್ರದಿಂದ, ನೊದೆಹುಲ್ಲಿನಿಂದ ಆದರ ಗಟ್ಟಿಯಾದ ಭಾಗವನ್ನು ಬಿಡಿಸಿಕೊಳ್ಳುವಂತೆ, ಹಿಂದೆ ಹೇಳಿದಂತಹ ಕ್ಷೇತ್ರಜ್ಞನನ್ನು ಬಿಡಿಸಿಕೊಂಡು 'ಅದು ಸತ್ತೆನಿಸುವದಿಲ್ಲ, ಅಸತ್ತೆನಿಸುವುದೂ ಇಲ್ಲ'(ಗೀ. ೧೩-೧೨) ಎಂಬೀ (ಶ್ಲೋಕದ) ರೀತಿಯಿಂದ ಯಾವುದೊಂದು ಉಪಾಧಿಯೂ ಇಲ್ಲದ ಜ್ಞೇಯವಾದ ಬ್ರಹ್ಮವನ್ನು ತನ್ನ ಸ್ವರೂಪವೇ ಎಂದು ಯಾವನು ಕಂಡುಕೊಳ್ಳುವನೋ ಮತ್ತು ಕ್ಷೇತ್ರವನ್ನು -

ನಗರಾದಿವದಸದೇವ ಸದಿವಾವಭಾಸತ ಇತ್ಯೇವಂ ನಿಶ್ಚಿತವಿಜ್ಞಾನೋ ಯಃ, ತಸ್ಯ ಯಥೋಕ್ತಸಮ್ಯಗ್ದರ್ಶನವಿರೋಧಾದಪಗಚ್ಛತಿ ಮಿಥ್ಯಾಜ್ಞಾನಮ್" (ಗೀ.ಭಾ. ೧೩-೨೬) ಇತಿ । ಯಥಾ ವಿವೇಕಾಭಾವೇನೇತರೇತರಾಧ್ಯಾಸಮ-ವಿದ್ಯಾಮಾಹುಃ, ತಥಾ ತದ್ವಿಪರ್ಯಯೇಣಾಧಿಷ್ಠಾನಾರೋಪ್ಯಯೋರ್ವಿವೇಕೇನ ತತ್ತತ್ಸ್ವರೂಪನಿರ್ಧಾರಣಂ ವಿದ್ಯಾಮಾಹುರಿತಿ ಫಲಿತೋಽರ್ಥಃ ॥

**೩೦. ಅವಿದ್ಯಾಸ್ವರೂಪವಿಷಯೇ ಕೇಷಾಂಚಿನ್ಮತಮ್** – ಅತ್ರ ಕೇಚಿದಾಹುಃ – ವಿದ್ಯಾನಿವರ್ತ್ಯಾ ಅವಿದ್ಯಾ ನಾಧ್ಯಾಸಮಾತ್ರಮ್ । ಸಾದೇ-ರಧ್ಯಾಸಸ್ಯಾನಾದಿಸಂಸಾರಹೇತುತ್ವಾಯೋಗಾತ್ । ನಾಪಿ ಜ್ಞಾನಾಭಾವ ಏವಾವಿದ್ಯಾ । ಅಭಾವಸ್ಯಾನಾದಿತ್ವಸಂಭವೇಽಪಿ ಸಂಸಾರಭ್ರಮೋಪಾದಾನ-ತ್ವಾಯೋಗಾತ್ । ಕಿಂ ತು ಭಾವರೂಪಮೇವಾನಾದಿ ಕಿಂಚಿತ್ ಸರ್ವಜಡೋ-

---

ಮಾಯೆಯಿಂದ ನಿರ್ಮಿತವಾದ ಆನೆ, ಕನಸಿನಲ್ಲಿ ಕಂಡ ವಸ್ತು, ಗಂಧರ್ವನಗರ ಮುಂತಾದವುಗಳಂತೆ ಇದು ಅಸತ್ತಾಗಿಯೇ ಇದ್ದುಕೊಂಡು ಸತ್ತಿನಂತೆ ಕಾಣುತ್ತಿದೆ, ಎಂದೀ ಪರಿಯಲ್ಲಿ ಯಾವನಿಗೆ ನಿಶ್ಚಿತವಾದ ಅರಿವುಂಟಾಗುವುದೋ ಅವನಿಗೆ ಈ ಮೇಲೆ ಹೇಳಿದ ಸಮ್ಯಗ್ದರ್ಶನಕ್ಕೆ ವಿರುದ್ಧವಾಗಿರುವುದರಿಂದ ಮಿಥ್ಯಾಜ್ಞಾನವು ತೊಲಗುತ್ತದೆ" (ಗೀ.ಭಾ. ೧೩-೨೬) ಎಂದು. ಹೇಗೆ ವಿವೇಕವಿಲ್ಲದ್ದರಿಂದ ಒಂದನ್ನಿನ್ನೊಂದನ್ನಾಗಿ ಹುಟ್ಟುಗಟ್ಟುವುದನ್ನು ಅವಿದ್ಯೆ ಎನ್ನುತ್ತಾರೋ, ಹಾಗೆಯೇ ಅದಕ್ಕೆ ವಿರುದ್ಧವಾಗಿ ಅಧಿಷ್ಠಾನ ಮತ್ತು ಆರೋಪ್ಯಗಳನ್ನು ವಿಂಗಡವಾಗಿ ಆಯಾ ರೂಪದಿಂದ ತಿಳಿಯುವದನ್ನು ವಿದ್ಯೆ ಎನ್ನುತ್ತಾರೆ ಎಂಬುದೇ ಒಟ್ಟರ್ಥವು.

**೩೦. ಅವಿದ್ಯಾಸ್ವರೂಪದ ವಿಷಯದಲ್ಲಿ ಕೆಲವರ ಮತವು** – ಇಲ್ಲಿ ಕೆಲವರು ಹೇಳುತ್ತಾರೆ. ವಿದ್ಯೆಯಿಂದ ತೊಲಗುವ ಅವಿದ್ಯೆಯು ಅಧ್ಯಾಸ-ಮಾತ್ರವಲ್ಲ. ಆದಿಯುಳ್ಳ ಅಧ್ಯಾಸವು ಅನಾದಿಯಾದ ಸಂಸಾರಕ್ಕೆ ಕಾರಣವಾಗಲಾರದು. ಹಾಗೆಯೇ ಜ್ಞಾನದ ಅಭಾವವಷ್ಟೇ "ಅವಿದ್ಯೆ" ಎನ್ನುವುದೂ ಸರಿಯಲ್ಲ. ಏಕೆಂದರೆ ಅಭಾವವು ಅನಾದಿಯಾಗಬಹುದಾದರೂ ಸಂಸಾರಭ್ರಮೆಗೆ ಉಪಾದಾನವಾಗುವುದೆಂಬುದು ಹೊಂದುವುದಿಲ್ಲ. ಆದರೆ ಭಾವರೂಪವೇ ಆದ ಅನಾದಿಯಾದ ಒಂದಾನೊಂದು ಜಡವಾದದ್ದೆಲ್ಲಕ್ಕೂ

ಪಾದಾನಮವಿದ್ಯಾಶಬ್ದವಾಚ್ಯಂ ಚಿನ್ಮಾತ್ರಾಶ್ರಯಮ್ । ತಚ್ಚಾಜ್ಞಾನಮಿತಿ ಜ್ಞಾನವಿರೋಧಾಜ್ಞಾನಪರ್ಯುದಾಸೇನೋಚ್ಯತೇ । ತದೇವಾನಿರ್ವಚನೀಯಂ ಜಡಾತ್ಮಕಂ ಮಾಯಾದಿಶಬ್ದೈರಪರ್ಯುದಾಸೇನಾಪ್ಯುಚ್ಯತೇ । ತತ್ರ ಜ್ಞಾನಮಿತ್ಯಜಡೋ ಬೋಧಸ್ತದಾಭಾಸಾ ವಾ ಚಿತ್ತವೃತ್ತಿರ್ಯಥಾಯೋಗಮಭಿಧೀಯತೇ । ತತ್ರ ಬೋಧೋ ಜ್ಞಾನಶಬ್ದಸ್ಯ ಲಕ್ಷ್ಯಾರ್ಥಃ, ಚಿತ್ತವೃತ್ತಿಸ್ತು ವಾಚ್ಯಾರ್ಥ ಇತಿ ವಿವೇಕಃ । ಶುಕ್ತಿಜ್ಞಾನಂ ತದಜ್ಞಾನಂ ನಿವರ್ತಯತೀತ್ಯತ್ರ ಬುದ್ಧಿವೃತ್ತಿರ್ಜ್ಞಾನಮ್ । ತನ್ನಿವರ್ತ್ಯಂ ತು ಶುಕ್ತಿರಜತಕಾರಣಮಜ್ಞಾನಮ್ । ಬ್ರಹ್ಮಜ್ಞಾನಮಜ್ಞಾನಂ ನಿವರ್ತಯತೀತ್ಯತ್ರಾಪಿ ಬ್ರಹ್ಮಾಕಾರಾ ಬುದ್ಧಿವೃತ್ತಿರೇವ ಜ್ಞಾನಮ್ । ತನ್ನಿವರ್ತ್ಯಮಜ್ಞಾನಂ ತು ಸರ್ವಜಡೋಪಾದಾನಭೂತಾ ಅವಿದ್ಯಾಶಕ್ತಿರಿತಿ ॥ (ಪಂ.ಪಾ,ಇ.ಸಿ)(ಪ್ರ ಪು-೫೦೬)

---

ಉಪಾದಾನವಾದದ್ದೇ ಅವಿದ್ಯಾಶಬ್ದದಿಂದ ಕರೆಸಿಕೊಂಡಿದೆ, (ಅದು) ಚಿನ್ಮಾತ್ರವನ್ನು ಆಶ್ರಯಿಸಿಕೊಂಡಿದೆ. ಅದನ್ನು ಅಜ್ಞಾನವೆಂದು ಕರೆದಿರುವುದು ಜ್ಞಾನಕ್ಕೆ ವಿರೋಧವಾಗಿರುವುದರಿಂದಲೂ ಜ್ಞಾನದಿಂದ ಹೋಗುವುದಾದ್ದರಿಂದಲೂ (ಹಾಗೆ ತಿಳಿಸಿದೆ). ಅದನ್ನೇ ಅನಿರ್ವಚನೀಯವಾದ ಜಡಾತ್ಮಕವಾದ "ಮಾಯೆ" ಮುಂತಾದ ಶಬ್ದಗಳಿಂದ ಸೇರಿಸಿಕೊಂಡು ಹೇಳಿರುತ್ತದೆ. ಇಲ್ಲಿ ಜ್ಞಾನವೆಂದರೆ ಜಡವಲ್ಲದ ಬೋಧೆಯು ಅಥವಾ ಅದರ ಆಭಾಸದ ಚಿತ್ತವೃತ್ತಿ ಎಂದೋ, ಹೇಗೋ ಅದಕ್ಕೆ ಹೊಂದುವ ಹಾಗೆ ಕರೆದಿದೆ. ಅಲ್ಲಿ ಬೋಧವೆಂಬುದು ಜ್ಞಾನ ಎಂಬ ಶಬ್ದಕ್ಕೆ ಲಕ್ಷ್ಯಾರ್ಥವು, ಚಿತ್ತವೃತ್ತಿಯಾದರೋ (ಅದಕ್ಕೆ) ವಾಚ್ಯಾರ್ಥವೆಂದು ವಿಂಗಡಿಸಿಕೊಳ್ಳಬೇಕು. ಶುಕ್ತಿಜ್ಞಾನವು ಅದರ ಅಜ್ಞಾನವನ್ನು ಕಳೆದುಹಾಕುತ್ತದೆ ಎಂಬಲ್ಲಿ ಅದು ಬುದ್ಧಿವೃತ್ತಿಯಾದಜ್ಞಾನವು. ಅದರಿಂದ ತೊಲಗುವುದಾದ ಶುಕ್ತಿರಜತಕ್ಕೆ ಕಾರಣವಾದದ್ದು ಅಜ್ಞಾನವು. ಬ್ರಹ್ಮಜ್ಞಾನವು ಅಜ್ಞಾನವನ್ನು ಕಳೆಯುತ್ತದೆ ಎನ್ನುವಾಗಲೂ ಬ್ರಹ್ಮಾಕಾರವಾದ ಬುದ್ಧಿವೃತ್ತಿಯೇ ಜ್ಞಾನವು. ಅದರಿಂದ ತೊಲಗುವ ಅಜ್ಞಾನವಾದರೋ ಎಲ್ಲಾ ಜಡಕ್ಕೂ ಉಪಾದಾನವಾದ ಅವಿದ್ಯಾಶಕ್ತಿಯು ಎಂದು (ಹೇಳುತ್ತಾರೆ).

**೩೧. ಉಕ್ತಮತಂ ಭಾಷ್ಯಬಹಿರ್ಭೂತಂ ಯುಕ್ತ್ಯಪೇತಂ ಚ-** ತದೇತತ್ ಸರ್ವಮಶಾಂಕರಂ ಮತಮ್ । ಯತ ಆಹ ಭಗವಾನ್ ಭಾಷ್ಯಕಾರಃ "ಅಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ" ಇತಿ । ಏತೇ ತು ವಾದಿನೋ-ಽಧ್ಯಾಸಾತಿರಿಕ್ತಮಜ್ಞಾನಮವಿದ್ಯಾಮಾಹುಃ । "ಪಂಡಿತಾ ಅವಿದ್ಯೇತಿ ಮನ್ಯಂತೇ" ಇತ್ಯುಕ್ತೇರ್ನಾಯಂ ಭಾಷ್ಯಕಾರಸ್ಯ ಸ್ವಾಭಿಪ್ರಾಯಃ ಸ್ಯಾದಿತ್ಯಪಿ ಕಶ್ಚಿತ್ । ತತ್ತ್ವತೀವ ಮನ್ದಮ್ । "ವಸ್ತುಸ್ವರೂಪಾವಧಾರಣಂ ವಿದ್ಯಾಮಾಹುಃ" ಇತ್ಯಸ್ಯಾಪಿ ಪರಕೀಯಾಭಿಪ್ರಾಯತ್ವಪ್ರಸಂಗಾತ್ । ನ ಚ ತದಪೀಷ್ಟಮ್ । ತಥಾ ಹಿ ಸತಿ ವಿದ್ಯಾವಿದ್ಯಾಸ್ವರೂಪನಿರ್ಣಯ ಏವ ನ ಕೃತೋಽತ್ರ ಭಗವತೇತ್ಯಾಪದ್ಯೇತ । ತತಶ್ಚ ವ್ಯರ್ಥಾಲಾಪೋ ಭಾಷ್ಯಕಾರ ಇತಿ ವ್ಯಕ್ತಂ ಕಲ್ಪಿತಂ ಸ್ಯಾತ್ । ತಸ್ಮಾತ್ ಪಂಡಿತಾ ಇತಿ ಪೂಜಾರ್ಥಮ್, ನ ಸ್ವಾಭಿಪ್ರಾಯ-ವ್ಯಾವೃತ್ತ್ಯರ್ಥಮಿತ್ಯೇವ ಸುವ್ಯಾಖ್ಯಾನಮ್ । ಅತಃ ಸಾಧೂಕ್ತಮಧ್ಯಾಸಾತಿರಿಕ್ತ-ಭಾವಾವಿದ್ಯಾಂಗೀಕರಣಮಶಾಂಕರಮಿತಿ ॥

---

**೩೧. ಇದುವರೆಗೆ ಹೇಳಿದ ಮತವು ಭಾಷ್ಯಕ್ಕೆ ಹೊರಚ್ಚಾದದ್ದು ಮತ್ತು ಯುಕ್ತಿಗೆ ವಿರುದ್ಧವೂ ಆದದ್ದು** – ಇದೆಲ್ಲವೂ ಶ್ರೀಶಂಕರರಿಗೆ ಒಪ್ಪಾಗದ ಅಭಿಪ್ರಾಯವು. ಏಕೆಂದರೆ "ಅಧ್ಯಾಸವನ್ನೇ ಪಂಡಿತರು ಅವಿದ್ಯೆ ಎಂದು ಕರೆಯುತ್ತಾರೆ" ಎಂದು ಭಗವಂತರಾದ ಭಾಷ್ಯಕಾರರು ಹೇಳಿರುತ್ತಾರೆ. ಈ ವಾದಿಗಳು ಅಧ್ಯಾಸಕ್ಕಿಂತ ಬೇರೆಯಾದ ಅಜ್ಞಾನವನ್ನು ಅವಿದ್ಯೆ ಎನ್ನುವರು. "ಪಂಡಿತರು ಅವಿದ್ಯೆ ಎಂದು ಹೇಳುತ್ತಾರೆ" ಎಂದು ಹೇಳಿರುವದರಿಂದ ಇದು ಭಾಷ್ಯಕಾರರ ಅಭಿಪ್ರಾಯವಲ್ಲ ಎಂತಲೂ ಕೆಲವರು ಹೇಳುತ್ತಾರೆ ! ಅದು ಅತೀವ ದಡ್ಡತನ ! ಏಕೆಂದರೆ ಆಗ "ವಸ್ತುಸ್ವರೂಪವನ್ನು ಗೊತ್ತುಮಾಡುವುದನ್ನೇ ವಿದ್ಯೆ ಎನ್ನುತ್ತಾರೆ" ಎಂಬುದೂ ಬೇರೆಯುವರ ಅಭಿಪ್ರಾಯವೆಂದಾಗುತ್ತದೆ. ಅದೂ ಇಷ್ಟವೇ ಎನ್ನುವುದಕ್ಕಿಲ್ಲ. ಏಕೆಂದರೆ ಆಗ ಇಲ್ಲಿ ಭಾಷ್ಯಕಾರರು ವಿದ್ಯಾವಿದ್ಯಾಸ್ವರೂಪದ ನಿರ್ಣಯುವನ್ನೇ ಮಾಡಿಲ್ಲವೆಂದಾಗಿಬಿಡುತ್ತದೆ. ಆಗ ಭಾಷ್ಯಕಾರರು ವ್ಯರ್ಥವಾಗಿ ಮಾತನಾಡುವವರು ಎಂದು ಸ್ಪಷ್ಟವಾಗಿ ಕಲ್ಪಿಸಿದಂತಾಗುತ್ತದೆ. ಆದ್ದರಿಂದ "ಪಂಡಿತಾಃ" ಎಂಬುದು ಗೌರವಕ್ಕಾಗಿ ಹೇಳಿದ್ದೇ ಹೊರತು ತಮ್ಮ ಅಭಿಪ್ರಾಯವಲ್ಲ ಎನ್ನುವುದಕ್ಕಲ್ಲ ಎಂಬುದೇ ಸರಿಯಾದ ವ್ಯಾಖ್ಯಾನವು. ಆದ್ದರಿಂದ ಅಧ್ಯಾಸಕ್ಕಿಂತ ಬೇರೆಯಾದ ಭಾವಾವಿದ್ಯೆಯನ್ನು ಒಪ್ಪುವುದು ಶಂಕರರ ಮತವಲ್ಲ ಎಂದು ಹೇಳಿದ್ದು ಸರಿಯಾಯಿತು.

ನನ್ವಶಾಂಕರಮಪಿ ಯುಕ್ತಿಮದಿದಂ ಮತಮ್ । ಅನಾದೇಃ ಸಂಸಾರಸ್ಯಾ-ನಾದಿಹೇತ್ವಾಕಾಂಕ್ಷಾ ಹಿ ನ್ಯಾಯ್ಯಾ । ಅಧ್ಯಾಸಸ್ತು ಸಾದಿಃ । ಸ ಕಥಂ ಸಂಸಾರಾನರ್ಥಹೇತುಃ ಸ್ಯಾದಿತಿ ಚೇತ್ । ಅತ್ರೋಚ್ಯತೇ । ನ ಯುಕ್ತಿಮದಿದಂ ಮತಮ್ । ನ ಹ್ಯಧ್ಯಾಸಸ್ಯ ಸಂಸಾರಾನರ್ಥಹೇತುತ್ವಾನುಪಪತ್ತಿ-ಮಾತ್ರೇಣಾಸಂಭಾವಿತಾದೃಷ್ಟಶ್ರುತಾನಾದ್ಯಜ್ಞಾನಕಲ್ಪನಂ ಯುಕ್ತಿಯುಕ್ತಂ ಭವೇತ್ । ನ ಚಾಧ್ಯಾಸಸ್ಯಾನಾದಿಸಂಸಾರಕಲ್ಪನೇ ಸಾಮರ್ಥ್ಯಂ ನಾಸ್ತಿ । ನನು ಸಾದಿರಧ್ಯಾಸಃ । ತಸ್ಯ ಕಥಮನಾದಿಸಂಸಾರಹೇತುತ್ವಮಿತಿ ? ಅನಭಿಜ್ಞೋ ಭವಾನಸ್ಯಾಧ್ಯಾಸವೃತ್ತಸ್ಯ । ಅಧ್ಯಾಸೋ ಹಿ ನಾಮ ಭ್ರಾಂತಿಃ । ತಥಾ ಚಾಧ್ಯಾಸೋಽನರ್ಥಹೇತುರಿತಿ ಬ್ರುವತಾ ತಾವದೇವೋಕ್ತಂ ಭವತಿ ಯಾವದುಕ್ತಂ ಭವತಿ ಸಂಸಾರಾನರ್ಥೋ ನಾಮ ಭ್ರಾಂತಿಮಾತ್ರಂ ನ ವಸ್ತುಸದಿತಿ । ನ ಚ ಭ್ರಾಂತಿಃ ಕ್ವಚಿದಪಿ ಯುಕ್ತಿಸಹಾ ದೃಷ್ಟಾ । ಯೇನ

---

ಈ ಮತವು ಶಾಂಕರಮತವಲ್ಲವಾದರೂ ಯುಕ್ತಿಯುಕ್ತವಾಗಿದೆಯಲ್ಲಾ, ಅನಾದಿಯಾದ ಸಂಸಾರಕ್ಕೆ ಅನಾದಿಯಾದದ್ದೇ ಕಾರಣವಾಗಬೇಕೆಂಬುದು ಸರಿಯಾಗಿದೆಯಲ್ಲ ! ಅಧ್ಯಾಸವಾದರೋ ಸಾದಿಯಾಗಿದೆ. ಅದು ಹೇಗೆ ಸಂಸಾರಾನರ್ಥಕ್ಕೆ ಕಾರಣವಾದೀತು ? ಎಂದರೆ – ಹೇಳುತ್ತೇವೆ – ಈ ಮತವು ಯುಕ್ತವಾದದ್ದಲ್ಲ, ಅಧ್ಯಾಸವು ಸಂಸಾರದ ಅನರ್ಥಕ್ಕೆ ಹೇತುವಾಗುವುದು ಹೊಂದುವುದಿಲ್ಲ ಎಂಬಷ್ಟೇ ಕಾರಣದಿಂದ, ಹೇಗೂ ಊಹಿಸುವುದಕ್ಕೂ ಆಗದ, ಯಾರೂ ಕಾಣದ ಮತ್ತು ಕೇಳದ ಅನಾದಿಯಾದ ಅಜ್ಞಾನವನ್ನು ಕಲ್ಪಿಸುವದು ಯುಕ್ತಿಯುಕ್ತವಾಗುವುದಿಲ್ಲ. ಅಧ್ಯಾಸಕ್ಕೆ ಅನಾದಿಯಾದ ಸಂಸಾರವನ್ನು ಕಲ್ಪಿಸುವ ಸಾಮರ್ಥ್ಯವಿಲ್ಲವೆಂಬುದೂ ಇಲ್ಲ. ಅಧ್ಯಾಸವು ಸಾದಿಯಲ್ಲವೆ ? ಅದು ಹೇಗೆ ಅನಾದಿಸಂಸಾರಕ್ಕೆ ಕಾರಣ-ವಾಗುತ್ತದೆ ? (ಎಂದರೆ) ನಿನಗೆ ಅಧ್ಯಾಸದ ತತ್ತ್ವ ಗೊತ್ತಿಲ್ಲ (ವೆಂದೇ ಹೇಳಬೇಕಾಗುತ್ತದೆ). ಅಧ್ಯಾಸವೆಂದರೆ ಭ್ರಾಂತಿಯು. ಹಾಗಾಗಲಾಗಿ ಅಧ್ಯಾಸವು ಅನರ್ಥಕ್ಕೆ ಕಾರಣವೆಂದು ಹೇಳುವಾತನು ಅಷ್ಟನ್ನೇ ಹೇಳಿದಂತಾಗುತ್ತದೆ. ಎಷ್ಟನ್ನು ? ಎಂದರೆ, ಸಂಸಾರಾನರ್ಥವೆಂಬುದು ಭ್ರಾಂತಿ ಮಾತ್ರವೇ, ನಿಜವಾಗಿರುವುದಲ್ಲ (ಎಂದು) ಹೇಳಿದಂತಾಗುತ್ತದೆ. ಎಲ್ಲೂ ಭ್ರಾಂತಿ ಎಂಬುದು ಎಲ್ಲಾ ಯುಕ್ತಿಗೆ ಹೊಂದಿಕೊಂಡಿರುವುದು ಕಂಡುಬಂದಿಲ್ಲ. ಹಾಗೇನಾದರೂ (ಕಂಡಿದ್ದರೆ) ಅದರ ವಿಷಯದಲ್ಲೂ (ಇದು)

ತತ್ರಾಪ್ಯನುಪಪತ್ತಿಶ್ಚೋದ್ಯೇತ । ಅತೋಽಂಗೀಕೃತ್ಯಾಪ್ಯಧ್ಯಾಸಸ್ಯ ಸಾದಿತ್ವಂ ಯದಿ ಕಶ್ಚಿದ್ಬ್ರೂಯಾತ್ ತಸ್ಯ ಸಂಸಾರಾನರ್ಥಹೇತುತ್ವಂ ತದಾಪಿ ನಾತ್ರ ಕಂಚಿದ್ದೋಷಮಾಸಂಜಯಿತುಂ ಶಕ್ಯತೇ । ವಸ್ತುತಸ್ತ್ವಧ್ಯಾಸೋಽನಾದಿರೇವ। ಯಥಾ ಚೇದಂ ತಥಾ ಸ್ಪಷ್ಟೀಕರಿಷ್ಯತೇ । ಅತೋ ನ ದೋಷಃ । ಏತೇನ ಜ್ಞಾನಾಭಾವರೂಪಾಜ್ಞಾನಸ್ಯೋಪಾದಾನತ್ವಾನುಪಪತ್ತಿಚೋದನಾಪಿ ನಿರಸ್ತಾ। ಭ್ರಾಂತೇರ್ಹೇತುಂ ವಿನಾಪಿ ವಿವೇಕಾಭಾವೇನೈವ ಪ್ರತೀತ್ಯುಪಪತ್ತೇರನಾದ್ಯುಪಾದಾನಾನಪೇಕ್ಷಣಾತ್ । ನ ಚ ಜ್ಞಾನಾಭಾವೋ ನಾಜ್ಞಾನಶಬ್ದಾರ್ಥಃ। ಭಗವತಾ ಭಾಷ್ಯಕಾರೇಣೈವ ತತ್ರ ತತ್ರ ತಥಾ ವ್ಯವಹಾರಾತ್ । "ಅವಿದ್ಯಾ ವಿಪರೀತಗ್ರಾಹಕಃ, ಸಂಶಯೋಪಸ್ಥಾಪಕೋ ವಾ, ಅಗ್ರಹಣಾತ್ಮಕೋ ವಾ" (ಗೀ. ಭಾ. ೧೩-೨) ಇತಿ , "ಯದಿ ಜ್ಞಾನಭಾವೋ ಯದಿ ಸಂಶಯಜ್ಞಾನಂ ಯದಿ ವಿಪರೀತಜ್ಞಾನಂ ವೋಚ್ಯತೇಽಜ್ಞಾನಮಿತಿ, ಸರ್ವಂ ಹಿ ತಜ್ಜ್ಞಾನೇನೈವ

---

ಹೊಂದುವುದಿಲ್ಲವಲ್ಲ ? ಎಂದು ಕೇಳಬಹುದಾಗಿತ್ತು ! ಆದ್ದರಿಂದ ಅಧ್ಯಾಸವು ಆದಿಯಾಗಿರುವುದು, ಎಂದು ಒಪ್ಪಿಕೊಂಡರೂ ಅದು ಸಂಸಾರಾನರ್ಥಕ್ಕೆ ಕಾರಣವಾಗಿದೆ ಎಂದು ಯಾರಾದರೂ ಹೇಳಿದರೆ ಆಗಲೂ ಈ ವಿಷಯಕ್ಕೆ ಯಾವ ದೋಷವನ್ನೂ ಅಂಟಿಸುವುದಕ್ಕಾಗುವುದಿಲ್ಲ. ನಿಜವಾಗಿ ಅಧ್ಯಾಸವು ಅನಾದಿಯೇ ಆಗಿರುತ್ತದೆ. ಇದು ಹೇಗೆ ಎಂಬುದನ್ನು ಮುಂದೆ ಸ್ಪಷ್ಟಪಡಿಸಲಾಗುವುದು. ಆದ್ದರಿಂದ ಇಲ್ಲಿ (ಏನೂ) ದೋಷವಿಲ್ಲ. ಇಷ್ಟು ಹೇಳಿದ್ದರಿಂದ ಜ್ಞಾನದ ಅಭಾವರೂಪವಾದ ಅಜ್ಞಾನಕ್ಕೆ ಉಪಾದಾನವೆಂಬುದು ಹೊಂದುವುದಿಲ್ಲವಲ್ಲ ! ಎಂಬ ಆಕ್ಷೇಪಕ್ಕೂ ಉತ್ತರಕೊಟ್ಟಂತಾಯಿತು. ಭ್ರಾಂತಿಗೆ ಹೇತುವು ಇಲ್ಲವಾದರೂ ವಿಂಗಡವಾಗದೇ ತೋರುವುದೆಂಬುದು ಹೊಂದುತ್ತದೆಯಾದ್ದರಿಂದ ಅನಾದಿಯಾದ ಉಪಾದಾನದ ಅಪೇಕ್ಷೆ ಇರುವುದಿಲ್ಲ. ಜ್ಞಾನದ ಅಭಾವವು ಅಜ್ಞಾನಶಬ್ದದ ಅರ್ಥವಲ್ಲ ಎಂಬುದೇನಲ್ಲ. ಭಗವಂತರಾದ ಭಾಷ್ಯಕಾರರೇ ಅಲ್ಲಲ್ಲಿ (ಅದನ್ನೂ ಅಜ್ಞಾನವೆಂತಲೇ) ವ್ಯವಹರಿಸಿರುವುದು ಕಂಡುಬಂದಿದೆ. "ಅವಿದ್ಯೆಯು ತಪ್ಪಾಗಿತಿಳಿಸಿಕೊಡುವುದು, ಸಂಶಯವನ್ನುಂಟುಮಾಡುವುದು, ಅಥವಾ ಅಗ್ರಹಣವನ್ನುಂಟುಮಾಡುವುದು" (ಗೀ. ಭಾ. ೧೩-೧೨) ಎಂತಲೂ, "ಅಜ್ಞಾನವೆಂದು, ಜ್ಞಾನದ ಅಭಾವವನ್ನಾಗಲೀ ಸಂಶಯಜ್ಞಾನವನ್ನಾಗಲೀ, ತಪ್ಪುತಿಳಿವಳಿಕೆಯನ್ನಾಗಲೀ ಯಾವುದನ್ನು ಹೇಳಿದರೂ ಎಲ್ಲವೂ ಜ್ಞಾನದಿಂದಲೇ ಕಳೆಯಲ್ಪಡುತ್ತದೆ"

ನಿವರ್ತ್ಯತೇ" (ಬೃ. ಭಾ. ೩-೩-೧) ಇತಿ ಚ । ನ ಚ ವಿಪರೀತಜ್ಞಾನಾದಿ-ವೃತ್ತ್ಯತಿರಿಕ್ತಸ್ಯಾಜ್ಞಾನಸ್ಯ ಕಟಾಕ್ಷೇಣಾಪಿ ವೀಕ್ಷಣಮುಪಲಭ್ಯತೇ ಭಾಷ್ಯೇ । ನ ಚ ವಾಚ್ಯಮ್ – ಅನಾದಿಜಡೋಪಾದಾನಂ ಮಾಯಾಶಕ್ತ್ಯಾದ್ಯಪರಾ-ಭಿಧಾನಮಸ್ತ್ಯೇವ ಸಂಮತಂ ಭಾಷ್ಯಕಾರಸ್ಯಾಪೀತಿ । ಮಾಯಾಯಾ ಅವಿದ್ಯಾಕಲ್ಪಿತತ್ವೇನೈವ ನಿರ್ದೇಶಾದ್ಭಾಷ್ಯೇ । ತಥಾ ಹಿ ವಕ್ಷ್ಯತಿ – "ಸರ್ವಜ್ಞಸ್ಯೇಶ್ವರಸ್ಯಾತ್ಮಭೂತ ಇವಾವಿದ್ಯಾಕಲ್ಪಿತೇ ನಾಮರೂಪೇ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇ ಸಂಸಾರಪ್ರಪಂಚಬೀಜಭೂತೇ ಸರ್ವಜ್ಞಸ್ಯೇಶ್ವರಸ್ಯ ಮಾಯಾ, ಶಕ್ತಿಃ, ಪ್ರಕೃತಿಃ – ಇತಿ ಶ್ರುತಿಸ್ಮೃತ್ಯೋ-ರಭಿಲಪ್ಯೇತೇ" (ಸೂ. ಭಾ. ೨-೧-೧೪) ಇತಿ । **ವಾರ್ತಿಕಕಾರೇಣಾ-ಪ್ಯುಕ್ತಮ್** – "ಅಜ್ಞಾನಮಿಥ್ಯಾಸಂಶೀತಿವ್ಯತಿರೇಕೇಣ ನಾಪರಮ್ । ಪ್ರತ್ಯರ್ಥಿ ಮೇಯವಿಷಯೇ ಮಾನಸ್ಯೇಹಾಸ್ತಿ ಕಿಂಚನ" ॥ (ಬೃ. ವಾ. ೪-೪-೭೮೭) ಇತಿ । ತದೇವಂ ಭ್ರಾಂತೇರೇವಾಧ್ಯಾಸರೂಪಾಯಾ ವಿದ್ಯಾವಿರೋಧಿತ್ವೇನಾ-

---

(ಬೃ.ಭಾ. ೩-೩-೧) ಎಂದೂ ಹೇಳಿರುತ್ತಾರೆ. ವಿಪರೀತಜ್ಞಾನವೇ ಮುಂತಾದ (ಅಂತಃಕರಣದ) ವೃತ್ತಿಗಿಂತ ಬೇರೆಯಾದ ಅಜ್ಞಾನವನ್ನು ಕುಡಿಗಣ್ಣಿನಿಂದಲೂ ನೋಡಿರುವುದನ್ನು ನಾವು ಭಾಷ್ಯದಲ್ಲಿ ಕಾಣೆವು. ಅನಾದಿಯಾದ ಎಲ್ಲಾ ಜಡಕ್ಕೂ ಉಪಾದಾನವಾದ ಮಾಯೆ, ಶಕ್ತಿ ಮುಂತಾದ ಬೇರೆ ಬೇರೆ ಶಬ್ದಗಳಿಂದ ಕರೆಸಿಕೊಂಡ (ಒಂದಾನೊಂದು ಅವಿದ್ಯೆಯು) ಭಾಷ್ಯಕಾರರಿಗೆ ಸಂಮತವಾಗಿ ಇದ್ದೇ ಇದೆ ಎಂದು ಹೇಳಬಾರದು. ಏಕೆಂದರೆ ಮಾಯೆಯನ್ನು ಅವಿದ್ಯಾಕಲ್ಪಿತವಾದದ್ದೆಂದು ಭಾಷ್ಯದಲ್ಲಿ ನಿರ್ದೇಶಮಾಡಿರುತ್ತದೆ. ಹಾಗೆಯೇ ಅಲ್ಲವೇ "ಸರ್ವಜ್ಞನಾದ ಈಶ್ವರನಾದವನ ಸ್ವರೂಪವೋ ಎನ್ನುವ ಹಾಗೆ ಅವಿದ್ಯಾಕಲ್ಪಿತವಾದ ನಾಮರೂಪಗಳು ಪರಮಾತ್ಮನೆಂದಾಗಲೀ ಅವನಿಗಿಂತ ಬೇರೆ ಎಂದಾಗಲೀ ಹೇಳುವುದಕ್ಕೆ ಬಾರದ ಸಂಸಾರಪ್ರಪಂಚಕ್ಕೆ ಬೀಜವಾಗಿರುವುದಾಗಿದೆ. ಅದು ಸರ್ವಜ್ಞನಾದ ಈಶ್ವರನ ಮಾಯೆ, ಶಕ್ತಿ, ಪ್ರಕೃತಿ ಎಂಬೀ ರೀತಿಯಾಗಿ ಶ್ರುತಿಸ್ಮೃತಿಗಳಲ್ಲಿ ಕರೆಸಿಕೊಂಡಿದೆ" (ಸೂ. ಭಾ. ೨-೧-೧೪) ಎಂದು ಹೇಳಿರುತ್ತಾರೆ ! ವಾರ್ತಿಕಕಾರರೂ ಹೀಗೆಯೇ ಹೇಳಿರುತ್ತಾರೆ. "ಅಜ್ಞಾನಸಂಶಯಮಿಥ್ಯಾಜ್ಞಾನಕಿಂತ ಬೇರೆಯಾಗಿ ಪ್ರಮೇಯ ವಿಷಯದಲ್ಲಿ ಬೇರೆ ಅರಿವೆಂಬುದು ಯಾವುದೂ ಇರುವುದಿಲ್ಲ". (ಬೃ. ವಾ. ೪-೪-೭೮೭) ಹೀಗೆ ಅಧ್ಯಾಸರೂಪವಾದ ಭ್ರಾಂತಿಯೇ ವಿದ್ಯೆಗೆ

ವಿದ್ಯಾಶಬ್ದವಾಚ್ಯತ್ವೋಪಪತ್ತೌ ಸಿದ್ಧಾಯಾಂ ತಸ್ಯಾ ಏವ ಚ ಸರ್ವ-ಜಡಪ್ರತ್ಯುಪಸ್ಥಾಪನೇ ಸಾಮರ್ಥ್ಯಸಂಭವೇ ನಾನಾದಿಭಾವಾತ್ಮಕಮಜ್ಞಾನಂ ನಾಮ ಕಿಂಚಿತ್ ಸರ್ವಜಡೋಪಾದಾನತ್ವೇನ ಜ್ಞಾನನಿವರ್ತ್ಯತ್ವೇನ ವಾ ಮುಧಾ ಕಲ್ಪಯಿತುಂ ಯುಕ್ತಮ್ । ಅತೋ ನ ಕೇವಲಮಶಾಂಕರಮಿದಂ ಮತಮ್, ಕಿಂ ತು ಸರ್ವಥಾ ಯುಕ್ತ್ಯಪೇತಮಪೀತಿ ಸಿದ್ಧಮ್ ॥

ತಸ್ಮಾನ್ನಾಸ್ತಿ ಪ್ರತಿವಾದ್ಯಭಿಮತಾ ಅಧ್ಯಾಸಾತಿರಿಕ್ತಾ ಅವಿದ್ಯಾ । ಅಥಾಽಪ್ಯ-ಭ್ಯುಪಗಮ್ಯ ಬ್ರೂಮಃ । ನೇದೃಶ್ಯಾ ವಿದ್ಯಾವಿನಾಶ್ಯತ್ವಂ ಸಂಭವತಿ । ಭಿನ್ನಾಶ್ರಯತ್ವಾತ್ । ಅವಿದ್ಯಾ ಹ್ಯಾತ್ಮಾಶ್ರಯಾಽಭ್ಯುಪಗಮ್ಯತೇ । ವಿದ್ಯಾ ಪುನರ್ವೃತ್ತಿರೂಪಾ ಅಂತಃಕರಣಾಶ್ರಯಾ । ತದೇವಂ ಭಿನ್ನಾಶ್ರಯಯೋಃ ಕಥಮನಯೋಃ ಸಮಾಗಮೋ ವಧ್ಯಘಾತಕಭಾವೋ ವಾ ಸ್ಯಾದಿತಿ ? ನನ್ವವಿದ್ಯಾಪರಿಣಾಮತ್ವಾದಂತಃಕರಣಸ್ಯ ನೈತದಸಂಭಾವಿತಮ್ । ನ

---

ವಿರೋಧಿಯಾಗಿರುವುದರಿಂದ ಅದೇ ಅವಿದ್ಯಾ ಎಂಬ ಶಬ್ದಕ್ಕೆ ತಕ್ಕದ್ದಾಗಿರುವು-ದೆಂಬುದು ಹೊಂದುತ್ತಿರಲಾಗಿ ಆ ಅವಿದ್ಯೆಯೇ ಎಲ್ಲಾ ಜಡವಸ್ತುಗಳನ್ನೂ ತಂದೊಡ್ಡುವುದರಲ್ಲಿ ಸಾಮರ್ಥ್ಯವುಳ್ಳದ್ದಾಗಿದೆ ಎಂಬುದು ಹೊಂದುತ್ತಿರಲಾಗಿ, ಅನಾದಿಯಾದ ಭಾವಾತ್ಮಕವಾದ ಒಂದಾನೊಂದು ಎಲ್ಲಾ ಜಡವಸ್ತುವಿಗೂ ಉಪಾದಾನವಾದ ಅವಿದ್ಯೆಯನ್ನು ಜ್ಞಾನದಿಂದ ತೊಲಗುವಂಥದ್ದೆಂದು ವೃಥಾ ಕಲ್ಪಿಸುವುದು ಸರಿಯಲ್ಲ. ಆದ್ದರಿಂದ ಶಂಕರರಿಗೆ ವಿರುದ್ಧವಾದದ್ದೆಂಬುದಷ್ಟೇ ಅಲ್ಲದೇ ಇದು ಸಂಪೂರ್ಣ ಯುಕ್ತಿಗೂ ಹೊರಚ್ಚಾದದ್ದೆಂದು ಸಿದ್ಧವಾಯಿತು.

ಆದ್ದರಿಂದ ಪ್ರತಿವಾದಿಗಳಿಗೆ ಒಪ್ಪಿಗೆಯಾದ ಅಧ್ಯಾಸಕ್ಕಿಂತ ಬೇರೆಯದಾದ ಅವಿದ್ಯೆ ಇದೆ ಎಂಬುದಿಲ್ಲ. ಆದರೂ ಅದನ್ನು ಒಪ್ಪಿಕೊಂಡು ಹೇಳುವೆವು. ಈ ತರಹದ್ದಾದ ಅವಿದ್ಯೆ ಎಂಬುದಿದ್ದರೆ ಅದು ವಿದ್ಯೆಯಿಂದ ತೊಲಗುವು-ದೆಂಬುದೂ ಹೊಂದುವುದಿಲ್ಲ. ಏಕೆಂದರೆ ಆಶ್ರಯವು (ಆಗ) ಬೇರೆ ಬೇರೆ ಆಗುವುದರಿಂದ, ಅವಿದ್ಯೆಯು ಆತ್ಮಾಶ್ರಯವಾದದ್ದೆಂದಲ್ಲವೆ (ನೀವು) ಒಪ್ಪಿರುವುದು ? ವಿದ್ಯೆಯಾದರೋ ವೃತ್ತಿರೂಪವಾಗಿ ಅಂತಃಕರಣವನ್ನು ಆಶ್ರಯಿಸಿಕೊಂಡಿರುವುದು. ಹೀಗಿರುವ ಭಿನ್ನಾಶ್ರಯವಾದ ಇವೆರಡಕ್ಕೆ ಸಂಬಂಧವಾಗಲೀ ಬಾಧ್ಯಬಾಧಕವಾಗಲೀ ಹೇಗೆ ಹೊಂದುತ್ತದೆ? ಅಲ್ಲಾ ! ಅಂತಃಕರಣವು ಅವಿದ್ಯೆಯ ಪರಿಣಾಮವಾದ್ದರಿಂದ ಇಲ್ಲೇನೂ ಹೊಂದದೇ

ಹ್ಯವಿದ್ಯಾಂತಃಕರಣೇऽತ್ಯಂತಮೇವ ಭಿನ್ನೇ, ಯೇನೇದಂ ಚೋದ್ಯಂ ಭವೇತ್। ಕಿಂ ತ್ವಾತ್ಮಾಶ್ರಿತಾವಿದ್ಯಾಯಾಃ ಪರಿಣಾಮ ಏವಾಂತಃಕರಣಮ್ । ತಥಾ ಚಾಂತಃಕರಣಾಶ್ರಯಾವಿದ್ಯಾ ಸ್ವಾಶ್ರಯಕಾರಣರೂಪಾವಿದ್ಯಾಶ್ರಯಾಪಿ ಭವತಿ, ತಜ್ಜನ್ಯಾ ಚ ಪರಂಪರಯಾ । ನ ಚ ತಜ್ಜನ್ಯೈವ ಸತಿ ವಿದ್ಯಾ ಕಥಂ ತಾಮೇವಾವಿದ್ಯಾಂ ವಿನಾಶಯೇದಿತಿ ಶಂಕ್ಯಮ್ । ತಜ್ಜನ್ಯಸ್ಯಾಪಿ ತದ್ವಿನಾಶಕತ್ವೇ ದೃಷ್ಟಾಂತಭಾವಾತ್ । ಯಥಾ ಹಿ ವೇಣುಜೋऽಪ್ಯಗ್ನಿಸ್ತಂ ಸಮೂಲಂ ದಹತಿ, ಏವಮವಿದ್ಯಾಜನ್ಯಾಂತಃಕರಣಜನ್ಯಮಪಿ ಬ್ರಹ್ಮಜ್ಞಾನಮವಿದ್ಯಾಂ ದಂದಹೀತೀತಿ ನ ಕಿಂಚಿದನುಪಪನ್ನಮಿತಿ । ನೇತ್ಯುಚ್ಯತೇ । ಯುಕ್ತಂ ತತ್ರ ಯದಗ್ನಿಃ ಕಾರಕತ್ವಾದ್ವೇಣುಂ ದಹತೀತಿ । ತಥಾ ದೃಷ್ಟತ್ವಾತ್ । ಜ್ಞಾನಸ್ಯ ಪುನಃ ಕಾರಕತ್ವಸ್ಯಾದೃಷ್ಟತ್ವಾತ್, ತಸ್ಯಾವಿದ್ಯಾಜನ್ಯತ್ವಸ್ಯಾದ್ಯಾಪ್ಯಸಿದ್ಧತ್ವಾಚ್ಚ

---

ಇರುವುದಿಲ್ಲವಲ್ಲ ! ಅವಿದ್ಯೆ ಮತ್ತು ಅಂತಃಕರಣವು ಅತ್ಯಂತವಾಗಿ ಭಿನ್ನವಲ್ಲ. ಹಾಗಿದ್ದರೆ ಈ ಆಕ್ಷೇಪವು ಸರಿಯಾಗುತ್ತಿತ್ತು ! ಆದರೆ ಆತ್ಮಾಶ್ರಿತವಾದ ಅವಿದ್ಯೆಯ ಪರಿಣಾಮವೇ ಆಗಿದೆ ಅಂತಃಕರಣವೆಂಬುದು ! ಹಾಗಾಗಲಾಗಿ ಅಂತಃಕರಣವನ್ನಾಶ್ರಯಿಸಿದ ಅವಿದ್ಯೆಯು ತನಗೆ ಆಶ್ರಯವಾದ ಕಾರಣರೂಪವಾದ ಅವಿದ್ಯೆಗೂ ಆಶ್ರಯವಾಗುತ್ತದೆ ಮತ್ತು ಪರಂಪರೆಯಿಂದ ಅದರಿಂದ ಹುಟ್ಟುವಂಥದ್ದೂ ಆಗಬಹುದಾಗಿದೆ. ಅದರಿಂದಲೇ ಹುಟ್ಟಿದ ವಿದ್ಯೆಯು ಆ ಅವಿದ್ಯೆಯುನ್ನು ಹೇಗೆ ನಾಶಗೊಳಿಸೀತು ? ಎಂದು ಸಂದೇಹಪಡಬಾರದು. ಅದರಿಂದ ಹುಟ್ಟಿದ್ದಾದರೂ ಅದನ್ನು ನಾಶಪಡಿಸಬಹುದು ಎಂಬುದಕ್ಕೆ ದೃಷ್ಟಾಂತವಿದೆ. ಬಿದಿರಿನಿಂದ ಹುಟ್ಟಿದ ಅಗ್ನಿಯು ಬೇರುಸಮೇತ ಬಿದಿರಿನ ಹಿಂಡನ್ನೇ ಹೇಗೆ ಸುಟ್ಟುಹಾಕುತ್ತದೋ ಹಾಗೆಯೇ ಅವಿದ್ಯೆಯಿಂದುಂಟಾದ ಅಂತಃಕರಣದಲ್ಲಿ ಹುಟ್ಟಿದ ಬ್ರಹ್ಮವಿದ್ಯೆಯು ಅವಿದ್ಯೆಯನ್ನು ಸುಟ್ಟುಹಾಕುತ್ತದೆ ಎಂಬುದು ಹೊಂದದೇ ಇರುವುದೇನಲ್ಲ. ಎಂದರೆ – ಇದು ಸರಿಯಲ್ಲ ಎನ್ನುವೆವು. ದೃಷ್ಟಾಂತದಲ್ಲಿ ಅಗ್ನಿಯು ಕಾರಕ(ಸಾಧನ)ವಾದ್ದರಿಂದ ಬಿದಿರನ್ನು ಸುಡುತ್ತದೆ ಎಂಬುದು ಸರಿಯಾಗುತ್ತದೆ, ಏಕೆಂದರೆ ಹಾಗೆ ಕಂಡಿರುವುದರಿಂದ, ಆದರೆ ಜ್ಞಾನವು ಕಾರಕವಾಗಿದೆ ಎಂಬುದು ಕಂಡಿಲ್ಲವಾದ್ದರಿಂದಲೂ (ವಿದ್ಯೆಯು ಅವಿದ್ಯೆಯನ್ನು ಸುಡುತ್ತದೆ ಎಂಬುದು ಕಂಡಿಲ್ಲವಾದ್ದರಿಂದಲೂ) ಅದು ಅವಿದ್ಯೆಯಿಂದ ಹುಟ್ಟಿರುವುದೆಂಬುದು

ನಾವಿದ್ಯಾದಾಹಕತ್ವಂ ಯುಕ್ತಮ್ । ಅತೋ ವಿಷಮ ಉಪನ್ಯಾಸಃ । ವೃತ್ತಿರೂಪಾಯಾಸ್ತ್ವವಿದ್ಯಾಯಾ ವಿದ್ಯಾಸಮಾನಾಶ್ರಯತ್ವಾತ್, ವಿದ್ಯಾಯಾಃ ಸ್ವೋತ್ಪತ್ತಿಮಾತ್ರೇಣಾಧ್ಯಾಸರೂಪಾವಿದ್ಯಾನಿವರ್ತಕತ್ವಸ್ಯ ಶುಕ್ತ್ಯಾದಿಜ್ಞಾನ-ಸ್ಥಲೇ ದೃಷ್ಟತ್ವಾಚ್ಚ ಸಂಭವತಿ ತಾದೃಶಾವಿದ್ಯಾಯಾಃ ತನ್ನಿವರ್ತ್ಯತ್ವಮ್ । ಭಾಷ್ಯಸಂಮತಾ ಚೇಯಂ ವೃತ್ತಿರೂಪಾಽವಿದ್ಯಾ । "ಯಥಾ ಬುದ್ಧ್ಯಾದ್ಯಾ-ಹೃತಸ್ಯ ಶಬ್ದಾದ್ಯರ್ಥಸ್ಯಾವಿಕ್ರಿಯ ಏವ ಸನ್ ಬುದ್ಧಿವೃತ್ತ್ಯಾ ಅವಿವೇಕ-ವಿಜ್ಞಾನೇನಾವಿದ್ಯಯೋಪಲಬ್ಧಾ ಆತ್ಮಾ ಕಲ್ಪ್ಯತೇ, ಏವಮೇವಾತ್ಮಾನಾತ್ಮ-ವಿವೇಕಜ್ಞಾನೇನ ಬುದ್ಧಿವೃತ್ತ್ಯಾ ವಿದ್ಯಯಾ ಅಸತ್ಯರೂಪಯೈವ ಪರಮಾರ್ಥತೋಽವಿಕ್ರಿಯ ಏವಾತ್ಮಾ ವಿದ್ವಾನುಚ್ಯತೇ" (ಗೀ. ಭಾ. ೨-೨೧) ಇತ್ಯುದ್ಘೋಷಣದರ್ಶನಾತ್ । ಅತ ಏವ **ವಾರ್ತಿಕೇ**ಽಪಿ ಚಿನ್ಮಾತ್ರಸ್ಯ ವಿದ್ಯಾವಿದ್ಯೇ ನ ಸ್ತಃ, ಅಂತಃಕರಣವೃತ್ತ್ಯಧೀನಮೇವ ತು ವಿದ್ವತ್ತ್ವಮ-

---

ಇಂದಿಗೂ ಸಿದ್ಧವಾಗಿಲ್ಲವಾದ್ದರಿಂದಲೂ (ವಿದ್ಯೆಯು) ಅವಿದ್ಯೆಯನ್ನು ಸುಡುತ್ತದೆ, ಎಂಬುದು ಹೊಂದುವುದಿಲ್ಲ. ಆದ್ದರಿಂದ ದೃಷ್ಟಾಂತವು ವ್ಯತ್ಯಾಸವಾಗಿದೆ. ಆದರೆ ವೃತ್ತಿರೂಪವಾದ ಅವಿದ್ಯೆಯು ವಿದ್ಯೆಯೊಡನೆ ಸಮಾನಾಶ್ರಯ-ವಾಗುವದರಿಂದ ವಿದ್ಯೆಯು ತಾನು ಹುಟ್ಟಿದ ಮಾತ್ರದಿಂದಲೇ ಅಧ್ಯಾಸ-ರೂಪವಾದ ಅವಿದ್ಯೆಯನ್ನು ಕಳೆದುಹಾಕುತ್ತದೆ ಎಂಬುದು ಶುಕ್ತಿಯೇ ಮುಂತಾದ ಜ್ಞಾನ ಜಾಗದಲ್ಲಿ ಕಂಡುಬಂದಿರುವುದರಿಂದ ಆ ಅವಿದ್ಯೆಯು ಈ ವಿದ್ಯೆಯಿಂದ ಹೋಗುತ್ತದೆ ಎಂಬುದು ಹೊಂದುತ್ತದೆ. ಅವಿದ್ಯೆಯು ವೃತ್ತಿರೂಪವಾದದ್ದು ಎಂಬುದು ಭಾಷ್ಯಕಾರರಿಗೂ ಒಪ್ಪಿಗೆಯಾಗಿರುವುದಾಗಿದೆ. "ಬುದ್ಧಿಯೇ ಮುಂತಾದವುಗಳು ತಂದದ್ದಾದ ಶಬ್ದವೇ ಮುಂತಾದ ವಿಷಯಕ್ಕೆ ಆತ್ಮನು ತಾನು ಅವಿಕ್ರಿಯನಾಗಿಯೇ ಇದ್ದುಕೊಂಡು ತನಗೂ ಬುದ್ಧಿವೃತ್ತಿಗೂ ವಿಂಗಡಮಾಡಿಕೊಳ್ಳದಿರುವುದೆಂಬ ವಿಜ್ಞಾನದಿಂದ ತನ್ನನ್ನು ಅರಿಯುವವನು ಎಂದು ತಪ್ಪಾಗಿ ಹೇಗೆ ಕಲ್ಪಿಸಿಕೊಳ್ಳುತ್ತಾನೋ, ಇದೇ ರೀತಿ ಆತ್ಮಾನಾತ್ಮರ ವಿವೇಕವೆಂಬ ಸುಳ್ಳಾದ ಬುದ್ಧಿವೃತ್ತಿಯಾದ ವಿದ್ಯೆಯಿಂದ ತಾನು ಹಾಗೆಯೇ ಅವಿಕ್ರಿಯವೆ ಆಗಿದ್ದುಕೊಂಡು ವಿದ್ವಾಂಸನು (ಜ್ಞಾನಿಯು) ಎನಿಸಿಕೊಳ್ಳುತ್ತಾನೆ" ಎಂದು ಸ್ಪಷ್ಟವಾಗಿ (ಭ.ಗೀ. ೨-೨೧) ರಲ್ಲಿ ಹೇಳಿರುತ್ತಾರೆ. ಆದ್ದರಿಂದ ವಾರ್ತಿಕದಲ್ಲೂ ಚಿನ್ಮಾತ್ರಕ್ಕೆ ವಿದ್ಯಾವಿದ್ಯೆಗಳೆಂಬುದಿಲ್ಲ, ಅಂತಃಕರಣದ ವೃತ್ತ್ಯಧೀನವಾಗಿಯೇ ವಿದ್ವತ್ವವನ್ನೂ ಅವಿದ್ವತ್ವನ್ನೂ ಹೇಳಿರುತ್ತದೆ.

ವಿದ್ವತ್ತ್ವಂ ವೇತ್ಯುಕ್ತಮ್ – "ಬೋಧಾಬೋಧೌ ಚಿತೇರ್ನ ಸ್ತಃ ಕೂಟಸ್ಥಜ್ಞಪ್ತಿಮಾತ್ರತಃ । ಪರಾಯತ್ತಪ್ರಬೋಧೋ ನಾ ಹ್ಯಪ್ಪಾತ್ರೋತ್ಥಾದ್ರವೇರಿವ" ॥ (ಬೃ.ವಾ. ೨–೧–೧೨೬) ಇತಿ । ಅತೋಽವಿವೇಕಕೃತಾಧ್ಯಾಸಃ ಏವಾವಿದ್ಯಾ ನಾನ್ಯೇತಿ ॥

**೩೨. ಅವಿದ್ಯಾವಿಷಯೇ ಮತಾಂತರಮ್** – ಅನ್ಯೇ ತ್ವಾಹುಃ । ಯದ್ಯಪ್ಯಧ್ಯಾಸ ಏವಾವಿದ್ಯಾ । ನ ಕೇವಲಂ ಸ ಏವ ಸಂಸಾರಮೂಲಮ್ । ಸಾದಿತ್ವಾತ್ । ನ ಚ ಭ್ರಮಸ್ಯ, ವಿವೇಕಾಭಾವೋ ಮೂಲಂ ಭವಿತುಮರ್ಹತಿ, ಅಭಾವತ್ವಾದೇವ । ಕಿಂ ತು ಪೂರ್ವಪೂರ್ವಭ್ರಮಸಂಸ್ಕಾರ ಏವ ತನ್ಮೂಲಮ್। ಏವಂ ಚ ಭ್ರಮಸಂಸ್ಕಾರಯೋರನ್ಯೋನ್ಯಹೇತುಫಲಭಾವತಾ ಬೀಜಾಂಕುರನ್ಯಾಯೇನೇತಿ ನ ಕೋಽಪಿ ದೋಷಃ । ಅತ ಏವಾವಿದ್ಯಾವತ್ತತ್ಸಂಸ್ಕಾರೋಽ–

---

"ಜ್ಞಾನಾಜ್ಞಾನಗಳು ಅರಿವಿನ (ಸ್ವರೂಪಕ್ಕೆ) ಇರುವುದಿಲ್ಲ, ಏಕೆಂದರೆ ಅದು ಕೂಟಸ್ಥವಾದ ಅರಿವಿನ ಸ್ವರೂಪವಾಗಿರುತ್ತದೆ. ಮನುಷ್ಯನು (ಅಂತಃಕರಣವೆಂಬ) ಮತ್ತೊಂದಕ್ಕೆ ಅಧೀನವಾದ ಅರಿವುಳ್ಳವನಾಗಿರುತ್ತಾನೆ. ಸೂರ್ಯನ ರೂಪವು ನೀರಿನ ಪಾತ್ರೆಯಲ್ಲಿ ತೋರಿಕೊಳ್ಳುವಂತೆ ತೋರುವುದರಿಂದ (ಅದರ ನಿಮಿತ್ತದಿಂದ ಬೋಧಾಬೋಧಗಳು ಆಗುತ್ತವೆ) (ಬೃ. ವಾ. ೨–೧–೧೨೬) ಎಂದು ಹೇಳಿರುತ್ತಾರೆ. ಆದ್ದರಿಂದ ಅವಿವೇಕದಿಂದಾದ ಅಧ್ಯಾಸವೇ ಅವಿದ್ಯೆಯು, ಬೇರೆಯಲ್ಲ ಎಂದು (ಸಿದ್ಧವಾಯಿತು).

**೩೨. ಅವಿದ್ಯಾವಿಷಯದಲ್ಲಿ ಮತಾಂತರವು.** ಆದರೆ ಕೆಲವರು ಹೇಳುತ್ತಾರೆ, ಅಧ್ಯಾಸವೇ ಅವಿದ್ಯೆಯಾದರೂ ಅದಷ್ಟೇ ಸಂಸಾರಕ್ಕೆ ಮೂಲವಲ್ಲ, ಏಕೆಂದರೆ ಅದು ಸಾದಿಯಾಗಿದೆ. ಅಷ್ಟೇ ಅಲ್ಲ ಅಭಾವವಾದ್ದರಿಂದ ವಿವೇಕಾಭಾವವೂ ಭ್ರಮೆಗೆ ಮೂಲವಾಗುವುದಕ್ಕೆ ತಕ್ಕದ್ದಲ್ಲ. ಹಾಗಾದರೆ (ಯಾವುದು ಕಾರಣವೆಂದರೆ) ಹಿಂದು ಹಿಂದಿನ ಭ್ರಮೆಯ ಸಂಸ್ಕಾರವೇ ಅದಕ್ಕೆ ಮೂಲವಾಗಬಹುದಾಗಿದೆ. ಬೀಜಾಂಕುರನ್ಯಾಯದಿಂದ ಭ್ರಮೆ ಮತ್ತು ಸಂಸ್ಕಾರಗಳಿಗೆ ಪರಸ್ಪರ ಕಾರ್ಯಕಾರಣಭಾವವಿರಬಹುದೆಂಬುದು ಯಾವ ದೋಷವೂ ಇಲ್ಲದ್ದು. ಆದ್ದರಿಂದಲೇ ಅವಿದ್ಯೆಯಂತೆ ಅದರ ಸಂಸ್ಕಾರವನ್ನೂ

ಪ್ಯಪನೇತವ್ಯಃ । ಅನ್ಯಥಾ ಹ್ಯಪಬಾಧಿತಾಪ್ಯವಿದ್ಯಾ ಸ್ವವಾಸನಾವಶಾತ್ಪುನ-ರುದ್ಭವೇತ್, ಅನರ್ಥಹೇತುಶ್ಚ ಸ್ಯಾತ್ । ತಸ್ಮಾತ್ ಸೈವ ವಿದ್ಯಾ ಸಾರ್ಥ-ನಾಮ್ನೀ ಯಾ ಪ್ರಥಮೋತ್ಪನ್ನವಿದ್ಯಾಭ್ಯಾಸಜನಿತಸಂಸ್ಕಾರೋತ್ಪನ್ನಾ ನಿರೂಢ-ನಿಬಿಡಾವಿದ್ಯಾವಾಸನಾಯಾ ಅಪಿ ನಿರಸನಪಟೀಯಸೀ ಚರಮವೃತ್ತಿರಿತಿ ॥ (ಭಾ.ಪುಟ ೧೭, ೧೯).

**೩೩. ಉಕ್ತಮತಸ್ಯಾಪಿ ಭಾಷ್ಯವಿರುದ್ಧತ್ವಮ್** – ಏತದಪ್ಯಸಾರಮ್। ಭಾಷ್ಯಬಹಿರ್ಭೂತತ್ವಾತ್, ಶ್ರುತಿಬಾಹ್ಯತ್ವಾದ್ ಯುಕ್ತ್ಯಪೇತತ್ವಾಚ್ಚ । ಯತ್ತಾವದುಚ್ಯತೇ ಅಧ್ಯಾಸತತ್ಸಂಸ್ಕಾರಯೋರ್ಬೀಜಾಂಕುರ-ವದನ್ಯೋನ್ಯಹೇತುಫಲಭಾವ ಇತಿ । ತತ್ತಥೈವಾಸ್ತು ವ್ಯಾವಹಾರಿಕ್ಯಾ ಅವಿದ್ಯಾದೃಷ್ಟ್ಯಾ । "ಬೀಜಾಂಕುರಾದಿವದವಿದ್ಯಾಕೃತಃ ಸಂಸಾರ ಆತ್ಮನಿ ಕ್ರಿಯಾಕಾರಕಫಲಾಧ್ಯಾರೋಪಲಕ್ಷಣೋಽನಾದಿರನಂತೋಽನರ್ಥಃ" (ಬೃ.

---

ತೆಗೆದುಹಾಕಬೇಕು. ಹಾಗಿಲ್ಲವಾದರೆ ಅವಿದ್ಯೆಯು ಬಾಧಿತವಾದದ್ದಾದರೂ ತನ್ನ ವಾಸನೆಗೆ ಅನುಗುಣವಾಗಿ ಮತ್ತೆ ತೋರಿಕೊಳ್ಳಬಹುದು, ಮತ್ತು ಅನರ್ಥಕ್ಕೂ ಕಾರಣವಾಗಬಹುದು. ಆದ್ದರಿಂದ ಅನ್ವರ್ಥವಾದ ಹೆಸರಾಗಿರುವ (ವಿದ್ಯೆ) ಎಂಬುದು ಯಾವುದಿದೆಯೋ, ಯಾವುದು ಮೊದಲುಂಟಾದ ವಿದ್ಯೆಯ ಅಭ್ಯಾಸದಿಂದಾದ ಸಂಸ್ಕಾರದಿಂದ ಬಲವಾಗಿ ಬೇರೂರಿದ್ದಾದ ಅವಿದ್ಯಾ-ವಾಸನೆಯನ್ನೂ ಕೂಡ ತೊಲಗಿಸುವುದರಲ್ಲಿ ಸಮರ್ಥವಾಗಿರುವ ಕೊನೆಯ ವೃತ್ತಿಯೋ – ಅದೇ ವಿದ್ಯೆ ಆಗಿದೆ. (ಭಾ. ಪುಟ ೧೭, ೧೯).

**೩೩. ಈ ಮೇಲೆ ಹೇಳಿದ ಮತವೂ ಸಹ ಭಾಷ್ಯಕ್ಕೆ ವಿರುದ್ಧವೇ ಆಗಿದೆ.** ಇದೂ (ಸಹ) ಹುರುಳಿಲ್ಲದ್ದು, ಏಕೆಂದರೆ ಭಾಷ್ಯಕ್ಕೆ ಹೊರಚ್ಚಾದ್ದ-ರಿಂದಲೂ, ಶ್ರುತಿಗೆ ವಿರುದ್ಧವಾದ್ದರಿಂದಲೂ ಮತ್ತು ಯುಕ್ತಿಹೀನವಾದ್ದರಿಂದಲೂ (ಈ ಮತವು ಸರಿಯಲ್ಲ). ವ್ಯಾವಹಾರಿಕವಾದ ಅವಿದ್ಯಾದೃಷ್ಟಿಯಿಂದ – ಅಧ್ಯಾಸ ಮತ್ತು ಅದರ ಸಂಸ್ಕಾರಗಳಿಗೆ ಬೀಜಾಂಕುರದಂತೆ ಪರಸ್ಪರ ಹೇತುಫಲಭಾವ (ಕಾರ್ಯಕಾರಣಭಾವ) ವೆಂಬುದನ್ನು ಏನು ಹೇಳುತ್ತಾರೆ, ಅದು ಹಾಗೆಯೇ ಇರಲಿ. ಭಾಷ್ಯಕಾರರೇ "ಬೀಜಾಂಕುರಗಳಂತೆ ಅವಿದ್ಯೆಯಿಂ-ದಾದ ಸಂಸಾರವು (ಅದು) ತನ್ನಲ್ಲಿ ಕ್ರಿಯಾಕಾರಕಫಲಗಳನ್ನು ಹುಟ್ಟು-ಹಾಕಿಕೊಳ್ಳುವ ರೂಪವಾಗಿಯೂ ಅನಾದಿಯೂ ಅನಂತವೂ ಅನರ್ಥರೂಪವೂ

ಭಾ. ೧-೧-೧) ಇತಿ ಭಾಷ್ಯಕಾರೇಣಾಪ್ಯಂಗೀಕಾರಾತ್ । ವೃತ್ತೇರ್ಹಿ ವೃತ್ತ್ಯಂತರೋದಯೇ ಸತಿ ಸ್ವಕಾರಣೇ ಲಯಾತ್ ತತ್ಸಂಸ್ಕಾರೋಽಪಿ ಕಶ್ಚಿಚ್ಛಕ್ಯಕಲ್ಪನ ಏವ । ಅತ ಏವ ಹಿ ಪುನರಪಿ ಸ್ವಾವಸರೇ ಸ್ವಸಜಾತೀಯ-ವೃತ್ತ್ಯಂತರೋದಯಸ್ಸಂಭವತೀತಿ । ವಸ್ತುತಸ್ತು ನ ಕೋಽಪಿ ಹೇತುಃ ಫಲಂ ವಾಽನಧ್ಯಸ್ತಂ ಸಂಭವತಿ । ಯೋ ಹಿ ಸ್ವೀಕ್ರಿಯತೇ ಹೇತುತ್ವೇನ ಫಲತ್ವೇನ ವಾ ಸಂಸ್ಕಾರಃ, ಸೋಽಪ್ಯಧ್ಯಸ್ತೋ ವಾ ಸ್ಯಾದನಧ್ಯಸ್ತೋ ವಾ । ಯದ್ಯಧ್ಯಸ್ತಃ, ತದಾ ಅವಿದ್ಯಾಕಲ್ಪಿತ ಏವ ಸ್ಯಾತ್ ನ ತದ್ಧೇತುಃ । ಅಥಾಽನಧ್ಯಸ್ತಃ, ತದಾ ಪರಮಾರ್ಥ ಏವ ಸ್ಯಾನ್ನ ವಿದ್ಯಾನಿವರ್ತ್ಯ ಇತ್ಯನಿಷ್ಟಮಾಪದ್ಯತೇ । ನ ಚೈವಂ ಶಂಕ್ಯಮ್ – ಅಧ್ಯಾಸಸ್ತತ್ಸಂಸ್ಕಾರಶ್ಚೇತ್ಯುಭಾವಪ್ಯಧ್ಯಸ್ತಾವೇವ । ಸಂಸ್ಕಾರಸ್ಯ ಪೂರ್ವಾಧ್ಯಾಸಕಾರ್ಯತ್ವಾತ್, ತದುತ್ತರಾಧ್ಯಾಸಸ್ಯ ಚಾಧ್ಯಾಸಸಂಸ್ಕಾರಜನ್ಯತ್ವಾತ್ । ಅತೋ ನ ಕೋಽಪಿ ದೋಷ ಇತಿ ।

---

ಆಗಿದೆ" (ಬೃ. ಭಾ. ೧-೧-೧) ಎಂದು ಒಪ್ಪಿಕೊಂಡಿರುತ್ತಾರೆ. ಒಂದು ವೃತ್ತಿಯಾದ ಮೇಲೆ ಇನ್ನೊಂದು ವೃತ್ತಿಯು ಉದಯವಾಗಲಾಗಿ (ಹಿಂದಿನ ವೃತ್ತಿಯು) ತನ್ನ ಕಾರಣದಲ್ಲಿ ಲಯವಾಗಲಾಗಿ ಅದರದ್ದಾದ ಒಂದಾನೊಂದು ಸಂಸ್ಕಾರವೂ ಸಹ ಇದ್ದೇ ಇರುತ್ತದೆ ಎಂದು ಕಲ್ಪಿಸಬಹುದಾಗಿದೆ. ಆದ್ದರಿಂದಲೇ ಮತ್ತೊಮ್ಮೆ ತನ್ನ ಸಂದರ್ಭವು ಬರಲಾಗಿ ತನ್ನ ಜಾತಿಯದಾದ ಮತ್ತೊಂದು ವೃತ್ತಿಯಾಗುವುದೆಂಬುದು ಹೊಂದುತ್ತದೆ. ಆದರೆ ನಿಜವಾಗಿ ಯಾವ ಕಾರಣವಾಗಲೀ ಫಲವಾಗಲೀ ಅಧ್ಯಸ್ತವಾಗದೇ ಇರುವುದಕ್ಕೆ ಸಾಧ್ಯವಿಲ್ಲ. ಕಾರಣವಾಗಿಯಾಗಲೀ ಫಲವಾಗಿಯಾಗಲೀ ಯಾವ ಸಂಸ್ಕಾರವನ್ನು ಸ್ವೀಕರಿಸುತ್ತೀರಿ ಅದು ಅಧ್ಯಸ್ತವೇ ಅಥವಾ ಅನಧ್ಯಸ್ತವೇ ? ಅಧ್ಯಸ್ತವೇ ಎನ್ನುವುದಾದರೆ ಆಗ ಅವಿದ್ಯಾಕಲ್ಪಿತವಾದದ್ದಂದಾಗಿ ಅದು ಕಾರಣವಾಗಲಾರದು. ಅಧ್ಯಸ್ತವಲ್ಲ ಎನ್ನುವುದಾದರೆ ಆಗ ನಿಜವಾಗಿರತಕ್ಕದ್ದಂ-ದಾಗಿ ವಿದ್ಯೆಯಿಂದ ತೊಲಗುವುದಲ್ಲವೆಂಬ ಅನಿಷ್ಟವು ಬಂದೊದಗುವುದು. ಅಧ್ಯಾಸವೂ ಅದರ ಸಂಸ್ಕಾರವೂ ಸಹ – ಎರಡೂ ಅಧ್ಯಸ್ತವಾದದ್ದೇ, ಈಗಿನ ಸಂಸ್ಕಾರವು ಹಿಂದಿನ ಅಧ್ಯಾಸದ ಕಾರ್ಯವು, ಮುಂದಿನ ಅಧ್ಯಾಸವು ಈಗಿನ ಅಧ್ಯಾಸದ ಸಂಸ್ಕಾರದಿಂದ ಹುಟ್ಟುವಂಥದ್ದಾದ್ದರಿಂದ (ಎರಡೂ ಅಧ್ಯಸ್ತವೇ) ಆಗುವುದಲ್ಲ ! ಆದ್ದರಿಂದ ಏನೂ ದೋಷವಿಲ್ಲ ಎಂದು (ಹೇಳಬಾರದು).

ತಥಾಪಿ ಪೂರ್ವೋತ್ತರಕಾಲಯೋರಧ್ಯಸ್ತಯೋರೇವ ಸ್ವೀಕಾರ್ಯತ್ವಾತ್, ತದಧ್ಯಾಸಾರ್ಥಂ ಪೂರ್ವಕಾಲಾಂತರಕಲ್ಪನಾಯೋಗಾತ್ । ನ ಹಿ ವಾಸ್ತವಂ ಜನ್ಯತ್ವಂ ಜನಕತ್ವಂ ವಾನುಭವನ್ನಧ್ಯಾಸೋ ನಾಮ ಭವತಿ । ತಸ್ಮಾದಧ್ಯಾಸಸ್ಯಾಽಽದಿಮತ್ತ್ವಂ ಪೂರ್ವಾಧ್ಯಾಸಸಂಸ್ಕಾರಜನ್ಯತ್ವಂ ವಾ ನ ಯುಕ್ತಿಮದಿತಿ । ಯತ್ಪುನರವಿದ್ಯಾ-ನಾಶವ್ಯತಿರೇಕೇಣ ತತ್ಸಂಸ್ಕಾರೋಽಪ್ಯಪನೇತವ್ಯಃ, ಅನ್ಯಥಾ ತದ್ವಶಾತ್ಪುನ-ರಪ್ಯವಿದ್ಯೋತ್ಥಾನಪ್ರಸಂಗಾದಿತಿ । ತತ್ಸರ್ವಥಾ ನ ಕ್ಷಮಾಮಹೇ । ಭಾಷ್ಯವಿರುದ್ಧತ್ವಾತ್ । "ವಿದ್ಯಾಯಾಂ ಹಿ ಸತ್ಯಾಮುದಿತೇ ಸವಿತರಿ ಶಾರ್ವರಮಿವ ತಮಃ ಪ್ರಣಾಶಮುಪಗಚ್ಛತ್ಯವಿದ್ಯಾ" (ಗೀ. ಭಾ. ೨-೬೮), "ಸಕೃದುತ್ಪನ್ನೈವ ಹ್ಯಾತ್ಮಪ್ರತಿಪತ್ತಿರವಿದ್ಯಾಂ ನಿವರ್ತಯತಿ" (ಸೂ. ಭಾ. ೪-೧-೨), "ಬ್ರಹ್ಮವಿದ್ಯಾಸಮಕಾಲಮೇವಾಽವಿದ್ಯಾಮಾತ್ರವ್ಯವಧಾನಾಪ-

---

ಏಕೆಂದರೆ ಕಲ್ಪಿತವೇ ಆದ ಪೂರ್ವೋತ್ತರ ಕಾಲವನ್ನು ಸ್ವೀಕರಿಸಿರುವುದರಿಂದ ಪುನಃ ಅಧ್ಯಾಸಕ್ಕೆ ಮತ್ತೊಂದು ಹಿಂದಿನ ಕಾಲವೆಂಬುದು ಹೊಂದುವದಿಲ್ಲ. ನಿಜವಾಗಿಯೋ ಹುಟ್ಟಿದ್ದಾಗಲೀ ಹುಟ್ಟಿಸುವುದಾಗಲೀ ಆದರೆ ಅದು ಅಧ್ಯಾಸವೆಂತಲೇ ಆಗುವುದಿಲ್ಲವಷ್ಟೆ ? ಆದ್ದರಿಂದ ಅಧ್ಯಾಸವು ಆದಿಯುಳ್ಳದ್ದಾಗಲೀ ಹಿಂದಿನ ಸಂಸ್ಕಾರದಿಂದ ಹುಟ್ಟುವುದಾಗಲೀ ಯುಕ್ತಿಯುಕ್ತವಾಗುವುದಿಲ್ಲವಷ್ಟೆ ? ಅವಿದ್ಯೆಯನ್ನು ನಾಶಮಾಡುವುದಕ್ಕಿಂತ ಬೇರೆಯಾಗಿ ಅದರ ಸಂಸ್ಕಾರವನ್ನೂ ಕಳೆದುಹಾಕಬೇಕು, ಇಲ್ಲವಾದರೆ ಅದಕ್ಕಧೀನವಾಗಿ ಮತ್ತೂ ಅವಿದ್ಯೆಯು ಎದ್ದುಗೊಳ್ಳುವ ಸಂದರ್ಭವು ಬಂದೀತೆಂದು ಏನು ಹೇಳುವರೋ ! ಅದನ್ನು ಮಾತ್ರ ಸರ್ವಥಾ ಸಹಿಸಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಅದು ಭಾಷ್ಯಕ್ಕೆ ವಿರುದ್ಧವಾಗಿದೆ. "ವಿದ್ಯೆಯುಂಟಾದರೆ – ಸೂರ್ಯನು ಉದಯಿಸಿದರೆ ರಾತ್ರಿಯ ಕತ್ತಲು ತೊಲಗುವಂತೆ – ಅವಿದ್ಯೆಯು ನಾಶಹೊಂದುತ್ತದೆ" (ಗೀ. ಭಾ. ೨-೬೮) "ಒಮ್ಮೆ ಉಂಟಾದ ಆತ್ಮಜ್ಞಾನವೇ ಅವಿದ್ಯೆಯನ್ನು ತೊಲಗಿಸುತ್ತದೆ". (ಸೂ.ಭಾ. ೪-೧-೨) "ಬ್ರಹ್ಮವಿದ್ಯೆಯುಂಟಾದ ಸಮಕಾಲದಲ್ಲೇ ಕೇವಲ ಅವಿದ್ಯಾ ಎಂಬ ಅಡ್ಡಿಯನ್ನು ಕಳೆದುಬಿಡುವುದರಿಂದ" (ಬೃ.ಭಾ. ೧-೪-೧೦, ಭಾ.ಭಾ. ೧೭೦) ಎಂದು ಈ ರೀತಿಯಾಗಿ ಭಾಷ್ಯದಲ್ಲಿ ಅನೇಕ ಕಡೆಗಳಲ್ಲಿ

ಗಮಾತ್'' (ಬೃ.ಭಾ. ೧-೪-೧೦) ಇತ್ಯಸಕೃದುಚ್ಯತೇ ಭಾಷ್ಯೇ ವಿದ್ಯಾಪ್ರಣಾಶ್ಯತ್ವಮವಿದ್ಯಾಯಾಃ । "ನ ಹ್ಯೇಕತ್ವವಿಜ್ಞಾನೇನೋನ್ಮಥಿತಸ್ಯ ದ್ವೈತವಿಜ್ಞಾನಸ್ಯ ಪುನಃ ಸಂಭವೋऽಸ್ತಿ" (ಸೂ. ಭಾ. ೧-೧-೪), "ವಿದ್ಯೋತ್ಪತ್ತಾವವಿದ್ಯಾಯಾ ಹ್ಯಸ್ತತ್ವಾತ್ತದಾಶ್ರಯೇऽವಿದ್ಯಾನುಪಪತ್ತೇಃ" (ಈ. ೧೮), ''ಪರಮಾರ್ಥದರ್ಶನಾದ್ಬ್ರಹ್ಮವಿತ್ ತೃತೀಯಂ ಬೀಜಭಾವಂ ದಗ್ಧ್ವಾऽऽತ್ಮಾನಂ ಪ್ರವಿಷ್ಟ ಇತಿ ನ ಪುನರ್ಜಾಯತೇ ತುರೀಯಸ್ಯಾ-ऽಬೀಜತ್ವಾತ್ ।. ನ ಹಿ ರಜ್ಜುಸರ್ಪಯೋರ್ವಿವೇಕೇ ರಜ್ಜ್ವಾಂ ಪ್ರವಿಷ್ಟಃ ಸರ್ಪೋ ಬುದ್ಧಿಸಂಸ್ಕಾರಾತ್ಪುನಃ ಪೂರ್ವವತ್ತದ್ವಿವೇಕಿನಾಮುತ್ಥಾಸ್ಯತಿ" (ಮಾಂ. ಭಾ. ೧೨), ''ತಸ್ಮಾನ್ನ ವಿದ್ಯಾಯಾಂ ಸತ್ಯಾಮವಿದ್ಯಾಸಂಭವೋऽಸ್ತಿ'' (ಐ.ಸಂ.ಭಾ.) ಇತಿ ಚ ವಿದ್ಯಾಪಬಾಧಿತಾವಿದ್ಯಾಯಾಃ ಪುನರುತ್ಥಾನಶಂಕಾ ಚ ನಿರಾಕ್ರಿಯತೇ । ತಸ್ಮಾತ್ ಭಾಷ್ಯವಿರುದ್ಧ ಏವಾಯಂ ವಾದಃ । ಶ್ರುತಿಬಾಹ್ಯಶ್ಚ । ಸರ್ವತ್ರ ಹಿ ಶ್ರುತಿಷು ವಿದ್ಯಯಾ

---

ಅವಿದ್ಯೆಯು ವಿದ್ಯೆಯಿಂದ ತೊಲಗುತ್ತದೆ ಎಂದು ಹೇಳಿರುವುದರಿಂದ ಅವರು ಹೇಳುವುದು ಸರಿಯಾಗುವುದಿಲ್ಲ. "ಏಕತ್ವಜ್ಞಾನದಿಂದ ತೊಲಗಿಹೋದ ದ್ವೈತವಿಜ್ಞಾನಕ್ಕೆ ಮತ್ತೆ ಹುಟ್ಟೆಂಬುದು ಹೊಂದುವುದಿಲ್ಲ". (ಸೂ. ಭಾ. ೧-೧-೪) "ವಿದ್ಯೆಯುಂಟಾಗಲಾಗಿ ಅವಿದ್ಯೆಯು ಅಸ್ತವಾಗಿಬಿಡುವುದರಿಂದ (ಮತ್ತೆ) ಅದೇ ಆಶ್ರಯದಲ್ಲಿ ಅವಿದ್ಯೆ ಎಂಬುದು ಹೊಂದುವುದಿಲ್ಲ". (ಈ. ೧೮) "ಬ್ರಹ್ಮಜ್ಞಾನಿಯು ಪರಮಾರ್ಥಜ್ಞಾನದಿಂದ ಮೂರನೆಯದಾದ ಬೀಜಭಾವವನ್ನು ಸುಟ್ಟುಹಾಕಿ ತನ್ನನ್ನೇ ಸೇರಿಕೊಂಡಿರುತ್ತಾನಾದ್ದರಿಂದಲೂ, ತುರೀಯವು ಬೀಜವಲ್ಲವಾದ್ದರಿಂದಲೂ, ಮತ್ತೆ ಹುಟ್ಟುವದಿಲ್ಲ. ರಜ್ಜುಸರ್ಪಗಳ ವಿವೇಕವುಂಟಾಗಲಾಗಿ ಹಗ್ಗದಲ್ಲಿ ಸೇರಿಹೋದ ಹಾವು ಮತ್ತೆ ಆ ವಿವೇಕಿಗಳಿಗೆ ಹಿಂದಿನಂತೆ ಅದರ ಸಂಸ್ಕಾರದಿಂದ ಪುನಃ ಹುಟ್ಟುವುದಿಲ್ಲವಷ್ಟೆ?" (ಮಾಂ. ಭಾ. ೧೨) "ಆದ್ದರಿಂದ ವಿದ್ಯೆಯುಂಟಾಗಲಾಗಿ ಅವಿದ್ಯೆಯು ಹುಟ್ಟುವದಿಲ್ಲ". (ಐ. ಸಂ. ಭಾ) ಎಂದು ಮುಂತಾಗಿ (ಅನೇಕ ಸ್ಥಳದಲ್ಲಿ) ವಿದ್ಯೆಯಿಂದ ತೊಲಗಿಹೋದ ಅವಿದ್ಯೆಯು ಮತ್ತೆ ಹುಟ್ಟಬಹುದೆಂಬ ಸಂದೇಹವನ್ನು ತಳ್ಳಿಹಾಕಿದೆ. ಆದ್ದರಿಂದ ಈ ವಾದವು ಭಾಷ್ಯಕ್ಕೆ ಹೊರಚ್ಚಾಗಿಯೇ ಇದೆ. ಶ್ರುತಿಗೂ ಹೊರಚ್ಚಾಗಿದೆ. ಹೇಗೆಂದರೆ, "ಅವಿದ್ಯೆಯ ಆಚೆಯ ದಡವನ್ನು

ಅವಿದ್ಯಾನಿವೃತ್ತಿರುಪದಿಶ್ಯತೇ – "ಅವಿದ್ಯಾಯಾಃ ಪರಂ ಪಾರಂ ತಾರಯಸಿ" (ಪ್ರ. ೬–೮), "ತಮಸಃ ಪಾರಂ ದರ್ಶಯತಿ" (ಛಾ. ೭–೨೬–೨) ಇತಿ ಚೈವಮಾದಿಷು । ನ ಚಾವಿದ್ಯಾನಿವೃತ್ತೇರನಂತರಂ ಸಂಸ್ಕಾರವಶಾತ್ತದುತ್ಥಿತಿಃ ಸಾಧನಾಂತರೇಣ ತನ್ನಿವೃತ್ತ್ಯುಪದೇಶೋ ವಾ ದರ್ಶಿತಮಸ್ತಿ ಕ್ವಚಿದಪಿ । ಅತಃ ಶ್ರುತಿಬಾಹ್ಯೋಽಯಂ ವಾದಃ । ನ್ಯಾಯವಿರುದ್ಧಶ್ಚ। ನ ಹಿ ಸಮ್ಯಗಜ್ಞಾನೇನ ಬಾಧಿತಾಯಾಮವಿದ್ಯಾಯಾಂ ಪುನಸ್ತತ್ಸಂಸ್ಕಾರಾವಶೇಷಃ ಶಕ್ಯಸಂಭಾವನಃ । ಅವಿದ್ಯಾಂ ಹಿ ನಿರವಶೇಷಮನಪಬಾಧಮಾನಾ ವಿದ್ಯೈವ ನ ಭವೇತ್ । ಯಥಾಽಽಹುರ್ಜ್ಞಾನತತ್ತ್ವವಿದಃ –"ಆತ್ಮಾಸಾಮಾನ್ಯರೂಪೋತ್ಥಂ ಜ್ಞಾನಮಜ್ಞಾನಮಾತ್ಮನಿ । ಸಕೃಜ್ಜಾತಂ ನ ಚೇದ್ಧಂತಿ ಜ್ಞಾನಮೇವ ನ ತದ್ಭವೇತ್"॥ (ಬೃ. ವಾ. ೨–೪–೨೦೮) ಇತಿ । ನ ಚ ವಿದ್ಯಾಯಾ ಉತ್ಪತ್ತಿವ್ಯತಿರೇಕೇಣಾವಿದ್ಯಾನಿವರ್ತನಂ ನಾಮಾಽನ್ಯೋ ವ್ಯಾಪಾರೋಽಸ್ತಿ। ಯಥಾ ಚಾಹುಃ –

---

ಸೇರಿಸಿರುತ್ತೀರಾ" (ಪ್ರಶ್ನ ೬–೮), "ಅಜ್ಞಾನದ ಆಚೆ (ಇರುವುದನ್ನು)ಯನ್ನು ತೋರಿಸುತ್ತಾರೆ". (ಛಾಂ. ೭–೨೬–೨), ಎಂಬಿವೇ ಮೊದಲಾದ ಸ್ಥಳದಲ್ಲಿ ವಿದ್ಯೆಯಿಂದ ಅವಿದ್ಯೆಯು ತೊಲಗುವುದೆಂಬುದನ್ನು ಉಪದೇಶಿಸಿರುತ್ತದೆ. (ಶ್ರುತಿಯಲ್ಲಿ ಎಲ್ಲೂ), ಅವಿದ್ಯೆಯು ತೊಲಗಿದ ನಂತರ ಸಂಸ್ಕಾರಕ್ಕನುಗುಣವಾಗಿ ಪುನಃ ಎದ್ದುಕೊಳ್ಳುತ್ತದೆ ಎಂದಾಗಲೀ ಬೇರೊಂದು ಸಾಧನದಿಂದ ತೊಲಗುತ್ತದೆ ಎಂದಾಗಲೀ ಉಪದೇಶಿಸಿರುವುದು ಕಂಡುಬಂದಿಲ್ಲ. ಆದ್ದರಿಂದ ಈ ವಾದ ಶ್ರುತಿಗೆ ಬಾಹ್ಯವೂ ಆಗಿದೆ. ಯುಕ್ತಿಗೂ ವಿರುದ್ಧವಾಗಿದೆ. ಹೇಗೆಂದರೆ – ಸಮ್ಯಗ್‌ಜ್ಞಾನದಿಂದ ಅವಿದ್ಯೆಯು ತೊಲಗಿಹೋಗಲಾಗಿ ಮತ್ತೆ ಅದರ ಸಂಸ್ಕಾರವು ಉಳಿದಿರುತ್ತದೆ ಎಂದು ಸಂಭಾವನೆಮಾಡುವುದಕ್ಕೂ ಆಗುವುದಿಲ್ಲವಷ್ಟೆ ? ಅವಿದ್ಯೆಯನ್ನು ಸಂಪೂರ್ಣವಾಗಿ ತೊಲಗಿಸದೇ ಹೋದರೆ ಅದು ವಿದ್ಯೆ ಎಂತಲೇ ಎನಿಸಿಕೊಳ್ಳುವುದಿಲ್ಲ. ಜ್ಞಾನದ ತತ್ತ್ವವನ್ನು ಬಲ್ಲವರಾದ (ವಾರ್ತಿಕಕಾರರೂ) – "ಆತ್ಮಸ್ವರೂಪವನ್ನು ಅನುಸರಿಸಿ ಎದ್ದುಕೊಂಡು ಒಂದು ಸಲ ಉಂಟಾದ ಜ್ಞಾನವು ಅಜ್ಞಾನವನ್ನು ಕಳೆಯುವದಿಲ್ಲ ಎನ್ನುವುದಾದರೆ ಅದು ಜ್ಞಾನವೇ ಆಗುವುದಿಲ್ಲ" (ಬೃ. ವಾ. ೨–೪–೨೦೮) ಎಂದಿರುತ್ತಾರೆ. ವಿದ್ಯೆಯು ತೋರಿಕೊಳ್ಳುವುದು ಎನ್ನುವುದಕ್ಕಿಂತ ಬೇರೆಯಾಗಿ ಅವಿದ್ಯೆಯನ್ನು ತೊಲಗಿಸುವುದು ಎಂಬ ಮತ್ತೊಂದು ವ್ಯಾಪಾರವಿರುವುದಿಲ್ಲ. ಇದನ್ನೂ (ವಾರ್ತಿಕಕಾರರು) ಹೇಳಿರುತ್ತಾರೆ.

"ನ ಚಾವಿದ್ಯಾಸಮುಚ್ಛಿತ್ತಿರ್ಜ್ಞಾನೋತ್ಪತ್ತ್ಯತಿರೇಕತಃ । ಸಂಸಾರನಾಶೋ-ಽವಿದ್ಯಾಯಾ ನಾಶಾನ್ನ ವ್ಯತಿರಿಚ್ಯತೇ" ॥ (ಬೃ.ವಾ. ೨-೪-೧೯೫) ಇತಿ । ತಸ್ಮಾದ್ಯುಕ್ತಿತೋಽಪಿ ನಾಸ್ತಿ ಸಂಸ್ಕಾರಾವಶೇಷಃ । ಯದಪ್ಯಾಹುಃ ಸಂಸ್ಕಾರವಾದಿನಃ ಪಿತ್ತೋಪಹತೇಂದ್ರಿಯಾಣಾಂ ಗುಡಮಾಧುರ್ಯಜ್ಞಾನೇ ಸತ್ಯಪಿ ತಿಕ್ತತಾಬುದ್ಧ್ಯನುವೃತ್ತಿವದ್ವಿದ್ಯಯಾಽವಿದ್ಯಾನಾಶೇ ಸತ್ಯಪಿ ತತ್ಸಂಸ್ಕಾರಾನುವೃತ್ತಿರವಕಲ್ಪತ ಇತಿ, ತತ್ರ ಪಿತ್ತೋದ್ರೇಕಕಾರಿತಸ್ತಿಕ್ತತಾ-ಪ್ರತಿಭಾಸೋ ದೃಷ್ಟಾಂತೇ, ನ ತ್ವಜ್ಞಾನವಶಾತ್ । ನ ಹಿ ಗುಡಸ್ತಿಕ್ತ ಏವೇತಿ ಭ್ರಮೋಽಸ್ತಿ । ನಾಪಿ ಗುಡಮಾಧುರ್ಯಜ್ಞಾನಾಭಾಸೇನ ತಿಕ್ತತಾಬುದ್ಧಿಃ ಶಕ್ಯತೇಽಪನೋದಯಿತುಮ್ । ಅತೋ ವಿಷಮ ಉಪನ್ಯಾಸಃ । ಏತೇನ ದ್ವಿಚಂದ್ರಾದಿಬುದ್ಧ್ಯನುವೃತ್ತಿರಪಿ ವ್ಯಾಖ್ಯಾತಾ ವೇದಿತವ್ಯಾ । ನ ಚ ವಿದ್ಯಾಫಲಂ ತದಭ್ಯಾಸಾಜ್ಜನ್ಯತ ಇತಿ ಲೋಕೇ ದೃಷ್ಟಮ್ । ಯತ್ತ್ವಾಹುಃ –

---

"ಜ್ಞಾನವುಂಟಾಗುವುದೆಂಬುದಕ್ಕಿಂತ ಬೇರೆಯಾಗಿ ಅವಿದ್ಯೆಯ ನಾಶವೆಂಬುದು ಬೇರೆಯಾಗಿರುವುದಿಲ್ಲ. (ಹಾಗೆಯೇ) ಅವಿದ್ಯೆಯು ಹೋಗುವುದು ಎಂಬುದಕ್ಕಿಂತ ಬೇರೆಯಾಗಿ ಸಂಸಾರವು ತೊಲಗುವುದೆಂಬುದೂ ಇರುವುದಿಲ್ಲ (ಬೃ. ವಾ. ೨-೪-೧೯೫). ಆದ್ದರಿಂದ ಯುಕ್ತಿಯಿಂದಲೂ ಸಂಸ್ಕಾರಶೇಷವಿರುವುದೆಂಬುದು ಹೊಂದುವುದಿಲ್ಲ. ಸಂಸ್ಕಾರಶೇಷವು ಇರುತ್ತದೆ ಎಂದು ವಾದಮಾಡುವವರು ಪಿತ್ತಪ್ರಕೋಪದಿಂದ ಕೂಡಿದವರಿಗೆ ಬೆಲ್ಲದ ಸಿಹಿಜ್ಞಾನವಿದ್ದರೂ ಒಗಚು ಎಂಬ ಬುದ್ಧಿಯು ಅನುವೃತ್ತವಾಗಿರುವಂತೆ ಅವಿದ್ಯಾನಾಶವಾದರೂ ಅದರ ಸಂಸ್ಕಾರದ ಅನುವೃತ್ತಿ ಇರಬಹುದು" ಎಂದು ಏನು ಹೇಳುತ್ತಾರೆ, ಆ ಒಗಚು ಎಂಬ ಬುದ್ಧಿಯು – ಪಿತ್ತಪ್ರಕೋಪದಿಂದುಂಟಾದದ್ದೇ ಹೊರತು ಅಜ್ಞಾನಾಧೀನವಾಗಿ ಆದದ್ದಲ್ಲ. (ಅವರಿಗೇನು) ಬೆಲ್ಲವು ಒಗಚೇ ಎಂಬ ಭ್ರಾಂತಿಯೇನಿರುವುದಿಲ್ಲ. ಹಾಗೆಯೇ ಬೆಲ್ಲವು ಸಿಹಿಯಾದದ್ದೆಂಬ ಜ್ಞಾನದ ಆಭಾಸದಿಂದ ಒಗಚು ಎಂಬುದನ್ನು ತೆಗೆದುಹಾಕುವುದಕ್ಕೂ ಆಗುವುದಿಲ್ಲ. ಆದ್ದರಿಂದ ಆ ದೃಷ್ಟಾಂತವು ಸರಿಯಾಗುವುದಿಲ್ಲ. ಇಷ್ಟು ಹೇಳಿದ್ದರಿಂದ ದ್ವಿಚಂದ್ರಾನುವೃತ್ತಿದೃಷ್ಟಾಂತಕ್ಕೂ ಉತ್ತರವನ್ನು ಕೊಟ್ಟಂತಾಯಿತೆಂದು ತಿಳಿಯಬೇಕು. ವಿದ್ಯೆಯ ಫಲವು ಅದರ ಅಭ್ಯಾಸದಿಂದ ಹುಟ್ಟುತ್ತದೆ ಎಂಬುದು ಲೋಕದಲ್ಲೂ ಕಂಡಿರುವುದಿಲ್ಲ.

ಷಡ್ಜಾದಿಸಾಕ್ಷಾತ್ಕಾರಾರ್ಥಮಭ್ಯಾಸೋ ದೃಷ್ಟ ಇತಿ । ತತ್ರ ಸಾಕ್ಷಾತ್ಕಾರ ಏವ ವಿದ್ಯಾ ನಾಪರಾ । ತಸ್ಯಾಶ್ಚ ನಾಭ್ಯಾಸ ಇತಿ ವಿಷಮಂ ನಿದರ್ಶನಮ್ । ಯತ್ರ ಪುನರವಿದ್ಯಾನುವೃತ್ತಿರ್ದೃಶ್ಯತೇ ಸಂಸ್ಕಾರತಃ, ತತ್ರ ಬಾಧಿತಾನುವೃತ್ತಿರ್ನ ಕಾರ್ಯಕ್ಷಮಾ । ವಿದ್ಯಾಸಂಸ್ಕಾರೋತ್ಥಸ್ಮೃತ್ಯಾ ತಸ್ಯಾ ನಿಯಮೇನ ಬಾಧಾದಿತ್ಯನವದ್ಯಮ್ । ಯಥಾಹುರ್ಭಗವತ್ಪಾದಾಃ – "ಬಾಧಿತಮಪಿ ತು ಮಿಥ್ಯಾಜ್ಞಾನಂ ದ್ವಿಚಂದ್ರಜ್ಞಾನವತ್ ಸಂಸ್ಕಾರವಶಾತ್ ಕಂಚಿತ್ಕಾಲಮನುವರ್ತತ ಏವ" (ಸೂ. ಭಾ. ೪-೧-೧೫), "ನ ಚ ವಿಪರೀತಪ್ರತ್ಯಯೋ ವಿದ್ಯಾವತ ಉತ್ಪದ್ಯತೇ । ನಿರ್ವಿಷಯತ್ವಾತ್ ।.....। ಕ್ವಚಿತ್ತು ವಿದ್ಯಾಯಾಃ ಪೂರ್ವೋತ್ಪನ್ನವಿಪರೀತಪ್ರತ್ಯಯಜನಿತಸಂಸ್ಕಾರೇಭ್ಯೋ ವಿಪರೀತಪ್ರತ್ಯಯಾವಭಾಸಾಃ ಸ್ಮೃತಯೋ ಜಾಯಮಾನಾ ವಿಪರೀತಪ್ರತ್ಯಯಭ್ರಾಂತಿಮಕಸ್ಮಾತ್ ಕುರ್ವಂತಿ । ಯಥಾ ವಿಜ್ಞಾತದಿಗ್ವಿಭಾಗಸ್ಯಾಪ್ಯಕಸ್ಮಾತ್ ದಿಗ್ವಿಪರ್ಯಯವಿಭ್ರಮಃ।

---

ಷಡ್ಜಾದಿಸ್ವರಗಳ ಸಾಕ್ಷಾತ್ಕಾರವು ಅದರ ಅಭ್ಯಾಸದಿಂದ ಹುಟ್ಟಿರುವುದು ಕಂಡಿರುವಂತೆ ಆಗಬಹುದಲ್ಲಾ ! ಎಂದು ಕೆಲವರು ಏನು ಹೇಳುವರು, ಅಲ್ಲಿ ಸಾಕ್ಷಾತ್ಕಾರವಾಗುವ ವಿದ್ಯೆಯೇ ಹೊರತು ಮತ್ತೊಂದಲ್ಲ. ಮತ್ತೊಂದಾದದ್ದು ಅಭ್ಯಾಸದಿಂದಾಗುವದಲ್ಲ, ಎಂದಾದ್ದರಿಂದ ದೃಷ್ಟಾಂತವು ಸರಿಯಲ್ಲ. ಎಲ್ಲಾದರೋ ಸಂಸ್ಕಾರಕ್ಕಧೀನವಾಗಿ ಅವಿದ್ಯೆಯ ಅನುವೃತ್ತಿಯು ಕಂಡುಬಂದಿದೆಯೋ ಅಲ್ಲಿ ಬಾಧಿತಾನುವೃತ್ತಿಯು ಸಫಲವಾಗುವುದಿಲ್ಲ. ವಿದ್ಯಾಸಂಸ್ಕಾರದಿಂದ ಎದ್ದದ್ದಾದ ಸ್ಮೃತಿಯಿಂದ ಅದರ ಬಾಧೆಯು ಕಡ್ಡಾಯವಾಗಿ ಆಗಿಯೇ ತೀರುವುದು ಎಂದಾದ್ದರಿಂದ ದೋಷವಿಲ್ಲ. "ಮಿಥ್ಯಾಜ್ಞಾನವು ಬಾಧಿತವಾದದ್ದಾದರೂ ದ್ವಿಚಂದ್ರಜ್ಞಾನದಂತೆ ಸಂಸ್ಕಾರಕ್ಕನುಗುಣವಾಗಿ ಕೆಲವು ಕಾಲದವರೆಗೆ ಅದು ಅನುವೃತ್ತವಾಗಿಯೇ ತೀರುತ್ತದೆ" (ಸೂ. ಭಾ. ೪-೧-೧೫) ಎಂದು ಭಗವತ್ಪಾದರವರು ಹೇಳಿಯೂ ಇರುತ್ತಾರೆ, (ಹಾಗೆಯೇ ಮತ್ತೊಂದು ಕಡೆಯಲ್ಲಿ) "ವಿದ್ಯಾವಂತನಾದವನಿಗೆ ವಿಪರೀತಜ್ಞಾನವುಂಟಾಗುವುದಿಲ್ಲ (ಏಕೆಂದರೆ) ವಿಷಯವೇ (ಅವನಿಗೆ) ಇರುವುದಿಲ್ಲ... ಕೆಲವೊಮ್ಮೆ ಹಿಂದುಂಟಾದ ಮಿಥ್ಯಾಜ್ಞಾನದ ಸಂಸ್ಕಾರದಿಂದ ತಪ್ಪಾದ ತಿಳಿವಳಿಕೆಯಂತೆ ತೋರುವ ಸ್ಮೃತಿಗಳು ಉಂಟಾಗುತ್ತಾ ವಿಪರೀತ-ಪ್ರತ್ಯಯಭ್ರಾಂತಿಯನ್ನು ಅಕಸ್ಮಾತ್ತಾಗಿ ಮಾಡುತ್ತವೆ. (ಅದು) ಹೇಗೆಂದರೆ – ಚೆನ್ನಾಗಿ ದಿಗ್ವಿಭಾಗಜ್ಞಾನವಿದ್ದವನಿಗೂ ಅಕಸ್ಮಾತ್ ದಿಗ್ಭ್ರಾಂತಿಯಾಗುವಂತೆ

ಸಮ್ಯಗ್ಜ್ಞಾನವತೋऽಪಿ ಚೇತ್ ಪೂರ್ವವದ್ವಿಪರೀತಪ್ರತ್ಯಯ ಉತ್ಪದ್ಯತೇ। ಸಮ್ಯಗ್ಜ್ಞಾನೇऽಪ್ಯವಿಸ್ರಂಭಾತ್ ಶಾಸ್ತ್ರಾರ್ಥವಿಜ್ಞಾನಾದೌ ಪ್ರವೃತ್ತಿರಸಮಞ್ಜಸಾ ಸ್ಯಾತ್, ಸರ್ವಂ ಚ ಪ್ರಮಾಣಮಪ್ರಮಾಣಂ ಸಂಪದ್ಯೇತ" (ಬೃ, ಭಾ. ೧–೪–೧೦) ಇತಿ । **ವಾರ್ತಿಕಕಾರಾ** ಅಪ್ಯಾಹುಃ "ಬಾಧ್ಯಬಾಧಕಯೋರ್ಯಸ್ಮಾತ್ ಸಂಬಂಧಃ ಸಕೃದೇವ ತು । ಸಂಬಂಧೋತ್ತರಕಾಲೇ ತು ತತ್ಸ್ಮೃತ್ಯೋರೇವ ಸಂಗತಿಃ"॥ (ಬೃ.ವಾ ೪–೪–೯೫೮) ಇತಿ । ಅತೋऽವಿದ್ಯಾಬಾಧೇ ಸತಿ ನ ಕಿಂಚಿದವಶಿಷ್ಯತೇ ಯನ್ನಾಶಾರ್ಥಂ ವಿದ್ಯಾಭ್ಯಾಸೋ ವಿದ್ಯಾಂತರಂ ಚ ಗವೇಷಣೀಯಂ ಸ್ಯಾದಿತಿ ಬೋಧ್ಯಮ್ । ತಸ್ಮಾದಯುಕ್ತೋऽಯಮವಿದ್ಯಾ-ಸಂಸ್ಕಾರವಾದ ಇತ್ಯಲಂ ಪಲ್ಲವಿತೇನ ॥

ತಸ್ಮಾದಾತ್ಮಾನಾತ್ಮನೋರಿತರೇತರಾಧ್ಯಾಸ ಏವಾವಿದ್ಯಾ । ತದ್ವಿಪರ್ಯ-ಯೇಣ ವಸ್ತುಸ್ವರೂಪಾವಧಾರಣಮೇವ ಚ ವಿದ್ಯೇತಿ ಸ್ಥಿತಮ್ ॥

---

– ಸರಿಯಾದ ತಿಳಿವಳಿಕೆಯುಳ್ಳವನಿಗೂ ಹಿಂದಿನ ಮಿಥ್ಯಾಜ್ಞಾನಗಳುಂಟಾಗ-ಬಹುದೆಂದಾದರೆ ಸಮ್ಯಗ್ಜ್ಞಾನದಲ್ಲಿ ನಂಬಿಕೆ ಇಲ್ಲದೇ ಹೋದೀತು ! ಶಾಸ್ತ್ರಾರ್ಥವನ್ನು ತಿಳಿದುಕೊಳ್ಳುವುದೇ ಮುಂತಾದದ್ದರಲ್ಲಿ ತೊಡಗುವು-ದೆಂಬುದು ಸರಿಯಲ್ಲವಾದೀತು? ಎಲ್ಲಾ ಪ್ರಮಾಣವೂ ಸಹ ಅಪ್ರಮಾಣವೂ ಆದೀತು" ! (ಬೃ. ಭಾ. ೧–೪–೧೦), ಬಾಧ್ಯಬಾಧಕಗಳಿಗೆ ಯಾವ ಕಾರಣದಿಂದ ಸಂಬಂಧವೆಂಬುದು ಒಂದೇ ಸಲವಾಗುವುದೋ, ಸಂಬಂಧದ ಮುಂದಿನ ಕಾಲದಲ್ಲಾದರೋ ಅವುಗಳ ಸ್ಮೃತಿಗೆ ಮಾತ್ರವೇ ಸಂಬಂಧವೇ (ಹೊರತು ಅವುಗಳು ಒಟ್ಟಿಗೆ ಇರುವುದಿಲ್ಲ) ಎಂದು ವಾರ್ತಿಕಕಾರರೂ ಸಹ (ಬೃ.ವಾ. ೪–೪–೯೫೮)ರಲ್ಲಿ ಹೇಳಿರುತ್ತಾರೆ. ಆದ್ದರಿಂದ ಅವಿದ್ಯೆಯು ಬಾಧೆಯಾಗಿಬಿಟ್ಟರೆ ಪುನಃ ಯಾವುದರ ನಾಶಕ್ಕಾಗಿ ವಿದ್ಯೆಯ ಅಭ್ಯಾಸವನ್ನು ಮಾಡಬೇಕೆಂದಾಗಲೀ ಬೇರೊಂದು ವಿದ್ಯೆಯನ್ನು ಹುಡುಕಬೇಕೆಂದಾಗಲೀ ಅಂಥಹ ಯಾವುದೊಂದೂ ಉಳಿಯುವುದಿಲ್ಲವೆಂದು ತಿಳಿಯಬೇಕು. ಆದ್ದರಿಂದ ಈ ಅವಿದ್ಯಾಸಂಸ್ಕಾರವಾದವು ಸರಿಯಲ್ಲವಾದ್ದರಿಂದ ಇದನ್ನು ಹೆಚ್ಚಾಗಿ ಬೆಳೆಸುವುದು ಬೇಡ. (ಅವಶ್ಯವಿಲ್ಲ).

ಆದ್ದರಿಂದ ಆತ್ಮಾನಾತ್ಮರುಗಳನ್ನು ಒಂದನ್ನಿನ್ನೊಂದನ್ನಾಗಿ ತಿಳಿಯುವುದೇ ಅವಿದ್ಯೆಯು, ಅದಕ್ಕೆ ವಿರುದ್ಧವಾಗಿ ವಸ್ತುಸ್ವರೂಪವನ್ನು ಗೊತ್ತುಪಡಿಸುವುದೇ ವಿದ್ಯೆಯು ಎಂಬುದು ತೀರ್ಮಾನವಾಯಿತು.

**೩೪. ಅಧ್ಯಾಸನಿರೂಪಣಫಲಮ್** – ಅಥೇದಾನೀಮಧ್ಯಾಸನಿರೂಪಣಸ್ಯ ಫಲಮಾಹ – **ತತ್ರೈವಂ ಸತಿ ಯತ್ರ ಯದಧ್ಯಾಸಸ್ತತ್ಕೃತೇನ ದೋಷೇಣ ಗುಣೇನ ವಾಣುಮಾತ್ರೇಣಾಪಿ ಸ ನ ಸಂಬಧ್ಯತೇ ।** ತತ್ರ ಪ್ರತ್ಯಗಾತ್ಮಾನಾತ್ಮನೋಸ್ತದ್ಧರ್ಮಾಣಾಂ ಚೇತರೇತರಭಾವೇನ ಯೋ ವ್ಯವಹಾರಃ ತಸ್ಮಿನ್ । ಏವಂ ಸತಿ ಸೋಽವಿದ್ಯಾತ್ಮಕ ಏವ, ಆಧ್ಯಾಸಿಕ ಏವ ನ ವಾಸ್ತವಿಕ ಇತಿ, ವಸ್ತುಸ್ವರೂಪನಿರ್ಧಾರಣಾತ್ಮಕವಿದ್ಯಾ ವಿನಿವರ್ತ್ಯ ಇತಿ ಚೈವಂ ನಿಶ್ಚಿತೇ ಸತಿ । ಇದಂ ಫಲತಿ । ಕಿಮ್ ? ಯತ್ರಾತ್ಮನಿ ಯದಧ್ಯಾಸಃ ಯಸ್ಯಾನಾತ್ಮನೋ ಬುದ್ಧ್ಯಾದೇಸ್ತದ್ಧರ್ಮಾಣಾಂ ವಾ, ಯತ್ರಾನಾತ್ಮನಿ ಬುದ್ಧ್ಯಾದೌ ಯದಧ್ಯಾಸಃ ಯಸ್ಯಾತ್ಮನಸ್ತದ್ಧರ್ಮಾಣಾಂ ವಾ ಅಧ್ಯಾಸಃ । ತತ್ಕೃತೇನ ತಾದೃಶಾಧ್ಯಾಸಕೃತೇನ ದೋಷೇಣ ಗುಣೇನ ವಾ ಸ ನ ಸಂಬಧ್ಯತೇ। ಅನಾತ್ಮಾಧ್ಯಾಸಕೃತೇನ ದೋಷೇಣ ನಾತ್ಮಾ ಸಂಬಧ್ಯತೇ । ಆತ್ಮಾಧ್ಯಾಸ–

---

**೩೪. ಅಧ್ಯಾಸವನ್ನು ಗೊತ್ತುಮಾಡಿದ್ದರ ಫಲವು :** ಇನ್ನು ಅಧ್ಯಾಸವನ್ನು ಗೊತ್ತುಪಡಿಸಿದ್ದರ ಫಲವೇನೆಂಬುದನ್ನು ತಿಳಿಸುತ್ತಾರೆ. ಹೀಗಿರಲಾಗಿ ಎಲ್ಲಿ ಯಾವ ಅಧ್ಯಾಸವಿರುವುದೋ ಅದರಿಂದಾದ ದೋಷದಿಂದಲಾಗಲೀ ಗುಣದಿಂದಲಾಗಲೀ ಅಣುಮಾತ್ರವಾಗಿಯೂ ಅದು ಸಂಬಂಧಪಡುವುದಿಲ್ಲ. ತತ್ರ ಎಂದರೆ – ಪ್ರತ್ಯಗಾತ್ಮ ಮತ್ತು ಅನಾತ್ಮರುಗಳನ್ನೂ ಅದರ ಧರ್ಮಗಳನ್ನೂ ಒಂದನ್ನಿನ್ನೊಂದನ್ನಾಗಿ ವ್ಯವಹಾರಮಾಡುವುದೆಂಬುದೇನಿದೆ "ಅದರಲ್ಲಿ" (ಎಂದರ್ಥ). "ಏವಂ ಸತಿ"– ಎಂದರೆ ಅದು ಅವಿದ್ಯಾತ್ಮಕವೇ, ಅಧ್ಯಾಸದಿಂದಾದ್ದದ್ದೇ ಹೊರತು ನಿಜವಲ್ಲವಾದ್ದರಿಂದ ವಸ್ತುಸ್ವರೂಪವನ್ನು ಗೊತ್ತುಮಾಡುವುದೆಂಬ ವಿದ್ಯೆಯಿಂದ ತೊಲಗಿಹೋಗುವುದೆಂದು ನಿಶ್ಚಯವಾಗಲಾಗಿ (ಎಂದರ್ಥ). ಇದು ತೀರ್ಮಾನವಾಗುತ್ತದೆ. ಏನು ? (ಏನೆಂದರೆ) – ಯಾವ ಆತ್ಮನಲ್ಲಿ ಯಾವ ಅನಾತ್ಮವಾದ ಬುದ್ಧ್ಯಾದಿಗಳ ಮತ್ತು ಅದರ ಧರ್ಮಗಳ ಅಧ್ಯಾಸವಾಗುವುದೋ, ಹಾಗೆಯೇ ಯಾವ ಅನಾತ್ಮವಾದ ಬುದ್ಧ್ಯಾದಿಗಳಲ್ಲಿ ಯಾವ ಆತ್ಮನ ಮತ್ತು ಅದರ ಧರ್ಮದ ಅಧ್ಯಾಸವಾಗಿರುವುದೋ, ಅದರಿಂದಾದ ಎಂದರೆ ಆ ಅಧ್ಯಾಸದಿಂದಾದ ದೋಷದಿಂದಲೂ ಗುಣದಿಂದಲೂ ಅದು ಸಂಬಂಧಪಡುವುದಿಲ್ಲ. ಅನಾತ್ಮಾಧ್ಯಾಸದಿಂದಾದ ದೋಷದಿಂದ ಆತ್ಮನೂ, ಆತ್ಮಾಧ್ಯಾಸದಿಂದಾದ

ಕೃತೇನ ಗುಣೇನ ವಾಽನಾತ್ಮಾ ನ ಸಂಬಧ್ಯತೇ ಇತ್ಯರ್ಥಃ । ಅಧ್ಯಾಸೋ ಹಿ ನಾಮಾತಸ್ಮಿಂಸ್ತದ್ಬುದ್ಧಿಃ । ನ ಹಿ ದೃಷ್ಟಿಮಾತ್ರೇಣ ತಾದ್ರೂಪ್ಯಂ ಭವತಿ ವಸ್ತುನಃ । ನ ಹಿ ಶುಕ್ತೌ ರಜತದೃಷ್ಟಿಮಾತ್ರೇಣ ತಸ್ಯಾಂ ಕೋಽಪಿ ಗುಣಸಂಬಂಧೋ ಭವತಿ । ಆಕಾಶೇ ತಲಮಲವತ್ತ್ವಾದಿದೃಷ್ಟಿಮಾತ್ರೇಣ ವಾ ತಸ್ಮಿನ್ ದೋಷಸಂಬಂಧಃ ಕಶ್ಚಿತ್ । "ಅಣುಮಾತ್ರೇಣಾಪಿ ನ ಸಂಬಧ್ಯತೇ" ಇತೀದಮುಕ್ತಂ ಭವತಿ, ನ ಕೇವಲಂ ವಿದ್ಯಯಾ ನಿವೃತ್ತಿಸಮನಂತರಮ್, ಕಿಂ ನಾಮ, ತತ್ಪೂರ್ವಮಪ್ಯಧ್ಯಾಸದಶಾಯಂ ತಾತ್ಕಾಲಿಕೇನಾಪಿ ನಾಧ್ಯಾಸಿಕೇನ ದೋಷೇಣ ಗುಣೇನ ವಾ ಅಧಿಷ್ಠಾನಂ ಸಂಬಧ್ಯತ ಇತಿ । ಅತ ಏವಾಧ್ಯಸ್ತಸ್ಯ ವಿದ್ಯಯಾಪೋಹೋಽಪ್ಯವಕಲ್ಪತೇ ವಸ್ತುಧರ್ಮತ್ವಾಭಾವಾತ್ । ನ ಹಿ ಕ್ವಚಿದ್ವಸ್ತುಧರ್ಮಸ್ಯಾಪೋಢ್ರೀ ವಿದ್ಯೇತಿ ಚ ॥

ಏತೇನ ಮಿಥ್ಯಾಧ್ಯಾಸಕಾಲೇ ನವೀನಮೇವ ಕಿಂಚಿದನಿರ್ವಚನೀಯಂ

---

ಗುಣದಿಂದ ಅನಾತ್ಮವೂ ಸಂಬಂಧಪಡುವುದಿಲ್ಲ ಎಂದರ್ಥವು. ಅಧ್ಯಾಸವೆಂದರೆ ಅದಲ್ಲದ್ದರಲ್ಲಿ ಅದೆಂಬ ದೃಷ್ಟಿಮಾತ್ರವಷ್ಟೆ ? ಒಂದು ವಸ್ತುವಿಗೆ ದೃಷ್ಟಿಮಾತ್ರದಿಂದ (ಇನ್ನೊಂದು) ರೂಪವು ಬರುವುದೆಂಬುದಿಲ್ಲವಷ್ಟೆ ? ಶುಕ್ತಿಯಲ್ಲಿ ರಜತದೃಷ್ಟಿಮಾತ್ರವನ್ನು ಹಾಕಿದ (ಮಾತ್ರಕ್ಕೆ) ಅದಕ್ಕೇನೂ ಆ ಗುಣವು ಬರುವುದಿಲ್ಲವಷ್ಟೆ ? ಆಕಾಶದ ತಲ, ಮಲಿನವಾಗಿದೆ ಎಂದು ಕಂಡಮಾತ್ರಕ್ಕೆ – ಅದರಲ್ಲಿ ದೋಷಸಂಬಂಧವೇನಾಗಿರುವುದಿಲ್ಲವಷ್ಟೆ ? "ಅಣುಮಾತ್ರೇಣಾಪಿ ನ ಸಂಬಧ್ಯತೇ" ಎಂದು ಹೇಳಿದ್ದರಿಂದ ಇದು ಹೇಳಿದಂತಾಯಿತು, ಏನೆಂದರೆ ಬರೀ ವಿದ್ಯೆಯಿಂದ ತೊಲಗಿದ ನಂತರ ("ಸೇರುವುದಿಲ್ಲ ಎಂದು ಗೊತ್ತಾಗುತ್ತದೆ") ಎಂದರ್ಥವಲ್ಲ, ಮತ್ತೇನೆಂದರೆ ಅದಕ್ಕೆ ಮೊದಲು ಅಧ್ಯಾಸಕಾಲದಲ್ಲೂ, ಆ ಕಾಲದ ಅಧ್ಯಾಸದೋಷದಿಂದಲೂ ಗುಣದಿಂದಲೂ ಆಶ್ರಯವು ಸಂಬಂಧಪಟ್ಟುಕೊಂಡಿರುವುದಿಲ್ಲ ಎಂದು ತಿಳಿಯಬೇಕು. ವಸ್ತುಧರ್ಮವಲ್ಲವಾದ್ದರಿಂದಲೇ ಅಧ್ಯಾಸವು ವಿದ್ಯೆಯಿಂದ ತೊಲಗುವುದೆಂಬುದು ಹೊಂದುತ್ತದೆ. ವಿದ್ಯೆಯೆಂಬುದು ಎಲ್ಲೂ ವಸ್ತುಧರ್ಮವನ್ನು ತೆಗೆದುಹಾಕುವುದೆಂದು (ಕಂಡುಬಂದಿಲ್ಲವಷ್ಟೆ) ?

ಇಷ್ಟು ಹೇಳಿದ್ದರಿಂದ ಮಿಥ್ಯಾಧ್ಯಾಸಕಾಲದಲ್ಲಿ ಹೊಸದೇ ಆದ ಒಂದಾನೊಂದು ಅನಿರ್ವಚನೀಯವಾದ ಪ್ರಾತಿಭಾಸಿಕವಾದದ್ದು ಉಂಟಾಗುತ್ತ–

ಪ್ರಾತಿಭಾಸಿಕಂ ಸಮುತ್ಪದ್ಯತ ಇತಿ, ವಿದ್ಯಯಾ ತನ್ನಿವೃತ್ತಿಃ ಕ್ರಿಯತ ಇತಿ ಚ ವದಂತೋऽನುಶಾಂಕರವೇದಾಂತಿನಃ ಪರಾಸ್ತಾ ಭವಂತಿ । ತೇಷಾಂ ಪಕ್ಷೇ ಹ್ಯನಿರ್ವಚನೀಯೋತ್ಪತ್ತಿನಿವೃತ್ತಿಭ್ಯಾಮಧಿಷ್ಠಾನಸ್ಯ ವಿಶೇಷೋऽಭ್ಯುಪಗತಃ ಸ್ಯಾತ್ । ತಚ್ಚಾಯುಕ್ತಂ, ಭಾಷ್ಯಕಾರಾನಭಿಮತಂ ಚ । ವಕ್ಷ್ಯತಿ ಹಿ "ನ ತ್ವಹಿಬುದ್ಧಿಕಾಲೇ ತದಪಗಮಕಾಲೇ ಚ ವಸ್ತುನಃ ಕಶ್ಚಿದ್ವಿಶೇಷಃ ಸ್ಯಾತ್" (ಸೂ. ಭಾ, ೧-೪-೬) ಇತಿ ॥

ಅತ ಏವ ವಿದ್ಯಾವಿದ್ಯಾಕೃತೋऽಪಿ ವಿಶೇಷೋ ನಾತ್ಮನ ಇತಿ ಸಿದ್ಧಂ ಭವತಿ । ತಯೋರಪಿ ಬುದ್ಧಿವೃತ್ತಿಮಾತ್ರತ್ವಾದಾತ್ಮಧರ್ಮತ್ವಾನುಪಪತ್ತೇಃ। ಅವಿದ್ಯಾದೃಷ್ಟ್ಯೈವ ತು ವಿದ್ವಾನ್ ಅವಿದ್ವಾನ್ ಇತಿ ಚ ವ್ಯವಹಾರ ಇತಿ ಚ ಭಾಷ್ಯೋಕ್ತಿರುದಾಹೃತಾ ಪ್ರಾಗೇವ । ತನ್ನ ಪ್ರಸ್ಮರ್ತವ್ಯಮ್ । ಪುನರಪ್ಯೇತತ್ ಸ್ವಾವಸರ ಏವ ವಿವರಿಷ್ಯಾಮ ಇತ್ಯಲಂ ಪ್ರಸಂಗಾಗತಪ್ರಪಂಚನೇನ ॥

---

ದೆಯೆಂತಲೂ, ವಿದ್ಯೆಯು (ನಿಜವಾಗಿ ಅದನ್ನು) ತೊಲಗಿಸುತ್ತದೆಯಂತಲೂ ಹೇಳುತ್ತಿರುವ ಈಚಿನ ಅನುಶಾಂಕರ ವೇದಾಂತಿಗಳನ್ನು ತಳ್ಳಿಹಾಕಿ-ದಂತಾಯಿತೆಂದು ತಿಳಿಯಬೇಕು. ಅವರ ಪಕ್ಷದಂತೆ ಅನಿರ್ವಚನೀಯವಾದದ್ದರ ಉತ್ಪತ್ತಿ, ನಿವೃತ್ತಿಯಿಂದ ಅಧಿಷ್ಠಾನಕ್ಕೆ ವಿಶೇಷವನ್ನು ಒಪ್ಪಿದಂತಾಗುವುದು. ಅದೂ ಹೊಂದುವುದಿಲ್ಲ, ಭಾಷ್ಯಕಾರರಿಗೆ ಒಪ್ಪಿಗೆಯಾದದ್ದೂ ಅಲ್ಲ. "ಹಾವೆಂಬ ಬುದ್ಧಿಯ ಕಾಲದಲ್ಲಾಗಲೀ ಅದು ಹೋದಕಾಲದಲ್ಲಾಗಲೀ ವಸ್ತುವಿಗೆ ಯಾವ ವಿಶೇಷವೂ ಆಗುವುದಿಲ್ಲ" ಎಂದು (ಸೂ.ಭಾ.೧-೪-೬) ರಲ್ಲಿ (ಭಾಷ್ಯ-ಕಾರರೇ) ಹೇಳುತ್ತಾರಲ್ಲವೇ ?

ಆದ್ದರಿಂದಲೇ ಆತ್ಮನಿಗೆ ವಿದ್ಯಾವಿದ್ಯೆಯಿಂದಾದ ವಿಶೇಷವೆಂಬುದೂ ಇಲ್ಲವೆಂದು ಸಿದ್ಧವಾಗುತ್ತದೆ. ಅವೆರಡೂ ಬುದ್ಧಿವೃತ್ತಿಮಾತ್ರವಾದ್ದರಿಂದಲೂ, ಆತ್ಮನ ಧರ್ಮವಾಗುವುದೆಂಬುದು ಹೊಂದುವುದಿಲ್ಲ. ಅವಿದ್ಯಾದೃಷ್ಟಿಯಿಂದಲೇ "ಜ್ಞಾನಿ" "ಅಜ್ಞಾನಿ" ಎಂಬ ವ್ಯವಹಾರವೆಂಬುದರ ಭಾಷ್ಯವನ್ನೂ ನಾವು ಹಿಂದೆಯೇ ಉದಾಹರಿಸಿರುತ್ತೇವೆ. ಅದನ್ನು ಮರೆಯಬಾರದು. ಮತ್ತೊಮ್ಮೆ ಇದರ ಸಂದರ್ಭವು ಬಂದಾಗ ವಿವರಿಸುವೆವು ಎಂದಾದ್ದರಿಂದ ಪ್ರಸಂಗದಿಂದ ಬಂದ ವಿಚಾರವು ಇಲ್ಲಿಗೆ ಸಾಕು.

ಅತ್ರ ಪ್ರಕೃತಂ ತ್ವಿದಮ್ । ಯದ್ಯಪಿ ಲೋಕೇ ಪ್ರತತೈಷಾ ಆತ್ಮಾನಾತ್ಮನೋರಿತರೇತರಾಧ್ಯಾಸರೂಪಾऽವಿದ್ಯಾ ತಥಾಪಿ ನ ತಾವನ್ಮಾತ್ರೇಣ ವಸ್ತುತೋऽಪ್ಯಾತ್ಮನಃ ಸಂಸಾರಿತ್ವಂ ಭವತಿ । ತಥಾ ಚಾತ್ಮಸ್ವರೂಪ-ಯಾಥಾತ್ಮ್ಯಬೋಧನಾಯ ಶ್ರುತೀನಾಂ ಪ್ರವೃತ್ತಿರ್ನಿಷ್ಪ್ರತ್ಯೂಹಾ । ತದರ್ಥನಿರ್ಣಯಾಯ ಚ ಬ್ರಹ್ಮಜಿಜ್ಞಾಸಾಶಾಸ್ತ್ರಸ್ಯ ಪ್ರವೃತ್ತಿರಿತಿ ॥

---

ಇಲ್ಲಿ ಪ್ರಕೃತವಾದದ್ದಾದರೋ ಇದು, ಏನೆಂದರೆ ಆತ್ಮಾನಾತ್ಮರುಗಳ ಇತರೇತರಾಧ್ಯಾಸರೂಪವಾದ ಅವಿದ್ಯೆಯು ಲೋಕದಲ್ಲಿ ಹರಡಿಕೊಂಡಿದ್ದರೂ ಅಷ್ಟುಮಾತ್ರದಿಂದ ನಿಜವಾಗಿಯೂ ಆತ್ಮನಿಗೆ ಸಂಸಾರಿತ್ವವಿದೆ ಎಂಬುದಾಗುವುದಿಲ್ಲ, ಹಾಗೆಯೇ ಆತ್ಮಸ್ವರೂಪದ ನಿಜರೂಪವನ್ನು ತಿಳಿಸಿಕೊಡುವುದಕ್ಕಾಗಿಯೇ ಶ್ರುತಿಗಳು ಹೊರಟಿರುತ್ತವೆ ಎಂಬುದು ಯಾವ ಅಡ್ಡಿ ಇಲ್ಲದ ವಿಚಾರವು. ಅದರ ಅರ್ಥವನ್ನು ನಿರ್ಣಯಮಾಡುವುದಕ್ಕಾಗಿಯೇ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂದು ಹೇಳುವ ಶಾಸ್ತ್ರದ ಪ್ರವೃತ್ತಿಯು (ಎಂಬುದು ಸಿದ್ಧವಾಗುತ್ತದೆ).

✹✹✹✹✹✹✹✹✹✹

## ೫. ಅಥ ವ್ಯವಹಾರಮಾತ್ರಸ್ಯಾಽಽವಿದ್ಯಕತ್ವ-ಪ್ರತಿಪಾದಕಂ ಭಾಷ್ಯಮ್

ತಮೇತಮವಿದ್ಯಾಖ್ಯಮಾತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ। ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ ॥ ಕಥಂ ಪುನರವಿದ್ಯಾ-ವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚೇತಿ ? ಉಚ್ಯತೇ । ದೇಹೇಂದ್ರಿಯಾದಿಷ್ವಹಂ-ಮಮಾಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇಃ। ನ ಹೀಂದ್ರಿಯಾಣ್ಯನು-ಪಾದಾಯ ಪ್ರತ್ಯಕ್ಷಾದಿವ್ಯವಹಾರಃ ಸಂಭವತಿ । ನ

---

## ೫. ವ್ಯವಹಾರವೇ ಅವಿದ್ಯಾಪುರಸ್ಸರವಾದದ್ದು ಎಂದು ಪ್ರತಿಪಾದನೆ ಮಾಡುವ ಭಾಷ್ಯಭಾಗ

**ಭಾಷ್ಯಾರ್ಥ** :- ಆ ಈ ಅವಿದ್ಯೆ ಎಂಬ ಆತ್ಮಾನಾತ್ಮರುಗಳ ಪರಸ್ಪರಾಧ್ಯಾಸವನ್ನು ಮೂಲವಾಗಿಟ್ಟುಕೊಂಡು ಎಲ್ಲಾ ಲೌಕಿಕ ಮತ್ತು ವೈದಿಕಪ್ರಮಾಣಪ್ರಮೇಯವ್ಯವಹಾರಗಳೂ ವೈದಿಕವ್ಯವಹಾರಗಳೂ ಹೊರಟಿರುತ್ತವೆ. ವಿಧಿಪ್ರತಿಷೇಧಪರವಾಗಿರುವ ಶಾಸ್ತ್ರಗಳೂ ಮೋಕ್ಷ-ಶಾಸ್ತ್ರಗಳೂ ಕೂಡ (ಇದೇ ಅಧ್ಯಾಸವನ್ನು ಮುಂದುಮಾಡಿಕೊಂಡೇ ಹೊರಟಿರುತ್ತವೆ). (ಆಕ್ಷೇಪ) ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳೂ ಶಾಸ್ತ್ರಗಳೂ ಅವಿದ್ಯಾವಂತರ ವಿಷಯವಾಗಿರುವುದೆಂಬುದು ಹೇಗೆ ? (ಪರಿಹಾರ) ಹೇಳುತ್ತೇವೆ (ಕೇಳಿ)- ದೇಹೇಂದ್ರಿಯಾದಿಗಳಲ್ಲಿ ನಾನು ನನ್ನದೆಂಬ ಅಭಿಮಾನವಿಲ್ಲದಾತನು ಪ್ರಮಾತೃವಾಗಲಾರನಾದ್ದರಿಂದ ಪ್ರಮಾಣಗಳು ತೊಡಗುವುದೆಂಬುದು ಹೊಂದುವುದಿಲ್ಲ. ಹೇಗೆಂದರೆ - ಇಂದ್ರಿಯಾದಿ-ಗಳನ್ನಿಟ್ಟುಕೊಳ್ಳದೇ ಪ್ರತ್ಯಕ್ಷವೇ ಮುಂತಾದ ವ್ಯವಹಾರವು ಆಗುವಂತಿಲ್ಲ.

ಚಾಧಿಷ್ಠಾನಮಂತರೇಣೇಂದ್ರಿಯಾಣಾಂ ವ್ಯವಹಾರಃ ಸಂಭವತಿ । ನ ಚಾನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ವ್ಯಾಪ್ರಿಯತೇ । ನ ಚೈತಸ್ಮಿನ್ ಸರ್ವಸ್ಮಿನ್ನಸತಿ ಅಸಂಗಸ್ಯಾತ್ಮನಃ ಪ್ರಮಾತೃತ್ವಮುಪಪದ್ಯತೇ । ನ ಚ ಪ್ರಮಾತೃತ್ವಮಂತರೇಣ ಪ್ರಮಾಣಪ್ರವೃತ್ತಿರಸ್ತಿ । ತಸ್ಮಾದವಿದ್ಯಾವದ್ವಿಷಯಾಣ್ಯೇವ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚ ॥

ಪಶ್ವಾದಿಭಿಶ್ಚಾವಿಶೇಷಾತ್ । ಯಥಾ ಹಿ ಪಶ್ವಾದಯಃ ಶಬ್ದಾದಿಭಿಃ ಶ್ರೋತ್ರಾದೀನಾಂ ಸಂಬಂಧೇ ಸತಿ ಶಬ್ದಾದಿವಿಜ್ಞಾನೇ ಪ್ರತಿಕೂಲೇ ಜಾತೇ ತತೋ ನಿವರ್ತಂತೇ, ಅನುಕೂಲೇ ಚ ಪ್ರವರ್ತಂತೇ । ಯಥಾ ದಂಡೋದ್ಯತಕರಂ ಪುರುಷಮಭಿಮುಖಮುಪಲಭ್ಯ ಮಾಂ ಹಂತುಮಯಮಿಚ್ಛತೀತಿ ಪಲಾಯಿತುಮಾ-

---

ತಮಗೆ ಅಧಿಷ್ಠಾನವಾದ ದೇಹವಿಲ್ಲದೇ ಇಂದ್ರಿಯಗಳ ವ್ಯಾಪಾರವೂ ಆಗುವಂತಿಲ್ಲ. ದೇಹಾದಿಗಳನ್ನು ತಾನು ಎಂದು ಅಧ್ಯಾಸಮಾಡಿಕೊಳ್ಳದೇ ಇರುವಾಗ (ಅದರಿಂದ) ಯಾವನೂ (ಯಾವ) ಕೆಲಸವನ್ನೂ ಮಾಡಲಾರನು. ಇದಿಷ್ಟೂ ಆಗದಿದ್ದರೆ ಅಸಂಗನಾದ ಆತ್ಮನಿಗೆ ಪ್ರಮಾತೃತ್ವವು ಹೊಂದುವುದಿಲ್ಲ. ಪ್ರಮಾತೃತ್ವವಿಲ್ಲದೇ ಪ್ರಮಾಣಗಳಪ್ರವೃತ್ತಿ ಎಂಬುದೂ ಹೊಂದುವುದಿಲ್ಲ. ಆದ್ದರಿಂದ ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳೂ ಶಾಸ್ತ್ರಗಳೂ ಅವಿದ್ಯಾವಂತರ ವಿಷಯಾದವುಗಳೇ. ಪಶ್ವಾದಿಗಳಿಗಿಂತ ಯಾವ ವಿಶೇಷವೂ ಇಲ್ಲದ್ದರಿಂದಲೂ (ಹೀಗೆಂದು ತಿಳಿಯಬೇಕು). ಪಶುಗಳೇ ಮುಂತಾದ ಪ್ರಾಣಿಗಳು ಶ್ರೋತ್ರವೇ ಮುಂತಾದ ಇಂದ್ರಿಯಗಳಿಗೆ ಶಬ್ದವೇ ಮುಂತಾದ ವಿಷಯಗಳ ಸಂಬಂಧ-ವುಂಟಾದಾಗ ಶಬ್ದಾದಿಗಳ ಅರಿವು ತಮಗೆ ಪ್ರತಿಕೂಲವಾದಾಗ ಆ ಕಡೆಯಿಂದ ಹಿಂಜರಿಯುತ್ತವೆ, ಅನುಕೂಲವಾದರೆ ಮುನ್ನಡೆಯುತ್ತವೆ. ಹೇಗೆಂದರೆ ಒಬ್ಬನು ಕೈಯಲ್ಲಿ ದೊಣ್ಣೆಯನ್ನು ಎತ್ತಿಹಿಡಿದುಕೊಂಡು ತಮ್ಮ ಎದುರಿಗೆ ಬರುವುದನ್ನು ಕಂಡರೆ ಇವನು ನನ್ನನ್ನು ಹೊಡೆಯಬೇಕೆಂದಿರುವನು ಎಂದೆಣಿಸಿಕೊಂಡು

ರಭಂತೇ, ಹರಿತತೃಣಪೂರ್ಣಪಾಣಿಮುಪಲಭ್ಯ ತಂ ಪ್ರತ್ಯಭಿಮುಖೀಭವನ್ತಿ । ಏವಂ ಪುರುಷಾ ಅಪಿ ವ್ಯುತ್ಪನ್ನಚಿತ್ತಾಃ ಕ್ರೂರದೃಷ್ಟೀನಾಕ್ರೋಶತಃ ಖಡ್ಗೋದ್ಯತಕರಾನ್ ಬಲವತ ಉಪಲಭ್ಯ ತತೋ ನಿವರ್ತಂತೇ । ತದ್ವಿಪರೀತಾನ್ ಪ್ರತಿ ಪ್ರವರ್ತಂತೇ । ಅತಃ ಸಮಾನಃ ಪಶ್ವಾದಿಭಿಃ ಪುರುಷಾಣಾಂ ಪ್ರಮಾಣ-ಪ್ರಮೇಯವ್ಯವಹಾರಃ । ಪಶ್ವಾದಿನಾಂ ಚ ಪ್ರಸಿದ್ಧೋಽ-ವಿವೇಕಪುರಸ್ಸರಃ ಪ್ರತ್ಯಕ್ಷಾದಿವ್ಯವಹಾರಃ । ತತ್ಸಾ-ಮಾನ್ಯದರ್ಶನಾತ್ ವ್ಯುತ್ಪತ್ತಿಮತಾಮಪಿ ಪುರುಷಾಣಾಂ ಪ್ರತ್ಯಕ್ಷಾದಿವ್ಯವಹಾರಸ್ತತ್ಕಾಲಃ ಸಮಾನ ಇತಿ ನಿಶ್ಚೀಯತೇ ॥

೩೫. ಗ್ರಂಥಸಂಬಂಧಃ – ಅಧುನಾ ಸರ್ವಸ್ಯಾಪಿ ವ್ಯವಹಾರಸ್ಯಾ-

---

ಓಡುವುದಕ್ಕೆ ಮೊದಲು ಮಾಡುತ್ತವೆ. ಕೈತುಂಬಾ ಹಸಿರುಹುಲ್ಲನ್ನು ಹಿಡಿದುಕೊಂಡಿರುವವನನ್ನು ಕಂಡರೆ ಅವನ ಕಡೆಗೆ ಮುನ್ನಡೆಯುತ್ತವೆ. ಹೀಗೆಯೇ ವಿವೇಕದಿಂದ ಕೂಡಿದ ಮನಸ್ಸುಳ್ಳ ಜನರೂ ಸಹ ಕ್ರೂರಕಣ್ಣಿನಿಂ-ದೊಡಗೂಡಿ ಕೂಗುತ್ತಾ ಕತ್ತಿಯನ್ನು ಕೈಯಲ್ಲಿ ಎತ್ತಿಕೊಂಡು ಬರುತ್ತಿರುವ ಬಲಿಷ್ಠರನ್ನು ಕಂಡಾಗ ಆ ಕಡೆಯಿಂದ ಹಿಂಜರಿಯುತ್ತಾರೆ. ಹಾಗಿಲ್ಲದೆ ಅದಕ್ಕಿಂತ ಬೇರೆಯವರಾದ (ಸೌಮ್ಯವಾಗಿ ಒಳ್ಳೆಯ ಮಾತನ್ನಾಡುತ್ತಿರುವವರನ್ನು ಕಂಡರೆ) ಅವರ ಕಡೆಗೆ ಮುನ್ನಡೆಯುತ್ತಾರೆ. ಆದ್ದರಿಂದ ಪಶ್ವಾದಿಗಳಿಗೂ ಮನುಷ್ಯರಿಗೂ ಪ್ರಮಾಣಪ್ರಮೇಯವ್ಯವಹಾರವು ಸಮಾನವಾಗಿರುತ್ತದೆ ಎಂದಾಯಿತು. ಪಶ್ವಾದಿಗಳ ಪ್ರತ್ಯಕ್ಷಾದಿವ್ಯವಹಾರವಂತೂ ಅವಿವೇಕದಿಂದಲೇ ಆದದ್ದೆಂದು ಪ್ರಸಿದ್ಧವಾಗಿರುತ್ತದೆ. ವಿವೇಕವುಳ್ಳ ಪುರುಷರ ವ್ಯವಹಾರವೂ ಅದಕ್ಕೆ ಸಮಾನವಾಗಿಯೇ ಕಂಡುಬಂದಿರುವುದರಿಂದ ಅದರಂತೆಯೇ ಇರುವುದೆಂದು ನಿಶ್ಚಯವಾಗುತ್ತದೆ.

೩೫. ಗ್ರಂಥಸಂಬಂಧವು – ಈಗ ಆರಂಭದಲ್ಲಿ ತಪ್ಪುತಿಳಿವಳಿಕೆಯ

ವಿದ್ಯಾತ್ಮಕತ್ವಂ ಯದಾದೌ ಪ್ರತಿಜ್ಞಾತಂ "ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯಾಹಮಿದಂ ಮಮೇದಮಿತಿ ನೈಸರ್ಗಿಕೋಽಯಂ ಲೋಕವ್ಯವಹಾರಃ" ಇತಿ, ತದ್ವಿವೃಣ್ವನ್ನಾಹ – **ತಮೇತಮವಿದ್ಯಾಖ್ಯಮಾತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾಃ ಪ್ರವೃತ್ತಾಃ** ಇತ್ಯಾದಿನಾ ॥

**೩೬. ಲೌಕಿಕವ್ಯವಹಾರಸ್ಯಾಧ್ಯಾಸಪುರಸ್ಸರತ್ವಪ್ರತಿಜ್ಞಾ** – ಅಯಮರ್ಥಃ । ತಮಾದೌ ಪ್ರತಿಜ್ಞಾತಮ್ ಏತಮ್ ಪಶ್ಚಾಚ್ಚ ಲಕ್ಷಣಾಕ್ಷೇಪಸಮಾಧಾನಾಭ್ಯಾಂ ಸಂಭಾವಿತಮ್, ಅವಿದ್ಯಾಖ್ಯಮ್ ಅವಿದ್ಯಾ ಇತ್ಯಾಖ್ಯಾ ಅಪರಾಭಿಧಾನಂ ಯಸ್ಯಾಧ್ಯಾಸಸ್ಯ ತಮ್, ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ನಿಮಿತ್ತೀಕೃತ್ಯ । ಉಪಲಕ್ಷಣಮೇತತ್ । ತದ್ಧರ್ಮಾಣಮಪೀತರೇತರತ್ರಾಧ್ಯಾಸಂ ನಿಮಿತ್ತೀಕೃತ್ಯೇತ್ಯಪಿ ದ್ರಷ್ಟವ್ಯಮ್। "ಅವಿದ್ಯಾಖ್ಯಮಧ್ಯಾಸಮ್" ಇತಿ ವಿಶಿಂಷತಾ ಪ್ರಕೃತಾದಧ್ಯಾಸಾದನ್ಯಾ

---

ನಿಮಿತ್ತವಾಗಿ ನಿಜವನ್ನೂ ಸುಳ್ಳನ್ನೂ ಕಲಬೆರಿಕೆಮಾಡಿಕೊಂಡು "ನಾನಿದು, ನನ್ನದಿದು" ಎಂದು ಲೋಕದ ಜನರ ವ್ಯವಹಾರವು ಸ್ವಾಭಾವಿಕವಾಗಿದೆ ಎಂದು ಏನನ್ನು ಪ್ರತಿಜ್ಞೆಮಾಡಿತ್ತೋ ಅದನ್ನು "ತಮೇತಮವಿದ್ಯಾಖ್ಯಮ್" ಎಂಬಲ್ಲಿಂದ "ಪ್ರಮೇಯವ್ಯವಹಾರಾಃ ಪ್ರವೃತ್ತಾಃ" ಎಂಬವರೆಗಿನ ಗ್ರಂಥಭಾಗದಿಂದ ವಿವರಿಸುತ್ತಾ ಹೇಳುತ್ತಾರೆ.

**೩೬. ಲೌಕಿಕವ್ಯವಹಾರವು ಅಧ್ಯಾಸಪುರಸ್ಸರವಾಗಿದೆ ಎಂಬುದರ ಪ್ರತಿಜ್ಞೆ** – ಇದು ಅಭಿಪ್ರಾಯವು – ಯಾವುದನ್ನು ಆರಂಭದಲ್ಲಿ ಪ್ರತಿಜ್ಞೆಮಾಡಲಾಯಿತೋ ಆಮೇಲೆ ಲಕ್ಷಣ, ಆಕ್ಷೇಪ ಸಮಾಧಾನಗಳಿಂದ (ಇರಬಹುದೆಂದು) ಮಾಡಲಾಯಿತೋ ಆ ಅವಿದ್ಯೆ ಎಂಬ ಹೆಸರಿನ (ಅಧ್ಯಾಸಕ್ಕೆ) ಇನ್ನೊಂದು ಹೆಸರಾದ ಆತ್ಮಾನಾತ್ಮರುಗಳ ಇತರೇತರಾಧ್ಯಾಸವನ್ನು ಮುಂದುಮಾಡಿಕೊಂಡು ಅಂದರೆ ನಿಮಿತ್ತಮಾಡಿಕೊಂಡು (ಎಂದಭಿಪ್ರಾಯ). ಇದು ಉಪಲಕ್ಷಣವಾಗಿ ಹೇಳಿದ್ದು, ಅದರ ಧರ್ಮಗಳಿಗೂ ಇತರೇತರಾಧ್ಯಾಸವನ್ನು ನಿಮಿತ್ತಮಾಡಿಕೊಂಡು ಎಂದು ಸೇರಿಸಿಕೊಳ್ಳಬೇಕು. "ಅವಿದ್ಯಾಖ್ಯಮ್ ಅಧ್ಯಾಸಮ್" ಎಂದು (ಭಾಷ್ಯಕಾರರು) ವಿಶೇಷಣಗೊಳಿಸಿದ್ದರಿಂದ ಪ್ರಕೃತವಾದ ಅವಿದ್ಯೆ ಎಂಬ ಹೆಸರಿನ ಅಧ್ಯಾಸಕ್ಕಿಂತ

ಕಾಚಿತ್ತನ್ಮೂಲಭೂತಾ ಅವಿದ್ಯಾಸ್ತೀತಿ ವದಂತೋ ವಿಘಟಿತಾ ಭವಂತಿ। ಯಥೋಕ್ತಾಧ್ಯಾಸಂ ಪುರಸ್ಕೃತ್ಯ ಸರ್ವೇ ವ್ಯವಹಾರಾಃ ಪ್ರವೃತ್ತಾಃ । ಅಥ ಕೇ ತೇ ವ್ಯವಹಾರಾಃ ? ತತ್ರೋತ್ತರಮ್ – **ಪ್ರಮಾಣಪ್ರಮೇಯವ್ಯವಹಾರಾ ಲೌಕಿಕಾ ವೈದಿಕಾಶ್ಚೇತಿ** । "ಯಸ್ಯ ಪ್ರೇಪ್ಸಾಜಿಹಾಸಾಪ್ರಯುಕ್ತಸ್ಯ ಪ್ರವೃತ್ತಿಃ ಸ ಪ್ರಮಾತಾ । ಸ ಯೇನಾರ್ಥಂ ಪ್ರಮಿಣೋತಿ ತತ್ಪ್ರಮಾಣಮ್ । ಯೋಽರ್ಥಃ ಪ್ರಮೀಯತೇ ತತ್ಪ್ರಮೇಯಮ್ । ಯದರ್ಥವಿಜ್ಞಾನಂ ಸಾ ಪ್ರಮಿತಿಃ" ಇತಿ ಹಿ ಪ್ರಮಾಣವಿದಃ । ತತ್ರ "ಇದಂ ಪ್ರಮಾಣಮ್" "ಇದಂ ಪ್ರಮೇಯಮ್" ಇತಿ ಕೃತ್ವಾ ಯೇ ವ್ಯವಹಾರಾ ಪ್ರತ್ಯಕ್ಷಾದಿಶಬ್ದಪ್ರತ್ಯಯ-ರೂಪಾಃ, ತದನುಗುಣಪ್ರವೃತ್ತಿನಿವೃತ್ತಿರೂಪಾಶ್ಚ ತೇ ಸರ್ವೇಽಪ್ಯುಕ್ತಾ-ವಿದ್ಯಾಖ್ಯಾಧ್ಯಾಸಪುರಸ್ಸರಮೇವ ಪ್ರವೃತ್ತಾಃ । ಲೋಕೇ ಭವಂತಿ ಯೇ ತೇ ಲೌಕಿಕಾಃ । ವೇದೇ ಭವಂತಿ ಯೇ ತೇ ವೈದಿಕಾಃ । ನ ಕೇವಲಂ

---

ಬೇರೆಯದಾದ ಒಂದಾನೊಂದು ಅದಕ್ಕೂ ಮೂಲವಾದ ಅವಿದ್ಯೆಯು ಇದೆ ಎಂದು ಹೇಳುವವರನ್ನು ಬೇರ್ಪಡಿಸಿದಂತಾಗುತ್ತದೆ. ಮೇಲೆ ತಿಳಿಸಿದ ಅಧ್ಯಾಸವನ್ನು ಮುಂದುಮಾಡಿಕೊಂಡು ಎಲ್ಲಾ ವ್ಯವಹಾರಗಳೂ ಹೊರಟಿರುತ್ತವೆ. ಆ ವ್ಯವಹಾರಗಳು ಯಾವವು ? ಎಂದರೆ – ಅದಕ್ಕೆ ಉತ್ತರವಾಗಿ "ಲೌಕಿಕವೈದಿಕವಾದ (ಎಲ್ಲಾ) ಪ್ರಮಾಣಪ್ರಮೇಯವ್ಯವ-ಹಾರಗಳು" ಎಂದಿರುತ್ತಾರೆ. "ಪಡೆಯಬೇಕೆಂತಲೂ ತಪ್ಪಿಸಿಕೊಳ್ಳ-ಬೇಕೆಂತಲೂ" ಪ್ರೇರಕವಾದ ಪ್ರವೃತ್ತಿಯು ಯಾವಾತನದೋ ಆತನೇ **ಪ್ರಮಾತೃವು.** ಆತನು ಯಾವುದರಿಂದ ವಿಷಯವನ್ನು ಅಳೆಯುತ್ತಾನೋ ಅದು **ಪ್ರಮಾಣವು.** ಯಾವ ವಿಷಯವು ಅಳೆಯಲ್ಪಡುವುದೋ ಅದು **ಪ್ರಮೇಯವು.** ಯಾವದು ವಸ್ತುವಿನ ಜ್ಞಾನವೋ ಅದು **ಪ್ರಮಿತಿಯು** ಎಂದು ಪ್ರಮಾಣಜ್ಞರು ಹೇಳುತ್ತಾರೆ. ಅಲ್ಲಿ "ಇದು ಪ್ರಮಾಣ ಇದು ಪ್ರಮೇಯ" ಎಂದುಕೊಂಡು ಯಾವ ಪ್ರತ್ಯಕ್ಷವೇ ಮುಂತಾದ ಶಬ್ದಪ್ರತ್ಯಯರೂಪವಾದ ವ್ಯವಹಾರವಿದೆಯೋ ಅದಕ್ಕನುಗುಣವಾದ ಪ್ರವೃತ್ತಿನಿವೃತ್ತಿರೂಪವಾದ ವ್ಯವಹಾರವಿದೆಯೋ ಅವುಗಳೂ ಸಹ ಮೇಲೆ ಹೇಳಿದ ಅವಿದ್ಯೆ ಎಂಬ ಹೆಸರಿನ ಅಧ್ಯಾಸವನ್ನು ಮುಂದುಮಾಡಿಕೊಂಡೇ ಹೊರಟಿರುತ್ತವೆ. ಲೋಕದಲ್ಲಿ ಯಾರಿರುವರೋ ಅವರು ಲೌಕಿಕರು. ಶಾಸ್ತ್ರೀಯವ್ಯವಹಾರದಲ್ಲಿರುವವರು ವೈದಿಕರು. ಲೌಕಿಕವ್ಯವಹಾರವು ಮಾತ್ರ

ಲೌಕಿಕವ್ಯವಹಾರಾ ಅವಿದ್ಯಾಂ ಪುರಸ್ಕೃತ್ಯ ಪ್ರವೃತ್ತಾಃ, ಅಪಿ ತು ವೈದಿಕಾಶ್ಚ। ತೇಷಾಮಪೀಷ್ಟಾನಿಷ್ಟಪ್ರೇಪ್ಸಾಜಿಹಾಸಾಪ್ರಯುಕ್ತತ್ವಾವಿಶೇಷಾದಿತ್ಯರ್ಥಃ । ಯದ್ಯಪಿ ಪ್ರತಿಜ್ಞಾಭಾಷ್ಯೇ "ನೈಸರ್ಗಿಕೋಽಯಂ ಲೋಕವ್ಯವಹಾರಃ" ಇತ್ಯೇತಾವದುಕ್ತಮ್ । ತಥಾಪಿ ಲೋಕ್ಯತ ಇತಿ ಲೋಕೋ ಗ್ರಾಹ್ಯಪ್ರಮೇಯ-ವರ್ಗಃ, ಲೋಕಯತೀತಿ ಲೋಕೋ ಗ್ರಾಹಕಪ್ರಮಾತೃವರ್ಗಃ, ಲೋಕ್ಯತೇಽ-ನೇನೇತಿ ಲೋಕೋ ಗ್ರಹಣಸಾಧನಪ್ರಮಾಣವರ್ಗಃ – ಇತ್ಯೇವಂ ಲೋಕವ್ಯವಹಾರಶಬ್ದಸ್ಯ ಪ್ರಮಾತೃಪ್ರಮಾಣಪ್ರಮೇಯವ್ಯವಹಾರಾರ್ಥಕತ್ವಂ ಸ್ವೀಕೃತ್ಯೇಹ ತದೇವ ಪ್ರಪಂಚ್ಯತ ಇತಿ ನಾಧಿಕಾವಾಪಶಂಕಾ ಭವತಿ । ಅಥವಾ ಲೋಕಾನಾಂ ವ್ಯವಹಾರೋ ಲೋಕವ್ಯವಹಾರಃ ಇತ್ಯಂಗೀಕಾರೇ ಸರ್ವೋಽಪಿ ಲೌಕಿಕೋ ವೈದಿಕಶ್ಚ ವ್ಯವಹಾರೋ ಲೋಕವ್ಯವಹಾರ ಏವ ಭವತೀತ್ಯನವದ್ಯಮ್ ॥

---

ಅವಿದ್ಯಾಪುರಸ್ಸರವಾದದ್ದು ಎಂದು ಹೇಳಬೇಕಾಗಿಲ್ಲ, ವೈದಿಕವ್ಯವಹಾರಗಳೂ ಸಹ (ಅವಿದ್ಯಾಪುರಃಸರವೇ). ಅವುಗಳೂ ಸಹ ಇಷ್ಟಾನಿಷ್ಟಗಳನ್ನು ಪಡೆಯುಬೇಕೆಂತಲೂ ತಪ್ಪಿಸಿಕೊಳ್ಳಬೇಕೆಂತಲೂ ಪ್ರೇರಿತವಾಗಿರುತ್ತವೆ ಎಂಬುದು ಸಮಾನವಾಗಿರುತ್ತದೆ. ಪ್ರತಿಜ್ಞಾಭಾಷ್ಯದಲ್ಲಿ ಲೋಕವ್ಯವಹಾರವು ನೈಸರ್ಗಿಕವಾಗಿದೆ ಎಂದಿಷ್ಟೇ ಹೇಳಿದೆಯಾದರೂ ಅಲ್ಲೂ ತಿಳಿಯಲ್ಪಡುತ್ತದೆ (ಲೋಕ್ಯತೇ ಇತಿ ಲೋಕಃ) ಎಂದಾದ್ದರಿಂದ ಲೋಕವೆಂದು ಗ್ರಾಹ್ಯಪ್ರಪಂಚ-ವನ್ನೂ, (ಲೋಕಯತೀತಿ ಲೋಕಃ) ತಿಳಿಯುತ್ತಾನೆ ಆದ್ದರಿಂದ ಲೋಕವೆಂದು ಗ್ರಾಹಕವಾದ ಪ್ರಮಾತೃವರ್ಗವನ್ನೂ, (ಲೋಕ್ಯತೇ ಅನೇನೇತಿ ಲೋಕಃ) ಇದರಿಂದ ತಿಳಿಯುತ್ತಾನೆ, ಆದ್ದರಿಂದ ಲೋಕವೆಂದು ಅರಿಯುವುದಕ್ಕೆ ಸಾಧನವಾದ ಪ್ರಮಾಣವರ್ಗವನ್ನೂ – ಎಂದೀರೀತಿಯಾಗಿ ಲೋಕವ್ಯವಹಾರ-ಶಬ್ದಕ್ಕೆ – ಪ್ರಮಾತೃಪ್ರಮಾಣಪ್ರಮೇಯವೆಂಬ ವ್ಯವಹಾರಾರ್ಥವನ್ನುಳ್ಳದ್ದೆಂದು ಸ್ವೀಕರಿಸಿ ಅದನ್ನೇ ಇಲ್ಲಿ ಮತ್ತೆ ವಿವರಿಸಲಾಗಿದೆ ಎಂದಾದ್ದರಿಂದ ಮತ್ತೇನೂ ಸೇರಿಸಿ ಹೇಳಿಲ್ಲ ಎಂದು (ತಿಳಿಯಬೇಕು). ಅಥವಾ ಜನರ ವ್ಯವಹಾರವೇ ಲೋಕವ್ಯವಹಾರವು ಎಂದು ಸ್ವೀಕರಿಸಿದರೆ ಎಲ್ಲಾ ಲೌಕಿಕವೈದಿಕವ್ಯವಹಾರವೂ ಲೋಕವ್ಯವಹಾರವೇ ಆಗುತ್ತದೆ ಎಂದಾದ್ದರಿಂದ ಇಲ್ಲಿ ಯಾವ ದೋಷವೂ ಇರುವುದಿಲ್ಲ.

**೩೭. ಶಾಸ್ತ್ರವ್ಯವಹಾರಸ್ಯಾಪ್ಯಧ್ಯಾಸಪೂರ್ವಕತ್ವಮ್ – ತಥಾ ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ** । ನ ಕೇವಲಂ ವ್ಯವಹಾರಾಃ, ಕಿಂ ತರ್ಹಿ **ಸರ್ವಾಣಿ ಚ ಶಾಸ್ತ್ರಾಣಿ ಯಥಾವರ್ಣಿತಾ-ವಿದ್ಯಾಂ ಪುರಸ್ಕೃತ್ಯೈವ ಪ್ರವೃತ್ತಾನಿ** । ವಿಶೇಷಕಥನಮಿದಮುತ್ತರ-ತ್ರಾಧಿಕಾಶಂಕಾಪರಿಹಾರಾರ್ಥಮ್ । ಯಥಾ ಪ್ರಮಾತೄಣಾಂ ಪ್ರವೃತ್ತಯಃ, ಯಥಾ ಚ ಪ್ರಮಾಣಾನಾಂ ಲೌಕಿಕಾನಾಮ್, ಏವಂ ಶಾಸ್ತ್ರಪ್ರವೃತ್ತಯೋಽಪ್ಯ-ಧ್ಯಾಸಪೂರ್ವಕಾ ಏವ । ನ ತು ಶಾಸ್ತ್ರಾಣಾಂ ವೇದವಾಕ್ಯರೂಪಾಣಾಮ-ಪೌರುಷೇಯತ್ವಾದಿಹೇತುವಿಶೇಷಾದನ್ಯಾದೃಶೀ ಪ್ರವೃತ್ತಿರ್ಭವತೀತ್ಯಭಿಪ್ರಾಯಃ। ವಿಧಿಪರಾಣಿ "ಯಜೇತ" "ಜುಹುಯಾತ್" ಇತ್ಯಾದಿರೂಪಾಣಿ, ಪ್ರತಿಷೇಧ-ಪರಾಣಿ "ನ ಹಿಂಸ್ಯಾತ್", "ನ ಹಂತವ್ಯಃ" ಇತ್ಯಾದಿರೂಪಾಣಿ, ಮೋಕ್ಷಪರಾಣಿ ಚ "ಉಪಾಸೀತ" "ಶ್ರೋತವ್ಯೋ ಮಂತವ್ಯಃ" "ಬ್ರಹ್ಮೈವೇದಂ ಸರ್ವಮ್"

---

**೩೭. ಶಾಸ್ತ್ರವ್ಯವಹಾರವೂ ಅಧ್ಯಾಸಪೂರ್ವಕವಾಗಿದೆ** – "ಹಾಗೆಯೇ ಎಲ್ಲಾ ವಿಧಿಪ್ರತಿಷೇಧಮೋಕ್ಷಪರಶಾಸ್ತ್ರಗಳೂ ಅವಿದ್ಯಾಪುರಃಸರವೇ ಆಗಿವೆ". ಬರೀವ್ಯವಹಾರಮಾತ್ರವೇ (ಅವಿದ್ಯಾಪುರಃಸರವೆಂದಲ್ಲ), ಮತ್ತೇನೆಂದರೆ "ಎಲ್ಲಾ ಶಾಸ್ತ್ರಗಳು ಮೇಲೆ ವರ್ಣನೆಮಾಡಿದ ಅವಿದ್ಯೆಯನ್ನು ಮುಂದುಮಾಡಿ-ಕೊಂಡೇ ಹೊರಟಿರುತ್ತವೆ". ಈ ವಿಶೇಷವಾದ ಹೇಳಿಕೆಯು – ಮುಂದೆ ಹೆಚ್ಚಿನ ಸಂದೇಹವನ್ನು ಹಾಕಿಕೊಂಡು ಪರಿಹಾರವನ್ನು ಹೇಳುವುದಕ್ಕಾಗಿ ಬಂದಿದೆ. ಹೇಗೆ ಪ್ರಮಾತೃಗಳ ಪ್ರವೃತ್ತಿಯು ಅವಿದ್ಯಾಪುರಃಸರವೋ, ಹೇಗೆ ಲೌಕಿಕಪ್ರಮಾಣಗಳು ಅವಿದ್ಯಾಪುರಃಸರವೋ, ಹಾಗೆಯೇ ಶಾಸ್ತ್ರಪ್ರವೃತ್ತಿಗಳೂ ಅವಿದ್ಯಾಪುರಃಸ್ಸರವಾಗಿಯೇ ಇವೆ. ಅಪೌರುಷೇಯುವೆಂಬ ಕಾರಣ-ವಿಶೇಷದಿಂದಿರುವ ವೇದವಾಕ್ಯರೂಪವಾದ ಶಾಸ್ತ್ರಗಳಿಗೆ ಮತ್ತೊಂದು ಪ್ರಕಾರದ್ದಾದ (ಅಂದರೆ–ಅವಿದ್ಯಾಪುರಃಸರವಲ್ಲವೇನೋ ಎಂಬರೀತಿಯದಾದ) ಪ್ರವೃತ್ತಿಯು ಇರುವುದಕ್ಕೆ ಸಾಧ್ಯವಿಲ್ಲ. "(ಯಜೇತ)" ಯಜ್ಞಮಾಡಬೇಕು, "(ಜುಹುಯಾತ್)" ಹೋಮವನ್ನು ಮಾಡಬೇಕು, ಎಂಬೀರೀತಿಯದಾದ ವಿಧಿಪರವಾದ, ಹಿಂಸಿಸಬಾರದು, ಕೊಲ್ಲಬಾರದು, ಎಂಬೀಪ್ರತಿಷೇಧಪರವಾದ, "ಉಪಾಸನೆಯನ್ನುಮಾಡಬೇಕು", "ಶ್ರವಣವನ್ನು ಮಾಡಬೇಕು", "ಮನನಮಾಡಬೇಕು", "ಇದೆಲ್ಲವೂ ಬ್ರಹ್ಮವೇ" ಎಂಬೀರೀತಿಯದಾದ

ಇತ್ಯಾದಿರೂಪಾಣೀತಿ ವಿವೇಕಃ । ಅತ್ರ ಸರ್ವತ್ರ ತತ್ತತ್ಪರತ್ವಂ ನಾಮ ತತ್ತತ್ಪ್ರಪಂಚನದ್ವಾರಾ ಪುರುಷಾರ್ಥೋಪಾಯಪ್ರಕಾಶನಪರತ್ವಮಿತಿ ಜ್ಞೇಯಮ್ । ಸರ್ವಾಣ್ಯಪ್ಯೇತಾನಿ ಶಾಸ್ತ್ರಾಣ್ಯವಿದ್ಯಾಂ ಪುರಸ್ಕೃತ್ಯೈವ, ಲೋಕಸಿದ್ಧಮಧ್ಯಾಸಂ ದ್ವಾರೀಕೃತ್ಯೈವ ಪ್ರವೃತ್ತಾನೀತ್ಯನುಷಂಗಃ । ಅಧ್ಯಾಸಕರ್ತೈವ ಪುರುಷೋಽಧಿಕ್ರಿಯತೇ ಶಾಸ್ತ್ರೋಕ್ತಸಾಧನೇಷು । ಅಧ್ಯಾಸಂ ಸಮಾಶ್ರಿತ್ಯೈವ ಚ ಸಾಧ್ಯಸಾಧನಬಂಧಮೋಕ್ಷಾದಿಪದಾರ್ಥಾನ್ ಪ್ರತಿಪಾದಯಂತಿ ಶಾಸ್ತ್ರಾಣಿ । ನ ತು ವಸ್ತುಸಂತ ಏವ ತೇ ಪದಾರ್ಥಾ ಇತಿ ಭಾವಃ । **ಉಕ್ತಂ ಹ್ಯಭಿಯುಕ್ತೈಃ** – "ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ । ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ" ॥ (ಗೌ. ಕಾ. ೨–೩೨) ಇತಿ ॥

**೩೮. ಪ್ರಮಾಣಾನಾಮವಿದ್ಯಾವದ್ವಿಷಯತ್ವೇ ಶಂಕಾ – ಕಥಂ**

---

ಮೋಕ್ಷಪರವಾದ (ಎಲ್ಲಾ ಶಾಸ್ತ್ರಗಳೂ) ಎಂದು ಅರ್ಥವನ್ನು ಮಾಡಿಕೊಳ್ಳಬೇಕು. ಈ ಎಲ್ಲಾ ಜಾಗದಲ್ಲೂ "ಅದರದರ ಪರವಾದದ್ದು" ಎಂಬುದಕ್ಕೆ ಅದದನ್ನು ವಿವರಿಸುವುದರ ಮೂಲಕ ಪುರುಷಾರ್ಥಕ್ಕಿರುವ ಉಪಾಯವನ್ನು ತೋರಿಸುವುದರಲ್ಲಿ ತಾತ್ಪರ್ಯವಾದದ್ದು ಎಂದು ಅರ್ಥವನ್ನು ಮಾಡಿಕೊಳ್ಳಬೇಕು. ಈ ಎಲ್ಲಾ ಶಾಸ್ತ್ರಗಳೂ, ಅವಿದ್ಯೆಯನ್ನು ಮುಂದುಮಾಡಿ-ಕೊಂಡೇ, ಎಂದರೆ ಲೋಕಸಿದ್ಧವಾದ ಅಧ್ಯಾಸವನ್ನು ದ್ವಾರವನ್ನಾಗಿ ಮಾಡಿಕೊಂಡೇ ಹೊರಟಿರುತ್ತವೆ ಎಂದು ಸೇರಿಸಿಕೊಳ್ಳಬೇಕು. ಅಧ್ಯಾಸವನ್ನು ಮಾಡಿಕೊಂಡ ಪುರುಷನೇ ಶಾಸ್ತ್ರೋಕ್ತಸಾಧನಗಳಲ್ಲಿ ಅಧಿಕಾರಿಯಾಗಿರುತ್ತಾನೆ. ಅಧ್ಯಾಸವನ್ನಾಶ್ರಯಿಸಿಕೊಂಡೇ ಶಾಸ್ತ್ರಗಳು ಸಾಧ್ಯ, ಸಾಧನ, ಬಂಧ, ಮೋಕ್ಷವೇ ಮೊದಲಾದ ಪದಾರ್ಥಗಳನ್ನು ತಿಳಿಸಿಕೊಡುತ್ತವೆ. ನಿಜವಾಗಿ ಆ ಪದಾರ್ಥಗಳು ಇರುವಂಥವುಗಳಲ್ಲ ಎಂದು ಭಾವವು. ಅಭಿಯುಕ್ತರೂ ಸಹ ಹೇಳಿರುತ್ತಾರೆ. "ಪರಮಾರ್ಥವಾಗಿ ಪ್ರಲಯವಾಗಲೀ, ಉತ್ಪತ್ತಿಯಾಗಲೀ, ಬದ್ಧನಾಗಲೀ, ಸಾಧಕನಾಗಲೀ, ಮುಮುಕ್ಷು ಎಂಬುದಾಗಲೀ ಮುಕ್ತನೆಂಬುದಾಗಲೀ (ಯಾವುದೂ) ಇರುವುದಿಲ್ಲ" (ಗೌ. ಕಾ. ೨–೩೨).

**೩೮. ಪ್ರಮಾಣಗಳು ಅವಿದ್ಯಾವಂತರನ್ನು ವಿಷಯಮಾಡಿಕೊಂಡಿವೆ ಎಂಬುದರ ಬಗ್ಗೆ ಸಂದೇಹವು – "ಕಥಂ ಪುನಃ ಅವಿದ್ಯಾವದ್ವಿಷಯಾಣಿ**

**ಪುನರವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚ?**
– ಇತೀದಮಧ್ಯಾಸಸದ್ಭಾವಮುಪಪಾದಯಿತುಂ ಶಂಕೋತ್ಥಾಪನಮ್। ಅತ್ರಾಯಂ ಶಂಕಿತುರಭಿಸಂಧಿಃ । ಸಿದ್ಧೇ ಖಲು ಭವದ್ವರ್ಣಿತಾಧ್ಯಾಸಸದ್ಭಾವೇ ತಸ್ಯ ವಿದ್ಯಾವಿನಿವರ್ತ್ಯತ್ವರೂಪಮವಿದ್ಯಾತ್ವಂ ಸಿಧ್ಯತಿ । ತಥಾ ಚ ಬ್ರಹ್ಮಜಿಜ್ಞಾಸೋಪಕ್ರಮೋಪಪತ್ತಿಃ । ಸ ತು ಸದ್ಭಾವೋ ನಾದ್ಯಾಪಿ ಸಾಧಿತಃ। ನ ಹಿ ಲಕ್ಷಣಪ್ರಣಯನಾವಿರೋಧಪ್ರದರ್ಶನಮಾತ್ರೇಣಾಧ್ಯಾಸಃ ಸೇದ್ಧುಮರ್ಹತಿ । ನ ಹಿ ಶುಕ್ತಿರಜತಾದಿಕತಿಚನಲೋಕಸಿದ್ಧಾಧ್ಯಾಸನಿದರ್ಶನ-ಮಲಂ ಸರ್ವಸ್ಯಾಪಿ ವ್ಯವಹಾರಸ್ಯ ವರ್ಣಿತಾಧ್ಯಾಸಪೂರ್ವಕತ್ವೋಪ-ಪಾದನಾಯ । ತತ್ಕಥಮಿದಂ ಸಿದ್ಧವನ್ನಿಗದತಿ ಭಗವಾನ್ "ತಮೇತಮಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾ ಪ್ರವೃತ್ತಾಃ, ಸರ್ವಾಣಿ ಚ ಶಾಸ್ತ್ರಾಣಿ" ಇತಿ ?

---

.... ಶಾಸ್ತ್ರಾಣೀತಿ" ? ಎಂದು (ಹೇಳಿರುವುದು) ಅಧ್ಯಾಸವೆಂಬುದಿದೆ ಎಂಬುದನ್ನು (ಯುಕ್ತಿಕೊಟ್ಟು) ತಿಳಿಸುವುದಕ್ಕಾಗಿ ಸಂದೇಹವನ್ನು ತೆಗೆದಿರುತ್ತದೆ. ಇಲ್ಲಿ ಇದು ಸಂದೇಹಪಡುವವನ ಅಭಿಪ್ರಾಯವು – ಏನೆಂದರೆ, ತಾವು ವರ್ಣನೆ ಮಾಡಿದ ಅಧ್ಯಾಸವು ಇದೆ ಎಂದು ಸಿದ್ಧವಾದ ಮೇಲಲ್ಲವೇ, ಅದು ವಿದ್ಯೆಯಿಂದ ತೊಲಗುವ ರೂಪದ್ದಾದ "ಅವಿದ್ಯೆಯು" ಎಂಬುದು ಸಿದ್ಧವಾಗುವುದು ? ಹಾಗೆಯೇ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂಬುದೂ ಹೊಂದುವುದು. ಆದರೆ ಅದರ ಅಸ್ತಿತ್ವವು ಇಂದಿಗೂ (ನೀವು) ಸಾಧಿಸಿಲ್ಲ. ಕೇವಲ ಲಕ್ಷಣವನ್ನು ಹೇಳುವದು, ಅವಿರೋಧವನ್ನು ತೋರಿಸುವುದು ಎಂಬಿಷ್ಟುಮಾತ್ರದಿಂದ ಅಧ್ಯಾಸವು ಸಿದ್ಧಿಸುವುದಿಲ್ಲ. ಎಲ್ಲರ ವ್ಯವಹಾರವೂ ಮೇಲೆ ವರ್ಣನೆಮಾಡಿದ ಅಧ್ಯಾಸಪೂರ್ವಕವಾಗಿಯೇ ಇದೆ ಎನ್ನುವುದಕ್ಕೆ ಶುಕ್ತಿರಜತವೇ ಮುಂತಾದ ಕೆಲವು ಲೋಕಸಿದ್ಧವಾದ ತಪ್ಪುತಿಳಿವಳಿಕೆಯ ದೃಷ್ಟಾಂತವೇ ಸಾಲದು. ಹೀಗಿರುವಾಗ ಅದು ಹೇಗೆ ಸಿದ್ಧವಾದಂತಯೇ ಭಗವಂತರಾದ (ಭಾಷ್ಯಕಾರರು) "ಆ ಈ ಅಧ್ಯಾಸವನ್ನು ಮುಂದುಮಾಡಿ-ಕೊಂಡೇ ಎಲ್ಲಾ ಪ್ರಮಾಣಪ್ರಮೇಯವ್ಯವಹಾರಗಳೂ, ಎಲ್ಲಾ ಶಾಸ್ತ್ರಗಳೂ ಹೊರಟಿರುವುದು" ಎಂದು ಹೇಳಿರುತ್ತಾರೆ?

ತತ್ರ ಪ್ರಮಾಣಪ್ರಮೇಯವ್ಯವಹಾರಾ ಅವಿದ್ಯಾವದ್ವಿಷಯಾ ಇತ್ಯೇವ ತಾವನ್ನ ಯುಜ್ಯತೇ । ತಥಾ ಸತಿ ಪ್ರಮಾತೃತ್ವಪ್ರಮಾಣತ್ವಯೋರೇವಾನವಕ್ಲೃಪ್ತೇಃ । ನ ಹಿ ಪ್ರಮಾಣೇನ ಪ್ರಮೇಯಪರಿಚ್ಛೇದಾಯಾಪ್ರವರ್ತಮಾನಃ ಪ್ರಮಾತಾ ನಾಮ ಭವತಿ । ನ ಚ ತಸ್ಯ ಪ್ರಮಾತೃತ್ವಂ ಪ್ರಮಾಣಪ್ರಮೇಯಾದಿ-ವಿವೇಕಮಂತರೇಣಾವಕಲ್ಪತೇ । ಅತಃ ಪ್ರಮಾತಾ ತಾವನ್ನಾವಿದ್ಯಾವಾ-ನಿತ್ಯಭ್ಯುಪಗಂತವ್ಯಂ ಭವತಾಪಿ । ಅನ್ಯಥಾ ವ್ಯಾಘಾತಾತ್ । ಏವಂ ಪ್ರಮಾಣಾನಾಮಪಿ ನ ಪ್ರಮಾಣತ್ವಮವಕಲ್ಪತೇ ತೇಷಾಮವಿದ್ಯಾವದಾಶ್ರಯ-ತ್ವೇಽಭ್ಯುಪಗಮ್ಯಮಾನೇ । ಕಥಂ ? ಯಥಾರ್ಥಜ್ಞಾನಂ ಹಿ ಪ್ರಮಾ, ತತ್ಕರಣಂ ಚ ಪ್ರಮಾಣಮ್ । ತತ್ರಾವಿದ್ಯಾಂ ಪುರಸ್ಕೃತ್ಯ ಪ್ರವೃತ್ತಸ್ಯ ಕರಣಸ್ಯ ಪ್ರಮಾಜನನಸಾಮರ್ಥ್ಯಮೇವ ನ ವಿದ್ಯತ ಇತಿ ಕಥಂ ತಸ್ಯ ಪ್ರಮಾಣತ್ವ-ಮವಕಲ್ಪೇತೇತಿ ? ತಸ್ಮಾತ್ಪ್ರಮಾಣಾನಾಮವಿದ್ಯಾವದ್ವಿಷಯತ್ವೇ ಪ್ರಮಾತೃ-

---

ಇಲ್ಲಿ ಮೊಟ್ಟಮೊದಲನೆಯದಾಗಿ ಹೇಳುವುದಾದರೆ ಪ್ರಮಾಣಪ್ರಮೇಯ ವ್ಯವಹಾರವು ಅವಿದ್ಯಾವಂತರನ್ನು ವಿಷಯಮಾಡಿಕೊಂಡು ಹೊರಟಿರುವಂಥದ್ದು ಎಂಬುದೇ ಹೊಂದುವದಿಲ್ಲ. (ಏಕೆಂದರೆ) ಹಾಗಾದಾಗ ಪ್ರಮಾತೃತ್ವ ಮತ್ತು ಪ್ರಮಾಣತ್ವವೆಂಬುದೇ ಹೊಂದದೇ ಹೋದೀತು ! ಪ್ರಮಾಣದಿಂದ ಪ್ರಮೇಯವನ್ನು ಗೊತ್ತುಪಡಿಸುವುದಕ್ಕಾಗಿ ತೊಡಗದಿದ್ದರೆ ಪ್ರಮಾತೃವೆಂದೇ ಆಗಲಾರನಷ್ಟೆ ? ಅವನಿಗೆ ಪ್ರಮಾಣಪ್ರಮೇಯಗಳ ವಿವೇಕವಿಲ್ಲದಿದ್ದರೆ ಅವನು ಪ್ರಮಾತೃವೆಂದೇ ಆಗಲಾರನಷ್ಟೆ ? ಆದ್ದರಿಂದ ಮೊಟ್ಟಮೊದಲು ಪ್ರಮಾತೃ-ವೆಂಬುವನು ಅವಿದ್ಯಾವಂತನಲ್ಲ ಎಂಬುದನ್ನು ನೀವೂ ಒಪ್ಪಿಕೊಳ್ಳಬೇಕು. ಹಾಗಿಲ್ಲವಾದರೆ ವಿರೋಧವಾಗುತ್ತದೆ. ಹಾಗೆಯೇ ಪ್ರಮಾಣಗಳೂ ಅವಿದ್ಯಾವಂತನನ್ನು ಆಶ್ರಯಿಸಿಕೊಂಡಿವೆ ಎಂಬುದನ್ನು ಒಪ್ಪುವುದಾದರೆ ಅವು ಪ್ರಮಾಣವೆಂತಲೇ ಆಗುವುದಿಲ್ಲ. ಹೇಗೆಂದರೆ – ಪ್ರಮೆ ಎಂದರೆ ಯಥಾರ್ಥಜ್ಞಾನವಲ್ಲವೇ? ಅದಕ್ಕೆ ಸಾಧನವಾಗಿರುವುದೇ ಪ್ರಮಾಣವು. ಹೀಗಿರುವಾಗ ಅವಿದ್ಯೆಯನ್ನು ಮುಂದುಮಾಡಿಕೊಂಡು ಹೊರಟಂತಹ ಕರಣಕ್ಕೆ ಅರಿವನ್ನುಂಟುಮಾಡುವ ಸಾಮರ್ಥ್ಯವೇ ಇರುವುದಿಲ್ಲವೆಂದಾಗಿ ಅದು ಹೇಗೆ ಪ್ರಮಾಣವೆನಿಸಿಕೊಂಡೀತು! ಆದ್ದರಿಂದ ಪ್ರಮಾಣಗಳು ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ ಎನ್ನುವುದಾದರೆ ಪ್ರಮಾತೃಪ್ರಮಾಣಗಳ ಸ್ವರೂಪವೇ ಹೊಂದದೇ ಇರುವ ಸಂದರ್ಭವುಂಟಾಗುವದರಿಂದ ಅವುಗಳು ಅವಿದ್ಯಾ-

ಪ್ರಮಾಣಯೋಸ್ತತ್ತ್ವಾನವಕ್ಲೃಪ್ತಿಪ್ರಸಂಗಾನ್ನಾವಿದ್ಯಾವದ್ವಿಷಯಾಣಿ ತಾನೀತ್ಯ-ವಶ್ಯಮಭ್ಯುಪೇಯಮ್ । ನ ಚ ಪ್ರಮಾಣೇ ದೋಷಸ್ತಜ್ಜನಿತಜ್ಞಾನೇ ಮಿಥ್ಯಾತ್ವಂ ವಾ ಪ್ರತೀಯತೇ ನಿಯಮೇನ, ಯೇನ ಸರ್ವಸ್ಯಾಪಿ ಪ್ರಮಾಣಸ್ಯಾ-ಸಮೀಚೀನತಯಾ ಅವಿದ್ಯಾವದ್ವಿಷಯತ್ವಂ ಸ್ಯಾತ್ । **ತಥಾ ಹ್ಯಾಹುಃ** – "ಯಸ್ಯ ಚ ದುಷ್ಟಂ ಕರಣಂ ಯತ್ರ ಚ ಮಿಥ್ಯೇತಿ ಪ್ರತ್ಯಯೋ ಸ ಏವಾಸಮೀ-ಚೀನಃ ಪ್ರತ್ಯಯೋ ನಾನ್ಯಃ" (ಶಾ. ಭಾ. ೧–೧–೫) ಇತಿ । ತಸ್ಮಾದ್ಯತ್ರ ಪ್ರಯತ್ನೇನಾನ್ವಿಚ್ಛತಾಪಿ ನ ದೋಷೋಽವಗಮ್ಯತೇ, ಯತಶ್ಚ ಪ್ರಮಾಣಾದರ್ಥಮುಪಲಭ್ಯ ಪ್ರವೃತ್ತಸ್ಯ ತತ್ತತ್ಫಲೇನ ಯೋಗಃ, ನ ತು ತಜ್ಜನಿತಸ್ಯ ಜ್ಞಾನಸ್ಯ ನೈತದೇವಂ ಇತಿ ಬಾಧಃ ನ ತನ್ಮಿಥ್ಯೇತ್ಯೇವ ಯುಕ್ತಮ್। ಅನ್ಯಥಾ ಸರ್ವಪ್ರಮಾಣಾನಾಮಪ್ಯಪ್ರಾಮಾಣ್ಯಪ್ರಸಂಗಾತ್ । ತಸ್ಮಾದಸಿದ್ಧಂ ಪ್ರಮಾಣಾನಾಂ ಸರ್ವೇಷಾಮವಿದ್ಯಾವದ್ವಿಷಯತ್ವಮಿತಿ ॥

---

ವಂತನನ್ನು ವಿಷಯಮಾಡಿಕೊಂಡಿರುವುಗಳಲ್ಲ ಎಂಬುದನ್ನು ಅವಶ್ಯವಾಗಿ ಒಪ್ಪಬೇಕು. ಪ್ರಮಾಣದಲ್ಲಿ ದೋಷವಾಗಲೀ ಅದರಿಂದುಂಟಾದ ಜ್ಞಾನದಲ್ಲಿ ಸುಳ್ಳೆಂಬುದಾಗಲೀ ನಿಯತವಾಗಿ ತಿಳಿದುಬಂದಿಲ್ಲ, ಹಾಗೇನಾದರೂ ಇದ್ದಿದ್ದರೆ ಯಾವ ಪ್ರಮಾಣವೂ ಸರಿಯಾದದ್ದಲ್ಲವೆಂತಲೂ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿರುವಂಥದ್ದೆಂತಲೂ ತಿಳಿಯಬಹುದಾಗಿತ್ತು. ಹಾಗೆಯೇ (ತಿಳಿದವರೂ) ಹೇಳುತ್ತಾರೆ – ಯಾವಾತನ ಕರಣವು ದುಷ್ಟವಾಗಿದೆಯೋ, ಎಲ್ಲಿ ಸುಳ್ಳೆಂಬ ಪ್ರತ್ಯಯವು (ತೋರುವುದೋ), ಅದೇ ಸುಳ್ಳಾದ ಪ್ರತ್ಯಯವೇ ಹೊರತು ಬೇರೆಯದಲ್ಲ (ಶಾ. ಭಾ. ೧–೧–೫). ಆದ್ದರಿಂದ ಎಲ್ಲಿ (ಎಷ್ಟು) ಪ್ರಯತ್ನಪಟ್ಟು ಹುಡುಕಿದರೂ ಯಾವ ದೋಷವೂ ತೋರಿಬರುವುದಿಲ್ಲವೋ, ಯಾವ ಪ್ರಮಾಣದಿಂದ ವಿಷಯವನ್ನು ತಿಳಿದು (ಅದರ ಕಡೆಗೆ) ಹೊರಟವನಿಗೆ ಆ ಫಲದೊಡನೆ ಸಂಬಂಧವಾಗುವುದೋ, ಅಷ್ಟೇ ಅಲ್ಲ, ಅದರಿಂದುಂಟಾದ ಜ್ಞಾನಕ್ಕೆ "ಹೀಗಲ್ಲ" ಎಂದು ಬಾಧೆಯಾಗುವುದಿಲ್ಲವೋ ಅದನ್ನು "ಮಿಥ್ಯೆ" ಎಂದು ಹೇಳುವುದು ಸರಿಯಾಗುವುದಿಲ್ಲ. ಹಾಗಿಲ್ಲದೇ ಹೋದರೆ ಆಗ ಎಲ್ಲಾ ಪ್ರಮಾಣಗಳೂ ಅಪ್ರಮಾಣವಾದವುಗಳು ಎಂಬ (ಅನಿಷ್ಟ) ಪ್ರಸಂಗವೂ ಬಂದೊದಗುತ್ತದೆ. ಆದ್ದರಿಂದ ಎಲ್ಲಾ ಪ್ರಮಾಣಗಳೂ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ ಎಂಬುದು ಸರಿಯಲ್ಲ.

**೩೯. ಶಾಸ್ತ್ರಾಣಿ ಚ ನೈವಾವಿದ್ಯಾವದ್ವಿಷಯಾಣೀತಿ ಶಂಕಾ-** ಸರ್ವಾಣಿ ಚ ಶಾಸ್ತ್ರಾಣ್ಯವಿದ್ಯಾವದ್ವಿಷಯಾಣೀತಿ ತು ಪ್ರಾಗೇವಾಸಿದ್ಧಮ್ । ಕುತಃ ? ಪುರುಷವಿಶೇಷಾನಾಶ್ರಯಣಾಚ್ಛಾಸ್ತ್ರಸ್ಯ । ಜನ್ಮಾಂತರಲೋಕಾಂತ-ರೇಷ್ಟಾನಿಷ್ಟಪ್ರಾಪ್ತಿಪರಿಹಾರೋಪಾಯವಿಶೇಷಪ್ರಕಾಶನಾಯ ಹಿ ವಿಧಿನಿಷೇಧ-ಶಾಸ್ತ್ರಪ್ರವೃತ್ತಿಃ । ನ ಚ ತತ್ತದುಪಾಯಪ್ರಕಾಶನಾಯ ಪ್ರವೃತ್ತಂ ತನ್ನ ಪ್ರಕಾಶಯತಿ । ನ ಚಾವಿದ್ಯಾವಂತಂ ಪುರುಷವಿಶೇಷಮಾಶ್ರಿತ್ಯ ಪ್ರವರ್ತತೇ। ಅಪೌರುಷೇಯತ್ವಾತ್ । ನ ಚ ಕಶ್ಚಿದಪಿ ದೋಷಃ ಶಕ್ಯಶಂಕಃ ಶಾಸ್ತ್ರವಚನೇ। ನಾಪಿ ತಜ್ಜನಿತಂ ಜ್ಞಾನಂ ವಿಪರ್ಯೇತಿ, "ನೈತದೇವಮ್" ಇತಿ । ನಿಯಮೇನಾನಧಿಗತಾಸಂಧಿಗ್ಧಾಬಾಧಿತಾರ್ಥಬೋಧಕಮ್ ಹಿ ಶಾಸ್ತ್ರಮಿತಿ। ಸ್ಯಾದೇತತ್ – ಯದ್ಯಪಿ ಸ್ವತೋ ನಿರ್ದುಷ್ಟಂ ಶಾಸ್ತ್ರಮ್, ತಥಾಪ್ಯಧಿಕಾರಿ-ದ್ವಾರಾ ಶಂಕ್ಯೋ ಭವತಿ ಯಃ ಕಶ್ಚನ ದೋಷಾತಂಕೋಽಸ್ಯೇತಿ ।

---

**೩೯. ಶಾಸ್ತ್ರಗಳೂ ಸಹ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ** ಎಂಬುದು ಸರಿಯಲ್ಲ, ಎಂಬ ಸಂದೇಹವು – ಎಲ್ಲಾ ಶಾಸ್ತ್ರಗಳೂ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ ಎಂಬುದು ಇನ್ನೂ ಮೊದಲೇ ಅಸಿದ್ಧವಾದದ್ದು, ಏಕೆಂದರೆ, ಶಾಸ್ತ್ರವು ಪುರುಷವಿಶೇಷವನ್ನು ಆಶ್ರಯಿಸಿ-ಕೊಂಡಿರುವುದಿಲ್ಲ. ಜನ್ಮಾಂತರದಲ್ಲೂ ಲೋಕಾಂತರದಲ್ಲೂ ಇಷ್ಟಪ್ರಾಪ್ತಿ, ಅನಿಷ್ಟಪರಿಹಾರಕ್ಕಿರುವ ಉಪಾಯವಿಶೇಷವನ್ನು ತಿಳಿಸಿಕೊಡುವುದಕ್ಕಾಗಿ ಅಲ್ಲವೆ, ವಿಧಿನಿಷೇಧ (ರೂಪವಾದ) ಶಾಸ್ತ್ರವು ಹೊರಟಿರುವುದು ? ಅದರ ಉಪಾಯವನ್ನು ತಿಳಿಸಿಕೊಡುವುದಕ್ಕಾಗಿ ಹೊರಟ ಶಾಸ್ತ್ರವು ಅದನ್ನು ತಿಳಿಸಿಕೊಡುವುದಿಲ್ಲ ಎಂಬುದಿಲ್ಲವಷ್ಟೆ ? ಅಪೌರುಷೇಯವಾದ್ದರಿಂದ ಅವಿದ್ಯಾವಂತನಾದ ಪುರುಷನನ್ನಾಶ್ರಯಿಸಿಯೇ ಹೊರಟಿದೆ ಎಂಬುದಿಲ್ಲವಷ್ಟೆ? ಶಾಸ್ತ್ರದ ಮಾತಿನಲ್ಲಿ ಯಾವ ದೋಷವನ್ನೂ ಸಂದೇಹಪಡುವುದಕ್ಕೆ ಬರುವುದಿಲ್ಲ. ಅದರಿಂದುಂಟಾದ ಜ್ಞಾನವು ಸುಳ್ಳೆಂತಾಗಲೀ, ಹಾಗಲ್ಲವೆಂತಾಗಲೀ ಆಗುವುದಿಲ್ಲವಲ್ಲವೆ ? ಶಾಸ್ತ್ರವು ಗೊತ್ತಿಲ್ಲದ, ಸಂದೇಹವಾಗದ, ಸುಳ್ಳಾಗದ ವಿಷಯವನ್ನಲ್ಲವೆ ಏಕಾಂತವಾಗಿ ತಿಳಿಸಿಕೊಡುವುದು ? ಸ್ವತಃ ನಿರ್ದುಷ್ಟ-ವಾದರೂ ಅಧಿಕಾರಿಯ ಮೂಲಕ ಯಾವುದಾದರೊಂದು ದೋಷವನ್ನು ಸಂದೇಹಪಡಬಹುದಲ್ಲ ? ಎಂದು ಯಾರಿಗಾದರೂ ತೋರಬಹುದು. ಅದು

ತದಪ್ಯಪೇಶಲಮ್ । ನ ಹ್ಯವಿದಿತ್ವಾ ಜನ್ಮಾಂತರಲೋಕಾಂತರಸಂಬಂಧಿನ-ಮಾತ್ಮಾನಂ ಕಶ್ಚಿದಧಿಕ್ರಿಯತೇ ಶಾಸ್ತ್ರವಿಹಿತೇಷು ತನ್ನಿಷಿದ್ಧೇಷು ವಾ ಕರ್ಮಸು। ತಥಾ ಹಿ ವೇದವಿದಃ ಪ್ರಾಹುಃ "ಸ ಏಷ ಯಜ್ಞಾಯುಧೀ ಯಜಮಾ-ನೋಽಂಜಸಾ ಸ್ವರ್ಗಂ ಲೋಕಂ ಯಾತಿ" (ಶತ. ಬ್ರಾ. ೧೨-೫-೨-೮) "ಗರ್ತಂ ಪತಿಷ್ಯಾಮಿ" ಇತ್ಯಾದಿವಚನಬಲೇನ ದೇಹವ್ಯತಿರಿಕ್ತೋಽಹಂ-ಪ್ರತ್ಯಯಗಮ್ಯ ಆತ್ಮಾ ಸಿಧ್ಯತಿ ಪ್ರತ್ಯಭಿಜ್ಞಾಶ್ರಯಣೇನೇತಿ । ನ ಚ ಲೋಕದ್ವಯಸಂಬದ್ಧಸ್ಯೈಕಸ್ಯಾತ್ಮನೋಽವೇದನೇ "ಸ್ವರ್ಗಕಾಮೋ ಯಜೇತ" (?) ಇತ್ಯೇವಮಾದೀನಾಂ ಶಾಸ್ತ್ರಾಣಾಮರ್ಥವತ್ತಾಮಾಕಲಯಿತುಂ ಶಕ್ನುಯಾತ್ ಕಶ್ಚಿತ್, ತದುಕ್ತಕರ್ಮಸು ಪ್ರವರ್ತಿತುಂ ವಾ ಸಮೀಹೇತ । ನ ಚ ಪಶ್ವಾದೀನಪ್ಯಧಿಕುರ್ವಂತಿ ಶಾಸ್ತ್ರಾಣಿ, ಯೇನಾಧಿಕಾರಿದ್ವಾರಾ ಅವಿದ್ಯಾ-ವದ್ವಿಷಯತ್ವಂ ಸ್ಯಾದಪಿ ತೇಷಾಮ್ । ಅರ್ಥೀ ಸಮರ್ಥೋ ವಿದ್ವಾನಿತಿ

---

ಹುರುಳಿಲ್ಲದ್ದು, ಏಕೆಂದರೆ ಶಾಸ್ತ್ರವಿಹಿತವಾದಕರ್ಮದಲ್ಲಿಯಾಗಲೀ, ನಿಷಿದ್ಧಕರ್ಮದಲ್ಲಿಯಾಗಲೀ – ತಾನು ಜನ್ಮಾಂತರಕ್ಕೂ ಲೋಕಾಂತರಕ್ಕೂ ಸಂಬಂಧಪಟ್ಟುಕೊಂಡಿರುವವನು ಎಂಬುದನ್ನು ತಿಳಿಯದೇ ಯಾವನೊಬ್ಬನೂ ಅಧಿಕಾರಿಯಾಗುವುದಿಲ್ಲವಲ್ಲವೆ? ಹಾಗೆಯೇ ವೇದವನ್ನು ಬಲ್ಲವರು ಹೇಳುತ್ತಾರೆ – "ಆ ಈ ಯಜಮಾನನೆಂಬುವನು ಯಜ್ಞವನ್ನೇ ಆಯುಧವನ್ನಾಗಿ ಉಳ್ಳವನು", (ಆತನು) ಸ್ವರ್ಗವನ್ನು ಹೊಂದುವನು. (ಶತ. ಬ್ರಾ. ೧೨-೫-೨-೮) "ನಾನು ಗುಂಡಿಗೆ ಬಿದ್ದೇನು" ? ಎಂದು ಇದೇ ಮೊದಲಾದ ಮಾತಿನ ಬಲದಿಂದ ದೇಹಕ್ಕಿಂತ ಬೇರೆಯಾದ ಅಹಂಪ್ರತ್ಯಯಗಮ್ಯನಾದ ಆತ್ಮನು ಪ್ರತ್ಯಭಿಜ್ಞಾನಪ್ರಮಾಣಬಲದಿಂದ ಸಿದ್ಧನಾಗುತ್ತಾನೆ. (ಇಹಲೋಕ ಪರಲೋಕವೆಂಬ) ಎರಡು ಲೋಕಕ್ಕೆ ಸಂಬಂಧಪಟ್ಟ ಆತ್ಮನನ್ನು ತಿಳಿಯದೇ ಹೋದರೆ "ಸ್ವರ್ಗಕಾಮನಾದವನು ಯಜ್ಞಮಾಡಬೇಕು" ಮುಂತಾದ ಶಾಸ್ತ್ರಗಳಿಗೆ ಅರ್ಥವತ್ತೆಯನ್ನು ಕಲ್ಪಿಸುವುದಕ್ಕಾಗಲೀ ಆ ಶಾಸ್ತ್ರವು ಹೇಳಿದ ಕರ್ಮದಲ್ಲಿ ತೊಡಗುವುದಕ್ಕಾಗಲೀ ಯಾವನೂ ಪ್ರಯತ್ನಪಡುವುದಿಲ್ಲ. ಶಾಸ್ತ್ರವು ಪಶ್ವಾದಿಗಳನ್ನೂ ಅಧಿಕಾರಿಯನ್ನಾಗಿ ಮಾಡಿಕೊಳ್ಳುತ್ತದೆ ಎಂಬುದು ಇಲ್ಲವಷ್ಟೇ? ಹಾಗಿದ್ದರೆ ಅಧಿಕಾರಿಯ ಮೂಲಕ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿದೆ ಎಂದು ಅವುಗಳಿಗೂ ಆಗಬಹುದಾಗಿತ್ತು ! ಅರ್ಥಿಯೂ,

ಹ್ಯಧಿಕಾರಿವಿಶೇಷಣಮ್ । ತಸ್ಮಾನ್ನಾವಿದ್ಯಾವದ್ವಿಷಯಾಣಿ ವಿಧಿಪ್ರತಿಷೇಧ-ಶಾಸ್ತ್ರಾಣಿ । ನತರಾಮವಿದ್ಯಾವದ್ವಿಷಯಾಣಿ ಮೋಕ್ಷಪರಾಣಿ ಶಾಸ್ತ್ರಾಣಿ । ನ ಹಿ ವಿವೇಕಾದಿಸಾಧನಂ ವಿನಾ ಅಧಿಕೃತೋ ಭವತಿ ಕಶ್ಚಿನ್ಮೋಕ್ಷಶಾಸ್ತ್ರೇಷು। ತಸ್ಮಾನ್ನ ಘಟಮಾನಮಿದಂ ಯತ್ ಸರ್ವಾಣಿ ಚ ಶಾಸ್ತ್ರಾಣ್ಯವಿದ್ಯಾವದ್ವಿಷ-ಯಾಣೀತಿ ॥

ತದೇವಂ ನೈವ ಸಿದ್ಧಂ ಸರ್ವೇಽಪಿ ಪ್ರಮಾಣಪ್ರಮೇಯವ್ಯವಹಾರಾ ಅವಿದ್ಯಾಖ್ಯಮಧ್ಯಾಸಂ ಪುರಸ್ಕೃತ್ಯ ಪ್ರವೃತ್ತಾಃ ಸರ್ವಾಣಿ ಶಾಸ್ತ್ರಾಣಿ ಚೇತಿ। ಅತೋ ನಾಧ್ಯಾಸನಿವೃತ್ತ್ಯರ್ಥಂ ಬ್ರಹ್ಮಜಿಜ್ಞಾಸಾ ಯುಕ್ತೇತ್ಯಾಕ್ಷೇಪ್ತು-ರಭಿಪ್ರಾಯಃ ॥

**೪೦. ಅವಿದ್ಯಾಸದ್ಭಾವಪ್ರದರ್ಶನಗ್ರಂಥಾವತಾರಃ** – ಅಥ ಸಮಾಧಾನಂ ವಕ್ತುಮಾರಭತೇ – **ಉಚ್ಯತೇ** ಇತಿ । ಅಯಂ ಭಾವಃ । ನ

---

ಸಮರ್ಥನೂ, ತಿಳಿದವನೂ, ಆಗಿರುವುದೆಂಬುದೇ ಅಲ್ಲವೆ ಅಧಿಕಾರಿಯ ವಿಶೇಷಣವು. ಆದ್ದರಿಂದ ವಿಧಿಪ್ರತಿಷೇಧಶಾಸ್ತ್ರಗಳೂ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ ಎಂಬುದಿಲ್ಲ. ಮೋಕ್ಷಪರವಾದ ಶಾಸ್ತ್ರವಂತೂ ಇನ್ನು ಮೊದಲೇ ಅವಿದ್ಯಾವದ್ವಿಷಯುವಾದದ್ದೆಂಬುದು – ಅಲ್ಲವೇ ಅಲ್ಲ. ಯಾವನೊಬ್ಬನೂ ವಿವೇಕಾದಿಸಾಧನವಿಲ್ಲದೇ ಮೋಕ್ಷಶಾಸ್ತ್ರದಲ್ಲಿ ಅಧಿಕಾರಿಯಾಗುವುದಿಲ್ಲವಲ್ಲವೇ ? ಆದ್ದರಿಂದ ಎಲ್ಲಾ ಶಾಸ್ತ್ರಗಳೂ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ ಎಂಬುದು ಹೊಂದುವಂಥದ್ದಲ್ಲ.

ಹೀಗೆ ಎಲ್ಲಾ ಪ್ರಮಾಣಪ್ರಮೇಯವ್ಯವಹಾರವೂ ಮತ್ತು ಎಲ್ಲಾ ಶಾಸ್ತ್ರಗಳೂ "ಅವಿದ್ಯಾ" ಎಂಬ ಹೆಸರಿನ ಅಧ್ಯಾಸವನ್ನು ಮುಂದುಮಾಡಿಕೊಂಡೇ ಹೊರಟಿರುವಂಥದ್ದು ಎಂಬುದು ಸಿದ್ಧವಾಗಿಲ್ಲ. ಆದ್ದರಿಂದ ಅಧ್ಯಾಸವನ್ನು ತೊಲಗಿಸುವುದಕ್ಕಾಗಿ ಬ್ರಹ್ಮಜಿಜ್ಞಾಸೆಯು ಬಂದಿದೆ ಎಂಬುದು ಸರಿಯಲ್ಲ ಎಂದು ಆಕ್ಷೇಪಕನ ಅಭಿಪ್ರಾಯವು.

**೪೦. ಅವಿದ್ಯೆಯಿದೆ ಎಂದು ತೋರಿಸುವ ಗ್ರಂಥಭಾಗವು** – "ಉಚ್ಯತೇ" ಎಂದು ಸಮಾಧಾನವನ್ನು ಹೇಳುವುದಕ್ಕೆ ಆರಂಭಿಸುತ್ತಾರೆ. ಇದು

ತಾವದಧ್ಯಾಸಸದ್ಭಾವೇ ಶಂಕಾ ಸಮುನ್ಮಿಷತಿ । ತಸ್ಯ ಸರ್ವವಿಧವ್ಯವಹಾರ-ವ್ಯಾಪಕತ್ವೇನ ದೃಶ್ಯಮಾನತ್ವಾತ್ । ಅತ್ರಾಕ್ಷೇಪ್ತ್ರಾ ತಾವತ್ ಪ್ರಮಾಣಾನಾಂ ನಿರೂಪಣೇನ ಪ್ರಮಾತೃಸ್ವರೂಪನಿರೂಪಣೇನ ಚ ಪ್ರಮಾಣಾನಾಮವಿದ್ಯಾ-ವದ್ವಿಷಯತ್ವಂ ನಾಸ್ತೀತ್ಯುಕ್ತಮ್ । ಉಭಯತ್ರಾಪ್ಯಯುಕ್ತಮೇವೋಕ್ತಂ ತೇನ। ಪ್ರಮಾಣಪ್ರವೃತ್ತಿಪರೀಕ್ಷಣೇನ ಪುರುಷಪ್ರವೃತ್ತಿಪರೀಕ್ಷಣೇನ ಚಾವಿದ್ಯಾ-ಪುರಸ್ಸರತ್ವಮೇವ ತು ಸರ್ವೇಷಾಂ ಪ್ರಮಾಣಾನಾಂ ಸೇತ್ಸ್ಯತೀತಿ ವಯಂ ಬ್ರೂಮಃ । ತಥಾ ಚಾನವಸರದುಃಸ್ಥೋಽಯಮುಪಾಲಂಬ ಇತಿ ॥

**೪೧. ಪ್ರಮಾಣಪ್ರವೃತ್ತಿನಿರೂಪಣೇನ ತದ್ವ್ಯವಹಾರಸ್ಯಾ-ವಿದ್ಯಾಪುರಸ್ಸರತ್ವಸಮರ್ಥನಮ್** – ಯತ್ತಾವದುಚ್ಯತೇ ಪ್ರಮಾಣಾನಾ-ಮವಿದ್ಯಾವದ್ವಿಷಯತ್ವೇ ಪ್ರಮಾತುಃ ಪ್ರಮಾತೃತ್ವಾನವಕ್ಲೃಪ್ತಿಃ, ಪ್ರಮಾಣಾನಾಂ ಚ ಪ್ರಮಾಣತ್ವಾನವಕ್ಲೃಪ್ತಿರಿತಿ । ತದಸತ್ । ಕುತಃ ? ಅವಿದ್ಯಾಪುರಸ್ಸರತ್ವ

---

ಅಭಿಪ್ರಾಯವು. ಅಧ್ಯಾಸವಿದೆ ಎನ್ನುವ ವಿಷಯದಲ್ಲಿ ಸಂದೇಹವೇ ಏಳುವುದಿಲ್ಲ. ಏಕೆಂದರೆ ಅದು ಎಲ್ಲಾ ಪ್ರಕಾರದ ವ್ಯವಹಾರವನ್ನೂ ವ್ಯಾಪಿಸಿಕೊಂಡಿರುವುದಾಗಿ ಕಂಡುಬಂದಿರುತ್ತದೆ. ಇಲ್ಲಿ ಆಕ್ಷೇಪಕನು ಪ್ರಮಾಣಗಳ ಮತ್ತು ಪ್ರಮಾತೃವಿನ ಸ್ವರೂಪವನ್ನು ನಿರೂಪಣೆಮಾಡುವುದರ ಮೂಲಕ **ಪ್ರಮಾಣಗಳು ಅವಿದ್ಯಾವಂತರ ವಿಷಯವೆಂಬುದಲ್ಲ** ಎಂದು ಹೇಳಿರುತ್ತಾನೆ. ಎರಡರ ವಿಷಯದಲ್ಲೂ ಅವನು ತಪ್ಪಾಗಿಯೇ ಹೇಳಿರುತ್ತಾನೆ. (ಹೇಗೆಂದರೆ) ಪ್ರಮಾಣಗಳು ಹೊರಟಿರುವುದನ್ನು ಪರೀಕ್ಷಿಸುವುದರಿಂದಲೂ, ಪುರುಷರ ಪ್ರವೃತ್ತಿಯನ್ನು ಪರೀಕ್ಷಿಸುವುದರಿಂದಲೂ ಎಲ್ಲಾ ಪ್ರಮಾಣಗಳು ಅವಿದ್ಯಾಪುರಃಸರವಾಗಿವೆ ಎಂದು ಸಿದ್ಧವಾಗುತ್ತದೆ – ಎಂದು ನಾವು ಹೇಳುತ್ತೇವೆ. ಹಾಗಾಗಿ (ಅವನ ನಿಂದೆಯು) – ಈ ಸಂದರ್ಭದಲ್ಲಿ ನಿಲುಗಡೆ ಇಲ್ಲದ್ದಾಗಿರುತ್ತದೆ.

೪೧. **ಪ್ರಮಾಣಗಳ ಪ್ರವೃತ್ತಿಯನ್ನು ಗೊತ್ತುಪಡಿಸುವುದರ ಮೂಲಕ ಅವುಗಳ ವ್ಯವಹಾರವು ಅವಿದ್ಯಾಪುರಃಸರವಾಗಿದೆ ಎಂಬುದನ್ನು ಸಮರ್ಥಿಸುವುದು** :– ಪ್ರಮಾಣಗಳು ಅವಿದ್ಯಾವಂತನನ್ನು ವಿಷಯ-ಮಾಡಿಕೊಂಡಿವೆ ಎಂದಾದರೆ ಪ್ರಮಾತೃವು ಪ್ರಮಾತೃವಾಗಿದ್ದಾನೆಂಬುದೂ, ಪ್ರಮಾಣಗಳು ಪ್ರಮಾಣವಾಗಿವೆ ಎಂಬುದೂ ಹೊಂದುವುದಿಲ್ಲ ಎಂದು (ಪೂ.

ಏವ ತದುಭಯಂಸಾವಕ್ಲೃಪ್ತೇಃ । ಕಥಮ್ ? **ದೇಹೇಂದ್ರಿಯಾದಿಷ್ವಹಂಮಮಾಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇಃ** । ವಸ್ತುಸಂಗ್ರಹವಾಕ್ಯಮಿದಮ್ । ತದೇತದ್ವಿವೃಣೋತಿ "ನ ಹೀಂದ್ರಿಯಾಣ್ಯನುಪಾದಾಯೇ"ತ್ಯಾದಿನಾ । ಅಯಮರ್ಥಃ । ದೇಹಃ, ಇಂದ್ರಿಯಾಣಿ, ಉಪಲಬ್ಧಿಃ, ವ್ಯಾಪಾರಃ, ಫಲೇನಾಭಿಸಂಬಂಧಃ, ಸುಖದುಃಖಸಂವೇದನಂ ಚೇತ್ಯೇತಾನಿ ದೇಹೇಂದ್ರಿಯಾದೀನಿ । ತೇಷ್ವಹಂಮಮಾಭಿಮಾನಃ, "ಅಹಮಿದಮ್" "ಮಮೇದಮ್" ಇತಿರೂಪಃ ಪ್ರತ್ಯಯಃ । ಸ ಚಾತಸ್ಮಿಂಸ್ತತ್ಪ್ರತ್ಯಯಲಕ್ಷಣೋಽಧ್ಯಾಸ ಇತ್ಯುಕ್ತಮಧಸ್ತಾತ್ । ತಾದೃಶಾಭಿಮಾನರಹಿತಸ್ಯ ಪ್ರಮಾತೃತ್ವಂ ನೋಪಪದ್ಯತೇ, ತತಶ್ಚ ಪ್ರಮಾಣಪ್ರವೃತ್ತ್ಯನುಪಪತ್ತಿಃ । ಕಥಂ ? ನ ಹಿ ಪ್ರಮಾಣಪ್ರವೃತ್ತಿಂ ವಿನಾ ಕಸ್ಯಚಿದರ್ಥೋಪಲಬ್ಧಿರ್ಭವೇತ್ । ಯಸ್ಯಾಃ ಸಮನಂತರಮೇವ ಪ್ರೇಪ್ಸಾ ಜಿಹಾಸಾ ವಾ ತಸ್ಮಿನ್ನರ್ಥೇ । ತಾನಿ ಪುನಃ

---

ಪ.) ಏನು ಮೊದಲು ಹೇಳಿರುತ್ತಾನೆ. ಅದು ಸರಿಯಲ್ಲ. ಏಕೆ ?(ಎಂದರೆ) ಅವಿದ್ಯಾಪುರಃಸರವಾಗಿದೆ ಎಂದಾಗಲೇ ಅದೆರಡೂ ಹೊಂದುವಂಥದ್ದಾಗಿರುತ್ತದೆ. ಹೇಗೆ ? ಎಂದರೆ – "ದೇಹೇಂದ್ರಿಯಾದಿಗಳಲ್ಲಿ ನಾನು ನನ್ನದೆಂಬ ಅಭಿಮಾನವಿಲ್ಲವಾದರೆ ಪ್ರಮಾತೃತ್ವವು ಹೊಂದದಿರುವುದರಿಂದ ಪ್ರಮಾಣಗಳು ನಡೆಯುವುದೆಂಬುದು ಹೊಂದುವುದಿಲ್ಲ". ಇದು ವಿಷಯವನ್ನು ಸಂಗ್ರಹಿಸಿ ಹೇಳಿದ ವಾಕ್ಯವಾಗಿದೆ. ಇದನ್ನೇ "ನ ಹಿ ಇಂದ್ರಿಯಾಣ್ಯನುಪಾದಾಯ" ಎಂದು ಮುಂತಾಗಿ ವಿವರಿಸುತ್ತಾರೆ. ಇದು ಅರ್ಥವು. ದೇಹೇಂದ್ರಿಯಾದಿಗಳು ಎಂದರೆ – ದೇಹ, ಇಂದ್ರಿಯಗಳು, ಅರಿವು, ವ್ಯಾಪಾರ, ಫಲದೊಡನೆ ಸಂಬಂಧ, ಸುಖದುಃಖಾದಿ ಸಂವೇದನೆ, ಇವುಗಳೇ ಆಗಿವೆ. ಅವುಗಳಲ್ಲಿ ನಾನು ನನ್ನದೆಂಬ ಅಭಿಮಾನವೆಂದರೆ "ನಾನಿದು", "ನನ್ನದಿದು" ಎಂಬೀ ಪ್ರಕಾರದ ಅರಿವು. ಅದು "ಅದಲ್ಲದ್ದರಲ್ಲಿ ಅದೆಂದು ಅರಿತುಕೊಳ್ಳುವರೂಪದ್ದಾದ ಅಧ್ಯಾಸವು" ಎಂದು ಹಿಂದೆ ಹೇಳಿದೆ. ಆ ರೀತಿ ಅಭಿಮಾನವಿಲ್ಲದವನಿಗೆ ಪ್ರಮಾತೃತ್ವವೂ ಹೊಂದುವುದಿಲ್ಲ. ಆಮೇಲೆ ಪ್ರಮಾಣಪ್ರವೃತ್ತಿಯೂ ಹೊಂದುವುದಿಲ್ಲ. ಹೇಗೆ ? (ಎಂದರೆ) – ಪ್ರಮಾಣದ ಪ್ರವೃತ್ತಿ ಇಲ್ಲವಾದರೆ ಯಾರಿಗೂ (ಯಾವ) ಅರಿವೂ ಆಗಲಾರದಲ್ಲವೆ ? ಯಾವ (ಪ್ರಮಾಣದ ಪ್ರವೃತ್ತಿಯಾದ) ನಂತರವೇ ಆ ವಿಷಯದಲ್ಲಿ

ಪ್ರಮಾಣಾನಿ ಸ್ವಯಂ ನ ಪ್ರವರ್ತಂತೇ, ಕಿಂ ತು ಸ್ವಪ್ರವರ್ತಕಮನ್ಯಮಪೇಕ್ಷಂತೇ । ಯಃ ಪ್ರಮಾತೇತ್ಯುಚ್ಯತೇ । ತತ್ರ ಪ್ರಮಾತೃತ್ವಮೇವ ತಾವದ್ದೇಹೇಂದ್ರಿಯಾದಿಷೂಕ್ತಾಭಿಮಾನಶೂನ್ಯಸ್ಯ ನೋಪಪದ್ಯತೇ । ಕಥಂ? ತದೇತತ್ಪ್ರದರ್ಶಯಿತುಮಾರಭ್ಯತೇ– ನ ಹೀತ್ಯಾದಿನಾ । **ನ ಹೀಂದ್ರಿಯಾಣ್ಯನುಪಾದಾಯ ಪ್ರತ್ಯಕ್ಷಾದಿವ್ಯವಹಾರಃ ಸಂಭವತಿ ।** ಪ್ರತ್ಯಕ್ಷಾನುಮಾನೋಪಮಾನಶಬ್ದಾಖ್ಯಾನಿ, ಅರ್ಥಾಪತ್ತ್ಯನುಪಲಬ್ಧಿಸಹಿತಾನಿ ವಾ ತಾನಿ, ಪ್ರತ್ಯಕ್ಷಾದೀನಿ । ತೇಷಾಂ ಪ್ರತ್ಯಕ್ಷಾದೀನಾಂ ಪ್ರಮಾಣಾನಾಂ ವ್ಯವಹಾರಃ "ಮಮೇದಂ ಪ್ರತ್ಯಕ್ಷಮಭೂತ್", "ಮಯೇದಮನುಮಿತಮಭೂತ್" – ಇತ್ಯಾದಿಪ್ರತ್ಯಯವ್ಯಪದೇಶಲಕ್ಷಣೋ ವ್ಯವಹಾರಃ । ಸ ಚ ನೇಂದ್ರಿಯಾಣ್ಯನುಪಾದಾಯ ತೇಷಾಂ ವ್ಯಾಪಾರಮಸ್ವೀಕೃತ್ಯ ಸಂಭವತಿ । ಇಂದ್ರಿಯವ್ಯಾಪಾರನಿಯತತ್ವಾತ್ತಾದೃಶವ್ಯವಹಾರಸ್ಯ।

---

ಪಡೆಯಬೇಕೆಂದಾಗಲೀ ಬಿಡಬೇಕೆಂದಾಗಲೀ ಬಯಕೆಯು ಬರುವುದು ? ಆ ಪ್ರಮಾಣಗಳಾದರೋ ತಾವೇ ಹೊರಡುವುದಿಲ್ಲ, ಮತ್ತೇನೆಂದರೆ ತಮ್ಮನ್ನು ಪ್ರವರ್ತಿಸುವ ಮತ್ತೊಂದನ್ನು ಅಪೇಕ್ಷಿಸುತ್ತವೆ. ಅವನನ್ನೇ ಪ್ರಮಾತಾ ಎಂದು ಹೇಳಲಾಗುತ್ತದೆ. ಆ ಪ್ರಮಾತೃತ್ವವೇ ದೇಹೇಂದ್ರಿಯಾದಿಗಳಲ್ಲಿ ಮೇಲೆ ಹೇಳಿದ ಅಭಿಮಾನವಿಲ್ಲದೇ ಇದ್ದರೆ ಹೊಂದುವುದಿಲ್ಲ. ಅದು ಹೇಗೆ ? ಎಂಬುದನ್ನು ತೋರಿಸಲು "ನ ಹಿ ಇಂದ್ರಿಯಾಣಿ" ಎಂದು ಮೊದಲಾಗಿ ಹೇಳಲು ಆರಂಭಿಸಿರುತ್ತಾರೆ. "ಇಂದ್ರಿಯಗಳನ್ನು ಸ್ವೀಕರಿಸದೇ ಹೋದರೆ ಪ್ರತ್ಯಕ್ಷಾದಿವ್ಯವಹಾರವು ಹೊಂದುವುದಿಲ್ಲ". ಪ್ರತ್ಯಕ್ಷಾದಿಗಳು ಎಂದರೆ ಪ್ರತ್ಯಕ್ಷ, ಅನುಮಾನ, ಉಪಮಾನ ಎಂಬವುಗಳೋ ಅಥವಾ ಅವುಗಳೇ ಅರ್ಥಾಪತ್ತಿ, ಅನುಲಬ್ಧಿಯಿಂದ ಕೂಡಿದವುಗಳೋ ಎಂದು ತಿಳಿಯಬೇಕು. ಆ ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳ ವ್ಯವಹಾರವು "ಈ ಪ್ರತ್ಯಕ್ಷವು ನನಗಾಯಿತು" ಎಂತಲೋ "ನಾನು ಇದನ್ನು ಊಹಿಸಿದೆ" ಎಂತಲೋ, ಈ ರೀತಿಯಾಗಿ ಪ್ರತ್ಯಯ – ವ್ಯಪದೇಶ (ಮನಸ್ಸು–ಮಾತು)ಲಕ್ಷಣಗಳೇ ವ್ಯವಹಾರವಾಗಿದೆ. ಆ ವ್ಯವಹಾರವು ಇಂದ್ರಿಯಗಳನ್ನು ಸ್ವೀಕರಿಸದೆ (ಅಂದರೆ) ಅವುಗಳ ವ್ಯಾಪಾರವನ್ನೂ ಸ್ವೀಕರಿಸದೇ ಆಗುವುದಿಲ್ಲ. (ಏಕೆಂದರೆ) ಆ ರೀತಿಯಾದ ವ್ಯವಹಾರಕ್ಕೆ ಇಂದ್ರಿಯವ್ಯಾಪಾರವು ಕಡ್ಡಾಯವಾಗಿ ಬೇಕೇ ಬೇಕಾಗಿದೆ. ಇದು

ನನ್ವೇತದೇವ ಕಥಂ? ಉಚ್ಯತೇ । ಅಕ್ಷಸ್ಯಾಕ್ಷಸ್ಯ ಪ್ರತಿವಿಷಯಂ ವೃತ್ತಿಃ ಖಲು ಪ್ರತ್ಯಕ್ಷಂ ನಾಮ । ಇಂದ್ರಿಯಸನ್ನಿಕರ್ಷಶ್ಚಾಕ್ಷವೃತ್ತಿಃ । ತಸ್ಮಾತ್ ಪ್ರತ್ಯಕ್ಷವ್ಯವಹಾರಸ್ತಾವದಕ್ಷವ್ಯಾಪಾರಂ ವಿನಾ ನೋಪಪದ್ಯತೇ । ತಥಾನುಮಾನಾದಿವ್ಯವಹಾರೋಽಪಿ । ಪ್ರತ್ಯಕ್ಷೋಪಜೀವಿತ್ವಾತ್ ತೇಷಾಮ್। ನೇದಮತ್ರ ವಿವಕ್ಷಿತಮಿಂದ್ರಿಯವ್ಯಾಪಾರೋಽಸಾಧಾರಣಕಾರಣಂ ಸರ್ವತ್ರ ಪ್ರಮಾಣವ್ಯವಹಾರ ಇತಿ । ಕಿಂ ತರ್ಹಿ, ಇಂದ್ರಿಯವ್ಯಾಪಾರಂ ವಿನಾ ನೈವಾತ್ಮಲಾಭಃ ಸ್ಯಾತ್ ಪ್ರಮಾಣವ್ಯವಹಾರಸ್ಯೇತಿ । ತಥಾ ಹಿ । ಲಿಂಗಲಿಂಗಿನೋರ್ಧೂಮವಹ್ನ್ಯೋಃ ಸಂಬದ್ಧಯೋರ್ದರ್ಶನೇನ ವ್ಯಾಪ್ತಿ-ಸ್ಮೃತಿಃ । ತತಶ್ಚಾಪ್ರತ್ಯಕ್ಷೋಽರ್ಥೋ ವಹ್ನ್ಯಾದಿರನುಮೀಯತೇ । ಅತೋ ಲಿಂಗದರ್ಶನಪೂರ್ವಕತ್ವಾದನುಮಾನವ್ಯವಹಾರಸ್ಯೇಂದ್ರಿಯವ್ಯಾಪಾರಾಪೇಕ್ಷಾ ಭವತಿ। ಏವಂ ಗೋಗವಯಸಮಾನಧರ್ಮಾರ್ಥ-

---

ಹೇಗೆ ? ಎಂದರೆ – ಹೇಳುತ್ತೇವೆ. (ಪ್ರತ್ಯಕ್ಷವೆಂದರೆ) – ಒಂದೊಂದು ಇಂದ್ರಿಯಕ್ಕೆ ತಕ್ಕದ್ದಾದ ವಿಷಯವೃತ್ತಿಯೇ ಪ್ರತ್ಯಕ್ಷವು. ಇಂದ್ರಿಯಕ್ಕೆ ಹತ್ತಿರವಾಗಿರುವುದು ಇಂದ್ರಿಯವ್ಯಾಪಾರವು. ಆದ್ದರಿಂದ ಇಂದ್ರಿಯವ್ಯಾಪಾರ-ವಿಲ್ಲದೇ ಪ್ರತ್ಯಕ್ಷವ್ಯವಹಾರವು ಹೊಂದುವುದಿಲ್ಲ. ಹಾಗೆಯೇ ಅನುಮಾನ-ವ್ಯವಹಾರವೂ ಆಗಿದೆ. ಏಕೆಂದರೆ ಅವು ಪ್ರತ್ಯಕ್ಷವನ್ನು ಉಪಜೀವಿಸಿಕೊಂಡಿರುವುದಾಗಿವೆ. ಎಲ್ಲಾ ಪ್ರಮಾಣವ್ಯವಹಾರದಲ್ಲೂ ಇಂದ್ರಿಯವ್ಯಾಪಾರವು ಅಸಾಧಾರಣವಾದ ಕಾರಣವೆಂಬುದೇನೂ ಇಲ್ಲಿ ವಿವಕ್ಷಿತವಾಗಿಲ್ಲ. ಮತ್ತೇನೆಂದರೆ ಇಂದ್ರಿಯವ್ಯಾಪಾರವಿಲ್ಲದೇ ಪ್ರಮಾಣವ್ಯವಹಾರಕ್ಕೆ ಅಸ್ತಿತ್ವವೇ ಇಲ್ಲ ಎಂಬುದೇ (ವಿವಕ್ಷಿತವಾದದ್ದು). ಹಾಗೆಯೇ ಅಲ್ಲವೇ ? ಲಿಂಗಲಿಂಗಿಗಳಾದ ಅಗ್ನಿಹೊಗೆಗಳ ಸಂಬಂಧವನ್ನು ಕಾಣುವುದರಿಂದ (ಎಲ್ಲೆಲ್ಲಿ ಹೊಗೆ ಇದೆಯೋ ಅಲ್ಲೆಲ್ಲಾ ಅಗ್ನಿ ಇದೆ ಎಂಬ) ವ್ಯಾಪ್ತಿಯ ನೆನಪು ಬರುತ್ತದೆ. ಆ (ಹೊಗೆಯೇ ಮುಂತಾದದ್ದರ) ಗುರುತಿನಿಂದ ಪ್ರತ್ಯಕ್ಷವಲ್ಲದ ಅಗ್ನಿಯೇ ಮುಂತಾದದ್ದರ ಅನುಮಾನವು (ನಡೆಯುತ್ತದೆ) . ಆದ್ದರಿಂದ ಅನುಮಾನವ್ಯವಹಾರವು ಲಿಂಗವನ್ನು ಕಾಣುವುದು ಎಂಬುದನ್ನು ಮುಂದುಮಾಡಿಕೊಂಡು ಆಗುವುದರಿಂದ ಇಂದ್ರಿಯವ್ಯಾಪಾರದ ಅಪೇಕ್ಷೆಯು ಇದೆ ಎಂದಾಗುತ್ತದೆ. ಹೀಗೆ ಗೋವಿಗೂ ಗವಯಕ್ಕೂ ಸಮಾನವಾದ ಗುಣವೆಂಬ

ಮಿಂದ್ರಿಯಸನ್ನಿಕರ್ಷಾದುಪಲಭ್ಯೈವ ಗವಯಪ್ರತಿಪತ್ತಿರಿತ್ಯತ ಉಪಮಾನವ್ಯವಹಾರಸ್ಯಾಪಿ ತದಪೇಕ್ಷಾ ಭವತಿ । ಏವಂ ತೇನ ವಿನಾನುಪಪದ್ಯಮಾನಸ್ಯಾರ್ಥಸ್ಯ ಪೀನತ್ವಸ್ಯ ದರ್ಶನಾದ್ದಿವಾಭೋಜನರಹಿತಸ್ಯ ದೇವದತ್ತಸ್ಯ ರಾತ್ರಿಭೋಜನಂ ಪ್ರತಿಪದ್ಯತ ಇತ್ಯರ್ಥಾಪತ್ತಿವ್ಯವಹಾರಸ್ಯಾಪಿ ತದಪೇಕ್ಷಾ । ಏವಂ ಭೂತಲೇ ಘಟೋ ನೇತ್ಯನುಪಲಬ್ಧಿವ್ಯವಹಾರಸ್ಯಾಪಿ ಭೂತಲರೂಪಾಧಿಕರಣಪ್ರತ್ಯಕ್ಷಪೂರ್ವಕತ್ವಾದಸ್ತಿ ತದಪೇಕ್ಷಾ । ತದೇವಮಿಂದ್ರಿಯವ್ಯಾಪಾರಮನುಪಾದಾಯ ಪ್ರತ್ಯಕ್ಷಾದಿವ್ಯವಹಾರೋ ನ ಸಂಭವತೀತಿ ಸ್ಥಿತಮ್ । ಅತ್ರ ಯದ್ಯಪಿ ವಾದಿನಃ ಪ್ರತ್ಯಕ್ಷಾದೀನಾಂ ಸಂಖ್ಯೇಯತ್ತಾಯಾಂ ಲಕ್ಷಣಪರಿಷ್ಕಾರೇ ಚ ವಿಪ್ರತಿಪದ್ಯಂತೇ ತಥಾಪಿ ಸಾಕ್ಷಾತ್ ಪ್ರಣಾಳಿಕಯಾ ವೇಂದ್ರಿಯಾಣಾಂ ವ್ಯಾಪಾರಮಪುರಸ್ಕೃತ್ಯ ಪ್ರಮಾಣವ್ಯವಹಾರೋ ನೈವ ಭವತೀತ್ಯತ್ರ ತು ನ ಕಸ್ಯಚಿದ್ವಿಮತಿರ್ಭವತಿ।

---

ವಿಷಯವನ್ನು ಇಂದ್ರಿಯಕ್ಕೆ ವಿಷಯ (ಗೋಚರ) ಮಾಡಿಕೊಂಡು (ಇದು) ಗವಯವಾಗಿದೆ ಎಂಬ ಜ್ಞಾನವಾಗುತ್ತದೆ ಎಂದಾದ್ದರಿಂದ ಉಪಮಾನವ್ಯವ-ಹಾರಕ್ಕೂ ಇಂದ್ರಿಯದ ಅಪೇಕ್ಷೆ ಇರುತ್ತದೆ. ಹೀಗೆಯೇ ಆ (ಊಟವೆಂಬುದು) ಇಲ್ಲದೇ ಇದ್ದರೆ ಹೀಗೆ ದಪ್ಪನಾಗಿ ಕಾಣುವುದೆಂಬುದು ಹೊಂದುವುದಿಲ್ಲ-ವಾದ್ದರಿಂದ, (ದಪ್ಪನಾಗಿ ಕಾಣುತ್ತಿರುವುದರಿಂದ) ದೇವದತ್ತನು ಹಗಲು ಭೋಜನಮಾಡದಿದ್ದರೂ ರಾತ್ರಿ ಮಾಡಿರಬೇಕೆಂಬ ತಿಳಿವಳಿಕೆಯಾದ ಅರ್ಥಾಪತ್ತಿವ್ಯವಹಾರಕ್ಕೂ ಇಂದ್ರಿಯವ್ಯಾಪಾರದ ಅಪೇಕ್ಷೆ ಇದೆ. ಹೀಗೆಯೇ ನೆಲದ ಮೇಲೆ ಗಡಿಗೆ ಇಲ್ಲ ಎಂಬ ಅನುಪಲಬ್ಧಿವ್ಯವಹಾರಕ್ಕೂ ನೆಲವೆಂಬ ಆಧಾರವು ಪ್ರತ್ಯಕ್ಷವಾದ್ದರಿಂದ ಅಲ್ಲೂ ಇಂದ್ರಿಯವ್ಯಾಪಾರದ ಅಪೇಕ್ಷೆ ಇದೆ. ಹೀಗೆ ಇಂದ್ರಿಯವ್ಯಾಪಾರವನ್ನು ಸ್ವೀಕರಿಸದೇ ಇದ್ದರೆ ಪ್ರತ್ಯಕ್ಷಾದಿಗಳ ವ್ಯವಹಾರವಿಲ್ಲ ಎಂಬುದು ಸಿದ್ಧವಾಯಿತು. ಇಲ್ಲಿ ಪ್ರತ್ಯಕ್ಷಾದಿಪ್ರಮಾಣಗಳ ಸಂಖ್ಯೆ ಎಷ್ಟು? ಎಂಬುದರ ಬಗ್ಗೆಯೂ, ಲಕ್ಷಣವನ್ನು ಪರಿಷ್ಕಾರಮಾಡುವ ವಿಷಯದಲ್ಲೂ, ವಾದಿಗಳಲ್ಲಿ ವಿರುದ್ಧವಾದ ಅಭಿಪ್ರಾಯವಿರುವುದು ನಿಜವಾದರೂ ನೇರಾಗಿಯಾಗಲೀ ಪರಂಪರೆಯಿಂದಲಾಗಲೀ ಇಂದ್ರಿಯ-ವ್ಯಾಪಾರವನ್ನು ಮುಂದುಮಾಡಿಕೊಳ್ಳದೇ ಪ್ರಮಾಣವ್ಯವಹಾರವು ಇರುವುದೇ ಇಲ್ಲ ಎಂಬುದರ ಬಗ್ಗೆ ವಿಮತಿಯು ಯಾರಿಗೂ ಇರುವುದಿಲ್ಲ. ಆದ್ದರಿಂದ

ಅತಃ ಪ್ರಮಾಣಲಕ್ಷಣಸಂಖ್ಯಾದಿನಿರ್ಧಾರಣೇ ನಾಸ್ತ್ಯಸ್ಮಾಕಂ ನಿರ್ಭರ ಇತಿ ಜ್ಞೇಯಮ್ । ನನ್ವಸ್ತು ನಾಮ್ಯೈತತ್ । ಕಥಮೇತಾವತಾ ಪ್ರಮಾಣಾನಾಮ-ವಿದ್ಯಾಪುರಸ್ಸರತ್ವಮ್ ? ತತ್ರೋಚ್ಯತೇ । **ನ ಚಾಧಿಷ್ಠಾನಮಂತರೇ-ಣೇಂದ್ರಿಯಾಣಾಂ ವ್ಯವಹಾರಃ ಸಂಭವತಿ** । ನ ಹಿ ಶರೀರರೂಪಮಾಶ್ರಯಂ ವಿನಾ ಪ್ರತ್ಯಕ್ಷಾದಿವ್ಯವಹಾರಾಪೇಕ್ಷಿತಾನಾಮಿಂದ್ರಿಯಾಣಾಂ ವ್ಯಾಪಾರಃ ಸಂಭವತಿ । ಆಶ್ರಯೋ ಹಿ ಶರೀರಂ ಚೇಷ್ಟಾದೀನಾಮ್ । ಯಥಾಹುಃ – "ಚೇಷ್ಟೇಂದ್ರಿಯಾರ್ಥಾಶ್ರಯಃ ಶರೀರಮ್"ಇತಿ (ನ್ಯಾ. ಸೂ. ೧–೧–೧೧) । ಈಪ್ಸಿತಂ ಜಿಹಾಸಿತಂ ಚಾರ್ಥಮುದ್ದಿಶ್ಯ ಯಾ ಚೇಷ್ಟಾ ತೇಷಾಮಾಶ್ರಯಃ ಶರೀರಮ್ । ಸ್ವವಿಷಯೇಷು ಶಬ್ದಾದಿಷು ಯಾನಿ ಪ್ರವರ್ತಂತೇ ತೇಷಾಮಿಂದ್ರಿಯಾಣಾಮಾಶ್ರಯಃ ಶರೀರಮ್ । ತದನುಗ್ರಹೇಣಾನುಗೃಹ್ಯಂತೇ, ತದುಪಘಾತೇ ಚೋಪಹನ್ಯಂತೇ । ಏವಂ ತದನುವಿಧಾನಾತ್ ತದಾಶ್ರಿತಾನೀಂದ್ರಿಯಾಣಿ । ವಿಷಯೋಪಲಬ್ಧಿನಿಮಿತ್ತೋಽರ್ಥಃ ಸುಖಂ

---

ನಮಗೆ ಪ್ರಮಾಣದ ಲಕ್ಷಣವನ್ನೂ ಸಂಖ್ಯೆಯನ್ನೂ ನಿರ್ಣಯಮಾಡುವ ನಿರ್ಭರ (ತಾತ್ಪರ್ಯ) ವೇನಿರುವುದಿಲ್ಲ. ಅಲ್ಲಾ ! ಇದು ಹೀಗೆಯೆ ಆಗಲಿ ! ಇಷ್ಟು ಮಾತ್ರದಿಂದ ಪ್ರಮಾಣಗಳು ಅವಿದ್ಯಾಪುರಸ್ಸರ ಎಂದು ಹೇಗೆ ಆದಾಗುತ್ತದೆ ? ಎಂದರೆ ಹೇಳುತ್ತೇವೆ. "ಅಧಿಷ್ಠಾನವಿಲ್ಲದೇ ಹೋದರೆ ಇಂದ್ರಿಯವ್ಯವಹಾರವೇ ಹೊಂದುವುದಿಲ್ಲ". ಶರೀರವೆಂಬ ಆಶ್ರಯವಿಲ್ಲದೇ ಹೋದರೆ ಪ್ರತ್ಯಕ್ಷಾದಿವ್ಯವಹಾರಕ್ಕೆ ಬೇಕಾದ ಇಂದ್ರಿಯವ್ಯಾಪಾರವೆಂಬುದು ಹೊಂದುವುದಿಲ್ಲವಲ್ಲವೆ ? ಚೇಷ್ಟೆಯೇ ಮುಂತಾದವುಗಳಿಗೆ ಶರೀರವು ಆಶ್ರಯವಲ್ಲವೇ ? ಹಾಗೆಯೇ ಅಲ್ಲವೆ ಹೇಳಿರುವುದು, "ಚೇಷ್ಟೆಗಳಿಗೂ ಇಂದ್ರಿಯಗಳಿಗೂ ಆಶ್ರಯವಾಗಿರುವುದೇ ಶರೀರವು" (ನ್ಯಾ. ಸೂ. ೧–೧–೧೧). ಪಡೆಯುವುದನ್ನೂ ತಪ್ಪಿಸಿಕೊಳ್ಳುವುದನ್ನೂ ಉದ್ದೇಶಿಸಿಕೊಂಡು ಯಾವ ಚೇಷ್ಟೆಯು ನಡೆಯುತ್ತದೋ ಅವುಗಳಿಗೆ ಆಶ್ರಯವು ಶರೀರವು. ತಮಗೆ ವಿಷಯವಾದ ಶಬ್ದಾದಿಗಳಲ್ಲಿ ಯಾವ ಇಂದ್ರಿಯಗಳು ತೊಡಗುತ್ತವೆಯೋ, ಆ ಇಂದ್ರಿಯಗಳಿಗೆ ಆಶ್ರಯವು ಶರೀರವು. ಶರೀರವು ಚೆನ್ನಾಗಿದ್ದರೆ ಅವು ನಡೆಯುತ್ತವೆ, ಆದಕ್ಕೆ ತೊಂದರೆಯಾದರೆ ಅವಕ್ಕೂ ತೊಂದರೆಯಾಗುತ್ತದೆ. ಹೀಗೆ ಶರೀರವನ್ನನುಸರಿಸಿ ನಡೆಯುವುದರಿಂದ ಅವಕ್ಕೆ ಶರೀರವೇ ಆಶ್ರಯವೆನ್ನಲಾಗಿದೆ. ವಿಷಯವನ್ನರಿಯುವುದೆ ಅರ್ಥವು ಪ್ರಯೋಜನವು ಸುಖ,

ದುಃಖಂ ಚ । ತದಾಶ್ರಯಃ ಶರೀರಮ್ । ಸತ್ಯೇವ ಶರೀರೇ ತತ್ಸಂಭವಾತ್। ತದೇವಂ ಪ್ರಮಾತೃತ್ವಪ್ರಯೋಜಕಾನೀಂದ್ರಿಯಾಣಿ, ತತ್ಪ್ರವೃತ್ತಿಃ, ಫಲಾಭಿಸಂಬಂಧಕೃತಸುಖದುಃಖಸಂವೇದನಂ ಚೇತ್ಯೇತತ್ ಸರ್ವಂ ಶರೀರಾಶ್ರಿತಮೇವ । ತದೇತತ್ ಸರ್ವಮಭಿಸಂಧಾಯೋಕ್ತಂ – "ನ ಚಾಧಿಷ್ಠಾನಮಂತರೇಣೇಂದ್ರಿಯಾಣಾಂ ವ್ಯವಹಾರಃ ಸಂಭವತಿ" ಇತಿ । ಅಸ್ತು ಸರ್ವಮೇವೇದಮ್ । ತಥಾಪಿ ಪ್ರಮಾಣಾನಾಮವಿದ್ಯಾಪುರಸ್ಸರತ್ವೇ ಕಿಮಾಯಾತಮ್ ? ತತ್ರಾऽऽಹ – **"ನ ಚಾನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ವ್ಯಾಪ್ರಿಯತೇ"** ಇತಿ । ಅಯಮಾಶಯಃ । ಉಕ್ತಮಧಸ್ತಾದ್ಯಥಾ ದೇಹಾಶ್ರಿತ ಇಂದ್ರಿಯಾಣಾಂ ವ್ಯಾಪಾರಃ । ತದಪೇಕ್ಷಶ್ಚ ಪ್ರತ್ಯಕ್ಷಾದಿವ್ಯವಹಾರಃ। ತತ ಇದಂ ನಿಷ್ಪನ್ನಂ ಶರೀರಸಂಬದ್ಧೇನ ಭವಿತವ್ಯಮಾತ್ಮನಾ ಪ್ರಮಾಣ-ವ್ಯವಹಾರಸಿದ್ಧ್ಯರ್ಥಮ್ । ಅನ್ಯಥಾ ಹ್ಯಾತ್ಮನಃ ಪ್ರಮಾತೃತ್ವಮೇವ ನ ಸ್ಯಾದಿತಿ ದೂರೇ ತದಾಶ್ರಿತಾನಾಂ ಪ್ರಮಾಣಾನಾಂ ಪ್ರವೃತ್ತಿರಿತಿ । ನನ್ವಸ್ತು ಶರೀರ

---

ದುಃಖಗಳು ಅವುಗಳಿಗೂ ಶರೀರವು ಆಶ್ರಯವಾಗಿವೆ. ಏಕೆಂದರೆ ಶರೀರವಿದ್ದಾಗಲೇ ಅವು ಆಗುತ್ತವೆ. ಹೀಗೆ ಪ್ರಮಾತೃತ್ವಕ್ಕೆ ಪ್ರಯೋಜಕವಾದ ಇಂದ್ರಿಯಗಳೂ ಅವುಗಳ ಪ್ರವೃತ್ತಿಯೂ ಮತ್ತು ಫಲದ ಸಂಬಂಧದಿಂದಾದ ಸುಖದುಃಖಗಳ ಅರಿವೆಂಬುದೆಲ್ಲವೂ ಶರೀರವನ್ನಾಶ್ರಯಿಸಿಕೊಂಡವುಗಳೇ ಆಗಿವೆ. ಇದೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು "ಅಧಿಷ್ಠಾನವಿಲ್ಲದೇ ಹೋದರೆ ಇಂದ್ರಿಯಗಳ ವ್ಯವಹಾರವಿರುವುದಿಲ್ಲ". ಎಂದು ಹೇಳಿರುತ್ತಾರೆ. ಇದೆಲ್ಲವೂ ಹೀಗೇ ಆಗಲಿ, ಆದರೂ ಪ್ರಮಾಣಗಳು ಅವಿದ್ಯಾಪುರಃಸ್ಸರವಾಗಿವೆ ಎನ್ನುವ ವಿಷಯಕ್ಕೆ ಏನು ಬಂದಂತಾಯಿತು ? ಎಂದರೆ ಅದಕ್ಕೆ ಹೇಳುತ್ತಾರೆ – ನಾನೆಂದು ತಪ್ಪಾಗಿ ತಿಳಿಯದ ದೇಹದಿಂದ ಯಾವನೂ (ಯಾವ) ವ್ಯಾಪಾರವನ್ನು ಮಾಡುವುದಿಲ್ಲ. ಇದು ಇದರ ಅಭಿಪ್ರಾಯವು. "ಇಂದ್ರಿಯವ್ಯಾಪಾರವೆಲ್ಲ ದೇಹಾಶ್ರಿತವಾಗಿದೆ" ಎಂಬುದನ್ನು ಹಿಂದೆ ಹೇಳಲಾಗಿದೆ. ಅದನ್ನಪೇಕ್ಷಿಸಿಕೊಂಡೇ ಪ್ರತ್ಯಕ್ಷಾದಿ-ವ್ಯವಹಾರವು ಎಂಬುದನ್ನೂ (ಹೇಳಾಗಿದೆ). ಇದರಿಂದ ಏನು ಸಿದ್ಧವಾಯಿ-ತೆಂದರೆ – ಪ್ರಮಾಣವ್ಯವಹಾರದ ಸಿದ್ಧಿಗಾಗಿ ಆತ್ಮನು ಶರೀರದೊಡನೆ ಸಂಬಂಧಪಟ್ಟುಕೊಂಡವನಾಗಿರಲೇಬೇಕು. ಇಲ್ಲವಾದರೆ ಆತ್ಮನಿಗೆ ಪ್ರಮಾತೃತ್ವವೇ ಆಗುವುದಿಲ್ಲವೆಂದಾಗಿ ಅದನ್ನಾಶ್ರಯಿಸಿದ ಪ್ರಮಾಣಗಳ ಪ್ರವೃತ್ತಿಯು ಬಹಳ ದೂರವಾದೀತು !

ಸಂಬಂಧೋಽಪಿ ಕಾ ನೋ ಹಾನಿಃ ? ನ ಕಾಪಿ, ಯದಿ ಸಂಬಂಧ ಏವ ಯಃ ಕೋಽಪ್ಯವಗಮ್ಯೇತ । ನ ತ್ವಸಾವವಗಮ್ಯತೇ । ತಥಾ ಹಿ । ನ ತಾವದ್ದೇಹೇ-ನಾಽಽತ್ಮನಸ್ತಾದಾತ್ಮ್ಯಮ್ । ವಿಷಯವಿಷಯಿಣೋಸ್ತದನುಪಪತ್ತೇಃ । ನ ಚ ಸಂಯೋಗಸಮವಾಯೌ । ನ ಹ್ಯಾತ್ಮನೋ ನಿರವಯವಸ್ಯಾಸಂಸರ್ಗಿಣೋಽ-ದ್ರವ್ಯಾತ್ಮಕಸ್ಯ ದೇಹೇನ ಸಂಯೋಗಃ ಸಮವಾಯೋ ವಾ ಯುಜ್ಯತೇ । ನ ಚಾಽನ್ಯಃ ಸಂಬಂಧಃ ಕಲ್ಪನೀಯಃ ಸಮಸ್ತಿ । ಚಿನ್ಮಾತ್ರಸ್ಯ ಸ್ವಯಂಸಿದ್ಧ-ಪರಮಾರ್ಥಸದ್ರೂಪಸ್ಯ ತದ್ವಿರುದ್ಧಸ್ವಭಾವೇನ ದೇಹೇನ ಕಸ್ಯಚಿದಪಿ ಸಂಬಂಧಸ್ಯ ಕಲ್ಪಯಿತುಮಶಕ್ಯತ್ವಾತ್ । ನಿರಾಕರಿಷ್ಯತೇ ಚ ಭಾಷ್ಯೇ ಸಮನ್ವಯಾಧಿಕರಣೇ ಧರ್ಮಾಧರ್ಮನಿಮಿತ್ತಃ ಸ್ವಸ್ವಾಮಿಭಾವಃ ಸಂಬಂಧಃ । ಅತೋಽಧ್ಯಾಸ ಏವ ಸಂಬಂಧ ಇತಿ ಪ್ರಾಪ್ನೋತಿ । ತದಿದಮುಕ್ತಂ "ನ ಚಾನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ವ್ಯಾಪ್ರಿಯತ" ಇತಿ । ಅಥ ಕೋಽಯಮನಧ್ಯಸ್ತಾತ್ಮಭಾವ

---

ಅಲ್ಲಾ ! ಆತ್ಮನಿಗೆ ಶರೀರಸಂಬಂಧವು ಆಗಲಿ, ಆದರಿಂದ ನಮಗೆ ಏನು ಹಾನಿ ? ಎಂದರೆ (ಹೌದು) ಯಾವುದಾದರೂ ಸಂಬಂಧವು ತಿಳಿದುಬಂದಿದ್ದರೆ ಏನೂ ಹಾನಿಯು ಇರುತ್ತಿರಲಿಲ್ಲ. ಆದರೆ ಅದು ತಿಳಿದುಬಂದಿಲ್ಲ, (ಏಕೆಂದರೆ) ಮೊಟ್ಟಮೊದಲು ದೇಹದೊಡನೆ ಆತ್ಮನಿಗೆ ತಾದಾತ್ಮ್ಯ(ಸಂಬಂಧ)-ವೆಂಬುದಿಲ್ಲ. ವಿಷಯಿವಿಷಯಗಳಾಗಿರುವ ಅವೆರಡಕ್ಕೆ ಅದು ಹೊಂದುವುದಿಲ್ಲ. ಸಂಯೋಗಸಮವಾಯ ಸಂಬಂಧವೂ ಹೊಂದುವುದಿಲ್ಲ. ಏಕೆಂದರೆ ನಿರವಯವನಾಗಿ ಅಂಟಿಕೊಳ್ಳದ, ಅದ್ರವ್ಯನಾದ ಆತ್ಮನಿಗೆ ದೇಹದೊಡನೆ ಸಂಯೋಗವಾಗಲೀ, ಸಮವಾಯವಾಗಲೀ ಹೊಂದುವುದಿಲ್ಲವಷ್ಟೆ ? ಇನ್ನು ಬೇರೆ ಸಂಬಂಧವನ್ನು ಕಲ್ಪಿಸುವುದೆಂಬುದೂ ಹೊಂದುವುದಿಲ್ಲ. ಏಕೆಂದರೆ ಚಿನ್ಮಾತ್ರನಾದ ಸ್ವಯಂಸಿದ್ಧಪರಮಾರ್ಥಸದ್ರೂಪನಾದ (ಆತ್ಮನಿಗೆ) ಅದಕ್ಕೆ ವಿರುದ್ಧಸ್ವಭಾವವಾದ ದೇಹದೊಡನೆ ಯಾವುದೊಂದು ಸಂಬಂಧವನ್ನು ಕಲ್ಪಿಸುವುದಕ್ಕೂ ಆಗುವುದಿಲ್ಲ. ಸಮನ್ವಯಾಧಿಕರಣದ ಭಾಷ್ಯದಲ್ಲಿ ಧರ್ಮ, ಅಧರ್ಮನಿಮಿತ್ತವಾಗಿ (ಶರೀರದೊಡನೆ) ಸ್ವಸ್ವಾಮಿಭಾವ ಸಂಬಂಧವಿರ-ಬಹುದೆಂಬುದನ್ನು ಅಲ್ಲಗಳೆದೂ ಇರುತ್ತಾರೆ. ಆದ್ದರಿಂದ ಅಧ್ಯಾಸವೇ ಸಂಬಂಧವು ಎಂದು ಬಂದೊದಗುತ್ತದೆ. ಅದನ್ನೇ "ಅನಧ್ಯಸ್ತಾತ್ಮ-ಭಾವೇನ...ವ್ಯಾಪ್ರಿಯತೇ" ಎಂದಿರುತ್ತಾರೆ. ಅಧ್ಯಸ್ತವಾಗದ ಆತ್ಮಭಾವವೆಂದರೆ

ಇತಿ ? ಆತ್ಮನೋ ಭಾವಃ, ಆತ್ಮಭಾವಃ । ಆತ್ಮತ್ವಮಿತಿ ಯಾವತ್ । ಅಧ್ಯಸ್ತ ಆತ್ಮಭಾವೋ ಯಸ್ಮಿನ್ ಸ ದೇಹೋಽಧ್ಯಸ್ತಾತ್ಮಭಾವಃ । ಅಪಿಽಽಚಾತ್ಮನಿ ಭಾವಃ, ಆತ್ಮಭಾವಃ । ಅಧ್ಯಸ್ತ ಆತ್ಮಭಾವೋ ಯಸ್ಯ ಸೋಽಯಂ ದೇಹೋಽಧ್ಯಸ್ತಾತ್ಮಭಾವಃ । ಆತ್ಮಾಶ್ರಿತತ್ವೇನ ಸಮಾರೋಪಿತಸತ್ವ ಇತಿ ಯಾವತ್ । ಅಧ್ಯಸ್ತಾತ್ಮಭಾವೋ ನ ಭವತೀತ್ಯನಧ್ಯಸ್ತಾತ್ಮಭಾವಃ । ತಾದೃಶೇನ ದೇಹೇನ ನ ಕಶ್ಚಿದ್ವ್ಯಾಪ್ರಿಯತೇ । ನಾಯಮಭಿಪ್ರಾಯೋಽನಧ್ಯಸ್ತಾತ್ಮಭಾವೋ ಯೋ ದೇಹಃ ತೇನ ನ ಕಶ್ಚಿದ್ವ್ಯಾಪ್ರಿಯತ ಇತಿ । ತಾದೃಶದೇಹ-ಸ್ಯೈವಾಽನಭ್ಯುಪಗಮಾತ್ । ಅಪಿ ತು, ಯದಿ ದೇಹಾಶ್ರಿತವ್ಯಾಪಾರೇಣ ವ್ಯಾಪಾರವಾನಾತ್ಮಾ ಅಂಗೀಕರ್ತವ್ಯಃ, ತರ್ಹಿ ದೇಹೇನಾಧ್ಯಸ್ತಾತ್ಮ-ಭಾವೇನೈವ ಭವಿತವ್ಯಮ್ । ಅನ್ಯಥಾ ತದ್ವ್ಯಾಪಾರೇಣಾತ್ಮನಿ ವ್ಯಾಪಾರವತ್ತ್ವಾಸಂಗತೇರಿತಿ ॥

## ೪೨. ದೇಹಾತ್ಮನೋಃ ಸಂಬಂಧಸ್ಯಾಽಽಧ್ಯಾಸಿಕತ್ವೇ ಶಂಕಾ–

---

ಯಾವುದು ? ಆತ್ಮನಾಗಿರುವುದೇ ಆತ್ಮಭಾವವು. ಆತ್ಮನಾಗಿರುವುದೆಂದರ್ಥವು. ಅಧ್ಯಸ್ತವಾದ ಆತ್ಮಭಾವವು ಯಾವ ದೇಹದಲ್ಲೋ ಆ ದೇಹವು ಅಧ್ಯಸ್ತಾತ್ಮಭಾವವು. ಮತ್ತೂ ಏನೆಂದರೆ – ಆತ್ಮನಲ್ಲಿರುವುದೇ ಆತ್ಮಭಾವವು. ಅಧ್ಯಸ್ತವಾದ ಆತ್ಮಭಾವವು ಯಾವ ದೇಹಕ್ಕೋ ಆ ಈ ದೇಹವು ಅಧ್ಯಸ್ತಾತ್ಮಭಾವವು. ಆತ್ಮನನ್ನು ಆಶ್ರಯಿಸಿರುವುದರಿಂದ ಕಲ್ಪಿಸಿಕೊಂಡ ಇರುವಿಕೆಯುದೆಂದು ಭಾವವು. ಅಧ್ಯಸ್ತಾತ್ಮಭಾವವು ಇರುವುದಿಲ್ಲವಾದ್ದರಿಂದ ಅನಧ್ಯಸ್ತಾತ್ಮಭಾವವು. ಅಂತಹ ದೇಹದಿಂದ ಯಾವನೊಬ್ಬನೂ ವ್ಯಾಪಾರವನ್ನು ಮಾಡಲಾರನು. ನಾನೆಂದು ತಪ್ಪಾಗಿ ತಿಳಿಯದ ಯಾವ ದೇಹವಿದೆಯೋ ಅದರಿಂದ ವ್ಯಾಪಾರವನ್ನು ಮಾಡುವುದಿಲ್ಲ ಎಂದು ಮಾತ್ರ ಅಭಿಪ್ರಾಯವಲ್ಲ. ಏಕೆಂದರೆ ಅಂತಹ ದೇಹವೆಂಬುದೇ ಇರುವುದಿಲ್ಲವಾದ್ದರಿಂದ. ದೇಹಾಶ್ರಿತವಾದ ವ್ಯಾಪಾರದಿಂದ ಆತ್ಮನು ವ್ಯಾಪಾರವಂತನು ಎಂದು ಒಪ್ಪಿಕೊಳ್ಳಬೇಕು ಎನ್ನುವುದಾದರೆ ಆಗ ದೇಹವು ನಾನೆಂದು ತಿಳಿದುಕೊಂಡದ್ದೆಂದೇ ಆಗಬೇಕು. ಹಾಗಲ್ಲದೇ ಆ (ದೇಹದ) ವ್ಯಾಪಾರದಿಂದ ಆತ್ಮನಲ್ಲಿ ವ್ಯಾಪಾರವಾಗುವುದೆಂಬುದು ಹೊಂದುವುದಿಲ್ಲ.

## ೪೨. ದೇಹಾತ್ಮರುಗಳ ಸಂಬಂಧವು ಅಧ್ಯಾಸಪುರಃಸರವಾದದ್ದೇ ಎಂಬ

**ಸಮಾಧಾನೇ** – ಸ್ಯಾದೇತತ್ । ಯೋಽಸೌ ದೇಹಸ್ಯಾಧ್ಯಸ್ತಾತ್ಮಭಾವಃ ಪ್ರತಿಜ್ಞಾತಃ, ಸ ನ ಶಕ್ಯಸಂಭಾವನಃ । ದೇಹಾತ್ಮನೋರನ್ಯೋನ್ಯಾಧ್ಯಾಸೇ ಉಭಯೋರಪ್ಯಸತ್ವಪ್ರಸಂಗಾತ್ । ನ ಚೈತದಿಷ್ಟಮ್ । ಯಥಾ ಹಿ ಶುಕ್ತಿಕಾದಿ-ಷ್ವಧ್ಯಸ್ತಾನಾಂ ರಜತಾದೀನಾಂ ನಿತ್ಯಮೇವ ಸ್ವಾಧಿಷ್ಠಾನೇಽತ್ಯಂತಾಸತ್ವಂ ದೃಷ್ಟಮ್, ತಥಾ ದೇಹಾತ್ಮನೋರತ್ಯಂತಮೇವಾಸತ್ವಂ ಪ್ರಾಪ್ನೋತಿ ತೌ ಚೇತ್ ಪರಸ್ಪರಾಧ್ಯಸ್ತೌ । ದೇಹಸ್ಯ ಹಿ ಸ್ವತಃ ಸತ್ವಾಭಾವಃ, ಅಧ್ಯಸ್ತತ್ವಾತ್। ಆತ್ಮನಿ ಚ ತಸ್ಯ ಸತ್ವಾಭಾವಃ । ಅಧ್ಯಸ್ತತ್ವಾದೇವ । ಏವಮಾತ್ಮನೋಽಪಿ ಸ್ವತೋ ದೇಹೇ ಚಾಭಾವ ಏವ, ಅಧ್ಯಸ್ತತ್ವಾವಿಶೇಷಾತ್ ಇತಿ ಶೂನ್ಯವಾದ ಏವ ಪ್ರಸಜ್ಯತೇ । ತತಶ್ಚ ಪ್ರತಿಜ್ಞಾಹಾನಿಃ । ಸತ್ಯಾನೃತಯೋರ್ಹಿ ಚಿದಾತ್ಮಾನಾತ್ಮನೋರ್ಮಿಥುನೀಕೃತ್ಯ ಲೋಕೇ ವ್ಯವಹಾರ ಇತಿ ಪ್ರತಿಜ್ಞಾತ-ಮಿತಿ । ನ ಚ ವಾಚ್ಯಮ್ – ಅಸ್ತು ದೇಹಸ್ಯೈವ ಸ್ವರೂಪೇಣಾಧ್ಯಸ್ತತ್ವಮ್।

---

**ವಿಷಯಕ್ಕೆ ಸಂದೇಹವು ಮತ್ತು ಸಮಾಧಾನಗಳು** – ಹೀಗಾಗಬಹುದು. ದೇಹಕ್ಕೆ ಆತ್ಮಭಾವವು ಹುಟ್ಟುಹಾಕಿಕೊಂಡಿರುವಂಥದ್ದೆಂದು ಏನು (ಸಿದ್ಧಾಂತಿಯು) ಹೇಳಿದನೋ ಅದು ಒಪ್ಪುವಂಥದ್ದಲ್ಲ, ಏಕೆಂದರೆ ದೇಹಾತ್ಮರುಗಳು ಪರಸ್ಪರ ಅಧ್ಯಾಸರೂಪದ್ದೆಂದರೆ ಎರಡೂ ಸುಳ್ಳು ಎಂಬ ಪ್ರಸಂಗವು ಬಂದೊದಗುತ್ತದೆ. ಇದು (ಯಾರಿಗೂ) ಇಷ್ಟವಿಲ್ಲ. ಹೇಗೆ ಕಪ್ಪೇಚಿಪ್ಪೇ ಮುಂತಾದದ್ದರಲ್ಲಿ ಬೆಳ್ಳಿಯೇ ಮುಂತಾದವುಗಳು ಯಾವಾಗಲೂ ತನ್ನ ಆಶ್ರಯದಲ್ಲಿ ಅತ್ಯಂತವಾಗಿ ಇಲ್ಲದ್ದಾಗಿರುವುದೆಂದು ಕಂಡುಬಂದಿದೆಯೋ ಹಾಗೆಯೇ ದೇಹಾತ್ಮರುಗಳೆರಡೂ ಪರಸ್ಪರ ಅಧ್ಯಸ್ತವಾದವುಗಳೆಂದಾದರೆ ಅವೂ ಅತ್ಯಂತವಾಗಿ ಅಸತ್ತಾದವುಗಳೆಂದಾಗುತ್ತವೆ. ಅಧ್ಯಸ್ತವಾದದ್ದಾದರಿಂದ ದೇಹವೂ ಸ್ವತಃ ಇರುವುದಲ್ಲ, ಅಧ್ಯಸ್ತವಾದದ್ದೇ ಆದ್ದರಿಂದ ಆತ್ಮನಲ್ಲೂ ಸಹ ದೇಹವು ಇರುವುದಲ್ಲವೆಂದೇ ಆಗುವುದು. ಹೀಗೆ ಆತ್ಮನೂ ಕೂಡ, ಅಧ್ಯಸ್ತವಾದವನೆಂಬುದು ಸಮಾನವಾದ್ದರಿಂದ ಸ್ವತಃ ಮತ್ತು ದೇಹದಲ್ಲಿ ಇಲ್ಲದೇ ಇರುವವನೇ ಆಗಿರುತ್ತಾನೆ. ಆಗ ಶೂನ್ಯವಾದವೇ ಬಂದೊದಗುತ್ತದೆ. ಆಗ ಪ್ರತಿಜ್ಞೆಮಾಡಿದ್ದು ಬಿಟ್ಟು ಹೋಗುತ್ತದೆ. ಸತ್ಯ ಮತ್ತು ಸುಳ್ಳಿನ ಸ್ವರೂಪರಾದ ಚಿದಾತ್ಮ ಮತ್ತು ಅನಾತ್ಮರುಗಳನ್ನು ಕಲಬೆರಿಕೆ ಮಾಡಿಕೊಂಡು ಲೋಕದಲ್ಲಿ ವ್ಯವಹಾರವಿರುತ್ತದೆ ಎಂದಲ್ಲವೆ ಪ್ರತಿಜ್ಞೆಮಾಡಿದ್ದು ? ದೇಹಮಾತ್ರ

ಆತ್ಮನಸ್ತು ದೇಹೇ ಸಂಸೃಷ್ಟತ್ವೇನೈವಾಧ್ಯಸ್ತತ್ವಮ್ । ತಥಾ ಚ ನೋಕ್ತ ಶಂಕಾವಕಾಶ ಇತಿ । ತಥಾಪಿ ಖಲು ದೇಹಸ್ಯಾಽಽತ್ಮನ್ಯಸತ್ವಂ ಪ್ರತ್ಯಕ್ಷವಿರುದ್ಧಂ ಪ್ರಸಜ್ಯೇತೈವ । ಆತ್ಮನಶ್ಚ ಸಂಸೃಷ್ಟತ್ವೇನೈವಾಧ್ಯಸ್ತತ್ವೇ "ಅಹಂ ಮನುಷ್ಯಃ" ಇತಿ ತಾದಾತ್ಮ್ಯಪ್ರತೀತಿರ್ನ ಸ್ಯಾದಿತಿ ತತ್ರಾಪಿ ದೃಷ್ಟವಿರೋಧಃ । ತಸ್ಮಾನ್ನ ದೇಹಾತ್ಮನೋಃ ಪರಸ್ಪರಾಧ್ಯಾಸಃ, ನ ವಾ ದೇಹಮಾತ್ರಸ್ಯಾಽಽತ್ಮನ್ಯಧ್ಯಾಸಃ। ದೃಷ್ಟವಿರೋಧಪ್ರಸಂಗಾತ್ । ತದತ್ರ ವಾಸ್ತವಿಕ ಏವ ಕಶ್ಚಿತ್ ಸಂಬಂಧಃ ಕಲ್ಪಯಿತವ್ಯಃ । ವಯಂ ತು ಪಶ್ಯಾಮೋ ವಂಶಸ್ತಂಭವತ್ ತಯೋಃ ಸಂಯೋಗ ಏವ ಸಂಬಂಧ ಇತಿ । ನ ಚಾಧ್ಯಸ್ತಾತ್ಮಭಾವೇನ ದೇಹೇನ ವಿನಾ ವ್ಯಾಪಾರಾಸಂಭವಶ್ಚಿದಾತ್ಮನಿ । ಶರೀರಾಧಿಷ್ಠಾತೃತ್ವೇನೈವ ತತ್ಸಂಭವಾತ್। ನ ಹಿ ಸ್ವವ್ಯಾಪಾರಃ ಸ್ವಾಶ್ರಿತಾಧ್ಯಸ್ತಾತ್ಮಭಾವತ್ವನಿಯತಃ । ದೃಶ್ಯಂತೇ

---

ಸ್ವರೂಪದಿಂದ ಅಧ್ಯಸ್ತವಾದದ್ದು, ಆತ್ಮನಾದರೋ ದೇಹದಲ್ಲಿ ಸಂಸೃಷ್ಟ(ತಗಳಿಕೊಂಡ)ರೂಪದಿಂದ ಅಧ್ಯಸ್ತನಾದವನು (ಸ್ವತಃ ಅಲ್ಲ) ಎಂದು ಹೇಳಿದರೆ ಮೇಲೆ ಹೇಳಿದ ಸಂದೇಹ ಬರುವುದಿಲ್ಲ ಎಂದು ಹೇಳಬಾರದು. ಏಕೆಂದರೆ ಆತ್ಮಸ್ವರೂಪಕ್ಕೆ ದೇಹವು ಸೇರಿಲ್ಲವೆಂದರೆ ಪ್ರತ್ಯಕ್ಷಕ್ಕೆ ವಿರುದ್ಧವಾಗುತ್ತದೆ, ಹಾಗೆಯೇ ಆತ್ಮನು (ದೇಹದೊಡನೆ) ಸಂಸೃಷ್ಟರೂಪ-ದಿಂದಲೇ ಅಧ್ಯಸ್ತನಾದವನೆಂದಾದರೆ "ನಾನು ಮನುಷ್ಯನು" ಎಂದು (ದೇಹದೊಡನೆ) ತಾದಾತ್ಮ್ಯಜ್ಞಾನವಿರಬಾರದಾಗಿತ್ತು ಎಂದಾಗಿ ಅಲ್ಲೂ ದೃಷ್ಟವಿರೋಧವಾಗುತ್ತದೆ. ಆದ್ದರಿಂದ ಕಂಡದ್ದಕ್ಕೆ ವಿರೋಧವಾಗುವುದೆಂಬ ಸಂದರ್ಭವುಂಟಾಗುವುದರಿಂದ ದೇಹಾತ್ಮರುಗಳಿಗೆ ಪರಸ್ಪರ ಅಧ್ಯಾಸವೆಂಬುದು ಸರಿಯಲ್ಲ. ಹಾಗೂ ದೇಹವಷ್ಟೇ ಆತ್ಮನಲ್ಲಿ ಅಧ್ಯಸ್ತಗೊಂಡಿದೆ ಎಂಬುದೂ ಸರಿಯಲ್ಲ. ಆದ್ದರಿಂದ ಇಲ್ಲಿ ವಾಸ್ತವಿಕವಾದ ಒಂದಾನೊಂದು ಸಂಬಂಧವನ್ನು ಕಲ್ಪಿಸಿಕೊಳ್ಳಬೇಕು. ನಾವಾದರೋ ಬಿದರಿಗೂ ಕಂಬಕ್ಕೂ ಇರುವ ಸಂಬಂಧದಂತೆ ಸಂಯೋಗರೂಪವಾದ ಸಂಬಂಧವೇ ಇರಬೇಕೆಂದು ನಾವು ತಿಳಿಯುವೆವು. "ನಾನು" ಎಂದು ತಪ್ಪಾಗಿ ತಿಳಿದುಕೊಂಡಿರುವ ದೇಹವಿಲ್ಲದೇ ಚಿದಾತ್ಮನಲ್ಲಿ ವ್ಯಾಪಾರವಿಲ್ಲವೆಂಬುದಿಲ್ಲ. ಏಕೆಂದರೆ ಅವನು ಶರೀರಕ್ಕೆ ಅಧಿಷ್ಠಾತೃವಾಗಿದ್ದಾನೆ ಎಂಬುದರಿಂದಲೇ, ಅದು ಹೊಂದಬಹುದಾಗಿದೆ. ತನ್ನ ವ್ಯಾಪಾರವೆಂಬುದು, ತನ್ನನ್ನಾಶ್ರಯಿಸಿದ್ದರೊಡನೆ ಅಧ್ಯಾಸವಾಗಿಯೇ

ಹ್ಯಾನಧ್ಯಸ್ತಾತ್ಮಭಾವಮಪಿ ವೀರಣಾದಿಕಂ ವ್ಯಾಪಾರಯಂತಃ ಕಟಕರ್ತ್ರಾದಯಃ। ತಸ್ಮಾದಯುಕ್ತಮುಕ್ತಂ "ನ ಚಾನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ವ್ಯಾಪ್ರಿಯತ ಇತೀ"ತಿ ॥

ಅತ್ರೋಚ್ಯತೇ । ಸರ್ವಮೇವೇದಮಯುಕ್ತಮ್ । ಯತ್ತಾವದುಚ್ಯತೇ ದೇಹಾದೇರನ್ಯೋನ್ಯಾಧ್ಯಾಸೇ ಉಭಯೋರಪ್ಯಸತ್ವಪ್ರಸಂಗ ಇತಿ । ತದಸತ್। ಅಸಗತ್ವಾದಾತ್ಮನಃ । ಸರ್ವಸಂಗರಹಿತ ಖಲ್ವಾತ್ಮೇಷ್ಯತೇ । ನ ಚ ತಸ್ಯಾಽಧ್ಯಾಸಮಾತ್ರೇಣಾಸತ್ವಂ ಪ್ರಸಂಜಯಿತುಂ ಶಕ್ಯತೇ । ನನು ಸರ್ವಥಾ ಚೇದಸಂಗಃ, ಕಥಂ ತರ್ಹಿ ತಸ್ಯ ದೇಹೇಽಧ್ಯಾಸಃ ? ನ ಚೇದಧ್ಯಾಸಃ ಕಥಂ ವಾಽಧ್ಯಸ್ತಾತ್ಮಭಾವೋ ದೇಹ ಇತಿ ? ಸತ್ಯಮ್, ಅಧ್ಯಸ್ತಾತ್ಮಭಾವ ಏವ ದೇಹಃ । ತೇನ ತು ದೇಹೇ ಅಧ್ಯಸ್ತಾತ್ಮನ ಏವಾಸತ್ವಂ ಸ್ಯಾನ್ನ ಪುನರಸಂಗಾತ್ಮನೋಽಪಿ । ಅಧ್ಯಸ್ತಾತ್ಮಾತ್ವಾಭಾಸಮಾತ್ರಮಿತಿ ತಸ್ಯಾಽಸತ್ವೇಽಪಿ ನ ಕ್ಷತಿಃ ।

---

ಆಗಬೇಕೆಂಬುದು ನಿಯಮವಲ್ಲವಷ್ಟೆ? ಚಾಪೆ ಮಾಡುವವರೇ ಮೊದಲಾದವರು ಚಾಪೆಹುಲ್ಲೇ ಮೊದಲಾದವುಗಳಲ್ಲಿ ನಾನೆಂಬ ಅಭಿಮಾನವಿಲ್ಲದವರಾಗಿ ಕೆಲಸವನ್ನು ಮಾಡುತ್ತಾರೆಂಬುದೂ ಕಂಡುಬಂದಿದೆಯಷ್ಟೆ? ಆದ್ದರಿಂದ ಆತ್ಮಭಾವವನ್ನು ಮಾಡಿಕೊಳ್ಳದೇ ಇರುವ ದೇಹದಿಂದ ಯಾವನೂ ವ್ಯಾಪಾರವನ್ನು ಮಾಡಲಾರನು ಎಂದು ಹೇಳಿದ್ದು ಸರಿಯಾಗಲಿಲ್ಲವಲ್ಲಾ ! ಎಂದರೆ ಇದಕ್ಕೆ ಹೇಳುತ್ತೇವೆ.

ಇದೆಲ್ಲವೂ ಸರಿಯಲ್ಲದ್ದು, ದೇಹಾದಿಗಳಿಗೆ ಅನ್ಯೋನ್ಯಾಧ್ಯಾಸವಾದರೆ ಎರಡೂ ಅಸತ್ತೆಂದಾಗುತ್ತದೆ ಎಂದು ಏನು (ಪೂ. ಪ) ಹೇಳಿತ್ತು, ಅದು ಸರಿಯಲ್ಲ. ಏಕೆಂದರೆ ಆತ್ಮನು ಅಸಂಗನು. ಯಾವ ಪ್ರಕಾರದ ಸಂಗವಿಲ್ಲದವನೇ ಅಲ್ಲವೆ ಆತ್ಮನು ? ಅಧ್ಯಾಸಮಾತ್ರದಿಂದ ಆ ಆತ್ಮನು ಇಲ್ಲದವನೆಂದು ತೀರ್ಮಾನಿಸಲಾಗಲಾರದು. (ಪೂ. ಪ) ಅಲ್ಲಾ ! ಸಂಪೂರ್ಣವಾಗಿ ಅಸಂಗನಾಗಿದ್ದರೆ ದೇಹದಲ್ಲಿ ಅಧ್ಯಾಸವಾದದ್ದಾದರೂ ಹೇಗೆ? ಅಧ್ಯಾಸವಾಗಿಲ್ಲವೆಂದಾದರೆ ದೇಹವು ಅಧ್ಯಸ್ತಾತ್ಮಭಾವವಾಗಿದೆ ಎಂಬುದು ಹೇಗೆ ? (ಸಿದ್ಧಾಂತಿ), ಹೌದು, ದೇಹವು ಅಧ್ಯಸ್ತಾತ್ಮಭಾವವೇ ಆಗಿದೆ. ಆದ್ದರಿಂದ ದೇಹದಲ್ಲಿ ಅಧ್ಯಸ್ತನಾದ ಆತ್ಮನದೇ ಇಲ್ಲದಿರುವಿಕೆಯೇ ಹೊರತು ಅಸಂಗನಾದ ಆತ್ಮನದಲ್ಲ. ಅಧ್ಯಸ್ತಾತ್ಮನಾದರೋ ಆಭಾಸಮಾತ್ರ (ತೋರಿಕೆ

ನ ಚೈವಂ ದೇಹಸ್ಯಾಪಿ ಸತ್ವಪ್ರಸಂಗಃ । ಆತ್ಮನ್ಯಧ್ಯಸ್ತಾದ್ದೇಹಾದನ್ಯಸ್ಯ ದೇಹಸ್ಯಾಽನಿರೂಪಣಾತ್ । ಯಚ್ಚೋಚ್ಯತೇ ದೇಹಸ್ಯಾಽಽತ್ಮನ್ಯಸತ್ವೇ ಪ್ರತ್ಯಕ್ಷವಿರೋಧ ಇತಿ । ತದಪ್ಯಸತ್ । ಆತ್ಮನಃ ಪ್ರತ್ಯಕ್ಷೇಣಾಽಗ್ರಹಣಾತ್ । ನ ಹಿ ಪ್ರತ್ಯಕ್ಷೇಣಾಽಽತ್ಮಾ ತದಧಿಕರಣಕತ್ವೇನ ದೇಹೋ ವಾ ದೃಷ್ಟಃ ಯೇನ ವಿರೋಧಃ ಸ್ಯಾತ್ । ಯತ್ಪುನರುಚ್ಯತೇ ವಂಶಸ್ತಂಭಾದಿವನ್ನಿತ್ಯಸಂಯುಕ್ತೌ ದೇಹಾತ್ಮನೌ ಭವಿಷ್ಯತ ಇತಿ । ತದತಿದವೀಯಃ । ಕಥಮ್ ? ವಂಶಾನಾಂ ಸ್ತಂಭಾನಾಂ ಚಾಽಽಧಾರಾಧೇಯಭಾವೇನ ಸಂಯೋಗೋ ದೃಷ್ಟಃ । ತೇನ ಚ "ಗೃಹಮ್" ಇತ್ಯೇಕಪ್ರತ್ಯಯವಿಷಯತ್ವಂ ತಯೋಃ । ಇಹ ಪುನರ್ನ ದೇಹಾತ್ಮನೋಃ ಪೃಥಕ್ ಸಿದ್ಧಿಃ ಸಂಯೋಗವಿಶೇಶೋ ವಾ ದೃಷ್ಟೋಽಸ್ತಿ, ಯೇನ "ಅಹಂ ಪ್ರಮಾತಾ" ಇತ್ಯಾದಿವ್ಯವಹಾರೋಽಪಿ ಸಂಯೋಗ-ಪ್ರಯುಕ್ತೋ ವ್ಯಾಖ್ಯಾಯೇತ । ಅಪಿ ಚ ಸಮಾನಜಾತೀಯಾನಾಂ

---

ಮಾತ್ರ)ವಾಗಿರುವದರಿಂದ ಅದು ಸುಳ್ಳಾದರೂ ಹಾನಿ ಇಲ್ಲ. ಆದರೆ ಹೀಗೆ ದೇಹವೂ ಇದೆ ಎಂದಾಗುವುದಿಲ್ಲ.

ಆತ್ಮನಲ್ಲಿ ಅಧ್ಯಸ್ತವಾದ ದೇಹಕ್ಕಿಂತ ಮತ್ತೊಂದು ದೇಹವನ್ನು ಗೊತ್ತುಮಾಡಿರುವದಿಲ್ಲ. ಆತ್ಮಸ್ವರೂಪದಲ್ಲಿ ದೇಹವಿಲ್ಲವೆಂದಾದರೆ ಪ್ರತ್ಯಕ್ಷ ವಿರೋಧವಾಗುತ್ತದೆ ಎಂದು (ಏನು) ಹೇಳಿತ್ತು. ಅದೂ ಸರಿಯಲ್ಲ. ಆತ್ಮನು ಪ್ರತ್ಯಕ್ಷವಾಗಿ ತೋರಿಬರದವನಾಗಿರುತ್ತಾನೆ. ಆತ್ಮನು ಪ್ರತ್ಯಕ್ಷವಾಗಿ ಆಗಲೀ ಆತನಿಗೆ ಅಧಿಕರಣವಾಗಿ ದೇಹವಾಗಲೀ ಕಂಡದ್ದಿಲ್ಲ, ಹಾಗಿದ್ದರೆ ವಿರೋಧವಾಗಬಹುದಾಗಿತ್ತು. ಬಿದಿರು (ತೊಲೆ) – ಕಂಬಗಳಂತೆ ದೇಹಾತ್ಮರುಗಳು ನಿತ್ಯವಾಗಿ ಕೂಡಿಕೊಂಡವರಾಗಿರಬಹುದಲ್ಲಾ! ಎಂದು (ಪೂ.ಪ) ಏನುಹೇಳಿತ್ತು, ಆ ಮಾತು ಅತಿ ದೂರದ (ಮಾತಾಗುತ್ತದೆ), ಹೇಗೆಂದರೆ ಬಿದಿರಿಗೂ(ತೊಲೆಗೂ), ಕಂಬಗಳಿಗೂ ಆಧಾರಾಧೇಯರೂಪದಿಂದ ಸಂಬಂಧವು ಕಂಡಿದೆ. ಆದ್ದರಿಂದ "ಮನೆ" ಎಂಬ ಒಂದು ಪ್ರತ್ಯಯಕ್ಕೆ ಅವೆರಡೂ ವಿಷಯವಾಗಿರುತ್ತವೆ. ಇಲ್ಲಾದರೋ ದೇಹಾತ್ಮರುಗಳಿಗೆ ಬೇರೆ ಸಿದ್ಧಿಯಾಗಲೀ ಸಂಯೋಗದ ವಿಶೇಷವಾಗಲೀ ಕಂಡಿರುವದಿಲ್ಲ, ಹಾಗಿದ್ದರೆ 'ನಾನು ಪ್ರಮಾತೃವು' ಎಂಬಿವೇ ಮುಂತಾದ ವ್ಯವಹಾರವೂ ಸಂಯೋಗಪೂರ್ವಕವಾಗಿಯೇ ಆಗಿರುವುದೆಂದು ಹೇಳಬೇಕಾಗಿತ್ತು.

ಸ್ಪರ್ಶಾದಿಮತಾಂ ಚ ವಂಶಸ್ತಂಭಾದೀನಾಂ ಸಂಯೋಗೋ ದೃಷ್ಟಃ । ಇಹ ಪುನರ್ದೇಹಾತ್ಮಾನೌ ನ ಸಮಾನಜಾತೀಯೌ, ಆತ್ಮಾ ಚ ನಿರವಯವಃ ಸ್ಪರ್ಶಾದಿರಹಿತಶ್ಚೇತಿ ವೈಷಮ್ಯಮ್ । ಅಭ್ಯುಪಗತೇ ಚ ಸಂಯೋಗೇ ದೇಹಾತ್ಮನೋರ್ವಂಶಸ್ತಂಭಾದಿವತ್ ಪಾರಾರ್ಥ್ಯಮನಿತ್ಯತ್ವಂ ಚ ಪ್ರಸಜೇತ್। ತಚ್ಚಾನಿಷ್ಟಂ ಸರ್ವೇಷಾಮಪ್ಯಾತ್ಮವಾದಿನಾಮ್ । ತಸ್ಮಾದ್ದೃಷ್ಟಾಂತ-ದಾರ್ಷ್ಟಾಂತಿಕಯೋರ್ವೈಷಮ್ಯಾನ್ನ ದೇಹಾತ್ಮನೋಃ ಸಂಯೋಗೋ ಭವಿತುಮರ್ಹತಿ । ನ ಚ ಸಮವಾಯಃ ಸಂಭವತಿ । ದೇಹಾತ್ಮನೋರ್ಗುಣ-ಗುಣಿತ್ವಕಾರ್ಯಕಾರಣತ್ವಾದ್ಯನಭ್ಯುಪಗಮಾತ್ । ವೈಶೇಷಿಕಾದಿಪರಿಭಾಷಾ-ಮಾತ್ರಸಿದ್ಧತ್ವಾಚ್ಚ ಸಮವಾಯಸ್ಯ । ತಸ್ಮಾನ್ನ ಕೋಽಪ್ಯಸ್ತಿ ವಾಸ್ತವಿಕಃ ಸಂಬಂಧಃ। ನ ಚ ಸಂಬಂಧಂ ವಿನಾ ದೇಹವ್ಯಾಪಾರೇಣ ವ್ಯಾಪಾರವಾನ್ ಭವಿತು-ಮರ್ಹತ್ಯಾತ್ಮಾ । ಯತ್ ಪುನರುಕ್ತಂ ಶರೀರಾಧಿಷ್ಠಾತೃತ್ವೇನೈವ ದೇಹಾದಿ-ವ್ಯಾಪಾರಯಿತೃತ್ವಂ ಸಂಭವತೀತಿ । ತದಪ್ಯೇತೇನ ಪ್ರತ್ಯುಕ್ತಂ ಭವತಿ ।

ಅಷ್ಟೇಅಲ್ಲ, ಸ್ಪರ್ಶಾದಿಗುಣವುಳ್ಳ ಸಮಾನಜಾತಿಯದಾದ ಬಿದುರುಕಂಬಗಳಿಗೆ ಸಂಯೋಗವೆಂಬುದು ಕಂಡಿರುತ್ತದೆ. ಇಲ್ಲಾದರೋ ದೇಹ ಮತ್ತು ಆತ್ಮರುಗಳು ಸಮಾನಜಾತಿಯವರಲ್ಲ, ಮತ್ತು ಆತ್ಮನು ನಿರವಯವನು, ಸ್ಪರ್ಶಾದಿಗಳಿಲ್ಲದವನು ಎಂದಾದ್ದರಿಂದ ವ್ಯತ್ಯಾಸವಿರುತ್ತದೆ. ಬಿದಿರುಕಂಬಗಳಂತೆ ಆತ್ಮ ಮತ್ತು ದೇಹಗಳಿಗೆ ಸಂಯೋಗರೂಪವಾದ ಸಂಬಂಧವನ್ನು ಒಪ್ಪಿಕೊಂಡರೂ ಪಾರಾರ್ಥ್ಯವೂ, ಅನಿತ್ಯವಾದದ್ದೂ ಎಂಬ (ದೋಷವು) ಬಂದೊದಗುತ್ತದೆ. ಆತ್ಮವಾದಿಗ-ಳಾದವರೆಲ್ಲರಿಗೂ ಇದು ಇಷ್ಟವಲ್ಲದ್ದು. ಆದ್ದರಿಂದ ದೃಷ್ಟಾಂತದಾರ್ಷ್ಟಾಂತಿಕ-ಗಳಿಗೆ ವ್ಯತ್ಯಾಸವಿರುವದರಿಂದ ದೇಹಾತ್ಮರುಗಳಿಗೆ ಸಂಯೋಗವಿರುವುದು ಸಾಧ್ಯವಿಲ್ಲ. ದೇಹಾತ್ಮರುಗಳಿಗೆ ಗುಣಗುಣಿತ್ವವನ್ನಾಗಲೀ ಕಾರ್ಯಕಾರಣತ್ವ-ವನ್ನಾಗಲೀ ಒಪ್ಪದಿರುವದರಿಂದ ಸಮವಾಯಸಂಬಂಧವಾಗಿರಲೂ ಸಾಧ್ಯವಿಲ್ಲ. ಸಮವಾಯ ವೆಂಬುದು ತಾರ್ಕಿಕರ ಪರಿಭಾಷೆಯಲ್ಲಿ ಮಾತ್ರ ಸಿದ್ಧವಾಗಿರು-ವಂಥದ್ದಾಗಿದೆ. ಆದ್ದರಿಂದ ಯಾವ ವಾಸ್ತವಿಕ ಸಂಬಂಧವೂ ಇಲ್ಲಿಲ್ಲ. ಸಂಬಂಧವಿಲ್ಲದೆ ಆತ್ಮನು ದೇಹವ್ಯಾಪಾರದಿಂದ ವ್ಯಾಪಾರವಂತನು ಆಗಲಾರನು. ಶರೀರಾದಿಗಳಿಗೆ ಅಧಿಷ್ಠಾತೃವಾದ್ದರಿಂದಲೇ ದೇಹಾದಿಗಳನ್ನು ವ್ಯಾಪಾರಮಾಡುವವನೆಂದಾಗಬಹುದಲ್ಲಾ.! ಎಂದು (ಪೂ.ಪ) ಏನು ಹೇಳಿತ್ತು.

ಅಧಿಷ್ಠಾತೃತ್ವಸ್ಯಾಽದ್ಯಾಪ್ಯಸಿದ್ಧತ್ವಾತ್ । ನ ಹಿ ಶರೀರಾಧಿಷ್ಠಾತೃತೋಽಪಪಾದಕಃ ಕೋಽಪಿ ವಾಸ್ತವಿಕಃ ಸಂಬಂಧೋಽದ್ಯಾಪಿ ಸಾಧಿತೋಽಸ್ತಿ । ಕಟಕರ್ತೃ-ನಿದರ್ಶನಂ ತು ವೈಷಮ್ಯಾದೇವೋಪೇಕ್ಷ್ಯಮ್ । ಕಟಕರ್ತಾ ಹಿ ಸ್ವಯಂ ವ್ಯಾಪಾರವಾನ್ ವೀರಣಾದಿಕಂ ವ್ಯಾಪಾರಯತಿ । ಇಹ ಪುನರಾತ್ಮಾ ಸ್ವಯಂ ವ್ಯಾಪಾರಾಭಾವವಾನ್ ಅಸಂಗಶ್ಚೇತಿ ವೈಷಮ್ಯಮ್ । ನ ಚ ಶಂಕಿತವ್ಯಮ್-ಆತ್ಮಾಪ್ಯಾತ್ಮೀಯೈಃ ಸ್ಮೃತೀಚ್ಛಾಪ್ರಯತ್ನೈಃ ಕರ್ಮಹೇತುಭಿಃ ಸ್ವಯಂ ವ್ಯಾಪಾರವಾನೇವೇತಿ । ತೇಷಾಮಪ್ಯಧ್ಯಾಸಪೂರ್ವಕತ್ವಾತ್ । ಅಧ್ಯಾಸ-ನಿಮಿತ್ತೇಷ್ಟಾನಿಷ್ಟರೂಪಕ್ರಿಯಾಫಲಾನುಭವಜನಿತಸಂಸ್ಕಾರನಿಬಂಧನಾ ಹಿ ಸ್ಮೃತ್ಯಾದಯಃ । ಸೋಽಪಿ ಪೂರ್ವತನಃ ಕ್ರಿಯಾಫಲಾನುಭವಃ ಪ್ರಮಾಣ-ವ್ಯಾಪಾರಮೂಲಕತ್ವಾತ್ ಸಮಾಕ್ಷಿಪತ್ಯೇವ ಪ್ರಮಾಣಪ್ರವೃತ್ತಿಮೂಲಂ ದೇಹಾಧ್ಯಾಸಮ್ । ಅತೋ ನ ಕುತ್ರಾಪಿ ಸ್ವತೋ ವ್ಯಾಪಾರವತ್ವಂ ಶಕ್ಯಶಂಕ-

---

ಅದೂ ಇಷ್ಟನ್ನು ಹೇಳಿದ್ದರಿಂದ (ಉತ್ತರ)ಹೇಳಿದಂತಾಯಿತೆಂದು (ತಿಳಿಯಬೇಕು). ಅಧಿಷ್ಠಾತೃವಾಗಿದ್ದಾನೆಂಬುದು ಇಂದಿಗೂ ಸಿದ್ಧವಾಗಿಲ್ಲ. (ಆತ್ಮನು) ಶರೀರಾದಿಗಳಿಗೆ ಅಧಿಷ್ಠಾತೃವಾಗಿದ್ದಾನೆಂಬುದಕ್ಕೆ ವಾಸ್ತವಿಕವಾದ ಯಾವ ಸಂಬಂಧವನ್ನು ಈವರೆಗೂ ಸಾಧಿಸಿಕೊಟ್ಟಿಲ್ಲ. ಚಾಪೆ ಮಾಡುವ ದೃಷ್ಟಾಂತವಾದರೋ ವಿಷಮವಾದ್ದರಿಂದ ಅದನ್ನು ಉಪೇಕ್ಷಿಸಬೇಕು. ಚಾಪೆ ಮಾಡುವವನು ತಾನು ವ್ಯಾಪಾರವುಳ್ಳವನಾಗಿ ಚಾಪೆಯ ಕಡ್ಡಿಗಳನ್ನು ಕುರಿತು ವ್ಯಾಪಾರಮಾಡಿಸುತ್ತಾನೆ. ಇಲ್ಲಾದರೋ ಆತ್ಮನು ತಾನು ವ್ಯಾಪಾರ-ವಿಲ್ಲದವನೂ ಮತ್ತು ಅಸಂಗನೂ ಆಗಿರುತ್ತಾನೆ ಎಂದು ವ್ಯತ್ಯಾಸವು. ಆತ್ಮನೂ ಸಹ ತನ್ನದಾದ ಕರ್ಮಕ್ಕೆ ಕಾರಣವಾದ ಸ್ಮೃತೀಚ್ಛಾಪ್ರಯತ್ನಗಳಿಂದ ವ್ಯಾಪಾರವುಳ್ಳವನೇ ಎಂದು ಸಂದೇಹವನ್ನು ಪಡಬಾರದು. ಅವು ಅಧ್ಯಾಸಪೂರ್ವಕವಾಗಿ ಆದವುಗಳಾಗಿವೆ. ಸ್ಮೃತ್ಯಾದಿಗಳು ತಪ್ಪುತಿಳಿ-ವಳಿಕೆಯನ್ನು ನಿಮಿತ್ತಮಾಡಿಕೊಂಡು ಇಷ್ಟಾನಿಷ್ಟರೂಪವಾದ ಕ್ರಿಯೆಯ ಫಲವನ್ನು ಅನುಭವಿಸುವುದರಿಂದುಂಟಾದ ಸಂಸ್ಕಾರಕ್ಕೆ ಕಟ್ಟುವಡೆದವುಗಳಾಗಿವೆ. ಆ ಹಿಂದಿನ ಕ್ರಿಯಾಫಲದ ಅನುಭವವೂ ಸಹ ಪ್ರಮಾಣದ ವ್ಯಾಪಾರವನ್ನು ಮುಂದುಮಾಡಿಕೊಂಡು ಆಗುವುದರಿಂದ ಪ್ರಮಾಣಗಳ ಪ್ರವೃತ್ತಿಗೆ ಮೂಲವಾದ ಅಧ್ಯಾಸವನ್ನು ಹಾಕಿಕೊಂಡೇ ತೀರುತ್ತದೆ. ಆದ್ದರಿಂದ ಎಲ್ಲೂ ಸ್ವತಃ ಆತ್ಮನಲ್ಲಿ ವ್ಯಾಪಾರವಿದೆ ಎಂಬುದನ್ನು ಊಹಿಸಿ ತಿಳಿಯಲಾಗಲಾರದು. ಹೀಗೆ ಅಸಂಗ-

ಮಾತ್ಮನಿ । ತದೇವಮಸಂಗತ್ವಾನ್ನಾಧ್ಯಾಸಂ ವಿನಾ ದೇಹವ್ಯಾಪಾರೇಣಾಽಽತ್ಮನಿ ವ್ಯಾಪೃತತ್ವಂ ಸಂಭವತೀತಿ ಸಮ್ಯಗೇವೋಕ್ತಂ "ನಾನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ವ್ಯಾಪ್ರಿಯತ" ಇತ್ಯಲಮತಿವಿಸ್ತರೇಣ ॥

**೪೩. ಪ್ರಮಾಣಾನಾಮವಿದ್ಯಾಪುರಸ್ಸರತ್ವೋಪಪಾದನೋಪಸಂಹಾರಃ** – ಏವಂ ತಾವದಿದಮುಪಪಾದಿತಂ ಯದಿಂದ್ರಿಯವ್ಯಾಪಾರಂ ವಿನಾ ನ ಪ್ರತ್ಯಕ್ಷಾದಿವ್ಯವಹಾರಃ ಸಿಧ್ಯತಿ । ಇಂದ್ರಿಯಾಣಿ ಚ ಸ್ವಾಧಿಷ್ಠಾನಂ ದೇಹಮಾಕ್ಷಿಪಂತಿ । ಆತ್ಮನಿ ವ್ಯಾಪಾರಶ್ಚ ಇಂದ್ರಿಯಾಧಿಷ್ಠಾನಭೂತದೇಹಸ್ಯಾಧ್ಯಸ್ತಾತ್ಮತಾಮಪೇಕ್ಷತ ಇತಿ । ಅಥ ಮಾ ಭೂದಿಂದ್ರಿಯಾಣಾಂ ವ್ಯಾಪಾರಃ, ತದಧಿಷ್ಠಾನಸ್ಯಾಧ್ಯಸ್ತತಾ, ತದ್ದ್ವಾರಾ ಆತ್ಮನಿ ವ್ಯಾಪೃತತ್ವಂ ವಾ, ಕಿಂ ತಾವತಾಽನಿಷ್ಟಮಾಪದ್ಯತೇ ? ತತ್ರೋತ್ತರಮ್ – ನ ಚೈತಸ್ಮಿನ್ ಸರ್ವಸ್ಮಿನ್ನಸತ್ಯಸಂಗಸ್ಯಾತ್ಮನಃ ಪ್ರಮಾತೃತ್ವಮುಪಪದ್ಯತೇ । ಪ್ರಮಾತೃತ್ವಂ ಹಿ ಪ್ರಮಾಣವ್ಯಾಪಾರಯಿತೃತ್ವಮ್ । ತಚ್ಚಾಸಂಗಸ್ಯಾತ್ಮನೋ ನೋಪಪದ್ಯತೇ

---

ನಾದ್ದರಿಂದ ಅಧ್ಯಾಸವಿಲ್ಲದೇ ದೇಹವ್ಯಾಪಾರದಿಂದ ಆತ್ಮನಲ್ಲಿ ವ್ಯಾಪಾರವಿದೆ ಎಂಬುದು ಹೊಂದುವುದಿಲ್ಲ ಎಂದು ಹೇಳಿದ್ದು ಸರಿಯಾಯಿತೆಂದಾದ್ದರಿಂದ (ಇಲ್ಲಿ) ಹೆಚ್ಚಾಗಿ ವಿವರಿಸುವುದು ಸಾಕು.

**೪೩. ಪ್ರಮಾಣಗಳು ಅವಿದ್ಯಾಪುರಃಸರವಾಗಿವೆ ಎಂಬ ವಿಚಾರದ ಉಪಸಂಹಾರವು** – ಹೀಗೆ ಇಂದ್ರಿಯವ್ಯಾಪಾರವಿಲ್ಲದೇ ಪ್ರತ್ಯಕ್ಷಾದಿ ವ್ಯವಹಾರವು ಸಿದ್ಧಿಸುವುದಿಲ್ಲ ಎಂಬುದನ್ನು ತೋರಿಸಿಕೊಟ್ಟದ್ದಾಯಿತು. ಇಂದ್ರಿಯಗಳು ತಮಗೆ ಅಧಿಷ್ಠಾನವಾದ ದೇಹವನ್ನು (ತಮ್ಮ ವ್ಯಾಪಾರಕ್ಕೆ) ಬಳಸಿಕೊಳ್ಳುತ್ತವೆ. ಆತ್ಮನಲ್ಲಿ ವ್ಯಾಪಾರವೆಂಬುದು, ಇಂದ್ರಿಯಗಳಿಗೆ ಅಧಿಷ್ಠಾನವಾದ ದೇಹದೊಡನೆ ತಪ್ಪುತಿಳಿವಳಿಕೆಯನ್ನು ಮಾಡಿಕೊಳ್ಳುವುದನ್ನು ಅಪೇಕ್ಷಿಸುತ್ತದೆ. ಇನ್ನು ಇಂದ್ರಿಯಗಳ ವ್ಯಾಪಾರವೂ ಬೇಡ, ಅದರ ಅಧಿಷ್ಠಾನವು ಅಧ್ಯಸ್ತವಾದದ್ದೆಂಬುದೂ, ಅದರ ಮೂಲಕವಾಗಿಯೇ ಆತ್ಮನಲ್ಲಿ ವ್ಯಾಪಾರವಿರುವುದೆಂಬುದೂ ಬೇಡ, ಅಷ್ಟು ಮಾತ್ರದಿಂದ ಏನು ಅನಿಷ್ಟವಾದೀತು ? ಎಂದರೆ ಅದಕ್ಕೆ ಉತ್ತರವು "ನ ಚೈತಸ್ಮಿನ್ ಸರ್ವಸ್ಮಿನ್ನಸತಿ.... ಉಪಪದ್ಯತೇ" ಎಂದಿರುತ್ತಾರೆ. ಪ್ರಮಾತೃತ್ವವೆಂದರೆ ಪ್ರಮಾಣಗಳನ್ನು ವ್ಯಾಪಾರಮಾಡುವುದು. ಅದು ಸ್ವತಃ ಅಸಂಗನಾದ ಆತ್ಮನಿಗೆ ಹೊಂದುವುದಿಲ್ಲ. ಅಸಂಗವೆಂದರೆ

ಸ್ವತಃ । ಅಸಂಗತ್ವಂ ಚ ದ್ವಿತೀಯಸಂಸರ್ಗಾಯೋಗ್ಯತ್ವಮ್। ತಚ್ಚೋಪಪಾದಿತಮಧಸ್ತಾತ್ ಸಂಕ್ಷೇಪೇಣೇತಿ ॥

ಅಥ ಪ್ರಮಾತೃತ್ವಮಪಿ ಮಾಸ್ತು ಕಿಂ ಹೀಯತೇ ? ತತ್ರಾಹ – **ನ ಚ ಪ್ರಮಾತೃತ್ವಮಂತರೇಣ ಪ್ರಮಾಣಪ್ರವೃತ್ತಿರಸ್ತಿ ।** ಪ್ರಮಾಣಾನಿ ಸ್ವವಿಷಯೇಷು ಪ್ರವರ್ತನೇ ಸ್ವಯಮಸಮರ್ಥಾನಿ ಪ್ರವರ್ತಕಂ ಪ್ರಮಾತಾರಂ ಕಾಙ್ಕ್ಷಂತ ಇತ್ಯುಕ್ತಮ್ । ಅತೋ ಯಮಾಶ್ರಿತ್ಯ ತಾನಿ ಪ್ರವರ್ತೇರನ್ ಸ ಚೇದಾತ್ಮಾ ಪ್ರಮಾತೃತ್ವರಹಿತಃ ಕೃತಂ ತತ್ಪ್ರವೃತ್ತಿಪ್ರತ್ಯಾಶಯೇತ್ಯರ್ಥಃ । ನ ಚ ದೇಹಮಾತ್ರಮೇವಾಽಲಂ ಪ್ರಮಾತೃತ್ವನಿರ್ವಾಹಾಯ । ಸುಪ್ತದೇಹಸ್ಯಾಪಿ ಪ್ರಮಾಣವ್ಯಾಪಾರಯಿತೃತ್ವಪ್ರಸಂಗಾತ್ । ತದೇತತ್ಸರ್ವಮಭಿಪ್ರೇತ್ಯ ಸಂಗ್ರಹವಾಕ್ಯೇಽಭಿಹಿತಮ್ – ದೇಹೇಂದ್ರಿಯಾದಿಷ್ವಹಂಮಮಾಭಿಮಾನ-ರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇರಿತಿ ॥

---

ಇನ್ನೊಂದರೊಡನೆ ಸಂಸರ್ಗವಾಗುವುದಕ್ಕೆ ಅಯೋಗ್ಯವಾಗದಿರುವುದು. ಅದನ್ನು ಈ ಮೇಲೆ ಸಂಕ್ಷೇಪವಾಗಿ ತೋರಿಸಿಕೊಟ್ಟದ್ದಾಗಿದೆ.

ಇನ್ನು ಪ್ರಮಾತೃತ್ವವೂ ಬೇಡ, (ಅದರಿಂದ) ಏನು ತೊಂದರೆ ? ಎಂದರೆ ಅದಕ್ಕೆ ಹೇಳುತ್ತಾರೆ "ಪ್ರಮಾತೃತ್ವವಿಲ್ಲದೇ ಪ್ರಮಾಣಗಳ ಪ್ರವೃತ್ತಿ ಇಲ್ಲ" ಎಂದು. ಸ್ವತಃ ಪ್ರಮಾಣಗಳು ತಾವೇ ತಮ್ಮ ವಿಷಯದಲ್ಲಿ ತೊಡಗುವುದರಲ್ಲಿ ಅಸಮರ್ಥರು. ತಮ್ಮನ್ನು ತೊಡಗಿಸುವ ಪ್ರಮಾತೃವನ್ನು (ಅವು) ಬಯಸುತ್ತವೆ ಎಂದು ಹೇಳಿದ್ದಾಯಿತು. ಆದ್ದರಿಂದ ಯಾವುದನ್ನಾಶ್ರಯಿಸಿ ಅವುಗಳು ತೊಡಗುವವೋ ಆ ಆತ್ಮನು ಪ್ರಮಾತೃತ್ವರಹಿತನು ಎಂದಾದರೆ ಅವುಗಳ ಪ್ರವೃತ್ತಿಯ ಆಶೆಯನ್ನು ಬಿಟ್ಟರಾಯಿತು. (ಏಕೆಂದರೆ) – ಪ್ರಮಾತೃತ್ವವನ್ನು ನಿರ್ವಹಿಸಲು ದೇಹವಷ್ಟೇ ಸಾಕೆಂಬುದಿಲ್ಲ. (ಏಕೆಂದರೆ) – ಆಗ ಮಲಗಿದ ದೇಹವೂ ಪ್ರಮಾಣವ್ಯಾಪಾರವನ್ನು ಮಾಡುತ್ತದೆ, ಎಂಬ ಪ್ರಸಂಗವುಂಟಾಗುತ್ತದೆ. ಇದೆಲ್ಲವನ್ನೂ ಮನಸ್ಸಿನಲ್ಲಿ ಅಭಿಪ್ರಾಯಮಾಡಿಕೊಂಡು "ದೇಹೇಂದ್ರಿಯಾದಿ-ಗಳಲ್ಲಿ ನಾನು ನನ್ನದೆಂಬ ಅಭಿಮಾನವಿಲ್ಲದವನಿಗೆ ಪ್ರಮಾತೃತ್ವವಿಲ್ಲವಾಗಿ ಪ್ರಮಾಣಗಳ ಪ್ರವೃತ್ತಿಯು ಹೊಂದುವುದಿಲ್ಲ" ಎಂದು ಸಂಗ್ರಹವಾಕ್ಯದಲ್ಲಿ ಹೇಳಿರುತ್ತಾರೆ.

ಏತಾವತಾ ಗ್ರಂಥೇನೇದಮುಪಪಾದಿತಮ್ – ಪ್ರಮಾತೃತ್ವಾನ್ಯಥಾನುಪಪತ್ತಿಃ, ಪ್ರಮಾಣಪ್ರವೃತ್ತ್ಯನ್ಯಥಾನುಪಪತ್ತಿಶ್ಚ, ಪ್ರಮಾಣಾನಾಂ ಸರ್ವೇಷಾಮವಿದ್ಯಾಪುರಸ್ಸರತ್ವಂ ಬಲಾದಾನಯತೀತಿ । ಏವಂ ಚ ಯದಾಕ್ಷಿಪ್ತಂ ಕಥಂ ಪುನರವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನೀತಿ, ತಸ್ಯೋಕ್ತ-ಪರಿಹಾರತ್ವಂ ಮನ್ವಾನ ಉಪಸಂಹರತಿ – **"ತಸ್ಮಾದವಿದ್ಯಾವದ್ವಿಷಯಾಣ್ಯೇವ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚ"** ಇತಿ । ತಸ್ಮಾತ್ ಆಧ್ಯಾಸಿಕಪ್ರಮಾತೃತ್ವಮಾಶ್ರಿತ್ಯೈವ ಪ್ರಮಾಣಪ್ರವೃತ್ತೇರುಪಪತ್ತೇಃ ಅನ್ಯಥಾ ಚಾನುಪಪತ್ತೇಃ, ಅವಿದ್ಯಾವದ್ವಿಷಯಾಣ್ಯೇವ ಮಿಥ್ಯಾಧ್ಯಾಸಕರ್ತೃವ್ಯಪೇಕ್ಷಾಣ್ಯೇವ ಪ್ರತ್ಯಕ್ಷಾದೀನಿ ಪ್ರಮಾಣಾನಿ । ಶಾಸ್ತ್ರಾಣಿ ಚ ತಥೈವೇತ್ಯವಗಂತವ್ಯಮ್ । ಯಥಾ ಹಿ ಲೌಕಿಕಾನಿ ಪ್ರಮಾಣಾನಿ ಪ್ರಮಾತಾರಮಂತರೇಣ ನ ಪ್ರವರ್ತಿತುಮುತ್ಸಹಂತೇ, ಏವಂ ಶಾಸ್ತ್ರಾಣ್ಯಪಿ

---

ಇಷ್ಟರವರೆಗಿನ ಗ್ರಂಥಭಾಗದಿಂದ ಇದನ್ನು ತೋರಿಸಿಕೊಟ್ಟಂತಾಯಿತು. ಪ್ರಮಾತೃತ್ವವು ಮತ್ತೆ ಬೇರೆ ಯಾವ ರೀತಿಯಿಂದಲೂ ಹೊಂದದೇ ಇರುವುದು, ಮತ್ತು ಪ್ರಮಾಣಗಳ ಪ್ರವೃತ್ತಿಯೂ ಬೇರೆ ರೀತಿ ಹೊಂದದೇ ಇರುವುದು, ಇದು ಎಲ್ಲಾ ಪ್ರಮಾಣಗಳೂ ಅವಿದ್ಯಾಪುರಃಸರವಾದದ್ದೇ ಎಂಬುದನ್ನು (ಇಷ್ಟವಿಲ್ಲದೇ ಹೋದರೂ) ಬಲಾತ್ಕಾರದಿಂದ ಬಂದೊದಗುತ್ತದೆ. ಹೀಗಾಗಲಾಗಿ ಪ್ರತ್ಯಕ್ಷಾದಿಪ್ರಮಾಣಗಳು ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ ಎಂಬುದು ಹೇಗೆ? ಎಂದು (ಪೂ. ಪ.) ಆಕ್ಷೇಪಿಸಿದ್ದನಲ್ಲಾ, ಅದಕ್ಕೆ ಪರಿಹಾರವನ್ನು ಹೇಳಿದಂತಾಯಿತೆಂದು ತಿಳಿದವರಾಗಿ "ತಸ್ಮಾದವಿದ್ಯಾವದ್ವಿಷಯಾಣಿ .... ಶಾಸ್ತ್ರಾಣಿ ಚ" ಎಂದು ಹೇಳಿರುತ್ತಾರೆ. ಆದ್ದರಿಂದ ಅಧ್ಯಾಸದಿಂದಾದ ಪ್ರಮಾತೃತ್ವವನ್ನು ಆಶ್ರಯಿಸಿಕೊಂಡೇ ಪ್ರಮಾಣಗಳ ಪ್ರವೃತ್ತಿಯಾಗುತ್ತದೆ ಎಂಬುದು ಹೊಂದುತ್ತದೆಯಾದ್ದರಿಂದಲೂ ಹಾಗಿಲ್ಲದಿದ್ದರೆ ಹೊಂದದೇ ಇರುವುದರಿಂದಲೂ ಇವು ಅವಿದ್ಯಾವಂತನನ್ನು ವಿಷಯಮಾಡಿಕೊಂಡವುಗಳೇ ಎಂದರೆ ತಪ್ಪಾಗಿ ತಿಳಿದವನನ್ನು ಆಶ್ರಯಿಸಿಕೊಂಡೇ ಪ್ರತ್ಯಕ್ಷಾದಿಪ್ರಮಾಣಗಳು (ಹೊರಟಿವೆ ಎಂದರ್ಥ). ಹಾಗೆಯೇ ಶಾಸ್ತ್ರಗಳೂ (ಹೊರಟಿರುವುವೆಂದು) ತಿಳಿಯಬೇಕು. ಹೇಗೆ ಲೌಕಿಕವಾದ ಪ್ರಮಾಣಗಳು ಪ್ರಮಾತೃವಿಲ್ಲದೇ ಪ್ರವರ್ತಿಸುವುದಕ್ಕೆ ಶಕ್ಯವಲ್ಲವೋ ಹಾಗೆಯೇ ಶಾಸ್ತ್ರಗಳೂ ಸಹ

ಪ್ರಮಾಣತ್ವಾವಿಶೇಷಾತ್ ಇತ್ಯರ್ಥಃ । ಅತ್ರ ವಿಶೇಷಸ್ತು ವಕ್ಷ್ಯತೇ ॥

ನನು ಚೈವಂ ಪ್ರಮಾತಾ ಚಾವಿದ್ಯಾವಾಂಶ್ಚ, ಪ್ರಮಾಣಂ ಚಾವಿದ್ಯಾ-ಪುರಸ್ಸರಂ ಚೇತಿ ವ್ಯಾಹತವಚನತ್ವಮಾಪತತಿ । ನ ಹಿ ದುಷ್ಟಕರಣಸ್ಯ ಪ್ರಮಾಜನನಸಾಮರ್ಥ್ಯಮ್, ನ ವಾ ತದ್ವಾನ್ ಪ್ರಮಾತಾ ಸ್ಯಾತ್ । ಬಾಢಮ್। ಪ್ರಮಾತ್ರಾಶ್ರಿತತ್ವೇ ಸತಿ ಪ್ರಮಾಣಕಾರ್ಯವಿಘಾತಕಸ್ಯ ದೋಷತ್ವ-ವ್ಯವಹಾರೋ ವಿದ್ಯತ ಏವ ಲೋಕೇ । ಇಯಂ ತು ದೇಹೇಂದ್ರಿಯಾದಿಷ್ವಹಂಮಮಾಭಿಮಾನಲಕ್ಷಣಾಽವಿದ್ಯಾ ಪ್ರಮಾತೃತ್ವಸ್ಯ ಪ್ರಮಾಣಪ್ರವೃತ್ತೇಶ್ಚೋಪಯೋಗಿನೀ ನ ತು ತದ್ವಿರೋಧಿನೀ । ಅತೋ ನಾಸೌ ದೋಷಃ । ಅನ್ಯಾದೃಶ್ಯೈವ ತು ಸಾ ಅವಿದ್ಯಾ ಯತ್ಸಂಬಂಧೇನ ಪ್ರಮಾತೃತ್ವಂ ಪ್ರಮಾಣತ್ವಂ ವಾ ವಿಹನ್ಯತೇ । ತದ್ಯಥಾ ಮಯೇದಂ ಪ್ರಮೇಯಂ ಪರಿಚ್ಛೇತ್ತವ್ಯಮಿತಿ ಯೋ ನ ವಿಜಾನಾತಿ ಸ ನ ಪ್ರಮಾತಾ ಭವತಿ । ತಥಾ

---

"ಪ್ರಮಾಣವಾಗಿವೆ" ಎಂದು ಸಮಾನವಾಗಿರುವುದರಿಂದ (ಅದೇ ರೀತಿಯದಾಗಿದೆ). ಇಲ್ಲಿನ ವಿಶೇಷವನ್ನು ಹೇಳಲಾಗುತ್ತದೆ.

ಹೀಗೆ ಪ್ರಮಾತೃವಾಗಿದ್ದಾನೆ ಅವನು ಅವಿದ್ಯಾವಂತನೂ ಆಗಿದ್ದಾನೆ, ಹಾಗೆಯೇ ಪ್ರಮಾಣವಾಗಿದೆ ಅವನು ಅವಿದ್ಯಾಪುರಃಸರವಾಗಿದೆ ಎಂಬುದು ಪರಸ್ಪರ ವಿರುದ್ಧವಾದ ಮಾತಾಗುವುದಿಲ್ಲವೇ ? ದೋಷಯುಕ್ತವಾದ ಕರಣಕ್ಕೆ ಅರಿವನ್ನುಂಟುಮಾಡುವ ಸಾಮರ್ಥ್ಯವಿರುವುದಿಲ್ಲ, ಹಾಗೆಯೇ ಅದನ್ನುಳ್ಳವನು ಪ್ರಮಾತೃವೂ ಆಗಲಾರ ಅಲ್ಲವೆ ? (ಎಂದರೆ) – ಹೌದು, ಪ್ರಮಾತೃವನ್ನಾ-ಶ್ರಯಿಸಿಕೊಂಡಿದೆ ಎಂದಾದರೆ ಪ್ರಮಾಣಗಳ ಕೆಲಸವನ್ನಡ್ಡಿಪಡಿಸುವ ದೋಷವುಳ್ಳ ವ್ಯವಹಾರವು ಲೋಕದಲ್ಲಿ ಇದ್ದೇ ಇರುತ್ತದೆ. ಈ ದೇಹೇಂದ್ರಿಯಾದಿಗಳಲ್ಲಿ ನಾನು ನನ್ನದೆಂಬ ಅಭಿಮಾನರೂಪವಾಗಿರುವ ಅವಿದ್ಯೆಯಾದರೋ ಪ್ರಮಾತೃತ್ವಕ್ಕೂ ಪ್ರಮಾಣಪ್ರವೃತ್ತಿಗಳಿಗೂ ಉಪಯೋಗವಾದದ್ದೇ ಹೊರತು ಅದಕ್ಕೆ ವಿರುದ್ಧವಾದದ್ದಲ್ಲ. ಆದ್ದರಿಂದ ಇದು ದೋಷವಲ್ಲ. ಯಾವ ಸಂಬಂಧದಿಂದ ಪ್ರಮಾತೃತ್ವಕ್ಕೂ ಪ್ರಮಾಣಕ್ಕೂ ಅಡ್ಡಿಯಾಗುತ್ತದೋ ಆ ಅವಿದ್ಯೆಯು ಬೇರೆ ತರಹದ್ದೇ ಆಗಿರುತ್ತದೆ. ಅದು ಹೇಗೆಂದರೆ, ನಾನು ಈ ವಿಷಯವನ್ನು ತಿಳಿಯಬೇಕೆಂದು ಯಾವಾತನು ಅರಿಯುವುದಿಲ್ಲವೋ ಅವನು

ಯತ್ ಸ್ವವಿಷಯಂ ನ ಗೃಹ್ಣಾತಿ ಸಂಶಯಿತಂ ವಾ ಗೃಹ್ಣಾತಿ ವಿಪರೀತಂ ವಾ, ತಾದೃಶಸ್ಯ ನೈವ ಪ್ರಮಾಣತ್ವಂ ಭವತಿ । ನ ತು ತಾದೃಶೀಯಮವಿದ್ಯಾ। ತಸ್ಮಾದಧ್ಯಾಸರೂಪಾವಿದ್ಯಾವದ್ವಿಷಯತ್ವೇ ಪ್ರಮಾಣಾನಾಂ ನ ಕೋಽಪಿ ದೋಷಃ ॥

ಯದಪ್ಯುಕ್ತಮ್ – ನ ಚ ಪ್ರಮಾಣದೋಷಸ್ತಜ್ಜನಿತಜ್ಞಾನೇ ಮಿಥ್ಯಾತ್ವಂ ವಾ ಪ್ರತೀಯತೇ ನಿಯಮೇನ । ಅತೋ ನ ಸರ್ವಸ್ಯ ಪ್ರಮಾಣಸ್ಯಾಽಸಮೀಚೀನತೇತಿ । ತತ್ರ ಯದ್ಯಯಮಭಿಪ್ರಾಯಃ – ಜ್ಞಾನಸ್ಯಾಽಪ್ರಾಮಾಣ್ಯ-ಕಾರಣಂ ದೋಷಾಪರನಾಮ್ನೀ ಕಾಚಕಾಮಲಾದಿರೂಪಾ ಕಾರಣಶಕ್ತಿಪ್ರತಿ-ಬಂಧಕಸಾಮಗ್ರೀ । ದುಷ್ಟಕರಣಜನಿತಂ ಚ ಜ್ಞಾನಮ್ ಸಮೀಚೀನಮಿತಿ । ತತ್ರ ತಥಾ ನಾಮಾಸ್ತು । ನ ಹಿ ವಯಂ ಜ್ಞಾನೇ ಸಮೀಚೀನಾಸಮೀಚೀನ-ವಿಭಾಗೋ ನಾಸ್ತ್ಯೇವೇತಿ ವದಿತುಂ ಪ್ರವೃತ್ತಾಃ, ಕಿಂ ತರ್ಹಿ ಸರ್ವೋಽಪ್ಯಯಂ

---

ಪ್ರಮಾತೃವೇ ಆಗಲಾರನು. ಹೇಗೆಂದರೆ, ಯಾವ (ಜ್ಞಾನ) ತನ್ನ ವಿಷಯವನ್ನು ಅರಿಯುವುದಿಲ್ಲವೋ ಸಂಶವಾಗಿಯೋ ತಪ್ಪಾಗಿಯೋ ಅರಿಯುತ್ತದೋ ಆ ತರಹದ್ದಕ್ಕೆ ಪ್ರಮಾಣತ್ವವು ಉಂಟಾಗುವುದೇ ಇಲ್ಲ. ಆದರೆ ಈ ಅವಿದ್ಯೆಯು ಆ ತರಹದ್ದಲ್ಲ. ಆದ್ದರಿಂದ ಪ್ರಮಾಣಗಳು ಅಧ್ಯಾಸರೂಪವಾದ ಅವಿದ್ಯಾವದ್ವಿಷಯವೆಂದಾದರೆ ಯಾವ ದೋಷವೂ ಇರುವುದಿಲ್ಲ.

ಪ್ರಮಾಣದಲ್ಲಿ ದೋಷವಾಗಲೀ ಅದರಿಂದುಂಟಾದ ಜ್ಞಾನದಲ್ಲಿ ಸುಳ್ಳೆಂದಾಗಲೀ ಏಕಾಂತವಾಗಿ ತೋರಿಬರುವುದೆಂಬುದಿಲ್ಲ, ಆದ್ದರಿಂದ ಯಾವ ಪ್ರಮಾಣವೂ ಸರಿಯಾದವಲ್ಲವೆಂಬುದು ಸರಿಯಲ್ಲ ಎಂದು (ಆಕ್ಷೇಪಕನು) ಏನು ಹೇಳಿದ್ದನೋ, ಅಲ್ಲಿ ಅವನ ಅಭಿಪ್ರಾಯವು ಹೀಗೆಂತಾದರೆ – (ಹೇಗೆಂದರೆ) ಜ್ಞಾನಕ್ಕೆ ಅಪ್ರಾಮಾಣ್ಯಕಾರಣವು ದೋಷವೆಂಬ ಇನ್ನೊಂದು ಹೆಸರು, ಅದು, ಮೇಷೋಂಡ್ರ, ಕಾಮಾಲೆರೋಗ ಮುಂತಾದ ಇಂದ್ರಿಯ ಸಾಮರ್ಥ್ಯವನ್ನು ತಡೆಮಾಡುವ ರೂಪದ್ದಾಗಿರುವುದು. ದೋಷಯುಕ್ತವಾದ ಇಂದ್ರಿಯದಿಂದುಂಟಾದ ಜ್ಞಾನವು ಸರಿಯಲ್ಲದ್ದು, ಎನ್ನುವುದಾದರೆ, ಅಲ್ಲಿ ಹಾಗೆಯೇ ಆಗಲಿ ನಾವೇನೂ ಜ್ಞಾನದಲ್ಲಿ ಸರಿಯಾದದ್ದು, ಸರಿಯಲ್ಲದ್ದು ಎಂಬ ವಿಭಾಗವೇ ಇಲ್ಲವೆಂದು ಹೇಳುವುದಕ್ಕೆ ಹೊರಟಿಲ್ಲ. ಮತ್ತೇನೆಂದರೆ

ಸಮೀಚೀನಾಸಮೀಚೀನವಿಭಾಗವ್ಯವಹಾರೋ ಯಥೋಪಪಾದಿತಾವಿದ್ಯಾಪುರಸ್ಸರ ಏವೇತಿ ಪ್ರತಿಪಾದಯಿತುಮ್ । ನನು ಯದ್ಯವಿದ್ಯಾಪ್ರಯುಕ್ತತ್ವಾವಿಶೇಷಃ ಸರ್ವತ್ರ, ಕಥಂ ತರ್ಹಿ ಪ್ರಮಾಣಜ್ಞಾನಂ ಸಮೀಚೀನಮ್, ಅಪ್ರಮಾಣಜ್ಞಾನಂ ತು ಮಿಥ್ಯೇತಿ ವ್ಯವಹಾರಃ ? ಉಚ್ಯತೇ । ಸಮರ್ಥಪ್ರವೃತ್ತಿಪ್ರಯೋಜಕತ್ವತದಭಾವಕೃತೋಽಯಂ ವಿಭಾಗಃ । ಅತೋ ನಾಯಂ ವ್ಯವಹಾರಃ ಪೂರ್ವೋಕ್ತಾವಿದ್ಯಾಪುರಸ್ಸರತ್ವಂ ಪ್ರಮಾಣಾನಾಮಪವದತಿ। ಕಿಂ ತು ಸಮರ್ಥಪ್ರವೃತ್ತಿಪ್ರಯೋಜಕತ್ವರೂಪಂ ವ್ಯಾವಹಾರಿಕಸತ್ಯತ್ವಂ ಪ್ರಮಾಣಾನಾಮನುವದತಿ । ತಚ್ಚಾಭ್ಯುಪಗಮ್ಯತ ಏವಾಸ್ಮಾಭಿರಪಿ । ನ ಹಿ ವಯಂ ವ್ಯಾವಹಾರಿಕಂ ಸತ್ಯತ್ವಂ ಪ್ರಮಾಣಾನಾಂ ಪ್ರತಿಷೇಧಾಮಃ, ಕಿಂ ತು ತಾತ್ತ್ವಿಕಮ್ । ಅತೋ ನ ವಿರೋಧಃ ॥

---

ಈ ಎಲ್ಲಾ ಸರಿಯಾಗಿದೆ ಸರಿಯಾಗಿಲ್ಲ ಎಂಬ ಭೇದವ್ಯವಹಾರವೂ (ನಾವು) ಮೇಲೆ ತೋರಿಸಿಕೊಟ್ಟ (ಹೇಳಿದ) ಅವಿದ್ಯೆಯನ್ನು ಮುಂದುಮಾಡಿಕೊಂಡೇ ಹೊರಟದ್ದು ಎಂಬುದನ್ನು ಪ್ರತಿಪಾದಿಸಲು ಹೊರಟಿರುತ್ತೇವೆ. ಎಲ್ಲವೂ ಅವಿದ್ಯಾಪ್ರಯುಕ್ತವಾಗಿದೆ ಎಂಬುದು ಸಮಾನವಾದರೆ ಪ್ರಮಾಣವಾದ ಜ್ಞಾನವು ಸರಿಯಾದದ್ದು, ಪ್ರಮಾಣವಲ್ಲದ್ದು ಸುಳ್ಳಾದದ್ದು ಎಂಬ ವ್ಯವಹಾರವಾದರೂ ಹೇಗೆ ಸರಿಯಾಗುತ್ತದೆ ? ಎಂದರೆ ಹೇಳುತ್ತೇವೆ. ಯೋಗ್ಯವಾದ ಪ್ರವೃತ್ತಿಯ ಪ್ರಯೋಜನವಿರುವುದು, ಅದಿಲ್ಲದಿರುವುದು (ಎನ್ನುವುದರಿಂದ) ಈ ವಿಭಾಗವು ಬಂದಿದೆ. ಆದ್ದರಿಂದ ಈ ವ್ಯವಹಾರವು ಹಿಂದೆ ಹೇಳಿದ ಪ್ರಮಾಣಗಳು ಅವಿದ್ಯಾಪುರಃಸರವಾಗಿವೆ ಎಂಬುದನ್ನು ಅಲ್ಲಗಳೆಯುವುದಿಲ್ಲ. ಮತ್ತೇನೆಂದರೆ ವ್ಯವಹಾರದಲ್ಲಿ ಸತ್ಯವೆನಿಸಿಕೊಂಡಿರುವ ಯೋಗ್ಯವಾದ ಪ್ರವೃತ್ತಿಗೆ ಪ್ರಯೋಜಕವನ್ನುಂಟುಮಾಡುವುದಾದ ಪ್ರಮಾಣಗಳ (ಸ್ವರೂಪದ) ಅನುವಾದವನ್ನು ಮಾಡಿಕೊಳ್ಳುತ್ತದೆ. ಅದನ್ನು ನಾವು ಒಪ್ಪಿಯೇ ಇರುತ್ತೇವೆ. ಪ್ರಮಾಣಗಳು ವ್ಯವಹಾರದಲ್ಲಿ ಸತ್ಯವಾಗಿವೆ ಎಂಬುದನ್ನು ನಾವು ಅಲ್ಲಗಳೆಯುವುದೇ ಇಲ್ಲ, ಮತ್ತೇನೆಂದರೆ, (ಸ್ವರೂಪದಿಂದ) ಸತ್ಯವಾಗಿದೆ ಎನ್ನುವದನ್ನು (ಅಲ್ಲಗಳೆಯುವೆವು.) ಆದ್ದರಿಂದ ಏನು ದೋಷವಿಲ್ಲ.

ನನ್ವೇತದಯುಕ್ತಮ್ । ಸತ್ಯದ್ವಯಾಸಂಭವಾತ್ । ಆವಿದ್ಯಕಂ ಚೇತ್ ಸತ್ಯತ್ವಂ ಕಥಮ್ ? ಸತ್ಯಂ ಚೇತ್ ತಸ್ಯಾಽಽವಿದ್ಯಕತ್ವಮೇವ ಕಥಮಿತಿ ನ ಜಾನೀಮೋ ವಯಮ್ । ನ ಹ್ಯಯಂ ಸತ್ಯಶಬ್ದಸ್ತಾತ್ತ್ವಿಕಾತಾತ್ತ್ವಿಕಯೋಃ ಪದಾರ್ಥಯೋಃ ಸಾಧಾರಣೋ ಭವಿತುಮರ್ಹತಿ । ತಸ್ಮಾದ್ಯದಿ ಪಾರಮಾರ್ಥಿಕಂ ಸತ್ಯತ್ವಂ ನಾಸ್ತಿ ಪ್ರಮಾಣಪ್ರಮೇಯವ್ಯವಹಾರಸ್ಯ, ತರ್ಹಿ ಮಿಥ್ಯೈವ ಸ ಇತಿ ವಕ್ತವ್ಯಮಿತಿ ಚೇತ್ । ಭಾವಾನಭಿಜ್ಞೋ ಭವಾನ್ । ನ ಹಿ ವ್ಯಾವಹಾರಿಕಂ ಸತ್ಯಮಿತಿ ಸತ್ಯವಿಶೇಷಂ ಬ್ರೂಮಃ, ಕಿಂ ತರ್ಹಿ ಯತ್ಸತ್ಯಮಿತಿ ವ್ಯವಹ್ರಿಯತೇ ಪ್ರಾಮಾಣಿಕೈಸ್ತನ್ನಿರ್ದಿಶಾಮಃ । ಯಥಾ ಹ್ಯಸತ್ಯಮಿತಿ ನಿಶ್ಚಿತೇಽಪಿ ಸ್ವಪ್ನವ್ಯವಹಾರೇ ತಾತ್ಕಾಲಿಕಃ ಸತ್ಯಮಿಥ್ಯಾವಿಭಾಗೋ ದೃಶ್ಯತೇ । ನ ಚ ಸ್ವಪ್ನಸತ್ಯಂ ಸತ್ಯಮೇವ ಭವತಿ ತಾವತಾ । ಏವಂ ವ್ಯವಹಾರಸತ್ಯಮಪಿ ಯಾವದ್ವ್ಯವಹಾರಂ ಸತ್ಯತ್ವೇನ ಪ್ರಥಮಾನಮಪಿ ಪಾರಮಾರ್ಥಿಕಂ ಸತ್ಯತ್ವಂ ನಾಲಿಂಗತೇ । ಉಪವರ್ಣಿತಾಧ್ಯಾಸಮೂಲಕತ್ವಾತ್ । ವಕ್ಷ್ಯತಿ ಹಿ ಭಗವಾನ್

---

ಎರಡು ಸತ್ಯವೆಂಬುದು ಹೊಂದುವುದಿಲ್ಲವಾದ್ದರಿಂದ ಇದೂ ಕೂಡ ಸರಿಯಾಗುವುದಿಲ್ಲವಲ್ಲ ! ಆವಿದ್ಯಕವಾದರೆ ಸತ್ಯವೆಂಬುದು ಹೇಗೆ ? ಸತ್ಯವಾಗಿದ್ದರೆ ಅದಕ್ಕೆ ಆವಿದ್ಯಕತ್ವವೆಂಬುದು ಹೇಗೆ ಎನ್ನುವುದೇ ನಮಗೆ ಗೊತ್ತಾಗುವುದಿಲ್ಲವಲ್ಲ ! ಈ ಸತ್ಯವೆಂಬ ಶಬ್ದವು ನಿಜವಾಗಿರುವುದಕ್ಕೂ ಸುಳ್ಳಾಗಿರುವುದಕ್ಕೂ (ಎರಡಕ್ಕೂ) ಸಾಧಾರಣವಾದ ಶಬ್ದವೆಂದಾಗುವುದಿಲ್ಲವಲ್ಲವೆ ? ಪ್ರಮಾಣಪ್ರಮೇಯವ್ಯವಹಾರಕ್ಕೆ ಪಾರಮಾರ್ಥಿಕಸತ್ಯತ್ವವೆಂಬುದು ಇಲ್ಲವೇ ಇಲ್ಲವೆನ್ನುವುದಾದರೆ ಆಗ ಆ ವ್ಯವಹಾರವು ಸುಳ್ಳೇ ಎಂದು ಹೇಳಬೇಕು ? (ಎಂದು ಕೇಳಿದರೆ ಹಾಗಲ್ಲ) – ನಿನಗೆ ನಮ್ಮ ಭಾವಾರ್ಥವು ಗೊತ್ತಿಲ್ಲ. ವ್ಯಾವಹಾರಿಕಸತ್ಯವೆಂದು ಸತ್ಯದಲ್ಲಿ ವಿಶೇಷವನ್ನು ನಾವು ಹೇಳುವುದಿಲ್ಲ, ಮತ್ತೇನೆಂದರೆ ಪ್ರಮಾಣಜ್ಞರು ಯಾವುದನ್ನು ಸತ್ಯವೆಂದು ವ್ಯವಹರಿಸುತ್ತಾರೋ ಅದನ್ನು ನಿರ್ದೇಶಿಸುತ್ತೇವೆ ಅಷ್ಟೆ. ಇದು ಹೇಗೆಂದರೆ– ಸ್ವಪ್ನವ್ಯವಹಾರವು ಸುಳ್ಳೆಂದು ನಿಶ್ಚಯವಾಗಿ ಗೊತ್ತಿದ್ದರೂ ತತ್ಕಾಲದಲ್ಲಿ ಸತ್ಯಮಿಥ್ಯಾವಿಭಾಗವು ಹೇಗೆ ಕಂಡುಬಂದಿದೆಯೋ, (ಅಷ್ಟುಮಾತ್ರದಿಂದ) ಸ್ವಪ್ನದ ಸತ್ಯವು ಸತ್ಯವೆಂದೇ ಆಗುವುದಿಲ್ಲ. ಇದೇ ರೀತಿ ವ್ಯವಹಾರದ ಸತ್ಯವೂ ವ್ಯವಹಾರವಿರುವವರೆಗೆ ಸತ್ಯವೆಂದು ಪ್ರಸಿದ್ಧಿಯಾಗಿದ್ದರೂ ಪಾರಮಾರ್ಥಿಕಸತ್ಯವೆಂದೇನಾಗುವುದಿಲ್ಲ. ಏಕೆಂದರೆ (ಅದು) ನಾವು ಮೇಲೆ ವರ್ಣನೆ ಮಾಡಿದ

"ನೈಷ ದೋಷಃ । ಸರ್ವವ್ಯವಹಾರಾಣಾಮೇವ ಪ್ರಾಕ್ ಬ್ರಹ್ಮಾತ್ಮತಾವಿಜ್ಞಾನಾತ್ ಸತ್ಯತೋಽಪಪತ್ತೇಃ । ಸ್ವಪ್ನವ್ಯವಹಾರಸ್ಯೇವ ಪ್ರಾಕ್ ಪ್ರಬೋಧಾತ್ । ಯಾವದ್ಧಿ ನ ಸತ್ಯಾತ್ಮೈಕತ್ವಪ್ರತಿಪತ್ತಿಃ, ತಾವತ್ ಪ್ರಮಾಣಪ್ರಮೇಯಫಲಲಕ್ಷಣೇಷು ವಿಕಾರೇಷ್ವನೃತತ್ವಬುದ್ಧಿರ್ನ ಕಸ್ಯಚಿದುತ್ಪದ್ಯತೇ" (ಸೂ, ಭಾ, ೨-೧-೧೪, ಭಾ.ಭಾ ೪೩೬) ಇತಿ । ಅತೋ ನ ಕಶ್ಚಿದ್ವಿರೋಧಃ । ಏತೇನ "ಯಸ್ಯ ಚ ದುಷ್ಟಂ ಕರಣಂ ಯತ್ರ ಚ ಮಿಥ್ಯೇತಿ ಪ್ರತ್ಯಯಃ ಸ ಏವಾಸಮೀಚೀನಃ" ಇತ್ಯಾಚಾರ್ಯಶಬರ-ಸ್ವಾಮಿವಚನಂ ವ್ಯಾಖ್ಯಾತಮ್ । ತಸ್ಯ ವಚನಸ್ಯಾಗಂತುಕದೋಷವಿಷಯತ್ವಾತ್ ವ್ಯಾವಹಾರಿಕಬಾಧಪರತ್ವಾಚ್ಚ ನೈಸರ್ಗಿಕಾವಿದ್ಯಾಪ್ರತ್ಯಯನಿಷೇಧೇ ತಾತ್ಪರ್ಯಾಭಾವಾದಿತಿ ಸರ್ವಂ ಸುಸ್ಥಮ್ ॥

## ೪೪. ಪುರುಷಪ್ರವೃತ್ತಿನಿರೂಪಣೇನ ಪ್ರಮಾಣಾದಿವ್ಯವಹಾರಸ್ಯ

---

ಅಧ್ಯಾಸವನ್ನೇ ಮೂಲವಾಗಿಟ್ಟುಕೊಂಡಿರುತ್ತದೆ. ಭಾಷ್ಯಕಾರರೂ ಸಹ ಹೇಳಿರುತ್ತಾರೆ. – "ಇದೇನೂ ದೋಷವಲ್ಲ. ಎಲ್ಲಾ ವ್ಯವಹಾರಗಳೂ ಬ್ರಹ್ಮಾತ್ಮವಿಜ್ಞಾನಕ್ಕಿಂತ ಮೊದಲು ಸತ್ಯವೆಂದೇ ಆಗುತ್ತವೆ. ಎಚ್ಚರವಾಗುವುದಕ್ಕೆ ಮೊದಲು ಸ್ವಪ್ನ ವ್ಯವಹಾರದಂತೆಯೇ ಇದು. ಎಲ್ಲಿಯವರೆಗೆ ಸತ್ಯವಾದ ಆತ್ಮನೊಬ್ಬನೇ ಇರತಕ್ಕದ್ದೆಂಬ ಜ್ಞಾನವುಂಟಾಗುವುದಿಲ್ಲವೋ ಅಲ್ಲಿಯವರೆಗೆ ಪ್ರಮಾಣಪ್ರಮೇಯ ಫಲರೂಪವಾದ ವಿಕಾರದಲ್ಲಿ (ಪ್ರಪಂಚದಲ್ಲಿ) ಸುಳ್ಳೆಂಬ ಬುದ್ಧಿಯು ಯಾರಿಗೂ ಉಂಟಾಗುವುದೇ ಇಲ್ಲ" (ಸೂ. ಭಾ ೨-೧-೧೪) ಆದ್ದರಿಂದ ಏನೂ ವಿರೋಧವಿಲ್ಲ. ಇದರಿಂದ "ಯಾವಾತನಿಗೆ ದೋಷ-ಯುಕ್ತವಾದ ಇಂದ್ರಿಯವಿದೆಯೋ ಎಲ್ಲಿ ಸುಳ್ಳೆಂಬ ಅರಿವುಂಟಾಗುತ್ತದೆಯೋ ಅದೇ ಸರಿಯಲ್ಲದ್ದು" ಎಂಬ ಆಚಾರ್ಯರಾದ ಶಬರಸ್ವಾಮಿಗಳ ಮಾತನ್ನೂ ವ್ಯಾಖ್ಯಾನಮಾಡಿದಂತಾಯಿತು. ಆ ವಚನವು ಆಗಂತುಕವಾದ ದೋಷವನ್ನು ವಿಷಯಮಾಡಿಕೊಂಡಿರುವುದರಿಂದಲೂ ವ್ಯಾವಹಾರಿಕವಾದ ಬಾಧೆಯಲ್ಲಿ ತಾತ್ಪರ್ಯವುಳ್ಳದ್ದಾದ್ದರಿಂದಲೂ ಸ್ವಾಭಾವಿಕವಾದ ಅವಿದ್ಯಾಪ್ರತ್ಯಯವನ್ನು ನಿಷೇಧ ಮಾಡುವುದರಲ್ಲಿ ತಾತ್ಪರ್ಯವಿಲ್ಲವಾದ್ದರಿಂದಲೂ ಎಲ್ಲವೂ ಸರಿಯಾಗಿದೆ ಎಂದಾಯಿತು.

## ೪೪. ಪುರುಷರ ಪ್ರವೃತ್ತಿಯನ್ನು ಗೊತ್ತುಮಾಡುವುದರಿಂದ

**ಅವಿದ್ಯಾಪುರಸ್ಸರತ್ವಸಮರ್ಥನಮ್** – ಏವಂ ತಾವತ್ ಪ್ರಮಾಣ-ಪ್ರವೃತ್ತಿನಿರೂಪಣೇನ ಸರ್ವಸ್ಯಾಪಿ ವ್ಯವಹಾರಸ್ಯಾಽವಿದ್ಯಾಪುರಸ್ಸರತ್ವ-ಮುಪಪಾದಿತಮ್ । ಅಥೇದಾನೀಂ ಪುರುಷಪ್ರವೃತ್ತಿನಿರೂಪಣೇನಾಪಿ ತದುಪಪಾದಯಿತುಕಾಮೋ ಹೇತ್ವಂತರಮುಪಸ್ಥಾಪಯತಿ – **"ಪಶ್ವಾದಿಭಿಶ್ಚಾವಿಶೇಷಾತ್"** ಇತಿ । ಸರ್ವಸ್ಯಾಪಿ ಪ್ರಮಾಣಪ್ರಮೇಯವ್ಯವ-ಹಾರಸ್ಯಾಽವಿದ್ಯಾಪುರಸ್ಸರತ್ವಮಭ್ಯುಪಗಂತವ್ಯಮ್, ಅವಿದ್ಯಾಮಂತರೇಣ ಪ್ರಮಾತೃತ್ವಸ್ಯೈವಾಸಿದ್ಧೇರಿತ್ಯುಕ್ತಮ್ । ಅತ್ರೇದಮಪರಮಾಶಂಕ್ಯ ಪರಿಹ್ರಿಯತೇ। ಸ್ಯಾನ್ನಾಮಾವಿಚಾರಸ್ವಭಾವಪ್ರೇರಿತಾನಾಂ ಪೃಥಗ್ಜನಾನಾಂ ಪ್ರತ್ಯಕ್ಷಾದಿವ್ಯವ-ಹಾರಾ ಅವಿದ್ಯಾಪುರಸ್ಸರಾ ಇತಿ । ನ ತಾವತಾ ವಿವೇಕಿನಾಮಪಿ ಪುರುಷಾಣಾಂ ತಾದೃಶಾ ಏವ ವ್ಯವಹಾರಾ ಇತಿ ವದಿತುಂ ಶಕ್ಯತೇ । ದೃಷ್ಟವಿರೋಧ-ಪ್ರಸಂಗಾತ್ । ನ ಹ್ಯಾಗಮೋಪಪತ್ತಿಭ್ಯಾಂ ವಿದಿತಾತ್ಮತತ್ತ್ವಾ ನ ದೃಶ್ಯಂತ ಏವ ಪ್ರತ್ಯಕ್ಷಾದಿನಾ ವ್ಯವಹರಂತಃ । ನ ಚ ಪರೀಕ್ಷಕಾ ಅಪಿ ಲೌಕಿಕಾ

---

**ಪ್ರಮಾಣವೇ ಮುಂತಾದವುಗಳ ವ್ಯವಹಾರವು ಅವಿದ್ಯಾಪುರಃಸರವಾಗಿದೆ ಎಂಬುದನ್ನು ಸಮರ್ಥನೆ ಮಾಡುವ (ಭಾಗ)** – ಹೀಗೆ ಪ್ರಮಾಣಗಳ ಪ್ರವೃತ್ತಿಗಳನ್ನು ಗೊತ್ತುಮಾಡುವುದರ ಮೂಲಕ ಎಲ್ಲಾ ವ್ಯವಹಾರವೂ ಅವಿದ್ಯಾಪುರಃಸರವಾದದ್ದು ಎಂಬುದನ್ನು ತೋರಿಸಿಕೊಟ್ಟದ್ದಾಯಿತು. ಇನ್ನೀಗ ಪುರುಷರ ಪ್ರವೃತ್ತಿಯನ್ನು ಗೊತ್ತುಮಾಡುವುದರಿಂದಲೂ ಅದು (ಅವಿದ್ಯಾಪುರಸ್ಸರವೇ) ಎಂಬುದನ್ನು ತೋರಿಸಿಕೊಡಲು ಬೇರೊಂದು ಹೇತುವನ್ನು ಮುಂದೊಡ್ಡುತ್ತಿದ್ದಾರೆ. "ಪಶ್ವಾದಿಭಿಶ್ಚಾವಿಶೇಷಾತ್" (ಎಂಬುದೇ ಅದು.) ಅವಿದ್ಯೆ ಇಲ್ಲದಿದ್ದರೆ ಪ್ರಮಾತೃತ್ವವೇ ಸಿದ್ಧಿಸದೇ ಇರುವುದರಿಂದ ಎಲ್ಲ ಪ್ರಮಾಣಪ್ರಮೇಯ ವ್ಯವಹಾರವೂ ಅವಿದ್ಯಾಪುರಸ್ಸರವಾಗಿದೆ ಎಂಬುದನ್ನು ಒಪ್ಪಬೇಕು. ಇಲ್ಲಿ ಇನ್ನೊಂದು ಸಂದೇಹವನ್ನು ಹಾಕಿಕೊಂಡು ಪರಿಹರಿಸಲಾಗುತ್ತದೆ. ವಿಚಾರ ಸ್ವಭಾವವಿಲ್ಲದೇ ಪ್ರೇರಿತವಾದ ಸಾಮಾನ್ಯಜನರ ಪ್ರತ್ಯಕ್ಷಾದಿವ್ಯವಹಾರವು ಅವಿದ್ಯಾಪುರಃಸರವಾಗಿದೆ ಎಂದು ಬೇಕಾದರೆ ಆಗಬಹುದು, ಅಷ್ಟು ಮಾತ್ರದಿಂದ ವಿವೇಕಿಗಳಾದ ಪುರುಷರ ವ್ಯವಹಾರವೂ ಅದೇ ತರಹದ್ದು ಎಂದು ಹೇಳುವುದು ಸರಿಯಾಗುವುದಿಲ್ಲ. (ಹಾಗಾಗಿಬಿಟ್ಟರೆ) ಕಂಡದ್ದಕ್ಕೆ ವಿರೋಧವಾಗುತ್ತದೆ. ಆಗಮ ಮತ್ತು ಉಪಪತ್ತಿಗಳಿಂದ ಆತ್ಮತತ್ತ್ವವನ್ನು ಕಂಡುಕೊಂಡವರೂ ಪ್ರತ್ಯಕ್ಷಾದಿಗಳಿಂದ ವ್ಯವಹಾರವನ್ನು

ಇವಾವ್ಯುತ್ಪನ್ನಾ ಏವ । ಯೇನ ತೇಷಾಂ ಶಾಸ್ತ್ರಪ್ರಣಯನಪರೋಪದೇಶಾದಿಪ್ರವೃತ್ತಯೋಽಪ್ಯವಿದ್ಯಾಪುರಸ್ಸರತ್ವೇನ ನಿಶ್ಚೀಯೇರನ್ । **ಪ್ರಮಾಣಕುಶಲಾ** ಹ್ಯಾಹುಃ – "ಪುರುಷಶ್ಚತುರ್ಧಾ ಭಿದ್ಯತೇ ಪ್ರತಿಪನ್ನೋಽಪ್ರತಿಪನ್ನಃ ಸಂದಿಗ್ಧೋ ವಿಪರ್ಯಸ್ತಶ್ಚೇತಿ । ತತ್ರ ಪ್ರತಿಪನ್ನಃ ಪ್ರತಿಪಾದಯಿತಾ, ಇತರೇ ಸಾಪೇಕ್ಷಾಃ ಸಂತಃ ಪ್ರತಿಪಾದ್ಯಾಃ । ತೇ ಯದೇಂದ್ರಿಯಾರ್ಥಸನ್ನಿಕರ್ಷಮಪೇಕ್ಷಂತೇ ತದಾ ಪ್ರತ್ಯಕ್ಷೇಣ । ಯದಾ ಲಿಂಗದರ್ಶನಸ್ಮೃತ್ಯಾದ್ಯಪೇಕ್ಷಂತೇ ತದಾನುಮಾನೇನ । ಯದಾ ಪುನರುಪದೇಶಮಪೇಕ್ಷಂತೇ ತದಾ ಶಾಸ್ತ್ರಂ ಪ್ರವರ್ತತೇ" (ನ್ಯಾ. ವಾ. ೧–೧–೧) ಇತಿ । ತತ್ರ ಭವಂತ್ವಪ್ರತಿಪನ್ನಾದೀನಾಂ ಪುರುಷಾಣಾಂ ವ್ಯವಹಾರಾ ಅವಿದ್ಯಾಪುರಃಸರಾಃ । ಪ್ರತಿಪನ್ನಾನಾಂ ತು ವ್ಯವಹಾರೈರ್ನ ತಥಾ ಭವಿತವ್ಯಮ್। ಅನ್ಯಥಾ ಜಗದಾಂಧ್ಯಪ್ರಸಂಗಾದಿತಿ ॥

---

ಮಾಡುತ್ತಿಲ್ಲವೆಂಬುದೇನಿಲ್ಲ. ವಿಚಾರ ಮಾಡಿ (ಪ್ರವರ್ತಿಸುವವರೂ), ಲೌಕಿಕರಾದ (ಸಾಮಾನ್ಯರಂತೆ) ತಿಳಿವಳಿಕೆ ಇಲ್ಲದವರೇ ಎಂದಾಗುವುದಿಲ್ಲವಷ್ಟೆ? ಹಾಗಾಗಿದ್ದರೆ ಅವರು ಶಾಸ್ತ್ರವನ್ನು ರಚಿಸಿರುವುದು ಮತ್ತು ಉಪದೇಶವನ್ನು ಮಾಡುವುದೆಂಬ ಅವರ ಪ್ರವೃತ್ತಿಯು ಅವಿದ್ಯಾಪುರಸ್ಸರವೆಂದು ನಿಶ್ಚಯಿಸಬಹುದಾಗಿತ್ತು. **ಪ್ರಮಾಣದಲ್ಲಿ ನಿಷ್ಣಾತರಾದವರು ಹೇಳುತ್ತಾರೆ** – ಮನುಷ್ಯರು ತಿಳಿದವನು, ತಿಳಿಯದವನು, ಸಂದೇಹವಾಗಿ ತಿಳಿದವನು, ತಪ್ಪಾಗಿ ತಿಳಿದವನೆಂದು – ನಾಲ್ಕು ಪ್ರಕಾರವಾಗಿ ವಿಂಗಡವಾಗಿರುತ್ತಾರೆ. ಅಲ್ಲಿ ತಿಳಿದವನೇ ತಿಳಿಸುವವನು, ಇತರರು ಪರಸ್ಪರ ಸಾಪೇಕ್ಷರಾದವರಾಗಿ ಪ್ರತಿಪಾದಿಸಬೇಕಾದವರಾಗಿರುತ್ತಾರೆ. ಅವರು ಯಾವಾಗ ಇಂದ್ರಿಯಗಳು ವಿಷಯಗಳಿಗೆ ಸಮೀಪವಾಗುವುದನ್ನು ಬಯಸುತ್ತಾರೋ ಆಗ ಪ್ರತ್ಯಕ್ಷದಿಂದ (ವ್ಯವಹಾರವಾಗುತ್ತದೆ), ಯಾವಾಗ ಗುರುತನ್ನು ಕಾಣುವುದೆಂಬ ಸ್ಮೃತಿಯೇ ಮುಂತಾದವನ್ನು ಬಯಸುತ್ತಾರೋ ಆಗ ಅನುಮಾನದಿಂದಲೂ, ಯಾವಾಗ ಉಪದೇಶವನ್ನು ಬಯಸುತ್ತಾರೋ ಆಗ ಶಾಸ್ತ್ರವು ಹೊರಡುತ್ತದೆ, ಎಂದು (ನ್ಯಾ. ವಾ ೧–೧–೧ ರಲ್ಲಿ ಹೇಳಿದೆ.) ಅಲ್ಲಿ ತಿಳಿಯದಿರುವವರಾದ ಪುರುಷರ ವ್ಯವಹಾರವು ಅವಿದ್ಯಾಪುರಃಸರವೆಂದಾಗಲಿ, ಆದರೆ ತಿಳಿದವರ ವ್ಯವಹಾರವು ಹಾಗಾಗುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಬಿಟ್ಟರೆ (ಇಡೀ) ಜಗತ್ತೇ ಕುರುಡೆಂದಾಗುತ್ತದೆ.

ಅತ್ರ ಸಮಾಧಾನಮ್ । ಯತ್ತಾವದುಚ್ಯತೇ ನ ವಿವೇಕಿನಾಮಪ್ಯವಿದ್ಯಾ-ಪುರಸ್ಸರಾ ಭವಿತುಮರ್ಹಂತಿ ವ್ಯವಹಾರಾ ಇತಿ । ತತ್ರೋಕ್ತಮೇವಾಸ್ಮಾಭಿಃ ಪ್ರಮಾತೃತ್ವಸಾಮಾನ್ಯಮಾತ್ಮಾನಾತ್ಮನೋರಿತರೇತರಾಧ್ಯಾಸಂ ವಿನಾ ನ ಸಿಧ್ಯತೀತಿ । ಅಧ್ಯಾಸ ಏವಾವಿದ್ಯೇತಿ ಚ । ತೇನ ವಿವೇಕಿನಾಮಪಿ ಪ್ರಮಾತೃತ್ವಂ ಪ್ರಮಾತೃತ್ವಮೇವೇತಿ ತೇಷಾಮಪಿ ವ್ಯವಹಾರೋಽವಿದ್ಯಾಪುರಸ್ಸರ ಏವೇತ್ಯವಗಮ್ಯತೇ । ಅತಸ್ತತ್ರ ನ ಕಿಂಚಿದ್ವಕ್ತವ್ಯಮವಶಿಷ್ಯತೇ । ಯತ್ಪುನರುಚ್ಯತೇ ಪರೀಕ್ಷಕಾಣಾಂ ಶಾಸ್ತ್ರಪ್ರಣಯನಾದಿಪ್ರವೃತ್ತಯೋ ನಾಪ್ರತಿಪನ್ನಾದಿವ್ಯವಹಾರತುಲ್ಯಾ ಭವಿತುಮರ್ಹಂತೀತಿ । ತತ್ರ ಕೋ ವಾನ್ಯಥಾ ಬ್ರೂತೇ ? ನ ಹಿ ವಯಂ ಪ್ರತಿಪನ್ನಾಪ್ರತಿಪನ್ನವಿಭಾಗಮಪ್ಯವಜಾನೀಮಹೇ ಯೇನೇತ್ಥಮುಪಾಲಭ್ಯೇಮಹಿ । ಏತಾವತ್ತು ಬ್ರೂಮಃ । ಸಂತ್ಯೇವ ತೇ ಪ್ರತಿಪನ್ನಾಃ ಪ್ರತಿಪಾದಯಿತಾರಶ್ಚ ಪುರುಷಾಃ । ನ ತಾವತಾ ತೇಷಾಂ ವ್ಯವಹಾರಾ ಅವಿದ್ಯಾಪುರಸ್ಸರತ್ವಮತಿಲಂಘಿತುಮಲಮ್ । ಅವಿದ್ಯಾಂ ವಿನಾ

---

ಇಲ್ಲಿ (ಹೀಗೆ) ಸಮಾಧಾನವು – ವಿವೇಕಿಗಳದ್ದೂ ಅವಿದ್ಯಾಪುರಸ್ಸರವಾದ ವ್ಯವಹಾರವೇ ಆಗಿರುವುದಕ್ಕೆ ಸಾಧ್ಯವಿಲ್ಲ ಎಂದು ಏನು ಹೇಳಿತ್ತು, ಅದಕ್ಕೆ ನಾವು ಹೇಳಿಯೇ ಇದ್ದೇವೆ – ಏನೆಂದರೆ, ಪ್ರಮಾತೃತ್ವವೆಂಬುದೇ ಆತ್ಮಾನಾತ್ಮರುಗಳ ಇತರೇತರಾಧ್ಯಾಸವಿಲ್ಲದೇ ಸಿದ್ಧಿಸುವುದಿಲ್ಲ. ಅಧ್ಯಾಸವೇ ಅವಿದ್ಯೆಯಾಗಿದೆ. ಆದ್ದರಿಂದ ವಿವೇಕಿಗಳ ಪ್ರಮಾತೃತ್ವವೂ ಪ್ರಮಾತೃತ್ವವೇ ಆದ್ದರಿಂದ ಅವರ ವ್ಯವಹಾರವೂ ಕೂಡ ಅವಿದ್ಯಾಪುರಸ್ಸರವಾದದ್ದೆಂದು ಗೊತ್ತಾಗುತ್ತದೆ. ಆದ್ದರಿಂದ ಅಲ್ಲಿ ಏನೂ ಹೇಳಬೇಕಾದದ್ದು ಉಳಿದಿರುವುದಿಲ್ಲ. ವಿದ್ವಾಂಸರ ಶಾಸ್ತ್ರದ ರಚನೆಯೇ ಮುಂತಾದ ಪ್ರವೃತ್ತಿಗಳು, ಏನೂ ತಿಳಿಯದೇ ಇದ್ದವರ ವ್ಯವಹಾರಕ್ಕೆ ಸಮಾನವಾಗಿರಲು ಸಾಧ್ಯವಿಲ್ಲ ಎಂದು ಏನು, (ಪೂ.ಪ.) ಹೇಳಿತ್ತು, ಅದರ ವಿಷಯಕ್ಕೆ ಯಾರು ತಾನೆ ಬೇರೆತರಹ ಹೇಳಿಯಾರು ! ನಾವೇನೂ ವಿವೇಕಿ ಅವಿವೇಕಿಗಳ ವಿಭಾಗವನ್ನೇ ತೆಗೆದುಹಾಕುತ್ತಿಲ್ಲ. ಹಾಗಿದ್ದರೆ, ಹೀಗೆ ನೀವು (ನಮ್ಮನ್ನು) ನಿಂದಿಸಬಹುದಾಗಿತ್ತು. ಇಷ್ಟನ್ನು ಮಾತ್ರ ಹೇಳುವೆವು. ಏನೆಂದರೆ ತಿಳಿದವರು, ತಿಳಿಸಿಕೊಡುವವರು ಎಂಬ ಪುರುಷರ ವಿಭಾಗವು ಇದ್ದೇ ಇದೆ. ಅಷ್ಟು ಮಾತ್ರದಿಂದ ಅವರ ವ್ಯವಹಾರವು (ವೇದಾಂತವು ಹೇಳುವ) ಅವಿದ್ಯಾಪುರಸ್ಸರವೆಂಬುದನ್ನು ಮೀರಿರುವುದಕ್ಕೆ

ವ್ಯವಹಾರಪ್ರಯೋಜಕಪ್ರಮಾತೃತ್ವಸ್ಯೈವಾಸಿದ್ಧೇರಿತಿ । ನ ಚ ತೇ ಪ್ರತಿಪಾದಯಿತಾರಃ ಪ್ರಮಾತೃತ್ವಮಪಿ ಮಿಥ್ಯೇತಿ ಪ್ರತಿಪಾದಯಂತಿ । ತದ್ಯಾವತ್ತೇ ಪ್ರಮಾತೃತ್ವಮಾಧ್ಯಾಸಿಕಮೇವ ಸದಪಿ ಪರಮಾರ್ಥಸತ್ಯಂ ಮನ್ಯಂತೇ, ತಾವತ್ತೇಷಾಮಪಿ ವ್ಯವಹಾರಾ ನೋಕ್ತಾವಿದ್ಯಾಪುರಸ್ಸರತ್ವಮತಿ ವರ್ತಂತ ಇತಿ ನ ಕೋಽಪ್ಯತ್ರ ವಿಶೇಷಃ ॥

**೪೫. ಪುರುಷವ್ಯವಹಾರಸ್ಯ ಪಶ್ವಾದಿವ್ಯವಹಾರಸಾಮ್ಯ-ಪ್ರದರ್ಶನಮ್** – ಇತಶ್ಚೈತದವಗಮ್ಯತೇ । **"ಪಶ್ವಾದಿಭಿಶ್ಚಾವಿಶೇಷಾತ್"**। ಚಶಬ್ದಃ ಪೂರ್ವೋಕ್ತಹೇತುಸಮುಚ್ಚಯಾರ್ಥಃ । ಪಶ್ವಾದಯಃ ಪಶುಪಕ್ಷಿ-ಸರೀಸೃಪಾದಯಃ ವ್ಯವಹಾರಸಮಯೇ ಪುರುಷಾಣಾಂ ಸರ್ವೇಷಾಮಪಿ ಪಶ್ವಾದಿಭಿರವಿಶೇಷಾದೇತಾದೃಶವ್ಯವಹಾರಪ್ರಯೋಜಕಾನಿ ಪ್ರಮಾಣಾನ್ಯ-ವಿದ್ಯಾಪುರಸ್ಸರಾಣ್ಯೇವೇತಿ ನಿಶ್ಚೀಯತ ಇತ್ಯರ್ಥಃ । ಕಥಂ ಪುನಃ ಪುರುಷಾಣಾ-

---

ಶಕ್ಯವಿಲ್ಲ. ಅವಿದ್ಯೆ ಇಲ್ಲದಿದ್ದರೆ ವ್ಯವಹಾರವನ್ನು ನಡೆಸುವ ಪ್ರಮಾತೃವೇ ಸಿದ್ಧಿಸುವದಿಲ್ಲ. (ಮೀಮಾಂಸಾದಿ ಶಾಸ್ತ್ರವನ್ನು) ಪ್ರತಿಪಾದಿಸುವವರು ಪ್ರಮಾತೃತ್ವವನ್ನು ಮಿಥ್ಯೆ ಎಂದು ಹೇಳುವುದಿಲ್ಲ. ಆದ್ದರಿಂದ ಎಲ್ಲಿಯವರೆಗೆ ಪ್ರಮಾತೃತ್ವವು ಆಧ್ಯಾಸಿಕವಾದದ್ದಾದರೂ ನಿಜವಾಗಿರುವಂಥದ್ದೆಂದು ತಿಳಿದಿರುತ್ತಾರೋ ಅಲ್ಲಿಯವರೆಗೆ ಅವರ ವ್ಯವಹಾರವೂ ಸಹ ಹಿಂದೆ ಹೇಳಿದ ಅವಿದ್ಯಾಪುರಸ್ಸರವಾಗಿದೆ ಎಂಬುದನ್ನು ಮೀರಿರುವುದಿಲ್ಲ; ಎಂದಾದ್ದರಿಂದ ಇಲ್ಲೇನೂ ವಿಶೇಷವಿಲ್ಲ.

**೪೫. ಪುರುಷರ ವ್ಯವಹಾರವು ಪಶ್ವಾದಿಗಳ ವ್ಯವಹಾರಕ್ಕೆ ಸಮಾನವಾಗಿದೆ ಎಂದು ತೋರಿಸುವುದು** – ಇದರಿಂದಲೇ ಇದೂ ಗೊತ್ತಾಗುತ್ತದೆ. (ಏನೆಂದರೆ) ಪಶ್ವಾದಿಗಳೊಡನೆ ಸಮಾನವಾಗಿರುವುದರಿಂದ. "ಚ" ಎಂಬ ಶಬ್ದವು ಹಿಂದೆ ಹೇಳಿದ ಕಾರಣವನ್ನು ಸೇರಿಸಿಕೊಳ್ಳಬೇಕೆಂದು ಸೂಚಿಸುವುದಕ್ಕಾಗಿ ಬಂದಿದೆ. ಪಶ್ವಾದಿಗಳು ಎಂದರೆ ಪಶುಪಕ್ಷಿಹಾವು ಮುಂತಾದವುಗಳು ಎಂದರ್ಥ. ವ್ಯವಹಾರಕಾಲದಲ್ಲಿ ಎಲ್ಲಾ ಪುರುಷರ ವ್ಯವಹಾರವೂ ಸಹ ಪಶ್ವಾದಿಗಳೊಡನೆ ಸಮಾನವಾದ್ದರಿಂದ ಆ ರೀತಿಯದಾದ ವ್ಯವಹಾರಕ್ಕೆ ಪ್ರೇರಕವಾಗಿರುವ ಪ್ರಮಾಣಗಳು ಅವಿದ್ಯಾಪುರಸ್ಸರವಾಗಿಯೇ ಇರಬೇಕೆಂದು ನಿಶ್ಚಯವಾಗುತ್ತದೆ ಎಂದರ್ಥವು. ಪಶ್ವಾದಿಗಳ

ಮವಿಶೇಷಃ ಪಶ್ವಾದಿಭಿಃ ? ತೇ ಖಲು ಪಶ್ವಾದಯೋಽಶನಾಪಿಪಾಸಾರ್ದಿತಾ ಅವಿವೇಕಿನಸ್ತಾತ್ಕಾಲಿಕಮೇವ ಯತ್ಕಿಂಚಿದುಪನತಂ ಪರಿಗೃಹ್ಯ ದೇಹಯಾತ್ರಾ-ಮತಿವಾಹಯಂತಿ । ಪುರುಷಾಃ ಪುನಃ ಪ್ರಜ್ಞಾನೇನ ಸಂಪನ್ನತಮಾ ವಿಜ್ಞಾತಂ ವದಂತಿ ವಿಜ್ಞಾತಂ ಪಶ್ಯಂತಿ ಚ । ಲೌಕಿಕೇ ಕುಶಲಕರ್ಮಣಿ ಶಾಸ್ತ್ರೀಯೇ ಚಾಧಿಕೃತಾಸ್ತ ಏವ । ವ್ಯುತ್ಪನ್ನಚಿತ್ತತ್ವಾತ್ । ತತ್ ಕೇನ ಸಾಮಾನ್ಯಮುಚ್ಯತೇ ಪುರುಷಾಣಾಂ ಪಶ್ವಾದಿಭಿರಿತಿ ? ಅತ್ರೋತ್ತರಮಾವಿಷ್ಕುರ್ವನ್ ಸಂಗ್ರಹ ವಾಕ್ಯವಿವರಣಮಾರಭತೇ । **ಯಥಾ ಹಿ ಪಶ್ವಾದಯ** ಇತಿ । ಪಶ್ವಾದಯೋ ಹಿ ಶಬ್ದಾದಿಭಿಃ ಶಬ್ದಸ್ಪರ್ಶರೂಪರಸಗಂಧೈಃ ಶ್ರೋತ್ರಾದೀನಾಂ ಶ್ರೋತ್ರತ್ವ-ಕ್ಚಕ್ಷೂರಸನಾಘ್ರಾಣಾನಾಂ ಜ್ಞಾನೇಂದ್ರಿಯಾಣಾಂ ಸಂಬಂಧೇ ತತ್ತದಿಂದ್ರಿ-ಯಾರ್ಥಸನ್ನಿಕರ್ಷೇ ಸತಿ, ಶಬ್ದಾದಿವಿಜ್ಞಾನೇ ಪ್ರತಿಕೂಲೇ ಜಾತೇ "ಅಯಂ ಶಬ್ದೋ ಮದನಿಷ್ಟಸಾಧನಃ" ಇತ್ಯಾದಿರೂಪೇ ಜ್ಞಾನೇ ಸಮುತ್ಪನ್ನೇ ತತಃ

---

ವ್ಯವಹಾರದೊಡನೆ ಪುರುಷರವ್ಯವಹಾರವೂ ಸಮಾನವೆಂದು ಹೇಗೆ (ಗೊತ್ತಾಗುತ್ತದೆ) ? ಹಸಿವು, ಬಾಯಾರಿಕೆಯಿಂದ ಪೀಡಿತರಾದ ಪಶ್ವಾದಿಗಳು ಅವಿವೇಕಿಗಳಾಗಿದ್ದು ಆ ಕಾಲಕ್ಕೆ ಬಂದೊದಗಿದ್ದನ್ನು ಯಾವುದನ್ನಾದರೂ ಸ್ವೀಕರಿಸಿ ಜೀವನವನ್ನು ನಡೆಸುತ್ತವೆ. ಪುರುಷರಾದರೋ ಹೆಚ್ಚಿನ ತಿಳಿವಳಿಕೆಯಿಂದ ಕೂಡಿದವರಾದ್ದರಿಂದ ತಿಳಿದು ಮಾತನಾಡುತ್ತಾರೆ, ತಿಳಿದುಕೊಂಡು ನೋಡುತ್ತಾರೆ. ಲೌಕಿಕವಾದ ಕುಶಲಕರ್ಮದಲ್ಲೂ ಶಾಸ್ತ್ರೀಯ ಕರ್ಮದಲ್ಲೂ ಅವರೇ ಅಧಿಕಾರಿಗಳಾಗಿರುತ್ತಾರೆ. ಏಕೆಂದರೆ ಅವರು ತಿಳಿದವರಾಗಿರುತ್ತಾರೆ. ಹೀಗಿರುವುದರಿಂದ ಯಾವ ಹೋಲಿಕೆಯಿಂದ ಪಶ್ವಾದಿಗಳೊಡನೆ ಪುರುಷರ ವ್ಯವಹಾರವು ಸಮಾನರೆನ್ನುತ್ತಿರುವಿರಿ ? ಇದಕ್ಕೆ ಉತ್ತರವನ್ನು ಹೇಳುತ್ತಾಮೊದಲು ಸಂಗ್ರಹವಾಕ್ಯದ ವಿವರಣೆಯನ್ನು ಆರಂಭಿಸುತ್ತಿದ್ದಾರೆ "ಯಥಾ ಹಿ ಪಶ್ವಾದಯಃ" ಎಂದು. ಪಶು (ಪಕ್ಷಿಸರೀಸೃಪ)ಗಳು ತಮ್ಮ ಕಿವಿಯೇ ಮುಂತಾದ ಎಂದರೆ ಕಿವಿ, ಚರ್ಮ, ಕಣ್ಣು, ನಾಲಗೆ ಮತ್ತು ಮೂಗು (ಈ) ಜ್ಞಾನೇಂದ್ರಿಯಗಳಿಗೆ ಶಬ್ದವೇ ಮುಂತಾದ ಎಂದರೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳೊಡನೆ ಸಂಬಂಧವಾಗಲಾಗಿ ಆ ಶಬ್ದಾದಿ ತಿಳಿವಳಿಕೆಯು ಪ್ರತಿಕೂಲವಾಗಲಾಗಿ (ಅಂದರೆ) "ಈ ಶಬ್ದವು ನನಗೆ ಅನಿಷ್ಟ ಉಂಟುಮಾಡುವುದಕ್ಕೆ ಸಾಧನವಾಗಿದೆ"

ಶಬ್ದಾದೇರ್ನಿವರ್ತಂತೇ । ಅನುಕೂಲೇ ಜಾತೇ "ಅಯಂ ಶಬ್ದೋ ಮದಿಷ್ಟಸಾಧನಃ" ಇತ್ಯಾದಿರೂಪೇ ಜ್ಞಾನೇ ಸಮುತ್ಪನ್ನೇ ತು ಪ್ರವರ್ತಂತೇ ತಾದೃಶಶಬ್ದಾದೌ । ತತ್ರ ಪ್ರತಿಕೂಲಾನುಕೂಲಜ್ಞಾನೇ ವಿಶೇಷರೂಪೇಣ ಸಮುದಾಹರತಿ ಯಥೇತ್ಯಾದಿನಾ । **ಯಥಾ ದಂಡೋದ್ಯತಕರಂ ಪುರುಷಮಭಿಮುಖಮುಪಲಭ್ಯ ಮಾಂ ಹಂತುಮಯಮಿಚ್ಛತೀತಿ ಪಲಾಯಿತುಮಾರಭಂತೇ** । ತದೇತತ್ ಪ್ರತಿಕೂಲಜ್ಞಾನೇ ಸಮುತ್ಪನ್ನೇ ವಿಷಯಾನ್ನಿವರ್ತಂತ ಇತ್ಯಸ್ಯೋದಾಹರಣಮ್ । **ಯಥಾ ಚ ಹರಿತತೃಣಪೂರ್ಣಪಾಣಿಮುಪಲಭ್ಯ** ಘಾಸಸ್ಯೇಷ್ಟಸಾಧನತಾಮನುಸ್ಮೃತ್ಯ ನೂನಮಯಂ ಮಾಂ ಚಾರಯಿತುಮಿಚ್ಛತೀತಿ ಪ್ರತ್ಯಾಶಯಾ ತಂ ಪುರುಷವಿಶೇಷಂ **ಪ್ರತ್ಯಭಿಮುಖೀಭವಂತಿ** । ತದೇತತ್ ಅನುಕೂಲಜ್ಞಾನೇ ಸಮುತ್ಪನ್ನೇ ವಿಷಯೇ ಪ್ರವರ್ತಂತೇ ಇತ್ಯಸ್ಯೋದಾಹರಣಮ್ । ನನು ಭವತ್ವೇವಂ ಪಶ್ವಾದೀನಾಂ ಯೇ ವಿವೇಕಹೀನಾಃ, ಪುರುಷೇಷು ವ್ಯುತ್ಪನ್ನಚಿತ್ತೇಷು ಕಿಮಾಯಾತಮ್ ? ತತ್ರಾಹ – **ಏವಂ ಪುರುಷಾ ಅಪಿ ವ್ಯುತ್ಪನ್ನಚಿತ್ತಾ** ಇತ್ಯಾದಿ । ಏಷೋಽತ್ರಾಭಿಪ್ರಾಯಃ । ಸತ್ಯಮ್, ವ್ಯುತ್ಪನ್ನಚಿತ್ತಾ

---

ಎಂದು ಈ ರೀತಿಯಾಗಿ ಜ್ಞಾನವಾಗಲಾಗಿ ಆ ಶಬ್ದಾದಿಗಳಿಂದ ಹಿಂತಿರುಗುತ್ತವೆ. "ಈ ಶಬ್ದವು ನನ್ನ ಇಷ್ಟಕ್ಕೆ ಸಾಧನವೆಂದು" ಅನುಕೂಲವಾದ ಜ್ಞಾನವುಂಟಾಗಲಾಗಿ ಆ ಶಬ್ದಾದಿಗಳ ಕಡೆಗೆ ಮುನ್ನುಗ್ಗುತ್ತವೆ. ಆ ಪ್ರತಿಕೂಲ–ಅನುಕೂಲವಿಜ್ಞಾನಗಳು (ಯಾವ ರೀತಿಯದು?) ಎಂದುವಿಶೇಷರೂಪದಿಂದ "ಯಥಾ" ಎಂದು ಹೇಳಿಕೊಂಡು ಉದಾಹರಿಸುತ್ತಾರೆ. "ಯಥಾ ದಣ್ಡೋದ್ಯತಕರಂ.... ಮಾರಭನ್ತೇ" ಎಂದು. ಇದು ಪ್ರತಿಕೂಲವಾದ ಅರಿವುಂಟಾದರೆ ಹಿಂತಿರುಗುತ್ತವೆ ಎಂಬುದಕ್ಕೆ ದೃಷ್ಟಾಂತವು. "ಯಥಾ ಚ ಹರಿತತೃಣ.....ಮುಖೀಭವನ್ತಿ" ಎಂದು ಹುಲ್ಲು ಎಂಬುದು ತನಗೆ ಇಷ್ಟವಾದ ಸಾಧನವೆಂದು ತಿಳಿದು ಖಂಡಿತಾ ಈತ "ನನ್ನನ್ನು ಮೇಯಿಸಲು ಇಷ್ಟಪಡುತ್ತಿದ್ದಾನೆ" ಎಂಬ ಆಸೆಯಿಂದ ಆ ಪುರುಷನ ಕಡೆಗೆ ಹೋಗುತ್ತವೆ. "ಇದು ಅನುಕೂಲವೆಂಬ" ಜ್ಞಾನವುಂಟಾದರೆ ವಿಷಯದಲ್ಲಿ ಪ್ರವರ್ತಿಸುತ್ತವೆ ಎಂಬುದಕ್ಕೆ ದೃಷ್ಟಾಂತವು. ಪಶ್ವಾದಿಗಳಲ್ಲಿ ವಿವೇಕವಿಲ್ಲವಾದ್ದರಿಂದ ಹೀಗಿರಬಹುದು, ತಿಳಿವಳಿಕೆಯುಳ್ಳ ಪುರುಷರ ವಿಷಯಕ್ಕೆ ಇದರಿಂದೇನಾಯಿತು? ಎಂದರೆ, ಅದಕ್ಕೆ "ಏವಂ ಪುರುಷಾ ಅಪಿ ವ್ಯುತ್ಪನ್ನಚಿತ್ತಾ" ಎಂದು ಹೇಳುತ್ತಾರೆ.

ವಿವೇಕಿನೋ ಮನಷ್ಯಾಃ, ಪಶ್ವಾದಯಸ್ತು ನ ತಥೇತಿ । ತಥಾಪಿ ವಿವಕ್ಷಿತಾಂಶೇ ದೃಷ್ಟಾಂತದಾರ್ಷ್ಟಾಂತಿಕಯೋರ್ನಾಸ್ತಿ ವೈಷಮ್ಯಮಿತಿ । ಅಥ ಕೋಽಯಂ ವಿವಕ್ಷಿತಾಂಶಃ । ತದುಚ್ಯತೇ । ತೇಽಪಿ ಖಲು ವ್ಯುತ್ಪನ್ನಚಿತ್ತಾಃ ಪುರುಷಾಃ **ಕ್ರೂರದೃಷ್ಟೀನಾಕ್ರೋಶತಃ ಖಡ್ಗೋದ್ಯತಕರಾನ್ ಬಲವತ ಉಪಲಭ್ಯ ತತೋ ನಿವರ್ತಂತೇ** । ಕ್ರೂರದೃಷ್ಟಿತ್ವೇಽಪಿ ಕೇಚಿತ್ ಪ್ರಸನ್ನಹೃದಯಾ ಇತ್ಯತ ಉಕ್ತಮ್ "ಆಕ್ರೋಶತಃ ಖಡ್ಗೋದ್ಯತಕರಾನ್" ಇತಿ । ತ್ವಾಮಿದಾನೀ-ಮೇವ ನಿಹನಿಷ್ಯಾಮೀತ್ಯಾದಿ ಸಾಕ್ರೋಶಂ ವದಂತೋ ನಿಶಿತಾಯುಧ-ಪ್ರೋನ್ನತಕರಾಶ್ಚೇತಿ ನಿಶ್ಚಿತಲಿಂಗಮಿದಂ ದ್ವಯಂ ಪ್ರತಿಕೂಲೋಪನಿಪಾತ-ಶಂಕಾಯಾಮ್ । ತತ್ರ ಕೇಚಿತ್ ಕ್ರೂರದೃಷ್ಟಯ ಆಕ್ರೋಶಂತಃ ಖಡ್ಗೋದ್ಯತಕರಾ ಅಪಿ ದುರ್ಬಲತ್ವಾದುಪೇಕ್ಷ್ಯಾ ಭವಂತಿ । ತತ್ಪರಿಹಾರಾರ್ಥಂ "ಬಲವತ" ಇತಿ । ಯತ್ರ ಭಯಕಾರಣಂ ಸುನಿಶ್ಚಿತಮ್, ತತೋಽನಿಷ್ಟಾನುಮಾನಮ್,

---

ಇದು ಅಭಿಪ್ರಾಯವು, ಪುರುಷರು ತಿಳಿವಳಿಕೆಯುಳ್ಳವರೇ, ವಿವೇಕಿಗಳೇ ಎಂಬುದು ನಿಜ, ಪಶುಗಳು ಹಾಗಲ್ಲವೆಂಬುದು (ಸತ್ಯವೇ) ಆದರೂ ವಿವಕ್ಷಿತಾಂಶದಲ್ಲಿ ದೃಷ್ಟಾಂತದಾರ್ಷ್ಟಾಂತಿಗಳಿಗೆ ವ್ಯತ್ಯಾಸವಿಲ್ಲ. ಏನು ವಿವಕ್ಷಿತಾಂಶವೆಂದರೆ – ತಿಳಿವಳಿಕೆಯುಳ್ಳ ಪುರುಷರೂ ಸಹ ''ಕ್ರೂರದೃಷ್ಟಿಗಳಾಗಿ ಕೂಗಿಕೊಳ್ಳುತ್ತಾ ಖಡ್ಗವನ್ನು ಎತ್ತಿಕೊಂಡು ಬಲಿಷ್ಠರಾದವರು (ಬರುತ್ತಿರುವುದನ್ನು) ಕಂಡು ಅಲ್ಲಿಂದ ಹಿಂತಿರುಗುತ್ತಾರೆ". ಕೆಲವರದ್ದು ಸ್ವಭಾವದಿಂದಲೇ ಕ್ರೂರದೃಷ್ಟಿಯಾಗಿದ್ದರೂ ಅವರು ಪ್ರಸನ್ನಹೃದಯದವರೂ ಆಗಿರುತ್ತಾರೆ, ಅದಕ್ಕಾಗಿಯೇ (ಭಾಷ್ಯಕಾರರು) "ಆಕ್ರೋಶತಃ ಖಡ್ಗೋದ್ಯತಕರಾನ್" ಎಂಬ ವಿಶೇಷಣವನ್ನು (ಕೊಟ್ಟಿರುತ್ತಾರೆ). "ನಿನ್ನನ್ನೀಗ ಕೊಂದುಬಿಡುತ್ತೇನೆ ಎಂಬೀ ರೀತಿಯಾಗಿ ಗಟ್ಟಿಯಾಗಿ ಹೇಳುತ್ತಾ, ಚೂಪಾದ ಆಯುಧವನ್ನು ಕೈಯಲ್ಲಿ ಎತ್ತಿಕೊಂಡು ಇರುವುದೆಂಬುದು, "ಪ್ರತಿಕೂಲವಾದದ್ದು (ಈಗ ತನಗೆ) ಒದಗಿ ಬಂದಿದೆ" ಎಂಬುದಕ್ಕೆ ನಿಶ್ಚಿತವಾದ ಎರಡು ಗುರುತಾಗಿರುತ್ತದೆ. ಕೆಲವರು ಕ್ರೂರದೃಷ್ಟಿಯಿಂದ ಕೂಗುತ್ತಾ ಕೈಯಲ್ಲಿ ಖಡ್ಗವನ್ನು ಎತ್ತಿ ಹಿಡಿದುಕೊಂಡವರಾಗಿದ್ದರೂ (ಬಲಹೀನನಾಗಿದ್ದರೆ) ದುರ್ಬಲನಾಗಿದ್ದಾನೆಂದು ಅಸಡ್ಡೆ ಮಾಡುತ್ತಾರೆ. ಅದಕ್ಕಾಗಿಯೇ "ಬಲವತಃ" ಎಂಬ (ವಿಶೇಷಣವನ್ನು ಕೊಟ್ಟಿರುತ್ತಾರೆ). ಎಲ್ಲಿ ಭಯಕ್ಕೆ ಕಾರಣವು ನಿಶ್ಚಿತವಾಗಿರುತ್ತದೆಯೋ ಅದರಿಂದ ಅನಿಷ್ಟವಾಗಬಹುದೆಂಬುದು

ತತಶ್ಚ ನಿವೃತ್ತಿರ್ವ್ಯುತ್ಪನ್ನಚಿತ್ತಾನಾಮಪಿ ಪಶ್ವಾದಿನಾಮಿವೇತಿ ಭಾವಃ । **ತದ್ವಿಪರೀತಾನ್** ಸೌಮ್ಯದೃಷ್ಟಿತ್ವಾದಿಯುತಾನ್ ಸಾಧೂನುಪಲಭ್ಯ ತಾನ್ **ಪ್ರತಿ ಪ್ರವರ್ತಂತೇ,** ಸಮುತ್ಪನ್ನಾನುಕೂಲವಿಜ್ಞಾನತ್ವಾತ್ ಪಶ್ವಾದಿವದೇವ। **ಅತಃ ಸಮಾನಃ ಪಶ್ವಾದಿಭಿಃ ಪುರುಷಾಣಾಂ ಪ್ರಮಾಣಪ್ರಮೇಯವ್ಯವಹಾರಃ** । ಅತಃ ಯತ್ರ ಪ್ರತಿಕೂಲವಿಜ್ಞಾನಂ ತತೋ ನಿವೃತ್ತಿಃ, ಯತ್ರ ತ್ವನುಕೂಲವಿಜ್ಞಾನಂ ತತ್ರ ಪ್ರವೃತ್ತಿಃ ಇತಿ ವ್ಯವಹಾರಾತ್ ಸಮಾನ ಏವ ಪಶ್ವಾದಿಭಿಃ ಸರ್ವೇಷಾಂ ಪುರುಷಾಣಾಂ ಪ್ರಮಾಣಪ್ರಮೇಯವ್ಯವಹಾರಃ । ಪ್ರಮಾಣೋತ್ಪನ್ನಜ್ಞಾನೇನ ಪ್ರಮೇಯೇಷು ವ್ಯವಹಾರಃ ಸಮಾನ ಏವೋಭಯತ್ರಾಪೀತ್ಯರ್ಥಃ । ಅತ್ರ ವ್ಯವಹಾರಶಬ್ದೇನೇಷ್ಟಾನಿಷ್ಟಪ್ರಾಪ್ತಿಪರಿಹಾರಾರ್ಥಂ ಪ್ರವೃತ್ತಿನಿವೃತ್ತೀ ಪರಿಗೃಹ್ಯೇತೇ । ಪೂರ್ವಂ ಪ್ರಮಾಣಪ್ರವೃತ್ತಿನಿರೂಪಣೇನಾವಿದ್ಯಾಪುರಸ್ಸರತ್ವಂ ಪ್ರಮಾಣಾನಾಮಾದರ್ಶಿತಮ್ । ಇದಾನೀಂ ತು ಪ್ರಮಾಣವಿಜ್ಞಾನಕೃತಪುರುಷಪ್ರವೃತ್ತಿನಿವೃತ್ತಿರೂಪವ್ಯವಹಾರ-

---

ಅನುಮಾನವು, ಆಗ (ಅವರು) ಬುದ್ಧಿವಂತರಾಗಿದ್ದರೂ ಪಶ್ವಾದಿಗಳಂತೆ ಅಲ್ಲಿಂದ ಓಡಿಹೋಗುವುದೆಂಬುದು ಆಗಿಯೇ ತೀರುತ್ತದೆ. "ಇದಕ್ಕೆ ಬದಲಾಗಿ" ಸೌಮ್ಯದೃಷ್ಟಿಯೇ ಮುಂತಾದವುಗಳಿಂದ ಕೂಡಿದವರಾದ ಸಾಧುಗಳನ್ನು ಕಂಡು ಅವರ ಕಡೆಗೆ ಇವರು ಅನುಕೂಲರೆಂಬ ಅರಿವುಂಟಾಗುವುದರಿಂದ (ಅಲ್ಲೂ) ಪಶ್ವಾದಿಗಳಂತೆಯೇ "ಮುಂದುವರೆಯುತ್ತಾರೆ". "ಆದ್ದರಿಂದ ಪಶ್ವಾದಿಗಳೊಡನೆ ಪುರುಷರಿಗೆ ಪ್ರಮಾಣಪ್ರಮೇಯವ್ಯವಹಾರವು ಸಮಾನವಾದದ್ದೆಂದು ಗೊತ್ತಾಗುತ್ತದೆ". ಎಲ್ಲಿ ಪ್ರತಿಕೂಲದ ಅರಿವೋ ಅಲ್ಲಿ ನಿವೃತ್ತಿಯು, ಎಲ್ಲಿ ಅನುಕೂಲದ ಅರಿವೋ ಅಲ್ಲಿ ಪ್ರವೃತ್ತಿಯು ಎಂಬ ವ್ಯವಹಾರವಿರುವುದರಿಂದ ಪ್ರಮಾಣಪ್ರಮೇಯವ್ಯವಹಾರವು ಎಲ್ಲಾ ಪುರುಷರಿಗೂ ಪಶ್ವಾದಿಗಳೊಡನೆ ಸಮಾನವೇ ಆಗಿರುತ್ತದೆ. ಪ್ರಮಾಣೋತ್ಪನ್ನವಾದ ಅರಿವಿನಿಂದ ಎರಡು ಸಂದರ್ಭದಲ್ಲೂ ಪ್ರಮೇಯದಲ್ಲಿ ವ್ಯವಹಾರವು ಸಮಾನವೇ ಆಗಿದೆ. ಇಲ್ಲಿ ವ್ಯವಹಾರ ಎಂಬ ಶಬ್ದದಿಂದ ಇಷ್ಟಾನಿಷ್ಟಗಳ ಪ್ರಾಪ್ತಿಪರಿಹಾರಕ್ಕಾಗಿ ಪ್ರವೃತ್ತಿನಿವೃತ್ತಿಗಳನ್ನು ಸ್ವೀಕರಿಸಿದೆ. ಮೊದಲು ಪ್ರಮಾಣಗಳ ಪ್ರವೃತ್ತಿಯನ್ನು ಗೊತ್ತುಮಾಡುವುದರಿಂದ ಪ್ರಮಾಣಗಳು ಅವಿದ್ಯಾಪುರಸ್ಸರವಾಗಿವೆ ಎಂಬುದನ್ನು ತೋರಿಸಿತ್ತು, ಈಗಲಾದರೋ ಪ್ರಮಾಣಗಳ ಅರಿವಿನಿಂದಾದ ಪುರುಷರ ಪ್ರವೃತ್ತಿನಿವೃತ್ತಿ-

ನಿರೂಪಣೇನ ತದೇವ ದೃಢೀಕ್ರಿಯತ ಇತಿ ವಿಶೇಷಃ ॥

**೪೬. ಪುರುಷವ್ಯವಹಾರಸ್ಯಾಽವಿದ್ಯಾಪುರಸ್ಸರತ್ವನಿಗಮನಮ್** – ತದೇವಮಿಷ್ಟಂಯೋಗಚಿಕೀರ್ಷಾಽನಿಷ್ಟವಿಯೋಗಚಿಕೀರ್ಷಾ ಚೇತ್ಯೇತದ್ದ್ವಯಂ ಸಾಧಾರಣಂ ಪುರುಷಾಣಾಂ ಪಶ್ವಾದಿಭಿಃ । ತತ್ರೇಷ್ಟಸಾಧನತಾವಿಜ್ಞಾನಂ ತತ್ರ ತತ್ರ ವಿಷಯೇ ಪ್ರವೃತ್ತೌ ಪ್ರಯೋಜಕಮ್, ಅನಿಷ್ಟಸಾಧನತಾವಿಜ್ಞಾನಂ ಚ ನಿವೃತ್ತೌ ಪ್ರಯೋಜಕಮ್, ಇತ್ಯೇತದಪ್ಯುಭಯಸಾಧಾರಣಮಿತ್ಯುಕ್ತಮ್ । ತತಃ ಕಿಮಿತಿ ? ಅತ ಆಹ – **ಪಶ್ವಾದೀನಾಂ ಚ ಪ್ರಸಿದ್ಧೋಽವಿವೇಕಪುರಸ್ಸರಃ ಪ್ರತ್ಯಕ್ಷಾದಿವ್ಯವಹಾರಃ** । ನ ಹಿ ತೇ ಪಶ್ವಾದಯೋ ವಿವಿಚ್ಯಾತ್ಮಾನಮನಾತ್ಮಾನಂ ಚ ವ್ಯವಹರಂತಿ । ನಾಪ್ಯನುಮಾನಕುಶಲಾಃ । ಕಿಂ ತು ಸ್ವಭಾವಮಾತ್ರಾನುಸಾರಿಣಃ ಸ್ವಭಾವಾನುವಿದ್ಧಬುದ್ಧಿಚಾತುರ್ಯಮಾತ್ರಾನುಸಾರಿಣೋ ವಾ । ಅತ ಏವ ಹಿ ವ್ಯಾಘ್ರಗಜಭುಜಂಗ–

---

ರೂಪವಾದ ವ್ಯವಹಾರವನ್ನು ಗೊತ್ತುಮಾಡುವುದರಿಂದ ಅದನ್ನೇ ಗಟ್ಟಿಪಡಿಸಿದೆ ಎಂಬುದೇ ವಿಶೇಷವು.

**೪೬. ಪುರುಷನ ವ್ಯವಹಾರವು ಅವಿದ್ಯಾಪುರಸ್ಸರವಾಗಿದೆ ಎಂಬ (ವಿಚಾರದ) ಉಪಸಂಹಾರವು** :– ಹೀಗೆ ಇಷ್ಟವಾದದ್ದನ್ನು ಹೊಂದಬೇಕೆಂಬುದೂ ಅನಿಷ್ಟವಾದದ್ದನ್ನು ಪರಿಹರಿಸಿಕೊಳ್ಳಬೇಕೆಂಬುದೂ ಇವೆರಡೂ ಪಶ್ವಾದಿಗಳೊಡನೆ ಪುರುಷರಿಗೆ ಸಾಧಾರಣವಾದದ್ದು (ಎಂದು ತೀರ್ಮಾನವಾಯಿತು). ಇಷ್ಟವಾದದ್ದಕ್ಕೆ (ಇದು) ಸಾಧನವಾಗಿದೆ ಎಂಬ ಜ್ಞಾನವು, ಆಯಾ ವಿಷಯದಲ್ಲಿ ತೊಡಗುವುದಕ್ಕೆ ಕಾರಣವೆಂತಲೂ ಅನಿಷ್ಟವಾದದ್ದಕ್ಕೆ ಸಾಧನವೆಂಬುದು ಅದರಿಂದ ನಿವೃತ್ತಿಯಾಗುವುದಕ್ಕೆ ಕಾರಣವು ಎಂಬುದೂ ಇಬ್ಬರಿಗೂ ಸಮಾನ ಎಂದು ಹೇಳಿದ್ದಾಯಿತು. ಇದರಿಂದೇನಾಯಿತು ? ಎಂದರೆ ಹೇಳುತ್ತಾರೆ – "ಪಶ್ವಾದೀನಾಂ ಚ ಪ್ರಸಿದ್ಧಃ ..... ವ್ಯವಹಾರಃ"ಎಂದು. ಪಶ್ವಾದಿಗಳು ಆತ್ಮಾನಾತ್ಮರನ್ನು ವಿಂಗಡಿಸಿಕೊಂಡು ವ್ಯವಹರಿಸುವರೆಂಬುದೇನಿಲ್ಲ ಅಲ್ಲವೇ ? ಅನುಮಾನದಲ್ಲೂ (ಅವು) ಕುಶಲವಾದವುಗಳಲ್ಲ, ಮತ್ತೇನೆಂದರೆ – ಸ್ವಭಾವವನ್ನು ಮಾತ್ರ ಅನುಸರಿಸುವವುಗಳು ಅಥವಾ ಸ್ವಭಾವಕ್ಕೆ ಸೇರಿ ಇರುವ ಬುದ್ಧಿಚಾತುರ್ಯವನ್ನು ಮಾತ್ರ ಅನುಸರಿಸುವವುಗಳು. ಆದ್ದರಿಂದಲೇ ಅಲ್ಲವೇ ಹುಲಿ, ಆನೆ, ಹಾವು

ಮಾದಯೋಽಪಿ ಮನುಷ್ಯೈಃ ಕಥಂಚಿತ್ ಪ್ರಲೋಭ್ಯ ಭೀಷಯಿತ್ವಾ ವಾ ಬಧ್ಯಂತೇ ಸ್ವೇಚ್ಛಾನುವರ್ತಿನಶ್ಚ ಕ್ರಿಯಂತೇ ಇತಿ ಸುಪ್ರಸಿದ್ಧಮೇತತ್ । ಅಥ ಚ ತೇ ಪ್ರತ್ಯಕ್ಷಾದಿವ್ಯವಹಾರವಂತೋ ದೃಶ್ಯಂತೇ । ತಸ್ಮಾನ್ನ ವಿವೇಕ-ವಿಜ್ಞಾನಮಪೇಕ್ಷ್ಯತೇ ವ್ಯವಹಾರೇ ಕಿಂ ತು ಪ್ರತಿಕೂಲಾನುಕೂಲವಿಜ್ಞಾನ-ಸಮುತ್ಪತ್ತಿಮಾತ್ರಮಿತಿ ಸಿದ್ಧಮ್ । ತತ್ರ ಯದುಚ್ಯತೇ ಪ್ರಮಾಣಜನಿತ-ತ್ವಾದ್ವಿಜ್ಞಾನಸ್ಯ ನಾವಿದ್ಯಾಪುರಸ್ಸರತ್ವಂ ವ್ಯವಹಾರಸ್ಯೇತಿ, ತನ್ನ ಸಮೀಚೀನಮಿತಿ ಸ್ಪಷ್ಟಂ ಭವತಿ । ದೃಶ್ಯತೇ ಹಿ ಪ್ರಮಾಣಜನಿತಂ ವಿಜ್ಞಾನಂ ತತ್ಕೃತವ್ಯವಹಾರಶ್ಚ ಸಂಪ್ರತಿಪನ್ನಾವಿವೇಕಭಾವೇಷ್ವಪಿ ಪಶ್ವಾದಿಷು । **ತತ್ಸಾಮಾನ್ಯದರ್ಶನಾ-ದ್ವ್ಯುತ್ಪತ್ತಿಮತಾಮಪಿ ಪುರುಷಾಣಾಂ ಪ್ರತ್ಯಕ್ಷಾದಿವ್ಯವಹಾರಸ್ತತ್ಕಾಲಃ ಸಮಾನ ಇತಿ ನಿಶ್ಚೀಯತೇ** । ತತ್ಸಾಮಾನ್ಯಂ ನಾಮ ತೇನ ಪಶ್ವಾದಿವ್ಯವ-ಹಾರೇಣ ಸಾಮಾನ್ಯಮ್ । ಸ್ವೇಷ್ಟಾನಿಷ್ಟಪ್ರೇಪ್ಸಾಜಿಹಾಸೇ, ತತ್ರ ತತ್ರ

---

ಮುಂತಾದವೂ ಸಹ ಮನುಷ್ಯರು (ತೋರಿಸುವ) ಆಸೆಗೆ ಒಳಗಾಗಿಯೋ (ಅಥವಾ) ಅವರಿಗೆ ಹೆದರಿಯೋ ಕಟ್ಟಿಹಾಕಿದವರಾಗುತ್ತಾರೆ. ಮತ್ತು ಅವರ (ಮನುಷ್ಯರ) ಇಚ್ಛೆಯನ್ನು ಅನುಸರಿಸುವವರಾಗುತ್ತವೆ ಎಂಬುದು ಚೆನ್ನಾಗಿ ಗೊತ್ತಿರುವ ವಿಷಯವಿದು. ಅಲ್ಲವೇ ? ಹಾಗಿದ್ದರೂ ಅವು ಪ್ರತ್ಯಕ್ಷವೇ ಮುಂತಾದ ವ್ಯವಹಾರವುಳ್ಳವುಗಳಾಗಿ ಕಂಡುಬಂದಿವೆ. ಆದ್ದರಿಂದ ವ್ಯವಹಾರದಲ್ಲಿ ವಿವೇಕಜ್ಞಾನವೇನೂ ಅಪೇಕ್ಷಿತವಾಗಿಲ್ಲ, ಮತ್ತೇನೆಂದರೆ ಅನುಕೂಲವಾಗಿದೆ ಮತ್ತು ಪ್ರತಿಕೂಲವಾಗಿದೆ ಎಂಬ ಜ್ಞಾನವುಂಟಾಗುವುದಷ್ಟೇ ವ್ಯವಹಾರಕ್ಕೆ ಸಾಕು ಎಂಬುದು ಸಿದ್ಧವಾಗುತ್ತದೆ. ಹೀಗಿರುವಾಗ ವಿಜ್ಞಾನ-ವೆಂಬುದು ಪ್ರಮಾಣದಿಂದ ಉಂಟಾದದ್ದಾದ್ದರಿಂದ ಅವಿದ್ಯಾಪುರಸ್ಸರವಾಗಿರು-ವುದಕ್ಕೆ ತಕ್ಕದ್ದಲ್ಲ ಎಂದು ಏನು ಹೇಳಿತ್ತು, ಅದು ಸರಿಯಲ್ಲವೆಂಬುದು ಸ್ಪಷ್ಟವಾಯಿತು. ಪ್ರಮಾಣಗಳಿಂದಾಗುವ ಅರಿವು ಮತ್ತು ಅದರಿಂದಾಗುವ ವ್ಯವಹಾರವೂ ಸಹ ಅವಿವೇಕಿಗಳೆಂದು ಗೊತ್ತಾದ ಪಶ್ವಾದಿಗಳಲ್ಲೂ ಕಂಡುಬಂದಿದೆ. ಆದ್ದರಿಂದ "ಅದರ ಸಾಮಾನ್ಯದಿಂದ, ತಿಳಿವಳಿಕೆಯುಳ್ಳ ಪುರುಷರ ಪ್ರತ್ಯಕ್ಷಾದಿವ್ಯವಹಾರವೂ ಸಹ ಆ ಕಾಲಕ್ಕೆ ಸಮಾನವೆಂದು ಗೊತ್ತಾಗುತ್ತದೆ". ಅದರ ಸಾಮಾನ್ಯವೆಂದರೆ, ಆ ಪಶ್ವಾದಿಗಳ ವ್ಯವಹಾರದ ಸಾಮಾನ್ಯವು. ತಮ್ಮ ಇಷ್ಟಾನಿಷ್ಟಗಳನ್ನು ಪಡೆಯಬೇಕೆಂಬ ಮತ್ತು

ತತ್ತತ್ಸಾಧನತಾವಿಜ್ಞಾನೋತ್ಪತ್ತಿಃ, ತತಸ್ತತ್ತತ್ಸಾಧನೋಪಾದಾನಪೂರ್ವಕಂ ತತ್ತತ್ಪ್ರಾಪ್ತಿಪರಿಹಾರಯೋಃ ಪ್ರವೃತ್ತಿನಿವೃತ್ತೀ ಚೇತ್ಯೇತದ್ಧಿ ಸರ್ವಂ ಸಮಾನ-ಮುಭಯೋರಪಿ । ತಸ್ಯಾಸ್ಯ ಸಾಮಾನ್ಯಸ್ಯ ದರ್ಶನಾತ್, ವ್ಯುತ್ಪತ್ತಿಮತಾಮಪಿ ಪುರುಷಾಣಾಂ ಪ್ರತ್ಯಕ್ಷಾದಿವ್ಯವಹಾರಸ್ತತ್ಕಾಲಃ ಸಮಾನ ಇತಿ ನಿಶ್ಚೀಯತೇ । ತಾದೃಶಪ್ರೇಪ್ಸಾಜಿಹಾಸಾನಿಮಿತ್ತಪ್ರವೃತ್ತಿನಿವೃತ್ತಿಕಾಲ ಏವ ಕಾಲೋ ಯಸ್ಯ ಪ್ರತ್ಯಕ್ಷಾದಿವ್ಯವಹಾರಸ್ಯ ಸೋಽಯಂ ಪಶ್ವಾದಿಭಿಃ ಸಮಾನಃ ಪಶ್ವಾದಾವಿವಾ-ವಿವೇಕಪುರಸ್ಸರ ಏವೇತ್ಯವಗಮ್ಯತೇ । ಭವತು ನಾಮ ವಿವೇಕಜ್ಞಾನಂ ಪುರುಷಾಣಾಮ್, ನ ತತ್ಪ್ರತ್ಯಕ್ಷಾದಿವ್ಯವಹಾರೋಪಯೋಗಿ । ನ ಹಿ ಪುರುಷಾಣಾಂ ವ್ಯವಹಾರೇ ಪಶ್ವಾದಿಕೃತವ್ಯವಹಾರಾತ್ ಕಶ್ಚಿದ್ವಿಶೇಷೋ ದೃಶ್ಯತೇ ತತ್ಕಾಲೇ, ಯದುಪಪಾದಕತ್ವೇನ ವ್ಯವಹಾರಕಾರಣಕೋಟೌ

---

ತಪ್ಪಿಸಿಕೊಳ್ಳಬೇಕೆಂಬ ಬಯಕೆಯು, ಅದದ್ದಕ್ಕೆ ಬೇಕಾದ ಸಾಧನಗಳ ತಿಳಿವಳಿಕೆಯುಂಟಾಗುವುದು, ಆಮೇಲೆ ಅಂಥಾ ಸಾಧನಗಳನ್ನು ತೆಗೆದುಕೊಳ್ಳುವುದೆಂಬುದನ್ನು ಮುಂದುಮಾಡಿಕೊಂಡು ಅದದರ ಪ್ರಾಪ್ತಿಪರಿಹಾರಗಳಲ್ಲಿ ಪ್ರವೃತ್ತಿನಿವೃತ್ತಿಗಳು ಎಂಬಿವೆಲ್ಲವೂ ಇಬ್ಬರಿಗೂ ಸಮಾನವು. ಆ ಈ ಸಾಮಾನ್ಯವು ಕಂಡುಬಂದಿರುವುದರಿಂದ ತಿಳಿವಳಿಕೆಯುಳ್ಳ ಪುರುಷರ ಪ್ರತ್ಯಕ್ಷಾದಿವ್ಯವಹಾರವು ಆ ಕಾಲಕ್ಕೆ ಸಮಾನವೆಂದು ಗೊತ್ತಾಗುತ್ತದೆ. ಆ ರೀತಿಯಾದ ಪಡೆಯಬೇಕೆಂಬ ಆಸೆ, ಮತ್ತು ಪರಿಹರಿಸಿಕೊಳ್ಳಬೇಕೆಂಬ ಆಸೆ ನಿಮಿತ್ತವಾದ ಪ್ರವೃತ್ತಿನಿವೃತ್ತಿಗಳ ಕಾಲವೇ ಯಾವ ಪ್ರತ್ಯಕ್ಷಾದಿಗಳಿಗೆ ಕಾಲವಾಗಿದೆಯೋ ಆ ಈ ಕಾಲವು (ತತ್ಕಾಲವು) ಅದು ಪಶು ಮುಂತಾದವುಗಳಂತೆ ಅವಿವೇಕವನ್ನು ಮುಂದುಮಾಡಿಕೊಂಡೇ ಆದದ್ದೆಂದು ಗೊತ್ತಾಗುತ್ತದೆ. ಪುರುಷರ (ಜ್ಞಾನವು) ವಿವೇಕಜ್ಞಾನ ಎಂದೇ ಆಗಲಿ (ಆದರೆ) ಅದು ಪ್ರತ್ಯಕ್ಷಾದಿವ್ಯವಹಾರಕ್ಕೆ ಉಪಯೋಗಿಯಾಗಿದೆ ಎಂಬುದಿಲ್ಲ. ಪಶ್ವಾದಿಗಳು ಮಾಡುವ ವ್ಯವಹಾರಕ್ಕಿಂತ ಪುರುಷರ ವ್ಯವಹಾರವು ತತ್ಕಾಲದಲ್ಲಿ ಯಾವ ವಿಶೇಷವುಳ್ಳದ್ದೆಂಬುದಿಲ್ಲವಷ್ಟೆ? ಹಾಗಿದ್ದರೆ (ಅವರ)

ವಿವೇಕಜ್ಞಾನಸ್ಯಾಪಿ ಪ್ರವೇಶಃ ಸ್ಯಾದಿತಿ ಭಾವಃ । ಏವಂ ಚ ಪ್ರತ್ಯಕ್ಷಾದಿ-ವ್ಯವಹಾರಾಂತಃಪಾತಿಪುರುಷಪ್ರವೃತ್ತಿನಿವೃತ್ತೀ ಇಷ್ಟಾನಿಷ್ಟಸಾಧನವಿಜ್ಞಾನ-ಮಾತ್ರಪೂರ್ವಿಕೇ ಚೇಷ್ಟಾತ್ವಾತ್ ಪಶ್ವಾದಿಚೇಷ್ಟಾವದಿತ್ಯುಕ್ತಂ ಭವತಿ ॥

---

ವಿವೇಕಜ್ಞಾನವನ್ನು ವ್ಯವಹಾರಕ್ಕೆ ಕಾರಣವಾಗಿದೆ ಎಂಬುದರ ರಾಶಿಯಲ್ಲಿ ಸೇರಿಸಬಹುದಾಗಿತ್ತು. ಹೀಗೆ ಪುರುಷರ ಪ್ರವೃತ್ತಿನಿವೃತ್ತಿಗಳೆರಡೂ ಪ್ರತ್ಯಕ್ಷವೇ ಮುಂತಾದ ವ್ಯವಹಾರದ ಮಧ್ಯದಲ್ಲಿ ಸೇರಿರುವಂಥದ್ದು, ಅದು ಇಷ್ಟಾನಿಷ್ಟಗಳ ಸಾಧನದ ತಿಳಿವಳಿಕೆಯಷ್ಟನ್ನೇ ಮುಂದುಮಾಡಿಕೊಂಡು ಆಗುವ ಚೇಷ್ಟೆ-ಯಾಗಿರುವುದರಿಂದ. ಅದು ಪಶ್ವಾದಿಗಳ ಚೇಷ್ಟೆಗೆ ಸಮಾನವೆಂದು ಹೇಳಿದಂತೆ ಆಯಿತು.

**********

## ೬. ಶಾಸ್ತ್ರವ್ಯವಹಾರಸ್ಯಾಪ್ಯವಿದ್ಯಾಪುರಸ್ಸರತ್ವಪ್ರದರ್ಶನಮ್

**ಶಾಸ್ತ್ರೀಯೇ ತು ವ್ಯವಹಾರೇ ಯದ್ಯಪಿ ಬುದ್ಧಿಪೂರ್ವಕಾರೀ ನಾವಿದಿತ್ವಾಽಽತ್ಮನಃ ಪರಲೋಕಸಂಬಂಧಮಧಿಕ್ರಿಯತೇ । ತಥಾಪಿ ನ ವೇದಾಂತವೇದ್ಯಮಶನಾಯಾದ್ಯತೀತಮಪೇತಬ್ರಹ್ಮಕ್ಷತ್ರಾದಿಭೇದಮಸಂಸಾರ್ಯಾತ್ಮತತ್ತ್ವಮಧಿಕಾರೇಽಪೇಕ್ಷತೇ। ಅನುಪಯೋಗಾತ್, ಅಧಿಕಾರವಿರೋಧಾಚ್ಚ । ಪ್ರಾಕ್ಚ ತಥಾಭೂತಾತ್ಮವಿಜ್ಞಾನಾತ್ ಪ್ರವರ್ತಮಾನಂ ಶಾಸ್ತ್ರಮವಿದ್ಯಾವದ್ವಿಷಯತ್ವಂ ನಾತಿವರ್ತತೇ । ತಥಾ ಹಿ "ಬ್ರಾಹ್ಮಣೋ ಯಜೇತ" ಇತ್ಯಾದೀನಿ ಶಾಸ್ತ್ರಾಣ್ಯಾತ್ಮನಿ ವರ್ಣಾಶ್ರಮವಯೋಽವಸ್ಥಾದಿವಿಶೇಷಾಧ್ಯಾಸಮಾಶ್ರಿತ್ಯ ಪ್ರವರ್ತಂತೇ ॥**

---

### ೬ ಶಾಸ್ತ್ರ ವ್ಯವಹಾರವೂ ಅವಿದ್ಯಾಪುರಸ್ಸರವಾಗಿದೆ ಎಂದು ತೋರಿಸುವ (ಘಟ್ಟ)

ಭಾಷ್ಯಾರ್ಥ :- (ಇನ್ನು) ಶಾಸ್ತ್ರದ ವ್ಯವಹಾರದಲ್ಲಿಯೋ ಎಂದರೆ, ಬುದ್ಧಿಪೂರ್ವಕವಾಗಿ (ಕರ್ಮ)ವನ್ನು ಮಾಡುವಾತನು ತನಗೆ ಪರಲೋಕದ ಸಂಬಂಧ'(ವಿದೆ ಎಂಬು)ದನ್ನು ತಿಳಿದುಕೊಳ್ಳದೆ (ಕರ್ಮಕ್ಕೆ) ಅಧಿಕಾರಿಯಾಗಲಾರನೆಂಬುದು ನಿಜ ; ಆದರೂ ವೇದಾಂತವೇದ್ಯವಾಗಿಯೂ ಹಸಿವು ಮುಂತಾದವುಗಳನ್ನು ಮೀರಿರುವದಾಗಿಯೂ ಬ್ರಾಹ್ಮಣ್ಯ, ಕ್ಷತ್ರಿಯತ್ವಮುಂತಾದ ಭೇದಗಳು ಇಲ್ಲದ್ದಾಗಿಯೂ ಸಂಸಾರಿಯಲ್ಲದ್ದಾಗಿಯೂ ಇರುವ ಆತ್ಮತತ್ತ್ವವನ್ನು (ಅರಿತಿರುವದು ಆ ಕರ್ಮವ್ಯವಹಾರದ) ಅಧಿಕಾರಕ್ಕೆ ಬೇಕಾಗಿರುವದಿಲ್ಲ. ಏಕೆಂದರೆ (ಆ ಜ್ಞಾನದಿಂದ ಕರ್ಮಿಗೆ) ಉಪಯೋಗವೂ ಇರುವದಿಲ್ಲ, (ಕರ್ಮದ) ಅಧಿಕಾರಕ್ಕೆ (ಅದು) ವಿರುದ್ಧವೂ ಆಗಿರುತ್ತದೆ. ಅಂಥ ಆತ್ಮವಿಜ್ಞಾನವು (ಉಂಟಾಗುವದಕ್ಕೆ) ಮೊದಲೇ ಹೊರಟಿರುವ ಶಾಸ್ತ್ರವು ಅಜ್ಞಾನಿಯ ವಿಷಯವಾಗದೆ ಹೋಗಲಾರದು. ಆದ್ದರಿಂದಲೇ "ಬ್ರಾಹ್ಮಣನು ಯಾಗಮಾಡಬೇಕು" (?) ಎಂಬುದೇ ಮುಂತಾದ ಶಾಸ್ತ್ರಗಳು ಆತ್ಮನಲ್ಲಿ

**೪೭. ಗ್ರಂಥಸಂಬಂಧಃ** – ಸರ್ವೇಷಾಂ ಪ್ರಮಾಣಪ್ರಮೇಯವ್ಯವಹಾರಾಣಾಮವಿದ್ಯಾಪುರಸ್ಸರತ್ವಂ ಪ್ರತಿಜ್ಞಾತಮ್ । ತದುಪಪಾದನಾಯ ಚ ಪ್ರಮಾತೃತ್ವಸ್ಯ ದೇಹೇಂದ್ರಿಯಾದಿಷ್ವಹಂ–ಮಮಾಭಿಮಾನಪೂರ್ವಕತ್ವಂ ದರ್ಶಿತಮ್ । ಪ್ರವೃತ್ತಿನಿವೃತ್ತಿರೂಪವ್ಯವಹಾರೇ ಚ ಪುರುಷಾಣಾಂ ವಿವೇಕಿನಾಂ ಕೃತಬುದ್ಧೀನಾಮಪಿ ಪಶ್ವಾದಿಭಿಃ ಸಮಾನಯೋಗಕ್ಷೇಮತ್ವಾತ್ ತದ್ವ್ಯವಹಾರೋऽಪ್ಯವಿವೇಕಪುರಸ್ಸರ ಏವೇತ್ಯವಗಮಿತಮ್ । ಶಾಸ್ತ್ರವ್ಯವಹಾರೋऽಪಿ ಚ ಪ್ರಮಾಣವ್ಯವಹಾರತ್ವಾದವಿದ್ಯಾಪುರಸ್ಸರ ಏವೇತ್ಯುಕ್ತಮ್ । ಅಥೇದಾನೀಮಭ್ಯಧಿಕವಿವಕ್ಷಯಾ ಶಾಸ್ತ್ರೀಯವ್ಯವಹಾರಂ ಪುನರಪಿ ಪರೀಕ್ಷಣಾಯ ಸಮಾದತ್ತೇ "ಶಾಸ್ತ್ರೀಯೇ ತು ವ್ಯವಹಾರೇ" ಇತ್ಯಾದಿನಾ ॥

**೪೮. ಶಾಸ್ತ್ರೀಯವ್ಯವಹಾರವಿಷಯೇऽಭ್ಯಧಿಕಾ ಶಂಕಾ** – ತತ್ರ

---

ಆಯಾ ವರ್ಣ, ಆಶ್ರಮ, ವಯಸ್ಸು, ಅವಸ್ಥೆ – ಮುಂತಾದವುಗಳ ಅಧ್ಯಾಸವನ್ನು ಆಶ್ರಯಿಸಿಕೊಂಡು ಹೊರಟಿರುತ್ತವೆ.

**೪೭. ಗ್ರಂಥಸಂಬಂಧವು :** ಎಲ್ಲಾ ಪ್ರಮಾಣಪ್ರಮೇಯವ್ಯವಹಾರವೂ ಅವಿದ್ಯಾಪುರಸ್ಸರ ಎಂಬುದನ್ನು ಪ್ರತಿಜ್ಞೆಮಾಡಿದ್ದಾಯಿತು. ಅದನ್ನು ಸಮರ್ಥನೆ ಮಾಡುವುದಕ್ಕಾಗಿ ಆ ತರಹದ ವ್ಯವಹಾರಕ್ಕೆಲ್ಲ ಆಶ್ರಯವಾದ ಪ್ರಮಾತೃತ್ವವು ದೇಹೇಂದ್ರಿಯಾದಿಗಳಲ್ಲಿ "ನಾನು ನನ್ನದು" ಎಂಬ ಅಭಿಮಾನವನ್ನು ಮುಂದುಮಾಡಿಕೊಂಡು ಆಗುವದೆಂದೂ ತೋರಿಸಿದ್ದಾಯಿತು. ಪ್ರವೃತ್ತಿನಿವೃತ್ತಿ–ರೂಪವಾದ ವ್ಯವಹಾರದಲ್ಲಿ ಬುದ್ಧಿ ಪರಿಶ್ರಮ ಹೊಂದಿದ ವಿವೇಕಿಗಳಾದ ಪುರುಷರಿಗೂ ಪಶ್ವಾದಿಗಳೊಡನೆ ಸಮಾನವಾದ ಯೋಗಕ್ಷೇಮವೆಂಬುದನ್ನೂ ಅವರ ವ್ಯವಹಾರವೂ ಸಹ ಅವಿವೇಕಪುರಸ್ಸರವೇ ಎಂಬುದನ್ನೂ ತಿಳಿಸಿದ್ದಾಯಿತು. ಶಾಸ್ತ್ರವ್ಯವಹಾರವೂ ಸಹ ಪ್ರಮಾಣವ್ಯವಹಾರವಾದ್ದರಿಂದ ಅವಿದ್ಯಾಪುರಸ್ಸರವೇ ಎಂಬುದನ್ನೂ. ತಿಳಿಸಿಕೊಟ್ಟಿದ್ದಾಯಿತು. ಇನ್ನು ಈಗ ಹೆಚ್ಚಿನ ವಿಚಾರವನ್ನು ಹೇಳುವುದಕ್ಕಾಗಿ "ಶಾಸ್ತ್ರೀಯವ್ಯವಹಾರದಲ್ಲಾದರೋ" ಎಂದು ಮುಂತಾಗಿ ಶಾಸ್ತ್ರೀಯ ವ್ಯವಹಾರವನ್ನು ಮತ್ತೊಮ್ಮೆ ಪರೀಕ್ಷೆಗಾಗಿ ತೆಗೆದುಕೊಳ್ಳುತ್ತಾರೆ.

**೪೮. ಶಾಸ್ತ್ರೀಯವ್ಯವಹಾರದಲ್ಲಿ ಹೆಚ್ಚಿನದಾದ ಸಂದೇಹವು** –

"ಶಾಸ್ತ್ರೀಯೇ ತು ವ್ಯವಹಾರೇ" ಇತ್ಯಾರಭ್ಯ ಶಂಕಾಗ್ರಂಥಃ । "ತಥಾಪೀ"ತ್ಯಾರಭ್ಯ ತು ಪರಿಹಾರಗ್ರಂಥಃ । ಶಂಕಾ ತಾವತ್ ಪೂರ್ವಮೇವೋಪವರ್ಣಿತಾ । ಭವತು ನಾಮ ಲೌಕಿಕವ್ಯವಹಾರಾಣಾಮವಿದ್ಯಾಪುರಸ್ಸರತ್ವಮ್ । ದೃಷ್ಟಾರ್ಥತ್ವಾತ್ । ನ ಹಿ ದೃಷ್ಟಾರ್ಥಾ ಪ್ರವೃತ್ತಿರ್ದೇಹವ್ಯತಿರಿಕ್ತಾತ್ಮ-ಜ್ಞಾನಮಪೇಕ್ಷತೇ । ಶಾಸ್ತ್ರೀಯೇಷು ತು ದೇಹಪಾತೋತ್ತರಕಾಲಫಲೇಷು ಕರ್ಮಸು ನ ವ್ಯತಿರಿಕ್ತಾತ್ಮಜ್ಞಾನಂ ವಿನಾ ಪ್ರವೃತ್ತಿರುಪಪದ್ಯತೇ । ವಿದ್ವಾನ್ ಹಿ ಬುದ್ಧಿಪೂರ್ವಕಾರೀ ಕರ್ಮಸ್ವಧಿಕ್ರಿಯತೇ । ಸ ಚ ನಾವಿದಿತ್ವಾಽಽತ್ಮನಃ ಪರಲೋಕಸಂಬಂಧಮಧಿಕ್ರಿಯೇತ । "ಸ್ವರ್ಗಕಾಮೋ ಯಜೇತ" ಇತ್ಯಾದಿ ಶ್ರುತಯೋ ಹಿ ದೇಹಾತಿರಿಕ್ತಂ ಪರಲೋಕಫಲೋಪಭೋಗಯೋಗ್ಯಂ ಕರ್ತಾರಮಂತರೇಣ ನ ಪ್ರಾಮಾಣ್ಯಮಶ್ನುವತೇ । ಅತೋಽಸ್ತ್ಯಾತ್ಮಾ ದೇಹಾತಿರಿಕ್ತೋ ಯಃ ಕರ್ಮಫಲೇನ ಸಂಬಧ್ಯತೇ ಇತಿ ವಿದಿತ್ವೈವ ಹಿ ಬುದ್ಧಿಮಾನ್ ಕರ್ಮ ಪ್ರಾರಭತೇ । ಯಸ್ತು ಮನ್ಯತೇ ನಾಸ್ತಿ ಕಶ್ಚಿದಾತ್ಮಾ

---

"ಶಾಸ್ತ್ರೀಯೇ ತು ವ್ಯವಹಾರೇ" ಎಂದು ಶಂಕಾಗ್ರಂಥವು ಆರಂಭಗೊಂಡು "ತಥಾಪಿ" ಎಂಬುದರಿಂದ ಪರಿಹಾರಗ್ರಂಥವಿರುತ್ತದೆ. ಸಂದೇಹವೇನೆಂಬುದನ್ನು ಹಿಂದೆಯೇ ವರ್ಣಿಸಿದ್ದಾಗಿದೆ. ದೃಷ್ಟಪ್ರಯೋಜನಕ್ಕಾಗಿರುವುದರಿಂದ ಲೌಕಿಕವ್ಯವಹಾರವೆಲ್ಲ ಅವಿದ್ಯಾಪುರಸ್ಸರವೆಂದೇ ಆಗಲಿ. ದೃಷ್ಟಾರ್ಥವಾದ ಪ್ರವೃತ್ತಿಯು ದೇಹಕ್ಕಿಂತ ಬೇರೆಯದಾದ ಆತ್ಮಜ್ಞಾನವನ್ನು ಅಪೇಕ್ಷಿಸುವುದಿಲ್ಲ. ದೇಹಬಿದ್ದುಹೋದಮೇಲೆ ಆಗುವ ಫಲವನ್ನುಳ್ಳ ಶಾಸ್ತ್ರೀಯವ್ಯವಹಾರದಲ್ಲಿ ವ್ಯತಿರಿಕ್ತಾತ್ಮಜ್ಞಾನವಿಲ್ಲದೇ ಪ್ರವೃತ್ತಿ ಎಂಬುದು ಹೊಂದುವುದಿಲ್ಲ. ತಿಳಿದವನೇ ಅಲ್ಲವೆ ವಿವೇಕಪೂರ್ವಕವಾಗಿ ಮಾಡುವವನಾಗಿ ಕರ್ಮದಲ್ಲಿ ಅಧಿಕಾರಿ-ಯಾಗಿರುತ್ತಾನೆ. (ಅದು) ತನಗೆ ಪರಲೋಕಸಂಬಂಧವಿದೆ ಎಂಬುದನ್ನು ತಿಳಿಯದೇ ಅಧಿಕಾರಿಯಾಗುವುದೇ ಇಲ್ಲ. "ಸ್ವರ್ಗಾಕಾಮೋ ಯಜೇತ" ಮುಂತಾದ ಶ್ರುತಿಗಳು ದೇಹಾತಿರಿಕ್ತವಾದ ಪರಲೋಕದಲ್ಲಿ ಫಲವನ್ನು ಅನುಭವಿಸುವುದಕ್ಕೆ ಯೋಗ್ಯವಾದ – ಬೇರೊಬ್ಬ ಕರ್ತೃವಿಲ್ಲದೇ ಪ್ರಾಮಾಣ್ಯವನ್ನೇ ಹೊಂದುವುದಿಲ್ಲ. ಆದ್ದರಿಂದ ಯಾವಾತನು ಕರ್ಮಫಲದೊಡನೆ ಸಂಬಂಧವನ್ನು ಹೊಂದಿರುತ್ತಾನೋ ಅಂತಹ ದೇಹಾತಿರಿಕ್ತನಾದ ಆತ್ಮನಿದ್ದಾನೆಂದು ತಿಳಿದೇ ವಿವೇಕಿಯು ಕರ್ಮವನ್ನು ಆರಂಭಿಸುತ್ತಾನೆ. ದೇಹಾದಿಗಳಿಗಿಂತ ಬೇರೆಯುವನಾದ, ಪರಲೋಕಕ್ಕೆ

ದೇಹಾದಿವ್ಯತಿರಿಕ್ತೋ ಯಃ ಪಾರಲೌಕಿಕೇನ ಫಲೇನ ಸಂಬಧ್ಯೇತೇತಿ, ನಾಸ್ತಿ ಪರಲೋಕ ಇತಿ ವಾ, ಸ ನೈವ ಕರ್ಮಸ್ವಧಿಕ್ರಿಯತೇ ಯಥಾ ಚಾರ್ವಾಕಾದಿಃ। ತತ್ಕಥಮವಿದ್ವದ್ವಿಷಯಃ ಶಾಸ್ತ್ರವ್ಯವಹಾರ ಇತ್ಯಾಕ್ಷೇಪಃ । ಅತ್ರಾऽವಿದಿತ್ವಾ ಪರಲೋಕಸಂಬಂಧಮಿತ್ಯುಪಲಕ್ಷಣಮ್ । ಜನ್ಮಾಂತರಸಂಬಂಧಮಿತ್ಯಪಿ ದ್ರಷ್ಟವ್ಯಮ್ । ಜನ್ಮಾಂತರಲೋಕಾಂತರೇಷ್ಟಾನಿಷ್ಟಪ್ರಾಪ್ತಿಪರಿಹಾರೋ-ಪಾಯೋಪದೇಶಾರ್ಥಂ ಹಿ ಶಾಸ್ತ್ರಪ್ರವೃತ್ತಿರಿತಿ । ಯದ್ಯಪಿ ಚೋದನಾಮಾತ್ರಂ ನ ಭೋಕ್ತಾರಮಾಕ್ಷಿಪತಿ, ಅತತ್ಪರತ್ವಾತ್ । ತಥಾಪಿ ಫಲಭೂತಃ ಸ್ವರ್ಗಾದಿರಪಿ ಮಂತ್ರಾದಿಪ್ರಾಮಾಣ್ಯಾದವಗಮ್ಯತ ಏವ ಶಾಸ್ತ್ರೇಣ, ಫಲಭೋಗೋऽ-ಪ್ಯಾಕ್ಷಿಪತ್ಯೇವ ವ್ಯತಿರಿಕ್ತಾತ್ಮಾನಮಿತ್ಯಭಿಪ್ರಾಯೇಣ “ನಾವಿದಿತ್ವಾತ್ಮನಃ ಪರ-ಲೋಕಸಂಬಂಧಮಧಿಕ್ರಿಯತ” ಇತ್ಯುಕ್ತಮಿತ್ಯನವದ್ಯಮ್ । ಏತೇನ

---

ಸಂಬಂಧಪಟ್ಟುಕೊಂಡವನಾದ ಆತ್ಮನೆಂಬುವನು ಇಲ್ಲವೇ ಇಲ್ಲ, ಪರಲೋಕವೂ ಇಲ್ಲವೇ ಇಲ್ಲ ಎಂದು ಚಾರ್ವಾಕನಂತೆ ತಿಳಿದವನು ಯಾರೂ ಕರ್ಮಕ್ಕೆ ಅಧಿಕಾರಿಯಾಗಿರುವುದಿಲ್ಲ. ಹೀಗಿರುವಾಗ ಶಾಸ್ತ್ರೀಯವ್ಯವಹಾರವು ಅಜ್ಞಾನಿಯ ವಿಷಯವೆಂಬುದು ಹೇಗೆ ? ಎಂದು ಆಕ್ಷೇಪವು. ಇಲ್ಲಿ ಪರಲೋಕಸಂಬಂಧವನ್ನು ತಿಳಿಯದೇ ಎಂದು ಹೇಳಿರುವುದು ಉಪಲಕ್ಷಣಕ್ಕಾಗಿ (ಎಂದು ತಿಳಿಯಬೇಕು). ಜನ್ಮಾಂತರಸಂಬಂಧವನ್ನು (ತಿಳಿಯದೇ) ಎಂಬುದನ್ನು (ಸೇರಿಸಿಕೊಳ್ಳಬೇಕು). ಜನ್ಮಾಂತರದಲ್ಲೂ ಲೋಕಾನ್ತರಗಳಲ್ಲೂ ಹೊಂದ-ಬಹುದಾದ ಇಷ್ಟಾನಿಷ್ಟಪ್ರಾಪ್ತಿಪರಿಹಾರದ ಉಪಾಯವನ್ನು ತೋರಿಸುವುದಕ್ಕಾಗಿ ಅಲ್ಲವೆ ಶಾಸ್ತ್ರವು ಹೊರಟಿರುವುದು ? ಕೇವಲ ವೇದವಾಕ್ಯವು (ತನ್ನ-ಪ್ರಾಮಾಣ್ಯಕ್ಕೆ) ಭೋಕ್ತೃವನ್ನು ಸೇರಿಸಿಕೊಳ್ಳುವುದಿಲ್ಲವೆಂಬುದು ನಿಜ. ಏಕೆಂದರೆ ಅದಕ್ಕೆ ಅದರಲ್ಲಿ ತಾತ್ಪರ್ಯವಿಲ್ಲ, ಆದರೂ ಫಲರೂಪವಾದ ಸ್ವರ್ಗವೇ ಮುಂತಾದವುಗಳೂ ಕೂಡ ಮಂತ್ರಮುಂತಾದ (ಅರ್ಥವಾದ) ಪ್ರಮಾಣದಿಂದ ತಿಳಿದುಬಂದೇ ಬರುತ್ತವೆ, (ಹಾಗೆಯೇ) ಫಲವನ್ನು ಅನುಭವಿಸುವುದೆಂಬುದೂ ಸಹ (ದೇಹಾದಿಗಳಿಗಿಂತ) ಬೇರೆಯಾದ ಆತ್ಮನನ್ನು ತಿಳಿಸಿಯೇ ತೀರುತ್ತದೆ ಎಂಬ ಅಭಿಪ್ರಾಯದಿಂದ ಭಾಷ್ಯಕಾರರು “ನಾವಿದಿತ್ವಾತ್ಮನಃ ಪರಲೋಕಸಂಬಂಧಂ ಅಧಿಕ್ರಿಯತೇ” ಎಂದು ಮುಂತಾಗಿ ಹೇಳಿರುತ್ತಾರಾದ್ದರಿಂದ ಇಲ್ಲಿ ಯಾವ ದೋಷವಿಲ್ಲ. ಇಷ್ಟು ಹೇಳಿದ್ದರಿಂದ

ಮೋಕ್ಷಶಾಸ್ತ್ರಸ್ಯಾಪ್ಯವಿದ್ವದ್ವಿಷಯತ್ವನಿಷೇಧಃ ಕೃತ ಏವ ಭವತಿ । ತತ್ರಾಪಿ ಹ್ಯವಿದಿತ್ವಾತ್ಮನೋ ಮೋಕ್ಷಸಂಬಂಧಂ ನಾಧಿಕ್ರಿಯತೇ ಕಶ್ಚಿದಿತಿ ಸಮಾನಮ್। ತಸ್ಮಾನ್ನ ಕುತ್ರಚಿದಪಿ ಶಾಸ್ತ್ರೀಯವ್ಯವಹಾರಸ್ಯಾವಿದ್ಯಾವದ್ವಿಷಯತ್ವಂ ಸಂಭವದುಕ್ತಿಕಮಿತಿ ಶಂಕಿತುರಭಿಪ್ರಾಯಃ ॥

**೪೯. ಉಕ್ತಶಂಕಾಪರಿಹಾರಃ** – ತದೇತತ್ ಸರ್ವಮಂಗೀಕೃತ್ಯೈವ ಶಾಸ್ತ್ರೀಯವ್ಯವಹಾರಸ್ಯಾವಿದ್ಯಾವದ್ವಿಷಯತ್ವಂ ಪ್ರದರ್ಶಯಿತುಮಾರಭತೇ – **"ತಥಾಪೀ"**ತ್ಯಾದಿನಾ **"ಪ್ರವರ್ತಂತೇ"** ಇತ್ಯೇತದಂತೇನ ಗ್ರಂಥೇನ । **ತಥಾಪೀತಿ** । ದೇಹಾದ್ಯತಿರಿಕ್ತಜ್ಞಾನಮಂಗೀಕೃತ್ಯಾಪಿ ದೋಷಂ ವದಾಮ ಇತ್ಯರ್ಥಃ । ಅತ್ರೇದಂ ವಕ್ತವ್ಯಮ್ । ಕಿಮಿದಮತಿರಿಕ್ತಾತ್ಮವೇದನಂ ನಾಮ ? ಕಿಂ ವಿಧಿಪ್ರತಿಷೇಧಶಾಸ್ತ್ರಶ್ರವಣಾನ್ಯಥಾನುಪಪತ್ತ್ಯಾ ತಾದೃಶಾತ್ಮಾಭ್ಯೂಹ-

---

ಮೋಕ್ಷಶಾಸ್ತ್ರವೂ ಸಹ ಅಜ್ಞಾನಿಯನ್ನು ವಿಷಯಮಾಡಿಕೊಂಡಿದೆ ಎಂಬ (ಸಿದ್ಧಾಂತಿಯ ಮತವನ್ನು) ನಿರಾಕರಿಸಿದಂತಾಯಿತೆಂದು ತಿಳಿಯಬೇಕು. ಏಕೆಂದರೆ ಅಲ್ಲೂ ತಾನು ಮೋಕ್ಷಕ್ಕೆ ಸಂಬಂಧಪಟ್ಟಿಕೊಂಡಿದ್ದಾನೆ ಎಂಬುದನ್ನು ತಿಳಿಯದೇ ಅಧಿಕಾರಿಯಾಗುವುದೇ ಇಲ್ಲ ಎಂಬುದು ಸಮಾನವಾಗಿದೆ. ಆದ್ದರಿಂದ ಎಲ್ಲೂ ಶಾಸ್ತ್ರೀಯವ್ಯವಹಾರವು ಅವಿದ್ಯಾವಂತನನ್ನು ವಿಷಯಮಾಡಿಕೊಂಡಿದೆ ಎಂಬುದು ಹೊಂದುವದಲ್ಲ ಎಂಬುದೇ ಸಂದೇಹ ಮಾಡುವಾತನ ಅಭಿಪ್ರಾಯವು.

**೪೯. ಮೇಲೆ ಹೇಳಿದ ಸಂದೇಹವನ್ನು ಪರಿಹರಿಸುವ (ಭಾಗ)** – ಇದುವರೆಗೆ ಹೇಳಿದ್ದನ್ನೆಲ್ಲ ಒಪ್ಪಿಕೊಂಡೇ "ತಥಾಪಿ" ಎಂದು ಆರಂಭಗೊಂಡು "ಪ್ರವರ್ತನ್ತೇ" ಎಂಬವರೆಗಿನ ಗ್ರಂಥಭಾಗವು ಶಾಸ್ತ್ರೀಯವ್ಯವಹಾರವೂ ಸಹ ಅವಿದ್ಯಾವಂತರ ವಿಷಯವೇ ಎಂಬುದನ್ನು ತೋರಿಸುವುದಕ್ಕಾಗಿ ಆರಂಭ-ವಾಗಿರುತ್ತದೆ. "ತಥಾಪಿ" ಎಂದು ದೇಹಾದಿಗಳಿಗಿಂತ ಬೇರೆಯದಾದ ಜ್ಞಾನವನ್ನು ಒಪ್ಪಿಕೊಂಡರೂ ದೋಷವನ್ನು ಹೇಳುತ್ತೇವೆ ಎಂದರ್ಥ. ಇಲ್ಲಿ (ಅವರು) ಇದನ್ನು ಹೇಳಬೇಕಾಗುತ್ತದೆ, ಏನೆಂದರೆ (ದೇಹಾದಿಗಳಿಗಿಂತ) ಬೇರೆಯಾದ ಆತ್ಮನನ್ನು ತಿಳಿಯುವುದೆಂದರೆ ಏನರ್ಥ ? ವಿಧಿಪ್ರತಿಷೇಧವನ್ನು ತಿಳಿಸುತ್ತಿರುವ ಶಾಸ್ತ್ರವು ಮತ್ತೆ ಯಾವ ರೀತಿಯಿಂದಲೂ ಹೊಂದುವುದಿಲ್ಲ ಎಂಬ ಕಾರಣದಿಂದ ಆ ರೀತಿ ಊಹೆಮಾಡುವುದಷ್ಟೆಯೋ ? ಅಥವಾ ಆ

ಮಾತ್ರಮ್, ಕಿಂ ವಾ ತಾದೃಶಾತ್ಮನ ಅಪರೋಕ್ಷಮಿತಿ । ನ ತಾವದಾ- ಪರೋಕ್ಷ್ಯಮ್, ನ ಹಿ "ಅಯಂ ದೇಹಃ" "ಅಯಮಾತ್ಮಾ" ಇತಿ ವಿವಿಕ್ತಾಭ್ಯಾಂ ಪ್ರತ್ಯಯಾಭ್ಯಾಂ ದೇಹಾತ್ಮಾನೌ ಪಶ್ಯತಿ ಕಶ್ಚಿದಿತ್ಯುಕ್ತಂ ಪ್ರಾಗೇವ। ತಸ್ಮಾದಭ್ಯೂಹಮಾತ್ರಮೇತದಿತಿ ಪರಿಶಿಷ್ಯತೇ । ತಥಾ ಚ ಯಥಾಪ್ರಸಿದ್ಧ- ಮೇವಾತ್ಮಾನಂ ಕರ್ತಾರಂ ಭೋಕ್ತಾರಂ ಚಾಭ್ಯುಪಗಮ್ಯ ತಸ್ಯೈವ ಚ ಜನ್ಮಾಂತರಲೋಕಾಂತರಯೋರಿಷ್ಟಾನಿಷ್ಟಯೋಗಂ ಕಥಂಚಿತ್ ಪರಿಕಲ್ಪ್ಯೈವ ಕರ್ಮಸು ಪ್ರವರ್ತತೇ ನಿವರ್ತತೇ ಚೇತ್ಯಾಪತತಿ । ತಾದೃಶಶ್ಚಾಧಿಕಾರೀ ನ ವಿದ್ವಾನಿತಿ ಭವತಾಪ್ಯಂಗೀಕರ್ತವ್ಯಮ್ । ನ ಹಿ ದೇಹಾದಿಭಿರಯೋಗೇಽಹಂ- ಪ್ರತ್ಯಯೈಕಸಾಧನಸ್ಯಾಽಽತ್ಮನಃ ಕರ್ತೃತ್ವಂ ಸಂಭವತಿ । ನಾಪಿ ದೇಹಸಂಬಂಧಂ ವಿನಾ ಸ್ವರ್ಗಾದಿಲೋಕಗಮನಮುಪಪದ್ಯತೇ । ನತರಾಂ ಸ್ವರ್ಗಾದಿಲೋಕೇಷು ಜನ್ಮಾಂತರೇಷು ವಾ ದೇಹಮಂತರೇಣೈವೇಷ್ಟಾನಿಷ್ಟಾವಿಷಯಸಂಯೋ- ಗಸ್ತತ್ಕೃತಸುಖದುಃಖಾನುಭವೋ ವಾ ಭವೇತ್ । ತಸ್ಮಾದ್ವ್ಯತಿರಿಕ್ತಾತ್ಮ-

---

ರೀತಿಯನಾದ ಆತ್ಮನು ಅಪರೋಕ್ಷವಾಗಿದ್ದಾನೆ (ಎಂಬ ಕಾರಣದಿಂದಲೋ?) ಮೊದಲನೆಯದಾಗಿ ಅಪರೋಕ್ಷವಾಗಿದ್ದಾನೆಂದು (ಹೇಳುವದಕ್ಕಾಗು)ವುದಿಲ್ಲ, ಏಕೆಂದರೆ – "ಇದು ದೇಹವು", "ಇವನು ಆತ್ಮನು" ಎಂದು ವಿಂಗಡವಾದ ಆರಿವಿನಿಂದ ದೇಹಾತ್ಮರುಗಳನ್ನು ಯಾವನೊಬ್ಬನೂ ಕಾಣುವುದಿಲ್ಲ ಎಂದು ನಾವು ಹಿಂದೆಯೇ ಹೇಳಿರುತ್ತೇವೆ. ಆದ್ದರಿಂದ ಇದು ಊಹಾಮಾತ್ರವೆಂದಾಗು- ತ್ತದೆ. ಹಾಗೆಯೇ ಲೋಕಪ್ರಸಿದ್ಧನಾದ ಕರ್ತೃಭೋಕ್ತೃವಾದ ಆತ್ಮನನ್ನು ಒಪ್ಪಿಕೊಂಡು ಅವನಿಗೆ ಜನ್ಮಾಂತರದಲ್ಲೂ ಲೋಕಾಂತರದಲ್ಲೂ ಇಷ್ಟಾ- ನಿಷ್ಟಗಳ ಸಂಬಂಧವನ್ನು ಹೇಗೋ ಕಲ್ಪಿಸಿಕೊಂಡೇ ಕರ್ಮದಲ್ಲಿ ತೊಡಗುವುದು ಹಿಂತಿರುಗುವುದು ಎಂಬುದು ಸಿದ್ಧವಾಗುತ್ತದೆ. ಆ ರೀತಿಯುವನಾದ ಅಧಿಕಾರಿಯು ಜ್ಞಾನಿಯಲ್ಲ ಎಂಬುದನ್ನು ನೀನೂ ಒಪ್ಪಲೇಬೇಕು. ದೇಹಾದಿ- ಗಳೊಡನೆ ಸಂಬಂಧವಾಗದಿದ್ದರೆ ಕೇವಲ ಅಹಂಪ್ರತ್ಯಯ ಒಂದನ್ನೇ ಸಾಧನೆಯಾಗಿಟ್ಟುಕೊಂಡವನಿಗೆ ಕರ್ತೃತ್ವವು ಹೊಂದುವುದಿಲ್ಲ. ದೇಹಾದಿಗಳೊಡನೆ ಸಂಬಂಧವಾಗದೇ ಇದ್ದರೆ ಕೇವಲ ಸ್ವರ್ಗವೇ ಮುಂತಾದ ಲೋಕಕ್ಕೆ ಹೋಗುವುದೆಂಬುದೂ ಹೊಂದುವುದಿಲ್ಲ. ಹಾಗೆಯೇ ಸ್ವರ್ಗವೇ ಮುಂತಾದ ಲೋಕದಲ್ಲಾಗಲೀ ಜನ್ಮಾಂತರದಲ್ಲಾಗಲೀ ದೇಹವೇ ಇಲ್ಲದೆ ಇಷ್ಟಾನಿಷ್ಟವಿಷಯಗಳ ಸಂಬಂಧವಾಗಲೀ ಅದರಿಂದಾಗುವ ಸುಖದುಃಖಾದಿಗಳ

ವೇದನೇಽಪಿ ಕರ್ಮಾಧಿಕಾರಾರ್ಥಮೇವ ದೇಹಾಧ್ಯಾಸಃ ಸಮಾಶ್ರಯಣೀಯಃ। ನ ಚ ವಾಚ್ಯಂ ಯಸ್ಯೇದಂ ಶರೀರಂ ತಸ್ಯೈತದ್ದ್ವಾರಾಪಿ ಸೇತ್ಸ್ಯತಿ ಕರ್ತೃತ್ವಂ ಲೋಕಾಂತರಗಮನಂ ಭೋಕ್ತೃತ್ವಂ ಚೇತಿ । ಯತೋ ದೇಹಾಧ್ಯಾಸಂ ವಿನಾ ದೇಹವ್ಯಾಪಾರೇಣಾಽಽತ್ಮನಃ ಕರ್ತೃತ್ವಭೋಕ್ತೃತ್ವಯೋರಸಂಭವ ಏವ । ನ ಚಾತ್ಮೀಯತ್ವಂ ಸಿದ್ಧಂ ದೇಹಸ್ಯ ವಿನಾಧ್ಯಾಸಮ್ । ಪ್ರತಿವಕ್ಷ್ಯತಿ ಚಾಗ್ರೇ ವಾಸ್ತವಿಕಂ ಶರೀರಾತ್ಮನೋಃ ಸ್ವಸ್ವಾಮಿಸಂಬಂಧಂ ಭಗವಾನ್ ಭಾಷ್ಯಕಾರಃ – "ನ ಹ್ಯಾತ್ಮನಃ ಶರೀರಾತ್ಮಾಭಿಮಾನಲಕ್ಷಣಂ ಮಿಥ್ಯಾಜ್ಞಾನಂ ಮುಕ್ತ್ವಾನ್ಯತಃ ಸಶರೀರತ್ವಂ ಶಕ್ಯಂ ಕಲ್ಪಯಿತುಮ್" (ಸೂ, ಭಾ, ೧–೧–೪,ಭಾ.ಭಾ. ೫೮) ಇತ್ಯಾದಿನಾ । ತದೇವಮಂಗೀಕೃತೇಽಪ್ಯಾತ್ಮನೋಽಹಂ–ಪ್ರತ್ಯಯಗಮ್ಯತ್ವೇ ನ ತಾದೃಶಾತ್ಮವೇದಿನೋಽಪಿ ದೇಹಾಧ್ಯಾಸಂ ವಿನಾ ಕರ್ಮಸ್ವಧಿಕಾರಃ ಸಿಧ್ಯತಿ। ಅತೋಽವಿದ್ವದ್ವಿಷಯತ್ವಮೇವ ಸರ್ವಸ್ಯ ಶಾಸ್ತ್ರೀಯವ್ಯವಹಾರಸ್ಯೇತಿ ತತ್ತ್ವಮ್। ತಥಾಪಿ ಭವತ್ತೋಷಾರ್ಥಂ ಬ್ರೂಮಃ।

---

ಅನುಭವವಾಗಲೀ ಆಗುವುದೇ ಇಲ್ಲ. ಆದ್ದರಿಂದ (ದೇಹ) ವ್ಯತಿರಿಕ್ತನಾದ ಆತ್ಮನನ್ನು ತಿಳಿದಿದ್ದರೂ ಕರ್ಮಗಳಲ್ಲಿ ಅಧಿಕಾರವು ಸಿದ್ಧಿಯಾಗುವುದಕ್ಕಾಗಿಯೇ ದೇಹದಲ್ಲಿ ಅಧ್ಯಾಸವನ್ನು ಆಶ್ರಯಿಸಿಕೊಳ್ಳಬೇಕು. ಈ ಶರೀರವು ಯಾವಾತನದೋ ಅವನಿಗೆ ಇದರ ಮೂಲಕವಾಗಿಯೂ ಕರ್ತೃತ್ವವು, ಲೋಕಾಂತರಕ್ಕೆ ಹೋಗುವುದು, ಭೋಕ್ತೃತ್ವವೂ ಹೊಂದುತ್ತದೆ ಎಂದು ಹೇಳಬಾರದು. ಏಕೆಂದರೆ ದೇಹದೊಡನೆ ಅಧ್ಯಾಸವಾಗದಿದ್ದರೆ ದೇಹವ್ಯಾಪಾರದಿಂದ ಆತ್ಮನಿಗೆ ಕರ್ತೃತ್ವವೂ ಭೋಕ್ತೃತ್ವವೂ ಹೊಂದುವುದೇ ಇಲ್ಲ. ಅಧ್ಯಾಸವಿಲ್ಲದಿದ್ದರೆ ದೇಹವು ತನ್ನದೆಂಬುದೇ ಸಿದ್ಧವಾಗುವುದಿಲ್ಲ. ಶರೀರಕ್ಕೂ ಆತ್ಮನಿಗೂ ವಾಸ್ತವಿಕವಾಗಿ ಸ್ವಸ್ವಾಮಿಭಾವಸಂಬಂಧವಿದೆ ಎಂಬುದನ್ನು ಮುಂದೆ ಭಗವಂತರಾದ ಭಾಷ್ಯಕಾರರು ಅಲ್ಲಗಳೆದಿರುತ್ತಾರೆ. "ಶರೀರವು ನಾನೆಂಬ ರೂಪದಾದ್ದ ಮಿಥ್ಯಾಜ್ಞಾನವನ್ನು ಬಿಟ್ಟರೆ, ಮತ್ತೆ ಯಾವ ಆಧಾರದಿಂದಲೂ ಆತ್ಮನಿಗೆ ಸಶರೀರತ್ವವನ್ನು ಕಲ್ಪಿಸುವುದಕ್ಕಾಗುವು–ದಿಲ್ಲ" (ಸೂ.ಭಾ. ೧–೧–೪) ಎಂದೀರೀತಿ (ಹೇಳಿರುತ್ತಾರೆ). ಹೀಗೆ ಆತ್ಮನು ಅಹಂಪ್ರತ್ಯಯಕ್ಕೆ ತೋರಿಬರುತ್ತಾನೆಂಬುದನ್ನು ಒಪ್ಪಿಕೊಂಡರೂ ಆ ರೀತಿಯಾಗಿ ಆತ್ಮನನ್ನು ತಿಳಿದುಕೊಂಡವನಿಗೂ ದೇಹಾದಿಗಳಲ್ಲಿ (ನಾನೆಂಬ) ಅಧ್ಯಾಸವಾಗದೇ ಕರ್ಮದಲ್ಲಿ (ತೊಡಗುವುದಕ್ಕೆ) ಅಧಿಕಾರವಿರುವದಿಲ್ಲ.

ಅಸ್ತು ದೇಹಾಧ್ಯಾಸಂ ವಿನೈವ ಕರ್ಮಸ್ವಧಿಕ್ರಿಯತೇ ಪರಲೋಕ-ಸಂಬದ್ಧಾತ್ಮಜ್ಞಾನಮಾತ್ರಾದಿತಿ । ತಥಾಪಿ ವೇದಾಂತಪ್ರತಿಪಾದ್ಯಾತ್ಮಸ್ವರೂಪ-ವೇದನಂ ತು ನೈವಾಸ್ತಿ ತಸ್ಯ । ತಥಾ ಚ ಶಾಸ್ತ್ರೀಯವ್ಯವಹಾರಸ್ಯಾಪ್ಯ-ವಿದ್ವದ್ವಿಷಯತ್ವಂ ಯತ್ಪ್ರತಿಜ್ಞಾತಂ ತದವ್ಯಾಹತಮಿತ್ಯಾಹ - **ನ ವೇದಾಂತವೇದ್ಯಮಿತ್ಯಾದಿನಾ** ॥

ಕಃ ಪುನರಯಮಾತ್ಮಸ್ವರೂಪವಿಶೇಷೋ ಯಮವಿದ್ವಾನೇವಾಧಿಕಾರೀ ಶಾಸ್ತ್ರೀಯವ್ಯವಹಾರೇ ? ನನು ಕೃತವಿಪ್ರಣಾಶಾಕೃತಾಭ್ಯಾಗಮಪರಿಹಾರಾಯ ಕರ್ಮಕಾಂಡೀಯೈರಪಿ ನಿತ್ಯಃ ಪುಮಾನಂಗೀಕ್ರಿಯತ ಏವ । ಸ ಚ ಜ್ಞಾನಶಕ್ತಿ-ಸ್ವಭಾವಃ । ಅನ್ಯಥಾ ತಸ್ಯ ಭೋಕ್ತೃತ್ವಾಸಿದ್ಧೇಃ । ಸರ್ವಗತಶ್ಚ । ಅನ್ಯಥಾ

---

ಆದ್ದರಿಂದ ಎಲ್ಲಾ ಶಾಸ್ತ್ರೀಯವ್ಯವಹಾರವೂ ಕೂಡ ಅಜ್ಞಾನಿಯನ್ನೇ ವಿಷಯಮಾಡಿಕೊಂಡಿರುತ್ತದೆ ಎಂಬುದು ತೀರ್ಮಾನವಾಯಿತು. ಆದರೂ ಮೀಮಾಂಸಕನಾದ ನಿನಗೆ ಸಂತೋಷವಾಗುವುದಕ್ಕಾಗಿ ಹೇಳುತ್ತೇವೆ, ಏನೆಂದರೆ (ಆತ್ಮನು) ಪರಲೋಕಕ್ಕೆ ಸಂಬಂಧಪಟ್ಟುಕೊಂಡಿರುತ್ತಾನೆಂಬ ಅಷ್ಟು-ಮಾತ್ರದಜ್ಞಾನದಿಂದ (ದೇಹಾದಿಗಳಲ್ಲಿ) ಅಧ್ಯಾಸವಿಲ್ಲದೆಯೇ ಕರ್ಮಕ್ಕೆ ಅಧಿಕಾರಿಯಾಗಿರುತ್ತಾನಾದರೂ ವೇದಾಂತಗಳಲ್ಲಿ ತಿಳಿಸಿಕೊಡುತ್ತಿರುವ ಆತ್ಮಸ್ವರೂಪದ ತಿಳಿವಳಿಕೆಯು ಆ (ಕರ್ಮವನ್ನು ಮಾಡುತ್ತಿರುವ) ವನಿಗೆ ಇರುವುದೇ ಇಲ್ಲ. ಹಾಗಾಗಿ ಶಾಸ್ತ್ರೀಯವ್ಯವಹಾರವೂ ಅವಿದ್ಯಾವಂತನನ್ನೇ ವಿಷಯಮಾಡಿಕೊಂಡಿದೆ ಎಂದು ಏನು ಪ್ರತಿಜ್ಞೆಮಾಡಿತ್ತೋ ಅದು ತಡೆ ಇಲ್ಲದೇ ನಿಂತಿತು ಎಂಬುದನ್ನು "ನ ವೇದಾನ್ತವೇದ್ಯಂ"ಎಂಬುದಾಗಿ ಹೇಳಿರುತ್ತಾರೆ.

ಆತ್ಮಸ್ವರೂಪದ ವಿಶೇಷವಾದರೂ ಯಾವುದು ? ಯಾವುದನ್ನು ಅರಿಯದವನಾದ್ದರಿಂದ ಶಾಸ್ತ್ರೀಯವಾದ ವ್ಯವಹಾರದಲ್ಲಿ ಅಧಿಕಾರಿಯೆಂದಾ-ಗಿರುವನು ? ಅಲ್ಲಾ ಮಾಡಿದ್ದು ನಾಶವಾಗುವುದು, ಮಾಡದೆ ಇದ್ದದ್ದು ಬಂದೊದಗುವುದೆಂಬ ದೋಷಪರಿಹಾರಕ್ಕಾಗಿ ಕರ್ಮಕಾಂಡ ಶಾಸ್ತ್ರಕಾರರೂ ಸಹ ಪುರುಷನು ನಿತ್ಯನು ಎಂದು ಒಪ್ಪಿಕೊಂಡೇ ತೀರುತ್ತಾರಲ್ಲಾ! (ಹಾಗೆಯೇ) ಆತನು ಜ್ಞಾನಶಕ್ತಿಸ್ವಭಾವದವನೆಂದೂ (ಹೇಳುತ್ತಾರಲ್ಲಾ!) ಹಾಗಿಲ್ಲದಿದ್ದರೆ ಆತನಿಗೆ ಭೋಕ್ತೃತ್ವವೇ ಸಿದ್ಧಿಸುವುದಿಲ್ಲವಲ್ಲಾ! (ಆತನು) ಸರ್ವಗತನೂ

ದೇಹಾಂತರಪ್ರಾಪ್ತ್ಯಸಂಭವಾತ್ ಇತಿ ಹಿ ತೇಽಂಗೀಕುರ್ವಂತಿ । ನ ಚಾನುಮಾನಗಮ್ಯಮೇವಾಽಽತ್ಮತತ್ತ್ವಂ ತೇಷಾಂ । ಅಹಂಪ್ರತ್ಯಯಗಮ್ಯತ್ವೇನ ಮಾನಸಪ್ರತ್ಯಕ್ಷಗಮ್ಯತ್ವಸ್ಯಾಪ್ಯುರರೀಕರಣಾತ್ । ಅತಃ ಕಿಮವಶಿಷ್ಯತೇ ಽಯದವೇದನೇನಾವಿದ್ವಾನ್ ಕರ್ಮಿಣೀತಿ ಭಣ್ಯತೇ ? ತದುಚ್ಯತೇ । ಅಸ್ತ್ಯಾತ್ಮತತ್ತ್ವಂ **ವೇದಾಂತೈಕವೇದ್ಯಮ್** । ನನು ವೇದಾಂತೇಷ್ವಪಿ "ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ" (ಬೃ. ೨-೪-೫) ಇತಿ ಸಂಸಾರಿಣಮೇವ ಪ್ರಸ್ತುತ್ಯ "ಆತ್ಮಾ ವಾ ಅರೇ ದ್ರಷ್ಟವ್ಯಃ" (ಬೃ. ೨-೪-೫) ಇತ್ಯುಚ್ಯತೇ ನಾಧಿಕಂ ಕಿಮಪಿ ? ನೈತದೇವಮ್ । ತತ್ರ ಹಿ ಬೋಧ್ಯಮಾನ ಆತ್ಮಾ **ಅಶನಾಯಾದ್ಯತೀತಃ**, ಅಶನಾಯಾ, ಪಿಪಾಸಾ, ಜರಾ, ಮೃತ್ಯುಃ, ಶೋಕೋ, ಮೋಹಶ್ಚೇತ್ಯೇವಮಾದಯೋಽಶನಾಯಾದಯಃ । ತಾನತೀತಃ ದೇಹಪ್ರಾಣಮನೋಧರ್ಮವರ್ಜಿತ ಇತ್ಯರ್ಥಃ । "ಯೋಽಶನಾಯಾಪಿಪಾಸೇ

---

(ಎನ್ನುತ್ತಾರೆ), ಹಾಗಿಲ್ಲದಿದ್ದರೆ ಆತನಿಗೆ ದೇಹಾಂತರದ ಪ್ರಾಪ್ತಿಯಾಗುವು-ದೆಂಬುದೇ ಹೊಂದುವುದಿಲ್ಲ ಎಂದಲ್ಲವೆ ಒಪ್ಪಿಕೊಳುತ್ತಾರೆ ? ಅವರು ಆತ್ಮನು ಅನುಮಾನಗಮ್ಯನೆಂತಲೇ ಎಂದೇನೂ ಹೇಳುವುದಿಲ್ಲವಲ್ಲ! ನಾನೆಂಬ ಅರಿವಿಗೆ ಗೋಚರವಾಗುವುದರ ಮೂಲಕ ಮಾನಸಪ್ರತ್ಯಕ್ಷವೆಂತಲೂ ಒಪ್ಪಿಕೊಳುತ್ತಾರಲ್ಲಾ ! ಹೀಗಿರುವುದರಿಂದ ಯಾವ (ಆತ್ಮನನ್ನು) ಅರಿಯದೇ ಇರುವುದರಿಂದ ಅಜ್ಞಾನಿಯಾಗಿ ಕರ್ಮದಲ್ಲಿ ಅಧಿಕಾರಿಯಾಗಿರುತ್ತಾನೆಂದು ಹೇಳಲು ಏನು ಉಳಿದುಕೊಂಡಿದೆ? (ಸಿದ್ಧಾಂತ)-ಇದಕ್ಕೆ ಹೇಳುತ್ತೇವೆ. ವೇದಾಂತ ಒಂದರಿಂದಲೇ ತಿಳಿದುಬರುವ, ಆತ್ಮತತ್ತ್ವವೆಂಬುದೊಂದುಂಟು. (ಆಕ್ಷೇಪ) - "ಆತ್ಮನ ಬಯಕೆಗಾಗಿಯೇ ಎಲ್ಲವೂ ಪ್ರಿಯವಾಗಿರುತ್ತದೆ" (ಬೃ-೨-೪-೫) ಎಂದು ಸಂಸಾರಿಯಾದ ಆತ್ಮನನ್ನೇ ಆರಂಭಿಸಿಕೊಂಡು "ಆತ್ಮನನ್ನೇ ಎಲೆ ಕಂಡುಕೊಳ್ಳಬೇಕು" (ಬೃ-೨-೪-೫) ಎಂದು ವೇದಾಂತಗಳಲ್ಲಿಯೇ ಹೇಳಿರುತ್ತದೆಯೇ ಹೊರತು ಹೆಚ್ಚೇನೂ ಹೇಳಿಲ್ಲವಲ್ಲ! (ಉತ್ತರ) ಹಾಗಲ್ಲ. ಅಲ್ಲಿ ತಿಳಿಸಬೇಕಾದ ಆತ್ಮನು "ಅಶಾನಾಯಾದಿಗಳನ್ನು ಮೀರಿದವನು" ಅಂದರೆ - ಹಸಿವು, ಬಾಯಾರಿಕೆ, ಮುಪ್ಪು, ಮರಣ, ಶೋಕ, ಮೋಹ, ಎಂಬಿವುಗಳೇ ಅಶನಾಯಾದಿಗಳು. ಅವುಗಳನ್ನು ಮೀರಿದವನೆಂದರೆ ದೇಹಪ್ರಾಣಮನಸ್ಸಿನಧರ್ಮವನ್ನು ಮೀರಿದವನು ಎಂದರ್ಥವು. ಶ್ರುತಿಯೂ

**ಶೋಕಂ, ಮೋಹಂ, ಜರಾಂ ಮೃತ್ಯುಮತ್ಯೇತಿ" (ಬೃ. ೩-೫-೧)** ಇತ್ಯಾದಿಶ್ರುತಿಭ್ಯಃ । **ಅಪೇತಬ್ರಹ್ಮಕ್ಷತ್ರಾದಿಭೇದಃ ।** ಬ್ರಹ್ಮಕ್ಷತ್ರವಿಡ್ಬ್ರಹ್ಮಚಾರಿ- ಗೃಹಸ್ಥವಾನಪ್ರಸ್ಥಭಿಕ್ಷುತ್ವರೂಪಾ ಭೇದಾ ಅಪೇತಾ ಯಸ್ಮಾತ್, ಸೋಽಯಮಾತ್ಮಾ ಅಪೇತಬ್ರಹ್ಮಕ್ಷತ್ರಾದಿಭೇದಃ । ವರ್ಣಾಶ್ರಮಭೇದಶೂನ್ಯ ಇತ್ಯರ್ಥಃ । "ಬ್ರಹ್ಮ ತಂ ಪರಾದಾದ್ಯೋಽನ್ಯತ್ರಾಽಽತ್ಮನೋ ಬ್ರಹ್ಮ ವೇದ" (ಬೃ. ೨-೪-೬) ಇತ್ಯಾದಿಶ್ರುತಿಭ್ಯಃ । ಅತ ಏವಾಯಮ**ಸಂಸಾರೀ** ಸಂಸಾರಧರ್ಮವರ್ಜಿತಃ, ಕರ್ತೃತ್ವಭೋಕ್ತೃತ್ವರಹಿತ ಇತ್ಯರ್ಥಃ । "ಯ ಆತ್ಮಾ ಅಪಹತಪಾಪ್ಮಾ" (ಛಾ. ೮-೭-೧) ಇತ್ಯಾದಿಶ್ರುತಿಭ್ಯಃ । ತದಿದಂ **ವೇದಾಂತವೇದ್ಯಮಶನಾಯಾದ್ಯತೀತಮಪೇತಬ್ರಹ್ಮಕ್ಷತ್ರಾದಿಭೇದಮ- ಸಂಸಾರ್ಯಾತ್ಮತತ್ತ್ವಮ್ ।** ನನ್ವೇತದ್ವಿಶೇಷಣಪೂಗಂ ವೇದಾಂತೋಪ- ದಿಷ್ಟಂ ಕರ್ಮಶೇಷಸ್ಯೈವಾಽಽತ್ಮನಃ ಸ್ತುತಿತ್ವೇನೋಪಯೋಕ್ಷ್ಯತೇ ।

---

ಸಹ "ಯಾವನು ಅಶನಾಯಾ, ಪಿಪಾಸಾ, ಶೋಕ ಮೋಹ ಮತ್ತು ಮುಪ್ಪು, ಮರಣವನ್ನು ಮೀರಿರುತ್ತಾನೋ" ಎಂದು(ಬೃ. ೩-೫-೧) ಹೇಳುತ್ತಿದೆ ಮತ್ತು "ಬ್ರಹ್ಮಕ್ಷತ್ರಾದಿ ಭೇದವು ಇಲ್ಲದ್ದು", ಎಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಎಂಬೀ ರೂಪದ್ದಾದ ಭೇದವು ಯಾವುದಕ್ಕಿಲ್ಲವೋ ಆ ಈ ಆತ್ಮವು ಅಪೇತಬ್ರಹ್ಮಕ್ಷತ್ರಾದಿಭೇದವು. ವರ್ಣಾಶ್ರಮ ಭೇದವಿಲ್ಲದ್ದೆಂದರ್ಥವು. "ಯಾವಾತನು ತನಗಿಂತ ಬ್ರಾಹ್ಮಣಜಾತಿಯನ್ನು ಬೇರೆಯಾಗಿ ಕಾಣುವನೋ ಆತನನ್ನು ಆ ಬ್ರಾಹ್ಮಣಜಾತಿಯು ತಿರಸ್ಕರಿಸೀತು" ! (ಬೃ. ೨-೪-೬), ಎಂದು ಶ್ರುತಿ ಇರುವುದರಿಂದಲೂ ಇದು ಹೀಗೆಯೇ. ಆದ್ದರಿಂದಲೇ ಈ ಆತ್ಮನು ಅಸಂಸಾರಿಯು, ಸಂಸಾರಧರ್ಮವಿಲ್ಲದವನು, ಕರ್ತೃತ್ವಭೋಕ್ತೃತ್ವ- ವಿಲ್ಲದವನು ಎಂದರ್ಥವು. "ಯಾವ ಆತ್ಮನು ಪುಣ್ಯ ಪಾಪದ ಹೊಡೆತವಿಲ್ಲ- ದವನೋ" (ಛಾಂ. ೮-೭-೧) ಎಂಬಿವೇ ಮುಂತಾದ ಶ್ರುತಿ (ಯಿಂದ ಇದು ಗೊತ್ತಾಗುತ್ತದೆ). ಆ ಈ "ಆತ್ಮತತ್ತ್ವವು ವೇದಾನ್ತದಿಂದ ತಿಳಿದುಬರು- ವಂಥದ್ದು, ಹಸಿವೇ ಮುಂತಾದವುಗಳನ್ನು ಮೀರಿದ್ದು ಬ್ರಹ್ಮಕ್ಷತ್ರಾದಿ ಭೇದವಿಲ್ಲದ್ದು" (ಎಂದರ್ಥವು). ಈ ಮೇಲೆ ವರ್ಣಿಸಿದ ವೇದಾನ್ತೋಪ- ದಿಷ್ಟವಾದ ಗುಣಸಮೂಹವು ಕರ್ಮಕ್ಕೆ ಶೇಷನಾದ ಆತ್ಮನನ್ನು ಹೊಗಳುವುದಕ್ಕೇ ಉಪಯುಕ್ತವಾಗಿದೆ ಎಂದೆನ್ನಬಹುದಲ್ಲಾ ! (ಅಂತಹ) ಆತ್ಮನಿದಾನೆಂಬುದನ್ನು

ಆತ್ಮಾಸ್ತಿತಾಜ್ಞಾನಸ್ಯ ದಾರ್ಢ್ಯಾಯ ಹಿ ವೇದಾಂತವಾಕ್ಯಾನಾಂ ಪ್ರವೃತ್ತಿರಿತಿ ವದಂತಿ । ತಥಾ ಚ **ಮೀಮಾಂಸಕಪ್ರಕಾಂಡಾನಾಂ** ವಚನಮ್ "ಕರ್ಮಪ್ರವೃತ್ತಿಹೇತುತ್ವಮಾತ್ಮಜ್ಞಾನಸ್ಯ ಲಕ್ಷ್ಯತೇ" (ಶ್ಲೋ.ವಾ.) ಇತಿ । ನೇತ್ಯುಚ್ಯತೇ । ನ ಹ್ಯೇತದಾತ್ಮತತ್ತ್ವಾಧಿಕಾರೇಽಪೇಕ್ಷ್ಯತೇ । ಕುತಃ ? **ಅನುಪಯೋಗಾತ್, ಅಧಿಕಾರವಿರೋಧಾಚ್ಚ** । ಯದ್ವಿನಾ ಹಿ ಯಸ್ಯಾನಿರ್ವಾಹಸ್ತಸ್ಯ ತದಪೇಕ್ಷೇತಿ ಯುಕ್ತಮ್ । ಶಾಸ್ತ್ರೀಯಶ್ಚ ವ್ಯವಹಾರೋ ವಿನಾ ಕರ್ತೃಭೋಕ್ತ್ರಾತ್ಮವಿಜ್ಞಾನಂ ನ ನಿರ್ವಹತಿ । ಅತಸ್ತತ್ರ ತನ್ಮಾತ್ರ-ಮಪೇಕ್ಷ್ಯತ ಇತಿ ಯುಕ್ತಮ್ । ನ ಪುನರಸಂಸಾರ್ಯಾತ್ಮಜ್ಞಾನಮಪ್ಯಪೇಕ್ಷ್ಯತೇ। ತಸ್ಯ ತತ್ರಾನುಪಯೋಗಾತ್। ನ ಕೇವಲಮನುಪಯೋಗಾತ್ । ಪ್ರತ್ಯುತ ವಿರೋಧಾಚ್ಚ । ವಿರುಧ್ಯತೇ ಹೀದಮಕರ್ತ್ರಭೋಕ್ತ್ರಾತ್ಮವಿಜ್ಞಾನಂ ಸರ್ವಥಾ ಕರ್ಮಾಧಿಕಾರವಿಶೇಷಣೇನ । ಅಕರ್ತಾ, ಕರ್ಮಕರೋತ್ಯಭೋಕ್ತಾ ಚ

---

ಗಟ್ಟಿಪಡಿಸುವುದಕ್ಕಾಗಿಯೇ ವೇದಾನ್ತವಾಕ್ಯಗಳು ಹೊರಟಿವೆ ಎಂದಲ್ಲವೆ (ಮೀಮಾಂಸಕರು) ಹೇಳುತ್ತಾರೆ ! ಹಾಗೆಯೇ ಅಲ್ಲವೇ "ಆತ್ಮಜ್ಞಾನವು ಕರ್ಮಪ್ರವೃತ್ತಿಗೆ ಕಾರಣವನ್ನು ಹೇಳುವುದು ಕಂಡುಬಂದಿದೆ" (ಶ್ಲೋ.ವಾ) ಎಂಬ "ಮೀಮಾಂಸಕರಲ್ಲಿ ಪ್ರಕಾಂಡರಾದ (ಕುಮಾರಿಲರ) ವಚನವಿರುವುದು? ಎಂದರೆ ಇದು ಸರಿಯಲ್ಲ, ಏಕೆಂದರೆ ಈ ಆತ್ಮತತ್ತ್ವವು ಕರ್ಮಾಧಿಕಾರಕ್ಕೆ ಬೇಕಿರುವುದಿಲ್ಲ. ಹೇಗೆ? ಉಪಯೋಗವಿಲ್ಲದರಿಂದಲೂ ಅಧಿಕಾರದಲ್ಲಿ ವಿರೋಧವಾಗುವುದರಿಂದಲೂ. ಯಾವುದಿಲ್ಲದೇ ಇದ್ದರೆ ಯಾವುದನ್ನು ಮಾಡುವುದಕ್ಕೇ ಆಗುವುದಿಲ್ಲವೋ ಅದಕ್ಕೆ ಅದರ ಅಪೇಕ್ಷೆ ಇರುತ್ತದೆ ಎಂಬುದು ಯುಕ್ತವಾಗುತ್ತದೆ. ಕರ್ತೃಭೋಕ್ತೃವಾದ ಆತ್ಮನ ಅರಿವಿಲ್ಲದೇ ಶಾಸ್ತ್ರೀಯವ್ಯವಹಾರವು ಸಾಗುವುದಿಲ್ಲ, ಆದ್ದರಿಂದ ಅಷ್ಟನ್ನು ಮಾತ್ರ ಅದು ಅಪೇಕ್ಷಿಸಿಕೊಳ್ಳುತ್ತದೆ ಎಂಬುದು ಯುಕ್ತವಾಗಿದೆ. ಆದರೆ ಅಸಂಸಾರಿಯಾದ ಆತ್ಮನ ಜ್ಞಾನವನ್ನು ಅಪೇಕ್ಷಿಸಿಕೊಳ್ಳುತ್ತದೆ ಎಂಬುದು ಸರಿಯಲ್ಲ. ಏಕೆಂದರೆ ಅದು ಅಲ್ಲಿ ಉಪಯೋಗವಾಗುವುದಿಲ್ಲ. ಉಪಯೋಗವಾಗುವುದಿಲ್ಲ-ವೆಂಬುದಷ್ಟೇ ಅಲ್ಲ ಅದಕ್ಕೆ ವಿರೋಧವೂ ಆಗಿರುತ್ತದೆ.ಅಕರ್ತೃವೂ ಅಭೋಕ್ತೃವೂ ಆದ ಆತ್ಮನ ಜ್ಞಾನವು ಎಲ್ಲಾ ರೀತಿಯಿಂದಲೂ ಕರ್ಮಾಧಿಕಾರಕ್ಕೆ ಬೇಕಾದ ಜ್ಞಾನದೊಡನೆ ವಿರೋಧವೂ ಆಗಿರುತ್ತದೆ. ಕರ್ತೃವಲ್ಲದವನು ಕರ್ಮವನ್ನು ಮಾಡುತ್ತಾನೆ, ಭೋಕ್ತೃವಲ್ಲದವನು

ಪಾರಲೌಕಿಕಫಲೇನ ಸಂಬಧ್ಯತ ಇತ್ಯತಿಸ್ಫುಟೋ ವ್ಯಾಘಾತಃ । ಅತೋ ನ ಕರ್ಮಶೇಷಜ್ಞಾನಮಿದಮ್, ನ ವಾ ಸ್ತುತಿಃ । ಅಕರ್ಮಪ್ರಕರಣತ್ವಾತ್, ಕರ್ಮಾಧಿಕಾರಭಂಜಕತ್ವಾಚ್ಚೇತಿ ಜ್ಞೇಯಮ್ । ಏತೇನೇದಮಪ್ಯಪಾಸ್ತಂ ಯದಾಹುಃ ಕರ್ಮಲಾಲಸಾಃ – ಉಪಾಸನಾರ್ಥತ್ವಾದೇಷಾಂ ವಾಕ್ಯಾನಾ-ಮಭ್ಯುದಯಫಲವತ್ತ್ವಂ ನಿಶ್ರೇಯಸಫಲವತ್ತ್ವಂ ಚ । "ಸೋಽಶ್ನುತೇ ಸರ್ವಾನ್ ಕಾಮಾನ್" ( ತೈ. ೨-೧), "ಸ ಸರ್ವಾಗ್‌ಶ್ಚ ಲೋಕಾನಾಪ್ನೋತಿ" (ಛಾ. ೮-೭-೧), "ನ ಚ ಪುನರಾವರ್ತತೇ" (ಛಾ, ೮-೧೫-೧) ಇತ್ಯದೃಷ್ಟಫಲ-ಶ್ರವಣಾತ್ – ಇತಿ । ಅಸಂಸಾರ್ಯಾತ್ಮತತ್ತ್ವಜ್ಞಾನಸ್ಯೋಪಾಸನಾರ್ಥತ್ವೇ ಮಾನಾಭಾವಾತ್, ಅಧಿಕಾರವಿರೋಧಾಚ್ಚ । ನ ಚ ವಯಮುಪಾಸನ-ಜ್ಞಾನಾನಾಮಭ್ಯುದಯಾರ್ಥತ್ವಂ ಕ್ರಮಶೋ ನಿಶ್ರೇಯಸಾರ್ಥತ್ವಂ ವಾ

---

ಪರಲೋಕದ ಫಲದೊಡನೆ ಸಂಬಂಧಪಟ್ಟುಕೊಳ್ಳುತ್ತಾನೆಂದರೆ ತನಗೆತಾನೇ ವಿರೋಧವೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ಈ (ಆತ್ಮಜ್ಞಾನವು) ಕರ್ಮಕ್ಕೆ ಶೇಷವಾದ ಜ್ಞಾನವೆಂಬುದಾಗಲೀ, (ಕರ್ತೃವಿನ) ಸ್ತುತಿ ಎಂಬುದಾಗಲೀ ಅಲ್ಲ. (ಈ ಆತ್ಮಜ್ಞಾನವು) ಕರ್ಮಪ್ರಕರಣದಲ್ಲಿ (ಹೇಳಿಲ್ಲವಾದ್ದ)ರಿಂದಲೂ ಕರ್ಮಾಧಿಕಾರವನ್ನು ಮುರಿದುಹಾಕುವಂಥದ್ದಾದ್ದರಿಂದಲೂ ಇದು ಹೀಗೆಯೇ ಎಂದು ತಿಳಿಯಬೇಕು. ಹಾಗೆಯೇ "ಎಲ್ಲಾ ಕಾಮಗಳನ್ನು ಆತನು ಒಮ್ಮೆಗೇ ಅನುಭವಿಸುತ್ತಾನೆ" (ತೈ. ೨-೧), "ಆತನು ಎಲ್ಲಾ ಲೋಕಗಳನ್ನು ಪಡೆದುಕೊಳ್ಳುತ್ತಾನೆ". (ಛಾಂ. ೮-೭-೧) "ಪುನಃ ಮರಳಿ ಬರುವದಿಲ್ಲ" (ಛಾಂ. ೮-೧೫-೧) ಎಂದೀರೀತಿಯಾಗಿ ಅದೃಷ್ಟಫಲವನ್ನು ಹೇಳಿರುವದರಿಂದ ಈ ವಾಕ್ಯಗಳು ಉಪಾಸನೆಗಾಗಿ ಬಂದಿರುವದರಿಂದಲೂ ಇವು ಅಭ್ಯುದಯ-ಫಲವುಳ್ಳದ್ದೆಂತಲೂ ನಿಶ್ರೇಯಸಫಲವುಳ್ಳದ್ದೆಂತಲೂ ಕರ್ಮಕ್ಕೆ ಜೋತುಬಿದ್ದವರು ಏನು ಹೇಳುತ್ತಾರೆ, ಅದೂ ಕೂಡ ಇದರಿಂದ ತಳ್ಳಿ ಹಾಕಿದಂತಾಯಿತು. ಅಸಂಸಾರಿಯಾದ ಆತ್ಮತತ್ತ್ವಜ್ಞಾನವು ಉಪಾಸನೆಗಾಗಿ ಬಂದಿದೆ ಎಂದರೆ ಅದಕ್ಕೆ ಪ್ರಮಾಣವಿಲ್ಲವಾದ್ದರಿಂದಲೂ, (ಆ ಉಪಾಸನಾಧಿ) ಕಾರಕ್ಕೆ (ಈ ಜ್ಞಾನವು) ವಿರೋಧವಾಗುವುದರಿಂದಲೂ (ಅವರು ಹೇಳುವುದು ಸರಿಯಲ್ಲ). ನಾವೇನು ಉಪಾಸನಾಜ್ಞಾನವು ಅಭ್ಯುದಯಫಲಕ್ಕಾಗಿದೆ ಎಂಬುದನ್ನಾಗಲೀ ಕ್ರಮಕ್ರಮವಾಗಿ ಮೋಕ್ಷಫಲದಾಯಕವಾಗಿದೆ

ಅವಜಾನೀಮಹೇ । ವಕ್ಷ್ಯತಿ ಹಿ ಭಗವಾನ್ ಪುರಸ್ತಾತ್ "ತತ್ರ ಕಾನಿಚಿದ್ಬ್ರಹ್ಮಣ ಉಪಾಸನಾನ್ಯಭ್ಯುದಯಾರ್ಥಾನಿ, ಕಾನಿಚಿತ್ ಕ್ರಮಮುಕ್ತ್ಯರ್ಥಾನಿ, ಕಾನಿಚಿತ್ ಕರ್ಮಸಮೃದ್ಧ್ಯರ್ಥಾನಿ" (ಸೂ. ಭಾ. ೧-೧-೧೨, ಭಾ.ಭಾ. ೯೧) ಇತಿ। ಅಸಂಸಾರ್ಯಾತ್ಮತತ್ತ್ವಜ್ಞಾನಂ ತು ನೋಪಾಸನಾಸೂಪಯುಜ್ಯತೇ ತದಧಿಕಾರೇಣ ಚ ವಿರುಧ್ಯತ ಇತ್ಯೇತಾವತ್ ಪ್ರತಿಪಾದಯಾಮಃ । ತಸ್ಮಾತ್ ಸಾಧೂಕ್ತಂ ನ ವೇದಾಂತವೇದ್ಯಮಾತ್ಮತತ್ತ್ವಂ ಕರ್ಮಾಧಿಕಾರೇಽಪೇಕ್ಷ್ಯತ ಇತಿ ॥

ನನು ಚ ದೇಹಾತಿರಿಕ್ತಕರ್ತೃಭೋಕ್ತೃಜ್ಞಾನಮಪಿ ವಿದ್ಯೈವ । ತತ್ ಕಥಂ ತಜ್ಜ್ಞಾನಸಹಿತಃ ಕರ್ಮೀ ಸ್ಯಾದವಿದ್ವಾನ್ ? ತತ್ರಾಹ - **ಪ್ರಾಕ್ಚ ತಥಾಭೂತಾತ್ಮವಿಜ್ಞಾನಾತ್ ಪ್ರವರ್ತಮಾನಂ ಶಾಸ್ತ್ರಮವಿದ್ಯಾವ-ದ್ವಿಷಯತ್ವಂ ನಾತಿವರ್ತತೇ ।** ಅಯಮರ್ಥಃ । ನ ವಯಂ ಕರ್ಮಜ್ಞಾನಂ

---

ಎಂಬುದನ್ನಾಗಲೀ ಅಲ್ಲಗಳೆಯುವದಿಲ್ಲ. ಏಕೆಂದರೆ ಮುಂದೆ ಭಾಷ್ಯಕಾರರೇ " ಬ್ರಹ್ಮದ ಕೆಲವು ಉಪಾಸನೆಗಳು ಅಭ್ಯುದಯಕ್ಕಾಗಿಯೂ, ಕೆಲವು ಕ್ರಮಮುಕ್ತಿಗಾಗಿಯೂ ಕೆಲವು ಕರ್ಮಸಮೃದ್ಧಿಗಾಗಿಯೂ ಬಂದಿರುತ್ತವೆ" ಎಂದು (ಸೂ.ಭಾ. ೧-೧-೧೨)ರಲ್ಲಿ ಹೇಳಿರುತ್ತಾರೆ. ಆದರೆ ಅಸಂಸಾರಿಯಾದ ಆತ್ಮತತ್ತ್ವಜ್ಞಾನವಾದರೋ ಉಪಾಸನೆಗಳಲ್ಲಿ ಉಪಯುಕ್ತವಾಗುವುದಿಲ್ಲ, ಮತ್ತು ಅದರ ಅಧಿಕಾರದೊಡನೆ ವಿರುದ್ಧವೂ ಆಗಿರುತ್ತದೆ ಎಂಬುದಿಷ್ಟನ್ನು ಮಾತ್ರ (ಇಲ್ಲಿ) ಪ್ರತಿಪಾದನೆ ಮಾಡುವೆವು. ಆದ್ದರಿಂದ ವೇದಾಂತವೇದ್ಯವಾದ ಆತ್ಮತತ್ತ್ವವು ಕರ್ಮಾಧಿಕಾರವನ್ನು ಅಪೇಕ್ಷಿಸಿಕೊಳ್ಳುವುದಿಲ್ಲ. ಎಂದು ಹೇಳಿದ್ದು ಸರಿಯಾಗಿದೆ.

(ಆಕ್ಷೇಪ)- ಅಲ್ಲಾ ದೇಹಕ್ಕಿಂತ ಬೇರೆಯಾದ ಕರ್ತೃಭೋಕ್ತೃವಾದ (ಆತ್ಮನ) ಜ್ಞಾನವೂ ಕೂಡ ವಿದ್ಯೆಯೇ ಆಗಿದೆಯಲ್ಲವೆ? ಹೀಗಿರುವಾಗ ಆ ಜ್ಞಾನದಿಂದ ಕೂಡಿರುವನಾದ ಕರ್ಮಿಯು ಹೇಗೆ ಅಜ್ಞಾನಿಯಾದಾನು ! ಎಂದರೆ ಅದಕ್ಕೆ "ಆ ರೀತಿಯದಾದ ಆತ್ಮಜ್ಞಾನಕ್ಕಿಂತ ಮುಂಚೆ ಹೊರಡುವ ಶಾಸ್ತ್ರವು ಅವಿದ್ಯಾವಂತನನ್ನು ವಿಷಯಮಾಡಿಕೊಂಡಿರುತ್ತದೆ ಎಂಬುದನ್ನು ಬಿಟ್ಟುಹೋಗುವುದಿಲ್ಲ" ಎಂದು ಹೇಳುತ್ತಾರೆ. ಇದು ಅರ್ಥವು - ಕರ್ಮದ

ತದರ್ಥಮಾತ್ಮಜ್ಞಾನಂ ವಾ ಕರ್ಮಾಧಿಕಾರಕಾರಣಮಿಹಾಪವದಾಮ ಇತ್ಯುಕ್ತಮೇವ । ತಾದೃಶಜ್ಞಾನಂ ತ್ವಧ್ಯಾಸಲಕ್ಷಣಾವಿದ್ಯಾಂತಃಪಾತ್ಯೇವ ಭವತಿ। ಅಸಂಗಸ್ಯಾಽಽತ್ಮನಃ ಸ್ವಯಂ ವ್ಯಾಪಾರಾಭಾವಾನ್ನಿಷ್ಕ್ರಿಯತ್ವೇ ಸತಿ ಕರ್ತೃತ್ವ-ಭೋಕ್ತೃತ್ವಾನುಪಪತ್ತೇಃ । ಯತ್ತ್ವಾಹುಃ – ಆತ್ಮಾ ಸತ್ತಾದಿರೂಪಾಣಾಂ ಕರ್ಮಣಾಂ ಸ್ವಯಂಕರ್ತಾ ಭವತಿ ಸ್ಪಂದರೂಪಕರ್ಮಸು ಚ ಪ್ರಯೋಜಕ-ತ್ವೇನೇತಿ । ತತ್ರ ಸತ್ತಾ ತಾವನ್ನ ಕ್ರಿಯಾ । ತಥಾ ಹಿ ಸತಿ ಸತ್ತಾಕ್ರಿಯಾಮ-ನಿರ್ವರ್ತಯತೋಽಸತ್ವಪ್ರಸಂಗಃ । ಸತ್ತಾಽನಿರ್ವರ್ತನಮಪಿ ದುರ್ನಿರೂಪಮ್। ತಸ್ಯ ಸತ್ತಾವ್ಯಾವೃತ್ತತ್ವೇಽಸತ್ವಾಪಾತಾತ್ । ತದ್ರೂಪತ್ವೇ ಚ ಕ್ರಿಯೈವ ಕಾರಕಮಿತ್ಯನಿಷ್ಟಾಪತ್ತೇಶ್ಚ । ನ ಚ ಸಂಕಲ್ಪಾದಯಃ ಸಂತ್ಯಾತ್ಮನ್ಯನಧ್ಯಸ್ತಾ ಇತಿ ಪ್ರಾಗೇವ ಪ್ರತಿಪಾದಿತಮ್ । ತಸ್ಮಾತ್ಸತ್ತಾದಿಕ್ರಿಯಯಾ ನಾತ್ಮನಃ

---

ಜ್ಞಾನವಾಗಲಿ ಅದಕ್ಕಾಗಿರುವ ಆತ್ಮನ ಅರಿವಾಗಲೀ ಕರ್ಮದ ಅಧಿಕಾರಕ್ಕೆ ಕಾರಣವಾಗುತ್ತದೆ ಎಂಬುದನ್ನು ನಾವೇನೂ ತಡೆಗಟ್ಟುವುದಿಲ್ಲೆಂಬುದನ್ನು (ಹಿಂದೆ) ಹೇಳಿಯೇ ಇದ್ದೇವೆ. ಆದರೆ ಆ ತರಹದಾದ ಜ್ಞಾನವೂ ಅಧ್ಯಾಸರೂಪವಾದ ಅವಿದ್ಯೆಯ ಮಧ್ಯದಲ್ಲಿ ಇದ್ದುಕೊಂಡಿರುವದೇ ಆಗಿರುತ್ತದೆ. ಅಸಂಗನಾದ ಆತ್ಮನು ಸ್ವತಃ ಯಾವ ವ್ಯಾಪಾರವಿಲ್ಲದವನಾದ್ದರಿಂದ ಆತನು ನಿಷ್ಕ್ರಿಯನೆಂದಾಗಿ (ಅವನಿಗೆ) ಕರ್ತೃತ್ವಭೋಕ್ತೃತ್ವವಿರುವುದೆಂಬುದು ಹೊಂದುವುದಿಲ್ಲ. ಇಲ್ಲಿ ಕೆಲವರು ಹೀಗೆನ್ನುತ್ತಾರೆ, (ಏನೆಂದರೆ) ಇರುವಿಕೆಯೇ ಮುಂತಾದರೂಪವಾದ ಕರ್ಮಗಳಿಗೆ ಆತ್ಮನು ತಾನೇ ಕರ್ತೃವಾಗುತ್ತಾನೆ. ಸ್ಪಂದನರೂಪವಾದ ಕರ್ಮಗಳಲ್ಲಿ ಪ್ರಯೋಜಕನಾಗುವುದರ ಮೂಲಕ ಕರ್ತೃವಾಗುತ್ತಾನೆ. ಹೀಗಿರುವಾಗ ಇರುವಿಕೆ ಎಂಬುದು ಏನಿದೆ ಅದು ಕ್ರಿಯೆಯಲ್ಲ. ಏಕೆಂದರೆ ಅದೂ ಕ್ರಿಯೆಯಾದರೆ ಅದನ್ನು ಮಾಡದಿರುವಾಗ ಅವನೇ ಇಲ್ಲವೆಂದಾಗುವನು, (ಅಷ್ಟೇ ಅಲ್ಲ) ಇರುವಿಕೆಯನ್ನು ಮಾಡದಿರುವುದೆಂಬುದೂ ಸಹ ನಿರೂಪಣೆಯನ್ನೇ ಮಾಡುವುದಕ್ಕಾಗುವುದಿಲ್ಲ. ಅವನು ಇರುವಿಕೆಯಿಂದ ಬೇರ್ಪಟ್ಟ ರೂಪದವನೆಂದಾದರೆ ಇಲ್ಲವೆಂದೇ ಆಗುತ್ತಾನೆ. (ಸತ್ತೆಯೇ ಕ್ರಿಯೆಯು), ಆ ರೂಪದವನೇ ಆತ್ಮನು ಎಂದಾದರೆ, ಕ್ರಿಯೆಯೇ ಕಾರಕವೆಂಬ ಅನಿಷ್ಟಪ್ರಸಂಗವು ಬಂದೊದಗುತ್ತದೆ. ಅಧ್ಯಸ್ತವಲ್ಲದ ಸಂಕಲ್ಪಾದಿಗಳು ಆತ್ಮನಲ್ಲಿಲ್ಲ ಎಂದು ಹಿಂದೆಯೇ ತಿಳಿಸಿಕೊಟ್ಟದ್ದಾಗಿದೆ. ಆದ್ದರಿಂದ ಸತ್ತಾದಿಕ್ರಿಯೆಯಿಂದಲೂ ಆತ್ಮನು ಸಕ್ರಿಯನಲ್ಲ,

ಸಕ್ರಿಯತ್ವಮ್, ನಾಪಿ ಪ್ರಯೋಜಕತ್ವೇನ । ಅತೋಽವಿದ್ಯಾಂ ವಿನಾ ನ ಕಥಂಚಿದಪ್ಯಾತ್ಮನಃ ಕರ್ತೃತ್ವಂ ಭೋಕ್ತೃತ್ವಂ ವಾ ಸಿಧ್ಯತಿ । ತಸ್ಮಾತ್ ಸಾಧೂಕ್ತಂ ತಥಾಭೂತಾತ್ಮವಿಜ್ಞಾನಾತ್ ಪ್ರಾಕ್ ಪ್ರವರ್ತಮಾನಂ ಶಾಸ್ತ್ರಮ-ವಿದ್ಯಾವದ್ವಿಷಯತ್ವಂ ನಾತಿವರ್ತತ ಇತಿ । ತಥಾಭೂತೋಽಶನಾಯಾ-ದ್ಯತೀತತ್ವಾದಿಧರ್ಮಾ ಯ ಆತ್ಮಾ ತಸ್ಯ ವಿಜ್ಞಾನಂ ಯಾವನ್ನೋತ್ಪನ್ನಂ ತಾವತ್, ಯದ್ವಾ ಅತಥಾಭೂತಕರ್ತೃಭೋಕ್ತ್ರಾತ್ಮವಿಜ್ಞಾನಾದ್ವಿಪರೀತಂ ಸಮ್ಯಗ್ವಿಜ್ಞಾನಂ ತಥಾಭೂತಾತ್ಮವಿಜ್ಞಾನಂ ಯಾವನ್ನೋತ್ಪನ್ನಂ ತಾವತ್ ಪ್ರವರ್ತಮಾನಂ ಶಾಸ್ತ್ರಮವಿದ್ಯಾವದ್ವಿಷಯತ್ವಂ ನಾತಿಕ್ರಾಮತೀತ್ಯರ್ಥಃ ॥

ಏವಂ ತಾವತ್ ಪರಲೋಕಸಂಬದ್ಧಾತ್ಮಜ್ಞಾನಸ್ವರೂಪಸಮಾಲೋಚನೇನ ಶಾಸ್ತ್ರೀಯವ್ಯವಹಾರಸ್ಯಾವಿದ್ಯಾವದ್ವಿಷಯತ್ವಮುಪಪಾದಿತಮ್ । ಅಥೇದಾನೀಂ

---

ಪ್ರಯೋಜಕತ್ವದಿಂದಲೂ ಅಲ್ಲ. ಆದ್ದರಿಂದ ಅವಿದ್ಯೆ ಇಲ್ಲದೆ ಹೇಗೂ ಆತ್ಮನಿಗೆ ಕರ್ತೃತ್ವವಾಗಲೀ ಭೋಕ್ತೃತ್ವವಾಗಲೀ ಸಿದ್ಧಿಸುವುದಿಲ್ಲ. ಆದ್ದರಿಂದ ಇದ್ದ ಹಾಗೆಇರುವ ಆತ್ಮನ ಅರಿವಿಗೆ ಮುಂಚೆ ಹೊರಡುವ ಶಾಸ್ತ್ರವು ಅವಿದ್ಯಾವಂತನನ್ನು ವಿಷಯಮಾಡಿಕೊಂಡಿರುತ್ತದೆ ಎಂಬುದು ಬಿಟ್ಟು ಹೋಗುವುದಿಲ್ಲ ಎಂದು ಏನು ಹೇಳಿತ್ತು ಅದು ಸರಿಯಾಗಿಯೇ ಇದೆ. ಇರುವಹಾಗೆ ಇದ್ದು ಹಸಿವು ಮುಂತಾದವುಗಳನ್ನು ಮೀರಿದವನಾದ ಆತ್ಮನು ಯಾವನಿದ್ದಾನೋ, ಅವನ ಅರಿವು ಎಲ್ಲಿಯವರೆಗೆ ಉಂಟಾಗಿರುವುದಿಲ್ಲವೋ ಅಲ್ಲಿಯವರೆಗೆ ಅಥವಾ ಸುಳ್ಳಾದ ಕರ್ತೃತ್ವಭೋಕ್ತೃತ್ವರೂಪದವನಾದ ಆತ್ಮನ ತಿಳಿವಳಿಕೆಗಿಂತ ಬೇರೆಯಾದ, ಇದ್ದದ್ದು ಇದ್ದ ಹಾಗೆ ಇರುವ ಆತ್ಮನ ಸರಿಯಾದ ತಿಳಿವಳಿಕೆಯು ಎಲ್ಲಿಯವರೆಗೆ ಉಂಟಾಗುವುದಿಲ್ಲವೋ ಅಲ್ಲಿಯರೆಗೂ (ಪ್ರಮಾಣವಾಗಿದೆ ಎಂದು) ಹೊರಡುವ ಶಾಸ್ತ್ರವೂ ಸಹ ಅವಿದ್ಯಾವಂತನನ್ನೇ ವಿಷಯವನ್ನಾಗಿ ಮಾಡಿಕೊಂಡಿರುತ್ತದೆ ಎಂಬುದನ್ನು ಮೀರಿರುವುದಿಲ್ಲ.

ಈ ರೀತಿಯಾಗಿ ಪರಲೋಕಕ್ಕೆ ಸಂಬಂಧಪಟ್ಟ ಆತ್ಮನ ಜ್ಞಾನದ ಸ್ವರೂಪವನ್ನು ಸಮಾಲೋಚನೆ ಮಾಡುವುದರಿಂದ ಶಾಸ್ತ್ರೀಯವಾದ ವ್ಯವಹಾರವೂ ಸಹ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿರುತ್ತದೆ ಎಂಬುದನ್ನು ತಿಳಿಸಿಕೊಟ್ಟದ್ದಾಯಿತು. ಇನ್ನು ಈಗ ವಿಧಿ ಮತ್ತು ನಿಷೇಧವನ್ನು

ವಿಧಿನಿಷೇಧಶಾಸ್ತ್ರಾಕ್ಷರಾಂಜಸ್ಯಾಲೋಚನಯಾಪ್ಯೇತದುಪಪಾದಯಿತುಮಾಹ– "ತಥಾ ಹಿ ಬ್ರಾಹ್ಮಣೋ ಯಜೇತ ಇತ್ಯಾದೀನೀ"ತ್ಯಾದಿ । ಅಯಮಭಿಪ್ರಾಯಃ । "ಬ್ರಾಹ್ಮಣೋ ಯಜೇತ" ಇತೀದಂ ಶಾಸ್ತ್ರಂ ವರ್ಣಾಧ್ಯಾಸಮಾಶ್ರಿತ್ಯ ಪ್ರವೃತ್ತಮ್ । ನ ಹ್ಯಾನಧ್ಯಸ್ತಬ್ರಾಹ್ಮಣಭಾವೋಽಧಿಕಾರೀ ಸ್ಯಾತ್ ತತ್ರ ಯಾಗೇ । ತಥಾ "ಗೃಹಸ್ಥಃ ಸದೃಶೀಂ ಭಾರ್ಯಾಂ ವಿಂದೇತ್" ಇತಿ ಶಾಸ್ತ್ರಮಾಶ್ರಮಾಧ್ಯಾಸಮಾಶ್ರಿತ್ಯ ಪ್ರವೃತ್ತಮ್ । ಬ್ರಹ್ಮಚಾರ್ಯಹಂ ಗೃಹಸ್ಥೋ ಭವೇಯಮಿತ್ಯಧ್ಯಸ್ತಬ್ರಹ್ಮಚರ್ಯಾಶ್ರಮಿತ್ವಸ್ಯೈವ ವಿವಾಹಕರ್ಮಣಿ ಪ್ರವೃತ್ತೇಃ। ಏವಂ "ಅಷ್ಟವರ್ಷಂ ಬ್ರಾಹ್ಮಣಮುಪನಯೀತ" ಇತಿ ವಯೋಧ್ಯಾಸಂ ಸಮಾಶ್ರಿತ್ಯ ಪ್ರವೃತ್ತಮ್ । "ಕೃಷ್ಣಕೇಶೋಽಗ್ನಿನಾದಧೀತ" ಇತಿ ಚಾಽವಸ್ಥಾಧ್ಯಾಸಮ್ । ಏವಮನ್ಯಾನ್ಯಪಿ ಶಾಸ್ತ್ರಾಣಿ "ಯಾವಜ್ಜೀವಮಗ್ನಿ-

---

ಮಾಡುವ ಶಾಸ್ತ್ರವಾಕ್ಯದ ಅಕ್ಷರಗಳನ್ನು ನೇರಾಗಿ ಆಲೋಚನೆ ಮಾಡುವದರಿಂದಲೂ ಇದು ಹೊಂದುತ್ತದೆ ಎಂಬುದನ್ನು ತೋರಿಸಿಕೊಡಲು ಹೇಳುತ್ತಾರೆ – "ಹಾಗೆಯೇ ಅಲ್ಲವೆ ? ಬ್ರಾಹ್ಮಣನಾದವನು ಯಜ್ಞವನ್ನು ಮಾಡಬೇಕು" ಎಂಬೀ ರೀತಿಯಾದ ಭಾಷ್ಯವಾಕ್ಯದಿಂದ (ಹೇಳುತ್ತಾರೆ). ಈ ವಾಕ್ಯಕ್ಕೆ ಇದು ಅಭಿಪ್ರಾಯವು – "ಬ್ರಾಹ್ಮಣನು ಯಜ್ಞವನ್ನು ಮಾಡಬೇಕು" ಎಂಬೀ ಶಾಸ್ತ್ರವು (ತನ್ನಲ್ಲಿ) (ಬ್ರಾಹ್ಮಣಾದಿ)ವರ್ಣಗಳಿವೆ ಎಂಬ ತಪ್ಪು ತಿಳಿವಳಿಕೆಯನ್ನಿಟ್ಟುಕೊಂಡು ಹೊರಟಿರುತ್ತದೆ. ಬ್ರಾಹ್ಮಣನಾಗಿರುವೆನೆಂಬ ಅಧ್ಯಾಸವಿಲ್ಲದೇ (ಆಯಾ) ಯಾಗದಲ್ಲಿ ಅಧಿಕಾರಿಯಾಗಲಾರನು. ಹಾಗೆಯೇ "ಗೃಹಸ್ಥ (ನಾಗಬೇಕೆಂಬುವನು) ಯೋಗ್ಯಳಾದ ಹೆಂಡತಿಯನ್ನು ಹೊಂದಬೇಕು" ಎಂಬೀ ಶಾಸ್ತ್ರವೂ ಸಹ (ತನ್ನಲ್ಲಿ) ಆಶ್ರಮಾಧ್ಯಾಸವಿದೆ ಎಂಬುದನ್ನಾಶ್ರಯಿಸಿಕೊಂಡೇ ಹೊರಟಿರುತ್ತದೆ. ನಾನು ಬ್ರಹ್ಮಚಾರಿಯು, ಗೃಹಸ್ಥನಾಗುವೆನು ಎಂದು ತನ್ನಲ್ಲಿ ಬ್ರಹ್ಮಚಾರಿತ್ವವನ್ನು ಹುಟ್ಟುಹಾಕಿಕೊಂಡವನಿಗೇ ವಿವಾಹಕರ್ಮದಲ್ಲಿ ಪ್ರವೃತ್ತಿಯಾಗುವುದೆಂಬುದು (ಹೊಂದುತ್ತದೆ). ಹೀಗೆಯೇ "ಎಂಟು ವರ್ಷದ ಬ್ರಾಹ್ಮಣನಿಗೆ ಉಪನಯನವನ್ನು ಮಾಡಬೇಕು" ಎಂಬುದೂ (ತನ್ನಲ್ಲಿ) ವಯಸ್ಸಿನ ಅಧ್ಯಾಸವನ್ನಾಶ್ರಯಿಸಿಕೊಂಡೇ ಹೊರಟಿರುವುದು. "ಕಪ್ಪಾದ ಕೂದಲಿರುವಾಗಲೇ ಅಗ್ನಿಗಳನ್ನು ಇಡಬೇಕು" ಎಂಬುದು (ಯೌವನಾದಿ) ಅವಸ್ಥೆಯ ಅಧ್ಯಾಸವನ್ನಿಟ್ಟುಕೊಂಡಿದೆ. ಹೀಗೆಯೇ "ಬದುಕಿರುವವರೆಗೂ

ಹೋತ್ರಂ ಜುಹೋತಿ" ಇತ್ಯೇವಮಾದೀನಿ ಜೀವನಾದಿತತ್ತದಧ್ಯಾಸಮಾಶ್ರಿತ್ಯೈವ ಪ್ರವೃತ್ತಾನೀತಿ ದ್ರಷ್ಟವ್ಯಮ್ । ನ ಚೈತಾನಿ ವಚನಾನಿ ಬ್ರಾಹ್ಮಣ್ಯಾದೇಃ ಪರಮಾರ್ಥಸತ್ಯತಾಂ ಪ್ರತಿಪಾದಯಿತುಂ ಪ್ರವೃತ್ತಾನಿ, ಕಿಂ ತರ್ಹಿ ಯಥಾಪ್ರಾಪ್ತಮೇವ ಬ್ರಾಹ್ಮಣ್ಯಾದ್ಯಸ್ತಿತ್ವಮುಪಾದಾಯ ತತ್ತತ್ಕರ್ಮ ವಿದಧತಿ। ಅತೋ ನಿರ್ದೋಷಸ್ಯ ಶಾಸ್ತ್ರಸ್ಯ ಕಥಮವಿದ್ಯಾವತ್ಪುರುಷಾಶ್ರಯತ್ವಮ್, ಕಥಂ ವಾ ಅವಿದ್ಯಾಪ್ರದರ್ಶಿತಕ್ರಿಯಾಕಾರಕಫಲಬೋಧಕತ್ವಮಿತಿ ಶಂಕಾಯಾ ನಾವಸರಃ । ಏವಂ ಚ ಶಾಸ್ತ್ರೀಯವ್ಯವಹಾರಸ್ಯಾಪ್ಯವಿದ್ಯಾವದ್ವಿಷಯತ್ವಮಿತ್ಯತ್ರ ನ ಕೋಽಪಿ ವಿರೋಧಃ॥

ಏತೇನ ಮೋಕ್ಷಶಾಸ್ತ್ರಾಣ್ಯಪ್ಯವಿದ್ಯಾವದ್ವಿಷಯತ್ವೇನ ವ್ಯಾಖ್ಯಾತಾನಿ ವೇದಿತವ್ಯಾನಿ । ನ ಹಿ ಪ್ರಮಾತ್ರಾದಿವಿಭಾಗಂ ಶಾಸ್ತ್ರಶಿಷ್ಯಾದಿವಿಭಾಗಂ ವಾ

---

ಅಗ್ನಿಹೋತ್ರವನ್ನು ಹೋಮಮಾಡುತ್ತಾನೆ" ಎಂಬೀ ಬೇರೆ ಬೇರೆ ವಚನಗಳೂ ಸಹ ಬದುಕಿರು-ವುದೇ ಮುಂತಾದ ಆಯಾ ಅಧ್ಯಾಸವನ್ನಾಶ್ರಯಿಸಿಕೊಂಡೇ ಹೊರಟಿರುತ್ತವೆ ಎಂದು ತಿಳಿಯಬೇಕು. ಈ ವಚನಗಳು ಬ್ರಾಹ್ಮಣ್ಯವೇ ಮುಂತಾದವುಗಳು ನಿಜವಾಗಿರುವಂಥವುಗಳು ಎಂದು ತಿಳಿಸಿಕೊಡಲು ಹೊರಟವುಗಳಲ್ಲ, ಮತ್ತೇನೆಂದರೆ ಮೊದಲೇ ಸಿದ್ಧವಾದ ಬ್ರಾಹ್ಮಣ್ಯಾದಿಗಳನ್ನು ಇದೆ ಎಂಬುದನ್ನು ಒಪ್ಪಿಕೊಂಡು ಆಯಾ ಕರ್ಮವನ್ನು ವಿಧಿಸಿರುತ್ತದೆ. ಆದ್ದರಿಂದ ನಿರ್ದುಷ್ಟವಾದ ಶಾಸ್ತ್ರವು ಹೇಗೆ ಅವಿದ್ಯಾವಂತನಾದ ಪುರುಷನನ್ನಾಶ್ರಯಿಸಿಕೊಂಡಿದೆ ? ಎಂಬ ಆಕ್ಷೇಪವಾಗಲೀ, ಅವಿದ್ಯೆಯಿಂದ ತೋರಿಬರುವ ಕ್ರಿಯಾಕಾರಕಫಲವನ್ನು ತಿಳಿಸಿಕೊಡುವುದಾದರೂ ಹೇಗೆಂಬ ಸಂದೇಹವಾಗಲೀ ಬಂದೊದಗುವುದಿಲ್ಲ. ಹೀಗೆ ಶಾಸ್ತ್ರೀಯವ್ಯವಹಾರವೂ ಕೂಡ ಅವಿದ್ಯಾವಂತನನ್ನೇ ವಿಷಯಮಾಡಿ-ಕೊಂಡಿದೆ ಎಂಬುದರಲ್ಲಿ ಏನೂ ವಿರೋಧವಿಲ್ಲ.

ಇಷ್ಟು ಹೇಳಿದ್ದರಿಂದ ಮೋಕ್ಷೋಪದೇಶಕವಾದ ಶಾಸ್ತ್ರವೂ ಕೂಡ ಅವಿದ್ಯಾವಂತನನ್ನೇ ವಿಷಯವನ್ನಾಗಿ ಮಾಡಿಕೊಂಡಿದೆ ಎಂಬುದನ್ನು ವ್ಯಾಖ್ಯಾನ ಮಾಡಿದಂತಾಯಿತೆಂದು ತಿಳಿಯಬೇಕು. ಪ್ರಮಾತೃಪ್ರಮಾಣಪ್ರಮೇಯ ವಿಭಾಗವನ್ನಿಟ್ಟುಕೊಳ್ಳದೆಯೂ ಶಾಸ್ತ್ರಶಿಷ್ಯವಿಭಾಗವನ್ನು ಇಟ್ಟುಕೊಳ್ಳದೆಯೂ

ಅನಾಶ್ರಿತ್ಯ ತೇಷಾಂ ಪ್ರವೃತ್ತಿರವಕಲ್ಪತೇ । ಅಯಂ ತ್ವತ್ರ ವಿಶೇಷಃ । ಯದ್ಯಪ್ಯವಿದ್ಯಾವಂತಮೇವ ಹಿತಂ ಶಾಸತಿ ಮೋಕ್ಷವಚನಾನ್ಯಪಿ, ತಥಾಪಿ ಪರಮಾರ್ಥಾತ್ಮತತ್ತ್ವೋಪದೇಶೇನ ಸರ್ವಾನರ್ಥಹೇತುಭೂತಾಮವಿದ್ಯಾಂ ನಿಶ್ಶೇಷಂ ನಿಹತ್ಯೈವ ಕೃತಾರ್ಥಯಂತ್ಯಧಿಕಾರಿಣಮಿತಿ ॥

**೫೦. ಅವಿದ್ಯಾ ನ ಪ್ರಮಾಣಗಮ್ಯಾ, ಕಿಂ ತ್ವನುಭವೈಕಗಮ್ಯಾ –** ಅತ್ರೈತಚ್ಚಿಂತ್ಯಮ್ – ಅವಿದ್ಯಾಸದ್ಭಾವೇ ಕಿಂ ಸಾಧಕಮುಕ್ತಂ ಭಗವತಾ ಭಾಷ್ಯಕಾರೇಣೇತಿ । ಅರ್ಥಾಪತ್ತ್ಯನುಮಾನಾಗಮಾ ಇತಿ ಕೇಚಿತ್ । ತತ್ರ ದೇಹೇಂದ್ರಿಯಾದಿಷ್ವಹಂಮಮಾಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇರಿತ್ಯರ್ಥಾಪತ್ತಿಃ, ಪಶ್ವಾದಿವ್ಯವಹಾರಸಾಮಾನ್ಯ-ದರ್ಶನಾದ್ವ್ಯುತ್ಪತ್ತಿಮತಾಮಪಿ ಪುರುಷಾಣಾಂ ಪ್ರತ್ಯಕ್ಷಾದಿವ್ಯವಹಾರಃ ಸಮಾನ

---

ಆ ಶಾಸ್ತ್ರವು ಹೊರಡುವುದೆಂಬುದು ಹೊಂದುವದಿಲ್ಲ. ಆದರೆ ಇಲ್ಲಿ ಇದು ವಿಶೇಷವು, (ಏನೆಂದರೆ) ಮೋಕ್ಷವನ್ನು ಹೇಳುವ ಶಾಸ್ತ್ರವೂ ಕೂಡ ಅವಿದ್ಯಾವಂತನನ್ನಿಟ್ಟುಕೊಂಡೇ ಹೇಳುವುದಾದರೂ ಪರಮಾರ್ಥವಾದ ತತ್ತ್ವವನ್ನು ಉಪದೇಶಮಾಡುವುದರ ಮೂಲಕ ಎಲ್ಲಾ ಅನರ್ಥಕ್ಕೂ ಕಾರಣವಾದ ಅವಿದ್ಯೆಯನ್ನು ನಿಃಶೇಷವಾಗಿ ಕಳೆದುಬಿಟ್ಟೇ ಅಧಿಕಾರಿಗಳನ್ನು ಕೃತಾರ್ಥರನ್ನಾಗಿ ಮಾಡುತ್ತದೆ (ಎಂಬ ವಿಶೇಷವಿದೆ).

**೫೦. ಅವಿದ್ಯೆಯು ಪ್ರಮಾಣಗಮ್ಯವಲ್ಲ, ಮತ್ತೇನೆಂದರೆ ಅನುಭವವೊಂದಕ್ಕೆ ತೋರಿಬರುವಂಥದ್ದು –** ಅವಿದ್ಯೆ ಇದೆ ಎನ್ನುವುದಕ್ಕೆ ಭಾಷ್ಯಕಾರರು ಏನು ಪ್ರಮಾಣವನ್ನು ಕೊಟ್ಟಿರುತ್ತಾರೆ ? ಎಂಬುದನ್ನು ಇಲ್ಲಿ ಚಿಂತಿಸಬೇಕು. ಇಲ್ಲಿ ಕೆಲವರು, ಅರ್ಥಾಪತ್ತಿ, ಅನುಮಾನ, ಆಗಮ ಎಂದು ಹೇಳುವರು. ಅದಕ್ಕೆ (ಅವರು ಹೇಳುವುದೇನೆಂದರೆ) – ದೇಹೇಂದ್ರಿಯಾದಿಗಳಲ್ಲಿ ನಾನು ನನ್ನದೆಂಬ ಅಭಿಮಾನವಿಲ್ಲದವನಿಗೆ ಪ್ರಮಾತೃತ್ವವೇ ಹೊಂದದಿರಲಾಗಿ ಪ್ರಮಾಣಪ್ರವೃತ್ತಿಯೂ ಹೊಂದುವುದಿಲ್ಲ ಎಂಬ (ಭಾಷ್ಯವಾಕ್ಯವು) ಅರ್ಥಾಪತ್ತಿಯನ್ನು ಹೇಳುವುದೆಂತಲೂ, ಪಶ್ವಾದಿಗಳ ವ್ಯವಹಾರಕ್ಕೆ ಸಮಾನವಾಗಿ, ತಿಳಿದವರಾದ ಪುರುಷರ ಪ್ರತ್ಯಕ್ಷಾದಿ ಎಲ್ಲಾ ವ್ಯವಹಾರವೂ ತತ್ಕಾಲದಲ್ಲಿ ಸಮಾನವಾಗಿ ಕಂಡುಬಂದಿದೆ ಎಂಬುದು ಅನುಮಾನವನ್ನು

ಇತಿ ನಿಶ್ಚೀಯತೇ ಇತ್ಯನುಮಾನಮ್ । ತಥಾ ಹಿ ಬ್ರಾಹ್ಮಣೋ ಯಜತೇತ್ಯಾದಿ ಶಾಸ್ತ್ರಾಣ್ಯಾತ್ಮನಿ ವರ್ಣಾಶ್ರಮವಯೋಽವಸ್ಥಾದಿ ವಿಶೇಷಾಧ್ಯಾಸಮಾಶ್ರಿತ್ಯ ಪ್ರವರ್ತಂತೇ – ಇತ್ಯಾಗಮಶ್ಚ । ಇತ್ಯೇವಂ ಪ್ರಮಾಣತ್ರಿತಯಮುದಾಹೃತಂ ಪೂಜ್ಯಪಾದೈರಿತಿ ತೇಷಾಮಾಶಯಃ । ಇದಂ ತು ತೈರ್ವಕ್ತವ್ಯಂ ಪ್ರಮಾಣಾನಾಮವಿದ್ವದ್ವಿಷಯತ್ವಂ ಪ್ರತಿಜ್ಞಾಯ ತತ್ಸಾಧಕತ್ವೇನ ಕಥಂ ಪ್ರಮಾಣಾನ್ಯೇ-ವೋಪನ್ಯಸ್ಯಂತ ಇತಿ । ನ ಹಿ ಪರೀಕ್ಷ್ಯಪ್ರಮಾಣೇಭ್ಯೋ ವ್ಯತಿರಿಕ್ತಾನಿ ಪ್ರಮಾಣಾನಿ ಸಂತಿ ಯೈಸ್ತಾನಿ ಪ್ರಮಾಣಾನಿ ಪರೀಕ್ಷ್ಯೇರನ್ ತೇಷಾಮವಿದ್ಯಾ-ವದ್ವಿಷಯತ್ವಂ ಚಾಧ್ಯವಸ್ಯೇತ । ಅತ್ರಾಽಽಹ । ತುಲಾಪ್ರಾಮಾಣ್ಯವ-ದೇತದ್ಭವಿಷ್ಯತಿ । ಯಥಾ ಹಿ ತುಲಾ ಪ್ರಮಾಣಂ ಸುವರ್ಣಾದಿಗುರುದ್ರವ್ಯ-ವಿಷಯೇ, ತಚ್ಚ ದ್ರವ್ಯಂ ತುಲಾಂತರಪ್ರತಿಪತ್ತೌ । ಏವಾಮಿಹಾಪ್ಯಧ್ಯಾಸ-

---

ಹೇಳುವುದೆಂತಲೂ, ಹಾಗೆಯೇ "ಬ್ರಾಹ್ಮಣನಾದವನು ಯಜ್ಞವನ್ನು ಮಾಡಬೇಕು" ಎಂಬಿವೇ ಶಾಸ್ತ್ರಗಳು ತನ್ನಲ್ಲಿ ವರ್ಣಾಶ್ರಮವಯೋಽವಸ್ಥೆಯೇ ಮುಂತಾದ ವಿಶೇಷವಾದ ಅಧ್ಯಾಸವನ್ನಾಶ್ರಯಿಸಿಕೊಂಡು ಹೊರಟಿವೆ ಎಂಬುದು ಆಗಮವು ಎಂದು ಮೂರು ಪ್ರಮಾಣಗಳನ್ನೂ ಭಗವತ್ಪಾದರು ಉದಾಹರಿಸಿರುತ್ತಾರೆಂಬುದು ಅವರ ಅಭಿಪ್ರಾಯವು. ಇಲ್ಲಿ ಅವರು ಹೇಳಬೇಕಾಗುತ್ತದೆ, ಏನೆಂದರೆ (ಭಾಷ್ಯಕಾರರು) ಪ್ರಮಾಣಗಳೆಲ್ಲಾ ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ ಎಂದು ಪ್ರತಿಜ್ಞೆಮಾಡಿ ಪುನಃ ಆ ಅವಿದ್ಯೆಯ ಸಾಧನೆಗಾಗಿ ಅದೇ ಪ್ರಮಾಣಗಳನ್ನೇ ಹೇಗೆ (ಉದಾಹರಿಸಿ) ಹೇಳುವುದಕ್ಕಾಗುತ್ತದೆ ? (ಇಲ್ಲಿ ಭಾಷ್ಯಕಾರರು) ಪರೀಕ್ಷಿಸಿದ್ದಾದ ಪ್ರಮಾಣಗಳಿಗಿಂತ ಬೇರೆಯಾದ (ಪರೀಕ್ಷಿಸದೇ ಇರುವ) ಪ್ರಮಾಣಗಳೇ ಇರುವುದಿಲ್ಲ; ಹಾಗಿದ್ದರೆ ಆ ಪ್ರಮಾಣಗಳನ್ನು ಪರೀಕ್ಷಿಸಬಹುದಾಗಿತ್ತು. ಮತ್ತು ಅವುಗಳು ಅವಿದ್ಯಾವಂತನನ್ನು ವಿಷಯಮಾಡಿಕೊಂಡಿವೆ ಎಂಬುದನ್ನು ತೀರ್ಮಾನಿಸಬಹುದಾಗಿತ್ತು. ಇಲ್ಲಿ (ಆಕ್ಷೇಪಕನು) ಹೇಳುತ್ತಾನೆ, ತೊಲೆಯ (ತೂಕದ) ಪ್ರಾಮಾಣ್ಯದಂತೆ ಇದಾಗಬಹುದು – (ಇದರ ವಿವರ) ಹೇಗೆ ಒಂದು ತೊಲ ಎಂಬ ಅಳತೆಯು ಬಂಗಾರವೇ ಮುಂತಾದ ಭಾರವಾದ ದ್ರವ್ಯಗಳನ್ನು ಅಳೆಯುವ ವಿಷಯದಲ್ಲಿ ಪ್ರಮಾಣವಾಗಿದ್ದು ಆ ಅಳೆದದ್ದಾದ ದ್ರವ್ಯವು ಮತ್ತೊಂದರ ತೂಕವನ್ನು ಅಳೆಯುವ ವಿಷಯದಲ್ಲಿ ಹೇಗೆ

ಸದ್ಭಾವಸಿದ್ಧಿಃ ಪ್ರಮಾಣೇಭ್ಯಃ, ತತಃ ಪ್ರಮಾಣಾನಾಂ ಪರೀಕ್ಷ್ಯಮಾಣಾನಾಮಧ್ಯಾಸಪೂರ್ವಕತ್ವಸಿದ್ಧಿರಿತಿ ಸ್ಯಾತ್(ವಿವರಣಮ್)॥ ನೈತಚ್ಛಕ್ಯಮ್ । ವೈಷಮ್ಯಾತ್ । ಯುಕ್ತಂ ತತ್ರ ಯತ್ ತುಲಾವ್ಯಕ್ತಿಭೇದಾದೇಕಯಾ ತುಲಯಾ ಸುವರ್ಣನಿರ್ಧಾರಣಮ್, ತತಃ ಪರಂ ನಿರ್ಧಾರಿತೇನ ಸುವರ್ಣೇನ ತುಲಾಂತರನಿರ್ಧಾರಣಮಿತಿ । ಇಹ ಪುನರಧ್ಯಾಸಸದ್ಭಾವನಿರ್ಧಾರಣಾರ್ಥಂ ಯಾನ್ಯೇವ ಪ್ರಮಾಣಾನಿ ವಿನಿಯುಜ್ಯಂತೇ ತಾನ್ಯೇವಾಧ್ಯಾಸಪುರಸ್ಸರತ್ವೇನ ನಿರ್ಧಾರಣೀಯಾನೀತಿ ವೈಷಮ್ಯಮ್ । ತಸ್ಮಾನ್ನ ಪ್ರಮಾಣೈರೇವ ಪರೀಕ್ಷ್ಯತಾ ಸಂಭವತಿ ಪ್ರಮಾಣಾನಾಮ್, ಯಥೋಕ್ತಂ **ವಾರ್ತಿಕಕಾರೈಃ** – "ಪ್ರಮಾಣಾನಾಂ ಪ್ರಮಾಣತ್ವಂ ನ ಸ್ವರೂಪಪ್ರಮೇಯತಾ । ನ ಚ ಮಾನಾಂತರಾದಿಷ್ಟಂ ತಯೋಸ್ತುಲ್ಯಸ್ವಭಾವತಃ ॥" (ಬೃ.ವಾ. ೪-೪-೩೩೯) ಇತಿ ॥

---

ಪ್ರಮಾಣವಾಗಬಹುದೋ ಹಾಗೆಯೇ ಇಲ್ಲಿ ಪ್ರಮಾಣಗಳಿಂದ ಅಧ್ಯಾಸವು ಇದೆ ಎಂಬುದು ಸಿದ್ಧವಾಗಬಹುದಲ್ಲ ! ಆಮೇಲೆ ಪರೀಕ್ಷಿಸಬೇಕಾದ ಪ್ರಮಾಣಗಳೂ ಅಧ್ಯಾಸಪೂರ್ವಕವಾಗಿವೆ ಎಂಬುದು ಸಿದ್ಧವಾಗಬಹುದಲ್ಲ ! (ವಿ) (ಸಿದ್ಧಾಂತ ಎಂದರೆ) ಇದು ಸಾಧ್ಯವಿಲ್ಲ. ಏಕೆಂದರೆ (ಅದಕ್ಕೂ ಇದಕ್ಕೂ) ವ್ಯತ್ಯಾಸವಿರುವುದರಿಂದ. ದೃಷ್ಟಾಂತದಲ್ಲಿ ತೊಲ ಎಂಬ ಬೇರೆಯಾದ ಒಂದು ವಸ್ತುವಿರುವುದರಿಂದ ಒಂದು ತೊಲದಿಂದ, ಬಂಗಾರದ ತೂಕವನ್ನು ಗೊತ್ತು ಮಾಡುವುದೆಂಬುದು (ಬೇರೆಯಾಗಿ ಇದ್ದು), ಆಮೇಲೆ ಆ ತೀರ್ಮಾನವಾದ ಚಿನ್ನದ ತೂಕದಿಂದ ಇನ್ನೊಂದರ ತೂಕದ ನಿರ್ಧಾರಣೆ ಎಂಬುದು ಹೊಂದುತ್ತದೆ. ಇಲ್ಲಾದರೋ ಅಧ್ಯಾಸವಿದೆ ಎಂಬುದನ್ನು ನಿರ್ಣಯಿಸುವುದಕ್ಕೆ ಯಾವ ಪ್ರಮಾಣಗಳನ್ನು ವಿನಿಯೋಗಿಸಲಾಗುತ್ತದೋ, ಆ ಪ್ರಮಾಣಗಳೇ ಅಧ್ಯಾಸಪುರಃಸರವಾಗಿದೆ ಎಂದು ನಿರ್ಧರಿಸಬೇಕಾಗಿದೆ ಎಂಬುದು ವ್ಯತ್ಯಾಸವಿರುತ್ತದೆ. ಆದ್ದರಿಂದ ಪ್ರಮಾಣಗಳಿಂದಲೇ ಪ್ರಮಾಣಗಳ ಪರೀಕ್ಷೆ ಎಂಬುದು ಹೊಂದುವುದಿಲ್ಲ. ಈ ವಿಷಯಕ್ಕೆ ವಾರ್ತಿಕಕಾರರೂ ಹೇಳಿರುತ್ತಾರೆ. "ಪ್ರಮಾಣಗಳು ಪ್ರಮಾಣವೆಂತಾಗಿರುವುದು ತನ್ನನ್ನು ತಾನು ಅರಿತದ್ದರಿಂದಾದದ್ದಲ್ಲ, ಹಾಗೆಯೇ ಬೇರೊಂದು ಪ್ರಮಾಣಗಳಿಗೂ ವಿಷಯವಾಗಿ ಆಗಿಲ್ಲ, (ಏಕೆಂದರೆ) ಅವೆರಡಕ್ಕೂ ಸಮಾನಸ್ವಭಾವವಿರುವುದರಿಂದ". (ಬೃ. ವಾ ೪-೪-೩೩೯).

ನನು ಚ ಯಥಾ ಪ್ರಮಾಣಸತ್ತಾಮನಭ್ಯುಪಗಂತೃಭಿರಪಿ ವೇದಾಂತಿಭಿರ್ಮಾಧ್ಯಮಿಕೈರ್ವಾ ತದಸ್ತಿತ್ವನಾಸ್ತಿತ್ವಾನುಸರಣೋದಾಸೀನ್ಯೈರೇವ ಪ್ರಮಾಣಾಪೇಕ್ಷಿಣೀ ಕಥಾ ತದಸ್ತಿತ್ವಾಭ್ಯುಪಗಂತೃಭಿರ್ವಾದ್ಯಂತರೈಃ ಸಹ ಪ್ರವರ್ತ್ಯತೇ, ಏವಮೇವೇಹಾಪಿ ಭಗವತಾ ಅಧ್ಯಾಸಪುರಸ್ಸರತ್ವತದಭಾವಾನುಸರಣೋದಾಸೀನೇನೈವ ಪ್ರಥಮಂ ಪ್ರಮಾಣಾನ್ಯಾದೀಯಂತೇ, ತತಶ್ಚ ಪ್ರಮಾಣಾನಿ ಪರೀಕ್ಷ್ಯ ತತ್ಪುರಸ್ಸರತ್ವಂ ಸ್ಥಾಪ್ಯತೇ । ತತ್ರ ಕೋ ದೋಷಃ ? ನೇದಮಪೀಹ ಘಟತೇ । ಯಸ್ಮಾತ್ ಪ್ರಮಾತ್ರಾ ಪ್ರಮಾಣಾನಿ ಪ್ರಮೇಯಪರಿಚ್ಛಿತ್ತಯೇ ಸಮುಪಾದೀಯಂತೇ ನ ತ್ವಾತ್ಮಾನಂ ಪ್ರಮಾತುಮಿತಿ ಸ್ಥಿತಿಃ । ತಥಾ ಚ ಯುಕ್ತಂ ತತ್ರ ಯತ್ಕಥಕಾಃ ಪ್ರಮೇಯಪರೀಕ್ಷಣಾಯ ಪ್ರಮಾಣಾನಿ ಸಮುಪಾದದತ ಇತಿ । ಇಹ ಪುನಃ ಪ್ರಮಾಣನಾಮವಿದ್ಯಾಪುರಸ್ಸರತ್ವಂ

---

ಹೇಗೆ ಪ್ರಮಾಣಗಳ ಇರುವಿಕೆಯನ್ನು ಒಪ್ಪದವರಾದ ವೇದಾಂತಿಗಳೊಡನೆಯೂ ಮತ್ತು ಬೌದ್ಧರೊಡನೆಯೂ, (ಅದೇ ರೀತಿ) ಅವುಗಳು ಇದೆ ಎಂಬುದನ್ನೂ ಇಲ್ಲವೆಂಬುದನ್ನೂ, ಅನುಸರಣೆಮಾಡುವುದರಲ್ಲಿ ಉದಾಸೀನರಾಗಿರುವವರೊಡನೆಯೂ, ಪ್ರಮಾಣಗಳು ಇವೆ ಎಂದು ಒಪ್ಪಿಕೊಂಡವರಾದ ಬೇರೆ ವಾದಿಗಳೊಡನೆ ಪ್ರಮಾಣವನ್ನಪೇಕ್ಷಿಸಿಕೊಂಡದ್ದಾದ ಚರ್ಚೆಯನ್ನು ಮಾಡುತ್ತಾರೋ ಹಾಗೆಯೇ ಇಲ್ಲಿಯೂ ಅಧ್ಯಾಸಪುರಃಸರವಾಗಿದೆಯೆಂಬುದನ್ನು ಮತ್ತು ಅದಿಲ್ಲ ಎಂಬುದನ್ನು ಅನುಸರಣೆ ಮಾಡುವುದರಲ್ಲಿ ಉದಾಸೀನರಾದವರೊಡನೆಯೇ, ಮೊಟ್ಟಮೊದಲು ಭಾಷ್ಯಕಾರರು ಪ್ರಮಾಣಗಳನ್ನು ಸ್ವೀಕರಿಸಿರುತ್ತಾರೆ. ಆಮೇಲೆ ಪ್ರಮಾಣಗಳನ್ನು ಪರೀಕ್ಷಿಸಿ ಅವು ಅಧ್ಯಾಸಪುರಃಸರವಾಗಿದೆ ಎಂದು ತಿಳಿಸುತ್ತಾರೆ ಎಂದರೆ ಇಲ್ಲಿ ತಪ್ಪೇನು? ಎಂದರೆ ಇದೂ ಹೊಂದುವುದಿಲ್ಲ. ಪ್ರಮಾತೃವಾದವನು ಪ್ರಮಾಣಗಳನ್ನು, ಪ್ರಮೇಯವನ್ನು ಗೊತ್ತುಮಾಡುವದಕ್ಕೆ ಸ್ವೀಕರಿಸುತ್ತಾನೆಯೇ ಹೊರತು ತನ್ನನ್ನರಿಯುವುದಕ್ಕಲ್ಲ ಎಂಬುದು ವಸ್ತುಸ್ಥಿತಿಯು. ಹಾಗಾದಾಗಲೇ ಅದು ಸರಿಯಾಗುತ್ತದೆ. ಏನೆಂದರೆ – ಯಾರು ಯಾವುದರ ಬಗ್ಗೆ ಹೇಳುವವರಾಗಿರುತ್ತಾರೋ (ಅವರು ಆ) ಪ್ರಮೇಯವನ್ನು ಗೊತ್ತುಮಾಡುವುದಕ್ಕಾಗಿ ಆಯಾ ಪ್ರಮಾಣಗಳನ್ನು ಸ್ವೀಕರಿಸುತ್ತಾರೆಂಬುದು ನ್ಯಾಯವಾಗಿದೆ. ಇಲ್ಲಾದರೋ ಪ್ರಮಾಣಗಳೇ ಅವಿದ್ಯಾಪುರಃಸರವಾಗಿದೆ

ಸಾಧನೀಯಮ್ । ತಚ್ಚ ನ ಸಾಕ್ಷಾತ್, ಕಿಂ ತು ಪ್ರಮಾತೃತ್ವಘಟಕೀಭೂತಾವಿದ್ಯಾನಿರೂಪಣದ್ವಾರೇತಿ ವೈಷಮ್ಯಮ್ । ನ ಹಿ ಕಶ್ಚಿತ್ ಪ್ರಮಾತಾ ಸ್ವಾತ್ಮಾನಮೇವ ಪ್ರಮೇಯಂ ಪರಿಕಲ್ಪ್ಯ ಸ್ವಪರಿಚ್ಛೇದಾಯ ಪ್ರಮಾಣಾನಿ ಸಮುಪಾದತ್ತೇ ಇತಿ ಘಟಮಾನಮ್ । ಅತೋ ನಾಯಮಪಿ ಪಂಥಾಃ । ತಸ್ಮಾದರ್ಥಾಪತ್ತ್ಯಾದಿಪ್ರಮಾಣೈರವಿದ್ಯಾಸದ್ಭಾವಃ ಸಾಧ್ಯತ ಇತಿ ನ ಸಾರವಾನಯಂ ಪಕ್ಷಃ ॥

ಕಿಮರ್ಥಂ ತರ್ಹಿ ಪ್ರಮಾತೃತ್ವಾನುಪಪತ್ತ್ಯುದಾಹರಣಮ್, ಪಶ್ವಾದಿವ್ಯವಹಾರೋಪನ್ಯಾಸೋ ವೇತಿ ? ಅತ್ರೋಚ್ಯತೇ । ನಾತ್ರ ಪ್ರಮಾಣೋಪನ್ಯಾಸಃ ಪ್ರಕೃತಃ, ಕಿಂತ್ವವಿದ್ಯಾಸದ್ಭಾವಪ್ರದರ್ಶನಮ್ । ತಥಾ ಹಿ ಗ್ರಂಥಾರಂಭೇ ವಿರುದ್ಧಸ್ವಭಾವಯೋರಾತ್ಮಾನಾತ್ಮನೋಃ ಪರಸ್ಪರತಾದಾತ್ಮ್ಯಾಧ್ಯಾಸಃ ಪರಸ್ಪರತಾದ್ಧರ್ಮ್ಯಾಧ್ಯಾಸಶ್ಚ ಮಿಥ್ಯೇತಿ ಭವಿತುಂ ಯುಕ್ತಮ್ ಇತ್ಯಾಶಂಕ್ಯ "ತಥಾಪ್ಯಹಮಿದಂ ಮಮೇದಮಿತಿ ನೈಸರ್ಗಿಕೋಽಯಂ ಲೋಕವ್ಯವಹಾರಃ"

---

ಎಂಬುದನ್ನು ಸಾಧಿಸಬೇಕಾಗಿದೆ. ಆದನ್ನಾದರೋ ನೇರಾಗಿ ಮಾಡಲಾಗುವುದಿಲ್ಲ, ಮತ್ತೇನೆಂದರೆ ಪ್ರಮಾತೃತ್ವವನ್ನು ಹೊಂದಿಸುವದಾದ ಅವಿದ್ಯೆಯನ್ನು ಗೊತ್ತುಮಾಡುವುದರ ಮೂಲಕ ಎಂದಾದ್ದರಿಂದ ವ್ಯತ್ಯಾಸವಿದೆ. ಪ್ರಮಾತೃವಾದವನು ತನ್ನನ್ನೇ ಪ್ರಮೇಯನೆಂದು ಕಲ್ಪಿಸಿ (ಆಮೇಲೆ) ತನ್ನನ್ನರಿಯಲು ಪ್ರಮಾಣಗಳನ್ನು ಸ್ವೀಕರಿಸುತ್ತಾನೆಂಬುದು ಹೊಂದುವದಲ್ಲ. ಆದ್ದರಿಂದ ಇದು ಸರಿಯಾದ ದಾರಿಯಲ್ಲ. ಆದ್ದರಿಂದ ಅರ್ಥಾಪತ್ತ್ಯಾದಿಪ್ರಮಾಣಗಳಿಂದ ಅವಿದ್ಯೆ ಇದೆ ಎಂದು ಸಾಧಿಸುವುದು ಸರಿಯಾದ ಪಕ್ಷವಲ್ಲ.

ಹಾಗಾದರೆ ಪ್ರಮಾತೃತ್ವವು ಹೊಂದುವುದಿಲ್ಲವೆಂಬ ಉದಾಹರಣೆಯಾಗಲೀ ಪಶ್ವಾದಿಗಳ ವ್ಯವಹಾರವನ್ನು ಹೇಳುವುದಾಗಲೀ ಏತಕ್ಕೆ? ಎಂದರೆ ಹೇಳುತ್ತೇವೆ. – ಇಲ್ಲಿ ಪ್ರಮಾಣವನ್ನು ಹೇಳಬೇಕೆಂಬುದು ಪ್ರಕೃತವಲ್ಲ, ಮತ್ತೇನೆಂದರೆ ಅವಿದ್ಯೆ ಇದೆ ಎಂಬುದನ್ನು ತೋರಿಸುವುದಷ್ಟೇ (ಪ್ರಕೃತ). ಹಾಗೆಯೇ ಅಲ್ಲವೆ? ಗ್ರಂಥದ ಆರಂಭದಲ್ಲಿ – ವಿರುದ್ಧಸ್ವಭಾವದ್ದಾದ ಆತ್ಮಾನಾತ್ಮರುಗಳಿಗೆ ಪರಸ್ಪರ ಒಂದಿನ್ನೊಂದಾದರೂಪವೆಂಬ ಅಧ್ಯಾಸವು ಮತ್ತು ಒಂದಿನ್ನೊಂದರಧರ್ಮದ ಅಧ್ಯಾಸವು ಸುಳ್ಳೆಂದಾಗುವುದಕ್ಕೆ ಅರ್ಹವಾಗಿದೆ ಎಂದು ಸಂದೇಹಿಸಿ, ಆದರೂ ಲೋಕದಲ್ಲಿ "ನಾನಿಂಥವನು, ನನ್ನದಿದು" ಎಂಬುದು ಸ್ವಾಭಾವಿಕವಾದ

ಇತ್ಯನುಭವೈಕಸಿದ್ಧತ್ವಮಧ್ಯಾಸಸ್ಯ ತತ್ಪ್ರಯುಕ್ತವ್ಯವಹಾರಸ್ಯ ಚ ಪ್ರತಿಜ್ಞಾತಮ್। ತಸ್ಯಾ ಏವ ಪ್ರತಿಜ್ಞಾಯಾಃ ಪ್ರಪಂಚಃ ಪ್ರಸ್ತುತಃ । ತದರ್ಥಮೇವ ಚಾಧ್ಯಾಸಲಕ್ಷಣಂ ಪ್ರಣೀತಮ್ । ಅವಿಷಯೇಽಪ್ಯಾತ್ಮನಿ ವಿಷಯ-ತದ್ಧರ್ಮಾಣಾಮಧ್ಯಾಸಃ ಸಂಭವತೀತ್ಯುಪಪಾದಿತಮ್ । ಅತಃ ಪ್ರತಿಜ್ಞಾತಸ್ಯೈವ ವಿವರಣಾರ್ಥಮಿಹ ಸರ್ವೋಽಪಿ ಪ್ರಮಾಣಪ್ರಮೇಯವ್ಯವಹಾರೋಽಧ್ಯಾಸ-ಪುರಸ್ಸರ ಏವೇತ್ಯನುಭವಃ ಪ್ರದರ್ಶ್ಯತ ಇತಿ ಪ್ರಕೃತಾರ್ಥಪ್ರಪಂಚ ಏವಾಯಮ್, ನಾಧಿಕಂ ಕಿಂಚಿತ್ । ತತ್ರ ಪ್ರಮಾತೃತ್ವವಿಚಾರಭಾಷ್ಯಗ್ರಂಥಸ್ಯಾಯಮಾಶಯಃ। ಪ್ರಮಾತೃತ್ವಮೇವ ತಾವದ್ದೇಹೇಂದ್ರಿಯೇಷ್ವಹಂಮಮಾಭಿಮಾನ-ಲಕ್ಷಣಾಧ್ಯಾಸವ್ಯಾಪ್ತಮಿತಿ ಸುಪ್ರಸಿದ್ಧಮೇತತ್ । ತತಶ್ಚ ಪ್ರಮಾಣಪ್ರಮೇಯ-ವ್ಯವಹಾರೋಽಧ್ಯಾಸಪುರಸ್ಸರ ಇತಿ ಸೇತ್ಸ್ಯತಿ । ಅಧ್ಯಾಸವ್ಯಾಪ್ತಪ್ರಮಾತೃತ್ವ-ಪ್ರತಿಬದ್ಧತ್ವಾತ್ ಪ್ರಮಾಣಪ್ರವೃತ್ತೇರಿತಿ । ಪಶುವ್ಯವಹಾರಭಾಷ್ಯಸ್ಯ ಚಾಯಮಭಿಸಂಧಿಃ । ಪುರುಷಾಣಾಂ ಪ್ರವೃತ್ತಿನಿವೃತ್ತಿರೂಪವ್ಯವಹಾರಃ

---

ಲೋಕವ್ಯವಹಾರವು ಎಂದು ಅನುಭವಮಾತ್ರದಿಂದ ಸಿದ್ಧವಾದ ಅಧ್ಯಾಸವನ್ನೂ ಅದರಿಂದಾದ ವ್ಯವಹಾರವನ್ನೂ – ತಿಳಿಸಿಕೊಟ್ಟಿದೆ. ಆ ಪ್ರತಿಜ್ಞೆಯದೇ ವಿವರಣೆಯು ಆರಂಭವಾಗಿದೆ. ಅದಕ್ಕಾಗಿಯೇ ಅಧ್ಯಾಸಕ್ಕೆ ಲಕ್ಷಣವನ್ನು ಮಾಡಿರುವುದು. ವಿಷಯನಲ್ಲದ ಆತ್ಮನಲ್ಲಿ ವಿಷಯದ ಮತ್ತು ಅದರ ಗುಣದ ಅಧ್ಯಾಸವು ಹೊಂದುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ. ಆದ್ದರಿಂದ ಪ್ರತಿಜ್ಞೆ ಮಾಡಿದ್ದರ ವಿವರಣೆಗಾಗಿಯೇ ಇಲ್ಲಿ ಎಲ್ಲಾ ಪ್ರಮಾಣಪ್ರಮೇಯ-ವ್ಯವಾಹರವೂ ಅಧ್ಯಾಸಪುರಸ್ಸರವೇ ಎಂದು ಅನುಭವವನ್ನು ತೋರಿಸ-ಲಾಗುತ್ತದೆ ಎಂದಾದ್ದರಿಂದ ಪ್ರಕೃತವಾದದ್ದರ ವಿವರಣೆಯೇ ಹೊರತು ಹೆಚ್ಚಾಗಿ ಏನನ್ನೂ (ಹೇಳಿಲ್ಲ). ಇಲ್ಲಿ ಪ್ರಮಾತೃಸ್ವರೂಪವನ್ನು ವಿಚಾರಮಾಡುವ ಭಾಷ್ಯಕ್ಕೆ ಇದು ಅಭಿಪ್ರಾಯವು, (ಏನೆಂದರೆ) – ಮೊಟ್ಟಮೊದಲು ಪ್ರಮಾತೃತ್ವವೇ ದೇಹೇಂದ್ರಿಯಾದಿಗಳಲ್ಲಿ "ನಾನು ನನ್ನದೆಂಬ" ಅಭಿಮಾನ-ರೂಪವಾದ ಅಧ್ಯಾಸದಿಂದ ವ್ಯಾಪ್ತವಾಗಿದೆ ಎಂಬುದಿದು ಸುಪ್ರಸಿದ್ಧವಾದದ್ದು. ಅದರಿಂದ ಪ್ರಮಾಣಪ್ರಮೇಯವ್ಯವಹಾರವು ಅಧ್ಯಾಸಪುರಸ್ಸರವೆಂಬುದು ಸಿದ್ಧವಾಗುತ್ತದೆ. (ಹೇಗೆಂದರೆ) – ಅಧ್ಯಾಸದಿಂದ ವ್ಯಾಪ್ತವಾದ ಪ್ರಮಾತೃತ್ವಕ್ಕೆ ಕಟ್ಟುವಡೆದಿದೆ ಪ್ರಮಾಣಪ್ರವೃತ್ತಿಯು. ಪಶುವ್ಯವಹಾರವನ್ನು (ತಿಳಿಸುವ) ಭಾಷ್ಯಕ್ಕೆ ಇದು ಅಭಿಪ್ರಾಯವು. (ಯಾವುದೆಂದರೆ) – ಅವಿವೇಕಿಗಳೆಂದು

ಕರ್ತೃತ್ವಭೋಕ್ತೃತ್ವಾಧ್ಯಾಸಪೂರ್ವಕ ಏವ ದೃಶ್ಯತೇ, ಅವಿವೇಕಿತ್ವೇನ ಸಂಪ್ರತಿಪನ್ನಪಶ್ವಾದಿವ್ಯವಹಾರವತ್ । ಯತ್ತು ವ್ಯುತ್ಪನ್ನಚಿತ್ತತ್ವಂ ಪುರುಷಾಣಾಮ್, ತಸ್ಯ ವ್ಯವಹಾರಸಮಯೇಽನುಪಯೋಗಾದನುಭೂತಸ್ಯಾಧ್ಯಾಸಪೂರ್ವಕತ್ವಸ್ಯ ನ ತದಪವಾದಕರಮಿತಿ । ಶಾಸ್ತ್ರೋದಾಹರಣಭಾಷ್ಯಸ್ಯ ಪುನರಿದಮಾಕೂತಮ್ । ಸರ್ವಾಣಿ ಚ ಶಾಸ್ತ್ರಾಣಿ ಶಾಸನಬೋದ್ಧಾರಮಧ್ಯಸ್ತಸಂಸಾರಿಭಾವಮೇವಾಧಿಕಾರಿಣಮಪೇಕ್ಷಂತ ಇತಿ ಪ್ರಸಿದ್ಧಮೇವೇತಿ । ತದೇವಂ ಸರ್ವೇಷಾಮಪಿ ಲೌಕಿಕವೈದಿಕವ್ಯವಹಾರಾಣಾಮಧ್ಯಾಸಪುರಸ್ಸರತ್ವಮನುಭವಸಿದ್ಧಮೇವ ಪ್ರದರ್ಶ್ಯತೇ ನ ತು ಕಿಂಚಿತ್ ಪ್ರಮಾಣೈಃ ಪ್ರಸಾಧ್ಯತೇ । ಏವಂ ಚೇದಮತ್ರ ವಿವಕ್ಷಿತಂ ವೇದಾಂತವಿದ್ಯಾನಿವರ್ತ್ಯಾವಿದ್ಯಾ ಪ್ರಮಾಣಯುಕ್ತ್ಯಸಹಾಪ್ಯನುಭವೈಕಗಮ್ಯಾ ನ ಶಕ್ಯಾಽಪಹ್ನೋತುಮಿತಿ । ಅತ ಏವ **ವಾರ್ತಿಕಕಾರಾಃ** ಪ್ರಾಹುಃ "ಅತಃ ಪ್ರಮಾಣತೋಽಶಕ್ಯಾಽವಿದ್ಯಾಽಸ್ಯೇತಿ

---

ಗೊತ್ತಾದ ಪಶುಗಳ ವ್ಯವಹಾರದಂತೆ ಪುರುಷರಪ್ರವೃತ್ತಿನಿವೃತ್ತಿರೂಪವಾದ ವ್ಯವಹಾರವು ಕರ್ತೃತ್ವಭೋಕ್ತೃತ್ವರೂಪದ್ದಾದ ಅಧ್ಯಾಸಪೂರ್ವಕವಾಗಿಯೇ ಕಂಡುಬಂದಿದೆ. ಪುರುಷರಿಗೆ (ಪಶುಗಳಿಗಿಂತ) ಹೆಚ್ಚಾದ ಬುದ್ಧಿವಂತಿಕೆ ಇದೆ ಎಂಬುದೇನಿದೆ, ಅದು (ಅನುಕೂಲಪ್ರವೃತ್ತಿ ಮತ್ತು ಪ್ರತಿಕೂಲನಿವೃತ್ತಿ ಎಂಬ) "ವ್ಯವಹಾರದಲ್ಲಿ" ಉಪಯೋಗಕ್ಕೆ ಬರುವುದಿಲ್ಲವಾದ್ದರಿಂದ ಅದು ಅಧ್ಯಾಸಪೂರ್ವಕವಾಗಿಯೇ ಇದೆ ಎಂಬುದಕ್ಕೆ ಅಪವಾದವಲ್ಲ. ಶಾಸ್ತ್ರೋದಾಹರಣೆಯನ್ನು ಮಾಡಿದ ಭಾಷ್ಯಕ್ಕೆ ಇದು ಅಭಿಪ್ರಾಯವು. (ಏನೆಂದರೆ) – ಎಲ್ಲಾ ಶಾಸ್ತ್ರಗಳು, ಶಾಸನವನ್ನು ತಿಳಿಯುವವರನ್ನೂ, ಸಂಸಾರಿಭಾವವನ್ನು ಅಧ್ಯಾಸಮಾಡಿಕೊಂಡ ಅಧಿಕಾರಿಯನ್ನೂ ಅಪೇಕ್ಷಿಸಿಕೊಳ್ಳುತ್ತವೆ ಎಂಬುದು ಪ್ರಸಿದ್ಧವಾಗಿದೆ. ಹೀಗೆ ಎಲ್ಲಾ ಲೌಕಿಕವೈದಿಕವ್ಯವಹಾರಗಳೂ ಅಧ್ಯಾಸಪುರಸ್ಸರವೆಂಬುದು ಅನುಭವಸಿದ್ಧವಾಗಿಯೇ ಇದೆಯೇ ಹೊರತು (ಅದನ್ನು) ಯಾವ ಪ್ರಮಾಣಗಳಿಂದಲೂ ಸಾಧಿಸಲಾಗುವುದಿಲ್ಲ. ವೇದಾಂತದಿಂದ ತಿಳಿದುಬರುವ ವಿದ್ಯೆಯಿಂದ ತೊಲಗುವ ಅವಿದ್ಯೆಯು, ಪ್ರಮಾಣಗಳನ್ನೂ ಯುಕ್ತಿಯನ್ನೂ ಸಹಿಸಿಕೊಳ್ಳುವುದಲ್ಲವೆಂಬುದೂ ಅನುಭವವೊಂದರಿಂದಲೇ ಅದು ತಿಳಿದುಬರುವುದೆಂಬುದನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲವೆಂಬುದೂ ಇಲ್ಲಿ ವಿವಕ್ಷಿತವಾಗಿದೆ ಎಂದಾಗುತ್ತದೆ. ಆದ್ದರಿಂದಲೇ ವಾರ್ತಿಕಕಾರರೂ

ನಿರೀಕ್ಷಿತುಮ್ । ಕೀದೃಶೀ ವಾ ಕುತೋ ವಾಽಸಾವನುಭೂತ್ಯೇಕರೂಪತಃ॥" (ಸಂ. ವಾ. ೧೮೪೪) ಇತಿ । "ಪ್ರಮಾಣೋತ್ಪನ್ನಯಾ ದೃಷ್ಟ್ಯಾ ಯೋಽವಿದ್ಯಾಂ ದ್ರಷ್ಟುಮಿಚ್ಛತಿ । ದೀಪೇನಾಽಸೌ ಧ್ರುವಂ ಪಶ್ಯೇದ್ಗುಹಾಕುಕ್ಷಿಗತಂ ತಮಃ॥" (ತೈ. ವಾ. ೨-೧೭೭) ಇತಿ ಚ । ತಸ್ಮಾದ್ಯಥಾ ಪ್ರಮಾಣಮ್, ತಥಾ ಪ್ರಮಾಣಪ್ರವೃತ್ತೇಃ ಪ್ರಾಗೇವ ಸಿದ್ಧೋಽಧ್ಯಾಸೋಽಪ್ಯನುಭವೈಕಗಮ್ಯಃ, ನ ತು ಪ್ರಮಾಣಗಮ್ಯ ಇತ್ಯೇತದೇವ ಭಾಷ್ಯಕಾರಹೃದಯಮಿತಿ ದ್ರಷ್ಟವ್ಯಮ್ ॥

---

ಹೇಳಿರುತ್ತಾರೆ. "ಇವನಿಗೆ ಅವಿದ್ಯೆ ಇದೆ ಎಂಬುದನ್ನು ಪ್ರಮಾಣದಿಂದ ನಿರೀಕ್ಷಿಸುವುದಕ್ಕಾಗುವುದಿಲ್ಲ, (ಈ ಅವಿದ್ಯೆಯು) ಎಂಥದ್ದೆಂದಾಗಲೀ ಎಲ್ಲಿಂದ ಬಂತೆಂತಾಗಲಿ – ಅನುಭವವು ಏಕರೂಪವಾಗಿರುವುದರಿಂದ – ಹೇಳುವುದಕ್ಕಾಗುವುದಿಲ್ಲ"(ಸಂ.ವಾ. ೧೮೪೪). "ಪ್ರಮಾಣದಿಂದುಂಟಾದ ದೃಷ್ಟಿಯಿಂದ ಯಾವಾತನು ಅವಿದ್ಯೆಯನ್ನು ನೋಡಲು ಇಷ್ಟಪಡುತ್ತಾನೋ, ಆತನು ಖಂಡಿತವಾಗಿಯೂ ದೀಪವನ್ನು ತೆಗೆದುಕೊಂಡು ಗುಹೆಯೊಳಗಿರುವ ಕತ್ತಲೆಯನ್ನು ನೋಡಿಯಾನು" ! (ತೈ. ವಾ ೨-೧೭೭). ಆದ್ದರಿಂದ ಹೇಗೆ ಪ್ರಮಾಣವು (ಪ್ರಮಾಣಾಂತರದಿಂದ ಸಿದ್ಧವಾಗದೇ ಇರುವಂಥದ್ದೋ) ಹಾಗೆಯೇ ಪ್ರಮಾಣಗಳ ಪ್ರವೃತ್ತಿಗಿಂತಲೂ ಮೊದಲೇ ಸಿದ್ಧವಾದ ಅಧ್ಯಾಸವೂ ಕೂಡ ಅನುಭವಮಾತ್ರದಿಂದ ತೋರಿಬರುವಂಥದ್ದೇ ಹೊರತು ಪ್ರಮಾಣ-ಗಳಿಂದ ತೋರುವುದಲ್ಲ ಎಂಬುದಿಷ್ಟೇ ಭಾಷ್ಯಕಾರರ ಹೃದಯವೆಂದು ತಿಳಿಯಬೇಕು.

**********

## ೭. ಅಥಾಧ್ಯಾಸಪ್ರಕಾರಪ್ರದರ್ಶನಭಾಷ್ಯಮ್

**ಅಧ್ಯಾಸೋ ನಾಮಾತಸ್ಮಿಂಸ್ತದ್ಬುದ್ಧಿರಿತ್ಯವೋಚಾಮ। ತದ್ಯಥಾ ಪುತ್ರಭಾರ್ಯಾದಿಷು ವಿಕಲೇಷು ಸಕಲೇಷು ವಾ ಅಹಮೇವ ವಿಕಲಃ ಸಕಲೋ ವೇತಿ ಬಾಹ್ಯ-ಧರ್ಮಾನಾತ್ಮನ್ಯಧ್ಯಸ್ಯತಿ । ತಥಾ ದೇಹಧರ್ಮಾನ್ "ಸ್ಥೂಲೋಽಹಮ್", "ಕೃಶೋಽಹಮ್", "ಗೌರೋಽಹಮ್", "ತಿಷ್ಠಾಮಿ", "ಗಚ್ಛಾಮಿ", "ಲಂಘಯಾಮಿ", ಚೇತಿ । ತಥೇಂದ್ರಿಯಧರ್ಮಾನ್ "ಮೂಕಃ", "ಕಾಣಃ", "ಕ್ಲೀಬಃ", "ಬಧಿರಃ", "ಅಂಧೋಽಹಮ್" ಇತಿ । ತಥಾನ್ತಃಕರಣಧರ್ಮಾನ್ ಕಾಮಸಂಕಲ್ಪವಿಚಿಕಿತ್ಸಾಧ್ಯವಸಾಯಾದೀನ್।**

---

## ೭.ಅಧ್ಯಾಸದ ಪ್ರಕಾರವನ್ನು ತೋರಿಸುವ ಭಾಷ್ಯವು

"ಅಧ್ಯಾಸ" ಎಂದರೆ ಅದಲ್ಲದ್ದರಲ್ಲಿ ಅದು ಎಂಬ ತಿಳಿವಳಿಕೆ ಎಂದು (ಹಿಂದೆಯೇ) ಹೇಳಿರುತ್ತೇವೆ. ಅದು ಹೇಗೆಂದರೆ : ಹೆಂಡತಿ, ಮಕ್ಕಳು, ಮುಂತಾದವರು ಬಡವಾದರೆ ಅಥವಾ ಮೈಗೂಡಿಕೊಂಡರೆ "ನಾನೇ ಬಡವಾದೆನು", "ಮೈಗೂಡಿಕೊಂಡೆನು" ಎಂದು ಹೊರಗಿನ (ವಸ್ತುಗಳ) ಧರ್ಮಗಳನ್ನು ತನ್ನಲ್ಲಿ ಅಧ್ಯಾಸಮಾಡಿಕೊಳ್ಳುತ್ತಾನೆ; ಹಾಗೆಯೇ "ನಾನು ದಪ್ಪವಾಗಿರುವೆನು", "ನಾನು ಬಡಕಲಾಗಿರುವೆನು", "ನಾನು ಬೆಳ್ಳಗಿರುವೆನು", "ನಿಂತಿದ್ದೇನೆ", "ನಡೆಯುತ್ತಿದ್ದೇನೆ", " ನೆಗೆಯುತ್ತಿದ್ದೇನೆ", ಎಂದು ದೇಹದ ಧರ್ಮಗಳನ್ನು (ಅಧ್ಯಾಸಮಾಡಿಕೊಂಡಿರುತ್ತಾನೆ). ಇದರಂತೆ (ನಾನು) "ಮೂಕನು", "ಒಕ್ಕಣ್ಣನು", "ನಪುಂಸಕನು", "ಕಿವುಡನು", " ನಾನು ಕುರುಡನು" ಎಂದು ಇಂದ್ರಿಯಗಳ ಧರ್ಮಗಳನ್ನು (ಅಧ್ಯಾಸಮಾಡಿಕೊಳ್ಳುತ್ತಾನೆ); ಇದರಂತೆ ಬಯಸುವದು, ಸಂಕಲ್ಪಿಸುವುದು, ಸಂಶಯಪಡುವದು, ನಿಶ್ಚಯಿಸುವದು – ಮುಂತಾದ ಅಂತಃಕರಣದ ಧರ್ಮಗಳನ್ನು (ಅಧ್ಯಾಸಮಾಡಿಕೊಳ್ಳುತ್ತಾನೆ). ಹೀಗೆ ಅಹಂಪ್ರತ್ಯಯಿ(ಯಾದ

**ಏವಮಹಂಪ್ರತ್ಯಯಿನಮಶೇಷಸ್ವಪ್ರಚಾರಸಾಕ್ಷಿಣಿ ಪ್ರತ್ಯಗಾತ್ಮನ್ಯಧ್ಯಸ್ಯ ತಂ ಚ ಪ್ರತ್ಯಗಾತ್ಮಾನಂ ಸರ್ವ-ಸಾಕ್ಷಿಣಂ ತದ್ವಿಪರ್ಯಯೇಣಾನ್ತಃಕರಣಾದಿಷ್ವಧ್ಯಸ್ಯತಿ॥**

**೫೧. ಅಧ್ಯಾಸಲಕ್ಷಣಾನುವಾದಃ** – ಅಥೇದಾನೀಂ ಯಥೋಪವರ್ಣಿತಾಧ್ಯಾಸಪ್ರಕಾರಾನ್ ಪ್ರದರ್ಶಯಿತುಕಾಮಃ ಪೂರ್ವೋಕ್ತ-ಮಧ್ಯಾಸಲಕ್ಷಣಂ ಸಂಕ್ಷಿಪ್ಯಾನುವದತಿ – **"ಅಧ್ಯಾಸೋ ನಾಮಾತಸ್ಮಿಂಸ್ತ-ದ್ಬುದ್ಧಿರಿತ್ಯವೋಚಾಮ"** । ಯೋಽಸೌ ಯುಷ್ಮದಸ್ಮತ್ಪ್ರತ್ಯಯಗೋಚರಯೋ-ರನ್ಯೋನ್ಯಾಧ್ಯಾಸ ಇತ್ಯುಕ್ತಃ, ಯಶ್ಚ ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸ ಇತಿ ಲಕ್ಷಿತಃ, ಸರ್ವಥಾಪಿ ತ್ವನ್ಯಸ್ಯಾನ್ಯಧರ್ಮಾವಭಾಸತಾಂ ನ ವ್ಯಭಿಚರತೀತ್ಯನ್ತೇನ ಗ್ರಂಥೇನ ವ್ಯಾಖ್ಯಾತಶ್ಚ, ಸೋಽತಸ್ಮಿಂಸ್ತದ್ಬುದ್ಧಿರೂಪ ಏವ । ಅತದ್ರೂಪೇ ಆತ್ಮನಿ ತದ್ರೂಪಬುದ್ಧಿಃ ಅನಾತ್ಮಬುದ್ಧಿಃ । ತದ್ವಿ-ಪರ್ಯಯೇಣ ಚಾತದ್ರೂಪೇಽನಾತ್ಮನಿ ತದ್ರೂಪಬುದ್ಧಿರಾತ್ಮಬುದ್ಧಿರಿತ್ಯಯ-

---

ಅಂತಃಕರಣ)ವನ್ನು ತನ್ನ ಹರಿದಾಟಗಳಿಗೆಲ್ಲ ಸಾಕ್ಷಿಯಾಗಿರುವ ಒಳಗಿನ ಆತ್ಮನಲ್ಲಿ ಅಧ್ಯಾಸಮಾಡಿ ಇದಕ್ಕೆ ವಿಪರೀತವಾಗಿ ಆ ಸರ್ವಸಾಕ್ಷಿಯಾದ ಪ್ರತ್ಯಗಾತ್ಮನನ್ನು ಅಂತಃಕರಣವೇ ಮುಂತಾದವುಗಳಲ್ಲಿ ಅಧ್ಯಾಸಮಾಡುತ್ತಾನೆ.

**೫೧. ಅಧ್ಯಾಸಲಕ್ಷಣದ ಅನುವಾದವು** – ಇನ್ನು ಈಗ ಮೇಲೆ ವರ್ಣನೆ ಮಾಡಿದ ಅಧ್ಯಾಸದ ಪ್ರಕಾರಗಳನ್ನು ತೋರಿಸಬೇಕೆನ್ನುವರಾಗಿ ಹಿಂದೆ ಹೇಳಿದ ಅಧ್ಯಾಸದ ಲಕ್ಷಣವನ್ನು ಸಂಗ್ರಹಿಸಿ "ಅಧ್ಯಾಸೋ ನಾಮ......." ಎಂದು ಅನುವಾದಮಾಡಿರುತ್ತಾರೆ. "ಯುಷ್ಮದಸ್ಮತ್" ಪ್ರತ್ಯಯಗೋಚರ-ವಾಗಿರುವದಕ್ಕೆ ಯಾವ ಅನ್ಯೋನ್ಯಾಧಾಸವನ್ನು ಹೇಳಿತ್ತೋ, ಯಾವುದನ್ನೇ ಸ್ಮೃತಿರೂಪವೂ, ಅದಲ್ಲದ್ದರಲ್ಲಿ ಹಿಂದೆಕಂಡದ್ದನ್ನು ಕಾಣುವುದೆಂಬುದಾಗಿ ಲಕ್ಷಿಸಿತ್ತೋ, ಅದು ಹೇಗೇ ಆಗಲಿ ಒಂದು ಇನ್ನೊಂದು ಗುಣವುಳ್ಳದ್ದಾಗಿ ತೋರುವುದೆಂಬುದು ಬಿಟ್ಟು ಹೋಗುವುದಿಲ್ಲ ಎಂದು ಇದುವರೆಗಿನ ಗ್ರಂಥಭಾಗದಿಂದ ತಿಳಿಸಿತ್ತೋ, "ಅದು ಅದಲ್ಲದ್ದರಲ್ಲಿ ಅದೆಂಬ ಬುದ್ಧಿರೂಪವಾದದ್ದೇ" ಆಗಿದೆ. ಹಾಗಿಲ್ಲದ ಆತ್ಮನಲ್ಲಿ ಹಾಗಿದ್ದಾನೆಂಬ ಬುದ್ಧಿಯೇ ಅನಾತ್ಮಬುದ್ಧಿಯು. ಅದಕ್ಕೆ ವಿರುದ್ಧವಾಗಿ ಆ ರೀತಿ ಇರದ

ಮೇವಾಧ್ಯಾಸೋ ನಾಮ ನಾನ್ಯ ಇತ್ಯರ್ಥಃ । ಏತೇನ ಸ್ಮೃತಿರೂಪ ಇತ್ಯಾದಿ-ಲಕ್ಷಣೇಽಪಿ ಅಯಮೇವ ಅಧ್ಯಾಸಃ ಲಕ್ಷಿತೋ ನಾನ್ಯ ಇತ್ಯುಕ್ತಂ ಭವತಿ । ಸ್ಮೃತಿರೂಪಃ ಪೂರ್ವದೃಷ್ಟಃ ಇತಿ ಚ ವಿಶೇಷಣಂ ತು ಲೋಕಸಿದ್ಧಶುಕ್ತಿ-ರಜತಾದ್ಯಧ್ಯಾಸೋಪಪಾದನಾರ್ಥಮ್, ನ ಪ್ರಕೃತಾಧ್ಯಾಸಲಕ್ಷಣಶರೀರ-ಪ್ರವಿಷ್ಟಮಪೀತ್ಯುಕ್ತಂ ಪ್ರಾಕ್। ಏತದ್ಭಾಷ್ಯವಚನವಿರುದ್ಧತ್ವಾದೇವ ಪೂರ್ವೋಕ್ತಲಕ್ಷಣೇಽರ್ಥಾಧ್ಯಾಸೋಽಪಿ ಸಙ್ಗೃಹೀತ ಇತಿ, ಅಧ್ಯಾಸಸಾಮಗ್ರೀ ಪ್ರದರ್ಶಿತೇತ್ಯಾದಿ ಚ ವಿಕಲ್ಪಯನ್ತೋಽನಾದರ್ತವ್ಯಾಃ । ನ ಹಿ ಭ್ರಾನ್ತಿಬುದ್ಧಿ-ವ್ಯತಿರೇಕೇಣಾಧ್ಯಾಸಸ್ಯ ರೂಪಾನ್ತರಂ ಶಕ್ಯೋಪಪಾದನಮ್ । ತಥಾ ಚ **ಗೌಡಪಾದೀಯಂ ವಚಃ** "ಅನಿಶ್ಚಿತಾ ಯಥಾ ರಜ್ಜುರನ್ಧಕಾರೇ ವಿಕಲ್ಪಿತಾ । ಸರ್ಪಧಾರಾದಿಭಿರ್ಭಾವೈಸ್ತದ್ವದಾತ್ಮಾ ವಿಕಲ್ಪಿತಃ" (ಮಾಂ. ಕಾ. ೨-೧೭) ಇತಿ । ಅತ ಏವ ಸಕಲಮಿಥ್ಯಾಭೇದನಿರ್ವಾಹಕತ್ವೇನೋಪನ್ಯಸ್ತೇಽಸ್ಮಿನ್ನಧ್ಯಾಸೇ

---

ಅನಾತ್ಮದಲ್ಲಿ ಆತ್ಮನೆಂಬ ಬುದ್ಧಿ ಮಾಡಿಕೊಳ್ಳುವುದೇ ಅಧ್ಯಾಸವೇ ಹೊರತು ಬೇರೆ ಅಲ್ಲ. ಇಷ್ಟರಿಂದ "ಸ್ಮೃತಿರೂಪಃ ಪರತ್ರ" ಎಂಬೀರೀತಿಯದಾದ ಲಕ್ಷಣದಲ್ಲೂ ಈ ಅಧ್ಯಾಸವೇ ಲಕ್ಷಿತವಾಗಿದೆಯೇ ಹೊರತು ಬೇರೆ ಅಲ್ಲ ಎಂದು ಹೇಳಿದಂತಾಗುತ್ತದೆ. "ಸ್ಮೃತಿರೂಪಃ ಪೂರ್ವದೃಷ್ಟಃ" ಎಂಬ ವಿಶೇಷಣವಾದರೋ ಲೋಕದಲ್ಲಿ ಸಿದ್ಧವಾದ ಶುಕ್ತಿರಜತವೇ ಮುಂತಾದ ಅಧ್ಯಾಸವನ್ನು ಹೊಂದಿಸುವುದಕ್ಕಾಗಿಯೇ ಹೊರತು ಪ್ರಕೃತವಾದ ಅಧ್ಯಾಸ ಲಕ್ಷಣದ ಸ್ವರೂಪದಲ್ಲಿ ಪ್ರವೇಶಿಸುವುದಕ್ಕಲ್ಲ ಎಂದು ಹಿಂದೆ ಹೇಳಿದ್ದೇವೆ. ಈ ಭಾಷ್ಯದ ಮಾತಿಗೆ ವಿರುದ್ಧವಾದ್ದರಿಂದಲೇ ಹಿಂದೆ ಹೇಳಿದ ಲಕ್ಷಣದಲ್ಲಿ ಅರ್ಥಾಧ್ಯಾಸವೂ ಸೇರಿದೆ ಎಂದೂ, ಅಧ್ಯಾಸದ ಸಾಮಗ್ರಿಯೂ ಸೇರಿದೆ ಎಂದು ಮುಂತಾಗಿ ವಿಕಲ್ಪಿಸುವವರನ್ನು ಅನಾದರಣೆ ಮಾಡಬೇಕು. ಭ್ರಾಂತಿಬುದ್ಧಿಗಿಂತ ಬೇರೆಯಾಗಿ ಅಧ್ಯಾಸಕ್ಕೆ ರೂಪಾಂತರವನ್ನು ಹೊಂದಿಸುವುದಕ್ಕಾಗುವುದಿಲ್ಲ. ಹಾಗೆಯೇ ಗೌಡಪಾದರ ಮಾತಿರುತ್ತದೆ. "ಹೇಗೆ ನಿಶ್ಚಿತವಾಗದ ಹಗ್ಗವೇ, ಕತ್ತಲಿನಲ್ಲಿ ಹಾವು, ನೀರಿನಧಾರೆ ಮುಂತಾದ ಪದಾರ್ಥರೂಪದಿಂದ ಕಲ್ಪಿಸಲ್ಪಡುತ್ತದೋ ಹಾಗೆಯೇ ಆತ್ಮನು (ಪ್ರಾಣಾದಿರೂಪದಿಂದ) ಕಲ್ಪಿತನಾಗಿರುತ್ತಾನೆ" (ಮಾಂ. ಕಾ. ೨-೧೭). ಆದ್ದರಿಂದಲೇ ಸಮಸ್ತ ಸುಳ್ಳಾದ ಭೇದಗಳನ್ನೂ ನಿರ್ವಾಹಮಾಡುವುದೆಂದು ತಿಳಿದುಬಂದ ಸುಳ್ಳಿನ ರೂಪವಾದ

ಮಿಥ್ಯಾಶರೀರೇ ರೂಪಭೇದಂ ಕಾರ್ಯಕಾರಣತ್ವಾದಿಕಂ ಚ ಕಲ್ಪಯನ್ತೋ ನ್ಯಾಯಾಪೇತಾ ಇತಿ ಬೋಧ್ಯಮ್। ನ ಹ್ಯನಧ್ಯಸ್ತಃ ಕಶ್ಚಿದಪಿ ಭೇದಃ ಶಕ್ಯಃ ಶಙ್ಕಿತುಮಪೀತಿ ॥

**೫೨. ಆತ್ಮನ್ಯನಾತ್ಮಧರ್ಮಾಣಾಮಧ್ಯಸಪ್ರಕಾರಾಃ** – ಅಥ ಕಸ್ಯಾರ್ಥಸ್ಯ ಕಸ್ಮಿನ್ನಧ್ಯಾಸ ಇತಿ ಪ್ರದರ್ಶಯಿತುಮಾರಭತೇ ಸರ್ವಸ್ಯಾಪಿ ವ್ಯವಹಾರಸ್ಯಾ-ಧ್ಯಾಸಪುರಸ್ಸರತ್ವಂ ದೃಢೀಕರ್ತುಮ್ । ಬುದ್ಧ್ಯಾರೂಢೇ ಹ್ಯಧ್ಯಾಸರೂಪಾ-ವಿದ್ಯಾಯಾಃ ಸಂಸಾರಾನರ್ಥಹೇತುತ್ವೇ ತನ್ನಿವೃತ್ತ್ಯುಪಾಯಾನ್ವೇಷಣಾ ಭವತೀತಿ । **"ತದ್ಯಥಾ ಪುತ್ರಭಾರ್ಯಾದಿಷು ವಿಕಲೇಷು ಸಕಲೇಷು ವಾ ಅಹಮೇವ ವಿಕಲಃ ಸಕಲೋ ವೇತಿ ಬಾಹ್ಯಧರ್ಮಾನಾತ್ಮ-ನ್ಯಧ್ಯಸ್ಯತಿ"** । ತತ್ ಅತಸ್ಮಿಂಸ್ತದ್ಬುದ್ಧಿರಿತಿ ಸಾಮಾನ್ಯೇನೋಕ್ತಂ ಯಥಾ ಬುದ್ಧಿಮಾರೋಹತಿ ತಥಾ ಅಧ್ಯಾಸವಿಶೇಷಾನ್ ಪ್ರದರ್ಶಯಿಷ್ಯಾಮ ಇತ್ಯರ್ಥಃ। ಪುತ್ರಭಾರ್ಯಾವಿತ್ತಭೃತ್ಯಪಶುಕ್ಷೇತ್ರಾದಯೋ ಮಮಪ್ರತ್ಯಯಗ್ರಾಹ್ಯಾ

---

ಈ ಅಧ್ಯಾಸದಲ್ಲಿ ರೂಪಭೇದವನ್ನಾಗಲೀ ಕಾರ್ಯಕಾರಣಾದಿಗಳನ್ನಾಗಲೀ ಕಲ್ಪಿಸುವವರು ನ್ಯಾಯಕ್ಕೆ ಹೊರಚ್ಚಾದವರೆಂದು ತಿಳಿಯಬೇಕು. ಯಾವ ಭೇದವನ್ನೇ ಆಗಲಿ ಅಧ್ಯಸ್ತವಲ್ಲ ಎಂದು ಸಂದೇಹಪಡುವುದಕ್ಕೂ ಬರುವುದಿಲ್ಲ.

**೫೨. ಆತ್ಮನಲ್ಲಿ ಅನಾತ್ಮಧರ್ಮದ ಅಧ್ಯಾಸಪ್ರಕಾರಗಳು** – ಎಲ್ಲಾ ವ್ಯವಹಾರವೂ ಅಧ್ಯಾಸಪುರಸ್ಸರವಾಗಿಯೇ ಇರುತ್ತದೆ ಎಂಬುದನ್ನು ಗಟ್ಟಿಪಡಿಸುವುದಕ್ಕಾಗಿ, ಯಾವುದರಲ್ಲಿ ಏನು ಅಧ್ಯಾಸವಾಗಿದೆ ಎಂದು ತೋರಿಸಲು ಆರಂಭಿಸುತ್ತಾರೆ. ಅಧ್ಯಾಸರೂಪವಾದ ಅವಿದ್ಯೆಯು ಬುದ್ಧಿಯಲ್ಲಿ ಹತ್ತಿರಲಾಗಿ (ಅದು) (ಎಲ್ಲ) ಸಂಸಾರದ ಅನರ್ಥಕ್ಕೆ ಕಾರಣವಾಗಿದೆ (ಎಂದಾದ ಮೇಲೆ) ಅದು ಹೋಗುವುದಕ್ಕೆ ಉಪಾಯವನ್ನು ಹುಡುಕಬೇಕಾಗುತ್ತದೆ. (ಅದನ್ನೇ) "ತದ್ಯಥಾ... ಅಧ್ಯಸ್ಯತಿ" (ಎಂದಿರುತ್ತಾರೆ). ಅದಲ್ಲದ್ದರಲ್ಲಿ ಅದೆಂಬ ಬುದ್ಧಿಯೇ ಅಧ್ಯಾಸವೆಂದು ಸಾಮಾನ್ಯವಾಗಿ ಹೇಳಲಾಗಿ ಅದನ್ನು ಹೇಗೆ (ಹೇಳಿದರೆ) ಬುದ್ಧಿಗೆ ಹತ್ತುವುದೋ ಹಾಗೆ ಅಧ್ಯಾಸವಿಶೇಷಗಳನ್ನು ತೋರಿಸಿಕೊಡುವೆವು ಎಂದರ್ಥ. ಮಗ, ಹೆಂಡತಿ, ದುಡ್ಡು, ಆಳು, ಜಮೀನು ಮುಂತಾದವುಗಳು ನನ್ನದೆಂಬ ಅರಿವಿಗೆ ಗೋಚರವಾಗುವ ಪದಾರ್ಥಗಳು.

ಬಾಹ್ಯಪದಾರ್ಥಾಃ ಪುತ್ರಭಾರ್ಯಾದಯಃ । ತ ಏತೇ ಬಾಹ್ಯಾಃ ಸ್ವದೇಹಾದ್ಬಹಿರೇವ ಲಬ್ಧಸತ್ತಾಕತ್ವಾತ್, ಆತ್ಮಪ್ರತ್ಯಯಾನರ್ಹತ್ವೇನ ಸುಪ್ರಸಿದ್ಧಾಶ್ಚ । ತೇಷಾಂ ಬಾಹ್ಯಾನಾಂ ತಥಾಭೂತಾನಾಮಪಿ ಯೇ ಧರ್ಮಾಃ ಸಕಲತ್ವಾದಯಸ್ತಾನಾತ್ಮನ್ಯೇವಾಧ್ಯಸ್ಯತಿ, ಆತ್ಮಧರ್ಮಾನಿವ ಪ್ರತ್ಯೇತೀತ್ಯರ್ಥಃ। ಸೋಽಯಂ ಗೌಣಾರೋಪಃ ಭೇದಾಪರೋಕ್ಷ್ಯೇ ಸತ್ಯಪಿ ತದ್ವಿಸ್ಮೃತ್ಯ ಪುತ್ರಾದಿಷ್ವಾತ್ಮಭಾವಾರೋಪಾತ್, ತದ್ಧರ್ಮಾಣಾಮಪ್ಯಾತ್ಮನ್ಯರೋಪಾಚ್ಚ। ಪುತ್ರಾದಿಷು ಮಮಾಭಿಮಾನಪ್ರಯುಕ್ತೋಽಯಮಧ್ಯಾಸಃ । ಸ್ವಪುತ್ರೇ ಕೇನಚಿತ್ ಸತ್ಕೃತೇ ಸ್ವಾತ್ಮಾನಮೇವ ಸತ್ಕೃತಂ ಮನ್ಯತೇ, ತತ್ಕಸ್ಯ ಹೇತೋಃ ? ತಸ್ಮಿನ್ ಮಮಾಭಿಮಾನಾತ್ । ಏವಂ ಭಾರ್ಯಾದಿಷ್ವಪಿ ದ್ರಷ್ಟವ್ಯಮ್ । ಸೋಽಯಂ ಮಮಾಭಿಮಾನೋ ದೇಹತಾದ್ಧರ್ಮ್ಯಾಧ್ಯಾಸಪೂರ್ವಕ ಏವ ಭವತಿ ।

---

(ಇವೇ) ಪುತ್ರಾದಿಗಳು. ಇವು "ನಾನು" ಎಂಬ ಅರಿವಿಗೆ ಅರ್ಹವಲ್ಲವೆಂಬುದು ಸುಪ್ರಸಿದ್ಧವಾಗಿರುವುದರಿಂದ, ತನ್ನ ದೇಹಕ್ಕಿಂತ ಹೊರಗಡೆಯಲ್ಲಿಯೇ ಇರುವವಾದ್ದರಿಂದ ಇವು ಬಾಹ್ಯವಾದವುಗಳು. ತನ್ನ ದೇಹಕ್ಕಿಂತ ಹೊರಗಡೆಯಲ್ಲಿಯೇ ಇರುವವಾದ ಆ ಈ ಬಾಹ್ಯಪದಾರ್ಥಗಳು ನಾನೆಂಬ ತಿಳಿವಳಿಕೆಗೆ ಅಯೋಗ್ಯವಾಗಿವೆ ಎಂಬುದು ಸುಪ್ರಸಿದ್ಧವಾಗಿದೆ. ಹೊರಗಡೆ-ಯಲ್ಲಿಯೇ ಇರುವವಾದ ಅವುಗಳ ಯಾವ ಸಕಲ ವಿಕಲ ಗುಣಗಳಿವೆಯೋ ಅವನ್ನು ತನ್ನಲ್ಲಿ ಹುಟ್ಟುಹಾಕಿಕೊಳ್ಳುತ್ತಾನೆ, (ಅವು) ತನ್ನದೇ ಧರ್ಮವೆಂಬಂತೆ ತಿಳಿಯುತ್ತಾನೆಂದರ್ಥವು. (ತನಗೂ ಅವಕ್ಕೂ) ಭೇದವು ಸ್ಪಷ್ಟವಾಗಿದ್ದರೂ ಅದನ್ನು ಮರೆತು (ಆ) ಮಕ್ಕಳೇ ಮುಂತಾದವುಗಳನ್ನು ನಾನೆಂದು ಆರೋಪಿಸಿಕೊಂಡಿರುವುದರಿಂದ ಹಾಗೆಯೇ ಅವುಗಳ ಧರ್ಮಗಳನ್ನೂ (ತನ್ನಲ್ಲಿ ಕಲ್ಪಿಸಿಕೊಂಡಿರುವುದರಿಂದ) ಇವು ಗೌಣವಾದ ಆರೋಪವು. ಈ ಅಧ್ಯಾಸವು ಮಕ್ಕಳೇ ಮುಂತಾದವರು ನನ್ನವರೆಂಬ ಅಭಿಮಾನದಿಂದ ಆದದ್ದು. ಆ ಮಗನಲ್ಲಿ ನನ್ನವನೆಂಬ ಅಭಿಮಾನವಿರುವುದರಿಂದ ಯಾರಾದರೂ ಆ ಮಗನಿಗೆ ಸತ್ಕಾರವನ್ನು ಮಾಡಿದರೆ ತನ್ನನ್ನೇ ಸತ್ಕಾರಮಾಡಿದರೆಂದು ತಿಳಿಯುತ್ತಾನೆ. ಹೀಗೆಯೇ ಹೆಂಡತಿ ಮುಂತಾದವರಲ್ಲೂ ತಿಳಿಯಬೇಕು. ಈ ನನ್ನದೆಂಬ ಅಭಿಮಾನವೂ ದೇಹ ಮತ್ತು ಅದರ ಧರ್ಮವನ್ನು ಅಧ್ಯಾಸಮಾಡಿಕೊಂಡೇ

ದೇಹತಾದಾತ್ಮ್ಯಮಾಪನ್ನ ಏವ ಹಿ ತದ್ಧರ್ಮಭೂತಂ ಪುತ್ರಾದಿಸಮ್ಬನ್ಧ-ಮಾತ್ಮನ್ಯಾರೋಪಯತಿ ॥

ಅತೋ ದೇಹತಾದ್ಧರ್ಮ್ಯಾಧ್ಯಾಸಂ ಪ್ರದರ್ಶಯತಿ **"ತಥಾ ದೇಹ-ಧರ್ಮಾನ್ 'ಸ್ಥೂಲೋಽಹಮ್', 'ಕೃಶೋಽಹಮ್', 'ಗೌರೋಽಹಮ್', 'ತಿಷ್ಠಾಮಿ', 'ಗಚ್ಛಾಮಿ', 'ಲಙ್ಘಯಾಮಿ' ಚೇತಿ"**। ಯದ್ಯಪಿ ಅಹಂ ದೇಹಃ ಇತ್ಯಾಕಾರೇಣ ದೇಹತಾದಾತ್ಮ್ಯಾಧ್ಯಾರೋಪೋ ನಾಸ್ತಿ, ತಥಾಪಿ ತದ್ಧರ್ಮಭೂತಸ್ಥೌಲ್ಯಾದ್ಯಧ್ಯಾರೋಪಸ್ತತ್ತಾದಾತ್ಮ್ಯಮಪ್ಯಾಕ್ಷಿಪತಿ । ತತಶ್ಚ ತಾದಾತ್ಮ್ಯಾಧ್ಯಾರೋಪೋಽಪಿ ಸೇತ್ಸ್ಯತೀತಿ ಧ್ಯೇಯಮ್ । ನನು ನ ಕಶ್ಚಿದಧ್ಯಾರೋಪೋಽತ್ರ ದೃಶ್ಯತೇ । ತಿಷ್ಠಾಮಿ, ಗಚ್ಛಾಮಿ, ಲಙ್ಘಯಾಮಿ ಚೇತಿ ಸಙ್ಕಲ್ಪಪೂರ್ವಕಂ ಹಿ ದೇಹಃ ಸ್ಪನ್ದತೇ । ಅತೋ ಯತ್ಸಙ್ಕಲ್ಪಕೃತಾ ಯಾ ಕ್ರಿಯಾ ಸಾ ತಸ್ಯಾಽಽತ್ಮನ ಏವೇತಿ ನ್ಯಾಯ್ಯಮ್ । ಸ್ಥೂಲೋಽಹ-ಮಿತ್ಯಾದಿಸ್ತು ಗೌಣಃ ಪ್ರತ್ಯಯಃ । ನೈತತ್ಸಾರಮ್ । ಸಙ್ಕಲ್ಪಾದೇ-

---

ಆಗುವುದು. ದೇಹದಲ್ಲಿ ತಾದಾತ್ಮ್ಯತೆಯನ್ನು ಹೊಂದಿದಮೇಲೆಯೇ ಅದಕ್ಕೆ ಸಂಬಂಧಪಟ್ಟ ಮಗನೇ ಮುಂತಾದವರ ಸಂಬಂಧವನ್ನು ತನ್ನಲ್ಲಿ ಆರೋಪಿಸಿಕೊಳ್ಳುತ್ತಾನೆ.

ದೇಹದ (ಮತ್ತು ಅದರ) ಧರ್ಮದ ಅಧ್ಯಾಸವನ್ನು ತೋರಿಸುತ್ತಾರೆ – "ತಥಾ ದೇಹಧರ್ಮಾನ್.....ಲಂಘಯಾಮಿ ಇತಿ"ಚ ! ಒಂದು ರೀತಿ (ನಮಗೆ) "ನಾನು ದೇಹವು" ಎಂಬೀರೀತಿಯ ದೇಹದ ಅಭಿಮಾನವಿಲ್ಲವಾದರೂ ಆ ದೇಹದ ಸ್ವಭಾವವಾದ ದಪ್ಪವಾಗಿದ್ದೇನೆಂಬುದೇ ಮೊದಲಾದ ತಪ್ಪು ತಿಳಿವಳಿಕೆಯು, ಅದೇ ನಾನೆಂಬ ಅಭಿಮಾನವನ್ನು ಉಂಟುಮಾಡುತ್ತದೆ. ಆಮೇಲೆ ನಾನೆಂಬ ಅಧ್ಯಾರೋಪವು ಕೂಡ ಹೊಂದುತ್ತದೆ ಎಂದು ತಿಳಿಯಬೇಕು. ನಿಂತಿರುವೆನು, ಹೋಗುವೆನು, ಹಾರುವೆನು ಎಂದುಮುಂತಾಗಿ ಸಂಕಲ್ಪಪೂರ್ವಕವಾಗಿಯೇ ಅಲ್ಲವೆ ದೇಹವು ಚೇಷ್ಟೆಯನ್ನು ಮಾಡುವುದು ? ಆದ್ದರಿಂದ ಯಾವಾತನ ಸಂಕಲ್ಪದಿಂದ ಯಾವ ಕ್ರಿಯುಯು ನಡೆಯುವುದೋ ಅದು ಆತ್ಮನದೇ ಎಂದು ತಿಳಿಯುವುದು ನ್ಯಾಯವಲ್ಲವೆ ? "ನಾನು ದಪ್ಪವಾಗಿದ್ದೇನೆ" ಎಂಬ ಸ್ಥಳದಲ್ಲಾದರೋ ಗೌಣಜ್ಞಾನವು, ಆದ್ದರಿಂದ ಇಲ್ಲಿ ಯಾವುದೊಂದು ತಪ್ಪುತಿಳಿವಳಿಕೆಯೂ ಕಂಡುಬರುವುದಿಲ್ಲವಲ್ಲ !

ರಪ್ಯಧ್ಯಸ್ತತ್ವಾತ್ । ಉಪಪಾದಿತಂ ಹ್ಯೇತತ್ ಸಙ್ಕಲ್ಪಾದಿಕಮಪ್ಯನಧ್ಯಸ್ತಂ ನಾಸ್ತ್ಯೇವೇತಿ । ವಕ್ಷ್ಯತೇ ಚೋಪರಿಷ್ಟಾದ್ಯಥಾ ದೇಹಾತ್ಮಪ್ರತ್ಯಯೋ ಗೌಣೋ ನ ಭವತಿ ತಥಾ ಭಾಷ್ಯ ಏವ । ಅತೋ ನ ವಿರೋಧಃ ॥

**ತಥೇನ್ದ್ರಿಯಧರ್ಮಾನ್ ಅಧ್ಯಾರೋಪಯತಿ** । ಅತ್ರಾಪಿ "ಮೂಕೋऽಹಮ್", "ಕಾಣೋऽಹಮ್", "ಕ್ಲೀಬೋऽಹಮ್", "ಬಧಿರೋऽಹಮ್" "ಅಂಧೋऽಹಮ್" – ಇತಿ ಸರ್ವತ್ರ ಧರ್ಮಾಧ್ಯಾಸೋಪನ್ಯಾಸೇನ ತದಾಕ್ಷಿಪ್ತೋ ಧರ್ಮಿಭೂತೇನ್ದ್ರಿಯತಾದಾತ್ಮ್ಯರೂಪೋऽಪ್ಯುಪನ್ಯಸ್ತ ಏವ ಭವತಿ ॥

ಯಥಾ ದೇಹಧರ್ಮಾನ್ ಯಥಾ ವೇನ್ದ್ರಿಯಧರ್ಮಾನ್ **ತಥಾನ್ತಃಕರಣಧರ್ಮಾನ್ ಅಧ್ಯಸ್ಯತಿ** । ಶ್ರೋತ್ರಾದೀನಿ ಬುದ್ಧೀನ್ದ್ರಿಯಾಣಿ, ವಾಗಾದೀನಿ ಕರ್ಮೇನ್ದ್ರಿಯಾಣಿ ಬಾಹ್ಯಾನಿ ಕರಣಾನಿ । ಬಾಹ್ಯವಿಷಯಜ್ಞಾನೇ ಸಾಧನ-

---

ಎಂದರೆ ಇದು ಹುರುಳಿಲ್ಲದ್ದು. (ಏಕೆಂದರೆ) ಸಂಕಲ್ಪವೇ ಮುಂತಾದವುಗಳೂ ಸಹ ಅಧ್ಯಸ್ತವಾದದ್ದೇ. ಅಧ್ಯಸ್ತವಲ್ಲದ್ದಾದ ಸಂಕಲ್ಪಾದಿಗಳೆಂಬುದೂ ಇಲ್ಲವೇ ಇಲ್ಲವೆಂಬುದನ್ನೂ ತೋರಿಸಿಕೊಟ್ಟಾಗಿದೆ. ದೇಹಾತ್ಮಪ್ರತ್ಯಯವು ಗೌಣವೆಂಬುದು ಹೇಗಲ್ಲ ಎನ್ನುವುದನ್ನು ಭಾಷ್ಯದಲ್ಲೇ ತೋರಿಸಿಕೊಡಲಾಗಿದೆ. ಆದ್ದರಿಂದ ವಿರೋಧವಿಲ್ಲ.

ಹಾಗೆಯೇ ಇಂದ್ರಿಯಧರ್ಮಗಳನ್ನು ಆರೋಪಿಸಿಕೊಳ್ಳುತ್ತಾನೆ. ಇಲ್ಲೂ ಕೂಡ ನಾನು ಮೂಕನು, ಒಕ್ಕಣ್ಣನು, ಷಂಡನು, ಕಿವುಡನು, ಕುರುಡನು, ಎಂದೀ ಪರಿಯಾಗಿ ಧರ್ಮಗಳನ್ನು ಅಧ್ಯಾಸಮಾಡಿಕೊಳ್ಳುತ್ತಾನೆಂದು ಹೇಳುವುದರ ಮೂಲಕ ಧರ್ಮಿಯಾದ ಇಂದ್ರಿಯಗಳ ತಾದಾತ್ಮ್ಯವನ್ನೂ ಹೇಳಿದಂತಾಗಿದೆ ಎಂದು (ತಿಳಿಯಬೇಕು).

ಹೇಗೆ ದೇಹಧರ್ಮಗಳನ್ನು, ಹೇಗೆ ಇಂದ್ರಿಯಧರ್ಮಗಳನ್ನು (ತನ್ನ ಮೇಲೆ) ಹುಟ್ಟುಹಾಕಿಕೊಳ್ಳುತ್ತಾನೋ ಅದೇ ರೀತಿ ಅಂತಃಕರಣಧರ್ಮಗಳನ್ನೂ ಹುಟ್ಟುಹಾಕಿಕೊಳ್ಳುತ್ತಾನೆ.ಶ್ರೋತ್ರವೇ ಮೊದಲಾದವುಗಳು ಜ್ಞಾನೇಂದ್ರಿಯಗಳು, ವಾಕ್ಕೇ ಮೊದಲಾದದ್ದು ಕರ್ಮೇಂದ್ರಿಯಗಳು. (ಇವು) ಹೊರಗಿನ ವಿಷಯದ ಜ್ಞಾನಕ್ಕೆ ಸಾಧನವಾಗಿರುವುದರಿಂದ ಹೊರಗಿನ ಕರಣಗಳು. (ಜ್ಞಾನೇಂದ್ರಿಯ

ತ್ವಾತ್ । ಮನೋಬುದ್ಧ್ಯಾದಿಸಂಜ್ಞಿತಂ ತು ಕರಣಂ ಯದ್ಯಪಿ ತತ್ರಾಪಿ ವ್ಯಾಪ್ರಿಯತೇ, ತಥಾಪೀನ್ದ್ರಿಯದ್ವಾರೈವ ತದ್ವ್ಯಾಪಾರೋ ನ ಸ್ವಾತನ್ತ್ರ್ಯೇಣೇತಿ ನ ಬಹಿಃಕರಣತಾಽಸ್ಯ । ಅನ್ತಃ ಸುಖದುಃಖಾದಿವೇದನೇ ತು ಸ್ವಾತಂತ್ರ್ಯೇಣ ಕರಣಂ ಭವತೀತ್ಯನ್ತಃಕರಣಮಿತ್ಯುಚ್ಯತೇ । ತಸ್ಯ ಧರ್ಮಾಃ ಕಾಮಾದಯಃ । ತತ್ರ ಕಾಮೋ ವಿಷಯಾಭಿಲಾಷಃ । ಸಙ್ಕಲ್ಪಃ ಪ್ರತ್ಯುಪಸ್ಥಾಪಿತವಿಷಯಕಲ್ಪನಂ ಶುಕ್ಲಕೃಷ್ಣಾದಿಭೇದೇನ । ವಿಷಯೇ ಸಮ್ಯಕ್ತ್ವಕಲ್ಪನರೂಪಾಭಿಸನ್ಧಿರ್ವಾ । ವಿಚಿಕಿತ್ಸಾ ಸಂಶಯಃ । ಅಧ್ಯವಸಾಯೋ ನಿಶ್ಚಯಃ । ಆದಿಶಬ್ದೇನ ಶ್ರದ್ಧಾ-ಧೃತಿಹ್ರೀರ್ಭೀರಿತ್ಯಾದಿವೃತ್ತಯೋ ಗೃಹ್ಯನ್ತೇ । ತಾನೇತಾನ್ ಕಾಮಾದೀ-ನನ್ತಃಕರಣಧರ್ಮಾನ್ ಸ್ವಾತ್ಮನ್ಯಧ್ಯಸ್ಯತಿ । ಅಹಮೇವ ಕಾಮಯೇ, ಸಙ್ಕಲ್ಪಯಾಮಿ, ವಿಚಿಕಿತ್ಸಾಮಿ, ಅಧ್ಯವಸ್ಯಾಮಿ ಚೇತ್ಯಾದಿರೂಪೇಣಾ-ಧ್ಯಾರೋಪಂ ಕರೋತೀತ್ಯರ್ಥಃ । ಅತ್ರಾಪಿ ಕಾಮಾದ್ಯಾಶ್ರಯಾಂತಃ-

---

– ಕರ್ಮೇಂದ್ರಿಯ ವ್ಯಾಪಾರ)ದಲ್ಲೂ ಮನಸ್ಸು ಬುದ್ಧಿ ಮುಂತಾದ ಒಳಗಿನ ಕರಣಗಳ ವ್ಯಾಪಾರವು ಇದ್ದೇ ಇರುತ್ತದೆಯಾದರೂ ಅಲ್ಲಿ (ಮನಸ್ಸು ಬುದ್ಧಿಗಳ ವ್ಯವಹಾರವು) ಜ್ಞಾನೇಂದ್ರಿಯಕರ್ಮೇಂದ್ರಿಯಗಳ ಮೂಲಕವಾಗಿಯೇ ವ್ಯಾಪಾರವೇ ಹೊರತು ಸ್ವತಂತ್ರವಾದದ್ದಲ್ಲ ಎಂಬ ಕಾರಣದಿಂದ (ಈ ಮನೋಬುದ್ಧಿಗಳು) ಬಾಹ್ಯೇಂದ್ರಿಯಗಳಲ್ಲ. ಒಳಗಿನ ಸುಖದುಃಖಾದಿಗಳನ್ನು ಅರಿಯುವಾಗಲಾದರೋ ಸ್ವತಂತ್ರವಾದ ಕರಣವಾಗುತ್ತದೆ ಎಂದಾದ್ದರಿಂದ ಅಂತಃಕರಣವೆಂದು ಕರೆಯಲಾಗಿದೆ. ಆದರ ಧರ್ಮಗಳು ಕಾಮಾದಿಗಳು, ಕಾಮವೆಂದರೆ ವಿಷಯದ ಬಯಕೆಯು, ಸಂಕಲ್ಪವೆಂದರೆ ಎದುರಿಗಿರುವ ವಿಷಯದ ಬಗ್ಗೆ ಬಿಳಿಪು, ಕಪ್ಪು ಮುಂತಾದ ರೂಪದಿಂದ ವಿಕಲ್ಪಿಸುವುದು, ಅಥವಾ ವಿಷಯದಲ್ಲಿ ಸರಿಯಾಗಿದೆ ಎಂಬೀ ರೂಪದ ತಿಳಿವಳಿಕೆಯಾದರೂ ಆಗಬಹುದು. ವಿಚಿಕಿತ್ಸಾ ಎಂದರೆ ಸಂಶಯವು, ಅಧ್ಯವಸಾಯವೆಂದರೆ ನಿಶ್ಚಯವು. (ಅಧ್ಯವಸಾಯಾದೀನ್) ಎಂಬಲ್ಲಿ "ಆದಿ" ಶಬ್ದದಿಂದ ಶ್ರದ್ಧೆ, ಧೃತಿ, ನಾಚಿಕೆ, ಹೆದರಿಕೆ ಮುಂತಾದ ವೃತ್ತಿಗಳನ್ನು ಸ್ವೀಕರಿಸಬೇಕು. ಆ ಈ ಕಾಮವೇ ಮುಂತಾದ ಅಂತಃಕರಣಧರ್ಮವನ್ನು ತನ್ನಲ್ಲೇ ಹುಟ್ಟುಹಾಕಿಕೊಳ್ಳುತ್ತಾನೆ, ಎಂದರೆ ನಾನೇ ಬಯಸುವೆನು, ಸಂಕಲ್ಪಿಸುವೆನು, ಸಂದೇಹಪಡುವೆನು, ನಿಶ್ಚಯಿಸುವೆನು ಎಂಬಿದೇ ಮೊದಲಾದ ರೂಪದಿಂದ ಅಧ್ಯಾರೋಪವನ್ನು ಮಾಡಿಕೊಳ್ಳುತ್ತಾನೆಂದರ್ಥವು. ಇಲ್ಲೂ ಕೂಡ

ಕರಣತಾದಾತ್ಮ್ಯಾರೋಪೋಽಪ್ಯುಕ್ತೋ ವೇದಿತವ್ಯಃ ॥

**೫೩. ಸಾಕ್ಷ್ಯಹಂಪ್ರತ್ಯಯಿನೋರನ್ಯೋನ್ಯಾಧ್ಯಾಸಃ** – ತದೇವಮಾತ್ಮನ್ಯನಾತ್ಮಧರ್ಮಾಧ್ಯಾಸಪ್ರಕಾರಾನ್ ಪ್ರದರ್ಶ್ಯೇದಾನೀಂ ಸಕಲಧರ್ಮಾಧ್ಯಾಸಮೂಲಮಹಂಧರ್ಮ್ಯಧ್ಯಾಸಮುಪಸ್ಥಾಪಯತಿ **"ಏವಮಹಂಪ್ರತ್ಯಯಿನಮಶೇಷಸ್ವಪ್ರಚಾರಸಾಕ್ಷಿಣಿ ಪ್ರತ್ಯಗಾತ್ಮನ್ಯಧ್ಯಸ್ಯ"** ಇತಿ । ಅಹಮಿತಿ ಪ್ರತ್ಯಯೋ ಯತ್ರ ಸೋಽಯಮಹಂಪ್ರತ್ಯಯೀ, ಅಹಂಪ್ರತ್ಯಯಾಶ್ರಯೋ ಜ್ಞಾತೇತ್ಯರ್ಥಃ । ಸೋಽಯಂ ಕರ್ತಾ ಭೋಕ್ತಾ ಚ ವ್ಯವಹಾರೇ । ಅಯಮಭಿಸನ್ಧಿಃ । ಸನ್ತು ಕಾಮಮನಾತ್ಮಧರ್ಮಾಃ ಕಾಮಾದಯಃ, ತೇಷಾಂ ದೃಶ್ಯತ್ವೇ ಸತಿ ದ್ರಷ್ಟೃಧರ್ಮತ್ವಾನುಪಪತ್ತೇಃ । ಅಹಂರೂಪಸ್ಯ ತು ಪ್ರತ್ಯಗಾತ್ಮಸಂಬನ್ಧಿತಯೈವ ಪ್ರಸಿದ್ಧೇರ್ನ ಯುಕ್ತಮನಾತ್ಮಧರ್ಮತ್ವಮಿತ್ಯಾಶಙ್ಕ್ಯೇತ । ತಾಮಾಶಙ್ಕಾಂ ಪರಿಹರ್ತುಮಿದಮುಚ್ಯತೇ।

---

ಕಾಮಾದಿಗಳಿಗೆ ಆಶ್ರಯವಾದ ಅಂತಃಕರಣದ ತಾದಾತ್ಮ್ಯವನ್ನು ಆರೋಪಿಸಿಕೊಳ್ಳುವುದನ್ನು ಹೇಳಿದೆ ಎಂದು ತಿಳಿಯಬೇಕು.

**೫೩. ಸಾಕ್ಷಿಗೂ ಅಹಂಪ್ರತ್ಯಯಕ್ಕೂ ಅನ್ಯೋನ್ಯಾಧ್ಯಾಸವು** – ಹೀಗೆ ಆತ್ಮನಲ್ಲಿ ಅನಾತ್ಮದ ಧರ್ಮದ ಅಧ್ಯಾಸದ ಪ್ರಕಾರವನ್ನು ಹೇಳಿ ಈಗ ಎಲ್ಲಾ ಅಧ್ಯಾಸಕ್ಕೂ ಮೂಲವಾದ ಅಹಂಧರ್ಮಿಯಾದ (ಅಂತಃಕರಣದ) ಅಧ್ಯಾಸವನ್ನು ಮುಂದಿಡುತ್ತಾರೆ. "ಏವಂ ಅಹಂಪ್ರತ್ಯಯಿನಂ..... ಪ್ರತ್ಯಗಾತ್ಮನ್ಯಧ್ಯಸ್ಯ" ಎಂದು (ಹೇಳುತ್ತಾರೆ). ನಾನೆಂಬ ತಿಳಿವಳಿಕೆಯು ಯಾವನಲ್ಲಿದೆಯೋ ಆ ಈತನೇ ಅಹಂಪ್ರತ್ಯಯಿಯು, ಎಂದರೆ ನಾನೆಂಬ ಅರಿವಿಗೆ ಆಶ್ರಯನಾದ ಜ್ಞಾತೃವು (ಅರಿಯುವಾತನು) ಎಂದರ್ಥವು. ಆ ಈತನೇ ವ್ಯವಹಾರದಲ್ಲಿ ಕರ್ತೃಭೋಕ್ತೃವು. ಇದು ಇಲ್ಲಿ ಅಭಿಪ್ರಾಯವು. ಕಾಮಾದಿಗಳು ದೃಶ್ಯವಾದ್ದರಿಂದ (ಅವು) ದ್ರಷ್ಟೃಧರ್ಮವಾಗುವುದಿಲ್ಲಾ, ಅವುಗಳು ಬೇಕಾದರೆ ಅನಾತ್ಮದ ಧರ್ಮಗಳೇ ಆಗಲಿ, ಆದರೆ ಅಹಂರೂಪವು ಪ್ರತ್ಯಗಾತ್ಮನಿಗೆ ಸಂಬಂಧಪಟ್ಟದ್ದಾಗಿಯೇ ತೋರುವದರಿಂದ ಅದು ಅನಾತ್ಮಧರ್ಮವೆಂಬುದು ಸರಿಯಾಗುವುದಿಲ್ಲ ಎಂದು ಯಾರಾದರೂ ಸಂದೇಹಪಡಬಹುದು ಅದನ್ನು ಪರಿಹರಿಸುವುದಕ್ಕಾಗಿ ಈ ಮಾತನ್ನು

ಅಹಂರೂಪಮಪ್ಯನ್ತಃಕರಣಧರ್ಮ ಏವ, ನಾತ್ಮಧರ್ಮ ಇತಿ । ಅನ್ತಃಕರಣಂ ಹಿ ಚಿತ್ಸಾಂನಿಧ್ಯವಶಾತ್ ಚಿದಿವಾಭಾಸಮಾನಮಹಂಪ್ರತ್ಯಯಾಶ್ರಯೋ ಭವತಿ। ಏತದೇವ ಚಾಹಂಪ್ರತ್ಯಯಾಲಮ್ಬನಂ ಭವತಿ ವ್ಯವಹಾರೇ, ದೇಹಾದಿರಪ್ಯೇತ-ದವಿವೇಕಾತ್ । ಇಯಾಂಸ್ತು ವಿಶೇಷಃ । ದೇಹಾದಿರಿದಂಬುದ್ಧಿವಿಷಯೋಽಪಿ ಭವತೀತ್ಯನಾತ್ಮತಯಾ ಸುವಿವೇಚನಃ । ಅಹಂಪ್ರತ್ಯಯೀ ತು ಚಿದಾಭಾಸ-ಯುತೋಽಹಂಕಾರೋ ಬಾಹ್ಯವಿಷಯಾಪೇಕ್ಷಯಾ ಪ್ರತ್ಯಕ್ತ್ವಾತ್ ಕುತ್ರಚಿದಪಿ ವ್ಯವಹಾರೇ ಇದಂರೂಪೇಣಾಽಪ್ರತಿಭಾಸಮಾನತ್ವಾಚ್ಚ ನಾತ್ಮನಃ ಸಕಾಶಾತ್ ಸುವಿವೇಚನಃ । ಅತ ಏವಾಽಽತ್ಮಾಹಂಪ್ರತ್ಯಯಾಲಮ್ಬನ ಏವ ಜ್ಞಾತೇತಿ, ಮಾನಸಪ್ರತ್ಯಕ್ಷಗಮ್ಯ ಏವೇತಿ, ಸ್ಮೃತೀಚ್ಛಾದಿಲಿಙ್ಗೈರನುಮೇಯಶ್ಚಾತ್ಮೇತಿ ಚ ಭ್ರಾನ್ತಾಃ ಕೇಚಿತ್ ಪರೀಕ್ಷಕಾ ಅಪಿ । ತತ್ರ ಸ್ಮೃತೀಚ್ಛಾದಯಸ್ತಾವದನ್ತಃ-

---

ಹೇಳಲಾಗುತ್ತದೆ, (ಏನೆಂದರೆ) ಅಹಂರೂಪವೂ ಸಹ ಅಂತಃಕರಣಧರ್ಮವೇ ಹೊರತು ಆತ್ಮಧರ್ಮವಲ್ಲ. ಚಿತ್ಸ್ವರೂಪಕ್ಕೆ ಹತ್ತಿರದಲ್ಲಿದೆ ಎಂಬುದಕ್ಕೆ ಅನುಗುಣವಾಗಿ ಚಿತ್ತಿನಂತೆ ತೋರುತ್ತಲಿದ್ದು ಆ ಅಂತಃಕರಣವು ಅಹಂಪ್ರತ್ಯಯಕ್ಕೆ ಆಶ್ರಯವಾಗುತ್ತದೆಯಲ್ಲವೆ ? ಇದನ್ನೇ ವ್ಯವಹಾರದಲ್ಲಿ ಆತ್ಮನು ಈ ಅಹಂಪ್ರತ್ಯಯಕ್ಕೆ ಆಲಂಬನವಾಗಿರುತ್ತಾನೆ (ಎನ್ನುವುದು). ದೇಹಾದಿಗಳೂ ಸಹ ಇದರ ಅವಿವೇಕದಿಂದಾಲಂಬನವಾಗುತ್ತವೆ. ಆದರೆ (ದೇಹಾದಿಗಳಿಗೂ ಅಹಂಪ್ರತ್ಯಯಕ್ಕೂ ) ಇಷ್ಟು ವಿಶೇಷವಿದೆ. (ಏನೆಂದರೆ) ದೇಹಾದಿಗಳು "ಇದು" ಎಂಬ ಬುದ್ಧಿಗೂ ಗೋಚರವಾಗುತ್ತದೆಯಾದ್ದರಿಂದ ಅನಾತ್ಮವಾಗಿವೆ, ಎಂದು ಸುಲಭವಾಗಿ ವಿಂಗಡಿಸಿಕೊಳ್ಳಬಹುದು, ಅಹಂಪ್ರತ್ಯಯಿಯಾದ ಚಿತ್ತಿನ ಆಭಾಸದಿಂದ ಕೂಡಿದ ಅಹಂಕಾರವಾದರೋ ಹೊರಗಿನ ವಿಷಯಕ್ಕೆ ಹೋಲಿಸಿಕೊಂಡರೆ (ಅದು) ಒಳಗಿರುವುದರಿಂದ ವ್ಯವಹಾರದಲ್ಲಿ ಎಲ್ಲೂ "ಇದು" ಎಂಬ ರೂಪದಿಂದ ತೋರದೇ ಇರುವುದರಿಂದ, ಆತ್ಮಸ್ವರೂಪದಿಂದ (ಬೇರ್ಪಡಿಸಿ) ಸುಲಭವಾಗಿ ವಿಂಗಡಿಸಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದಲೇ ಕೆಲವರು ಪರೀಕ್ಷಕರು ಆತ್ಮನು ಅಹಂಪ್ರತ್ಯಯಕ್ಕೆ ಆಶ್ರಯನೇ, ಆಗಿ ಜ್ಞಾತೃವೂ, ಮಾನಸಪ್ರತ್ಯಕ್ಷಗೋಚರನೂ ಎಂತಲೂ ಸ್ಮೃತಿಇಚ್ಛೆಯೇ ಮುಂತಾದ ಗುರುತಿನಿಂದ ಅನುಮಾನಿಸಬಹುದಾಗಿರುವನೂ ಎಂದು ಭ್ರಾಂತರಾಗಿರುತ್ತಾರೆ. ಸ್ಮೃತೀಚ್ಛಾದಿಗಳು ಅಂತಃಕರಣಧರ್ಮವೇ ಆಗಿದ್ದು ಅವು ಆತ್ಮನಲ್ಲಿ

ಕರಣಧರ್ಮಾ ಏವಾತ್ಮನ್ಯಧ್ಯಸ್ತಾ ಇತ್ಯುಪದರ್ಶಿತಂ ಪ್ರಾಕ್ । ಇದಾನೀಮಹಂಪ್ರತ್ಯಯಿತ್ವಮಪ್ಯಧ್ಯಸ್ತಮೇವೇತ್ಯುಚ್ಯತ ಇತಿ ವಿಶೇಷಃ । ಸೋಽಯಮಹಂಪ್ರತ್ಯಯಿಚಿದಾತ್ಮನೋರಿತರೇತರಾಧ್ಯಾಸೋ ನ ಕ್ವಚಿದಪಿ ಕೇವಲ ಏವಾನುಭೂಯತೇ, ಕಿಂತೂಪವರ್ಣಿತಾನ್ತಃಕರಣೇನ್ದ್ರಿಯದೇಹಾದಿಧರ್ಮಾಧ್ಯಾಸಸಹಿತ ಏವೇತಿ ಸ್ಥಿತಿಃ । ಅತ ಏವೋಕ್ತಮಸ್ಮಾಭಿ"ರಹಂ ಸ್ಥೂಲ" ಇತ್ಯಾದಿಧರ್ಮಾಧ್ಯಾಸಸ್ಥಲೇಽಪಿ ಧರ್ಮ್ಯಧ್ಯಾಸೋಽನುಸಂಧೇಯ ಇತಿ । ತದೇತತ್ ಸರ್ವಮಭಿಪ್ರೇತ್ಯಾಹ – ಏವಮಹಂಪ್ರತ್ಯಯಿನಮಿತ್ಯಾದಿ ॥

ನನ್ವಹಮರ್ಥ ಏವಾತ್ಮಾ ಭವತು, ಕಿಮತ್ರಾಹಂಪ್ರತ್ಯಯಿನೋಽಪ್ಯಧ್ಯಾಸವರ್ಣನೇನ ? ತಥಾ ಹ್ಯಯಮಹಂಪ್ರತ್ಯಯೀ ಮಾಮಹಂ ಜಾನಾಮೀತಿ ಪ್ರತ್ಯಕ್ಷೇಣೈವಾಹಂಪ್ರತ್ಯಯವಿಷಯತಯಾ ಸಿದ್ಧಃ । ನ ಚಾಹಂಪ್ರತ್ಯಯೋ ವ್ಯಾಮೋಹಃ । ಬಾಧಕಾಭಾವಾತ್ । ಅಹಂಪ್ರತ್ಯಯವಿಷಯತ್ವಮಪ್ಯಧ್ಯಸ್ತಂ

---

ಹುಟ್ಟುಹಾಕಲ್ಪಟ್ಟಿವೆ ಎಂಬುದನ್ನು ನಾವು ಹಿಂದೆ ತೋರಿಸಿಕೊಟ್ಟಿರುತ್ತೇವೆ. ಈಗ ಅಹಂಪ್ರತ್ಯಯಿತ್ವವೂ ಕೂಡ ಅಧ್ಯಸ್ತವಾದರೂಪವೇ ಎಂದು ಹೇಳುತ್ತಿದ್ದಾರೆಂಬುದೇ ವಿಶೇಷವು. ಆ ಈ ಅಹಂಪ್ರತ್ಯಯಿ ಮತ್ತು ಚಿದಾತ್ಮರುಗಳ ಪರಸ್ಪರಾಧ್ಯಾಸವು ಎಲ್ಲೂ ಪ್ರತ್ಯೇಕವಾಗಿ (ಬೇರೆಬೇರೆಯಾಗಿ) ಅನುಭವಕ್ಕೆ ಬರುವುದಿಲ್ಲ, ಮತ್ತೇನೆಂದರೆ ಹಿಂದೆ ವರ್ಣಿಸಿರುವ ಅಂತಃಕರಣ ಇಂದ್ರಿಯ, ದೇಹವೇ ಮೊದಲಾದವುಗಳ ಧರ್ಮಾಧ್ಯಾಸದೊಡನೆ ಕೂಡಿಕೊಂಡೇ ತೋರುತ್ತದೆ ಎಂಬುದು ವಸ್ತುಸ್ಥಿತಿಯು. ಆದ್ದರಿಂದಲೇ ನಾವು ಹಿಂದೆ – "ನಾನು ದಪ್ಪಗಿದ್ದೇನೆ" ಮುಂತಾದ ಧರ್ಮಾಧ್ಯಾಸದಲ್ಲೂ ಧರ್ಮಿಯ ಅಧ್ಯಾಸವೂ ಇದ್ದೇ ಇದೆ ಎಂದು ತಿಳಿಯಬೇಕೆಂದು – ಹೇಳಿರುತ್ತೇವೆ. ಇದೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು (ಭಾಷ್ಯಕಾರರು) "ಏವಂ ಅಹಂಪ್ರತ್ಯಯಿನಂ" ಎಂದು ಹೇಳಿರುತ್ತಾರೆ.

ಇಲ್ಲಿ ನಾನೆಂಬುದೇ ಆತ್ಮನಾಗಲಿ, ಆ ನಾನೆಂಬ ಅರಿವುಳ್ಳವನಲ್ಲೂ ಅಧ್ಯಾಸವಿದೆ ಎಂದು ವರ್ಣಿಸುವುದರಲ್ಲಿ ಏನು ವಿಶೇಷ ? ನಾನು ನನ್ನನ್ನು ಅರಿಯುತ್ತಿದ್ದೇನೆ ಎಂದು ನೇರಾಗಿಯೇ ಅಹಂಪ್ರತ್ಯಯಕ್ಕೆ ವಿಷಯನಾಗಿ "ಅಹಂ ಪ್ರತ್ಯಯಿಯು" ಸಿದ್ಧನಾಗಿರುತ್ತಾನೆ. ನಾನೆಂಬ ಅರಿವೂ ಭ್ರಾಂತಿ ಎನ್ನುವುದಕ್ಕೆ ಬರುವುದಿಲ್ಲ. ಏಕೆಂದರೆ ಅದಕ್ಕೆ ಬಾಧಕವಿಲ್ಲ. ಅಹಂಪ್ರತ್ಯಯಕ್ಕೆ

ಬ್ರುವಾಣೋ "ಅಹಂ ಬ್ರಹ್ಮಾಸ್ಮೀ"ತಿ ಶ್ರುತಿವಚನಮಪಿ ಬಾಧಿತಾರ್ಥವಿಷಯಮೇವೇತಿ ಬ್ರೂಯಾತ್ । "ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ" ಇತ್ಯಾತ್ಮಾನಮಹಂರೂಪೇಣ ಪರಾಮೃಶನ್ತಂ ಶ್ರೀಕೃಷ್ಣಮಪಿ ಯೋಗೀಶ್ವರಂ ಭ್ರಾನ್ತಜನಕೋಟೌ ವಿನಿಕ್ಷಿಪೇತ್ । ಅತಃ ಪ್ರತ್ಯಕ್ಷವಿರುದ್ಧಂ ಶ್ರುತಿಸ್ಮೃತಿವಿರುದ್ಧಂ ಚೇದಮಧ್ಯಾಸವರ್ಣನಮಿತಿ ಚೇತ್ । (ರಾ. ಪಕ್ಷ) ನೈತತ್ ಸಾಧೂಚ್ಯತೇ। ಏಕಸ್ಯೈವ ಜ್ಞಾನಕರ್ಮತ್ವಂ ಕರ್ತೃತ್ವಂ ಚೇತ್ಯನುಪಪತ್ತೇಃ । ನ ಚ ದೃಷ್ಟತ್ವಾನ್ನಾನುಪಪತ್ತಿರಿತಿ ವಾಚ್ಯಮ್, ಯೇನ ಹಿ ದೃಶ್ಯತೇ ಜ್ಞಾತ್ರಾ ನ ತಸ್ಯೈವ ಜ್ಞೇಯತಾ ದೃಶ್ಯತೇ । ಯಸ್ಮಿಂಶ್ಚಾನ್ತಃಕರಣೇಽಹಂಪ್ರತ್ಯಯವಿಷಯತ್ವಂ ದೃಶ್ಯತೇ ನ ತದ್ದ್ರಷ್ಟೃ । ನ ಹ್ಯಾತ್ಮೈವ ಯುಗಪದ್ದ್ರಷ್ಟಾ ದೃಶ್ಯಶ್ಚ ಭವತೀತಿ ಶಕ್ಯಂ ಕಲ್ಪಯಿತುಮ್। ದ್ರಷ್ಟುರ್ದೃಷ್ಟೇರ್ದೃಶ್ಯವಿಷಯತ್ವಾತ್ । ನಿರಂಶತ್ವಾಚ್ಚ ದ್ರಷ್ಟುರಾತ್ಮನಃ ಸ್ವವಿಷಯಜ್ಞಾನಾಶ್ರಯತ್ವಾಸಿದ್ಧಿಃ । ನ ಚ ಕದಾಚಿದ್ದ್ರಷ್ಟುಃ

---

ವಿಷಯವೆಂಬುದೂ ಅಧ್ಯಾಸವೆನ್ನುವುದಾದರೆ "ಅಹಂ ಬ್ರಹ್ಮಾಸ್ಮಿ" ಎಂಬ ಶ್ರುತಿಯ ಮಾತೂ ಸುಳ್ಳೆಂದಾಗುತ್ತದೆ. ಅಹಂ ಕೃತ್ಸ್ನಸ್ಯ ಜಗತಃ.....(ಗೀ. ೭-೬) (ನಾನು ಎಲ್ಲದರ ಸೃಷ್ಟಿಗೂ ಕಾರಣನು) ಎಂದು ಯೋಗಿಶ್ವರನಾದ ಶ್ರೀಕೃಷ್ಣನು ತನ್ನನ್ನು "ಅಹಂರೂಪ"ದಿಂದ ಪರಾಮರ್ಶಿಸುತ್ತಿರುವುದರಿಂದ ಅವನನ್ನೂ ಭ್ರಾಂತಿಜನರ ಪಟ್ಟಿಯಲ್ಲಿ ಸೇರಿಸಬೇಕಾಗುತ್ತದೆ. ಆದ್ದರಿಂದ ಈ ಅಧ್ಯಾಸದ ವರ್ಣನೆಯು ಪ್ರತ್ಯಕ್ಷಕ್ಕೂ ಶ್ರುತಿಸ್ಮೃತಿಗೂ ವಿರುದ್ಧವೆಂದಾಗುತ್ತದೆಯಲ್ಲಾ ! (ಎಂದರೆ) ಇದು ಸರಿಯಲ್ಲ, ಒಬ್ಬನನ್ನೇ (ಒಂದೇ ಕಾಲಕ್ಕೆ) ಅರಿವಿಗೆ ಕರ್ತೃವಾಗಿಯೂ ಅದಕ್ಕೆ ವಿಷಯುವಾಗಿಯೂ ಹೇಳುವುದು ವಿರುದ್ಧವಾಗುತ್ತದೆ. ಕಂಡಿರುವುದರಿಂದ ಹೊಂದುವುದಿಲ್ಲವೆಂಬುದಿಲ್ಲ ಎಂದು ಹೇಳುವಹಾಗಿಲ್ಲ. ಏಕೆಂದರೆ ಯಾವ ಜ್ಞಾತೃವಿಗೆ ಏನು ಕಂಡುಬಂದಿದೆಯೋ ಅವನೇ ಮತ್ತೆ (ಅದೇ ಜ್ಞಾನಕ್ಕೆ) ಜ್ಞೇಯನಾಗುವುದೆಂಬುದು ಸರಿಯಲ್ಲ. ಯಾವ ಅಂತಃಕರಣದಲ್ಲಿ ಅಹಂಪ್ರತ್ಯಯವಿಷಯತ್ವವು ಕಂಡಿದೆಯೋ ಅದು ದ್ರಷ್ಟೃವಲ್ಲ. ಒಮ್ಮೆಗೇ ಆತ್ಮನು ದ್ರಷ್ಟೃ ಮತ್ತು ದೃಶ್ಯನಾಗುತ್ತಾನೆಂಬುದು ಸರಿಯಲ್ಲ, ಏಕೆಂದರೆ ದ್ರಷ್ಟೃವಿನ ದೃಷ್ಟಿಗೆ ದೃಶ್ಯವು ವಿಷಯವಾಗಿರುತ್ತದೆ. ದ್ರಷ್ಟೃವಾದ ಆತ್ಮನು ನಿರಂಶನಾದ್ದರಿಂದ (ಅವನಲ್ಲಿ ಅವಯುವವಿಲ್ಲವಾದ್ದರಿಂದ) ತನ್ನನ್ನು ವಿಷಯಮಾಡಿಕೊಂಡ ಜ್ಞಾನಕ್ಕೆ (ತಾನೇ) ಆಶ್ರಯನಾಗುವುದೆಂಬುದು ಹೊಂದುವುದಿಲ್ಲ. ದ್ರಷ್ಟೃವಾದ (ಆತ್ಮನಿಗೆ) ತನ್ನ

ಸ್ವವಿಷಯೇಽಪಿ ಪ್ರಮಾಣಾನ್ವೇಷಣಾ ಭವತಿ । ಸಿದ್ಧಸ್ಯೈವ ಹಿ ದ್ರಷ್ಟುರ್ದೃಶ್ಯ-ವಿಷಯಿಣೀ ದರ್ಶನೇಚ್ಛಾ ಸಂಭವತಿ । ಕಿಂಚಾಹಂಪ್ರತ್ಯಯೀ ಸ್ವಭೂತೈರ್ಬಾಹ್ಯಾನ್ತರವಿಷಯಕೈಃ ಪ್ರತ್ಯಯೈಃ ಸತತಂ ವಿಕ್ರಿಯತೇ । ಆತ್ಮಾ ತು ತೇಷಾಂ ಸರ್ವೇಷಾಂ ವಿಕಾರಾಣಾಮಪಿ ಸದೈಕರೂಪೋ ದ್ರಷ್ಟೇತ್ಯನು-ಭವಸಿದ್ಧಮೇತತ್ । ತದೇವಂ ದೃಶ್ಯತ್ವೇನ ದ್ರಷ್ಟೃತ್ವೇನ ಚ ವಿಕಾರಿತ್ವೇನ ಸದೈಕರೂಪತ್ವೇನ ಚ ಭಿನ್ನಸ್ವಭಾವಯೋಃಸ್ತಾದಾತ್ಮ್ಯಸಂಭವಾದಾಧ್ಯಾ-ಸಿಕ್ಯೇವಾಹಂಪ್ರತ್ಯಯಾಲಮ್ಬನತೇತ್ಯವಗಮ್ಯತೇ । ನ ಚ ನಿಯಮೇನಾಹಂ-ತಾನುಗಮಾತ್ ತಾದ್ಧರ್ಮ್ಯಮಾತ್ಮನ ಇತಿ ಶಙ್ಕ್ಯಮ್ । ಸುಷುಪ್ತ್ಯಾದಾವ-ನನ್ವಯಾದಹಮಃ । ಯಸ್ತು ತತ್ರಾಪ್ಯಹಮೋಽಸ್ತಿತ್ವಮಾತಿಷ್ಠತೇ ತಮನುಭವ ಏವ ಪರಾಕರೋತೀತಿ ತಂ ಪ್ರತಿ ನ ಕಿಂಚಿದ್ವಕ್ತವ್ಯಮ್ । "ಸುಖಮಹ-

---

ವಿಷಯದಲ್ಲೂ, ಪ್ರಮಾಣವೇನೆಂದು ಹುಡುಕಬೇಕೆಂಬುದು ಎಂದಿಗೂ ಆಗುವುದಿಲ್ಲವಷ್ಟೆ ? (ಸ್ವತಃ) ಸಿದ್ಧನಾದ ದ್ರಷ್ಟೃವಿಗೆ ಅಲ್ಲವೆ ದೃಶ್ಯವನ್ನು ವಿಷಯುಮಾಡಿಕೊಂಡು ನೋಡಬೇಕೆಂಬ ಇಚ್ಛೆಯಾಗುವುದು. ಮತ್ತೂ ಏನೆಂದರೆ (ಈ) ಅಹಂಪ್ರತ್ಯಯಿಯು ತಾನಾದ ಹೊರಗಿನ ಮತ್ತು ಒಳಗಿನದನ್ನು ವಿಷಯಮಾಡಿಕೊಂಡ ಪ್ರತ್ಯಯಗಳಿಂದ ಯಾವಾಗಲೂ ಬದಲಾಯಿಸುತ್ತಲೇ ಇರುತ್ತಾನೆ. ಆತ್ಮನಾದರೋ ಆ ಎಲ್ಲಾ ವಿಕಾರಗಳನ್ನು ಯಾವಾಗಲೂ ಏಕರೂಪನಾಗಿ ನೋಡುತ್ತಲೇ ಇರುತ್ತಾನೆ ಎಂಬುದು ಅನುಭವಸಿದ್ಧವಾದದ್ದು. ಆದ್ದರಿಂದ ಹೀಗೆ (ಆತ್ಮಾನಾತ್ಮರುಗಳಿಗೆ) ದ್ರಷ್ಟೃತ್ವ ದೃಶ್ಯತ್ವ, ಯಾವಾಗಲೂ ಏಕರೂಪತ್ವ, ವಿಕಾರಿತ್ವ ಎಂಬುದಾಗಿ ಬೇರೆ ಬೇರೆ ಸ್ವಭಾವದ್ದಾದ ಅವುಗಳಿಗೆ ತಾದಾತ್ಮ್ಯತೆ (ಇದೆ) ಯಾದ್ದರಿಂದ ಅಧ್ಯಾಸಪುರಸ್ಸರವಾಗಿಯೇ (ಆತ್ಮನು) ಅಹಂಪ್ರತ್ಯಯಕ್ಕೆ ಆಲಂಬನೆಯಾಗಿದ್ದಾನೆಂಬುದು ಗೊತ್ತಾಗುತ್ತದೆ. ಆದರೆ ಆತ್ಮನಿಗೆ ಅಹಂತಾ ಸಂಬಂಧವಿದ್ದೆಯಾದ್ದರಿಂದ ಏಕಾಂತವಾಗಿ ಆ ಧರ್ಮದವನಾಗಿದ್ದಾನೆಂದು ಸಂದೇಹಪಡಬಾರದು. ಏಕೆಂದರೆ ಅಹಂತೆಯು ಸುಷುಪ್ತಿಯೇ ಮುಂತಾದ (ಅವಸ್ಥೆಯಲ್ಲಿ) ಸೇರಿಕೊಂಡು ಬಂದಿರುವುದಿಲ್ಲ. ಯಾವನಾದರೋ ಅಲ್ಲಿಯೂ ಅಹಂಕಾರವಿರುತ್ತದೆ ಎಂದು ಆಗ್ರಹ-ಪಡುತ್ತಾನೋ ಅವನನ್ನು ಆ ಅನುಭವವೇ ತಿರಸ್ಕರಿಸುತ್ತದೆಯಾದ್ದರಿಂದ ಅವನ ಬಗ್ಗೆ ಏನೂ ಹೇಳಬೇಕಾದದ್ದಿಲ್ಲ. "ಸುಖವಾಗಿ ನಾನು ನಿದ್ರಿಸಿದೆನು"

ಮಸ್ವಾಪ್ಸಮ್" ಇತಿ ಪರಾಮರ್ಶಬಲಾತ್ ತತ್ರ ತತ್ಸತ್ತ್ವಮನುಮಿಮಾನಸ್ತು ಪಿಣ್ಡಮುತ್ಸೃಜ್ಯ ಕರಂಲೇಡೀತ್ಯಾಭಾಣಕವಿಷಯೋ ಭವೇತ್ । ನ ಹಿ ಸುಷುಪ್ತಾವನನುಭೂತಂ ಸುಪ್ತೋತ್ಥಿತೇನ ಪರಾಮ್ರಷ್ಟುಂ ಶಕ್ಯಮ್ । ನ ಹ್ಯಸ್ತಿ ಸುಷುಪ್ತೇಽಹಮನುಭವಃ ನ ಚ ಕಸ್ಯಚಿತ್ ಕದಾಚಿದಭೂತ್ ಭವಿಷ್ಯತೀತಿ ವಾ ಕಲ್ಪಯಿತುಂ ಶಕ್ಯಮ್ । ಯಥಾ ಹಿ ನ ಕಿಂಚಿದವೇದಿಷಮ್ ಇತಿ ಪರಾಮರ್ಶಬಲಾತ್ ಕಿಂಚಿಚ್ಛಬ್ದವಾಚ್ಯಃ ಕಶ್ಚನ ಪದಾರ್ಥಃ, ತಜ್ಜ್ಞಾನಮ್, ತತ್ಪ್ರತಿಯೋಗಿಕಾಭಾವಶ್ಚೇತ್ಯೇತತ್ ಸರ್ವಂ ಸುಷುಪ್ತಾವಭೂದಿತಿ ನಾನು-ಮೀಯತೇ ಕೇನಚಿದಮೂಢೇನ, ಏವಂ ಸುಖಮಹಮಸ್ವಾಪ್ಸಮಿತಿ ಪರಾಮರ್ಶಬಲೇನಾಪಿ ನ ಸುಷುಪ್ತೇಽಹಮನುಭವೋಽನುಮೀಯತೇ । ಪರಾಮರ್ಶೇಽಹಮುಲ್ಲೇಖಿಸ್ತು ಜಾಗ್ರದ್ವ್ಯವಹಾರೇ ಆತ್ಮನೋ ನಿಯಮೇ-ನಾಹಂಪ್ರತ್ಯಯಾಲಮ್ಬನತ್ವೇನೈವ ಶಕ್ಯಪರಾಮರ್ಶತ್ವನಿಬನ್ಧನ ಇತಿ

---

ಎಂದು ಎಚ್ಚರದಲ್ಲಿ (ನಿದ್ರೆಯನ್ನು) ಪರಾಮರ್ಶಿಸುವ ಬಲದಿಂದ ಅಲ್ಲೂ ಆ ಅಹಂಕಾರವಿರುತ್ತದೆ ಎಂದು ಅನುಮಾನಿಸುವನು "ತುತ್ತನ್ನು ಬಿಟ್ಟು, ಬರೀ ಕೈಯನ್ನು ನೆಕ್ಕು" ಎಂಬ ಗಾದೆಗೆ (ಆತನು) ತಕ್ಕವನಾಗುತ್ತಾನೆ. ಸುಷುಪ್ತಿಯಲ್ಲಿ ಅನುಭವಿಸದೇ ಇರುವುದನ್ನು ಎಚ್ಚತ್ತವನಿಗೆ ಸ್ಮರಿಸುವುದಕ್ಕೆ ಆಗುವುದಿಲ್ಲವಷ್ಟೆ? ಸುಷುಪ್ತಿಯಲ್ಲಿ ಅಹಂಕಾರದ ಅನುಭವವು ಇಲ್ಲವಷ್ಟೆ? ಅಷ್ಟೇಅಲ್ಲ, ಯಾರಿಗಾದರೂ ಎಂದಾದರೂ (ಅನುಭವವಾಗುತ್ತದೆ) ಎಂದು ಕಲ್ಪಿಸುವುದಕ್ಕೂ ಸಾಧ್ಯವಿಲ್ಲವಷ್ಟೇ? ಏನನ್ನೂ (ಅಲ್ಲಿ) ಅರಿಯಲಿಲ್ಲ ಎಂಬ ಪರಾಮರ್ಶೆಯ ಬಲದಿಂದ "ಏನನ್ನೂ" ಎಂಬ ಶಬ್ದದಿಂದ ಯಾವ ಪದಾರ್ಥವಾಲೀ ಅದರ ಜ್ಞಾನವಾಗಲೀ ಅದಕ್ಕೆ ವಿರುದ್ಧವಾದ ಅಭಾವವಾಗಲೀ ಯಾವುದನ್ನೂ ಸುಷುಪ್ತಿಯಲ್ಲಿ ಇತ್ತು ಎಂದು ಯಾವ ವಿವೇಕಿಯೂ ಹೇಗೆ ಊಹೆ-ಮಾಡುವುದಿಲ್ಲವೋ, ಅದರಂತೆ "ಸುಖವಾಗಿ ನಿದ್ರಿಸಿದೆನು" ಎಂಬ ಪರಾ-ಮರ್ಶೆಯ ಬಲದಿಂದಲೂ ಕೂಡ ಸುಷುಪ್ತಿಯಲ್ಲಿ ಅಹಂಕಾರಾನುಭವವನ್ನು ಅನುಮಾನ ಮಾಡುವುದಕ್ಕೆ ಬರುವುದಿಲ್ಲ. ಪರಾಮರ್ಶೆಮಾಡುವಾಗ ನಾನು ಎಂದು ತೋರುವುದಾದರೋ ಎಚ್ಚರದ ವ್ಯವಹಾರದಲ್ಲಿ ಏಕಾಂತವಾಗಿ ಆತ್ಮನು ನಾನೆಂಬುದರ ರೂಪವಾಗಿಯೇ ಪರಾಮರ್ಶೆಮಾಡುವುದಕ್ಕೆ ತಕ್ಕವನೆಂಬುದನ್ನು (ತೋರಿಸುವುದಕ್ಕಾದ್ದರಿಂದ) ಇದು ಅತ್ಯಲ್ಪ ವಿಷಯವು.

ಯುಕ್ತಿಙ್ಕ್ಷೇದೇತತ್ । ಏತೇನ ನ ಕಿಂಚಿದವೇದಿಷಮಿತ್ಯನಿರ್ವಚನೀಯಂ ಭಾವಾಜ್ಞಾನಂ ಪರಾಮೃಶ್ಯತ ಇತಿ ವದನ್ತೋ ನವೀನವೇದಾನ್ತಿನೋಽಪಿ ಪರಾಸ್ತಾ ವೇದಿತವ್ಯಾಃ । ಅತಃ ಸುಷುಪ್ತ್ಯಾದೌ ನಾಸ್ತ್ಯಹಮನುಭವ ಇತ್ಯೇವ ಸಮ್ಯಕ್ । ತಸ್ಮಾದಪಿ ನಾತ್ಮಾ ಸ್ವಭಾವತ ಏವಾಹಮರ್ಥಃ, ಕಿಂತ್ವಹಂಪ್ರತ್ಯಯ್ಯ-ವಿವೇಕೇನೈವ ತಥಾತ್ವೇನ ಪ್ರತೀಯತ ಇತಿ ಸಿದ್ಧಮ್ । "ಅಹಂ ಬ್ರಹ್ಮಾಸ್ಮಿ", "ಅಹಂ ಕೃತ್ಸ್ನಸ್ಯ ಜಗತಃ" - ಇತ್ಯಾದಯಸ್ತು ಶ್ರುತಿಸ್ಮೃತಿವಾದಾ ಅಹಂ-ಕಾರೋಪಲಕ್ಷಿತಮಾತ್ಮಾನಂ ಭೂತಪೂರ್ವಗತ್ಯಾ ಗೌಣವೃತ್ತ್ಯಾ ವಾ ಪರಾಮೃಶಂತೀತ್ಯನವದ್ಯಮ್ । ಉಕ್ತಂ ಹಿ ಭಗವತ್ಪಾದೈಃ "ಇದಮಂ-ಶೋಽಹಮಿತ್ಯತ್ರ ತ್ಯಾಜ್ಯೋಽನಾತ್ಮೇತಿ ಪಣ್ಡಿತೈಃ । ಅಹಂ ಬ್ರಹ್ಮೇತಿ ಶಿಷ್ಟೋಂಶೋ ಭೂತಪೂರ್ವಗತೇರ್ಭವೇತ್" (ಉಪ. ಪ. ೬-೬) ಇತಿ।

---

ಇಷ್ಟು ಹೇಳಿದ್ದರಿಂದ ಈಚಿನ ವೇದಾಂತಿಗಳು, "ಏನನ್ನೂ ಅರಿಯ-ಲಿಲ್ಲ" ಎಂಬುದರ ಪರಾಮರ್ಶೆಯಿಂದ ಯಾವ ಒಂದು ಭಾವಾಜ್ಞಾನವನ್ನು ಪರಾಮರ್ಶಿಸುತ್ತದೆ ಎಂದು ಹೇಳುತ್ತಿದ್ದಾರೆ ಅದನ್ನೂ ತಳ್ಳಿಹಾಕಿದಂತಾಯಿ-ತೆಂದು ತಿಳಿಯಬೇಕು. ಆದ್ದರಿಂದ ಸುಷುಪ್ತಿಯೇ ಮುಂತಾದ (ಅವಸ್ಥೆಗಳಲ್ಲಿ) ಅಹಮನುಭವವೆಂಬುದು ಇಲ್ಲವೇ ಇಲ್ಲ ಎಂಬುದೇ ಸರಿಯಾದದ್ದು. ಆದ್ದರಿಂದ ಆತ್ಮನು ಸ್ವಭಾವದಿಂದಲೇ ಅಹಮರ್ಥವೆಂಬುದೂ ಸರಿಯಲ್ಲ. ಆದರೆ ಅಹಂಪ್ರತ್ಯಯಿಯೊಡನೆ ವಿವೇಕವನ್ನು ಮಾಡಿಕೊಳ್ಳದೇ ಇರುವುದರಿಂದ ಹಾಗೆ ತೋರಿಬರುತ್ತಾನೆ ಎಂಬುದು ಸಿದ್ಧವಾಯಿತು. "ಅಹಂ ಬ್ರಹ್ಮಾಸ್ಮಿ", "ಅಹಂ ಕೃತ್ಸ್ನಸ್ಯ ಜಗತಃ" ಎಂಬುದಾಗಿರುವ ಶ್ರುತಿಸ್ಮೃತಿಗಳಾದರೋ, ಅಹಂಕಾರದಿಂದ ತೋರಿಬರುವ ಆತ್ಮನನ್ನು ಭೂತಪೂರ್ವಗತಿಯಿಂದ (ಹಿಂದಾಗಿದ್ದ ಎಂಬ ವೃತ್ತಿಯಿಂದ) ಅಥವಾ ಗೌಣವೃತ್ತಿಯಿಂದ ಪರಾಮರ್ಶಿ-ಸುತ್ತವೆ ಎಂದಾದ್ದರಿಂದ (ಈ ಮತವು) ನಿರ್ದುಷ್ಟವಾಗಿದೆ. ಭಗವತ್ಪಾದರೂ ಸಹ ಈ ವಿಷಯಕ್ಕೆ ಹೇಳಿರುವುದೇನೆಂದರೆ - "ಅಹಮ್" ಎಂಬುದರಲ್ಲಿ "ಇದಮ್" ಅಂಶವು ಯಾವುದಿದೆಯೋ ಅದನ್ನು ಅನಾತ್ಮವೆಂದು ಪಂಡಿತರಾದವರು (ತಿಳಿದು), ಬಿಡಬೇಕು. (ಆಮೇಲೆ) "ಅಹಂಬ್ರಹ್ಮ" ಎಂಬುದರಲ್ಲಿ ಯಾವುದು ಉಳಿಯುವುದೋ ಅದನ್ನು "ಅಹಮ್" ಎಂಬುದಾಗಿ ಹಿಂದಿನ ಸ್ಥಿತಿಯಿಂದ ಹೇಳಿದ್ದು (ಎಂದು ತಿಳಿಯಬೇಕು) (ಉಪ. ಪ ೬-೬).

**ವಾರ್ತಿಕಕಾರೈಶ್ಚ** – "ಪ್ರತ್ಯಕ್ತ್ವಾದತಿಸೂಕ್ಷ್ಮತ್ವಾದಾತ್ಮದೃಷ್ಟ್ಯನು-ಶೀಲನಾತ್ । ಅತೋ ವೃತ್ತೀರ್ವಿಹಾಯಾನ್ಯಾ ಹ್ಯಹಂವೃತ್ತ್ಯೋಪಲಕ್ಷ್ಯತೇ" (ನೈ.ಸಿ ೩–೫೫) ಇತಿ । ಸ್ವವ್ಯತಿರಿಕ್ತಸಕಲಾನಾತ್ಮಾಪೇಕ್ಷಯಾ ಪ್ರತ್ಯಕ್ತ್ವಾತ್, ಶಬ್ದಾದಿಹೀನತ್ವೇನಾತೀನ್ದ್ರಿಯತಯಾ ಸೂಕ್ಷ್ಮತ್ವಾತ್, ಆತ್ಮದೃಷ್ಟಿಮನುರುಧ್ಯ ದೃಗಿವಾವಭಾಸನಾಚ್ಚಾಹಙ್ಕಾರಸ್ಯ, ಪ್ರತ್ಯಗಾತ್ಮಾಽಹಂವೃತ್ತ್ಯೈವೋಪಲಕ್ಷ್ಯತೇ ನಾನ್ಯಾಭಿರ್ವೃತ್ತಿಭಿರಿತಿ ವಾರ್ತಿಕಾರ್ಥಃ । ತಸ್ಮಾದಹಂಪ್ರತ್ಯಯ್ಯಪ್ಯಧ್ಯಸ್ತ ಏವೇತ್ಯತ್ರ ನ ಕಶ್ಚನ ದೋಷಾತಙ್ಕಃ ॥

ಅಧ್ಯಸ್ತಾದಹಂಪ್ರತ್ಯಯಿನಃ ಸಕಾಶಾದ್ವ್ಯತಿರಿಕ್ತಮಧಿಷ್ಠಾನಭೂತಮಾತ್ಮನಃ ಸ್ವರೂಪಂ ದರ್ಶಯತಿ – **ಅಶೇಷಸ್ವಪ್ರಚಾರಸಾಕ್ಷಿಣಿ ಪ್ರತ್ಯಗಾತ್ಮನ್ಯಧ್ಯಸ್ಯೇತಿ।** ಅಶೇಷಾಃ ಸ್ವಸ್ಯಾಹಂಕೃತಃ ಪ್ರಚಾರಾ ವೃತ್ತಿಲಕ್ಷಣಾ ಇಚ್ಛಾದ್ವೇಷಸುಖ-

---

ವಾರ್ತಿಕಕಾರರಾದ (ಶ್ರೀ ಸುರೇಶ್ವರಾಚಾರ್ಯರೂ ಸಹ) "ಅಹಮ್" ಎಂಬುದು ಎಲ್ಲಕ್ಕಿಂತಲೂ ಒಳಗಿರುವುದರಿಂದಲೂ ತುಂಬಾ ಸೂಕ್ಷ್ಮವಾಗಿರು-ವುದರಿಂದಲೂ, ಬಲುಮಟ್ಟಿಗೆ ಆತ್ಮನನ್ನೇ ಹೋಲುವುದರಿಂದಲೂ ಬೇರೆ (ಇದಂ–ತತ್ ಎಂಬುದಾಗಿರುವ) ವೃತ್ತಿಯನ್ನು ಬಿಟ್ಟು "ಅಹಂ" ಎಂಬ ಶಬ್ದದಿಂದ ಲಕ್ಷಿಸಿದೆ. (ನೈ. ಸಿ. ೩–೫೫). ತನಗಿಂತ ಬೇರೆಯಾದ ಎಲ್ಲಾ ಅನಾತ್ಮದ ಅಪೇಕ್ಷೆಯಿಂದ (ತೀರ) ಒಳಗಿರುವುದರಿಂದಲೂ, ಶಬ್ದಾದಿ-ಗಳಿಲ್ಲದ್ದಾಗಿ ಅತೀಂದ್ರಿಯವಾದ್ದರಿಂದ (ತುಂಬಾ) ಸೂಕ್ಷ್ಮವಾಗಿರುವುದ-ರಿಂದಲೂ, ಆತ್ಮನ ದೃಷ್ಟಿಯನ್ನು ಹೊಂದಿಕೊಂಡು ಅರಿಯುವ (ಸ್ವರೂಪದಂತೆ) ಅಹಂಕಾರವು ತೋರುತ್ತಿರುವುದರಿಂದ ಪ್ರತ್ಯಗಾತ್ಮನು "ಅಹಂವೃತ್ತಿ"ಯಿಂದಲೇ ತೋರಿಬರುತ್ತಾನೆಯೇ ಹೊರತು "ಬೇರೆ ವೃತ್ತಿ"ಯಿಂದಲ್ಲ ಎಂಬುದು ಮೇಲಿನ ಶ್ಲೋಕಾಭಿಪ್ರಾಯವು. ಆದ್ದರಿಂದ ಅಹಂಪ್ರತ್ಯಯಿಯೂ ಸಹ ಅಧ್ಯಸ್ತವಾದದ್ದೇ ಎಂದಾದ್ದರಿಂದ ಇಲ್ಲಿ ಯಾವ ದೋಷದ ಆತಂಕವೂ ಇಲ್ಲ.

(ಭಾಷ್ಯಕಾರರು) ಅಧ್ಯಸ್ತವಾದ ಅಹಂಪ್ರತ್ಯಯಿಗಿಂತ ಬೇರೆಯಾದ (ಅದಕ್ಕೂ) ಆಶ್ರಯನಾದ ಆತ್ಮನ ಸ್ವರೂಪವನ್ನು "ಅಶೇಷಸ್ವಪ್ರಚಾರಸಾಕ್ಷಿಣಿ ಪ್ರತ್ಯಗಾತ್ಮನಿ ಅಧ್ಯಸ್ಯ" ಎಂದು ತೋರಿಸಿದ್ದಾರೆ. ಅಹಂಕಾರದಿಂದಾದ ತನ್ನ

ದುಃಖಾಹಂಮಮಜ್ಞಾನಪ್ರಭೃತಯಃ । ತೇಷಾಂ ಯಃ ಸಾಕ್ಷೀ ಸಾಕ್ಷಾದ್ದ್ರಷ್ಟಾ ಕೂಟಸ್ಥೇನ ಸ್ವರೂಪವಿಜ್ಞಾನೇನಾವಭಾಸಯಿತಾ, ತಸ್ಮಿನ್ ಪ್ರತ್ಯಗಾತ್ಮನಿ ಸ್ವಾಪೇಕ್ಷಯಾಪಿ ಪ್ರತೀಚಿ ಸರ್ವಾನ್ತರೇ ಸ್ವಾತ್ಮನಿ ಚಿದಾತ್ಮಕೇ ತತ್ತದ್ಧರ್ಮ-ಸಹಿತಮಧ್ಯಸ್ಯೇತ್ಯರ್ಥಃ । ನ ಹಿ ಕೇವಲಸ್ಯೈವಾಹಮಸ್ತದ್ವಿಕಾರರಹಿತ-ಸ್ಯಾಧ್ಯಾಸೋ ಭವತಿ ಸಾಕ್ಷಿಣಿ ಕ್ವಚಿತ್ । ಧರ್ಮಾಧ್ಯಾಸಸಹಿತ-ತ್ವಾದ್ಧರ್ಮ್ಯಧ್ಯಾಸಸ್ಯ । ತತ್ರಾಹಮಃ ಶುದ್ಧ ಏವ ಸಾಕ್ಷಿಣ್ಯಧ್ಯಾಸಃ, ಧರ್ಮಾಣಾಂ ತ್ವಧ್ಯಸ್ತಾಹಂತಾದಾತ್ಮ್ಯೇ ತಸ್ಮಿನ್ನಿತಿ ವಿಶೇಷಃ ॥

ತದೇವಮಾತ್ಮನ್ಯನಾತ್ಮಧರ್ಮಾಧ್ಯಾಸಂ ಸಪ್ರಪಂಚಂ ಪ್ರದರ್ಶ್ಯೇದಾನೀ-ಮನಾತ್ಮನ್ಯಪ್ಯತದ್ಧರ್ಮಾಧ್ಯಾಸ ಏವಮೇವಾನುಸನ್ಧೇಯ ಇತ್ಯತಿದಿಶತಿ - **ತಂ ಚ ಪ್ರತ್ಯಗಾತ್ಮಾನಂ ಸರ್ವಸಾಕ್ಷಿಣಂ ತದ್ವಿಪರ್ಯಯೇಣಾನ್ತಃ-**

---

ಎಲ್ಲಾ ವೃತ್ತಿರೂಪವಾದ ಪ್ರಚಾರ(ವೆಂದರೆ) - ಇಚ್ಛೆ, ದ್ವೇಷ, ಸುಖ, ದುಃಖ, ನಾನು ನನ್ನದೆಂಬ ಜ್ಞಾನ ಮುಂತಾದವುಗಳೇ (ಆಗಿವೆ). ಅವುಗಳಿಗೆ ಯಾವಾತನು ಸಾಕ್ಷಿಯೋ ನೇರಾಗಿ ನೋಡುವವನಾಗಿದ್ದಾನೋ (ಅಂದರೆ) ಕೂಟಸ್ಥವಾದ ತನ್ನ ಸ್ವರೂಪವಾದ ಅರಿವಿನಿಂದ ಬೆಳಗುವವನು, ಆ ಪ್ರತ್ಯಗಾತ್ಮನಲ್ಲಿ, (ಅದು ಅಹಂ) ಅಪೇಕ್ಷೆಯಿಂದ ಒಳಗಿದ್ದು, ಸರ್ವಾಂತರನಾದ ಚಿದಾತ್ಮಕನಾದ ತನ್ನ ಸ್ವರೂಪದಲ್ಲಿ ಆ "(ಅಹಮ್)" ಧರ್ಮದಿಂದ ಕೂಡಿದ್ದಾಗಿದೆ ಎಂದು ತಪ್ಪಾಗಿ ತಿಳಿದು ಎಂದರ್ಥ. ಶುದ್ಧವಾದ ಅಹಂಕಾರಕ್ಕೆ ಅದರ ವಿಕಾರವಿಲ್ಲದ ಸಾಕ್ಷಿಯಲ್ಲಿ ಅಧ್ಯಾಸವೆಂಬುದು ಆಗುವುದಿಲ್ಲವಷ್ಟೆ ! ಧರ್ಮಿಯ ಅಧ್ಯಾಸವು ಧರ್ಮಾಧ್ಯಾಸದೊಡನೆ ಕೂಡಿಯೇ ಇರುತ್ತದೆ. ಅಹಂಕಾರಕ್ಕೆ ಶುದ್ಧವಾದ ಸಾಕ್ಷಿಯಲ್ಲಿ ಅಧ್ಯಾಸವೂ, ಅದರ ಧರ್ಮಗಳಿಗಾದರೋ ಅಧ್ಯಸ್ತವಾದ ನಾನೆಂಬುದರ ತಾದಾತ್ಮ್ಯತೆ ಇರುವ (ಸಾಕ್ಷಿಯಲ್ಲಿ) ತೋರುತ್ತದೆ ಎಂಬುದೇ ವಿಶೇಷವು.

ಹೀಗೆ ಆತ್ಮನಲ್ಲಿ ಅನಾತ್ಮ ಮತ್ತು ಅದರ ಧರ್ಮಾಧ್ಯಾಸವನ್ನು ವಿಸ್ತಾರವಾಗಿ ತೋರಿಸಿ ಈಗ ಅನಾತ್ಮದಲ್ಲೂ ಅದಲ್ಲದ್ದರ ಅಧ್ಯಾಸವನ್ನೂ ಹೀಗೆಯೇ ತಿಳಿಯಬೇಕು ಎಂಬುದನ್ನು "ತಂ ಚ ಪ್ರತ್ಯಗಾತ್ಮಾನಂ ಸರ್ವಸಾಕ್ಷಿಣಂ ತದ್ವಿಪರ್ಯಯೇಣ ಅಂತಃಕರಣಾದಿಷು ಅಧ್ಯಸ್ಯತಿ" ಎಂಬುದಾಗಿ ಅತಿದೇಶ

**ಕರಣಾದಿಷ್ವಧ್ಯಸ್ಯತೀತಿ** । ತಸ್ಯಾಹಂಪ್ರತ್ಯಯಿತ್ವಾಧ್ಯಾಸಸ್ಯ ವೈಪರೀತ್ಯೇನ ತಂ ಚ ಪ್ರತ್ಯಗಾತ್ಮಾನಂ ಮಿಥ್ಯೈವಾಸ್ಮತ್ಪ್ರತ್ಯಯಗೋಚರತ್ವೇನ ಸ್ವೀಕೃತಮ್, ವಸ್ತುತಃ ಸರ್ವಸಾಕ್ಷಿಣಂ ಸರ್ವೇಷಾಮನ್ತಃಕರಣಪ್ರತ್ಯಯಾನಾಂ ತದ್ಗೋಚರೀ-ಭೂತಾನಾಂ ದೇಹಾದೀನಾಂ ಚ ಸಾಕ್ಷಾದ್ದ್ರಷ್ಟಾರಂ ಪ್ರತ್ಯಗ್ರೂಪಮಪಿ ಸನ್ತಂ ಪರಾಕ್ಸ್ವಭಾವೇಷ್ವನ್ತಃಕರಣಾದಿಷು ಪುತ್ರಭಾರ್ಯಾದಿಪರ್ಯನ್ತೇಷು ಬಾಹ್ಯೇಷು ಚಾಹಂಪ್ರತ್ಯಯಿಸ್ವರೂಪಾಭಾಸವಿಶೇಷೇಷ್ವಧ್ಯಸ್ಯತಿ । ಆತ್ಮನೋ ಯತ್ಸತ್ಯತ್ವಮ್, ಪ್ರತ್ಯಕ್ತ್ವಮ್, ಚಿದ್ರೂಪತ್ವಮ್, ಆನನ್ದಸ್ವರೂಪತ್ವಂ ಚ ತತ್ಸರ್ವಂ ತೇಷ್ವಪ್ಯಧ್ಯಾರೋಪಯತೀತ್ಯರ್ಥಃ ॥

**೫೪. ಭಾಷ್ಯೋಪಾತ್ತಸರ್ವಸಾಕ್ಷಿತ್ವವಿಶೇಷಣಕೃತ್ಯಮ್** – "ಸರ್ವ-ಸಾಕ್ಷಿಣಮ್" ಇತಿ ವಿಶೇಷಣೇನಾಹಂಪ್ರತ್ಯಯ್ಯಾದಿಷು ಯತ್ ಸಾಕ್ಷಿತ್ವಮಿವ ದೃಶ್ಯತೇ ತದಾಧ್ಯಾಸಿಕಮೇವ ನ ವಾಸ್ತವಮಿತ್ಯುಕ್ತಂ ಭವತಿ । ತೇಷಾಂ

---

ಮಾಡಿರುತ್ತಾರೆ. ಆ ಅಹಂಪ್ರತ್ಯಯಿಯಾಗಿರುವದೆಂಬ ಅಧ್ಯಾಸವನ್ನು ಅದಕ್ಕೆ ವಿರುದ್ಧವಾಗಿ ಆ ಪ್ರತ್ಯಗಾತ್ಮನನ್ನು ಸುಳ್ಳುಸುಳ್ಳಾಗಿಯೇ ಅಸ್ಮತ್ಪ್ರತ್ಯಯಗೋಚರ-ವಾಗಿ ಸ್ವೀಕರಿಸಿದೆ. ನಿಜವಾಗಿ, ಎಲ್ಲಕ್ಕೂ ಸಾಕ್ಷಿಯಾದ ಎಂದರೆ ಅಂತಃಕರಣದ ಪ್ರತ್ಯಯಗಳಿಗೂ ಅದಕ್ಕೆ ಗೋಚರವಾದ ದೇಹಾದಿಗಳನ್ನೂ ನೇರಾಗಿ ನೋಡುವವನಾದ, ಅವಕ್ಕೆ ಒಳಗಿರುವವನಾದರೂ ಹೊರಗಿರುವ ಸ್ವಭಾವದ್ದಾದ ಅಂತಃಕರಣವೇ ಮೊದಲಾಗಿ ಮಕ್ಕಳು ಹೆಂಡತಿಯುವರೆಗಿರುವ ಹೊರಗಿನವುಗಳನ್ನು "ನಾನೆಂಬ" ಅರಿವಿನ ಸ್ವರೂಪವಾಗಿ ತೋರುವ (ಪದಾರ್ಥಗಳಲ್ಲಿ) ಅಧ್ಯಾಸವನ್ನು ಮಾಡಿಕೊಳ್ಳುತ್ತಾನೆ. ಆತ್ಮನ ಯಾವ ಸತ್ಯತ್ವವೂ, ಒಳಗಿನ ರೂಪವೂ, ಅರಿವಿನ ರೂಪವೂ ಮತ್ತು ಆನಂದ ರೂಪವುಂಟೋ ಅದೆಲ್ಲವನ್ನೂ ಅವುಗಳಲ್ಲಿ ಹುಟ್ಟುಹಾಕಿಕೊಳ್ಳುತ್ತಾನೆ ಎಂದರ್ಥವು.

**೫೪. ಭಾಷ್ಯದಲ್ಲಿ ಸ್ವೀಕರಿಸಿದ್ದಾದ "ಸರ್ವಸಾಕ್ಷಿಣಿ"ಎಂಬ ವಿಶೇಷಣದ ಕೆಲಸವು** – "ಎಲ್ಲಕ್ಕೂ ಸಾಕ್ಷಿಯಾಗಿರುವ" "(ಸರ್ವಸಾಕ್ಷಿಣಮ್)" ಎಂಬ ವಿಶೇಷಣದಿಂದ – ಅಹಂಪ್ರತ್ಯಯಿಯಲ್ಲಿ ಯಾವ ಸಾಕ್ಷಿತ್ವವು ಇರುವಂತೆ ತೋರುತ್ತದೆ ಅದು ಅಧ್ಯಾಸದಿಂದಾದ್ದದ್ದೇ ಹೊರತು ವಾಸ್ತವಿಕವಾಗಿ ಇರುವಂಥದ್ದಲ್ಲ ಎಂದು ಹೇಳಿದಂತಾಯಿತು. ಅವುಗಳನ್ನು ನೋಡುವುದಕ್ಕೆ

ದರ್ಶನಾಯ ಕರಣಾಪೇಕ್ಷಣಾತ್ಸಾಕ್ಷಾದ್ದ್ರಷ್ಟೃತ್ವಾನುಪಪತ್ತೇಃ । ಸಾಕ್ಷಿ-ದ್ವಯಾನುಪಪತ್ತೇಶ್ಚ । ನ ಚ ಸಾಕ್ಷಿಣೋಽಪ್ಯಧ್ಯಸ್ತತ್ವೇ ಸರ್ವಮಿಥ್ಯಾತ್ವಪ್ರಸಕ್ತೇಃ ಶೂನ್ಯವಾದಪ್ರಸಙ್ಗಃ । ಅಧ್ಯಸ್ತಸ್ಯ ಸಾಕ್ಷಿತ್ವಸ್ಯ ಮಿಥ್ಯಾತ್ವೇಽಪಿ ಪಾರಮಾರ್ಥಿಕಸ್ಯ ತಸ್ಯಾಪ್ರಚ್ಯುತೇಃ । ನಿಸ್ಸಾಕ್ಷಿಕಸ್ಯಾಧ್ಯಾಸಸ್ಯೈವಾಸಿದ್ಧೇಃ । ಶೂನ್ಯಸ್ಯಾಪಿ ಶೂನ್ಯತ್ವಸಿದ್ಧೌ ಸಾಕ್ಷ್ಯಪೇಕ್ಷಣಾಚ್ಚ । ತಸ್ಮಾತ್ ಸಾಕ್ಷಿಣೋಽಧ್ಯಸ್ತತ್ವೇಽಪಿ ಭವತ್ಯೇವ ತಸ್ಯಾವ್ಯಭಿಚರಿತಂ ಸರ್ವಾನುಭವರೂಪಂ ಸತ್ಯಂ ಸ್ವರೂಪಮ್। ಅಹಂಪ್ರತ್ಯಯ್ಯಾದೇಸ್ತು ಸಾಕ್ಷ್ಯತ್ವೇನೈವ ಸಿದ್ಧೇಃ, ವಿವಿಧವಿಕಾರಭಾಕ್ತ್ವಾತ್, ಸುಷುಪ್ತ್ಯಾದೌ ಸ್ವರೂಪವ್ಯಭಿಚಾರಾಚ್ಚಾನೃತತ್ವಮಿತ್ಯನವಧ್ಯಮ್ ॥

ಅತ್ರ ಕೇಚಿತ್ ಪ್ರಕಾರಾನ್ತರೇಣಾನ್ಯೋನ್ಯಾಧ್ಯಾಸಂ ಸಮರ್ಥಯನ್ತಿ । ಕಥಮ್ ? ಏಕತರಾಧ್ಯಾಸೇ ಕಿಲಾಽನ್ಯತರಸ್ಯ ಸಾಮಾನ್ಯಾವಭಾಸೋಽನ್ಯ-

---

ಇಂದ್ರಿಯಗಳು ಬೇಕಾಗಿರುವುದರಿಂದ ನೇರಾದ ದ್ರಷ್ಟೃತ್ವವೆಂಬುದು ಹೊಂದುವುದಿಲ್ಲ. (ಅಷ್ಟೇ ಅಲ್ಲ) ಎರಡು ಸಾಕ್ಷಿಗಳು ಇರುವುದೆಂಬುದೂ ಹೊಂದುವುದಿಲ್ಲ. ಸಾಕ್ಷಿಯ (ಸಾಕ್ಷಿತ್ವವೂ) ಅಧ್ಯಸ್ತವಾದದ್ದೆಂದಾದರೆ ಎಲ್ಲವೂ ಮಿಥ್ಯೆ ಎಂದಾಗಿ ಶೂನ್ಯವಾದದ ಪ್ರಸಂಗವು ಬರುತ್ತದೆ ಎಂದುಕೊಳ್ಳಬೇಕಾಗಿಲ್ಲ, ಏಕೆಂದರೆ ಸಾಕ್ಷಿತ್ವ(ವೆಂಬ) ವಿಶೇಷವು ಅಧ್ಯಸ್ತವಾದರೂ ಅದರ ಪಾರಮಾರ್ಥಿಕರೂಪವು ತಪ್ಪದೇ ಇದ್ದೇ ಇರುತ್ತದೆ. ಸಾಕ್ಷಿಯೇ ಇಲ್ಲವಾದರೆ ಅಧ್ಯಾಸವೇ ಸಿದ್ಧವಾಗುವುದಿಲ್ಲ. ಶೂನ್ಯತ್ವದ ಶೂನ್ಯತ್ವವು ಸಿದ್ಧಿಯಾಗುವುದಕ್ಕೂ ಸಾಕ್ಷಿಯು ಬೇಕೇಬೇಕಾಗುತ್ತದೆ. ಆದ್ದರಿಂದ ಸಾಕ್ಷಿತ್ವ (ವೆಂಬ ವಿಶೇಷವು) ಅಧ್ಯಸ್ತವಾದರೂ ಅದರ ಸ್ವರೂಪವು ಬಿಟ್ಟುಹೋಗದೇ ಸರ್ವಾನುಭವ-ರೂಪವಾಗಿ ಸತ್ಯವಾಗಿ ಇದ್ದೇ ಇರುತ್ತದೆ. ಅಹಂಪ್ರತ್ಯಯಿಯಾದ (ಅಂತಃಕರಣವೇ ಮುಂತಾದವುಗಳು) ಸಾಕ್ಷ್ಯವಾಗಿಯೇ ಸಿದ್ಧವಾಗುವು-ದರಿಂದಲೂ, ನಾನಾ ಪ್ರಕಾರದ ವಿಕಾರವನ್ನು ಹೊಂದುವುದರಿಂದಲೂ, ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ತಮ್ಮ ಸ್ವರೂಪವನ್ನು ಕಳಚಿ-ಕೊಳ್ಳುವುದರಿಂದಲೂ ಸುಳ್ಳಾದದ್ದು ಎಂದಾದ್ದರಿಂದ ಇಲ್ಲಿ ಏನೂ ದೋಷವಿಲ್ಲ.

ಇಲ್ಲಿ ಕೆಲವರು ಬೇರೆ ಪ್ರಕಾರದಿಂದ ಅನ್ಯೋನ್ಯಾಧ್ಯಾಸವನ್ನು ಸಮರ್ಥಿಸುತ್ತಾರೆ – ಹೇಗೆಂದರೆ – ಒಂದು ಕಡೆಯಿಂದಾದ ಅಧ್ಯಾಸದಲ್ಲಿ ಒಂದರ ಸಾಮಾನ್ಯವಾದ ತೋರಿಕೆ, ಇನ್ನೊಂದರದ್ದೇ ವಿಶೇಷವಾದ ತೋರಿಕೆ

ತರಸ್ಯೈವ ವಿಶೇಷಾವಭಾಸಶ್ಚ ಸ್ಯಾತ್ । ಅತ್ರ ತು ಚಿಜ್ಜಡರೂಪೇಣ ದ್ವಯೋರಪಿ ವಿಶೇಷಾವಭಾಸೋ ದ್ವಯೋರಪ್ಯಧ್ಯಾಸಂ ಗಮಯತಿ । ಅಧ್ಯಾಸೇ ವಿಶೇಷಾವಭಾಸಸ್ಯಾಧ್ಯಸ್ಯಮಾನತಾಪ್ರಯುಕ್ತತ್ವಾತ್ । ನ ಚ ದ್ವಯೋರಪಿ ಮಿಥ್ಯಾತ್ವಾಪಾತಃ । ಚೇತನಸ್ಯಾಚೇತನೇ ಸಂಸೃಷ್ಟತಯೈವಾಽಧ್ಯಾಸಾತ್ ಸ್ವರೂಪಾಧ್ಯಸಾಭಾವಾತ್ । ನ ಚ ವಿಶೇಷಾವಭಾಸಾದಧಿಷ್ಠಾನತ್ವವಿರೋಧಃ। ಅಧಿಷ್ಠಾನಧರ್ಮತಯಾ ವಿಶೇಷಸ್ಯಾಪ್ರತೀತೇಃ, ಅಧಿಷ್ಠಾನಾನ್ತರಧರ್ಮತಯೈವ ಪ್ರತೀತೇರಿತಿ(ವಿ) । ವಯಂ ತು ಪಶ್ಯಾಮೋ ನಾಯಂ ಸಮೀಚೀನೋ ವಾದ ಇತಿ। ನ ಹ್ಯಧಿಷ್ಠಾನಾರೋಪ್ಯಯೋಃ ಸಾಮಾನ್ಯವಿಶೇಷಭಾವೇನ ಪ್ರಥನ-ಮಧ್ಯಾಸೇ ತನ್ತ್ರಮ್ । ಅಹಮಧ್ಯಾಸಸ್ಯ ನಿಸ್ಸಾಮಾನ್ಯವಿಶೇಷಾಕಾರೇಣೈವ ಪ್ರಥನಾದಧ್ಯಾಸಕಾಲೇ । ನ ಚ ಚೇತನಸ್ಯ ಸಂಸೃಷ್ಟತಯೈವಾಽಧ್ಯಾಸಸ್ತತ್ರ। ನ ಖಲು "ಸಂಸೃಷ್ಟಚೇತನೋಽಹಮ್" ಇತಿ ಪ್ರತ್ಯೇತಿ ಕಶ್ಚಿತ್ । ಕಿಂ ತು

---

ಎಂದಾಗುವುದು. ಇಲ್ಲಾದರೋ ಚಿತ್ತು ಮತ್ತು ಜಡರೂಪದಿಂದ ಎರಡರದ್ದೂ ವಿಶೇಷವಾದ ತೋರಿಕೆಯಾಗಿದ್ದು, ಎರಡೂ ಅಧ್ಯಾಸವೇ ಎಂಬುದನ್ನು ತಿಳಿಸುತ್ತದೆ. ಅಧ್ಯಾಸದಲ್ಲಿ ವಿಶೇಷವಾಗಿ ತೋರುವು (ದೆಂಬುದು) ಹುಟ್ಟುಹಾಕಲ್ಪಟ್ಟ ವಸ್ತುವಿನಿಂದ ಆಗಿರುತ್ತದೆ. ಎರಡೂ ಸುಳ್ಳೆಂಬುದೇನಲ್ಲ. ಚೇತನಕ್ಕೆ ಅಚೇತನದಲ್ಲಿ ತಗುಲಿಕೊಳ್ಳುವ ಮೂಲಕವಾಗಿಯೋ ಅಧ್ಯಾಸವಾಗುವುದರಿಂದ ಸ್ವರೂಪವೇ ಅಧ್ಯಾಸವೆಂಬುದಿಲ್ಲ. ವಿಶೇಷವಾಗಿ ತೋರಿಕೊಳ್ಳುವುದರಿಂದ ಅಧಿಷ್ಠಾನಕ್ಕೆ ವಿರೋಧವೆಂಬುದಿಲ್ಲ. ವಿಶೇಷ-ವೆಂಬುದು ಅಧಿಷ್ಠಾನದ ಧರ್ಮವಾಗಿ ತೋರುವುದಿಲ್ಲವಾದ್ದರಿಂದಲೂ, ಬೇರೊಂದು ಅಧಿಷ್ಠಾನದ ಧರ್ಮವಾಗಿಯೇ ತೋರುವುದರಿಂದಲೂ (ಇದು ಹೀಗೆಯೇ ಎಂದರಿಯಬೇಕು). ಆದರೆ ನಾವು ಇದರ ಬಗ್ಗೆ ಹೇಳುವುದೇನೆಂದರೆ ಇದು ಸರಿಯಾದ ಮಾತಲ್ಲ, (ಏಕೆಂದರೆ) ಅಧ್ಯಾಸದ ಪ್ರಕಾರದಲ್ಲಿ ಅಧಿಷ್ಠಾನ ಮತ್ತು ಆರೋಪ್ಯಗಳಿಗೆ ಸಾಮಾನ್ಯವಿಶೇಷಭಾವದಿಂದ ಇರುವುದು (ಎಂಬುದು) ಕಾರಣವಲ್ಲವಷ್ಟೆ? "ನಾನು" ಎಂಬ ಅಧ್ಯಾಸವು ಅಧ್ಯಾಸಕಾಲದಲ್ಲಿ ಸಾಮಾನ್ಯ ವಿಶೇಷಾಕಾರವಿಲ್ಲದೆಯೇ ತೋರುತ್ತದೆ. ಅಲ್ಲಿ ಚೇತನಕ್ಕೆ ಸಂಸೃಷ್ಟರೂಪದಿಂದ ಅಧ್ಯಾಸವೆಂಬುದಿಲ್ಲ. ಯಾವನೊಬ್ಬನೂ "ನಾನೀಗ" ಚೇತನದಿಂದ ಕೂಡಿ-ಕೊಂಡಿದ್ದೇನೆ ಎಂದೇನು ತಿಳಿಯುವುದಿಲ್ಲ. ಮತ್ತೇನೆಂದರೆ ಮುಖ್ಯವಾಗಿಯೇ

ನಿರುಪಚರಿತಂ ಚೇತನೋಽಹಮ್ ಇತ್ಯೇವ ಪ್ರತ್ಯೇತಿ । ನ ಚ ಸಾಮಾನ್ಯವಿಶೇಷಭಾವಃ ಸದ್ವಿತೀಯತ್ವಂ ವಾ ಪ್ರತ್ಯಗಾತ್ಮನ್ಯಸ್ತಿ ವೇದಾನ್ತಿನಯೇ। ಸಾಮಾನ್ಯವಿಶೇಷಾದೇಃ ಸರ್ವಸ್ಯಾಪಿ ಸಾಕ್ಷ್ಯತ್ವಾಭ್ಯುಪಗಮಾತ್ । ನ ಚ ಕಲ್ಪಿತಸಾಮಾನ್ಯವಿಶೇಷಭಾವಮಾದಾಯೈವಾಽಧ್ಯಾಸನಿರ್ವಾಹ ಇತಿ ವಾಚ್ಯಮ್ । ಕಲ್ಪನಸ್ಯೈವಾಽಧ್ಯಾಸತ್ವಾತ್ ತೇನೈವ ತನ್ನಿರ್ವಾಹಾಪಾತಾತ್। ಅತಃ ಸಾಮಾನ್ಯವಿಶೇಷಾವಭಾಸಿತ್ವಾದಿಕಂ ಕಂಚಿದಪಿ ನಿಯಮಮನಪೇಕ್ಷ್ಯೈವ ಭವತ್ಯಾತ್ಮಾನಾತ್ಮನೋರಧ್ಯಾಸಃ, ಯುಕ್ತಿಹೀನಾವಭಾಸಸ್ವರೂಪತ್ವಾತ್ತಸ್ಯೇತಿ ಯಥಾನುಭವಸಿದ್ಧೇನೈವ ಸಂತೋಷ್ಟವ್ಯಮ್ । ಸರ್ವಸಾಕ್ಷಿಣೋಽಪ್ಯಾತ್ಮನೋಽನ್ತಃಕರಣಾದಿಷು ಸ್ವರೂಪೇಣಾಧ್ಯಸ್ತತ್ವಂ ಸ್ವೇನ ಪಾರಮಾರ್ಥಿಕೇನ ರೂಪೇಣಾವಸ್ಥಾನಮ್ ಇತಿ ಯಥಾನುಭವಮೇವಾಂಗೀಕರ್ತವ್ಯಮಿತ್ಯಲಮಸ್ಥಾನೇ ಯುಕ್ತಿಗವೇಷಣೇನ ॥

ಯದಪ್ಯಾಶಙ್ಕ್ಯತೇ ಕೈಶ್ಚಿತ್ – ಸಾಕ್ಷಿತ್ವಂ ನಾಮ ಸಾಕ್ಷಾಜ್ಜ್ಞಾತೃತ್ವಮೇವ।

---

ನಾನು ಚೇತನನೇ ಎಂದು ತಿಳಿಯುತ್ತಾನೆ. ವೇದಾಂತಸಿದ್ಧಾಂತಪ್ರಕಾರ ಪ್ರತ್ಯಗಾತ್ಮನಲ್ಲಿ ಸಾಮಾನ್ಯವಿಶೇಷಭಾವವಾಗಲೀ, ಸದ್ವಿತೀಯತ್ವವಾಗಲೀ ಇರುವುದಿಲ್ಲವಷ್ಟೆ ! ಎಲ್ಲಾ ಸಾಮಾನ್ಯವಿಶೇಷವೂ ಸಾಕ್ಷ್ಯವಾಗಿದೆ ಎಂದು ಒಪ್ಪಿಕೊಂಡಿರುತ್ತದೆ. ಕಲ್ಪಿತವಾದ ಸಾಮಾನ್ಯವಿಶೇಷಭಾವವನ್ನು ತೆಗೆದುಕೊಂಡೇ ಅಧ್ಯಾಸವನ್ನು ಒಪ್ಪಬೇಕೆಂದು ಹೇಳಬಾರದು. ಕಲ್ಪನೆಯೇ ಅಧ್ಯಾಸವಾದ್ದರಿಂದ ಅದರಿಂದಲೇ ಅದನ್ನು ಆಶ್ರಯಿಸಬೇಕೆಂದಾಗುತ್ತದೆ. ಆದ್ದರಿಂದ ಯಾವುದೊಂದು ಸಾಮಾನ್ಯವಿಶೇಷವಾಗಿ ತೋರುವುದೆಂಬುದನ್ನು ಅಪೇಕ್ಷಿಸಿಕೊಳ್ಳದೇ ಆತ್ಮಾನಾತ್ಮರ ಅಧ್ಯಾಸವೆಂಬುದಾಗುತ್ತದೆ. ಏಕೆಂದರೆ ಯುಕ್ತಿ ಇಲ್ಲದೇ ತೋರುವುದೆಂಬುದೇ (ಅಧ್ಯಾಸದ) ಸ್ವರೂಪವಾಗಿರುವುದರಿಂದ (ಅವಿಚಾರಿತ) ಲೋಕಾನುಭವರೂಪದಿಂದಲೇಸಿದ್ಧವಾಗಿದೆ ಎಂದೇ ಸಂತೋಷಪಟ್ಟುಕೊಳ್ಳಬೇಕು. ಸರ್ವಸಾಕ್ಷಿಯಾದ ಆತ್ಮನೂ ಕೂಡ ಅಂತಃಕರಣಾದಿಗಳ ಸ್ವರೂಪದಿಂದ ಅಧ್ಯಸ್ತವಾಗಿದ್ದು ತನ್ನ ಪಾರಮಾರ್ಥಿಕ ಸ್ವರೂಪದಿಂದ (ಹಾಗೆಯೇ) ಇದ್ದುಕೊಂಡಿರುವುದು ಎಂಬುದನ್ನು ಅನುಭವಕ್ಕೆ ತಕ್ಕ ಹಾಗೆಯೇ ಒಪ್ಪಬೇಕಾದ್ದರಿಂದ ಇಲ್ಲಿ ಬೇರೊಂದು ಯುಕ್ತಿಯನ್ನು ಹುಡುಕುವುದರಿಂದ ಏನೂ ಪ್ರಯೋಜನವಿರುವುದಿಲ್ಲ.

ಇಲ್ಲಿ ಕೆಲವರು ಇನ್ನೇನನ್ನು ಸಂದೇಹಪಡುತ್ತಾರೆ – ಸಾಕ್ಷಿತ್ವವೆಂದರೆ

ನ ಹ್ಯಜಾನತಃ ಸಾಕ್ಷಿತ್ವಮಸ್ತಿ । ಜ್ಞಾತ್ರೈವ ಲೋಕವೇದಯೋಃ ಸಾಕ್ಷೀತಿ ವ್ಯಪದಿಶ್ಯತೇ । ಸ್ಮರತಿ ಚ ಭಗವಾನ್ ಪಾಣಿನಿಃ "ಸಾಕ್ಷಾದ್ದ್ರಷ್ಟರಿ ಸಂಜ್ಞಾಯಾಮ್" (ಪಾ. ಸೂ. ೫-೨-೯೧) ಇತಿ ಸಾಕ್ಷಾಜ್ಜ್ಞಾತರ್ಯೇವ ಸಾಕ್ಷಿಶಬ್ದಮ್ । ತಸ್ಮಾತ್ ಸಾಕ್ಷಿತ್ವಾದೇವಾಸ್ಯ ಜ್ಞಾತೃತ್ವಂ ಸೇತ್ಸ್ಯತೀತ್ಯಹ-ಮರ್ಥ ಏವಾತ್ಮಾ ಪರಮಾರ್ಥತಃ । ಅತಸ್ತಸ್ಯಾಧ್ಯಸ್ತತ್ವಂ ನ ಯುಕ್ತಮಿತಿ । (ರಾ.ಭಾ.ಶ್ರೀ.ಭಾ. ಪು-೨೬) ತದಪ್ಯತ್ರ "ಸರ್ವಸಾಕ್ಷಿಣಮ್" ಇತಿ ಸರ್ವಗ್ರಹಣೇನೈವಾಪಾಸ್ತಂ ಭವತಿ । ಜ್ಞಾತುರಪಿ ಸಾಕ್ಷ್ಯತ್ವಾತ್ ಸರ್ವಸಾಕ್ಷಿತ್ವಾನುಪಪತ್ತೇಃ । ಯಥಾಹುರ್ವಾರ್ತಿಕಕಾರಾಃ – "ಕ್ವಚಿತ್ ಪ್ರಮಾತೃವಿತ್ಸಾಕ್ಷೀ ಕ್ವಚಿತ್ಪ್ರತ್ಯಯವಿತ್ ಪರಃ । ಕ್ವಚಿದ್ಬಾಹ್ಯಾರ್ಥವಿಚ್ಚಾಽಽತ್ಮಾ ತತ್ಕರ್ತೃತ್ವಂ ನಿಷಿಧ್ಯತೇ ॥" (ಬೃ. ವಾ. ೨-೧-೩೧೫) ಇತಿ । ಶ್ರುತಿಶ್ಚ

---

ನೇರಾಗಿ ಜ್ಞಾತೃವಾಗಿರುವುದೇ ಆಗಿದೆ. ಏಕೆಂದರೆ ತಿಳಿಯುದವನಿಗೆ ಸಾಕ್ಷಿತ್ವವಿರುವುದಿಲ್ಲವಷ್ಟೆ ! ಲೋಕದಲ್ಲೂ ವೇದದಲ್ಲೂ ಜ್ಞಾತೃವಾದವನನ್ನೇ ಸಾಕ್ಷೀ ಎನ್ನುತ್ತಾರೆ. ಭಗವಂತರಾದ ಪಾಣಿನಿಗಳೂ ಸಹ "ಸಾಕ್ಷಾದ್ದ್ರಷ್ಟರಿ ಸಂಜ್ಞಾಯಾಮ್" (೫-೨-೯೧) ("ಸಾಕ್ಷಾತ್" ಎಂಬೀ ಅವ್ಯಯದಿಂದ (ಮುಂದೆ) ದ್ರಷ್ಟರ್ಥವಿರುವಾಗ ಸಂಜ್ಞೆಯಲ್ಲಿ "ಇನಿಃ" ಎಂಬ ಆದೇಶವು ಬರುತ್ತದೆ ಎಂದು ಹೇಳುತ್ತಾ) "ಸಾಕ್ಷಾತ್" ಎಂಬ ಶಬ್ದಕ್ಕೆ ಅರಿಯುವಾತನಲ್ಲೇ ("ಇನಿ" ಪ್ರತ್ಯಯ ಬಂದು) ಸಾಕ್ಷೀ ಎಂಬ ಶಬ್ದವು ಬಂದಿರುತ್ತದೆ ಎಂದು ಹೇಳಿರುತ್ತಾರೆ. ಇವನು ಸಾಕ್ಷಿಯಾಗಿರುವುದರಿಂದಲೇ ಇವನಿಗೆ ಜ್ಞಾತೃತ್ವವೆಂಬುದು ಹೊಂದುತ್ತದೆಯಾದ್ದರಿಂದ ಪರಮಾರ್ಥವಾಗಿ ಆತ್ಮನು ಅಹಮರ್ಥನೇ ಆಗಿರುತ್ತಾನೆ. ಆದ್ದರಿಂದ ಅದು ಅಧ್ಯಸ್ತವಾಗಿದೆ ಎಂಬುದು ಸರಿಯಲ್ಲ. (ಸಿದ್ಧಾಂತ) ಈ ಪಕ್ಷವನ್ನೂ ಕೂಡ "ಸರ್ವಸಾಕ್ಷಿಣಮ್" ಎಂಬಲ್ಲಿನ "ಸರ್ವ" ಎಂಬಪದವನ್ನು ಗ್ರಹಣೆಮಾಡಿದ್ದರಿಂದಲೇ ತಳ್ಳಿಹಾಕಿದಂತಾಯಿ-ತೆಂದು (ತಿಳಿಯಬೇಕು). ಜ್ಞಾತೃವಾದವನೂ ಸಹ ಸಾಕ್ಷ್ಯನೇ (ದೃಶ್ಯನೇ) ಆಗಿರುವುದರಿಂದ ಸರ್ವಸಾಕ್ಷಿ ಎಂಬ ವಿಶೇಶಣವು (ಅವನಿಗೆ) ಹೊಂದುವುದಿಲ್ಲ. ಇದನ್ನು ವಾರ್ತಿಕಕಾರರು ಹೀಗೆ ಹೇಳಿರುತ್ತಾರೆ – "ಕೆಲವೊಮ್ಮೆ ಸಾಕ್ಷಿಯು ಪ್ರಮಾತೃವನ್ನೇ ಅರಿಯುತ್ತಾನೆ". ಕೆಲವೊಮ್ಮೆ ಪ್ರತ್ಯಯವನ್ನು ಅರಿಯುತ್ತಿರುತ್ತಾನೆ. ಕೆಲವೊಮ್ಮೆ ಆತ್ಮನು ಬಾಹ್ಯಾರ್ಥವನ್ನು ಅರಿಯುವವನಾಗಿರುತ್ತನೆ, (ಎಂಬುದಾಗಿ ಹೇಳುತ್ತಾ) ಇಲ್ಲಿ ಅದರ (ಸಾಕ್ಷಿಯು)

ಸಾಕ್ಷಿಣಃ ಕರ್ತೃತ್ವರಹಿತಾಮೇವ ಚಿನ್ಮಾತ್ರತಾಂ ಪ್ರಾಹ – "ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ" (ಶ್ವೇ. ೬–೧೧) ಇತಿ । ತಸ್ಮಾತ್ಸಾಕ್ಷಾದ್ದ್ರಷ್ಟರೀತಿ ಪ್ರತ್ಯಯಸ್ಮರಣಮನ್ಯಥೈವ ವ್ಯಾಖ್ಯೇಯಮ್ । "ಸವಿತಾ ಪ್ರಕಾಶತೇ" ಇತ್ಯಕರ್ತರ್ಯಪಿ ಕರ್ತೃಪ್ರತ್ಯಯೋಪಚಾರದರ್ಶನಾದಿತಿ ದ್ರಷ್ಟವ್ಯಮ್ । ಅತಃ ಕರ್ತೃಪ್ರತ್ಯಯದರ್ಶನಮಾತ್ರಾದಹಮರ್ಥತೇತಿ ಕುದರ್ಶನಮೇತತ್ । ತದೇವಂ "ಸರ್ವಸಾಕ್ಷಿಣಿ" ಇತಿ ವಿಶೇಷಣಮೇವಾಽಽತ್ಮನಿ ಸರ್ವಾಶಿವಸಂಪರ್ಕಂ ವಾರಯತೀತಿ ಸರ್ವಂ ಶಿವಮ್ ॥

---

ಕರ್ತೃತ್ವವನ್ನು ಅಲ್ಲಗಳೆಯುತ್ತದೆ. (ಬೃ. ವಾ. ೨–೧–೩೧೫). ಶ್ರುತಿಯೂ ಸಹ "ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ" (ಶ್ವೇ. ೬–೧೧) (ಎಂಬುದಾಗಿ ಹೇಳುತ್ತಾ) ಸಾಕ್ಷಿಗೆ ಕರ್ತೃತ್ವವಿಲ್ಲದ ಚಿನ್ಮಾತ್ರ (ರೂಪವನ್ನು) ಹೇಳುತ್ತದೆ. ಆದ್ದರಿಂದ "ಸಾಕ್ಷಾದ್ದ್ರಷ್ಟರಿ ಸಂಜ್ಞಾಯಾಮ್" ಎಂದು ಸಾಕ್ಷಾತ್ ಎಂಬುದಕ್ಕೆ (ಇನಿ) ಪ್ರತ್ಯಯವನ್ನು ಹೇಳಿರುವುದನ್ನು ಬೇರೊಂದು ರೀತಿಯಲ್ಲಿ (ಔಪಚಾರಿಕಾರ್ಥದಲ್ಲಿ) ವ್ಯಾಖ್ಯಾನವನ್ನು ಮಾಡಿಕೊಳ್ಳಬೇಕು. "(ಸವಿತಾ ಪ್ರಕಾಶತೇ)" "ಸೂರ್ಯನು ಬೆಳಗುತ್ತಾನೆ" ಎಂಬ ಜಾಗದಲ್ಲಿ ಕರ್ತೃತ್ವವಿಲ್ಲದಿದ್ದರೂ ಆ ರೀತಿ ಪ್ರಯೋಗವಿರುವಂತೆ (ಇಲ್ಲಿಯೂ) ತಿಳಿಯಬೇಕು. ಆದ್ದರಿಂದ ("ದ್ರಷ್ಟಾ" ಎಂದು) ಕರ್ತೃತ್ವ ಪ್ರತ್ಯಯವು ಕಂಡುಬಂದಿರುವುದರಿಂದ (ಆತ್ಮನು) ಅಹಮರ್ಥವೇ ಆಗಿದೆ ಎಂಬುದು ಕುದರ್ಶನವಾಗುತ್ತದೆ. ಹೀಗೆ "ಸರ್ವಸಾಕ್ಷಿಣಿ" ಎಂಬ ವಿಶೇಷಣವೇ ಆತ್ಮನಲ್ಲಿ ಎಲ್ಲಾ ಪ್ರಕಾರದ ಅಮಂಗಳ ಸಂಬಂಧವನ್ನು ತಡೆಗಟ್ಟುತ್ತದೆ ಎಂದಾದ್ದರಿಂದ ಸರ್ವವೂ ಮಂಗಳವು.

✱✱✱✱✱✱✱✱✱✱

# ೮. ಅಥಾಧ್ಯಾಸವಿಚಾರೋಪಸಂಹಾರಭಾಷ್ಯಮ್

**ಏವಮಯಮನಾದಿರನನ್ತೋ ನೈಸರ್ಗಿಕೋಽಧ್ಯಾಸೋ ಮಿಥ್ಯಾಪ್ರತ್ಯಯರೂಪಃ ಕರ್ತೃತ್ವಭೋಕ್ತೃತ್ವಪ್ರವರ್ತಕಃ ಸರ್ವಲೋಕಪ್ರತ್ಯಕ್ಷಃ ॥**

**೫೫. ಗ್ರನ್ಥಸಂಬನ್ಧಃ** – ಸಂಕ್ಷೇಪವಿಸ್ತರಾಭ್ಯಾಂ ಕಥಿತಮರ್ಥಮಿದಾನೀಂ ನಿಗಮಯತಿ – **ಏವಮಯಮನಾದಿರನನ್ತೋ ನೈಸರ್ಗಿಕೋಽಧ್ಯಾಸ** ಇತ್ಯಾದಿನಾ । ಉಪಕ್ರಮವಾಕ್ಯೇ "ಲೋಕವ್ಯವಹಾರಃ" ಇತಿ ವ್ಯವಹಾರಗ್ರಹಣಂ ವ್ಯಪದೇಶಪ್ರವೃತ್ತ್ಯಾದಿರೂಪಭೇದಸ್ಯಾಧ್ಯಾಸಕಾರ್ಯಸ್ಯ ಸಂಗ್ರಹಾರ್ಥಮ್ । ಇಹ ತು ಕರ್ತೃತ್ವಭೋಕ್ತೃತ್ವಪ್ರವರ್ತಕ ಇತಿ ತದೇವ ಕಾರ್ಯಂ ಪ್ರದರ್ಶ್ಯ ತದ್ಧೇತುತ್ವೇನಾಧ್ಯಾಸೋ ವರ್ಣ್ಯತೇ । ಉಭಯತ್ರಾಪ್ಯಧ್ಯಾಸಃ ಸ್ವಪ್ರಧಾನ

---

## ೮. ಅಧ್ಯಾಸ ವಿಚಾರದ ಉಪಸಂಹಾರ ಭಾಷ್ಯವು

ಭಾಷ್ಯಾರ್ಥ:– ಹೀಗೆ ಈ ನೈಸರ್ಗಿಕವಾದ ಅಧ್ಯಾಸವು ಅನಾದಿಯೂ ಅನಂತವೂ ಆಗಿದ್ದು, ತಪ್ಪುತಿಳಿವಳಿಕೆಯ ರೂಪವಾಗಿದ್ದು, ಕರ್ತೃತ್ವ-ಭೋಕ್ತೃತ್ವವನ್ನು ಉಂಟುಮಾಡುತ್ತಿದೆ ಎಂಬುದು ಎಲ್ಲರಿಗೂ ಪ್ರತ್ಯಕ್ಷವಾಗಿದೆ.

**೫೫. ಗ್ರಂಥದ ಸಂಬಂಧವು** – ಸಂಕ್ಷೇಪವಿಸ್ತರವಾಗಿ ಹೇಳಿದ ಅರ್ಥವನ್ನು ಈಗ (ಭಾಷ್ಯಕಾರರು) "ಏವಮಯಮ್" ಎಂಬುದಾಗಿ ಆರಂಭಮಾಡಿ "ನೈಸರ್ಗಿಕೋಽಧ್ಯಾಸಃ" ಎಂಬುದಾಗಿ ಉಪಸಂಹಾರಮಾಡುತ್ತಾರೆ. ಆರಂಭವಾಕ್ಯದಲ್ಲಿ "ಲೋಕವ್ಯವಹಾರಃ" ಎಂದು ವ್ಯವಹಾರಪದವನ್ನು ತೆಗೆದುಕೊಂಡಿರುವುದು ವ್ಯಪದೇಶ (ಹೇಳುವುದು) ಪ್ರವೃತ್ತಿ (ನಡೆದುಕೊಳ್ಳುವುದು) ಮುಂತಾದ ವ್ಯವಹಾರದ ರೂಪಭೇಧವು ಅಧ್ಯಾಸಕಾರ್ಯವಾಗಿದೆ ಎಂಬುದನ್ನು ಸೇರಿಸಿಕೊಳ್ಳುವುದಕ್ಕಾಗಿ ಹೇಳಿರುತ್ತದೆ. ಇಲ್ಲಾದರೋ ಕರ್ತೃತ್ವಭೋಕ್ತೃತ್ವಪ್ರವರ್ತಕವಾಗಿದೆ ಎಂದು ಆ (ವ್ಯವಹಾರದ) ಕಾರ್ಯವನ್ನೇ ತೋರಿಸಿ ಅದಕ್ಕೆ ಕಾರಣವಾಗಿ ಅಧ್ಯಾಸವನ್ನು ವರ್ಣಿಸಿರುತ್ತದೆ. ಎರಡು ಕಡೆಯಲ್ಲೂ ಅಧ್ಯಾಸವು ಜ್ಞಾನದಿಂದ

ಏವ ನಿರ್ದಿಶ್ಯತೇ ಜ್ಞಾನನಿವರ್ತ್ಯತ್ವಕಥನಾರ್ಥಮ್ । ಅತೋ ನ ಪ್ರಕ್ರಮಭಙ್ಗಃ ಶಙ್ಕ್ಯಃ ॥

**೫೬. ಅಧ್ಯಾಸವಿಶೇಷಣಾನಾಂ ವಿವರಣಮ್ –** ಏವಮ್ ಉಪವರ್ಣಿತವಿಧಯಾ ಅಯಮ್ ಆತ್ಮಾನಾತ್ಮನೋರಿತರೇತರಾಧ್ಯಾಸಃ ಅನಾದಿರನನ್ತಶ್ಚ । ಕಾಲಾದ್ಯನವಚ್ಛಿನ್ನ ಇತ್ಯರ್ಥಃ । ಕಾಲಾದೇರಪ್ಯಧ್ಯಸ್ತತ್ವಾತ್। ನೈಸರ್ಗಿಕೋಽವಿಚಾರಸ್ವಭಾವಸಿದ್ಧಃ । ನ ಹ್ಯಧ್ಯಾಸಃ ಪ್ರಮಾಣಸಿದ್ಧೋ ಭವಿತುಮರ್ಹತಿ । ತದ್ವಿನಾಶ್ಯತ್ವಾತ್ । ನಾಪ್ಯಯಂ ಸ್ವತಃಸಿದ್ಧಃ । ತಥಾತ್ವೇಽಸ್ಯಾಽಽತ್ಮವದೇವ ನಿವೃತ್ತಿವೈಧುರ್ಯಪ್ರಸಙ್ಗಾತ್ । ಅತೋಽಯ-ಮವಿಚಾರಮಾತ್ರಸಿದ್ಧಃ । ಸ ಚಾಯಂ ಮಿಥ್ಯಾಪ್ರತ್ಯಯರೂಪಃ । ಯತ್ತದುಕ್ತ-ಮುಪನ್ಯಾಸಕಾಲೇ ಲೋಕವ್ಯವಹಾರನಿಮಿತ್ತತ್ವೇನ ಮಿಥ್ಯಾಜ್ಞಾನಮಿತಿ, ಸೋಽಯಮಧ್ಯಾಸ ಏವ ನಾನ್ಯ ಇತಿ ಜ್ಞಾಪನಾರ್ಥಮುಚ್ಯತೇ "ಮಿಥ್ಯಾ-ಪ್ರತ್ಯಯರೂಪಃ" ಇತಿ । ಮಿಥ್ಯಾಪ್ರತ್ಯಯಃ, ಅತಸ್ಮಿಂಸ್ತತ್ಪ್ರತ್ಯಯಃ । ಸ ಏವ

---

ತೋಲಗುವಂಥದ್ದು ಎಂಬುದನ್ನು ತೋರಿಸುವುದಕ್ಕಾಗಿ ಸ್ವಪ್ರಧಾನವಾಗಿಯೇ ತಿಳಿಸಿದೆ. ಆದ್ದರಿಂದ ಉಪಕ್ರಮಕ್ಕೆ ಭಂಗವಾಯಿತೆಂದು ಸಂದೇಹಿಸಬಾರದು.

**೫೬. ಅಧ್ಯಾಸವಿಶೇಷಗಳ ವಿವರಣೆಯು –** ಹೀಗೆ ವರ್ಣನೆ ಮಾಡಿದ ರೀತಿಯಿಂದ ಈ ಆತ್ಮಾನಾತ್ಮರುಗಳ ಇತರೇತರಾಧ್ಯಾಸವು ಅನಾದಿರನಂತವೂ ಆಗಿದೆ, (ಅಂದರೆ) ಕಾಲಾದಿಗಳಿಂದ ಪರಿಚ್ಛಿನ್ನವಾಗಿಲ್ಲ ಎಂದರ್ಥ. (ಏಕೆಂದರೆ) ಕಾಲಾದಿಗಳೂ ಅಧ್ಯಸ್ತವಾಗಿವೆ. ನೈಸರ್ಗಿಕವೆಂದರೆ ಅವಿಚಾರಿತಸಿದ್ಧ ಎಂದರ್ಥವು. ಅಧ್ಯಾಸವು ಪ್ರಮಾಣಸಿದ್ಧವಾಗುವುದಿಲ್ಲವಷ್ಟೆ ? (ಏಕೆಂದರೆ ಶಾಸ್ತ್ರ) ಪ್ರಮಾಣದಿಂದ ಅದು ನಾಶವಾಗುತ್ತದೆ. ಇದು ಸ್ವತಃ ಸಿದ್ಧವೂ ಅಲ್ಲ, ಸ್ವತಃ ಸಿದ್ಧವಾದರೆ ಆತ್ಮನಂತೆ ಇದೂ ತೊಲಗುವುದಿಲ್ಲವೆಂದಾಗುತ್ತದೆ. ಆದ್ದರಿಂದ ಇದು ಅವಿಚಾರಿತ ಮಾತ್ರ ಸಿದ್ಧವಾದದ್ದು. ಇದು ಮಿಥ್ಯಾಪ್ರತ್ಯಯ ರೂಪವಾಗಿದೆ. ಹಿಂದೆ ಹೇಳುವಾಗ ಮಿಥ್ಯಾಜ್ಞಾನವು ಲೋಕವ್ಯವಹಾರಕ್ಕೆ ನಿಮಿತ್ತವಾಗಿದೆ ಎಂದು ಏನು ಹೇಳಿತ್ತು ಅದೂ ಈ ಅಧ್ಯಾಸವೇ, ಬೇರೆ ಅಲ್ಲ ಎಂಬುದನ್ನು ಜ್ಞಾಪಿಸುವುದಕ್ಕಾಗಿ "ಮಿಥ್ಯಾಪ್ರತ್ಯಯರೂಪಃ" – ಮಿಥ್ಯಾಪ್ರತ್ಯಯ ಎಂದರೆ ಅದಲ್ಲದ್ದರಲ್ಲಿ ಅದೆಂಬ ತಿಳಿವಳಿಕೆಯೇ. ಅದೇ

ರೂಪಂ ಯಸ್ಯ ಸೋಽಯಮಧ್ಯಾಸೋ ಮಿಥ್ಯಾಪ್ರತ್ಯಯರೂಪಃ । ನ ಹ್ಯಧ್ಯಾಸೇನ ಸಮರ್ಪಿತೋ ಅರ್ಥಃ ಕುತ್ರಾಪಿ ವರ್ತತೇ ಯೇನ ಸ ಯಥಾರ್ಥಪ್ರತ್ಯಯಃ ಸ್ಯಾತ್ । ನ ಹಿ ಸಾದ್ಯಧ್ಯಾಸೇಽಪಿ "ಇದಂ ರಜತಮ್" ಇತ್ಯಾಕಾರಕಂ ವಸ್ತು ಶುಕ್ತೌ ತತೋಽನ್ಯತ್ರ ವಾ ಕುತ್ರಾಪಿ ಸಂಭಾವಿತಮಸ್ತಿ। ಶುಕ್ತೌ ಹಿ ರಜತತ್ವಂ ನಾಸ್ತಿ, ರಜತೇ ಚೇದನ್ತ್ವಂ ನಾಸ್ತಿ । ಅನ್ಯತ್ರ ಚೋಭಯಂ ನಾಸ್ತೀತಿ । ಏವಂ ಪ್ರಕೃತೇಽಪಿ "ಅಹಂ ಜಾನಾಮಿ" ಇತ್ಯಾಕಾರಕಸ್ಯ ಜ್ಞಾತೃತ್ವಸ್ಯ ಕುತ್ರಾಪಿ ಸಂಭವೋ ನಾಸ್ತೀತಿ ನಾಸೌ ಯಥಾರ್ಥಃ ಪ್ರತ್ಯಯಃ । ನ ಚಾಯಮಪ್ರತ್ಯಯಃ, ಪ್ರತೀತೇರನುಭವಸಿದ್ಧತ್ವಾತ್ । ನಾಪಿ ಸ್ಮೃತಿರೇವೇಯಮ್, ಪ್ರತ್ಯಕ್ಷಾವ-ಭಾಸತ್ವಾತ್ । ತಸ್ಮಾನ್ಮಿಥ್ಯಾಪ್ರತ್ಯಯರೂಪ ಏವಾಯಮಿತಿ ಶ್ಲಿಷ್ಯತೇ । **ತಥಾಹುರ್ವಾರ್ತಿಕಕಾರಾಃ**– "ಮೇಯಾರ್ಥಾನಭಿಸಂಬಧಾ ವಸ್ತುಧೀರಿಯಮ್ । ಜ್ಞಾತತ್ವಾತ್ತದಭಾವೋಽಪಿ ಪ್ರಾತ್ಯಕ್ಷ್ಯಾನ್ನೇಷ್ಯತೇ ಸ್ಮೃತಿಃ॥" (ಬೃ.ವಾ. ೧–೪–೨೭೪) ಇತಿ ॥

---

ರೂಪವು ಯಾವ ಈ ಅಧ್ಯಾಸಕ್ಕೋ ಆ ಅಧ್ಯಾಸವು ಮಿಥ್ಯಾಪ್ರತ್ಯಯರೂಪವು ಎಂದಿದೆ. ಅಧ್ಯಾಸದಿಂದ ತೋರಿದ್ದಾದ ವಸ್ತುವು ಎಲ್ಲೂ ಇರುವುದಿಲ್ಲವಷ್ಟೆ? ಹಾಗೇನಾದರೂ ಇದ್ದಿದ್ದರೆ ಅದು ನಿಜವಾದಜ್ಞಾನವಾಗುತ್ತಿತ್ತು. ಸಾದಿಯಾದ (ಲೌಕಿಕವಾದ) ಅಧ್ಯಾಸದಲ್ಲೂ "ಇದು ಬೆಳ್ಳಿ" ಎಂಬ ಆಕಾರದ ವಸ್ತುವು ಶುಕ್ತಿಯಲ್ಲಾಗಲೀ ಅದಕ್ಕಿಂತ ಬೇರೆ ಕಡೆಯಲ್ಲಾಗಲೀ ಎಲ್ಲೂ ಇಲ್ಲವಷ್ಟೆ ! ಶುಕ್ತಿಯಲ್ಲಿ ರಜತವೆಂಬುದಿಲ್ಲ, ರಜತದಲ್ಲಿ ಇದಂತ್ವವು ಇಲ್ಲ. ಬೇರೆ ಕಡೆಯಲ್ಲಿ ಈ ಎರಡು ಇಲ್ಲ. ಹೀಗೆ ಪ್ರಕೃತವಾದ ಸ್ಥಳದಲ್ಲೂ "ನಾನು ಅರಿಯುತ್ತೇನೆ" ಎಂಬ ಆಕಾರದ ಜ್ಞಾತೃತ್ವವು ಎಲ್ಲೂ ಇರಲು ಸಾಧ್ಯವಿಲ್ಲ ಎಂದಾದ್ದರಿಂದ ಇದು ಯಥಾರ್ಥದ ತಿಳಿವಳಿಕೆ ಅಲ್ಲ. ಇದು ತೋರುವುದಿಲ್ಲವೆಂಬುದು ಇಲ್ಲ, ಏಕೆಂದರೆ ತೋರುತ್ತಿರುವುದು ಅನುಭವಸಿದ್ಧವಾಗಿದೆ. ಇದು ಸ್ಮೃತಿಯೂ ಅಲ್ಲ, ಏಕೆಂದರೆ ಪ್ರತ್ಯಕ್ಷದಂತೆ ತೋರುತ್ತಿರುವುದು ಅನುಭವಸಿದ್ಧವಾಗಿದೆ. ಆದ್ದರಿಂದ ಇದು ಮಿಥ್ಯಾಪ್ರತ್ಯಯರೂಪವೆಂಬುದೇ ಹೊಂದುತ್ತದೆ. ವಾರ್ತಿಕಕಾರರೂ ಹೇಳಿರುತ್ತಾರೆ – "ತಿಳಿಯಬೇಕಾದ ವಸ್ತುವಿಗೆ (ಜ್ಞಾನವು) ಸಂಬಂಧಪಟ್ಟುಕೊಂಡಿಲ್ಲವಾದ್ದರಿಂದ ಯಥಾವಸ್ತುಜ್ಞಾನವಲ್ಲ, ತೋರುತ್ತಿರು-ವುದರಿಂದ ಅಭಾವವೂ ಅಲ್ಲ. ಪ್ರತ್ಯಕ್ಷವಾದ್ದರಿಂದ ಸ್ಮೃತಿಯೂ ಅಲ್ಲ" (ಬೃ. ವಾ. ೧–೪–೨೭೪) ಎಂದಿದ್ದಾರೆ.

**೫೭. ಅಧ್ಯಾಸಸ್ಯಾನಾದ್ಯನನ್ತತ್ವೋಪಪಾದನಮ್** – ನನು ಮಿಥ್ಯಾಪ್ರತ್ಯಯಮಾತ್ರಸ್ಯಾಧ್ಯಾಸಸ್ಯ ಕಥಮನಾದಿತ್ವಮನನ್ತತ್ವಂ ವಾ ? ಶುಕ್ತಿರಜತಾದಿಪ್ರತ್ಯಯಾನಾಂ ಹ್ಯಧ್ಯಾಸಾನಾಂ ಸಾದಿತ್ವಮನ್ತವತ್ವಂ ಚ ದೃಷ್ಟಮ್ । ನೈಷ ದೋಷಃ । ಶುಕ್ತ್ಯಾದಿಭಿರಿನ್ದ್ರಿಯಸಂಪ್ರಯೋಗಜಂ ಜ್ಞಾನಂ ಕಾದಾಚಿತ್ಕಮೇವೇತಿ ಯುಕ್ತಂ ತತ್ರಾಽಧ್ಯಾಸಪ್ರತ್ಯಯಸ್ಯಾಪಿ ಕಾದಾಚಿತ್ಕತ್ವಮ್। ಇಹ ಪುನರಹಮನುಭವಸ್ಯ ಪ್ರತ್ಯಕ್ಚೈತನ್ಯಾಭಾಸಮಾತ್ರತ್ವಾದನಾದಿತ್ವೈವ ಯುಕ್ತಾ। ನ ಚ ಸಮ್ಯಗ್ಜ್ಞಾನಸ್ಯಾಪಿ ಪ್ರತ್ಯಗಾಭಾಸತ್ವಾತ್ಸತ್ಯಮಿಥ್ಯಾಜ್ಞಾನಯೋರೈಕ್ಯಪ್ರಸಙ್ಗ ಇತಿ ಶಙ್ಕ್ಯಮ್ । ಪ್ರತ್ಯಗ್ಜ್ಞಾನೋದಯಾತ್ ಪ್ರಾಗ್ವಸ್ತ್ವನುಸಾರಿತ್ವತದಭಾವಾಭ್ಯಾಂ ತಯೋಃ ಸುವಿವೇಚನತ್ವಾತ್ । ಜ್ಞಾನೋದಯಾಚ್ಚ ಊರ್ಧ್ವಂ ಉಭಯೋರಪಿ ಪ್ರತ್ಯಙ್ಮಾತ್ರತ್ವರೂಪೇಣೈಕ್ಯಸ್ಯ ಇಷ್ಟತ್ವಾತ್ ।

---

**೫೭. ಅಧ್ಯಾಸವು ಅನಾದಿಯೂ ಅನಂತವೂ ಆಗಿದೆ ಎಂಬುದನ್ನು ಸಮರ್ಥಿಸುವುದು** – ಕಪ್ಪೇಚಿಪ್ಪಿನಲ್ಲಿ ಬೆಳ್ಳಿ ಎಂಬ ತಿಳಿವಳಿಕೆಯು ಆದಿಯುಳ್ಳದ್ದೂ ಅಂತವುಳ್ಳದ್ದೂ ಎಂದಿರುವಾಗ ಈ (ವೇದಾಂತದಲ್ಲಿ ಗೊತ್ತುಮಾಡಿರುವ) ಮಿಥ್ಯಾಪ್ರತ್ಯಯಮಾತ್ರವಾದ ಅಧ್ಯಾಸವು (ಮಾತ್ರ) ಅನಾದಿಯೂ ಅನಂತವೂ ಆಗಿದೆ ಎಂಬುದು ಹೇಗೆ? ಎಂದರೆ ಇದೇನು ತಪ್ಪಿಲ್ಲ. ಕಪ್ಪೇಚಿಪ್ಪೇ ಮುಂತಾದವುಗಳಲ್ಲಿ ಇಂದ್ರಿಯಸಂಬಂಧದಿಂದಾದ ಜ್ಞಾನವು ಕೆಲವೊಮ್ಮೆ ಮಾತ್ರವಾಗುವುದರಿಂದ ಅಲ್ಲಿ ತಪ್ಪು ತಿಳಿವಳಿಕೆಯೂ ಸಹ ಕೆಲವೊಮ್ಮೆ ಮಾತ್ರ ಆಗುತ್ತದೆ ಎಂಬುದು ಯುಕ್ತವೇ ಆಗಿದೆ. ಇಲ್ಲಾದರೋ ನಾನು ಎಂಬ ಅನುಭವವು ಒಳಗಿನ ಚೈತನ್ಯದ ಆಭಾಸಮಾತ್ರವಾದ್ದರಿಂದ ಅನಾದಿಯಾಗಿದೆ ಎಂಬುದೇ ಯುಕ್ತವಾಗಿದೆ. ಸಮ್ಯಗ್ಜ್ಞಾನವೂ ಸಹ ಒಳಗಿನ (ಆತ್ಮಚೈತನ್ಯದ) ಆಭಾಸವಾದ್ದರಿಂದ ಸತ್ಯಜ್ಞಾನ ಮತ್ತು ಮಿಥ್ಯಾಜ್ಞಾನಗಳೂ ಒಂದೇ ಆಗುತ್ತದೆಯಲ್ಲಾ ಎಂದು ಆಶಂಕಿಸಬಾರದು. ಏಕೆಂದರೆ ಒಳಗಿನ ಆತ್ಮಜ್ಞಾನವುಂಟಾಗುವುದಕ್ಕೆ ಮೊದಲು (ಆ ಜ್ಞಾನವು) ವಸ್ತುವನ್ನು ಅನುಸರಿಸಿರುವುದು ಮತ್ತು ಅದಿಲ್ಲದಿರುವುದೆಂಬ ಪ್ರಕಾರದಿಂದ ಆ ಜ್ಞಾನಾಜ್ಞಾನಗಳನ್ನು ಸುಲಭವಾಗಿ ವಿವೇಚಿಸಬಹುದಾಗಿದೆ. ಆದರೆ ಜ್ಞಾನೋದಯವಾದ ಮೇಲೆ ಈ ಜ್ಞಾನಾಜ್ಞಾನಗಳೆರಡು ಪ್ರತ್ಯಗಾತ್ಮರೂಪದಿಂದ ಐಕ್ಯವಾಗುವುದೆಂಬುದು ಇಷ್ಟವೇ ಆಗಿದೆ. ಇದನ್ನು

**ಯಥಾಹುರ್ವಾರ್ತಿಕಕಾರಾಃ** – "ಅಜ್ಞಾನಂ ಚ ತದುತ್ಥಂ ಚ ಹ್ಯಾತ್ಮೈವಾಜ್ಞಾತತತ್ತ್ವಕಃ । ತತ್ತತ್ತ್ವಬೋಧಾತ್ತದ್ಬಾಧಃ ಸರ್ಪರಜ್ಜ್ವಾದಿಬಾಧವತ್॥" (ಬೃ. ವಾ. ೨-೧-೧೭೪) ಇತಿ । "ಅಜ್ಞಾನಾದಿತ್ರಯಂ ಪ್ರತ್ಯಗಾಭಾಸಂ ಯದ್ಯಪೀಷ್ಯತೇ । ಜ್ಞಾನವಜ್ಜ್ಞಾನಸಂಭೂತೇರ್ನೈವ ಪ್ರಾಗಭ್ಯುಪೇಯತೇ॥" (ಬೃ. ವಾ. ೩-೩-೪೧) ಇತಿ ಚ । ತಸ್ಮಾತ್ ಅಧ್ಯಾಸಸ್ಯಾಪಿ ಸತೋಽನಾದಿತ್ವಂ ನ ವಿರುಧ್ಯತೇ । ಯತ್ಪುನಃ ಪ್ರತ್ಯಯವ್ಯಪದೇಶ್ಯತ್ವಂ ತಸ್ಯ ತತ್ ಪ್ರತೀಯತೇಽನೇನ ಇತಿ ವ್ಯುತ್ಪತ್ತ್ಯಾ ಚೈತನ್ಯಾನುವಿದ್ಧತ್ವೇನ ಚಿದಾಭಾಸತ್ವಮಭಿಪ್ರೇತ್ಯ, ನ ತ್ವನ್ತಃಕರಣವೃತ್ತಿತ್ವಮಭಿಪ್ರೇತ್ಯೇತ್ಯವಿರೋಧಃ। ಕಿಂ ಚ ನ ವಯಮಹಮಧ್ಯಾಸಸ್ಯ ಪ್ರಾಗಭಾವಾದಿ ವದನಾದಿ ಪ್ರಾಕ್ಕಾಲ ವರ್ತಿತ್ವಾದನಾದಿತ್ವಂ ಬ್ರೂಮಹೇ, ಕಥಂ ತರ್ಹಿ ಕಾಲಾದೇರಪ್ಯಧ್ಯಾಸಕಾರ್ಯತ್ವಾತ್ಕಾಲಕೃತಪರಿಚ್ಛೇದಾಸಂಭವಾತ್ ।

---

ವಾರ್ತಿಕಕಾರರೂ ಹೇಳಿರುತ್ತಾರೆ – "(ನಿಜವಾಗಿ) ಅಜ್ಞಾನವೂ, ಅದರಿಂದೆದ್ದ ಅನಾತ್ಮವೂ, ಎರಡೂ ಅಜ್ಞಾತವಾದ ಆತ್ಮವೇ ಆಗಿರುತ್ತದೆ. ಅದರ ನಿಜದ ಅರಿವಾದ ಮೇಲೆ – ಸರ್ಪರಜ್ಜುವೇ ಮುಂತಾದವು ಬಾಧೆಯಾಗುವಂತೆ – ಅವೆರಡೂ ಬಾಧಿತವಾಗುತ್ತದೆ" ಎಂದು (ಬೃ. ವಾ ೨-೧-೧೭೪) ಹಾಗೆಯೇ "ಅಜ್ಞಾನ, ಮಿಥ್ಯಾಜ್ಞಾನ, ಸಂಶಯ ಜ್ಞಾನ ಈ ಮೂರನ್ನೂ ಪ್ರತ್ಯಗಾತ್ಮನ ಆಭಾಸಮಾತ್ರವೆಂದು (ನಾವು) ಇಷ್ಟಪಡುವೆವಾದರೂ, ಜ್ಞಾನದಂತೆ ಜ್ಞಾನವುಂಟಾದ ನಂತರ ಅದೂ (ನಿಜವಾಗಿರತಕ್ಕದ್ದೆಂದು) ಒಪ್ಪುವುದಿಲ್ಲ. (ಬೃ.ವಾ ೩-೩-೪೧) ಎಂದಿದ್ದಾರೆ. ಆದ್ದರಿಂದ ಅಧ್ಯಾಸವಾಗಿದ್ದರೂ ಅದು ಅನಾದಿಯೆಂಬುದು ವಿರುದ್ಧವಲ್ಲ. ಇನ್ನು ಅದು ಪ್ರತ್ಯಯದಿಂದ ಹೀಗೆ ಕರೆಸಿಕೊಂಡಿದೆ ಎಂಬುದೇನಿದೆ, "ತತ್ ಪ್ರತೀಯತೇ ಅನೇನ" ಅದು ಇದರಿಂದ ತೋರಿಬರುತ್ತದೆ ಎಂಬ ವ್ಯುತ್ಪತ್ತಿಯಿಂದ ಚೈತನ್ಯದಿಂದ ಸೇರಿಕೊಂಡಿದೆಯಾದ್ದರಿಂದ ಚಿದಾಭಾಸವಾಗಿದೆ ಎಂಬ ಅಭಿಪ್ರಾಯದಿಂದ ಹೇಳಿದ್ದೇ ಹೊರತು ಅಂತಃಕರಣದ ವೃತ್ತಿಯಾಗಿದೆ ಎಂಬ ಅಭಿಪ್ರಾಯದಿಂದಲ್ಲ ಎಂದಾದ್ದರಿಂದ ಇಲ್ಲಿ ವಿರೋಧವಿಲ್ಲ. ಅಧ್ಯಾಸವು ಪ್ರಾಗಭಾವದಂತೆ ಅನಾದಿಯಾದ ಹಿಂದಿನಕಾಲವುಳ್ಳದ್ದೆಂಬ ಅಭಿಪ್ರಾಯದಿಂದ ಅನಾದಿಯಾದದ್ದೆಂದು ನಾವು ಹೇಳುತ್ತಿಲ್ಲ, ಮತ್ತೇನೆಂದರೆ ಕಾಲಾದಿಗಳೂ ಅಧ್ಯಾಸದ ಕಾರ್ಯವಾದ್ದರಿಂದ

ಯುದಪ್ಯುಕ್ತಂ **ವಾರ್ತಿಕಕಾರೈಃ** – "ತದೇತನ್ನಿತ್ಯಮಜ್ಞಾನಂ ತಜ್ಜಕಾಲಾದ್ಯನಾಪ್ಲುತೇಃ । ಸರ್ವಕಾಲಾನುವರ್ತ್ಯೇವ ಲೋಕೇ ನಿತ್ಯಮಿತೀರ್ಯತೇ ॥" (ಬೃ.ವಾ. ೧-೪-೩೫೮) ಇತಿ ॥ ಯಸ್ಯ ತು ಬಂಧಕಾರಣಮಜ್ಞಾನಂ ಸಹೇತುಕಮ್ ತಸ್ಯ ಮೋಕ್ಷಪ್ರತ್ಯಾಶಾ ದೂರತೋ ಭವತಿ । **ಯಥೋಕ್ತಮ್** – "ಆಗಂತು ಚೇದಿಹಾಜ್ಞಾನಮನಿರ್ಮೋಕ್ಷಃ ಪ್ರಸಜ್ಯತೇ । ಪುರೇವಾಽನಾಗತಂ ಭೂಯೋ ನೇಷ್ಯತೀತ್ಯತ್ರ ಕಾ ಪ್ರಮಾ ॥" (ಬೃ. ವಾ. ೧-೪-೩೬೧) ಇತಿ ॥

ಅತ ಏವ ಕಾಲಾದ್ಯನಾಪ್ಲುತೇರಧ್ಯಾಸಸ್ಯ ತತ್ಕಾರ್ಯಸ್ಯ ಸಂಸಾರಸ್ಯ ಚಾನನ್ತತ್ವಮಪ್ಯುಪಪದ್ಯತೇ । ಅಧ್ಯಾಸತ್ವಾದೇವ ಚಾಸ್ಯ ಯಾವತ್ ಸ್ವಾಪಬಾಧಕಜ್ಞಾನೋದಯಮನುವೃತ್ತಿಃ । ಅಧ್ಯಾಸದೃಷ್ಟ್ಯೈವ ಚಾನುವೃತ್ತಿ-

---

ಅದಕ್ಕೆ ಕಾಲದಿಂದಾದ ಪರಿಚ್ಛೇದವೆಂಬುದಿರುವುದಿಲ್ಲ. ಇದನ್ನೂ ವಾರ್ತಿಕಕಾರರು ಹೇಳಿರುತ್ತಾರೆ – "ಆ ಈ ಅಜ್ಞಾನವು ತನ್ನಿಂದುಂಟಾದ ಕಾಲದಿಂದ ಹೋಗುವುದಿಲ್ಲವಾದ್ದರಿಂದ ನಿತ್ಯವಾಗಿರುವಂಥದ್ದು, ಲೋಕದಲ್ಲಿ ಎಲ್ಲಾ ಕಾಲದಲ್ಲಿ ಯಾವುದು ತೋರುವುದದೋ ಅದನ್ನು ನಿತ್ಯವೆಂದು ಹೇಳುತ್ತಾರೆ" (ಬೃ.ವಾ. ೧-೪-೩೫೮). ಯಾವಾತನಿಗೆ ಬಂಧಕ್ಕೆ ಕಾರಣವಾದ ಅಜ್ಞಾನವೂ ಕಾರಣವಾಗಿ ಉಳ್ಳದ್ದಾಗಿದೆಯೋ ಅವನಿಗೆ ಮೋಕ್ಷದ ಆಶೆಯು (ಬಹಳ) ದೂರವಾದದ್ದೇ (ಸರಿ). ಇದನ್ನೂ ಸಹ (ಬೃ.ವಾ.ದಲ್ಲಿ) ಹೇಳಿದೆ. ಇಲ್ಲಿ "(ಸಂಸಾರದಲ್ಲಿ) – ಅಜ್ಞಾನವೆಂಬುದು ಆಗಂತುಕವಾದದ್ದು ಎಂದಾದರೆ ಮೋಕ್ಷವೇ ಇಲ್ಲವೆಂದಾಗುತ್ತದೆ. ಏಕೆಂದರೆ ಹಿಂದಿನಂತೆ, ಬರದೇ ಇದ್ದದ್ದು ಬಂದಿರುವಂತೆ ಹೋದಮೇಲೂ ಬರುವುದಿಲ್ಲ ಎಂಬುದಕ್ಕೆ ಏನು ಆಧಾರ?" (ಬೃ.ವಾ. ೧-೪-೩೬೧).

ಆದ್ದರಿಂದಲೇ ಕಾಲಾದಿಗಳಿಂದ ಅಧ್ಯಾಸವು ನಾಶವಾಗುವುದಿಲ್ಲವಾದ್ದ-ರಿಂದಲೇ ಅದರ ಕಾರ್ಯವಾದ ಸಂಸಾರವೂ ಅನಂತವಾಗಿದೆ ಎಂಬುದೂ ಹೊಂದುತ್ತದೆ. ಅಧ್ಯಾಸವಾದ್ದರಿಂದಲೇ ಇದು ಈ (ಅಜ್ಞಾನ) ನಿದ್ರೆಯನ್ನು ಬಾಧೆಮಾಡುವ ಜ್ಞಾನೋದಯವಾಗುವವರೆಗೂ ಅನುವೃತ್ತವಾಗಿಯೇ ಇರುತ್ತದೆ. ಅನುವೃತ್ತಿಯಾಗಿ ಇರುತ್ತದೆ, ಬಾಧೆಯಾಗುತ್ತದೆ ಎಂಬುದೆರಡೂ

ಬಾಧಾವಪೀತ್ಯನನ್ತತಾ ಜ್ಞಾನೇನ ಬಾಧಶ್ಚೇತ್ಯುಭಯಮುಪಪದ್ಯತೇ । ತಥಾ ಹಿ **ಭಗವಾನ್ ಸೂತ್ರಕಾರೋ** ವಕ್ಷ್ಯತಿ "ಯಾವದಾತ್ಮಭಾವಿತ್ವಾಚ್ಚ ನ ದೋಷಸ್ತದ್ದರ್ಶನಾತ್" (ವೇ.ಸೂ. ೨-೩-೩೦) ಇತಿ । ಯದ್ಯಪಿ ಸುಷುಪ್ತಿ-ಸಮಾಧ್ಯಾದಿಷು ಮಿಥ್ಯಾಪ್ರತ್ಯಯಸನ್ತಾನವಿಚ್ಛೇದ ಏವ ಭವತಿ ವಸ್ತುತಃ । ತದಪೇಕ್ಷಯಾ ಚ ಜೀವಸ್ಯ ಸತ್ಸಂಪತ್ತಿಃ ಶ್ರೂಯತೇ ಸ್ವಾಪಕಾಲೇ – "ಸತಾ ಸೋಮ್ಯ ತದಾ ಸಂಪನ್ನೋ ಭವತಿ" (ಛಾ. ೬-೮-೧) ಇತಿ । ತಥಾಪ್ಯ-ವಿವೇಕಿನಾಂ ನೈತತ್ತತ್ತ್ವಂ ಚಿತ್ತಮಾರೋಹತಿ । ಅತ ಏವ ಹಿ ತಾಸ್ವವಸ್ಥಾಸು ವಿಷಯಾನುಭವಾಭಾವೇನ ಸ್ಫುಟತರಪ್ರತಿಭಾಸಾಭಾವೇಽಪ್ಯಪ್ರಬೋಧಮಹ-ಮಿತ್ಯೇವಾತ್ಮಾ ಸ್ಫುರತೀತಿ ಕೇಷಾಂಚಿನ್ಮಿಥ್ಯಾಗ್ರಹಃ । ತದೇತದ್ವಕ್ಷ್ಯತಿ **ಭಗವಾನ್ ಭಾಷ್ಯಕಾರೋಽಪಿ** – "ಅಪಿ ಚ ಮಿಥ್ಯಾಜ್ಞಾನಪುರಸ್ಸರೋಽಯಮಾತ್ಮನೋ ಬುದ್ಧ್ಯುಪಾಧಿಸಂಬನ್ಧಃ । ನ ಚ ಮಿಥ್ಯಾಜ್ಞಾನಸ್ಯ ಸಮ್ಯಗ್ಜ್ಞಾನಾದನ್ಯತ್ರ ನಿವೃತ್ತಿರಸ್ತೀತ್ಯತೋ ಯಾವದ್ಬ್ರಹ್ಮಾನವಬೋಧಸ್ತಾವದಯಂ ಬುದ್ಧ್ಯುಪಾಧಿ-

---

ಅಧ್ಯಾಸದೃಷ್ಟಿಯಿಂದಲೇ ಎಂತಾದ್ದರಿಂದ ಅನಂತವಾಗಿದೆ, ಜ್ಞಾನದಿದಿಂದ ಬಾಧೆಯಾಗುತ್ತದೆ ಎಂಬುದೆರಡೂ ಹೊಂದುತ್ತದೆ. ಹಾಗೆಯೇ ಭಗವಂತರಾದ ಸೂತ್ರಕಾರರೂ ಹೇಳಿರುತ್ತಾರೆ. "ಎಲ್ಲಿಯವರೆಗೆ ಆತ್ಮಾಭಿಮಾನವಿರುತ್ತದೋ ಅಲ್ಲಿಯವರೆಗೂ ಸಂಸಾರವಿದ್ದೇ ಇರುತ್ತದೆಯಾದ್ದರಿಂದ (ಇಲ್ಲಿ) ದೋಷ-ವೇನಿಲ್ಲ" (ವೇ.ಸೂ .೨-೩-೩೦) ಸುಷುಪ್ತಿ ಸಮಾಧಿ ಮುಂತಾದ ಅವಸ್ಥೆಗಳಲ್ಲಿ ಮಿಥ್ಯಾಪ್ರತ್ಯಯದ ಪ್ರವಾಹವು ನಿಜವಾಗಿ ಕಡಿದು ಹೋಗುತ್ತದೆಯಾದರೂ, ಇದರ ದೃಷ್ಟಿಯಿಂದಲೇ ನಿದ್ರಾಕಾಲದಲ್ಲಿ ಜೀವನಿಗೆ ಸತ್ಸಂಪತ್ತಿಯನ್ನು (ಶ್ರುತಿಯಲ್ಲಿ) ಹೇಳಿರುತ್ತದೆ. "ಆಗ ಸತ್ತಿನೊಡನೆ ಒಂದಾದವನಾಗಿರುತ್ತಾನೆ", (ಛಾಂ ೬-೮-೧) ಎಂದಿದ್ದರೂ ಅವಿವೇಕಿಗಳಿಗೆ ಈ ತತ್ತ್ವವು ಮನಸ್ಸಿಗೆ ಹತ್ತುವುದಿಲ್ಲ. ಆದ್ದರಿಂದಲೇ ಆ ಅವಸ್ಥೆಗಳಲ್ಲಿ ವಿಷಯಾನುಭವವಿಲ್ಲವಾಗಿ ಸ್ಪಷ್ಟವಾಗಿ ತೋರದೇಹೋದರೂ ಜ್ಞಾನವಾಗುವವರೆಗೂ ಆತ್ಮನು ನಾನು ಎಂದೇ ತೋರುತ್ತಿರುತ್ತಾನೆ ಎಂದು ಕೆಲವರು ಹಠಹಿಡಿಯುತ್ತಾರೆ. ಇದನ್ನು ಭಗವಂತರಾದ ಭಾಷ್ಯಕಾರರು ಹೇಳುತ್ತಾರೆ – "ಆತ್ಮನಿಗೆ ಬುದ್ಧ್ಯಾದಿಗಳ ಸಂಬಂಧವು ಮಿಥ್ಯಾಜ್ಞಾನದಿಂದಾದದ್ದು, (ಆ)ಮಿಥ್ಯಾಜ್ಞಾನವು ಸಮ್ಯಜ್ಞಾನವಿಲ್ಲದೇ ತೊಲಗುವುದೆಂಬುದಿಲ್ಲ, ಆದ್ದರಿಂದ ಎಲ್ಲಿಯವರೆಗೆ

ಸಂಬನ್ಧೋ ನ ಶಾಮ್ಯತಿ" (ಸೂ.ಭಾ. ೨-೩-೩೦, ಭಾ.ಭಾ ೧೪೧) ಇತಿ। ತದೇವಂ ಮಿಥ್ಯಾಪ್ರತ್ಯಯರೂಪತ್ವೇಽಪಿ ಕಾಲಾದ್ಯಪರಿಚ್ಛೇದಾತ್ ಪ್ರಕೃತಸ್ಯಾ-ಧ್ಯಾಸಸ್ಯಾನಾದಿತ್ವಮನನ್ತತ್ವಂ ಚ ನಾನುಪಪನ್ನಮಿತಿ ಸ್ಥಿತಮ್ ॥

**೫೮. ವಿಶೇಷಣತ್ರಯಸ್ಯೈಕದೇಶಿನಾಂ ವ್ಯಾಖ್ಯಾನಂ ತನ್ನಿರಾಕೃತಿಶ್ಚ** – ಅತ್ರ ಕೇಚಿತ್ "ಪೂರ್ವಬುದ್ಧ್ಯಧ್ಯಾಸಾತ್ ಸಂಸ್ಕಾರಾದ್ಯಧ್ಯಾಸಃ, ತತಸ್ತಾದೃ-ಗುತ್ತರಬುದ್ಧ್ಯಧ್ಯಾಸ ಇತಿ ಪ್ರವಾಹಾತ್ಮನಾ ಪ್ರವಾಹ್ಯುಪಾದಾನಜಾಡ್ಯಾತ್ಮನಾ ವಾ ಅನಾದಿತ್ವಮ್" ಇತ್ಯನಾದಿತ್ವಮ್, "ಉಪಾದಾನಸ್ಯ ಮಾಯಾಶಕ್ತಿತಯಾ ಜಡಸ್ಯ ಚೈತನ್ಯಸತ್ತ್ವಾನುಬನ್ಧಿತ್ವಾದಧಿಷ್ಠಾನಧೀಬಾಧ್ಯತ್ವಂ ಸಿದ್ಧವತ್ಕೃತ್ಯ 'ನೈಸರ್ಗಿಕ' ಇತ್ಯುಕ್ತಮ್" ಇತಿ ನೈಸರ್ಗಿಕತ್ವಂ ಚೋಪಪಾದ್ಯ ಮಿಥ್ಯಾಧೀಹೇತುತ್ವೇನ ತಾದಾತ್ಮ್ಯಮಾಹ "ಮಿಥ್ಯೇತಿ" । ಕಾರಣಾಧ್ಯಾಸೋ

---

ಬ್ರಹ್ಮಜ್ಞಾನವಾಗುವುದಿಲ್ಲವೋ ಅಲ್ಲಿಯವರೆಗೂ ಈ ಬುದ್ಧ್ಯಾದಿಗಳ ಸಂಬಂಧವು ತಪ್ಪುವುದಿಲ್ಲ" (ಸೂ.ಭಾ ೨-೩-೨೦). ಹೀಗೆ ಇದು ಮಿಥ್ಯಾಪ್ರತ್ಯಯರೂಪವಾದರೂ ಕಾಲಾದಿಗಳಿಂದ ಪರಿಚ್ಛಿನ್ನವಾಗಿಲ್ಲವಾದ್ದರಿಂದ ಈ ಅಧ್ಯಾಸವು ಅನಾದಿಯಾದದ್ದೂ, ಅನಂತವಾದದ್ದೂ ಎಂಬುದು ಹೊಂದದೇ ಇರುವದಲ್ಲ.

**೫೮. (ಅನಾದಿರನನ್ತೋ ಮಿಥ್ಯಾಪ್ರತ್ಯಯವೆಂಬ) ಮೂರು ವಿಶೇಷಣಕ್ಕೂ ಏಕದೇಶಿಗಳ ವ್ಯಾಖ್ಯಾನ ಮತ್ತು ಅದರ ನಿರಾಕರಣೆ** – ಇಲ್ಲಿ ಕೆಲವರು ಹಿಂದಿನ ಬುದ್ಧಿಯ ಅಧ್ಯಾಸದಿಂದ ಸಂಸ್ಕಾರವೇ ಮುಂತಾದ ಅಧ್ಯಾಸವೆಂತಲೂ ಆಮೇಲೆ ಅದರಂತಿರುವ ಮುಂದಿನ ಬುದ್ಧಿಯ ಅಧ್ಯಾಸವಾದ್ದರಿಂದ ಪ್ರವಾಹರೂಪದಿಂದಲಾಗಲೀ ಪ್ರವಾಹಿಗೆ ಉಪಾದಾನವಾದ ಜಾಡ್ಯಸ್ವರೂಪದಿಂದಲಾಗಲೀ ಅನಾದಿತ್ವವು (ಬಂದಿದೆ ಎಂದು) ಅನಾದಿತ್ವವನ್ನು (ಹೇಳಿದೆ ಎಂದೂ) ಉಪಾದಾನವು ಮಾಯಾಶಕ್ತಿಯಾದ್ದರಿಂದ ಜಡವು ಚೈತನ್ಯದ ಇರುವಿಕೆಯಿಂದ ಕೂಡಿದ್ದಾಗಿರುವದರಿಂದ, ಅಧಿಷ್ಠಾನವಾದ ಬುದ್ಧಿಯಿಂದ ಬಾಧ್ಯವಾದದ್ದೆಂದು ಸಿದ್ಧವಾದಂತೆಯೇ ಇಟ್ಟುಕೊಂಡು "ನೈಸರ್ಗಿಕ" ಎಂದು ಹೇಳಿದೆಯಾದ್ದರಿಂದ ನೈಸರ್ಗಿಕತ್ವವನ್ನು ಹೊಂದಿಸಿ ಮಿಥ್ಯಾಬುದ್ಧಿಗೆ ಕಾರಣವಾದ್ದರಿಂದ "ಮಿಥ್ಯೆ" ಎಂದು ತಾದಾತ್ಮ್ಯವನ್ನು

ಹಿ ಕಾರ್ಯಾಧ್ಯಾಸಸ್ಯ ಹೇತುರಿತ್ಯಧ್ಯಾಸಸ್ಯ ಮಿಥ್ಯಾಪ್ರತ್ಯಯತ್ವಮಿತ್ಯರ್ಥಃ । ಲಕ್ಷಣತಸ್ತಥಾ ರೂಪ್ಯತೇ । ನ ಪ್ರತೀಯತೇ ಇತಿ ರೂಪಗ್ರಹಣಮ್ । ಮಿಥ್ಯಾಪ್ರತ್ಯಯಾನಾಂ ರೂಪಮನಿರ್ವಾಚ್ಯತ್ವಂ ಯಸ್ಯ ಸ ತಥೇತ್ಯ-ನಿರ್ವಾಚ್ಯತ್ವಮ್ ವ್ರೋಚ್ಯತೇ । ಯದ್ವಾ ಮಿಥ್ಯಾಭೂತಾಽಖಂಡ ಜಡಶಕ್ತಿಸ್ತ-ನ್ಮಾತ್ರತ್ವೇನ ಅಧ್ಯಾಸಪ್ರತ್ಯಯೋ ರೂಪ್ಯತೇ । ನ ಹಿ "ಕಾರಣಾದೃತೇ ಕಾರ್ಯಸ್ಯ ರೂಪಮಸ್ತಿ" ಇತಿ ಬಹುಧಾ ವಿಕಲ್ಪ್ಯ ಮಿಥ್ಯಾಪ್ರತ್ಯಯರೂಪತ್ವಂ ವ್ಯಾಚಖ್ಯುಃ(ನ್ಯಾ.ನಿ. ಪು ೨೫) । ಅಪರೇ ತು "ಮಿಥ್ಯಾ ಮಾಯಾ, ತಯಾ ಪ್ರತೀಯತ ಇತಿ ಪ್ರತ್ಯಯಃ ಕಾರ್ಯಪ್ರಪಂಚಸ್ತತ್ಪ್ರತೀತಿಶ್ಚೇತ್ಯೇವಂಸ್ವರೂಪಃ" ಇತಿ ಮಿಥ್ಯಾಪ್ರತ್ಯಯರೂಪತ್ವಂ ವರ್ಣಯಾಮಾಸುಃ(ರ.ಪ್ರ. ಪು ೨೫) । ತದೇತತ್ಸರ್ವಂ ವ್ಯಾಖ್ಯಾನಜಾಲಂ ಕಾರ್ಯಕಾರಣಾಧ್ಯಾಸದ್ವಯನಿರಾಕರಣೇನ,

---

ಹೇಳುತ್ತಿದೆ. ಕಾರಣಾಧ್ಯಾಸವು ಕಾರ್ಯಧ್ಯಾಸಕ್ಕೆ ಕಾರಣವಾದ್ದರಿಂದ ಅಧ್ಯಾಸವನ್ನು ಮಿಥ್ಯಾಪ್ರತ್ಯಯ-ವಾಗಿದೆ ಎಂದು ಹೇಳಿದೆ ಎಂದರ್ಥವು, (ಮಿಥ್ಯಾಪ್ರತ್ಯಯರೂಪಾಃ ಎಂಬಲ್ಲಿ) "ರೂಪ" ವೆಂಬ ಮಾತಿಗೆ ಲಕ್ಷಣೆಯಿಂದ ಅದು ಆ ರೀತಿ ನಿರೂಪಿಸಿದೆ ಹೊರತು ಹಾಗೇನೂ ಅದು ತೋರುವುದಿಲ್ಲ ಆದ್ದರಿಂದ "ರೂಪ" ಎಂದು ಗ್ರಹಿಸಿದೆ. ಮಿಥ್ಯಾಪ್ರತ್ಯಯಗಳ ರೂಪವು ಅನಿರ್ವಾಚ್ಯವೆಂಬುದು ಯಾವುದಕ್ಕೋ ಅದು (ಹಾಗೆ ಇರುವುದಾ)ದ್ದರಿಂದ ಅನಿರ್ವಾಚ್ಯವೆಂದು ಹೇಳಲ್ಪಟ್ಟಿದೆ, ಅಥವಾ ಮಿಥ್ಯೆಯಾದ ಅಖಂಡವಾದ ಜಡಶಕ್ತಿಯು, ಅಷ್ಟು ಮಾತ್ರದಿಂದಲೇ ಪ್ರತ್ಯಯವು ನಿರೂಪಿಸಿದೆ (ಎಂದೂ ಹೇಳಬಹುದು), ಕಾರಣವಿಲ್ಲದ ಕಾರ್ಯಕ್ಕೆ ರೂಪವಿಲ್ಲವಷ್ಟೆ? ಆದ್ದರಿಂದ ಇದನ್ನು ಬಹಳವಾಗಿ ವಿಕಲ್ಪಿಸಿ ಮಿಥ್ಯಾಪ್ರತ್ಯಯರೂಪವಾಗಿದೆ ಎಂದು ವ್ಯಾಖ್ಯಾನಿಸಿದ್ದಾರೆ. ಇನ್ನುಕೆಲವರು "ಮಿಥ್ಯಾಪ್ರತ್ಯಯರೂಪ ಎಂಬುದನ್ನು ಹೇಗೆ ವರ್ಣಿಸುತ್ತಾರೆಂದರೆ – "ಮಿಥ್ಯೆ ಎಂದರೆ ಮಾಯೆ, ಅದರಿಂದ ತೋರುತ್ತದೆಯಾದ್ದರಿಂದ ಪ್ರತ್ಯಯವು ಎಂದರೆ ಕಾರ್ಯಪ್ರಪಂಚವು, ಅದರ ತೋರಿಕೆಯಾಗಿದೆ ಎಂಬೀ ರೂಪವು" ಎಂದು ಮಿಥ್ಯಾಪ್ರತ್ಯರೂಪವಾಗಿದೆ ಎಂಬುದನ್ನು ವರ್ಣಿಸುತ್ತಾರೆ. ಈ ಎಲ್ಲಾ ವ್ಯಾಖ್ಯಾನಜಾಲವನ್ನೂ ಕಾರ್ಯಕಾರಣಾಧ್ಯಾಸವೆಂಬ ಎರಡು ಅಧ್ಯಾಸವನ್ನು ಅಲ್ಲಗಳೆಯುವದ-

ಅನಿರ್ವಚನೀಯವಸ್ತೂತ್ಪತ್ತಿನಿರಾಕರಣೇನ ಚ ನಿರಾಕೃತಪ್ರಾಯಮಿತ್ಯುಪೇಕ್ಷ್ಯತೇ । ಅನ್ಯೋನ್ಯಾವಿವೇಕನಿಬನ್ಧನ ಏವಧ್ಯಾಸ ಇತಿ, "ಬೀಜಾಙ್ಕುರಾದಿವದವಿದ್ಯಾಕೃತಃ ಸಂಸಾರ ಆತ್ಮನಿ ಕ್ರಿಯಾಕಾರಕಫಲಾಧ್ಯಾರೋಪಲಕ್ಷಣ ಅನಾದಿರನನ್ತೋಽನರ್ಥಃ" (ಬೃ. ಭಾ. ಅವ–೫) ಇತಿ ಚ ಬ್ರುವತಾ ಭಾಷ್ಯಕಾರೇಣಾಪಿ ಕಾರ್ಯಕಾರಣಾವಿದ್ಯಾದ್ವಯಮಪ್ಯಙ್ಗೀಕೃತಮಿವ ಲಕ್ಷ್ಯತೇ । "ನಾಮರೂಪೇ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇ" (ಸೂ.ಭಾ. ೨–೧–೧೪ ಭಾ.ಭಾ.೪೪೦) ಇತಿ ಬ್ರುವತಾ ಅನಿರ್ವಚನೀಯಪರಿಭಾಷಾ ಚ ।ತಥಾಪ್ಯವಿದ್ಯಾಧ್ಯಾಸಯೋರುಪಾದಾನೋಪಾದೇಯಭಾವೋಽವಿದ್ಯಾಪರಿಣಾಮೇನಾನಿರ್ವಚನೀಯಜ್ಞಾನ ಜ್ಞೇಯಯೋರ್ಜನಿಶ್ಚಾಧುನಾತನವೇದಾನ್ತ್ಯುಪದಿಷ್ಟೋ ನೈವಾ ಚಾರ್ಯಾಭೀಷ್ಟ ಇತಿ ಪ್ರಾಗೇವಾವೇದಿತಮಿತ್ಯವಿರೋಧಃ । ತಸ್ಮಾದನಾದಿರನನ್ತೋ

---

ರಿಂದಲೂ, ಅನಿರ್ವಚನೀಯವಾದ ವಸ್ತುವು ಉತ್ಪತ್ತಿಯಾಗುತ್ತದೆ ಎಂಬುದರ ನಿರಾಕರಣೆಯಿಂದಲೂ ಬಹಳ ಮಟ್ಟಿಗೆ ನಿರಾಕರಣೆ ಮಾಡಿದಂತಾಯಿತೆಂದು ತಿಳಿದು ತಾತ್ಸಾರಮಾಡತಕ್ಕದ್ದು. ಅವಿವೇಕವನ್ನು ಕಟ್ಟುವಡೆದದ್ದೇ ಆದರೂ ಅಧ್ಯಾಸವು "ಬೀಜಾಂಕುರದಂತೆ ಸಂಸಾರವೆಂಬುದು ಅವಿದ್ಯೆಯಿಂದಾದದ್ದು, ಅದು ಆತ್ಮನಲ್ಲಿ ಕ್ರಿಯಾಕಾರಕಫಲವನ್ನು ಹುಟ್ಟುಹಾಕುವ ರೂಪವಾಗಿದ್ದು, ಅನಾದಿನನ್ತವಾದ ಅನರ್ಥವು", (ಬೃ.ಭಾ.ಅವ–೫) ಎಂದು ಹೇಳುತ್ತಿರುವ ಭಾಷ್ಯಕಾರರೂ ಸಹ ಕಾರ್ಯಕಾರಣಾವಿದ್ಯೆಯೆಂಬ ಎರಡು ಅವಿದ್ಯೆಯನ್ನು ಒಪ್ಪಿಕೊಂಡಿರುವಂತೆ ತೋರಿರುತ್ತದೆ, ಹಾಗೆಯೇ ಅನಿರ್ವಚನೀಯದ ಪರಿಭಾಷೆಯನ್ನು– "ತತ್ತ್ವವೆಂತಾಗಲೀ ಬೇರೆಯೆಂತಾಗಲೀ ಹೇಳುವುದಕ್ಕೆ ಬಾರದ ನಾಮರೂಪಗಳು" (ಸೂ.ಭಾ. ೨–೧–೧೪) ಎಂದು ಒಪ್ಪಿಕೊಂಡಂತೆ ತೋರುತ್ತದೆ. ಆದರೂ ಈ ಅವಿದ್ಯೆ ಮತ್ತು ಅಧ್ಯಾಸಗಳಿಗೆ ಉಪಾದಾನ ಮತ್ತು ಉಪಾದೇಯ ಭಾವವೂ, ಅವಿದ್ಯೆಯ ಪರಿಣಾಮದಿಂದ ಅನಿರ್ವಚನೀಯವಾದ ಜ್ಞಾನಜ್ಞೇಯಗಳ ಉತ್ಪತ್ತಿಯೂ, ಇದು ಈಚಿನ ವೇದಾಂತಿಗಳಿಗೆ ಮಾತ್ರ ಇಷ್ಟವಾದದ್ದು, ಇದು ಆಚಾರ್ಯರಿಗೆ ಮಾತ್ರ ಒಪ್ಪಿಗೆಯಾಗಿಲ್ಲ ಎಂಬುದನ್ನು ಹಿಂದೆಯೇ ನಾವು ತಿಳಿಸಿಕೊಟ್ಟಿರುತ್ತೇವಾದ್ದ–

ಮಿಥ್ಯಾಪ್ರತ್ಯಯರೂಪ ಇತ್ಯಸ್ಯ ಯಥಾಶ್ರುತ ಏವಾರ್ಥಃ, ನ ಕಶ್ಚಿದಪೂರ್ವಃ ಕಲ್ಪನೀಯ ಇತ್ಯಲಂ ವಿಸ್ತರೇಣ ॥

**೫೯. ಅಧ್ಯಾಸಸ್ಯ ಕರ್ತೃತ್ವಭೋಕ್ತೃತ್ವಪ್ರವರ್ತಕತ್ವಮ್** – ಉಕ್ತಾಧ್ಯಾಸಸ್ಯಾನರ್ಥಹೇತುತಾಮಾವಿಷ್ಕರ್ತುಂ ವಿಶೇಷಣಮ್ – **ಕರ್ತೃತ್ವ-ಭೋಕ್ತೃತ್ವಪ್ರವರ್ತಕ** ಇತಿ । ಉಕ್ತಮೇತದ್ಯಥಾ ಜ್ಞಾತೃತ್ವಮೇವ ತಾವದಧ್ಯಾಸಪ್ರತ್ಯುಪಸ್ಥಾಪಿತಮಿತಿ । ತೇನ ಜ್ಞಾನಕರ್ತೃತ್ವವತ್ ಸರ್ವ-ಕ್ರಿಯಾಕರ್ತೃತ್ವಮಪ್ಯಾಧ್ಯಾಸಿಕಮಿತ್ಯುಕ್ತಮೇವ ಭವತಿ । ಜ್ಞಾನಪೂರ್ವಕತ್ವಾತ್ ಸರ್ವಾಸಾಂ ಕ್ರಿಯಾಣಾಮ್ । ಜ್ಞಾತಾ ಹಿ ಬಾಹ್ಯವಸ್ತುಷು ಶೋಭನಾ-ಶೋಭನಾಧ್ಯಾಸಪೂರ್ವಕಂ ತತ್ರೇಚ್ಛಾದ್ವೇಷಪ್ರಯುಕ್ತಃ ಕ್ರಿಯಾಸು ಪ್ರವರ್ತತೇ। ಭೋಕ್ತೃತ್ವಂ ಚ ಸುಖದುಃಖಸಂವೇದನಲಕ್ಷಣಮಿಚ್ಛಾದ್ವೇಷಯೋಃ ಸರ್ವಾನರ್ಥಕಾರಣಯೋಃ ಪ್ರಯೋಜಕಮ್ । ತದಪಿ ಭೋಕ್ತೃತ್ವಂ

---

ರಿಂದ ಇಲ್ಲಿ ಏನೂ ವಿರೋಧವಿಲ್ಲ. ಆದ್ದರಿಂದ "ಅನಾದಿರನನ್ತೋ ಮಿಥ್ಯಾ-ಪ್ರತ್ಯಯರೂಪಃ" ಎಂಬುದಕ್ಕೆ ನಾವು ಹೇಗೆ ಅರ್ಥವನ್ನು ಮಾಡಿರುತ್ತೇವೆಯೋ ಹಾಗೆಯೇ ಅದರ ಅರ್ಥವು, ಇಲ್ಲಿ ಯಾವುದೊಂದು ಹೊಸದನ್ನೂ ಕಲ್ಪಿಸಬೇಕಾಗಿಲ್ಲ ಎಂದಾದ್ದರಿಂದ ಇಲ್ಲಿಗೆ ವಿವರಣೆಯು ಸಾಕು.

**೫೯. ಅಧ್ಯಾಸವು ಕರ್ತೃತ್ವಭೋಕ್ತೃತ್ವವನ್ನುಂಟುಮಾಡುವುದು** – ಮೇಲೆ ಹೇಳಿದ ಅಧ್ಯಾಸವು ಅನರ್ಥಕ್ಕೆ ಹೇತುವಾಗಿದೆ ಎಂಬುದನ್ನು ತೋರಿಸಲು "ಕರ್ತೃತ್ವಭೋಕ್ತೃತ್ವ" ಎಂಬ ವಿಶೇಷಣವುಬಂದಿದೆ. ಜ್ಞಾತೃತ್ವವೂ ಅಧ್ಯಾಸದಿಂದ ಮುಂದೊಡ್ಡಿದ್ದೆಂಬುದನ್ನು ಹಿಂದೆ ಹೇಳಲಾಗಿದೆ. ಇದರಿಂದ (ಏನು ಸಿದ್ಧವಾಗುತ್ತದೆ ಎಂದರೆ) ಜ್ಞಾನಕ್ಕೆ ಕರ್ತೃ ಎಂಬಂತೆ ಎಲ್ಲಾ ಕ್ರಿಯೆಗೂ "ಕರ್ತೃ"ಎಂಬುದು ಅಧ್ಯಾಸದಿಂದಲೇ ಆದದ್ದು (ಎಂದು ಹೇಳಿದಂತಾಗುತ್ತದೆ). ಏಕೆಂದರೆ ಎಲ್ಲಾ ಕ್ರಿಯೆಗಳು ಜ್ಞಾನ ಪೂರ್ವಕವಾಗಿಯೇ ಆಗಬೇಕಾಗಿದೆ. ಜ್ಞಾತೃವಾದವನು ಹೊರಗಿನ ವಸ್ತುಗಳಲ್ಲಿ ಶೋಭನಾ-ಶೋಭನವನ್ನು ಕಲ್ಪಿಸಿಕೊಳ್ಳುವ ಮೂಲಕ ಅದರಲ್ಲಿ ಇಚ್ಛಾದ್ವೇಷದಿಂದ ಪ್ರೇರಿತನಾಗಿ ಕ್ರಿಯೆಯಲ್ಲಿ ತೊಡಗುತ್ತಾನೆ. ಭೋಕ್ತೃತ್ವವು ಎಲ್ಲಾ ಅನರ್ಥಕ್ಕೂ ಕಾರಣವಾದ ಸುಖದುಃಖಗಳನ್ನನುಭವಿಸುವ ಇಚ್ಛಾದ್ವೇಷಗಳಿಗೆ

ದೇಹೇನ್ದ್ರಿಯಾನ್ತಃಕರಣವತ ಏವ ವಿಷಯೇಷು ಪ್ರವೃತ್ತಸ್ಯೋಪಪದ್ಯತ ಇತ್ಯಾಧ್ಯಾಸಿಕಮೇವ । ತದೇವಂ ಕರ್ತೃತ್ವಭೋಕ್ತೃತ್ವರೂಪಮಾತ್ಮನೋ ನ ಸ್ವಾಭಾವಿಕಂ ಯಥಾಹುರ್ನೈಯಾಯಿಕಾದಯಃ । ಕಿಂ ತ್ವಾತ್ಮಸ್ವರೂಪ-ಜ್ಞಾನಾಭಾವೇನಾತದ್ರೂಪೇ ತಸ್ಮಿನ್ನಧ್ಯಾರೋಪಿತಮೇವೇತಿ ತದಪನಯ-ನೇನೈವ ಸಂಸಾರಾನರ್ಥೋ ಹೇಯೋ ನಾನ್ಯಥೇತ್ಯಭಿಪ್ರಾಯಃ । ತಥಾ ಚ **ವಕ್ಷ್ಯತಿ** – "ನ ಚಾನಭ್ಯುಪಗಮ್ಯಮಾನೇ ಜ್ಞಾನಗಮ್ಯೇ ಬ್ರಹ್ಮಾತ್ಮತ್ವೇ ಕರ್ತೃತ್ವಭೋಕ್ತೃತ್ವಸ್ವಭಾವಸ್ಯಾಽಽತ್ಮನಃ ಕೈವಲ್ಯಮಾಕಾಙ್ಕ್ಷಿತುಂ ಶಕ್ಯಮ್। ಅಗ್ನ್ಯೌಷ್ಣ್ಯವತ್ಸ್ವಭಾವಸ್ಯಾಽಪರಿಹಾರ್ಯತ್ವಾತ್" (ಸೂ.ಭಾ. ೪–೩–೧೪ ಭಾ.ಭಾ ೫೮೫) ಇತ್ಯಾದಿ ॥

**೬೦. ಅಧ್ಯಾಸಸ್ಯ ಸರ್ವಾನುಭವಸಿದ್ಧತ್ವಮ್** – ಸರ್ವಲೋಕಪ್ರತ್ಯಕ್ಷ ಇತ್ಯಧ್ಯಾಸಸ್ಯ ಸರ್ವಾನುಭವಸಿದ್ಧತ್ವಾತ್ ತತ್ರ ಪ್ರಮಾಣಾನ್ವೇಷಣಾ ವ್ಯರ್ಥ-

---

ಪ್ರೇರಕವಾಗಿದೆ. ಆ ಭೋಕ್ತೃತ್ವವೂ ಸಹ ದೇಹೇಂದ್ರಿಯಾನ್ತಃಕರಣವುಳ್ಳವನಾದ ವಿಷಯದಲ್ಲಿ ತೊಡಗಿದವನಿಗೇ ಹೊಂದುತ್ತದೆಯಾದ್ದರಿಂದ ಅದು ಆಧ್ಯಾಸಿಕವೇ. ನೈಯಾಯಿಕರು ಕರ್ತೃತ್ವಭೋಕ್ತೃತ್ವವನ್ನು ಹೇಗೆ ಸ್ವಾಭಾವಿಕವೆನ್ನುವರೋ ಹಾಗೆ ಆತ್ಮನಿಗೆ ಅವು ಸ್ವಾಭಾವಿಕವಲ್ಲ. ಮತ್ತೇನೆಂದರೆ ಆತ್ಮಸ್ವರೂಪದ ಜ್ಞಾನವಿಲ್ಲದ್ದರಿಂದಲೇ ಅದಲ್ಲದ್ದರಲ್ಲಿ ಅದು ಅಧ್ಯಾರೋಪಿತವೇ ಆಗಿದೆ ಎಂದಾದ್ದರಿಂದ ಅದನ್ನು ಕಳೆದುಕೊಳ್ಳುವುದರಿಂದಲೇ ಸಂಸಾರಾನರ್ಥವು ತೊಲಗುವದು, ಬೇರೊಂದು ರೀತಿಯಿಂದಲ್ಲ ಎಂದಭಿಪ್ರಾಯವು. ಅದೇ ರೀತಿ ಮುಂದೆಯೂ ಹೇಳುವವರಿದ್ದಾರೆ. "ಜ್ಞಾನದಿಂದ ತಿಳಿದುಬರುವ ಬ್ರಹ್ಮಾತ್ಮೈಕತ್ವವನ್ನು ಒಪ್ಪಿಕೊಳ್ಳದೇ ಹೋದರೆ ಕರ್ತೃತ್ವಭೋಕ್ತೃತ್ವ ಸ್ವಭಾವನಾಗಿರುವ ಆತ್ಮನಿಗೆ ಕೈವಲ್ಯವನ್ನು ಬಯಸುವುದಕ್ಕಾಗುವುದಿಲ್ಲ. ಏಕೆಂದರೆ ಅಗ್ನಿಯ ಉಷ್ಣದಂತೆ ಸ್ವಭಾವವಾದದ್ದು ಪರಿಹರಿಸಿಕೊಳ್ಳುವು-ದಕ್ಕಾಗುವುದಿಲ್ಲ" (ಸೂ.ಭಾ. ೪–೩–೧೪).

**೬೦. ಅಧ್ಯಾಸವು ಸರ್ವಾನುಭವದಿಂದ ಸಿದ್ಧವಾದದ್ದು** – ಎಲ್ಲಾ ಜನರಿಗೂ ಪ್ರತ್ಯಕ್ಷವಾದದ್ದು ("ಸರ್ವಲೋಕಪ್ರತ್ಯಕ್ಷಃ") ಎಂದು ಅಧ್ಯಾಸವು ಸರ್ವರ ಅನುಭವದಲ್ಲಿ ಸಿದ್ಧವಾದ್ದರಿಂದ ಅದರ ವಿಷಯಕ್ಕೆ ಪ್ರಮಾಣವನ್ನು

ಪ್ರಯಾಸೇತ್ಯಾಹ । ಅಹಂಮಮೇತಿ ವ್ಯವಹಾರೋ ಹಿ ಸರ್ವಾನುಭವಸಿದ್ಧಃ। ಸ ಚಾಧ್ಯಾಸಂ ವಿನಾ ನೋಪಪದ್ಯತ ಇತಿ ದರ್ಶಿತಂ ಪ್ರಾಕ್ । ತಥಾ ಚೇಮಮಧ್ಯಾಸಂ ವ್ಯಪನೇತುಂ ಶಾಸ್ತ್ರಪ್ರವೃತ್ತಿರವಕಲ್ಪತ ಇತಿ ಭಾವಃ ॥

---

ಹುಡುಕುವ ಆಯಾಸವು ವ್ಯರ್ಥವೆಂದಾಯಿತು. "ನಾನು ನನ್ನದೆಂಬ" ವ್ಯವಹಾರವು ಎಲ್ಲಾಜನರ ಅನುಭವಸಿದ್ಧವಲ್ಲವೆ ? ಅದು ಅಧ್ಯಾಸವಿಲ್ಲದೇ ತೋರುವಹಾಗಿಲ್ಲ ಎಂಬುದನ್ನು ಹಿಂದೆ ತೋರಿಸಿಕೊಟ್ಟದ್ದಾಯಿತು. ಹಾಗೆಯೇ ಈ ಅಧ್ಯಾಸವನ್ನು ಕಳೆಯುವುದಕ್ಕೆ ಶಾಸ್ತ್ರವು ಹೊರಟಿದೆ ಎಂಬುದೂ ಹೊಂದುತ್ತದೆ ಎಂದು ಭಾವ.

**********

## ೯. ಅಥ ಮೀಮಾಂಸಾವತರಣಿಕಾಭಾಷ್ಯಮ್

**ಅಸ್ಯಾನರ್ಥಹೇತೋಃ ಪ್ರಹಾಣಾಯಾತ್ಮೈಕತ್ವವಿದ್ಯಾ-ಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ । ಯಥಾ ಚಾಯಮರ್ಥಃ ಸರ್ವೇಷಾಂ ವೇದಾನ್ತಾನಾಂ ತಥಾ ವಯಮಸ್ಯಾಂ ಶಾರೀರಕಮೀಮಾಂಸಾಯಾಂ ಪ್ರದರ್ಶ-ಯಿಷ್ಯಾಮಃ ॥**

**೬೧. ಅಧ್ಯಾಸವರ್ಣನಂ ನ ಶಾಸ್ತ್ರಸೂತ್ರಸಂಗತಮಿತಿ ಶಙ್ಕಾ –** ಸ್ಯಾದೇತತ್ । ಯದೇತಾವತ್ಪರ್ಯನ್ತಮುಪವರ್ಣಿತಂ ಸಂಸಾರಸ್ಯ ಮಿಥ್ಯಾತ್ವಂ ತದೇತನ್ನ ತಾವಚ್ಛಾಸ್ತ್ರಾರ್ಥಃ । ಸರ್ವಸ್ಯಾಪಿ ಜಗತಃ ಸತ್ಯಸಂಕಲ್ಪೇನ ಪರಮೇಶ್ವರೇಣ ನಿರ್ಮಿತತ್ವಶ್ರವಣಾತ್ ಸಂಸಾರಬನ್ಧಸ್ಯಾಪಿ ತದನ್ತಃಪಾತಿತ್ವೇನ ಸತ್ಯತ್ವಾವಗಮಾತ್ । ನ ಚಾಯಂ ಸೂತ್ರಾರ್ಥಃ । ಅತ್ರಾಪಿ "ಅಥಾತೋ

---

## ೯ ಇನ್ನು ವಿಚಾರವನ್ನು ಮಾಡಬೇಕೆಂದು ತಿಳಿಸುವ ಪೀಠಿಕಾಭಾಷ್ಯವು

ಅನರ್ಥಕ್ಕೆ ಕಾರಣವಾಗಿರುವ ಈ (ಅಧ್ಯಾಸವನ್ನು) ನಾಶಗೊಳಿಸುವದಕ್ಕೆ ಆತ್ಮೈಕತ್ವವಿದ್ಯೆಯು (ಜನರಿಗೆ) ದೊರಕಲೆಂದು ವೇದಾಂತಗಳೆಲ್ಲ ಹೊರಟಿರುತ್ತವೆ. ಸರ್ವವೇದಾಂತಗಳಿಗೂ ಇದೇ ಅರ್ಥವೆಂಬುದು ಹೇಗೆಂಬುದನ್ನು ನಾವು ಈ ಶಾರೀರಕಮೀಮಾಂಸೆಯಲ್ಲಿ ತೋರಿಸಿಕೊಡುವೆವು.

**೬೧. ಅಧ್ಯಾಸದವರ್ಣನೆಯು ಶಾಸ್ತ್ರಕ್ಕೂ ಸೂತ್ರಕ್ಕೂ ಹೊಂದುಗಡೆಯಲ್ಲ ಎಂಬ ಸಂದೇಹವು –** (ಯಾರಾದರೂ) ಹೀಗೆನ್ನಬಹುದು. ಇದುವರೆಗಿನ (ಗ್ರಂಥ)ಭಾಗದಿಂದ ಸಂಸಾರವು ಮಿಥ್ಯೆಯಾಗಿದೆ ಎಂದು ಏನು ವರ್ಣಿಸಿದೆ ಅದು ಶಾಸ್ತ್ರಾರ್ಥವಲ್ಲ. ಏಕೆಂದರೆ ಸತ್ಯಸಂಕಲ್ಪನಾದ ಪರಮೇಶ್ವರನಿಂದ ಸಮಸ್ತಜಗತ್ತೂ ನಿರ್ಮಾಣವಾಗಿರುವುದರಿಂದ ಸಂಸಾರಬಂಧನವೆಂಬುದು ಅವನ ಒಳಗಿರುವುದರಿಂದ ಸತ್ಯವಾಗಿದೆ ಎಂದು ಗೊತ್ತಾಗುತ್ತದೆ. ಇದು ಸೂತ್ರಾರ್ಥವೂ ಅಲ್ಲ, ಏಕೆಂದರೆ "ಇನ್ನು ಆದ್ದರಿಂದ

ಬ್ರಹ್ಮಜಿಜ್ಞಾಸಾ", (೧-೧-೧) "ಜನ್ಮಾದ್ಯಸ್ಯ ಯತಃ", (೧-೧-೨) "ಶಾಸ್ತ್ರಯೋನಿತ್ವಾತ್" (೧-೧-೩) ಇತಿ ಚ ಜಗತ್ಕಾರಣಸ್ಯೈವ ಬ್ರಹ್ಮಣಃ ಶಾಸ್ತ್ರಪ್ರಮಾಣಕತ್ವಸಂಸೂತ್ರಣಾತ್, ಅಧ್ಯಾಸಸ್ಯಾಸಂಸೂತ್ರಣಾಚ್ಚ । ನ ಚ ಪರಮಪುರುಷಾರ್ಥಸ್ಯ ಬ್ರಹ್ಮಜ್ಞಾನೈಕಸಾಧ್ಯತ್ವವಚನಾದೇವ ಜ್ಞಾನ-ನಿಬರ್ಹಣೀಯಸ್ಯ ಸಂಸಾರಸ್ಯಾಧ್ಯಸ್ತತ್ವಮಪ್ಯುಕ್ತಕಲ್ಪಮಿತಿ ಯುಕ್ತಮ್ । ಸತ್ಯಸ್ಯಾಪಿ ನಿಗಡಬನ್ಧಾದೇಃ ಪ್ರಭುಪ್ರಸಾದಾನ್ನಿವೃತ್ತಿದರ್ಶನಾತ್ । ಬನ್ಧ-ವಿಧ್ವಂಸಲಕ್ಷಣಾಯಾಶ್ಚ ಮುಕ್ತೇರ್ಬನ್ಧಮಿಥ್ಯಾತ್ವಾನಪೇಕ್ಷಣಾತ್ । ಜ್ಞಾನ-ಮಾತ್ರೇಣ ಸಕಲಬನ್ಧವಿನಾಶೋ ಮುಕ್ತಿರ್ನಾನ್ಯದಪೇಕ್ಷತ ಇತಿ ಜ್ಞಾನಸಮ-ಕಾಲಮೇವ ಶರೀರಾದಿನಿವೃತ್ತಿಪ್ರಸಂಗಾಚ್ಚ । ತಸ್ಮಾಚ್ಛಾಸ್ತ್ರಸೂತ್ರಾಸಙ್ಗತ-ಮಿದಮಧ್ಯಾಸವರ್ಣನಮಿತಿ ॥ (ನ್ಯಾ.ಸುಧಾ ಪು ೧೮, ೨೩).

---

ಬ್ರಹ್ಮಜಿಜ್ಞಾಸೆ ಮಾಡಬೇಕು" (೧-೧-೧) "ಇದರ (ಜಗತ್ತಿನ) ಜನ್ಮಾದಿಗಳು ಯಾವನಿಂದ ಆಗುವವೋ" (೧-೧-೨) "ಶಾಸ್ತ್ರಕ್ಕೂ ಕಾರಣವಾಗಿರು-ವುದರಿಂದ, (ಶಾಸ್ತ್ರವೇ ಇದಕ್ಕೆ ಪ್ರಮಾಣವಾದ್ದರಿಂದ)" (೧-೧-೩) ಎಂದು ಜಗತ್ಕಾರಣವಾದ ಬ್ರಹ್ಮವು ಶಾಸ್ತ್ರಪ್ರಮಾಣಕವಾಗಿದೆ ಎಂದು ಸೂತ್ರವನ್ನು ಮಾಡಿರುವುದರಿಂದಲೂ ಅಧ್ಯಾಸವನ್ನು ಸೂತ್ರದಲ್ಲಿ ಹೇಳಿಲ್ಲವಾದ್ದರಿಂದಲೂ (ಇದು ಗೊತ್ತಾಗುತ್ತದೆ). ಪರಮಪುರುಷಾರ್ಥವಾದ (ಮೋಕ್ಷವು) ಬ್ರಹ್ಮಜ್ಞಾನವೊಂದರಿಂದಲೇ ಉಂಟಾಗುತ್ತದೆ ಎಂದು ಹೇಳಿದ್ದರಿಂದಲೇ ಜ್ಞಾನದಿಂದ ಕಳೆಯಬೇಕಾದ ಸಂಸಾರವು ಅಧ್ಯಸ್ತವಾಗಿದೆ ಎಂಬುದನ್ನು ಹೇಳಿದಂತಾಯಿತೆಂದು ಕಲ್ಪಿಸುವುದು ಸರಿಯಲ್ಲ. (ಏಕೆಂದರೆ) ನಿಜವಾಗಿರುವುದೇ ಆದ ಬೇಡಿಯ (ಕೈಕೋಳವು) ಬಂಧವು, ರಾಜನ ಪ್ರಸನ್ನತೆಯಿಂದ ತೊಲಗುವುದೆಂಬುದು ಕಂಡುಬಂದಿದೆ. ಬಂಧವನ್ನು ನಾಶಗೊಳಿಸುವ ರೂಪದ್ದಾದ ಮುಕ್ತಿಯು, ಬಂಧವು ಮಿಥ್ಯೆಯಾಗಿದೆ ಎಂಬುದನ್ನು ಅಪೇಕ್ಷಿಸುವುದಿಲ್ಲ. (ಇಷ್ಟೇ ಅಲ್ಲ) ಜ್ಞಾನಮಾತ್ರದಿಂದಲೇ ಸಕಲಬಂಧವೂ ನಾಶವಾಗುವುದಾದರೆ (ಆಗ) ಮುಕ್ತಿಯು ಮತ್ತೊಂದನ್ನಪೇ-ಕ್ಷಿಸುವುದಿಲ್ಲವೆಂದಾಗಿ ಜ್ಞಾನದ ಸಮಕಾಲದಲ್ಲಿಯೇ ಶರೀರಾದಿಗಳ ನಿವೃತ್ತಿಯಾಗಬೇಕಾದ ಪ್ರಸಂಗವುಂಟಾಗುತ್ತದೆ. ಆದ್ದರಿಂದ ಈ ಅಧ್ಯಾಸದ-ವರ್ಣನೆಯು ಶಾಸ್ತ್ರಕ್ಕೂ ಸೂತ್ರಕ್ಕೂ ಹೊಂದುಗಡೆಯಾಗದೇ ಇರುವಂಥದ್ದು ಎಂದು ಭಾವವು.

**೬೨. ಅಧ್ಯಾಸವರ್ಣನಸ್ಯ ಶಾಸ್ತ್ರೇಣ ಸಂಗತಿಃ** – ತಾಮೇತಾಂ ಶಙ್ಕಾಮಪಾಕುರ್ವನ್ನಧ್ಯಾಸವರ್ಣನಸ್ಯ ಸಂಗತಿಮಾಹ – **ಅಸ್ಯಾನರ್ಥ-ಹೇತೋರಿತ್ಯಾದಿನಾ** । ಅಸ್ಯಾವಿದ್ಯಾಖ್ಯಸ್ಯಾಧ್ಯಾಸಸ್ಯ । ಅನರ್ಥಹೇತೋಃ ಕ್ರಿಯಾಕಾರಕಫಲಭೋಗಾಭಿನಿವೇಶಾದಿರೂಪಸಂಸಾರನಿದಾನಸ್ಯ । ಪ್ರಹಾಣಾ-ಯಾಽಽತ್ಯನ್ತಿಕನಿವೃತ್ತಯೇ । ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತ ಇತ್ಯರ್ಥಃ ॥

ಅಯಮಭಿಸನ್ಧಿಃ । ನ ತಾವಚ್ಛಾಸ್ತ್ರಾಸಂಗತಿಃ । ಅಧ್ಯಾಸಾವಿದ್ಯಯೋ-ರೇಕತ್ವೇನ ಶಾಸ್ತ್ರೋಪದಿಷ್ಟಸ್ಯೈವಾಧ್ಯಾಸಸ್ಯಾತ್ರವರ್ಣನಾತ್ । ಪ್ರಸಿದ್ಧಂ ತಾವತ್ಸರ್ವೇಷು ವೇದಾನ್ತೇಷು ವಿದ್ಯಾವಿದ್ಯಯೋರ್ವಿಭಾಗವಚನಂ ದೃಶ್ಯತೇಽತ್ಯನ್ತಂ ವಿರುದ್ಧಸ್ವಭಾವಯೋರಿತಿ । "ದೂರಮೇತೇ ವಿಪರೀತೇ ವಿಷೂಚೀ ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ" (ಕ. ೧–೨–೪)

---

**೬೨. ಅಧ್ಯಾಸದ ವರ್ಣನೆಯು ಶಾಸ್ತ್ರದೊಡನೆ ಹೊಂದುಗಡೆಯಾಗಿದೆ.** ಆ ಈ (ಮೇಲೆ ಹೇಳಿದ) ಸಂದೇಹವನ್ನು ನಿವೃತ್ತಿಗೊಳಿಸುತ್ತಾ "ಅಸ್ಯಾನರ್ಥಹೇತೋಃ" ಎಂದು ಅಧ್ಯಾಸದ ವರ್ಣನೆಯನ್ನು ಹೊಂದಿಸುತ್ತಾರೆ. "ಅಸ್ಯ" ಎಂದರೆ ಅವಿದ್ಯೆ ಎಂಬ ಹೆಸರಿನ ಅಧ್ಯಾಸದ, "ಅನರ್ಥಹೇತೋಃ" (ಎಂದರೆ) ಕ್ರಿಯಾಕಾರಕಫಲಗಳ ಭೋಗದಲ್ಲಿ ಅಭಿನಿವೇಶ ಮಾಡಿಕೊಳ್ಳುವ ರೂಪವಾದ ಸಂಸಾರಕಾರಣವಾದ ಅನರ್ಥದ, "ಪ್ರಹಾಣಾಯ" ಎಂದರೆ ಆತ್ಯಂತಿಕವಾಗಿ ತೊಲಗುವುದಕ್ಕೆ, ಆತ್ಮೈಕತ್ವದ ಜ್ಞಾನವನ್ನು ತಿಳಿಸಿಕೊಡುವುದಕ್ಕಾಗಿ ಎಲ್ಲಾ ವೇದಾಂತಗಳೂ ಹೊರಟಿರುತ್ತವೆ ಎಂದರ್ಥ.

ಇದು ಅಭಿಪ್ರಾಯವು – ಮೊಟ್ಟಮೊದಲು ಶಾಸ್ತ್ರವು ಹೊಂದುವುದಿಲ್ಲ-ವೆಂಬುದಿಲ್ಲ. ಅಧ್ಯಾಸವೂ ಅವಿದ್ಯೆಯೂ ಒಂದೇ ಆದ್ದರಿಂದ ಶಾಸ್ತ್ರವು ಹೇಳಿರುವ ಅಧ್ಯಾಸವನ್ನೇ ಇಲ್ಲಿ ವರ್ಣನೆಮಾಡಿರುತ್ತದೆ. ವಿದ್ಯಾವಿದ್ಯೆಗಳನ್ನು ವಿಭಾಗವಾಗಿ ಹೇಳುವುದೆಂಬುದು ಎಲ್ಲಾ ವೇದಾಂತಗಳಲ್ಲೂ ಪ್ರಸಿದ್ಧವಾಗಿದೆ, (ಅವು) ಅತ್ಯಂತವಿರುದ್ಧಸ್ವಭಾವದ್ದೆಂಬುದೂ ಕಂಡು ಬಂದಿದೆ. "ಈ ವಿದ್ಯಾವಿದ್ಯೆಗಳು ಎಂದು ಯಾವುದು ತಿಳಿದುಬಂದಿವೆಯೋ (ಅವು ಬಲು) ಅಂತರವುಳ್ಳದ್ದೂ, ವಿರುದ್ಧವೂ, ಬೇರೆಬೇರೆಮಾರ್ಗವುಳ್ಳದ್ದಾಗಿವೆ." (ಕ. ೧–

ಇತ್ಯಾದಿಶ್ರುತಿಭ್ಯಃ । ತಯೋಶ್ಚಾವಿದ್ಯಾ ಶೋಕಭಯಾದಿಕಾರಣತ್ವಾದ್ಧಾತವ್ಯಾ ಮುಮುಕ್ಷುಭಿರಿತಿ ಶ್ರಾವ್ಯತೇ – "ನ ಚೇದಿಹಾವೇದೀನ್ಮಹತೀ ವಿನಷ್ಟಿಃ" (ಕೇ. ೨–೧೩) "ಅವಿದ್ಯಾಯಾಮನ್ತರೇ ವರ್ತಮಾನಾಃ ಸ್ವಯಂ ಧೀರಾಃ ಪಣ್ಡಿತಂಮನ್ಯಮಾನಾಃ । ದನ್ದ್ರಮ್ಯಮಾಣಾಃ ಪರಿಯನ್ತಿ ಮೂಢಾ ಅನ್ಧೇನೈವ ನೀಯಮಾನಾ ಯಥಾನ್ಧಾಃ ॥" (ಕ. ೧–೨–೫), "ಅಥ ತಸ್ಯ ಭಯಂ ಭವತಿ । ತತ್ತ್ವೇವ ಭಯಂ ವಿದುಷೋಽಮನ್ವಾನಸ್ಯ" (ತೈ. ೨–೭) "ಸೋಽಹಂ ಭಗವೋ ಮನ್ತ್ರವಿದೇವಾಸ್ಮಿ ನಾತ್ಮವಿತ್ ....ಸೋಽಹಂ ಭಗವಃ ಶೋಚಾಮಿ ॥" (ಛಾಂ. ೭–೧–೩), "ಸ ಯೋಽತ ಏಕೈಕಮುಪಾಸ್ತೇ ನ ಸ ವೇದಾಽಕೃತ್ಸ್ನೋ ಹ್ಯೇಷಃ" (ಬೃ. ೧–೪–೭) ಇತ್ಯಾದಿಶ್ರುತಿಭ್ಯಃ । ತತ್ಪ್ರಹಾಣಾಯ ಚಾಽತ್ಮೈಕತ್ವವಿದ್ಯೈವೋಪದಿಶ್ಯತೇ । "ಇಹ ಚೇದವೇದೀದಥ ಸತ್ಯಮಸ್ತಿ" (ಕೇ. ೨–೫), "ದೇವಂ ಮತ್ವಾ ಧೀರೋ ಹರ್ಷಶೋಕೌ

---

೨–೪) ಇದೇ ಮೊದಲಾದ ಶ್ರುತಿಯು (ಇದಕ್ಕೆ ಆಧಾರವು). ಅವುಗಳಲ್ಲಿ ಅವಿದ್ಯೆಯು ಶೋಕಮೋಹಗಳಿಗೆ ಕಾರಣವಾದ್ದರಿಂದ ಮುಮುಕ್ಷುಗಳು ಅದನ್ನು ಕಳೆದುಕೊಳ್ಳಬೇಕೆಂದು ಹೇಳಿದೆ. "ಇಲ್ಲಿ ತಿಳಿಯದೇ ಹೋದರೆ ತುಂಬಾ ನಷ್ಟವು" (ಕೇ. ೨–೧೩) "ಅವಿದ್ಯೆಯ ನಡುವೆಯಲ್ಲಿದ್ದವರಾಗಿ, ತಾವೇ ಧೀರರೆಂದುಕೊಂಡು ಪಂಡಿತರೆಂದು ತಿಳಿದವರಾಗಿ ಮತ್ತೆ ಮತ್ತೆ ದುಃಖಗಳಿಂದ ಹೊಡೆಯಲ್ಪಡುತ್ತಾ ಕುರುಡರಿಂದ ಒಯ್ಯಲ್ಪಡುವ ಕುರುಡರಂತೆ ಸಂಸಾರದಲ್ಲಿ ಸುತ್ತುತ್ತಿರುವರು" (ಕ. ೧–೨–೫) "ಆಮೇಲೆ ಅವನಿಗೆ ಹೆದರಿಕೆಯಾಗುತ್ತದೆ. ತಿಳಿಯದವನಿಗೆ ತತ್ತ್ವವೇ ಭಯಕ್ಕೆ ಕಾರಣವಾಗುತ್ತದೆ" (ತೈ. ೨–೭) "ಪೂಜ್ಯರೇ ನಾನು ಮನ್ತ್ರವನ್ನು ಮಾತ್ರಬಲ್ಲವನು, ಆತ್ಮನನ್ನು ತಿಳಿದಿಲ್ಲ, ಆ ನಾನು ಪೂಜ್ಯರೇ ಶೋಕಿಸುತ್ತಿರುವೆನು." (ಛಾಂ. ೭–೧–೩) "ಯಾವನು ಒಂದೊಂದನ್ನೇ ತಿಳಿಯುವನೋ ಆತನು ಅರಿಯನು, ಆತನು ಅಕೃತ್ಸ್ನ–ನಲ್ಲವೇ"(ಬೃ ೧–೪–೭) ಇದೇ ಮೂದಲಾದ ಶ್ರುತಿಗಳಿಂದ (ಗೊತ್ತಾಗು–ತ್ತದೆ). ಅದನ್ನು ಕಳೆದುಕೊಳ್ಳುವುದಕ್ಕಾಗಿ ಆತ್ಮೈಕತ್ವವಿದ್ಯೆಯುನ್ನೇ ಉಪದೇಶಿಸಿರುತ್ತದೆ. "ಇಲ್ಲೇ ತಿಳಿದವನಾದರೆ ಇನ್ನು (ಅವನಿಗೆ) ಸತ್ಯವಿದೆ." (ಕೇ. ೨–೫) "ದೇವನನ್ನು ತಿಳಿದು ಧೀರನು ಹರ್ಷಶೋಕವನ್ನು ಬಿಡುತ್ತಾನೆ"

ಜಹಾತಿ" (ಕ. ೧-೨-೧೨), "ಏತದ್ಯೋ ವೇದ ನಿಹಿತಂ ಗುಹಾಯಾಂ ಸೋಽವಿದ್ಯಾಗ್ರನ್ಥಿಂ ವಿಕಿರತೀಹ ಸೋಮ್ಯ" (ಮುಂ. ೨-೧-೧೦), "ಆನನ್ದಂ ಬ್ರಹ್ಮಣೋ ವಿದ್ವಾನ್ನ ಬಿಭೇತಿ ಕುತಶ್ಚನೇತಿ" (ತೈ. ೨-೯), "ತಸ್ಮೈ ಮೃದಿತಕಷಾಯಾಯ ತಮಸಃ ಪಾರಂ ದರ್ಶಯತಿ ಭಗವಾನ್ ಸನತ್ಕುಮಾರಃ" (ಛಾಂ. ೭-೨೬-೨), "ಸ ಏಷ ನೇತಿ ನೇತ್ಯಾತ್ಮಾ ....ಅಭಯಂ ವೈ ಜನಕ ಪ್ರಾಪ್ತೋಽಸಿ" (ಬೃ. ೪-೨-೪) ಇತ್ಯಾದಿಭಿಃ ಶ್ರುತಿಭಿಃ । ತತ್ರ ಯೇಯಮವಿದ್ಯಾ ಶ್ರೂಯತೇ ಶ್ರುತ್ಯನ್ತೇಷು ಸಾಽಸ್ಮಾದಧ್ಯಾಸಾದ್ಯಥಾವರ್ಣಿತಾನ್ನ ವ್ಯತಿರಿಚ್ಯತೇ। ನ ಹ್ಯತೋಽತಿರಿಕ್ತಾ ಕಾಚಿದವಿದ್ಯಾ ವಿದ್ಯಾವಿನಿವರ್ತ್ಯಾ ಸಂಭಾವಿತಾಽಸ್ತ್ಯನರ್ಥಹೇತುಃ । ದೃಷ್ಟಾ ಚ ಲೋಕೇ ರಜ್ಜುಸರ್ಪಾದಿಪ್ರತ್ಯಯರೂಪಾವಿದ್ಯಾ ಭಯಾದ್ಯನರ್ಥಕಾರಿಣೀ ರಜ್ಜುಜ್ಞಾನರೂಪಯಾ ವಿದ್ಯಯಾ ವಿನಿವರ್ತ್ಯಮಾನಾ । ತತ್ಸಾಮಾನ್ಯಾದಿಹಾಪ್ಯಾತ್ಮಾವಿದ್ಯಾಪ್ಯಧ್ಯಾಸರೂಪಿಣ್ಯೇವ

---

(ಕ. ೧-೨-೧೨) "ಹೃದಯುಗುಹೆಯಲ್ಲಿರುವ ಈತನನ್ನು ಯಾವನು ತಿಳಿಯುತ್ತಾನೋ ಆತನು ಇಲ್ಲೇ ಅವಿದ್ಯಾಗ್ರಂಥಿಯನ್ನು ಕಳಚಿಕೊಳ್ಳುತ್ತಾನೆ." (ಮುಂ. ೨-೧-೧೦) "ಬ್ರಹ್ಮದ ಆನಂದವನ್ನು ತಿಳಿದವನು ಯಾವುದರಿಂದಲೂ ಹೆದರುವುದಿಲ್ಲ." (ತೈ. ೨-೯) "ಕಷಾಯವನ್ನು ಕಳೆದುಕೊಂಡ ನಾರದರಿಗೆ ಅಜ್ಞಾನದ ಆಚೆಯನ್ನು ತೋರಿಸುತ್ತಾರೆ." (ಛಾಂ. ೭-೨೬-೨) "ಈತನು ಹೀಗಲ್ಲ ಹೀಗಲ್ಲ ಎನ್ನುವ ಆತ್ಮನು, ಜನಕನೇ ಅಭಯವನ್ನು ಹೊಂದಿರುವೆ." (ಬೃ ೪-೨-೪) ಇವೇ ಮೊದಲಾದ ಶ್ರುತಿಗಳು ಇದಕ್ಕೆ ಪ್ರಮಾಣವು. ಬೇರೆ ಬೇರೆ ಶ್ರುತಿಗಳಲ್ಲಿ ಯಾವ ಅವಿದ್ಯಾ (ಎಂಬ ಶಬ್ದವು) ಕೇಳಿಬರುತ್ತಿದೆ ಅದು ನಾವು ಮೇಲೆ ವರ್ಣಿಸಿದ ಅಧ್ಯಾಸಕ್ಕಿಂತ ಬೇರೆಯಾಗಿರುವುದಿಲ್ಲ. ಇದಕ್ಕಿಂತ ಬೇರೆಯಾದ ಯಾವದೊಂದು ಅನರ್ಥಕ್ಕೆ ಕಾರಣವಾದ ಅವಿದ್ಯೆಯೂ, ವಿದ್ಯೆಯಿಂದ ಹೋಗುವದೆಂದು ಊಹೆ ಮಾಡುವುದಕ್ಕೂ ಬರುವುದಿಲ್ಲ. ಲೋಕದಲ್ಲೂ ಸಹ ಭಯುವೇ ಮುಂತಾದ ಅನರ್ಥವನ್ನುಂಟುಮಾಡುವ ರಜ್ಜುಸರ್ಪದ ತಿಳಿವಳಿಕೆಯ ರೂಪವಾದ ಅವಿದ್ಯೆಯು, ರಜ್ಜುಜ್ಞಾನರೂಪವಾದ ವಿದ್ಯೆಯಿಂದ ಹೋಗುವುದು ಕಂಡಿದೆ. ಆ ಹೋಲಿಕೆಯಿಂದ ಇಲ್ಲೂ ಕೂಡ ಆತ್ಮನ ಅವಿದ್ಯೆಯು ಅಧ್ಯಾಸರೂಪವಾದದ್ದೇ ಎಂದಾಗುವುದಕ್ಕೆ ಅರ್ಹವಾಗಿದೆ.

ಭವಿತುಮರ್ಹತಿ । ನ ಚ ಸ್ವಯಂಪ್ರಕಾಶೇ ಪ್ರತ್ಯಗಾತ್ಮನ್ಯಧ್ಯಾರೋಪಿತ-ಪ್ರಮಾತೃತ್ವಾದ್ಯನರ್ಥನಿರಾಸವ್ಯತಿರೇಕೇಣ ಕೃತ್ಯಾನ್ತರಂ ವಿದ್ಯಾಯಾ ಅಭ್ಯೂಹಿತುಮಪಿ ಶಕ್ಯತೇ । ಅಧ್ಯಾರೋಪದಶಾಯಾಮಪಿ ಸ್ವಯಂಪ್ರಕಾಶ-ತ್ವಾದಾತ್ಮನಃ, ತಸ್ಮಾತ್ ಸರ್ವೇಷಾಂ ವೇದಾನ್ತಾನಾಮಾತ್ಮೈಕತ್ವ-ವಿದ್ಯಾಪ್ರತಿಪತ್ತ್ಯರ್ಥಮಾರಮ್ಭಾತ್, ವಿದ್ಯಾಯಾಶ್ಚಾವಿದ್ಯಾವ್ಯಪನಯನ-ವ್ಯತಿರೇಕೇಣ ಕೃತ್ಯಾನ್ತರಾಭಾವಾತ್, ಅಧ್ಯಾಸವ್ಯತಿರೇಕೇಣ ಚಾವಿದ್ಯಾಯಾ ಅಸಂಭಾವಿತತ್ವಾಚ್ಚಾಧ್ಯಾಸವರ್ಣನಂ ಶಾಸ್ತ್ರಸಙ್ಗತಮೇವೇತಿ ಸಿದ್ಧಮ್ ॥

ಯದ್ಯಪಿ ಜ್ಞಾನಾಭಾವಃ ಸಂಶಯಜ್ಞಾನಂ ಚಾವಿದ್ಯಾಶಬ್ದವಾಚ್ಯೇ ಏವ ವಿದ್ಯಾನಿವರ್ತ್ಯೇ ಚ । ತಥಾಪಿ ಕಯಾಚಿತ್ ಪ್ರಣಾಡ್ಯಾ ವಿಪರೀತಗ್ರಹಣ-ರೂಪಮಧ್ಯಾಸಮನನ್ತರ್ಭಾವ್ಯ ತಯೋರನರ್ಥಹೇತುತ್ವಂ ನೋಪಪದ್ಯತ ಇತ್ಯಧ್ಯಾಸಮೇವ ವೇದಾನ್ತಾ ಅವಿದ್ಯಾತ್ವೇನೋಪದಿಶನ್ತೀತಿ ವಾಚೋಯುಕ್ತಿ-

---

ಸ್ವಯಂಪ್ರಕಾಶನಾದ ಪ್ರತ್ಯಗಾತ್ಮನಲ್ಲಿ ಕಲ್ಪಿಸಿದ್ದಾದ ಪ್ರಮಾತೃತ್ವವೇ ಮುಂತಾದ ಅನರ್ಥಗಳನ್ನು ಹೋಗಲಾಡಿಸುವುದಕ್ಕಿಂತ ಬೇರೆಯಾಗಿ ವಿದ್ಯೆಗೆ ಬೇರೊಂದು ವ್ಯಾಪಾರವನ್ನು ಊಹಿಸುವುದಕ್ಕೂ ಆಗುವುದಿಲ್ಲ. ಅಜ್ಞಾನದಸಂದರ್ಭದಲ್ಲೂ ಆತ್ಮನು ಸ್ವಯಂಪ್ರಕಾಶನಾಗಿಯೇ ಇರುತ್ತಾನಾದ್ದರಿಂದಲೂ, ಸಮಸ್ತ-ವೇದಾಂತಗಳೂ ಆತ್ಮೈಕತ್ವವಿದ್ಯಾಪ್ರತಿಪತ್ತಿಗಾಗಿಯೇ ಹೊರಟಿರುವದ-ರಿಂದಲೂ, ವಿದ್ಯೆಯು ಅವಿದ್ಯೆಯನ್ನು ತೊಲಗಿಸುವುದಕ್ಕಿಂತ ಬೇರೆಯಾಗಿ ಬೇರೊಂದು ವ್ಯಾಪಾರವನ್ನು ಮಾಡುವುದಿಲ್ಲವಾದ್ದರಿಂದಲೂ, ಅಧ್ಯಾಸಕ್ಕಿಂತ ಬೇರೆಯಾಗಿ ಅವಿದ್ಯೆಯೆಂಬುದಿಲ್ಲವಾದ್ದರಿಂದಲೂ ಅಧ್ಯಾಸದವರ್ಣನೆಯು ಶಾಸ್ತ್ರಕ್ಕೆ ಹೊಂದುಗಡೆಯಾದದ್ದೇ ಆಗಿದೆ ಎಂಬುದು ಸಿದ್ಧವಾಯಿತು.

ಜ್ಞಾನಾಭಾವ, ಸಂಶಯಜ್ಞಾನಗಳೆರಡೂ ಅವಿದ್ಯಾ ಎಂಬ ಶಬ್ದದಿಂದಲೇ ಕರೆದದ್ದಾಗಿ ವಿದ್ಯೆಯಿಂದಲೇ ಹೋಗುವದಾದರೂ ಅವನ್ನು ಯಾವುದಾದ-ರೊಂದು ರೀತಿಯ ವಿಪರೀತಗ್ರಹಣರೂಪವಾದ ಅಧ್ಯಾಸದಲ್ಲಿ ಅಡಕಮಾಡಿ, ಅವು (ನೇರಾಗಿ) ಅನರ್ಥಕ್ಕೆ ಕಾರಣವೆಂಬುದು ಹೊಂದುವುದಿಲ್ಲವಾದ್ದರಿಂದ (ಅದೂ) ಅಧ್ಯಾಸವೇ ಎಂದು ವೇದಾಂತಗಳು ಅವಿದ್ಯಾಶಬ್ದದಿಂದ ಉಪದೇಶಿಸುತ್ತವೆ ಎಂಬುದು ಭಾಷ್ಯಕಾರರ ಅಭಿಪ್ರಾಯವು ಎಂದು

ಭಾಷ್ಯಕಾರಾಣಾಮಿತಿ ಧ್ಯೇಯಮ್ । ಉಕ್ತಂ ಹಿ ಕಣ್ಠರವೇಣ ಜ್ಞಾನಾಭಾವ-ಸಂಶಯಯೋರಪ್ಯವಿದ್ಯಾತ್ವಂ **ಪೂಜ್ಯಪಾದೈ**ರನ್ಯತ್ರ – "ತಾಮಸೋ ಹಿ ಪ್ರತ್ಯಯ ಆವರಣಾತ್ಮಕತ್ವಾದವಿದ್ಯಾ ವಿಪರೀತಗ್ರಾಹಕಃ, ಸಂಶಯೋಪಸ್ಥಾಪಕೋ ವಾ, ಅಗ್ರಹಣಾತ್ಮಕೋ ವಾ । ವಿವೇಕಪ್ರಕಾಶಭಾವೇ ತದಭಾವಾತ್ । ತಾಮಸೇ ಚಾವರಣಾತ್ಮಕೇ ತಿಮಿರಾದಿದೋಷೇ ಸತ್ಯಗ್ರಹಣಾದೇರವಿದ್ಯಾ-ತ್ರಯಸ್ಯೋಪಲಬ್ಧೇಃ" (ಗೀ. ಭಾ. ೧೩–೨ ಭಾ.ಭಾ. ೭೬೧) ಇತಿ । ಅವಿದ್ಯಾಯಾಸ್ತ್ರಿತ್ವಂ ಚೇದಮಾಪಾತತ ಏವ । ಸಙ್ಖ್ಯಾಯಾ ಅಪ್ಯವಿದ್ಯಾ-ಕಲ್ಪಿತತ್ವಾತ್ । ಅತ ಏಕೈವಾವಿದ್ಯಾ ರೂಪತ್ರಯವತ್ತ್ವೇನಾವಭಾಸತೇ ಇತಿ ತತ್ತ್ವಮ್ । ಯಥಾಹುರ್**ವಾರ್ತಿಕಕಾರಾಃ** – "ಅಜ್ಞಾನಂ ಸಂಶಯತ್ವಾನ್ನೋ ಮಿಥ್ಯಾಜ್ಞಾನಾತ್ತಥೈವ ಚ । ತಯೋಸ್ತತ್ತ್ವವಿವಕ್ಷಾಯಾಮಜ್ಞಾನಂ ತತ್ತ್ವಮುಚ್ಯತೇ ।" (ಬೃ. ವಾ. ೧–೪–೪೪೦) ಇತಿ । ಜ್ಞಾನಾಭಾವಸ್ಯೈವ ಪ್ರಾಧಾನ್ಯೇನ ವರ್ಣನಂ ತು **ವಾರ್ತಿಕೇ** ಕೇವಲಂ ಮಿಥ್ಯಾಜ್ಞಾನಸ್ಯೈವ

---

ತಿಳಿಯಬೇಕು. ಬಾಯಿಬಿಟ್ಟು ಭಾಷ್ಯಕಾರರೇ ಮತ್ತೊಂದೆಡೆಯಲ್ಲಿ ಜ್ಞಾನಾಭಾವ ಸಂಶಯಜ್ಞಾನ ಎರಡು ಅವಿದ್ಯೆಯೇ ಎಂದು ಹೇಳಿರುತ್ತಾರೆ. "ತಾಮಸಪ್ರತ್ಯಯವು ಆವರಣಾತ್ಮಕವಾದ್ದರಿಂದ ಅವಿದ್ಯೆಯು, ಅದು ವಿಪರೀತ ಜ್ಞಾನವನ್ನೋ, ಸಂಶಯವನ್ನೋ, ಅಗ್ರಹಣರೂಪವನ್ನುಂಟುಮಾಡುವು-ದಾಗಿರುತ್ತದೆ. ವಿವೇಕವೆಂಬ ಬೆಳಕು ಉಂಟಾದರೆ ಇರುವುದಿಲ್ಲ. ಆವರಣಾತ್ಮಕವಾದ ತಾಮಸವಾಗಿರುವ – ಕಣ್ಣುಪೊರೆಯೇ ಮುಂತಾದದೋಷಗಳಿರುವಾಗ ಅಗ್ರಹಣವೇ ಮುಂತಾದ ಅವಿದ್ಯಾತ್ರಯವು ತೋರಿಬರುತ್ತದೆ" (ಗೀ.ಭಾ ೧೩–೨). ಅವಿದ್ಯೆಯು ಮೂರೆಂಬುದೂ ತಟ್ಟನೆ (ನೋಡಿದಾಗ ತೋರುವುದು). ಏಕೆಂದರೆ ಸಂಖ್ಯೆಯೂ ಅವಿದ್ಯಾಕಲ್ಪಿತ-ವಾಗಿರುತ್ತದೆ. ಆದ್ದರಿಂದ ಒಂದೇ ಅವಿದ್ಯೆಯು ಮೂರು ರೂಪದಿಂದ ತೋರುತ್ತದೆ ಎಂಬುದು ತತ್ತ್ವವು. (ಈ ವಿಷಯಕ್ಕೆ) ವಾರ್ತಿಕಕಾರರು ಹೇಳಿರುತ್ತಾರೆ. "ಅಜ್ಞಾನವು ಸಂಶಯಜ್ಞಾನವೂ ಮಿಥ್ಯಾಜ್ಞಾನವೂ ಆಗಿರುತ್ತದೆ. ಅವುಗಳ ತತ್ತ್ವವನ್ನು ಹೇಳಬೇಕೆಂದರೆ ನಮ್ಮ ಪಕ್ಷದಲ್ಲಿ ಅಜ್ಞಾನವೇ ಆಗಿರುತ್ತದೆ". (ಬೃ.ವಾ ೧–೪–೪೪೦) ವಾರ್ತಿಕಪ್ರಸ್ಥಾನದಲ್ಲಿ ಜ್ಞಾನಾಭಾವವನ್ನೇ ಪ್ರಧಾನವಾಗಿ ವರ್ಣಿಸುವುದೇಕೆಂದರೆ ಪ್ರಮಾಣದಿಂದ

ಪ್ರಮಾಣನಿರಸ್ಯತ್ವಂ ಬ್ರುವತಾಂ ಭಾಟ್ಟಾನಾಂ ದುರಾಗ್ರಹನಿರಾಕರಣಾರ್ಥ-ಮಿತ್ಯನ್ಯದೇತತ್ । ಸರ್ವಥಾಪ್ಯಧ್ಯಾಸವರ್ಣನಂ ಶಾಸ್ತ್ರಸಙ್ಗತಮಿತ್ಯಲಂ ಪ್ರಪಂಚೇನ ॥

**೬೩. ಅಧ್ಯಾಸವರ್ಣನಸ್ಯ ಸೂತ್ರೇಣ ಸಙ್ಗತಿಃ** – ಸೂತ್ರಸಙ್ಗತಂ ಚೇದಂ ವರ್ಣನಮ್ । "ಅಥಾತೋ ಬ್ರಹ್ಮಜಿಜ್ಞಾಸಾ" (೧-೧-೧) ಇತಿ ಜ್ಞಾನನಿವರ್ತ್ಯ-ತ್ವೇನಾಜ್ಞಾನಸ್ಯ ಸೂಚಿತತ್ವಾತ್, ಅಧ್ಯಾಸಾತಿರಿಕ್ತಸ್ಯ ಚಾಜ್ಞಾನಸ್ಯ ನಾಸ್ತಿ ಸಂಭವ ಇತ್ಯುಪಪಾದಿತತ್ವಾತ್, "ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್" (ವೇ.ಸೂ.೨-೩-೨೯) ಇತ್ಯನ್ತಃಕರಣ ಗುಣಾಧ್ಯಾಸಕೃತಮೇವಾಽಽತ್ಮನಃ ಸಂಸಾರಿತ್ವಂ ನ ಸ್ವತ ಇತ್ಯುದ್ಘೋಷಣಾಚ್ಚ । ಯತ್ತುನಃ "ಜನ್ಮಾದ್ಯಸ್ಯ ಯತಃ", "ಶಾಸ್ತ್ರಯೋನಿತ್ವಾತ್" ಇತಿ ಜಗಜ್ಜನ್ಮಾದಿ ಕಾರಣಸ್ಯೈವ ಪರಮೇಶ್ವರಸ್ಯ ಶಾಸ್ತ್ರಪ್ರಮಾಣಕತ್ವಂ ಸೂತ್ರಿತಮಿತಿ । ತತ್ರ

---

ಹೋಗುವಂಥದ್ದು ಕೇವಲ ಮಿಥ್ಯಾಜ್ಞಾನವೇ ಎಂಬ (ಕುಮಾರಿಲ) ಭಟ್ಟರ ಪಕ್ಷದ ದುರಾಗ್ರಹವನ್ನು ತಿರಸ್ಕರಿಸುವುದಕ್ಕೆ ಎಂಬುದು ಬೇರೆ ವಿಚಾರವು. ಹೇಗೇ ಆಗಲಿ ಅಧ್ಯಾಸದ ವರ್ಣನೆಯು ಶಾಸ್ತ್ರಕ್ಕೆ ಒಪ್ಪಿಗೆಯಾಗಿರುವಂಥದ್ದೇ ಎಂದಾದ್ದರಿಂದ ಈ ವಿಚಾರವು ಇಲ್ಲಿಗೆ ಸಾಕು.

**೬೩. ಅಧ್ಯಾಸದವರ್ಣನೆಯು ಸೂತ್ರದೊಡನೆ ಹೊಂದಿಕೆಯಾಗಿದೆ.** ಈ ವರ್ಣನೆಯು ಸೂತ್ರಕ್ಕೂ ಹೊಂದಿಕೊಂಡಿದೆ. "ಇನ್ನು ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು" (೧-೧-೧) ಎಂಬ ಸೂತ್ರದಿಂದ ಅಜ್ಞಾನವು ಜ್ಞಾನದಿಂದ ತೊಲಗುವಂಥದ್ದೆಂದು ಸೂಚಿಸಿರುವುದರಿಂದಲೂ, ಅಧ್ಯಾಸಕ್ಕಿಂತ ಬೇರೆಯಾದ ಅಜ್ಞಾನವೆಂಬುದು ಹೊಂದುವುದಿಲ್ಲವೆಂದು ತೋರಿಸಿಕೊಟ್ಟಿರುವುದರಿಂದಲೂ "ಆದರೆ ಅದರಗುಣಕ್ಕೆ ಸಾರನಾಗಿರುವುದ-ರಿಂದ ಆ ವ್ಯಪದೇಶವಿರುತ್ತದೆ. ಪ್ರಾಜ್ಞನಂತೆ ಇದು" (ವೇ. ಸೂ. ೨-೩-೨೯) ಎಂಬ ಸೂತ್ರದಲ್ಲಿ ಅಂತಃಕರಣದಲ್ಲಿ ಮಾಡಿಕೊಂಡ ಅಧ್ಯಾಸದಿಂದಲೇ ಆತ್ಮನಿಗೆ ಸಂಸಾರಿತ್ವ ಉಂಟಾಗಿರುವುದೇ ಹೊರತು ಸ್ವತಃ ಇಲ್ಲ(ಎಂದು ಸೂತ್ರಕಾರರು) ಘೋಷಿಸಿರುವುದರಿಂದಲೂ (ಇದು ಗೊತ್ತಾಗುತ್ತದೆ.) "ಜನ್ಮಾದ್ಯಸ್ಯ ಯತಃ"(೧-೧-೨) "ಶಾಸ್ತ್ರಯೋನಿತ್ವಾತ್" (೧-೧-೩)ಎಂದು ಜಗತ್ತಿನ ಜನ್ಮಾದಿಗಳಿಗೆ ಕಾರಣನೇ ಆಗಿರುವ ಪರಮೇಶ್ವರನನ್ನು

ಜನ್ಮಾದೇರ್ವಾಸ್ತವಿಕತ್ವಸಂಸೂತ್ರಣಾಭಾವಾತ್, "ಕಾರಣತ್ವೇನ ಚಾಕಾಶಾದಿಷು ಯಥಾವ್ಯಪದಿಷ್ಟೋಕ್ತೇಃ" (೧-೪-೧೪) ಇತಿ ಸತ್ಯಪಿ ಕಾರ್ಯವಿಷಯೇ ವಿಗಾನೇ ಪ್ರತಿವೇದಾನ್ತಂ ಕಾರಣಸ್ವರೂಪಸ್ಯೈಕರೂಪಸ್ಯೋಕ್ತಿರಿತಿ ಬ್ರಹ್ಮಸ್ವರೂಪಮಾತ್ರೇ ಶಾಸ್ತ್ರತಾತ್ಪರ್ಯಕಥನಾತ್, "ತದನನ್ಯತ್ವಮಾರಮ್ಭಣಶಬ್ದಾದಿಭ್ಯಃ" (೨-೧-೧೪) ಇತಿ ಕಾರ್ಯಸ್ಯ ಕಾರಣೇನಾನನ್ಯತ್ವೋಕ್ತೇಃ, ಕಾರ್ಯಮನಪೇಕ್ಷ್ಯ ಬ್ರಹ್ಮಣಿ ಕಾರಣತ್ವಕಲ್ಪನಾಯಾ ಅಸಂಭವಾತ್, "ತತ್ತು ಸಮನ್ವಯಾತ್" (೧-೧-೪) ಇತಿ ಚ ವೇದಾನ್ತವಾಕ್ಯಾನಾಂ ತದ್ಗತಪದಾನಾಂ ಚ ಬ್ರಹ್ಮಸ್ವರೂಪಮಾತ್ರೇ ಸಮನ್ವಯಂ ಬ್ರುವತಾ ಜಗತ್ಕಾರಣತ್ವಮಪಿ ತತ್ಸ್ವರೂಪಪ್ರವಿಷ್ಟತ್ವೇನ ವಿವಕ್ಷಿತಮಿತಿ ವಕ್ತುಮಯುಕ್ತತ್ವಾತ್, "ಅಶಬ್ದಮಸ್ಪರ್ಶಮ್" (ಕ. ೧-೩-

---

ಶಾಸ್ತ್ರಪ್ರಮಾಣವಾಗಿದೆ ಎಂದು ಸೂತ್ರಮಾಡಿರುವುದರಿಂದ (ಸರಿಯಲ್ಲ ಎಂದು ಏನು ಪೂ.ಪ ಹೇಳಿತ್ತು), ಅದರ (ವಿಷಯಕ್ಕೆ ಹೇಳಬೇಕಾದರೆ) ಜನ್ಮಾದಿಗಳು ವಾಸ್ತವಿಕವಾದದ್ದೆಂದು ಸೂತ್ರಮಾಡಿಲ್ಲವಾದ್ದರಿಂದಲೂ, "ಕಾರಣತ್ವೇನ ಚಾಕಾಶಾದಿಷು ಯಥಾವ್ಯಪದಿಷ್ಟೋಕ್ತೇಃ" (೧-೪-೧೪) ಎಂಬುದಾಗಿರುವ (ಸೂತ್ರದಲ್ಲಿ) ಪ್ರತಿವೇದಾಂತ-ದಲ್ಲೂ ಕಾರ್ಯದ ವಿಷಯಕ್ಕೆ ಬೇರೆ ಬೇರೆ ತರಹದ (ಹುಟ್ಟನ್ನು ಹೇಳಿರುವುದೆಂಬುದು) ಇದ್ದರೂ ಕಾರಣರೂಪವಾದ ಬ್ರಹ್ಮವು ಏಕರೂಪವಾಗಿದೆ ಎಂದು ಹೇಳಿರುವುದರಿಂದ ಬ್ರಹ್ಮಸ್ವರೂಪವನ್ನು ತಿಳಿಸಿಕೊಡುವುದರಲ್ಲಿ ಶಾಸ್ತ್ರಕ್ಕೆ ತಾತ್ಪರ್ಯವಿರುತ್ತದೆ. "ತದನನ್ಯತ್ವಮಾರಂಭಣಶಬ್ದಾದಿಭ್ಯಃ" (೨-೧-೧೪) ಎಂದು ಹೇಳುತ್ತಾ ಕಾರ್ಯವಾದ (ಜಗತ್ತು) ಕಾರಣಕ್ಕಿಂತ ಬೇರೆಯಾಗಿಲ್ಲವೆಂದು ಹೇಳಿರುವುದರಿಂದಲೂ, ಕಾರ್ಯವೆಂಬುದಿಲ್ಲದೇ ಬ್ರಹ್ಮದಲ್ಲಿ ಕಾರಣವೆಂಬ ಕಲ್ಪನೆಯು ಹೊಂದುವುದಿಲ್ಲವಾದ್ದರಿಂದಲೂ, "ತತ್ತು ಸಮನ್ವಯಾತ್" (೧-೧-೪) ಎಂದು ವೇದಾಂತವಾಕ್ಯಗಳಿಗೂ ಅಲ್ಲಿರುವ ಪದಗಳಿಗೂ ಬ್ರಹ್ಮಸ್ವರೂಪಮಾತ್ರದಲ್ಲೇ ಸಮನ್ವಯವನ್ನು ಹೇಳುತ್ತಾ, (ಬ್ರಹ್ಮವು) ಜಗತ್ತಿಗೆ ಕಾರಣವಾಗಿದೆ ಎಂಬುದು ಅದರ (ಬ್ರಹ್ಮದರ) ಸ್ವರೂಪಕ್ಕೇ ಸೇರಿದ್ದಾಗಿದೆ ಎಂದು ಹೇಳುವ ವಿವಕ್ಷೆ ಇರುವುದಿಲ್ಲ. "ಶಬ್ದವಿಲ್ಲದ್ದು ಸ್ಪರ್ಶವಿಲ್ಲದ್ದು" (ಕ. ೧-೩-೧೫) "ಆ ಈತನು

೧೫), "ಸ ಏಷ ನೇತಿ ನೇತ್ಯಾತ್ಮಾ" (ಬೃ. ೪-೨-೪), "ಅಥಾತ ಆದೇಶೋ ನೇತಿ ನೇತಿ ನ ಹ್ಯೇತಸ್ಮಾದಿತಿ ನೇತ್ಯನ್ಯತ್ಪರ-ಮಸ್ತಿ" (ಬೃ. ೨-೩-೬) ಇತ್ಯಾದೀನಾಮಧ್ಯಸ್ತಸರ್ವವಿಶೇಷನಿಷೇಧೇನೈವ ಬ್ರಹ್ಮ ನಿರ್ದಿಶತಾಂ ವಾಕ್ಯಾನಾಂ ಜಗತ್ಕಾರಣತ್ವವಿಶಿಷ್ಟೇ ಸಮನ್ವಯ ಇತಿ ಕಲ್ಪಯಿತುಮಶಕ್ಯತ್ವಾತ್, "ತೇಜಸಾ ಸೋಮ್ಯ ಶುಙ್ಗೇನ ಸನ್ಮೂಲಮನ್ವಿಚ್ಛ" (ಛಾ. ೬-೮-೪) ಇತಿ ಸೃಷ್ಟಿವಾಕ್ಯಾನಾಂ ಬ್ರಹ್ಮಪ್ರತಿಪತ್ತ್ಯರ್ಥಶ್ರವಣಾಚ್ಚ ಜಗತ್ಕಾರಣತ್ವಮಧ್ಯಾರೋಪ್ಯ ತದಪವಾದೇನೈವ ಬ್ರಹ್ಮ ಲಕ್ಷಯಿತುಮಿಷ್ಟಂ ಸೂತ್ರಕಾರಸ್ಯೇತ್ಯವಗಮ್ಯತೇ ॥

**೬೪. ಬನ್ಧಸ್ಯಾಽನಧ್ಯಸ್ತತ್ವೇ ದೋಷಾಃ** – ಯತ್ ಸತ್ಯಸಂಕಲ್ಪೇನ ಪರಮೇಶ್ವರೇಣ ನಿರ್ಮಿತತ್ವಾತ್ ಸತ್ಯ ಏವ ಸಂಸಾರಬನ್ಧ ಇತಿ । ತದಸತ್। ಬನ್ಧಸ್ಯ ಸ್ವೇನ ರೂಪೇಣ ಸತ್ಯತ್ವೇ ಮೋಕ್ಷಪ್ರತ್ಯಾಶಾಭಾವಪ್ರಸಙ್ಗಾತ್ ।

---

ಹೀಗಲ್ಲ ಹೀಗಲ್ಲ ಎನ್ನುವ ಸ್ವರೂಪದವನು" (ಬೃ. ೪-೨-೪), "ಇನ್ನು ಆದ್ದರಿಂದ ಆದೇಶವು ಹೀಗಲ್ಲ ಹೀಗಲ್ಲ ಎಂದು. ಹೀಗಲ್ಲ ಎಂಬುದಕ್ಕಿಂತ ಬೇರೆಯಾಗಿ ಇದಕ್ಕಿಂತ ಹೆಚ್ಚಿನ (ಉಪದೇಶ ಪ್ರಕಾರ) ವಿರುವುದಿಲ್ಲ" (ಬೃ. ೨-೩-೬) ಎಂಬುದಾಗಿರುವ ವಾಕ್ಯಗಳು ಅಧ್ಯಸ್ತವಾದ ಎಲ್ಲಾ ವಿಶೇಷವನ್ನೂ ನಿಷೇಧಮಾಡುವುದರ ಮೂಲಕವಾಗಿಯೇ ಬ್ರಹ್ಮವನ್ನು ನಿರ್ದೇಶಮಾಡುತ್ತಿವೆ. ಅವುಗಳಿಗೆ ಜಗತ್ಕಾರಣತ್ವದಿಂದ ಕೂಡಿದ ಬ್ರಹ್ಮದಲ್ಲಿ ಸಮನ್ವಯ ಇದೆ ಎಂದು ಕಲ್ಪನೆ ಮಾಡುವುದು ಹೊಂದುವುದಿಲ್ಲವಾದ್ದರಿಂದಲೂ, "ತೇಜಸ್ಸೆಂಬ ಕಾರ್ಯದಿಂದ ಸೌಮ್ಯನೇ ಸತ್ತೆಂಬ ಮೂಲವನ್ನು ಹುಡುಕುವನಾಗು" (ಛಾಂ ೬-೮-೪) ಎಂದು ಕೇಳಿಬರುತ್ತಿರುವುದರಿಂದ, (ಅವು ಬ್ರಹ್ಮದಲ್ಲಿ) ಜಗತ್ಕಾರಣತ್ವವನ್ನು ಅಧ್ಯಾರೋಪಮಾಡಿ ಅದರ ಅಪವಾದದಿಂದ ಬ್ರಹ್ಮವನ್ನು ಲಕ್ಷಿಸುವುದೆಂಬುದು ಸೂತ್ರಕಾರರಿಗೆ ಇಷ್ಟವೆಂದು ಗೊತ್ತಾಗುತ್ತದೆ.

**೬೪. ಬಂಧವು ಅಧ್ಯಸ್ತವಲ್ಲವೆಂದರೆ ದೋಷಗಳು** – ಸತ್ಯ ಸಂಕಲ್ಪನಾದ ಪರಮಾತ್ಮನಿಂದ ನಿರ್ಮಾಣವಾದ್ದರಿಂದ ಈ ಸಂಸಾರಬಂಧವೂ ಸತ್ಯವೇ ಆಗಿರಬೇಕೆಂದು (ಪೂ. ಪ ಏನು) ಹೇಳಿತ್ತು, ಅದು ಸರಿಯಲ್ಲ, ಬಂಧವು ತನ್ನ ರೂಪದಿಂದ ಸತ್ಯವಾಗಿದ್ದರೆ ಮೋಕ್ಷದ ಬಗ್ಗೆ ಆಸೆ ಪಡಬೇಕಾಗಿಲ್ಲ

ಸತ್ಯಸಂಸಾರಸ್ರಷ್ಟುಃ ಪರಮೇಶ್ವರೇ ವೈಷಮ್ಯನೈರ್ಘೃಣ್ಯಾದಿದೋಷ-ಪ್ರಸಙ್ಗಾಚ್ಚ । ಪ್ರತ್ಯಗಾತ್ಮರೂಪೇಣ ತು ಸರ್ವಸ್ಯಾಪಿ ಸತ್ಯತ್ವಮಭ್ಯುಪೇಯತ ಏವಾಽಸ್ಮಾಭಿರಪೀತಿ ನ ಕೋಽಪಿ ದೋಷೋಽಸ್ಮಿನ್ ಪಕ್ಷೇ । "ಸತ್ಯಂ ಚಾನೃತಂ ಚ ಸತ್ಯಮಭವತ್" (ತೈ. ೨-೬) ಇತಿ ಸತ್ಯಸಂಕಲ್ಪಸ್ಯೈವ ಪರಮೇಶ್ವರಸ್ಯ ಸತ್ಯಾನೃತೋಭಯರೂಪೇಣ ವಿವರ್ತಶ್ರವಣಾತ್ ಬನ್ಧಸ್ಯಾನೃತತ್ವೇಽಪಿ ಸತ್ಯಸಂಕಲ್ಪತ್ವಸ್ಯಾಽವ್ಯಾಹತೇಃ ॥

ಏತೇನ ಯದಾಶಙ್ಕಿತಂ ಸತ್ಯಸ್ಯಾಪಿ ನಿಗಡಬನ್ಧಾದೇಃ ಪ್ರಭುಪ್ರಸಾದಾನ್ನಿ-ವೃತ್ತಿದರ್ಶನಾದ್ಬನ್ಧವಿಧ್ವಂಸಲಕ್ಷಣಾಯಾ ಮುಕ್ತೇರ್ಬನ್ಧಮಿಥ್ಯಾತ್ವಂ ನಾಪೇಕ್ಷ್ಯತ ಇತಿ । ತದಪಿ ಪ್ರತ್ಯುಕ್ತಂ ಭವತಿ । ವಿದ್ಯಾಮಾತ್ರನಿವರ್ತ್ಯಸ್ಯಾ-ಧ್ಯಸ್ತತ್ವಾವಶ್ಯಂಭಾವಾತ್ । ಪ್ರಭುಪ್ರಸಾದಾನ್ಮುಕ್ತಬನ್ಧಸ್ಯಾಪ್ಯಪರಾಧಾನ್ತರೇಣ

---

ಎನ್ನುವ ಪ್ರಸಂಗವುಂಟಾಗುತ್ತದೆ. ಸತ್ಯವಾದ ಸಂಸಾರವನ್ನು ಸೃಷ್ಟಿಮಾಡಿರುವ ಪರಮಾತ್ಮನಿಗೆ ವೈಷಮ್ಯನೈರ್ಘೃಣ್ಯವೂ (ಅಸಮಾನತೆ ಮತ್ತು ಕರುಣೆ ಇಲ್ಲದಿರುವಿಕೆ) ಬಂದೊದಗುವುದು. ಪ್ರತ್ಯಗಾತ್ಮರೂಪದಿಂದಲಾದರೋ ನಾವು ಎಲ್ಲವನ್ನು ಸತ್ಯವೆಂದು ಒಪ್ಪಿಯೇ ಇರುತ್ತೇವಾದ್ದರಿಂದ ಈ ಪಕ್ಷದಲ್ಲಿ ಯಾವ ದೋಷವೂ ಇಲ್ಲ. "ಸತ್ಯಾನೃತವಾಗಿ ಸತ್ಯವೇ ಆಯಿತು" (ತೈ. ೨-೬) ಎಂದು ಸತ್ಯಸಂಕಲ್ಪನಾದ ಪರಮೇಶ್ವರನೇ ಸತ್ಯ ಅನೃತವೆಂಬ ಎರಡು ರೂಪದಿಂದ ಬದಲಾವಣೆಯಾದನೆಂದಿರುವುದರಿಂದ ಬಂಧವು ಸುಳ್ಳಾದರೂ ಸತ್ಯಸಂಕಲ್ಪನಾಗಿದ್ದಾನೆಂಬುದು ಹೋಗುವುದಿಲ್ಲ. ಇಷ್ಟು ಹೇಳಿದ್ದರಿಂದ (ಬಂಧವು ಸತ್ಯವೆಂದು ಹೇಳುವ ವಾದಿಯು) ಸಂದೇಹಪಟ್ಟಿದ್ದ ಬೇಡಿಯ ಬಂಧವೇ ಮುಂತಾದದ್ದು (ನಿಜವಾದರೂ) ರಾಜನ ಪ್ರಸನ್ನತೆಯಿಂದ ನಿವೃತ್ತಿಯಾಗುವುದು ಕಂಡುಬರುತ್ತಲಿದೆ, ಆದರಂತೆ ಬಂಧವು ಕಳಚಿಹೋಗುವ ರೂಪದ್ದಾದ ಮುಕ್ತಿಗೆ ಬಂಧವು ಸುಳ್ಳಾಗಿರಬೇಕೆಂಬುದೇನೂ ಇಲ್ಲ (ಎಂದಿದ್ದನಲ್ಲ) ಅದಕ್ಕೂ ಉತ್ತರವನ್ನು ಕೊಟ್ಟಂತಾಯಿತೆಂದು ತಿಳಿಯಬೇಕು. ಹೇಗೆಂದರೆ – ವಿದ್ಯಾಮಾತ್ರದಿಂದ ನಿವೃತ್ತಿಯಾಗುವಂಥದ್ದೆಲ್ಲಾ ಅವಶ್ಯವಾಗಿ (ಮಿಥ್ಯೆಯೇ) ಆಗಿರಬೇಕು. ರಾಜನ ಅನುಗ್ರಹದಿಂದ ಬಿಡುಗಡೆಹೊಂದಿದವನಿಗೆ ಇನ್ನೊಂದು ಅಪರಾಧದಿಂದ ಮತ್ತೊಮ್ಮೆ ಬಂಧವುಂಟಾಗಬಹುದಾಗಿದೆ.

ಪುನರಪಿ ಬನ್ಧೇ ನಿವಾರಕಾಭಾವಾತ್ ಪ್ರಭುಪ್ರಸಾದೋಽಪ್ಯವಿದ್ಯಾಧ್ಯಾಸ-ನಿರಾಸದ್ವಾರೈವ ಬನ್ಧಂ ವಿಧ್ವಂಸಯಿತುಮೀಷ್ಟೇ ನಾನ್ಯಥೇತಿ ಶ್ಲಿಷ್ಯತೇ । ಉಕ್ತಂ ಚ **ಭಗವತಾ** – "ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ" ಇತಿ, "ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ । ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ" (ಗೀ. ೧೦-೧೦,೧೧) ಇತಿ ಚ ॥

ಯತ್ತು ಪುನರಾಶಙ್ಕಿತಮ್ ಜ್ಞಾನೇನಾಧ್ಯಸ್ತಬನ್ಧವಿನಾಶೇ ಸತಿ ಮುಕ್ತಿರ್ನ ಕಿಮಪ್ಯನ್ಯದಪೇಕ್ಷತ ಇತಿ ಜ್ಞಾನಸಮಕಾಲ ಏವ ಶರೀರಾದಿನಿವೃತ್ತಿಃ ಸ್ಯಾದಿತಿ। ತತ್ತುಚ್ಛಮ್ । ನ ಹ್ಯನಧ್ಯಸ್ತಂ ಶರೀರಮನ್ಯದ್ವಾ ಕಿಞ್ಚಿದಭ್ಯುಪ-ಗಮ್ಯತೇಽಸ್ಮಾಭಿರ್ಯೇನ ತನ್ನಿವೃತ್ತಿಬಿಭೀಷಿಕಾ ಸ್ಯಾದರ್ಥವತೀ । ವಕ್ಷ್ಯತಿ ಚ ಸ್ವಯಮೇವ ಭಗವಾನ್ **ಭಾಷ್ಯಕಾರಃ** – "ಸಶರೀರತ್ವಸ್ಯ ಮಿಥ್ಯಾಜ್ಞಾನ-

---

ಸ್ವಾಮಿಯ (ಪರಮಾತ್ಮನ) ಅನುಗ್ರಹವೆಂಬುದೂ ಅವಿದ್ಯೆ ಎಂಬ ಅಧ್ಯಾಸವನ್ನು ತೊಲಗಿಸುವ ಮೂಲಕವೇ ಬಂಧವನ್ನು ನಾಶಮಾಡಲು ಸಮರ್ಥವಾಗಿದೆಯೇ ಹೊರತು ಬೇರೆ ತರಹ ಆಗುವುದಿಲ್ಲ. ಭಗವಂತನೂ ಇದನ್ನು ಹೇಳಿರುತ್ತಾನೆ. "ಯಾವುದರಿಂದ ನನ್ನ ಬಳಿಗೆ ಬರುತ್ತಾರೋ ಅವರಿಗೆ ಆ ಬುದ್ಧಿಯೋಗವನ್ನು ಕೊಡುತ್ತೇನೆ" ಎಂದು, "ಅವರಿಗೇನೇ ಅನುಗ್ರಹವಾಗಲೆಂದು ನಾನು ಅಜ್ಞಾನದಿಂದಾದ ಕತ್ತಲೆಯನ್ನು ಅವರ ಅಂತಃಕರಣದಲ್ಲಿದ್ದುಕೊಂಡು ಹೊಳೆಯುವ ಜ್ಞಾನದೀಪದಿಂದ ನಾಶಮಾಡುವೆನು" ಎಂದೂ ಹೇಳಿರುತ್ತಾನೆ.

ಜ್ಞಾನದಿಂದ ಅಧ್ಯಸ್ತವಾದ ಬಂಧವು ನಾಶವಾದರೆ ಮುಕ್ತಿಯಾಗುವುದಿಲ್ಲ, ಬೇರೆ ಇನ್ನೇನನ್ನಾದರೂ (ಮಾಡ)ಬೇಕು, ಆದ್ದರಿಂದ ಜ್ಞಾನವಾದ ಕಾಲದಲ್ಲಿಯೇ ಶರೀರಾದಿಗಳು ತೊಲಗಿಹೋಗಬೇಕು ಎಂದು (ಪೂ. ಪ) ಏನು ಸಂದೇಹವನ್ನು ಮಾಡಿದ್ದನು, ಅದು ಹುರುಳಿಲ್ಲದ್ದು – (ಏಕೆಂದರೆ) ಅಧ್ಯಸ್ತವಲ್ಲದ್ದಾದ ಶರೀರವನ್ನಾಗಲೀ ಇನ್ನೊಂದನ್ನಾಗಲೀ ನಾವು ಒಪ್ಪಿಕೊಳ್ಳುವುದಿಲ್ಲ, ಹಾಗೇನಾದರೂ ಇದ್ದಿದ್ದರೆ ಅದು ಹೋಗಿಬಿಡುತ್ತದೆ ಎಂಬ ಹೆದರಿಕೆಯು ಅರ್ಥವುಳ್ಳದ್ದಾಗುತ್ತದೆ. ಮುಂದೆ ಭಗವಂತರಾದ ಭಾಷ್ಯಕಾರರೇ ಹೇಳುವವರಾಗಿದ್ದಾರೆ "ಸಶರೀರವೆಂಬುದು ಮಿಥ್ಯಾಜ್ಞಾನ

ನಿಮಿತ್ತತ್ವಾತ್ (ಸೂ.ಭಾ. ೧-೧-೪, ಭಾ.ಭಾ ೫೮) ಇತಿ । ತಸ್ಮಾತ್ ಸರ್ವಥಾಪಿ ಸಂಗತಮೇವೇದಮಧ್ಯಾಸವರ್ಣನಮಿತ್ಯಲಂ ಪಲ್ಲವಿತೇನ ॥

**೬೫. ಆತ್ಮೈಕತ್ವವಿದ್ಯಾಽಪ್ರತಿಪತ್ತಿವಿಷಯೇ ಶಙ್ಕಾ** – ಇದಮಿದಾನೀಮುಪರಮಾಶಙ್ಕ್ಯತೇ । ಅವಿದ್ಯಾಪ್ರಹಾಣಾಯಾತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತ ಇತಿ ಯದುಕ್ತಮ್ ತನ್ನೋಪಪದ್ಯತೇ । ನಿರ್ವಿಶೇಷಚಿನ್ಮಾತ್ರಜ್ಞಾನಂ ಹಿ ವಿದ್ಯೇಷ್ಯತೇ ಭವತಾ। ನ ತು ತತ್ರ ಪ್ರಮಾಣಂ ಕಿಂಚಿತ್ ಪಶ್ಯಾಮಃ । ಪ್ರತ್ಯಕ್ಷಾದೀನಾಂ ಹಿ ಸರ್ವೇಷಾಂ ಸವಿಶೇಷವಸ್ತುನ್ಯೇವ ಪ್ರಮಾಣಭಾವಃ । ಶಬ್ದಸ್ಯ ಚ ವಿಶೇಷೇಣ ಸವಿಶೇಷವಸ್ತುನ್ಯೇವಾಭಿಧಾನಸಾಮರ್ಥ್ಯಮ್ । ಪ್ರಕೃತಿಪ್ರತ್ಯಯಯೋಗಾತ್ಮಕಸ್ಯ ಪದಸ್ಯ ವಿಶಿಷ್ಟಾರ್ಥಪ್ರತಿಪಾದಕತ್ವಸ್ಯಾಽವರ್ಜನೀಯತ್ವಾತ್ । ಪದಸಙ್ಘಾತರೂಪಸ್ಯ ವಾಕ್ಯಸ್ಯ ಚಾನೇಕಪದಾರ್ಥಸಂಸರ್ಗವಿಶೇಷಾಭಿಧಾಯಿತ್ವಾತ್ ।

---

ನಿಮಿತ್ತದಿಂದಾದ್ದರಿಂದ" (ಸೂ.ಭಾ ೧-೧-೪) ಎಂದಿರುತ್ತಾರೆ. ಆದ್ದರಿಂದ ಎಲ್ಲಾ ರೀತಿಯಿಂದಲೂ ಈ ಅಧ್ಯಾಸದ ವರ್ಣನೆಯು ಹೊಂದುಗಡೆಯಾದದ್ದು, ಆದ್ದರಿಂದ ಹೆಚ್ಚಾಗಿ ಬೆಳೆಸುವುದು ಸಾಕು.

**೬೫. ಆತ್ಮೈಕತ್ವವಿದ್ಯೆಯನ್ನು ತಿಳಿದುಕೊಳ್ಳದ ವಿಷಯದಲ್ಲಿ ಸಂದೇಹವು** – ಈಗ ಈ ಇನ್ನೊಂದನ್ನು ಸಂದೇಹಮಾಡಲಾಗುತ್ತದೆ. ಅವಿದ್ಯೆಯನ್ನು ಕಳೆಯುವುದಕ್ಕಾಗಿಯೂ ಆತ್ಮೈಕತ್ವವಿದ್ಯೆಯನ್ನು ಹೊಂದುವುದಕ್ಕಾಗಿಯೂ ಎಲ್ಲಾ ವೇದಾಂತಗಳೂ ಆರಂಭವಾಗಿವೆ ಎಂದು ಏನು ಹೇಳಿದೆ, ಅದು ಹೊಂದುವುದಿಲ್ಲ. (ಏಕೆಂದರೆ), ನಿರ್ವಿಶೇಷವಾದ ಚಿನ್ಮಾತ್ರಜ್ಞಾನವಲ್ಲವೆ ವಿದ್ಯೆ ಎಂದು ನೀನಿಷ್ಟಪಡುವುದು ? ಆದರೆ ಅದರ ವಿಷಯದಲ್ಲಿ ಯಾವ ಪ್ರಮಾಣವನ್ನೂ ಕಾಣೆವು. ಪ್ರತ್ಯಕ್ಷವೇ ಮುಂತಾದ ಎಲ್ಲಾ ಪ್ರಮಾಣಗಳಿಗೂ ಸವಿಶೇಷವಾದ ವಸ್ತುವಿನಲ್ಲೇ ಪ್ರಮಾಣವಿರುತ್ತದೆ. ಶಾಸ್ತ್ರಕ್ಕೂ ಸಹ ವಿಶೇಷವಾಗಿ ಸವಿಶೇಷವಾದ ವಸ್ತುವಿನ ವಿಷಯದಲ್ಲೇ ಹೇಳುವ ಸಾಮರ್ಥ್ಯವಿರುತ್ತದೆ. ಪ್ರಕೃತಿಪ್ರತ್ಯಯಸಂಬಂಧರೂಪವಾದ ಪದಕ್ಕೆ ವಿಶೇಷವಾದ ಅರ್ಥವನ್ನು ತಿಳಿಸುವುದೆಂಬುದು ತಪ್ಪಿಸಿಕೊಳ್ಳುವುದಕ್ಕಾಗದೆ ಇದ್ದದ್ದಾಗಿದೆ. ಪದದ ಗುಂಪಿನ ರೂಪವಾದ ವಾಕ್ಯವು ಅನೇಕ ಪದದ ಅರ್ಥಗಳ

ಯತ್ತೂಚ್ಯತೇ ಪ್ರತ್ಯಕ್ಷಾದೀನಾಮವಿದ್ಯಾಪುರಸ್ಸರಾ ಪ್ರವೃತ್ತಿರಿತಿ । ತತ್ಪರಾಪ-ಶಕುನಾಯ ಸ್ವನಾಸಾಚ್ಛೇದಃ ಕ್ರಿಯತೇ । ಶಾಸ್ತ್ರಸ್ಯಾಪ್ಯವಿದ್ಯಾಪುರಸ್ಸರತ್ವೇನ ಪ್ರತ್ಯಕ್ಷಾದಿತೋ ವಿಶೇಷಾಭಾವಾತ್ ತಸ್ಯಾಽವಿದ್ಯಾನಿರಸನಸಾಮರ್ಥ್ಯಾ-ಭಾವಪ್ರಸಙ್ಗಾತ್ । ನ ಹಿ ಭ್ರಾನ್ತೋಽಯಮಿತಿ ಪರಿಜ್ಞಾತೇನ ಕೇನಚಿತ್ "ನಾಯಂ ಸರ್ಪೋ ಮಾ ಭೈಷೀಃ" ಇತ್ಯುಕ್ತೇಽಪಿ ಭಯನಿವೃತ್ತಿರ್ಭವೇತ್। ನ ಚಾಽಽಪಾತತಃ ಪ್ರಮಾಣತ್ವೇನ ಸ್ವೀಕೃತೇನ ಶಾಸ್ತ್ರೇಣ ಪ್ರತ್ಯಕ್ಷಾದಿ-ವಿಷಯಬಾಧೇ ಸತಿ ಶಾಸ್ತ್ರಾವಗತಾದ್ವಿತೀಯಾತ್ಮನೋ ಬಾಧಾಭಾವಾದೇವ ಪರಮಾರ್ಥತ್ವಮಿತ್ಯುತ್ಥಾನಂ ಸಂಭವತಿ । ನಿರ್ಜನಪ್ರದೇಶೇ ವಸತೋಽ-ಜ್ಞಾತಸ್ವತಿಮಿರಸ್ಯ ಜಾಯಮಾನದ್ವಿಚನ್ದ್ರಜ್ಞಾನಸ್ಯೇವ ಶಾಸ್ತ್ರೀಯಜ್ಞಾನಸ್ಯ ಬಾಧಾಭಾವೇಽಪಿ ಮಿಥ್ಯಾತ್ವಾತಿಕ್ರಮಣಜಙ್ಘಾಲತ್ವಾಸಂಭವಾತ್ ॥

---

ಸಂಬಂಧದಿಂದ ವಿಶೇಷವಾದದ್ದನ್ನು ಹೇಳುವದಾಗಿರುತ್ತದೆ. ಪ್ರತ್ಯಕ್ಷಾದಿಗಳು ಅವಿದ್ಯಾಪುರಸ್ಸರವಾಗಿ ಪ್ರವೃತ್ತಿಮಾಡುವುದು (ಎಂದು) ಏನು ಹೇಳಿತ್ತು, ಅದು ಇನ್ನೊಬ್ಬರಿಗೆ ಕೆಟ್ಟದನ್ನು ಮಾಡುವುದಕ್ಕೆ (ಹೊರಟು) ತನ್ನ ಮೂಗನ್ನೇ ಕೊಯ್ದುಕೊಳ್ಳುವಂತಹ ಕೆಲಸವಾಗುತ್ತದೆ. (ಏಕೆಂದರೆ) ಆಗ ಶಾಸ್ತ್ರವೂ ಅವಿದ್ಯಾಪುರಸ್ಸರವಾದ್ದರಿಂದ ಪ್ರತ್ಯಕ್ಷಾದಿಗಳಿಗಿಂತ ವಿಶೇಷವಿಲ್ಲವಾದ್ದರಿಂದ ಆ ಶಾಸ್ತ್ರಕ್ಕೂ ಅವಿದ್ಯೆಯನ್ನು ತೆಗೆದುಹಾಕುವ ಸಾಮರ್ಥ್ಯವಿಲ್ಲವೆಂಬ ಪ್ರಸಂಗವು ಬಂದೊದಗುತ್ತದೆ. ಈತನು ಭ್ರಾಂತನಾಗಿದ್ದಾನೆ ಎಂದು ಯಾರಿಗಾದರೂ ಗೊತ್ತಾದಾಗ (ಅವನು) "ಇದು ಹಾವಲ್ಲ ಹೆದರಬೇಡ" ಎಂದು ಹೇಳಿದಮೇಲೂ ಭಯನಿವೃತ್ತಿಯಾಗುವುದಿಲ್ಲವಷ್ಟೆ ? ಮೇಲುನೋಟಕ್ಕೆ ಪ್ರಮಾಣವೆಂದು ಸ್ವೀಕರಿಸಿದ ಶಾಸ್ತ್ರದಿಂದ ಪ್ರತ್ಯಕ್ಷಾದಿಗಳ ವಿಷಯವು ಬಾಧೆಯಾಗಲಾಗಿ ಶಾಸ್ತ್ರದಿಂದ ತಿಳಿದು ಬಂದ ಅದ್ವಯಾತ್ಮನು ಬಾಧೆಯಾಗದೇ ಇರುವುದರಿಂದಲೇ ಪರಮಾರ್ಥವಾದದ್ದೆಂದು ನಿಲ್ಲುವುದಿಲ್ಲವಷ್ಟೆ ? ಯಾವ ಜನರೂ ಇಲ್ಲದ ಸ್ಥಳದಲ್ಲಿದ್ದವನಿಗೆ ತನಗೆ ಕಣ್ಣಿನ ಪೊರೆಯು ಬಂದಿದೆ ಎಂಬುದೂ ತಿಳಿಯದವನಿಗೆ ಎರಡು ಚಂದ್ರ ಜ್ಞಾನವು ಹುಟ್ಟಿಕೊಳ್ಳುವುದು ಹೇಗೆ (ಬಾಧೆಯಾಗದ ಜ್ಞಾನವಾದರೂ ಸುಳ್ಳಾದದ್ದೋ) ಅದರಂತೆ (ಅವಿದ್ಯಾಪುರಸ್ಸರವಾದ) ಶಾಸ್ತ್ರದಿಂದುಂಟಾದ ಜ್ಞಾನವು ಬಾಧೆಯಾಗದೇ ಹೋದರೂ ಮಿಥ್ಯೆಯಾಗಿದೆ ಎಂಬುದನ್ನು ಮೀರುವ ಸಾಮರ್ಥ್ಯವುಳ್ಳದ್ದೆಂದಾ-ಗುವುದಿಲ್ಲವಷ್ಟೆ ?

ಅಭ್ಯುಪಗಮ್ಯೇದಮುಕ್ತಮ್ । ನ ತು ನಿರ್ವಿಶೇಷಚಿನ್ಮಾತ್ರಂ ವಸ್ತು ಕುತ್ರಚಿದಸ್ತಿ। ಚಿದ್ಗುಣಕಂ ಹಿ ಚಿದ್ವಸ್ತ್ವಿತಿ ಸುಪ್ರಸಿದ್ಧಮ್ । ಆತ್ಮಾ ಹಿ ಚಿದ್ರೂಪಃ। ಸ್ವಸ್ಮೈ ಸ್ವಯಂಪ್ರಕಾಶಮಾನತ್ವಾತ್ । ಚಿದ್ಗುಣಸ್ತು ತತ್ಸಂಬನ್ಧಾಧೀನತಯಾ ತಂ ಪ್ರತಿ ಪ್ರಕಾಶತ ಇತ್ಯತೋ ನ ಸ್ವಯಂಪ್ರಕಾಶಃ । ಸಂವಿದನುಭವಜ್ಞಾನಾದಿ-ಶಬ್ದಾಃ ಖಲು ಚಿದ್ಗುಣವಾಚಕಾಃ ಸಂಬನ್ಧಿಶಬ್ದತ್ವಾತ್ತತ್ಕರ್ತಾರಂ ಕರ್ಮ ಚಾನಪೇಕ್ಷ್ಯ ನ ಪ್ರಯುಜ್ಯನ್ತೇ । ಅತಃ ಸ್ವಯಂಪ್ರಕಾಶೋಽಯಮಾತ್ಮಾ ಜ್ಞಾತೈವ ನ ಜ್ಞಾನಮಾತ್ರಮ್ । ನ ಚ ಜ್ಞಾನಗುಣೇನಾಽಸ್ಯ ವಿಕಾರಃ ಶಕ್ಯಶಙ್ಕಃ । ಜ್ಞಾನಗುಣಸ್ಯ ನಿತ್ಯತ್ವಾತ್ । ಸುಷುಪ್ತಿಮೂರ್ಛಾದಾವಪಿ ಸದೇವ ಗುಣಭೂತಂ ಜ್ಞಾನಂ ಕರ್ಮಣಾ ಸಙ್ಕುಚಿತಮನಭಿವ್ಯಕ್ತಂ ಜಾಗರಾದೌ ವಿಕಸಿತಮಭಿವ್ಯಜ್ಯತ ಇತ್ಯವಿರೋಧಃ । ತದೇವಂ ಚಿನ್ಮಾತ್ರರೂಪಂ ವಸ್ತು ನ

---

ಇದುವರೆಗೆ (ನಿನ್ನ ವಾದವನ್ನು) ಒಪ್ಪಿಕೊಂಡು ಹೇಳಿದ್ದು, ಆದರೆ ನಿರ್ವಿಶೇಷವಾದ ಚಿನ್ಮಾತ್ರವಾದ ವಸ್ತು ಎಂಬುದು ಎಲ್ಲೂ ಇಲ್ಲವೇ ಇಲ್ಲ. ಚಿತ್‌ಗುಣದಿಂದ ಕೂಡಿದ್ದೇ ಚಿತ್ತಾದ ವಸ್ತುವು ಎಂದು ಪ್ರಸಿದ್ಧಿ ಇದೆ. ಆತ್ಮನು ಚಿದ್ರೂಪನಲ್ಲವೆ? ತನಗೆ ತಾನು ತೋರುವವನಾದ್ದರಿಂದ (ತಾನು ಚಿದ್ರೂಪನು). ಚಿದ್ಗುಣವಾದ ವಸ್ತುವಾದರೋ ಅದಕ್ಕೆ ಸಂಬಂಧ್‌ವಾಗಿ ಅಧೀನವಾಗಿರುವುದರಿಂದ, ಅವನಿಗಾಗಿ ತೋರುತ್ತದೆಯಾದ್ದರಿಂದ, ಅದು ಸ್ವಯಂಪ್ರಕಾಶವಲ್ಲ. ಸಂವಿತ್, ಅನುಭವ, ಜ್ಞಾನ ಮುಂತಾದ ಶಬ್ದಗಳು ಚಿತ್‌ಗುಣವಾದದ್ದನ್ನು ಹೇಳುವವುಗಳಾಗಿದ್ದು ಅದು ಸಂಬಂಧವುಳ್ಳ-ಶಬ್ದವಾದ್ದರಿಂದ ಅದಕ್ಕೊಬ್ಬ ಕರ್ತೃ ಮತ್ತು ಕರ್ಮವನ್ನು ಅಪೇಕ್ಷಿಸಿಕೊಳ್ಳದೇ ಪ್ರಯೋಗಿಸಲ್ಪಡುವುದಿಲ್ಲವಷ್ಟೇ ? ಆದ್ದರಿಂದ ಸ್ವಯಂಪ್ರಕಾಶನಾದ ಈ ಆತ್ಮನು ಜ್ಞಾತೃವೇ ಹೊರತು ಬರೀ ಜ್ಞಾನಮಾತ್ರನಲ್ಲ. ಜ್ಞಾನಗುಣದಿಂದ ಆತ್ಮನು ವಿಕಾರಿಯಾಗುತ್ತಾನಲ್ಲಾ! ಎಂದು ಸಂದೇಹಪಡಬಾರದು. ಏಕೆಂದರೆ ಜ್ಞಾನಗುಣವು (ಅವನಿಗೆ) ನಿತ್ಯವಾಗಿದೆ. ಸುಷುಪ್ತಿ, ಮೂರ್ಛೆ ಮುಂತಾದ ಅವಸ್ಥೆಯಲ್ಲೂ ಗುಣವಾದ ಜ್ಞಾನವೂ ಇದ್ದುಕೊಂಡೆ (ತನ್ನ) ವ್ಯಾಪಾರದಿಂದ ಸಂಕುಚಿತವಾಗಿಯೂ ತೋರಿಕೊಳ್ಳದರೂಪದ್ದಾಗಿಯೂ ಇದ್ದು, ಎಚ್ಚರವೇ ಮುಂತಾದ ಸಂದರ್ಭದಲ್ಲಿ ಅರಳಿಕೊಂಡು ತೋರಿಕೊಳ್ಳುತ್ತದೆ ಎಂದಾದ್ದರಿಂದ ಇಲ್ಲೇನೂ ವಿರೋಧವಿಲ್ಲ. ಹೀಗಾಗಿ ಚಿನ್ಮಾತ್ರವಾದ ವಸ್ತು ಎಂಬುದೇ ಇಲ್ಲ,

ವಿದ್ಯತೇ ಯದ್ವಿಷಯಿಣೀ ವಿದ್ಯಾ ವಿಧೀಯೇತ ॥

ನ ಚಾತ್ಮನಾಂ ನಾನಾತ್ವೇನ ಪ್ರಸಿದ್ಧಾನಾಮೇಕತ್ವಂ ಪ್ರತಿಪಾದಯಿತು-ಮರ್ಹನ್ತಿ ವೇದಾನ್ತಾಃ । ನತರಾಮಾತ್ಮಬ್ರಹ್ಮಣೋರೇಕತ್ವಮ್ । ಆದಿತ್ಯಾದಿ-ಜೀವೇಭ್ಯೋ ಹಿ ಭೇದಃ ಸ್ಫುಟಂ ವ್ಯಪದಿಶ್ಯತೇ ಬ್ರಹ್ಮಣಃ ಶ್ರುತ್ಯನ್ತೇಷು – "ಯ ಆದಿತ್ಯೇ ತಿಷ್ಠನ್ನಾದಿತ್ಯಾದನ್ತರೋ ಯಮಾದಿತ್ಯೋ ನ ವೇದ ಯಸ್ಯಾದಿತ್ಯಃ ಶರೀರಂ ಯ ಆದಿತ್ಯಮನ್ತರೋ ಯಮಯತಿ" (ಬೃ. ೩–೭–೯), "ಯ ಆತ್ಮನಿ ತಿಷ್ಠನ್" (ಬೃ. ಮಾ. ೩–೭–೨೨) ಇತಿ । ಸೂತ್ರೇ ಚ – "ಅಧಿಕಂ ತು ಭೇದನಿರ್ದೇಶಾತ್" (೨–೧–೨೨), "ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್" (೩–೪–೮) ಇತಿ । ತಸ್ಮಾದ್ಭೇದ ಏವ ಜೀವಾನಾಂ ಪರಸ್ಪರಂ ಪರಮಾತ್ಮನಃ ಸಕಾಶಾದಪೀತಿ ಯುಕ್ತಮ್ । "ಪರಮಂ ಸಾಮ್ಯಮುಪೈತಿ" (ಮುಂ. ೩–೧–೩), "ಮಮ

---

ಹಾಗೇನಾದರೂ ಇದ್ದಿದ್ದರೆ ಅದಕ್ಕಾಗಿ (ಶಾಸ್ತ್ರದಲ್ಲಿ) ವಿದ್ಯೆಯನ್ನು ವಿಧಿಸಬಹುದಾಗಿತ್ತು.

ಇನ್ನು ನಾನಾರೂಪರಾಗಿ ಪ್ರಸಿದ್ಧರಾಗಿರುವ ಆತ್ಮರುಗಳಿಗೆ ವೇದಾಂತಗಳು ಏಕತ್ವವನ್ನು ಪ್ರತಿಪಾದಿಸುವುದಕ್ಕೆ ಸಮರ್ಥವಲ್ಲ. ಇನ್ನು ಆತ್ಮ ಬ್ರಹ್ಮರಿಗೆ ಏಕತ್ವವನ್ನಂತೂ ಹೇಳುವುದೇ ಇಲ್ಲ. ಆದಿತ್ಯನೇ ಮುಂತಾದ ಜೀವರುಗಳಿಗಿಂತ ಬ್ರಹ್ಮನನ್ನು ಬೇರೆಯಾಗಿ ಸ್ಪಷ್ಟವಾಗಿ ಬೇರೊಂದು ಶ್ರುತಿಯಲ್ಲಿ ಹೇಳಿಯೂ ಇದೆ. "ಯಾವಾತನು ಆದಿತ್ಯನಲ್ಲಿದ್ದು, ಆದಿತ್ಯನಿಗೂ ಒಳಗಿರುವನೋ, ಯಾವಾತನನ್ನು ಆದಿತ್ಯನೂ ಅರಿಯನೋ, ಯಾವಾತನಿಗೆ ಆದಿತ್ಯನೂ ಶರೀರನೋ, ಯಾವಾತನು ಆದಿತ್ಯನೊಳಗಿದ್ದು (ಆತನನ್ನು) ಹತೋಟಿಯಲ್ಲಿಡುತ್ತಿದ್ದಾನೋ" (ಬೃ. ೩–೭–೯), "ಯಾವಾತನು ಆತ್ಮನಲ್ಲಿದ್ದುಕೊಂಡು" (ಬೃ. ಮಾ. ೩–೭–೨೨), ಎಂಬ (ಶ್ರುತಿ) ಇದೆ. ಬ್ರಹ್ಮಸೂತ್ರದಲ್ಲೂ (ಸಹ) "ಹೆಚ್ಚಿನದಾದ ಬ್ರಹ್ಮವೇ ಕಾರಣವಾಗಿರುತ್ತದೆ. ಏಕೆಂದರೆ ಬೇರೆಯಾಗಿ ತಿಳಿಸಿರುವುದರಿಂದ" (೨–೧–೨೨) "ಆದರೆ ಹೆಚ್ಚಾಗಿ ಉಪದೇಶವಿರುವುದರಿಂದ ಬಾದರಾಯಣರಿಗೂ ಸಮ್ಮತವೇ – ಅದೇ ಸರಿ ಏಕೆಂದರೆ ಆ ರೀತಿ ಶ್ರುತಿ ಇರುವುದರಿಂದ ಎಂದಿದೆ" (೩–೪–೮). ಆದ್ದರಿಂದ ಜೀವರಿಗೆ ಪರಸ್ಪರವಾಗಿಯೂ ಪರಮಾತ್ಮನಿಂದಲೂ ಭೇದವಿದೆ ಎಂಬುದೇ

ಸಾಧರ್ಮ್ಯಮಾಗತಾಃ" (ಗೀ. ೧೪–೨) ಇತಿ ತು ಬ್ರಹ್ಮಪ್ರಕಾರಭೂತಸ್ಯೈವ ಪ್ರತ್ಯಗಾತ್ಮನಃ ಸ್ವರೂಪಂ ತತ್ಸಮಮಿತಿ ದೇವಾದಿಪ್ರಾಕೃತರೂಪಪ್ರಹಾಣೇನ ಬ್ರಹ್ಮಸಮಾನಶುದ್ಧಿಅಪ್ರತಿಪಾದನಪರಮಿತ್ಯನ್ಯದೇತತ್ । ಅತೋಽಯುಕ್ತಮಿದ-ಮುಚ್ಯತೇ "ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ" ಇತೀತಿ ॥ (ಶ್ರೀ.ಭಾ ಪು ೧೪, ೧೫......೨೮).

**೬೬. ಆತ್ಮೈಕತ್ವೇ ಶಾಸ್ತ್ರಪ್ರಾಮಾಣ್ಯಮ್** – ಅತ್ರಾಭಿಧೀಯತೇ । ನೈಷಾ ಸಾಧ್ವೀ ಶಙ್ಕಾ । ಸ್ವತಃಸಿದ್ಧಾನುಭವಮಾತ್ರತ್ವಾದೈಕಾತ್ಮ್ಯಸ್ಯ । ಯತ್ತಾವದಾಶಙ್ಕ್ಯತೇ ನಿರ್ವಿಶೇಷಚಿನ್ಮಾತ್ರೇ ಪ್ರಮಾಣಂ ನ ಪಶ್ಯಾಮ ಇತಿ। ನ ತೇನ ಕಿಞ್ಚಿದನಿಷ್ಟಮಾಪದ್ಯತೇಽಸ್ಮಾಕಮ್ । ನ ಹಿ ವಯಂ ಪ್ರಮಾಣಬಲೇ-ನೈಕಾತ್ಮ್ಯಂ ಪ್ರತಿಪದ್ಯಾಮಹೇ । ಕಿಂ ತು ಸ್ವತಃಸಿದ್ಧಮೇವೈಕಾತ್ಮ್ಯಂ ಶಾಸ್ತ್ರೇಣೋಪದಿಶ್ಯತ ಇತಿ । "ಏಕಧೈವಾನುದ್ರಷ್ಟವ್ಯಮೇತದಪ್ರಮಯಂ

---

ಸರಿಯಾದದ್ದು. ಹೆಚ್ಚಿನ ಸಾಮ್ಯವನ್ನೇ ಹೊಂದುತ್ತಾನೆ. (ಮುಂ. ೩–೧–೩) "ನನ್ನ ಸಮಾನಸ್ವಭಾವವನ್ನು ಹೊಂದಿದವರಾಗಿ" (ಗೀ ೧೪–೨) ಎಂಬುದಾದರೋ ಅದು ಬ್ರಹ್ಮಪ್ರಕಾರವನ್ನೇ ಹೊಂದಿರುವ ಜೀವನ ಸ್ವರೂಪವು, ಅದಕ್ಕೆ ಸಮವು ಎಂದಿರುವುದು ದೇವತೆಗಳೇ ಮುಂತಾದ ಪ್ರಾಕೃತರೂಪವನ್ನು ಕೈಬಿಡುವುದರ ಮೂಲಕ ಬ್ರಹ್ಮಕ್ಕೆ ಸಮಾನವಾದ ಶುದ್ಧಿಯನ್ನು ತಿಳಿಸುವುದರಲ್ಲಿ ತಾತ್ಪರ್ಯವಿರುವುದು ಎಂದಾದ್ದರಿಂದ ಅದೇ ಬೇರೆ ವಿಚಾರವು. ಆದ್ದರಿಂದ "ಆತ್ಮೈಕತ್ವದ ವಿದ್ಯೆಯನ್ನು ತಿಳಿಸಿ-ಕೊಡುವುದಕ್ಕಾಗಿ ಎಲ್ಲಾ ವೇದಾಂತಗಳು ಆರಂಭವಾಗಿರುತ್ತವೆ", ಎಂಬಿದು ಹೊಂದದೇ ಇರುವಂಥದ್ದು.

**೬೬. ಆತ್ಮೈಕತ್ವದ ವಿಷಯದಲ್ಲಿ ಶಾಸ್ತ್ರದ ಪ್ರಾಮಾಣ್ಯವು.** ಈ (ವಿಷಯಕ್ಕೆ) ಹೇಳಲಾಗುತ್ತದೆ. ಇದು ಸರಿಯಾದ ಸಂದೇಹವಲ್ಲ. ಆತ್ಮೈಕತ್ವವೆಂಬುದು ಸ್ವತಃಸಿದ್ಧವಾದ ಅನುಭವವಷ್ಟೇ ಆಗಿರುತ್ತದೆ. ನಿರ್ವಿಶೇಷವಾದ ಚಿನ್ಮಾತ್ರದ ವಿಷಯದಲ್ಲಿ ಪ್ರಮಾಣವನ್ನು ಕಾಣೆವು ಎಂದು (ಪೂ. ಪ) ಏನು ಹೇಳಿತ್ತು, ಅದರಿಂದ ನಮಗೇನು ಅನಿಷ್ಟವಾಗುವುದಿಲ್ಲ. ಏಕೆಂದರೆ ನಾವು ಪ್ರಮಾಣಬಲದಿಂದಲೇ ಐಕಾತ್ಮ್ಯವನ್ನೇನೂ ತಿಳಿಯುತ್ತಲಿಲ್ಲ, ಮತ್ತೇನೆಂದರೆ ಐಕಾತ್ಮ್ಯವೆಂಬುದು ಸ್ವತಃಸಿದ್ಧವೇ ಆಗಿದ್ದು, ಅದನ್ನು ಶಾಸ್ತ್ರವು

ಧ್ರುವಮ್ । ವಿರಜಃ ಪರ ಆಕಾಶಾದಜ ಆತ್ಮಾ ಮಹಾನ್ ಧ್ರುವಃ ॥" (ಬೃ. ೪-೪-೨೦) ಇತ್ಯಪ್ರಮೇಯತಾಶ್ರವಣಾತ್ । ಅಪ್ರಮೇಯತ್ವೇ ಕಥಂ ತತ್ಪ್ರತಿಪತ್ತಿಃ, ಕಥಂ ವಾ ತದರ್ಥಂ ವೇದಾನ್ತಾರಮ್ಭ ಇತಿ ಚೇತ್ । ಶೃಣು। ಪ್ರಮಾಣಪ್ರಮೇಯವಿಭಾಗಾದ್ಯನಾತ್ಮಾಧ್ಯಾಸನಿರಸನೇನೈವ ತತ್ಪ್ರತಿಪತ್ತಿಃ । ತನ್ನಿರಾಸಾಯೈವ ಚ ವೇದಾನ್ತಾರಮ್ಭಃ । ಏತೇನ ನಿರ್ವಿಶೇಷವಸ್ತ್ವಭಿ-ಧಾಯಿತ್ವಂ ಕಥಂ ವೇದಾನ್ತವಾಕ್ಯಾನಾಮಿತ್ಯಾಕ್ಷೇಪೋಽಪಿ ನಿರಸ್ತೋ ಭವತಿ। ನ ಹ್ಯಭಿಧಾನಾಭಿದೇಯಲಕ್ಷಣವಾಕ್ಯಧರ್ಮಾಙ್ಗೀಕಾರೇಣ ಶಾಸ್ತ್ರಮಾತ್ಮಾನಂ ಜ್ಞಾಪಯತೀತ್ಯಭ್ಯುಪಗಚ್ಛಾಮೋ ವಯಮ್ । ವಕ್ಷ್ಯತಿ ಹಿ ಭಗವಾನ್ ಭಾಷ್ಯಕಾರಃ – "ಅವಿಷಯತ್ವೇ ಬ್ರಹ್ಮಣಃ ಶಾಸ್ತ್ರಯೋನಿತ್ವಾನುಪಪತ್ತಿರಿತಿ

---

ಉಪದೇಶಿಸುತ್ತದೆ ಎಂದು (ತಿಳಿಯುತ್ತೇವೆ). "ಒಂದೇ ಪ್ರಕಾರವಾಗಿ ಇದನ್ನರಿಯಬೇಕು, ಇದು ಅಪ್ರಮೇಯವೂ ಧ್ರುವವೂ, ದೋಷರಹಿತವೂ ಆಕಾಶಕ್ಕಿಂತಲೂ ಹೆಚ್ಚಿನದೂ, ಅಜಸ್ವರೂಪನೂ, ಅಪರಿಚ್ಛಿನ್ನನೂ, ಏಕರೂಪನೂ" (ಬೃ. ೪-೪-೨೦) ಎಂದು ವಿಷಯವಲ್ಲವೆಂದು (ಶ್ರುತಿ) ತಿಳಿಸುತ್ತಿದೆ. (ಆಕ್ಷೇಪ) – (ಆತ್ಮನು) ಅಪ್ರಮೇಯನಾದರೆ ತಿಳಿಯುವುದು ಹೇಗೆ ? ತಿಳಿಸುವುದಕ್ಕಾಗಿ ವೇದಾಂತಗಳು ಆರಂಭವಾಗಿವೆ ಎಂಬುದಾದರೂ ಹೇಗೆ? (ಉತ್ತರ) – ಕೇಳು (ಹೇಳುತ್ತೇವೆ). ಪ್ರಮಾಣಪ್ರಮೇಯವೆಂಬ ವಿಭಾಗವೇ ಮೊದಲಾದ ಅನಾತ್ಮದ ಅಧ್ಯಾಸವನ್ನು ಕಳೆದುಕೊಳ್ಳುವ ಮೂಲಕವಾಗಿಯೇ ಅದನ್ನು ತಿಳಿಯಬೇಕು. ಅದನ್ನು ಕಳೆದುಹಾಕುವುದಕ್ಕಾಗಿಯೇ ವೇದಾಂತಗಳು ಆರಂಭವಾಗಿವೆ. ಇಷ್ಟು ಹೇಳಿದ್ದರಿಂದ ವೇದಾಂತವಾಕ್ಯಗಳು ನಿರ್ವಿಶೇಷವಾದ ವಸ್ತುವನ್ನು ಹೇಳುತ್ತವೆ ಎಂಬುದು ಹೇಗೆ ? ಎಂಬ ಆಕ್ಷೇಪಕ್ಕೂ ಉತ್ತರಕೊಟ್ಟಂತಾಯಿತೆಂದು ತಿಳಿಯಬೇಕು. ಅಭಿಧಾನ ಅಭಿಧೇಯರೂಪವಾದ ವಾಕ್ಯದ ಧರ್ಮವನ್ನು ಒಪ್ಪಿಕೊಳ್ಳುವುದರ ಮೂಲಕ ಶಾಸ್ತ್ರವು ಆತ್ಮನನ್ನು ತಿಳಿಸಿಕೊಡುತ್ತದೆ ಎಂಬುದನ್ನು ನಾವು ಒಪ್ಪಿಕೊಳ್ಳು-ವುದಿಲ್ಲ. ಇದನ್ನು ಭಗವಂತರಾದ ಭಾಷ್ಯಕಾರರೇ ಹೇಳುವವರಾಗಿದ್ದಾರೆ. (ಪೂ.ಪ.) – ಬ್ರಹ್ಮವು ವಿಷಯವಲ್ಲವಾದರೆ ಶಾಸ್ತ್ರದಿಂದಲೇ ತಿಳಿದುಬರುತ್ತದೆ

ಚೇತ್ । ನ । ಅವಿದ್ಯಾಕಲ್ಪಿತಭೇದನಿವೃತ್ತಿಪರತ್ವಾಚ್ಛಾಸ್ತ್ರಸ್ಯ" (ಸೂ.ಭಾ. ೧-೧-೪) ಇತಿ ॥

ಯತ್ತ್ವಾಶಙ್ಕ್ಯತೇ ಶಾಸ್ತ್ರಸ್ಯಾಪ್ಯವಿದ್ಯಾಪುರಸ್ಸರತ್ವಾವಿಶೇಷಾತ್ ಕಥಮ-ವಿದ್ಯಾನಿರಸನಸಾಮರ್ಥ್ಯಮಿತಿ । ನೈಷ ದೋಷಃ । ದೃಷ್ಟತ್ವಾತ್ । ದೃಶ್ಯತೇ ಹಿ ಕಲ್ಪಿತಸ್ಯ ಕಲ್ಪಿತಾನ್ತರೇಣ ಬಾಧೋ ಲೋಕೇ । ಯಥಾ ರಜ್ಜುಜ್ಞಾನೇನ ರಜ್ಜುಸರ್ಪಬಾಧಃ, ರಜ್ಜುಕಾರಣಜ್ಞಾನೇನ ಚ ರಜ್ಜುಬಾಧಃ । ಯಥಾ ವಾ ಜಾಗರಿತತ್ವೇನ ಕಲ್ಪಿತೇನ ಸ್ವಪ್ನೇನ ತದನ್ತರ್ಗತಸ್ವಪ್ನಾನ್ತರಬಾಧಃ । ಏವಂ ಶಾಸ್ತ್ರೋಕ್ತಾತ್ಮೈಕ್ಯಜ್ಞಾನೇನ ಕಲ್ಪಿತದ್ವೈತಬಾಧೇ ನ ಕಿಂಚಿದನುಪಪತ್ತಿಃ । ಯಥೋಕ್ತಂ **ವಾರ್ತಿಕಕಾರೈಃ** – "ಕ್ಲೃಪ್ತಾನಾಮಪಿ ರಜ್ಜ್ವಾದೌ ಕಲ್ಪಿತಾನ್ತರ-

---

ಎಂಬುದು ಹೊಂದುವುದಿಲ್ಲವಲ್ಲ ? (ಎಂದರೆ) (ಸಿದ್ಧಾಂತ) – ಹಾಗಲ್ಲ, ಶಾಸ್ತ್ರವು ಅವಿದ್ಯೆಯಿಂದ ಕಲ್ಪಿತವಾದ ಭೇದವನ್ನು ನಿವೃತ್ತಿಮಾಡುವುದರಲ್ಲಿ ತಾತ್ಪರ್ಯವುಳ್ಳದ್ದಾಗಿದೆ.

ಶಾಸ್ತ್ರವೂ ಅವಿದ್ಯಾಪುರಃಸರವಾಗಿದೆ ಎಂಬುದು ಸಮಾನವಾಗಿರುವುದರಿಂದ ಹೇಗೆ ಅವಿದ್ಯೆಯನ್ನು ಕಳೆಯುವುದರಲ್ಲಿ ಸಾಮರ್ಥ್ಯವುಳ್ಳದ್ದಾಗಿದೆ ? ಎಂದು ಸಂದೇಹಪಟ್ಟಿತ್ತಲ್ಲ ! ಇದೇನೂ ತಪ್ಪಲ್ಲ, ಲೋಕದಲ್ಲಿ ಒಂದು ಕಲ್ಪಿತವಾದದ್ದು ಮತ್ತೊಂದು ಕಲ್ಪನೆಯಿಂದ ಹೋಗುತ್ತಿರುವುದು ಕಂಡುಬಂದಿದೆ. ಹೇಗೆಂದರೆ – ಹಗ್ಗದ ಜ್ಞಾನದಿಂದ ಹಾವಿನ ಬಾಧೆಯೂ, ಹಾಗೆಯೇ ಹಗ್ಗಕ್ಕೆ ಕಾರಣವಾದ (ಸೆಣಬು–ತೆಂಗಿನ ನಾರು) ಇವುಗಳ ಜ್ಞಾನದಿಂದ ಹಗ್ಗವೂ ಬಾಧಿತವಾಗುತ್ತದೆ. (ಅಥವಾ ಇನ್ನೊಂದು ದೃಷ್ಟಾಂತವನ್ನು ಕೊಡಬಹುದು) ಕನಸಿನೊಳಗೆ ಬಂದ ಇನ್ನೊಂದು ಕನಸು, ಎಚ್ಚರವೆಂದು ತೋರುತ್ತಿರುವ ಮೊದಲನೆಯ ಕನಸಿನಿಂದ ಬಾಧೆಯಾಗಿ (ಅದೂ, ಈಗ ಎಚ್ಚರವೆಂದು ತೋರುತ್ತಿರುವ ಅವಸ್ಥೆಯಿಂದ ಬಾಧೆಯಾಗುತ್ತಿರುವುದು ಕಂಡುಬಂದಿದೆ). ಹೀಗೆ ಶಾಸ್ತ್ರದಲ್ಲಿ ಹೇಳಿದ ಆತ್ಮನೊಬ್ಬನೇ ಇದೆಲ್ಲವೂ ಎಂಬ ಜ್ಞಾನದಿಂದ ಕಲ್ಪಿತವಾದ ದ್ವೈತವು ಬಾಧೆಯಾಗುತ್ತದೆ ಎಂಬ ವಿಷಯದಲ್ಲಿ ಇಲ್ಲಿ ಏನೂ ಹೊಂದದೇ ಇರುವುದೆಂಬುದಿಲ್ಲ. ಇದನ್ನು ವಾರ್ತಿಕಕಾರರೂ ಹೇಳಿರುತ್ತಾರೆ. "ಕಲ್ಪಿತವೇ

ಸಂಶ್ರಯಾತ್ । ಕ್ಲೃಪ್ತಾನ್ತರಾಪನುತ್ತಿಃ ಸ್ಯಾದ್ಯಥಾ ತದ್ವದಿಹಾತ್ಮನಿ ॥" (ಬೃ.ವಾ. ೨-೧-೧೭೫) ಇತಿ ॥

ನ ಚಾಸ್ತಿ ಶಾಸ್ತ್ರಜ್ಞಾನಬಾಧಕಮ್ । ನನು ಬಾಧಾಭಾವೇಽಪಿ ನಿರ್ಜನ-ಪ್ರದೇಶಸ್ಥಿತತೈಮಿರಿಕಜ್ಞಾನವನ್ಮಿಥ್ಯಾ ಸ್ಯಾದಿತ್ಯುಕ್ತಮ್ । ನ । ವೈಷಮ್ಯಾತ್। ಯುಕ್ತಂ ತತ್ರ ಜ್ಞಾತೃತ್ವಸ್ಯಾನುವೃತ್ತೇರ್ದ್ವೈತಜ್ಞಾನಸ್ಯಾಽಬಾಧಿತ-ತ್ವಾಚ್ಚನ್ದ್ರದ್ವಿತ್ವಜ್ಞಾನಸ್ಯ ಶಙ್ಕಿತಮಿಥ್ಯಾತ್ವಮ್, ಮಿಥ್ಯಾತ್ವಸಂಶಯೋ ವಾ । ಇಹ ಪುನಃ ಶಾಸ್ತ್ರೇಣ ಜ್ಞಾತೃತ್ವಸ್ಯೈವಾಪನೋದನಾತ್ ಪ್ರಮಾಣಪ್ರಮೇಯ-ವ್ಯವಹಾರಸ್ಯೈವಾಪಬಾಧೇ ಸತಿ ನ ಕಾಚಿಚ್ಛಙ್ಕಾ ಶಕ್ಯತೇ ಕಲ್ಪಯಿತುಮಪಿ। ಯಥಾ ವಕ್ಷ್ಯತಿ ಭಗವಾನ್ – "ಸತಿ ಹ್ಯನ್ಯಸ್ಮಿನ್ನವಶಿಷ್ಯಮಾಣೇಽರ್ಥ ಆಕಾಂಕ್ಷಾ ಸ್ಯಾತ್ । ನ ತ್ವಾತ್ಮೈಕತ್ವವ್ಯತಿರೇಕೇಣಾಽವಶಿಷ್ಯಮಾಣೋಽನ್ಯೋಽರ್ಥೋಽಸ್ತಿ

---

ಆದ ಹಗ್ಗವೇ ಮುಂತಾದ ಸ್ಥಳದಲ್ಲಿ ಬೇರೊಂದು ಕಲ್ಪನೆಯನ್ನಾಶ್ರಯಿಸಿಕೊಂಡು ಒಂದು ಕಲ್ಪನೆಯನ್ನು ಹೇಗೆ ತೆಗೆಯಲಾಗುತ್ತದೆಯೋ ಅದರಂತೆ ಈ ಆತ್ಮನವಿಷಯದಲ್ಲಿ (ಆಗಬಹುದಾಗಿದೆ)" (ಬೃ.ವಾ. ೨-೧-೧೭೫).

ಶಾಸ್ತ್ರಜ್ಞಾನವನ್ನು ಬಾಧಿಸುವ (ಜ್ಞಾನವೂ) ಇಲ್ಲ. (ಆಕ್ಷೇಪ) ಬಾಧಿಸುವಂತಹ (ಜ್ಞಾನವು) ಇಲ್ಲದೇ ಇದ್ದರೂ ಯಾರೂ ಇಲ್ಲದ ಪ್ರದೇಶದಲ್ಲಿರುವ (ಮನುಷ್ಯನ) ಕಣ್ಣಿನಪರೆಯಜ್ಞಾನದಂತೆ ಮಿಥ್ಯೆಯಾಗಬಹುದಲ್ಲ ! ಎಂದು ಹೇಳಿದ್ದೀವಲ್ಲ ! ಎಂದರೆ ಹಾಗಲ್ಲ – ವ್ಯತ್ಯಾಸವಿದೆ – ದೃಷ್ಟಾಂತದಲ್ಲಿ ಜ್ಞಾತೃತ್ವವು (ಆತನಿಗೆ) ಅನುವೃತ್ತಾಗಿಯೇ ಇರುತ್ತದೆಯಾದ್ದರಿಂದಲೂ ಎರಡು ಚಂದ್ರಗಳ ಜ್ಞಾನವೆಂಬ ದ್ವೈತಜ್ಞಾನವು ಬಾಧಿತವಾಗಿಲ್ಲ. (ಪೂ.ಪ.) ಯು ಸಂದೇಹಪಟ್ಟಂತೆ ಮಿಥ್ಯೆಯೂ ಆಗಿರಬಹುದಾಗಿದೆ ಅಥವಾ ಸಂಶಯವೂ ಆಗಿರಬಹುದಾಗಿದೆ. ಈ (ದಾರ್ಷ್ಟಾಂತಿಕದ)ಲ್ಲಾದರೋ ಶಾಸ್ತ್ರವು ಜ್ಞಾತೃತ್ವವನ್ನೇ ಕಳೆಯುತ್ತಿರುವುದರಿಂದಲೂ ಪ್ರಮಾಣಪ್ರಮೇಯವ್ಯವಹಾರವೇ ಬಾಧೆಯಾಗಿ-ದೆಯೆಂತಾಗಿ ಯಾವಸಂದೇಹವನ್ನೂ ಕಲ್ಪಿಸುವುದಕ್ಕೆ ಆಗುವದಿಲ್ಲ. (ಪೂಜ್ಯರಾದ) ಭಗವಂತರಾದ (ಭಾಷ್ಯಕಾರರೂ) ಹೇಳುತ್ತಾರೆ "ಇನ್ನೊಂದಾದದ್ದು ಉಳಿದಿದ್ದರೆ ಆದರ ಬಗ್ಗೆ ಆಕಾಂಕ್ಷೆಯಾದೀತು ! ಆತ್ಮೈಕತ್ವಕ್ಕಿಂತ ಬೇರೆಯಾದ

ಯ ಆಕಾಙ್ಕ್ಷ್ಯೇತ" (ಸೂ.ಭಾ. ೨-೧-೧೪ ಭಾ.ಭಾ. ೪೩೮) ಇತಿ ॥

ಯದಪ್ಯಾಶಙ್ಕ್ಯತೇ ಶಾಸ್ತ್ರಸ್ಯಾಪ್ಯವಿದ್ಯಾಪುರಸ್ಸರತ್ವೇನ ಪ್ರತ್ಯಕ್ಷಾದಿತೋ ವಿಶೇಷಾಭಾವಾತ್ ತಸ್ಯಾऽವಿದ್ಯಾನಿರಸನಸಾಮರ್ಥ್ಯಾಭಾವಪ್ರಸಙ್ಗಃ ಸ್ಯಾತ್, ಭ್ರಾನ್ತಿತ್ವೇನಾವಗತಪುರುಷಕೃತಸರ್ಪನಿಷೇಧವಚನಸ್ಯೇವೇತಿ । ತದಸತ್ । ವೈಷಮ್ಯಾತ್ । ತತ್ರ ಹಿ ಶ್ರವಣಕಾಲೇ ಏವ ಭ್ರಾನ್ತತ್ವಾವಗತಿರಸ್ತೀತಿ ನಾರ್ಥಕರತ್ವಮಿತಿ ಯುಕ್ತಮ್ । ಇಹ ಪುನಃ ಪ್ರಾಕ್ ಪ್ರಬೋಧಾತ್ "ನೇದಂ ಶಾಸ್ತ್ರಮ್", "ನ ಪ್ರಮಾಣಮ್" ಇತಿ ವಾ ನಾಸ್ತಿ ಬುದ್ಧಿರಿತಿ ಶ್ರವಣಾದಿಪ್ರವೃತ್ತೌ ನಾಸ್ತಿ ಪ್ರತಿಬನ್ಧಃ । ಅತೋ ನಾಸ್ತಿ ಶಾಸ್ತ್ರಸ್ಯಾऽವಿದ್ಯಾನಿರಸನಸಾಮರ್ಥ್ಯ-ವಿಘಟಕಮ್ । ಪ್ರಬೋಧಾದೂರ್ಧ್ವಂ ತು ಮಿಥ್ಯಾಬುದ್ಧಿತ್ವಮನರ್ಥಕರತ್ವಂ

---

ಇನ್ನೊಂದುಳಿದಿರುವ ವಸ್ತುವೆಂಬುದೇ ಇರುವುದಿಲ್ಲ, ಹಾಗೆ ಯಾವುದಾದರೊಂದಿದ್ದಿದ್ದರೆ (ಅದನ್ನು) ಬಯಸಬಹುದಾಗಿತ್ತು" (ಸೂ.ಭಾ. ೨-೧-೧೪).

ಭ್ರಾಂತನಾಗಿದ್ದಾನೆ ಎಂದು ತಿಳಿದುಬಂದ ಮನಷ್ಯನು "ಇದು ಹಾವಲ್ಲ" ಎಂದು ಹೇಳಿದರೆ (ಹೇಗೆ ಅದರಿಂದ ಭಯನಿವೃತ್ತಿಯಾಗುವುದಿಲ್ಲವೋ ಅದರಂತೆ) ಶಾಸ್ತ್ರವೂ ಅವಿದ್ಯಾಪುರಸ್ಸರವಾಗಿದೆ ಎಂಬ ಕಾರಣದಿಂದ ಪ್ರತ್ಯಕ್ಷಾದಿಗಳೊಡನೆ ಅದಕ್ಕೆ ವಿಶೇಷವಿಲ್ಲದ್ದರಿಂದ (ಆ ಶಾಸ್ತ್ರಕ್ಕೆ) ಅವಿದ್ಯೆಯನ್ನು ಕಳೆಯುವ ಸಾಮರ್ಥ್ಯವು ಇಲ್ಲವೆಂಬ ಪ್ರಸಂಗವು ಬರುತ್ತದೆಯಲ್ಲಾ! ಎಂದು (ಪೂ.ಪ) ಏನು ಹೇಳಿತ್ತು, ಅದು ಸರಿಯಲ್ಲ. ವ್ಯತ್ಯಾಸವಿರುವುದರಿಂದ. (ಏಕೆಂದರೆ ದೃಷ್ಟಾಂತದಲ್ಲಿ ಇದು ಹಾವಲ್ಲ) ಎಂದು ಕೇಳುವ ಕಾಲದಲ್ಲೇ ಆತ ಭ್ರಾಂತನಾಗಿದ್ದಾನೆಂದು ಗೊತ್ತಾಗಿರುವುದರಿಂದ (ಅದು) ಪ್ರಯೋಜವನ್ನುಂಟು ಮಾಡುವುದಿಲ್ಲ ಎಂಬುದು ಸರಿ. ಈ (ದಾರ್ಷ್ಟಾಂತಿಕದ)ಲ್ಲಾದರೋ ಅರಿವಾಗುವುದಕ್ಕೆ ಮುಂಚೆ "ಇದು ಶಾಸ್ತ್ರವಲ್ಲ", "ಇದು ಪ್ರಮಾಣವಲ್ಲ" ಎಂದು ಯಾರಿಗೂ ಈ ತಿಳಿವಳಿಕೆ ಇರುವುದಿಲ್ಲವಾದ್ದರಿಂದ ಶ್ರವಣಾದಿಗಳನ್ನು ಮಾಡುವುದಕ್ಕೆ ತೊಡಗುವುದರಲ್ಲಿ ಏನೂ ಅಡ್ಡಿ ಇರುವುದಿಲ್ಲ. ಆದ್ದರಿಂದ ಶಾಸ್ತ್ರಕ್ಕೆ ಅವಿದ್ಯೆಯನ್ನು ಹೋಗಲಾಡಿಸುವ ಸಾಮರ್ಥ್ಯವಿಲ್ಲವೆಂಬುದಿಲ್ಲ. ಜ್ಞಾನವಾದಮೇಲಾದರೋ ಪುರುಷಾರ್ಥವು ಪರಿಸಮಾಪ್ತಿಯಾಗುವುದರಿಂದ

ವಾ ನ ವಿದ್ಯತೇ ಪುರುಷಾರ್ಥಪರ್ಯವಸಾಯಿತ್ವಾತ್ । ತದುಕ್ತಮ್ "ಐಕಾತ್ಮ್ಯಪ್ರತಿಪತ್ತೇಃ ಪ್ರಾಙ್ ನ ಮಿಥ್ಯಾ ಹೇತ್ವಭಾವತಃ । ಪುರುಷಾರ್ಥಾವಸಾಯಿತ್ವಾನ್ನಾಪ್ಯೂರ್ಧ್ವಮನಪೇಕ್ಷತಃ ॥" (ಸಂ. ವಾ. ೮೯೫) ಇತಿ । ನನು ಯದ್ಯಪಿ ಪ್ರಬೋಧಾದೂರ್ಧ್ವಂ ಜಿಜ್ಞಾಸೋಃ ಕೃತಾರ್ಥತ್ವಾತ್ಪುನರಪ್ಯುಪಾಯಾಪೇಕ್ಷಾ ನಾಸ್ತಿ । ತಥಾಪಿ ಶಾಸ್ತ್ರಸ್ಯ ಸತ್ಯತ್ವಂ ತಾವದ್ಧೀಯತ ಏವ । ಶಾಸ್ತ್ರಸ್ಯಾಪ್ಯಶಾಸ್ತ್ರತ್ವೇನ ಜ್ಞಾನಾತ್, ತಾದೃಶಜ್ಞಾನಾನುದಯೇ ವಾ ದ್ವೈತಬುದ್ಧೇಸ್ತದವಸ್ಥತ್ವಾದಿತಿ ಚೇತ್ । ನ । ಇಷ್ಟತ್ವಾತ್ । ಇಷ್ಯತೇ ಹಿ ಶಾಸ್ತ್ರಸ್ಯಾಶಾಸ್ತ್ರತ್ವಂ ಪ್ರಬೋಧೇ । ತಥಾ ಚ ವಕ್ಷ್ಯತಿ – "ಅತ್ರ ಪಿತಾಽಪಿತಾ ಭವತೀತ್ಯುಪಕ್ರಮ್ಯ "ವೇದಾ ಅವೇದಾಃ" (ಬೃ. ೪-೩-೨೨) ಇತಿ ವಚನಾದಿಷ್ಯತ ಏವಾಸ್ಮಾಭಿಃ ಶ್ರುತೇರಪ್ಯಭಾವಃ ಪ್ರಬೋಧೇ" (ಸೂ.ಭಾ.

---

ಸುಳ್ಳು ಎನ್ನುವ ಬುದ್ಧಿಯಾಗಲೀ ಅನರ್ಥವನ್ನುಂಟುಮಾಡುವದೆಂದಾಗಲೀ ಇರುವುದೇ ಇಲ್ಲ. ಇದನ್ನು (ವಾರ್ತಿಕಕಾರರು) ಹೇಳಿರುತ್ತಾರೆ. "ಐಕಾತ್ಮ್ಯದ ತಿಳಿವಳಿಕೆಗೆ ಮುಂಚೆ (ಶಾಸ್ತ್ರವು) ಮಿಥ್ಯೆಯಲ್ಲ. ಏಕೆಂದರೆ ಹೇತುವಿಲ್ಲವಾದ್ದರಿಂದ, ಐಕಾತ್ಮ್ಯವು ತಿಳಿದಮೇಲೂ ಸಹ ಪುರುಷಾರ್ಥವು ಪರಿಸಮಾಪ್ತಿಯಾಗಿರುತ್ತದೆಯಾದ್ದರಿಂದ ಅನಂತರವೂ ಮಿಥ್ಯೆಯಲ್ಲ, ಏಕೆಂದರೆ (ಇನ್ನೊಂದರ) ಅಪೇಕ್ಷೆಯೇ ಇರುವುದಿಲ್ಲ". ಎಂದು (ಸಂ. ವಾ ೮೯೫). (ಆಕ್ಷೇಪ) – ಜಿಜ್ಞಾಸುವಿಗೆ ಜ್ಞಾನವಾದ ಮೇಲೆ ಆತನು ಕೃತಾರ್ಥನಾದವನಾದ್ದರಿಂದ ಮತ್ತೆ ಉಪಾಯದ ಅಪೇಕ್ಷೆ ಎಂಬುದಿಲ್ಲವೆಂಬುದು ನಿಜವೇ ಆದರೂ ಶಾಸ್ತ್ರವು ಸತ್ಯವಾಗಿದೆ ಎಂಬುದಕ್ಕೆ ಧಕ್ಕೆ ಬರುತ್ತದೆಯಲ್ಲ ? ಶಾಸ್ತ್ರವೂ ಶಾಸ್ತ್ರವಾಗದೇ ಹೋಗುವುದೆಂಬ ಅರಿವಾಗುವುದರಿಂದಲೂ ಐಕಾತ್ಮ್ಯಜ್ಞಾನವುಂಟಾಗದೇ ಇರುವುದರಿಂದಲೂ ದ್ವೈತಬುದ್ಧಿಯೂ ಹಾಗೆಯೇ ಇರುತ್ತದೆ ಎಂದಾಗುತ್ತದೆಯಲ್ಲ ? (ಉತ್ತರ) ಹಾಗಲ್ಲ, (ಏಕೆಂದರೆ) ಇಷ್ಟವಾಗಿರುವುದರಿಂದ. ಜ್ಞಾನವಾದಮೇಲೆ ಶಾಸ್ತ್ರವೂ ಶಾಸ್ತ್ರವಲ್ಲವೆಂಬುದು ಇಷ್ಟವೇ ಆಗಿದೆ. "ಇಲ್ಲಿ ತಂದೆಯೂ ತಂದೆಯಾಗಿರುವುದಿಲ್ಲ ಎಂದು ಆರಂಭವನ್ನು ಮಾಡಿಕೊಂಡು (ಬೃ. ೪-೩-೨೨) "ವೇದಗಳು ವೇದವಾಗಿರುವುದಿಲ್ಲ" ಎಂದು ಹೇಳುತ್ತಿರುವುದರಿಂದ ಜ್ಞಾನವಾದ ಮೇಲೆ ಶ್ರುತಿಯೂ ಇರುವುದಿಲ್ಲವೆಂಬುದು ನಮಗೆ ಇಷ್ಟವೇ ಆಗಿದೆ". (ಸೂ.ಭಾ.

೪-೧-೩) ಇತಿ । ಪ್ರಬುದ್ಧಪುರುಷಂ ಪ್ರತಿ ಚ ಶಾಸ್ತ್ರಸ್ಯಾಽಪ್ರಮಾಣೀಭಾವೋ ನ ದೋಷಾಯ । ಪ್ರಮೇಯಾಧಿಗಮೇ ಸತಿ ಪುನರಪಿ ಪ್ರಮಾಣಾನ್ವೇಷಣಾ-ಭಾವಾತ್ । ಯಥೋಕ್ತಂ **ಗೀತಾಭಾಷ್ಯೇ** – "ನ ಹ್ಯಾತ್ಮಸ್ವರೂಪಾಧಿಗಮೇ ಸತಿ ಪುನಃ ಪ್ರಮಾಣಪ್ರಮೇಯವ್ಯವಹಾರಃ ಸಂಭವತಿ । ಪ್ರಮಾತೃತ್ವಂ ಹ್ಯಾತ್ಮನೋ ನಿವರ್ತಯತ್ಯನ್ತ್ಯಂ ಪ್ರಮಾಣಮ್ । ನಿವರ್ತಯದೇವ ಚಾಪ್ರಮಾಣೀಭವತಿ ಸ್ವಪ್ನಕಾಲಪ್ರಮಾಣಮಿವ ಪ್ರಬೋಧೇ । ಲೋಕೇ ಚ ವಸ್ತ್ವಧಿಗಮೇ ಪ್ರವೃತ್ತಿಹೇತುತ್ವಾದರ್ಶನಾತ್ ಪ್ರಮಾಣಸ್ಯ ।" (ಗೀ.ಭಾ. ೨-೬೯ ಭಾ.ಭಾ. ೧೩೫) ಇತಿ । ಅತೋ ನಾಯಮಪಿ ದೋಷಃ ॥

**೬೭. ಚಿನ್ಮಾತ್ರವಸ್ತುಸಿದ್ಧಿಃ** – ಯತ್ತೂಚ್ಯತೇ ಚಿನ್ಮಾತ್ರಂ ವಸ್ತು ನಾಸ್ತ್ಯೇವ। ಸಂವಿದನುಭವಜ್ಞಾನಾದಿಶಬ್ದಾನಾಮಾತ್ಮಗುಣವಾಚಕತ್ವಾತ್। ಜ್ಞಾತುರಪ್ಯಾತ್ಮನೋ ನ ವಿಕಾರಿತ್ವಮ್, ಜ್ಞಾನಗುಣಸ್ಯ ನಿತ್ಯತ್ವಾದಿತಿ ।

---

೪-೧-೩). ತಿಳಿದವನ ವಿಷಯದಲ್ಲಿ ಶಾಸ್ತ್ರವೂ ಅಪ್ರಮಾಣವಾಗುವುದು ದೋಷವಲ್ಲ. ತಿಳಿಯಬೇಕಾದುದನ್ನು ತಿಳಿದಮೇಲೆ (ಮತ್ತೆ ಅದನ್ನು ತಿಳಿಯುವುದಕ್ಕಾಗಿ) ಪ್ರಮಾಣವನ್ನು ಆರಿಸುವುದೆಂಬುದು ಇರುವುದಿಲ್ಲ. ಈ ವಿಚಾರವನ್ನು ಗೀತಾಭಾಷ್ಯದಲ್ಲಿ ಹೇಳಿರುತ್ತದೆ – "ಆತ್ಮಸ್ವರೂಪವು ಗೊತ್ತಾದಮೇಲೆ ಮತ್ತೆ ಪ್ರಮಾಣಪ್ರಮೇಯವ್ಯವಹಾರವು ಹೊಂದುವು-ದಿಲ್ಲವಷ್ಟೇ" ? ಅಂತ್ಯಪ್ರಮಾಣವಾದ (ಶಾಸ್ತ್ರವು) ತನ್ನ ಪ್ರಮಾತೃತ್ವವನ್ನೇ ಕಳೆದುಹಾಕುತ್ತದೆಯಲ್ಲವೆ ? ಕಳೆದುಹಾಕುತ್ತಲೇ (ತಾನೂ) ಸ್ವಪ್ನಕಾಲದ ಪ್ರಮಾಣವು ಎಚ್ಚರವಾಗುತ್ತಲೂ (ಅಪ್ರಮಾಣವಾಗುವಂತೆ) ಅಪ್ರಮಾಣ-ವಾಗುತ್ತದೆ. ಲೋಕದಲ್ಲೂ ಸಹ ವಸ್ತುವು ಗೊತ್ತಾದ ಮೇಲೆ ಪ್ರಮಾಣವು ಪ್ರವೃತ್ತಿಗೆ ಕಾರಣವಾಗಿದೆ ಎಂಬುದಿಲ್ಲ(ವಲ್ಲವೆ?) (ಗೀ. ಭಾ. ೨-೬೯) ಆದ್ದರಿಂದ ಇದೂ ದೊಷವಲ್ಲ.

**೬೭ ಚಿನ್ಮಾತ್ರವಾದ ವಸ್ತುಸಿದ್ಧಿಯು** – ಸಂವಿತ್, ಅನುಭವ, ಜ್ಞಾನ ಮುಂತಾದ ಶಬ್ದಗಳು ಆತ್ಮನ ಗುಣವಾದದ್ದನ್ನು ಹೇಳುವದರಿಂದ ಚಿನ್ಮಾತ್ರವಾದ ವಸ್ತುವಿಲ್ಲವೇ ಇಲ್ಲ ಎಂದು (ಪೂ.ಪ) ಏನು ಹೇಳಿತ್ತು, (ಹಾಗೆಯೇ) ಜ್ಞಾನವು ನಿತ್ಯವಾಗಿರುವುದರಿಂದ ಜ್ಞಾತೃವಾದ ಆತ್ಮನೂ ವಿಕಾರಿಯಲ್ಲ – (ಎಂದು

ತಜ್ಜ್ಞಾತೃತ್ವಾಸ್ಯಾಽಧ್ಯಾಸಪೂರ್ವಕತ್ವವರ್ಣನೇನೈವ ಪರಿಹೃತಪ್ರಾಯಮ್। ಗುಣಗುಣಿನೋಶ್ಚಿತೋರ್ಭೇದಾನಿರೂಪಣಾತ್ । ನಿರೂಪಣೇ ವಾ ಚಿದ್ಭಿನ್ನಸ್ಯ ಜಡತ್ವಾತ್ತದ್ಧರ್ಮತ್ವಾನುಪಪತ್ತೇಃ । ತತ್ಸ್ವರೂಪಸ್ಯೈವ ಭೇದತ್ವೇ ಗುಣ-ಗುಣಿನೋರಪಿ ಸ್ವರೂಪೇಣೈಕ್ಯಪ್ರಸಙ್ಗಾತ್ । ಗುಣಭೂತಸ್ಯ ಜ್ಞಾನಸ್ಯ ದೀಪಪ್ರಭಾದಿವತ್ ಸಂಕೋಚವಿಕಾಸಾದಿಃ ಸ್ವತ ಏವೇತ್ಯಙ್ಗೀಕಾರೇ ಸಾವಯ-ವತ್ವಾನಿತ್ಯತ್ವಾದಿದೋಷಪ್ರಸಕ್ತೇಃ, ಪರತ ಇತ್ಯಙ್ಗೀಕಾರೇ ಚಾಧ್ಯಾಸವಾದ-ಸ್ವೀಕಾರಪ್ರಸಙ್ಗಾದಯುಕ್ತೋಽಯಂ ಚಿದ್ಗುಣಕಚಿದ್ರೂಪಾತ್ಮವಾದಃ । ಜ್ಞಾತು-ರನ್ಯಸ್ಯ ತಸ್ಯಾಪ್ಯಾತ್ಮಭೂತಸ್ಯ ಸಾಕ್ಷಿಣೋಽಪ್ರತ್ಯಾಖ್ಯೇಯಸ್ವಭಾವತ್ವಾದೇವ ಚ ಚಿನ್ಮಾತ್ರವಾದಸ್ಯ ನಿರ್ದೋಷತಾ । ನ ಹಿ ಸಾಕ್ಷಿಣಂ ವಿನಾ ಜಾಗರಿತ-ಸ್ವಪ್ನಯೋಃ ಪ್ರಮಾತ್ರಾದಯಃ ಪ್ರಸಿಧ್ಯನ್ತಿ । ನ ಚ ಸುಷುಪ್ತೇ ತೇಷಾಂ

---

ಹೇಳಿತ್ತಲ್ಲ!), ಅದು ಜ್ಞಾತೃತ್ವವೆಂಬುದು ಅಧ್ಯಾಸಪೂರ್ವಕವಾದದ್ದು ಎಂದು ವರ್ಣನೆಮಾಡಿದ್ದರಿಂದಲೇ ಪರಿಹಾರವಾದದ್ದಾಯಿತೆಂದು (ತಿಳಿಯಬೇಕು). ಗುಣಗುಣಿಗಳಿಗೂ ಚಿತ್ತಿಗೂ ಭೇದವನ್ನು ನಿರೂಪಣೆ ಮಾಡದೇ ಇರುವುದರಿಂದಲೂ (ಹೀಗೆಂದರಿಯಬೇಕು). ನಿರೂಪಣೆ ಮಾಡಿದರೆ ಚಿತ್ತಿಗಿಂತ ಭಿನ್ನವಾದದ್ದು ಜಡವಾದ್ದರಿಂದ ಅದು ಅದರ ಧರ್ಮವೆಂಬುದು ಹೊಂದುವುದಿಲ್ಲ. ಅದರ ಸ್ವರೂಪವಾಗಿರುವುದಕ್ಕೇ ಭೇದವೆಂದಾದರೆ ಗುಣಗುಣಿಗಳಿಗೂ ಸ್ವರೂಪದಿಂದ ಐಕ್ಯವೆಂದಾಗುವುದು. ಗುಣವಾಗಿರುವ ಜ್ಞಾನಕ್ಕೆ ದೀಪದ ಪ್ರಭೆಯೇ ಮುಂತಾದದ್ದರಂತೆ – ಸಂಕೋಚ ವಿಕಾಸವೇ ಮೊದಲಾದದ್ದು ಸ್ವಭಾವದಿಂದಲೇ ಎಂದು ಒಪ್ಪಿಕೊಂಡರೆ ಸಾವಯವತ್ವ, ಅನಿತ್ಯತ್ವವೇ ಮೊದಲಾದ ದೋಷದ ಸಂದರ್ಭವು ಒದಗುವುದರಿಂದಲೂ, ಬೇರೊಂದರಿಂದ ಎಂದಾದರೆ ಅಧ್ಯಾಸವಾದವನ್ನು ಸ್ವೀಕರಿಸುವ ಪ್ರಸಂಗವು ಉಂಟಾಗುವುದರಿಂದ ಆತ್ಮನು ಚಿದ್ಗುಣಕನಾದ ಚಿದ್ರೂಪನು ಎಂಬ ವಾದವು ಸರಿಯಲ್ಲ. ಜ್ಞಾತೃವಿಗಿಂತ ಬೇರೆಯಾಗಿ ಅವನಿಗೂ ಆತ್ಮನಾಗಿರುವ ಸಾಕ್ಷಿಯನ್ನು ಪ್ರತ್ಯಾಖ್ಯಾನವನ್ನು ಮಾಡುವದಕ್ಕೆ ಬರದೇ ಇರುವದರಿಂದಲೇ (ಆತ್ಮನು ಕೇವಲ) ಚಿನ್ಮಾತ್ರನು ಎಂಬ ವಾದವು ನಿರ್ದುಷ್ಟವಾಗಿದೆ. ಸಾಕ್ಷಿ ಇಲ್ಲದೆ ಎಚ್ಚರ ಕನಸುಗಳಲ್ಲಿ ಪ್ರಮಾತೃವೇ ಮುಂತಾದವುಗಳು ಸಿದ್ಧವಾಗುವು-

ಭಾವಃ । ನ ಚಾವಸ್ಥಾಪ್ರಮಾತೃಪ್ರಮಾಣಾದಿಭಿರೇವಾಸ್ತ್ವಾತ್ಮನಃ ಸವಿಶೇಷತೇತಿ ಶಙ್ಕನೀಯಮ್ । ತೇಷಾಮಪಿ ಸಾಕ್ಷಿತ್ವಾದಾತ್ಮನಃ । ಅಧ್ಯಸ್ತೇನ ಸಾಕ್ಷ್ಯೇಣಾಣುಮಾತ್ರಮಪ್ಯಧಿಷ್ಠಾನುಭೂತಃ ಸಾಕ್ಷೀ ನ ಸಂಬಧ್ಯತ ಇತ್ಯುಪ-ಪಾದಿತತ್ವಾಚ್ಚ । ತದಾಹುರ್ವಾರ್ತಿಕಕಾರಾ ಅಪಿ – "ಬೋಧಾದೇವ ಪ್ರಸಿಧ್ಯನ್ತಿ ಕಾಲಾವಸ್ಥಾದಯೋ ಯತಃ । ಮಾತೃಮಾನಾದಯಶ್ಚಾಪಿ ಕುತಸ್ತೈರಸ್ಯ ವಿಕ್ರಿಯಾ ॥" (ಸಂ. ವಾ. ೯೯೯) ಇತಿ ॥

**೬೮. ಆತ್ಮೈಕತ್ವಸಿದ್ಧಿಃ** – ಯತ್ಪುನರಾಶಙ್ಕ್ಯತೇ ನಾತ್ಮೈಕತ್ವಂ ಬ್ರಹ್ಮಾತ್ಮನೋರೈಕ್ಯಂ ವಾ ಪ್ರತಿಪಾದಯಿತುಮರ್ಹನ್ತಿ ವೇದಾನ್ತಾಃ । ಜೀವನಾನಾತ್ವಸ್ಯ ಸುಪ್ರಸಿದ್ಧತ್ವಾತ್ । ಆದಿತ್ಯಾದಿಜೀವೇಭ್ಯಃ ಪರಮಾತ್ಮಭೇದಸ್ಯ ಸ್ಫುಟಂ ಶ್ರವಣಾಚ್ಚೇತಿ । ತದತೀವ ಮನ್ದಮ್ । ಆತ್ಮನಾನಾತ್ವಸ್ಯ

---

ದಿಲ್ಲವಲ್ಲವೆ ? ಅವು ಸುಷುಪ್ತಿಯಲ್ಲಿರುವುದಿಲ್ಲ. ಅವಸ್ಥೆ, ಪ್ರಮಾತೃ, ಪ್ರಮಾಣವೇ ಮುಂತಾದವುಗಳಿಂದಲೇ ಆತ್ಮನಿಗೆ ಸವಿಶೇಷತೆ ಎಂದಾಗಲೀ-ಎಂದು ಸಂದೇಹಪಡಬಾರದು. ಏಕೆಂದರೆ ಆತ್ಮನು ಅವುಗಳಿಗೂ ಸಾಕ್ಷಿಯಾಗಿರುವುದರಿಂದ (ಹೀಗರಿಯಬೇಕು). (ಅಷ್ಟೇ ಅಲ್ಲ) ಅಧ್ಯಸ್ತವಾದ ಸಾಕ್ಷ್ಯದಿಂದ ಅಧಿಷ್ಠಾನನಾದ ಸಾಕ್ಷಿಯು ಅಣುಮಾತ್ರವಾಗಿಯೂ ಸಂಬಂಧಪಡುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿರುತ್ತೇವೆ. ಇದನ್ನು ವಾರ್ತಿಕಕಾರರೂ ಹೇಳಿರುತ್ತಾರೆ. "(ಆತ್ಮನು) ಅರಿವಿನರೂಪದವನಾಗಿರು-ವುದರಿಂದಲೇ (ಅರಿವಿನಿಂದಲೇ) ಕಾಲ, ಅವಸ್ಥೆಯೇ ಮುಂತಾದವುಗಳು ಸಿದ್ಧವಾಗುತ್ತವೆ, ಹಾಗೆಯೇ ಪ್ರಮಾತೃಪ್ರಮಾಣಗಳು (ಅದರಿಂದಲೇ) ಸಿದ್ಧವಾಗುತ್ತವೆ. (ಹೀಗಿರುವುದರಿಂದ) ಅವುಗಳಿಂದ ಇವನಿಗೆ ವಿಕಾರ ಎಂದರೆ ಹೇಗೆ" ? (ಸಂ. ವಾ. ೯೯೯) ಎಂದಿದ್ದಾರೆ.

**೬೮. ಆತ್ಮೈಕತ್ವದ ಸಿದ್ಧಿಯು** – ಜೀವರುಗಳ ನಾನಾತ್ವವೆಂಬುದು ಸುಪ್ರಸಿದ್ಧವಾಗಿರುವುದರಿಂದ ಆತ್ಮೈಕತ್ವವನ್ನಾಗಲೀ ಬ್ರಹ್ಮಾತ್ಮರುಗಳಿಗೆ ಐಕ್ಯವನ್ನಾಗಲೀ ವೇದಾಂತಗಳು ಪ್ರತಿಪಾದಿಸುವುದಕ್ಕೆ ಅರ್ಹವಲ್ಲ ಎಂದು ಏನು (ಪೂ. ಪ.) ಸಂದೇಹಿಸಿದ್ದ, (ಹಾಗೆಯೇ) ಆದಿತ್ಯಾದಿ ಜೀವರುಗಳಿಗಿಂತ ಪರಮಾತ್ಮನ ಭೇದವು ಸ್ಪಷ್ಟವಾಗಿ ಕೇಳಿಬರುತ್ತಿದೆಯಾದ್ದರಿಂದಲೂ ಸರಿಯಲ್ಲ ಎಂದು ಏನು ಹೇಳಿದ್ದ – ಅದು ಅತೀವ ದಡ್ಡತನ – (ಏಕೆಂದರೆ) ಶ್ರುತಿಯು

ಲೋಕಸಿದ್ಧಸ್ಯೈವ ಶ್ರುತಾವನುವಾದಾತ್, "ಆತ್ಮೈವೇದಂ ಸರ್ವಮ್" (ಛಾಂ. ೭-೨೫-೨) ಇತ್ಯೇಕತ್ವಾವಧಾರಣಾತ್, "ಯತ್ರ ತ್ವಸ್ಯ ಸರ್ವಮಾತ್ಮೈವಾ-ಭೂತ್ತತ್ಕೇನ ಕಂ ಪಶ್ಯೇತ್" (ಬೃ. ೪-೫-೧೫) ಇತ್ಯಾತ್ಮೈಕತ್ವದಶಾಯಾಂ ಭೇದದರ್ಶನಾಪವಾದಾತ್, "ಪರೇಽವ್ಯಯೇ ಸರ್ವ ಏಕೀ ಭವನ್ತಿ" (ಮುಂ. ೩-೨-೭), "ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ" (ಮುಂ. ೩-೨-೯), "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ" (ಗೀ. ೧೩-೨) ಇತ್ಯಾದಿವಚನೈರೇಕಾರ್ಥವತ್ತ್ವಾಯ ಪರಮ-ಸಾಮ್ಯಸಾಧರ್ಮ್ಯವಚನಯೋರಾತ್ಮೈಕ್ಯಪರತಯೈವ ಯೋಜಯಿತುಂ ಯುಕ್ತತ್ವಾಚ್ಚ । ತಸ್ಮಾತ್ ಸಾಧೂಕ್ತಮೇವೈತತ್ "ಅಸ್ಯಾನರ್ಥಹೇತೋಃ ಪ್ರಹಾಣಾಯಾತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ" ಇತೀತಿ ಸರ್ವಮವದಾತಮ್ ॥

---

ಲೋಕದಲ್ಲೇ ಸಿದ್ಧವಾದ ಆತ್ಮರುಗಳ ನಾನಾತ್ವದ ಅನುವಾದವನ್ನು ಮಾಡುತ್ತಿರುವುದರಿಂದಲೂ, "ಆತ್ಮನೇ ಇದೆಲ್ಲವೂ" (ಛಾ. ೭-೨೫-೨) ಎಂದು ಏಕತ್ವವನ್ನು ಅವಧಾರಣೆ ಮಾಡಿರುವುದರಿಂದಲೂ, "ಎಲ್ಲಿ ಈತನಿಗೆ ಎಲ್ಲವೂ ಆತ್ಮನೇ ಎಂದಾಯಿತೋ, ಅಲ್ಲಿ ಯಾವುದರಿಂದ ಏನನ್ನು ಕಂಡಾನು?" (ಬೃ. ೪-೫-೧೫) ಎಂದು ಆತ್ಮೈಕತ್ವದ ಸ್ಥಿತಿಯಲ್ಲಿ ಭೇದದರ್ಶನವನ್ನು ಅಪವಾದಮಾಡಿರುವುದರಿಂದಲೂ, "ಹೆಚ್ಚಿನದಾದ ನಾಶರಹಿತವಾದ (ಸ್ವರೂಪದಲ್ಲಿ) ಎಲ್ಲವೂ ಒಂದಾಗುತ್ತವೆ" (ಮುಂ. ೩-೨-೭), "ಯಾವನಾದರೂ ಆ ಹೆಚ್ಚಿನದಾದ ಬ್ರಹ್ಮವನ್ನು ಅರಿತವನಾಗುವನೋ (ಆತನು) ಬ್ರಹ್ಮನೇ ಆಗುತ್ತಾನೆ" (ಮುಂ. ೩-೨-೯), "ಎಲ್ಲ ಕ್ಷೇತ್ರದಲ್ಲೂ ಕ್ಷೇತ್ರಜ್ಞನಾಗಿರುವವನನ್ನು ನಾನೆಂದು ತಿಳಿ" (ಗೀ. ೧೩-೨), ಎಂದು ಮುಂತಾಗಿರುವ ವಚನಗಳೊಡನೆ ಒಂದೇ ಅರ್ಥವಾಗುವುದಕ್ಕಾಗಿಯೂ, ಪರಮ ಸಾಮ್ಯವಾಗುವುದು ಎಂಬ ಮಾತುಗಳಿಗೆ ಆತ್ಮೈಕತ್ವಪರವಾಗಿಯೇ ಹೊಂದಿಸುವುದು ನ್ಯಾಯವಾಗಿರುತ್ತದೆ. ಆದ್ದರಿಂದ "ಈ ಅನರ್ಥಕ್ಕೆಲ್ಲ ಕಾರಣವಾದ ಅಧ್ಯಾಸವನ್ನು ಕಳೆದುಕೊಳ್ಳುವುದಕ್ಕಾಗಿಯೂ ಆತ್ಮನೊಬ್ಬನೇ ಇರತಕ್ಕವನೆಂಬ ಜ್ಞಾನವನ್ನು (ನಾವು) ಹೊಂದುವುದಕ್ಕಾಗಿಯೂ ಎಲ್ಲಾ ವೇದಾಂತಗಳೂ ಹೊರಟಿವೆ" ಎಂದು ಹಿಂದೆ ಏನು ಹೇಳಿತ್ತು ಅದು ಸರಿಯಾಗಿದೆ ಎಂದಾದ್ದರಿಂದ ಎಲ್ಲವೂ ಪರಿಶುದ್ಧವಾಗಿದೆ.

**೬೯. ಸರ್ವವೇದಾನ್ತಾನಾಮಪ್ಯಾತ್ಮೈಕತ್ವಪರತ್ವೇ ಶಙ್ಕಾ** – ನನ್ವಸ್ತು ಕತಿಪಯಾನಾಂ ವೇದಾನ್ತವಾಕ್ಯಾನಾಮೈಕ್ಯಪ್ರತಿಪಾದಕತ್ವಮಪಿ, ತಥಾಪಿ ನ ಸರ್ವೇಷಾಂ ವೇದಾನ್ತಾನಾಂ ತತ್ಪರತ್ವಮಧ್ಯವಸಾತುಂ ಯುಜ್ಯತೇ। ತಥಾ ಹಿ ವಾದಿನಃ ಕೇಚಿತ್ – ಆತ್ಮನಃ ಕರ್ತೃತ್ವಾತ್ ಕರ್ಮಶೇಷತ್ವಮ್, ಅತೋ ಜ್ಞಾನಸ್ಯಾಪಿ ಕರ್ಮಸಂಬನ್ಧಿತ್ವಮಿತಿ ಮನ್ಯನ್ತೇ । ಆತ್ಮವಾಕ್ಯಾನಾಂ ತು ಕರ್ತೃಪ್ರಶಂಸಾಪರತ್ವಮೇವೇತಿ ಚ । ನಿರತಿಶಯಸುಖವಾಚಿತ್ವಾತ್ಸ್ವರ್ಗಶಬ್ದಸ್ಯ ನ ಸ್ವರ್ಗಾತಿರಿಕ್ತೋ ಮೋಕ್ಷೋಽಸ್ತೀತ್ಯತ ಆತ್ಮಜ್ಞಾನೇ ಫಲಶ್ರುತಿರರ್ಥವಾದ ಇತಿ ಚ ತೇಷಾಮಾಶಯಃ । ಮೋಕ್ಷಸ್ಯಾಽಽತ್ಮಸ್ವರೂಪಾವಸ್ಥಾನಲಕ್ಷಣತ್ವೇಽಪಿ ಕಾಮ್ಯಪ್ರತಿಷಿದ್ಧವರ್ಜನಪೂರ್ವಕಂ ನಿತ್ಯಕರ್ಮಾನುಷ್ಠಾನಾದೇವ ಸ ಸೇತ್ಸ್ಯತೀತ್ಯೇಕೇ । ಅನ್ಯೇ ತು "ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ" (ಛಾಂ. ೮–೪–೩) ಇತ್ಯಾದಿಶ್ರುತಿ-

---

**೬೯. ಎಲ್ಲಾ ವೇದಾಂತಗಳು ಆತ್ಮನೊಬ್ಬನೇ ಇರತಕ್ಕವನೆಂದು ತಿಳಿಸುವುದಕ್ಕಾಗಿ ಬಂದಿವೆ ಎಂಬ ವಿಷಯದಲ್ಲಿ ಸಂದೇಹವು** – ಕೆಲವು ವೇದಾಂತವಾಕ್ಯಗಳು ಆತ್ಮೈಕತ್ವವನ್ನು ಪ್ರತಿಪಾದಿಸುತ್ತವೆ ಎಂದಾದರೂ ಎಲ್ಲ ವೇದಾಂತಗಳೂ ಅದರಲ್ಲೇ ತಾತ್ಪರ್ಯವುಳ್ಳವುಗಳಾಗಿವೆ ಎಂದು ನಿಶ್ಚಯಿಸುವುದಕ್ಕಾಗುವುದಿಲ್ಲ ? ಹಾಗೆಯೇ ಕೆಲವು ವಾದಿಗಳು – ಆತ್ಮನು ಕರ್ತೃವಾಗಿರುವುದರಿಂದ (ಅವನು) ಕರ್ಮಕ್ಕೆ ಶೇಷನಾಗಿದ್ದು, ಅದೇ ಕಾರಣದಿಂದಲೇ ಅವನ ಜ್ಞಾನವೂ ಕರ್ಮಕ್ಕೆ ಸಂಬಂಧಪಟ್ಟಿದ್ದೇ ಎಂದು ತಿಳಿದಿದ್ದಾರೆ. ಆತ್ಮನನ್ನು (ತಿಳಿಸುವ) ವಾಕ್ಯಗಳಿಗಾದರೋ ಕರ್ತೃವನ್ನು ಹೊಗಳುವುದರಲ್ಲಿ ತಾತ್ಪರ್ಯವೆಂದು ತಿಳಿದಿರುತ್ತಾರೆ. ಸ್ವರ್ಗವೆಂಬ ಶಬ್ದವು ಮಿಗಿಲಿಲ್ಲದಷ್ಟು ಸುಖವನ್ನು ಹೇಳುವದರಿಂದ ಸ್ವರ್ಗಕ್ಕಿಂತ ಬೇರೆಯಾದ ಮೋಕ್ಷವು ಇಲ್ಲವಾದ್ದರಿಂದ ಆತ್ಮಜ್ಞಾನದ ವಿಷಯದಲ್ಲಿ ಫಲಶ್ರುತಿಯು ಏನಿದೆ, ಅದು ಅರ್ಥವಾದವೇ ಎಂದು ಅವರ ಅಭಿಪ್ರಾಯವು. ಹಾಗೆಯೇ ಮತ್ತೆ ಕೆಲವರು – ಮೋಕ್ಷವೆಂಬುದು ಆತ್ಮಸ್ವರೂಪದಲ್ಲಿ ನೆಲೆನಿಲ್ಲುವರೂಪವಾದರೂ ಅದು ಕಾಮ್ಯ ಮತ್ತು ಪ್ರತಿಷಿದ್ಧಕರ್ಮಗಳನ್ನು ಕೈಬಿಡುವುದರ ಮೂಲಕ ನಿತ್ಯಕರ್ಮವನ್ನು ಅನುಷ್ಠಾನ ಮಾಡುವುದರಿಂದಲೇ ಸಿದ್ಧಿಯಾಗುವುದು – (ಎಂದು ಹೇಳುತ್ತಾರೆ). ಮತ್ತೆ ಕೆಲವರಾದರೋ "ಅವರಿಗೆ ಎಲ್ಲಾ ಲೋಕದಲ್ಲೂ ಕಾಮಚಾರವಿರುತ್ತದೆ" (ಛಾಂ. ೮–೪–೩) ಎಂಬ ಶ್ರುತಿಯ

ಪ್ರಾಮಾಣ್ಯಾರ್ಥಮುಪಾಸನಾಸಂಜ್ಞಿತಂ ಜ್ಞಾನಮಪ್ಯಸ್ತಿ ಪರಲೋಕಭೋಗ-ಫಲಕಮ್ । ನ ತು ಕರ್ತೃತ್ವಾದ್ಯಧ್ಯಾಸನಿಬರ್ಹಿ ಜ್ಞಾನಂ ವೇದೋಕ್ತ-ಮಸ್ತೀತ್ಯಾಹುಃ । ಅಪರೇ ತು ಯದ್ಯಪ್ಯದ್ವೈತಾತ್ಮಪ್ರತಿಪಾದಕಾನಿ ವಾಕ್ಯಾನಿ ಸನ್ತಿ ವೇದಾನ್ತೇಷು, ತಥಾಪಿ ತೇಷಾಮ್ "ಆತ್ಮಾ ವಾ ಅರೇ ದ್ರಷ್ಟವ್ಯಃ" (ಬೃ. ೨-೪-೫) ಇತ್ಯಾದಿವಾಕ್ಯವಿಹಿತೋಪಾಸನಾಪೇಕ್ಷಿತೋಪಾಸ್ಯ-ಸ್ವರೂಪಸಮರ್ಪಣೇ ವಿನಿಯೋಗ ಇತ್ಯಾಹುಃ । ತದುಪಾಸನಾದೇವ ಚಾವಿದ್ಯಾನಿವೃತ್ತಿಃ ಶರೀರಪಾತೋತ್ತರಕಾಲಂ ಕೈವಲ್ಯಂ ವಾ ಭವಿಷ್ಯತೀತಿ ತೇಷಾಮಭಿಪ್ರಾಯಃ । ಅನ್ಯೇ ಪುನರನಾತ್ಮಪ್ರಪಂಚಪ್ರವಿಲಯವಿಧಾನ-ಪರತ್ವಮ್, ಅಪರೇ ಚ ತತ್ತ್ವಮಸೀತ್ಯಾದಿವಾಕ್ಯಜನ್ಯಜ್ಞಾನಪ್ರಸಙ್ಖ್ಯಾನ-ವಿಧಿಪರತ್ವಮಾಹುರ್ವೇದಾನ್ತಾನಾಮ್ । ತದೇವಂ ವಾದಿವಿಪ್ರತಿಪತ್ತೌ ಸತ್ಯಾಂ ಕಥಮಾತ್ಮೈಕತ್ವಪ್ರತಿಪತ್ತಯ ಏವ ಸರ್ವೇಷಾಂ ವೇದಾನ್ತಾನಾಂ ಪ್ರಾರಮ್ಭ

---

ಪ್ರಾಮಾಣ್ಯಕ್ಕಾಗಿ "ಉಪಾಸನಾ" ಎಂಬ ಹೆಸರಿನ ಪರಲೋಕದಲ್ಲಾಗುವ ಭೋಗಕ್ಕೆ ಕಾರಣವಾದ ಜ್ಞಾನವೂ ಇದೆ, ಕರ್ತೃತ್ವವೇ ಮುಂತಾದ ಅಧ್ಯಾಸವನ್ನು ಕಳೆದುಹಾಕುವ ಜ್ಞಾನವು ವೇದದಲ್ಲಿ ಹೇಳಿರುವುದಿಲ್ಲ (ಎನ್ನುತ್ತಾರೆ). ಇನ್ನು ಕೆಲವರಾದರೋ – ಅದ್ವೈತಾತ್ಮವನ್ನು ತಿಳಿಸುವಂತಹ ವಾಕ್ಯಗಳು ವೇದಾಂತಗಳಲ್ಲಿದ್ದರೂ "ಎಲೆ, ಆತ್ಮನನ್ನೇ ಕಂಡುಕೊಳ್ಳಬೇಕು" (ಬೃ. ೨-೪-೫) ಎಂದು ಮುಂತಾದ ವಾಕ್ಯಗಳಲ್ಲಿ ಹೇಳಿರುವ ಉಪಾಸನೆಗೆ ಬೇಕಾದ ಉಪಾಸ್ಯವಾದ (ದೇವತೆಯ) ಸ್ವರೂಪವನ್ನು ತಿಳಿಸಿಕೊಡುವುದರಲ್ಲಿ ಅವುಗಳಿಗೆ ವಿನಿಯೋಗವಿರುತ್ತದೆ ಎನ್ನುತ್ತಾರೆ. ಆ ಉಪಾಸನೆಯಿಂದಲೇ ಅವಿದ್ಯೆಯು ತೊಲಗುವುದು ಅಥವಾ ಶರೀರವು ಬಿದ್ದಮೇಲೆ ಮೋಕ್ಷವಾಗುತ್ತದೆ ಎಂದು ಅವರ ಅಭಿಪ್ರಾಯವು. ಮತ್ತೆ ಕೆಲವರು, (ವೇದಾಂತಗಳು) ಅನಾತ್ಮ ಪ್ರಪಂಚವನ್ನು ಕರಗಿಸಿಕೊಳ್ಳಬೇಕೆಂದು ತಿಳಿಸುವುದಕ್ಕಾಗಿ (ಬಂದಿವೆಯೆಂತಲೂ) ಇನ್ನು ಕೆಲವರು, "ತತ್ವಮಸಿ" ಮುಂತಾದ ವಾಕ್ಯದಿಂದುಂಟಾಗುವ ಜ್ಞಾನವನ್ನು ಆವೃತ್ತಿಮಾಡಬೇಕು ಎಂಬುದನ್ನು ವಿಧಿಮಾಡುವುದರಲ್ಲಿ ವೇದಾಂತಗಳು (ತಾತ್ಪರ್ಯವುಳ್ಳದ್ದೆಂದು ಹೇಳುತ್ತಿದ್ದಾರೆ). ಹೀಗೆ ವಾದಿಗಳಲ್ಲಿ ವಿರುದ್ಧವಾದ ಅಭಿಪ್ರಾಯವಿರುವಾಗ ಅದು ಹೇಗೆ ವೇದಾಂತಗಳು ಆತ್ಮೈಕತ್ವವನ್ನು ತಿಳಿಸುವುದಕ್ಕಾಗಿಯೇ ಹೊರಟಿವೆ ಎಂದು ಹೇಳುವುದಕ್ಕಾಗುತ್ತದೆ ? ಆಯಾ

ಇತಿ ಶಕ್ಯಂ ವಕ್ತುಮ್ ? ಸನ್ತಿ ಹಿ ವಾಕ್ಯಾನಿ ತೈಸ್ತೈರ್ವಾದಿಭಿಃ ಸ್ವಾಭಿಪ್ರಾಯಾ-ವಿಷ್ಕರಣಪರತಯಾ ವ್ಯಾಖ್ಯಾಯಮಾನಾನಿ । ಅತೋ ನ ಯುಕ್ತಮಿದಂ ಪ್ರತಿಭಾತ್ಯಾತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವವೇದಾನ್ತಾರಮ್ಭಪ್ರತಿ-ಜ್ಞಾನಮಿತಿ ಚೇತ್ ॥

**೭೦. ಉಕ್ತಶಙ್ಕಾಪರಿಹಾರಃ** – ಅತ್ರೋಚ್ಯತೇ – **ಯಥಾ ಚಾಯಮರ್ಥಃ ಸರ್ವೇಷಾಂ ವೇದಾನ್ತಾನಾಂ ತಥಾ ವಯಮಸ್ಯಾಂ ಶಾರೀರಕಮೀಮಾಂಸಾಯಾಂ ಪ್ರದರ್ಶಯಿಷ್ಯಾಮಃ** । ಶರೀರೇ ಭವಃ ಶಾರೀರೋ ಜೀವಃ । ತಸ್ಯ ಹಿ ಶರೀರಂ ಭೋಗಾಯತನಮ್ । ತತ್ರ ಚಾಸೌ ತಾದಾತ್ಮ್ಯತಾದ್ಧರ್ಮ್ಯಾನ್ಯತರಾಧ್ಯಾಸೇನ ಮಿಥ್ಯಾಭಿಮಾನಂ ವಹನ್ ಭವತೀತಿ ಶಾರೀರ ಇತ್ಯುಚ್ಯತೇ । ಶಾರೀರ ಏವ ಶಾರೀರಕಃ । ತಸ್ಯಾಸ್ಯ ಶಾರೀರಕಸ್ಯ ಬ್ರಹ್ಮಾತ್ಮತ್ವಂ ಸ್ವಾಭಾವಿಕಂ ನ ಯತ್ನಾನ್ತರಸಾಧ್ಯಮಿತಿ ವೇದಾನ್ತೇಷೂಪ-ದಿಶ್ಯತೇ "ತತ್ತ್ವಮಸಿ" (ಛಾಂ. ೬-೮-೭) ಇತ್ಯಾದಿಭಿಃ । ತದಿದಂ

---

ವಾದಿಗಳಿಗೆ (ತಮ್ಮ) ತಮ್ಮ ಅಭಿಪ್ರಾಯವನ್ನು ಆವಿಷ್ಕಾರ ಮಾಡುವಹಾಗೆ ವ್ಯಾಖ್ಯಾನ ಮಾಡಬಹುದಾದ ವಾಕ್ಯಗಳೂ ಇವೆಯಷ್ಟೆ ? ಆದ್ದರಿಂದ ಆತ್ಮೈಕತ್ವವಿದ್ಯಾಪ್ರತಿಪತ್ತಿಗಾಗಿ ಎಲ್ಲಾ ವೇದಾಂತಗಳೂ ಆರಂಭವಾಗಿವೆ ಎಂದು ಪ್ರತಿಜ್ಞೆಮಾಡುವುದು ಸರಿಯಲ್ಲ ಎಂದರೋ ?

**೭೦. ಮೇಲೆ ಹೇಳಿದ ಸಂದೇಹಕ್ಕೆ ಪರಿಹಾರವು** – ಇಲ್ಲಿ ಹೇಳುತ್ತೇವೆ – "ಯಾವ ರೀತಿ ಎಲ್ಲಾ ವೇದಾಂತಗಳಿಗೂ ಇದೇ ಅರ್ಥವೆಂದಾಗುವುದೋ ಆ ರೀತಿಯಾಗಿ ನಾವು ಈ ಶಾರೀರಕಮಿಂಮಾಂಸೆಯಲ್ಲಿ ತೋರಿಸಿ-ಕೊಡುವೆವು" ? ಶರೀರದಲ್ಲಿರುವವನು ಶಾರೀರನು. ಅವನಿಗಲ್ಲವೆ ಶರೀರವು ಭೋಗಕ್ಕೆ (ಸುಖದುಃಖಗಳನ್ನನುಭವಿಸುವುದಕ್ಕೆ) ಆಶ್ರಯವು. ಆ ಶರೀರದಲ್ಲಿ ಈ ಜೀವನು ತಾದಾತ್ಮ್ಯತೆಯಿಂದಲೂ ಅದರ ಧರ್ಮವನ್ನು ಕಲ್ಪಿಸಿ-ಕೊಳ್ಳುವುದೆಂಬ ಅಧ್ಯಾಸದಿಂದ ಸುಳ್ಳಾದ ಅಭಿಮಾನವನ್ನು ಹೊಂದಿದವ-ನಾದ್ದರಿಂದ "ಶಾರೀರ" ಎನ್ನಲಾಗುತ್ತದೆ. ಶಾರೀರನೇ ಶಾರೀರಕನು. ಆ ಈ ಶಾರೀರಕನಿಗೆ (ಜೀವನಿಗೆ) ಬ್ರಹ್ಮಾತ್ಮತ್ವವು ಸ್ವಾಭಾವಿಕವೇ ಹೊರತು ಬೇರೆ ಪ್ರಯತ್ನದಿಂದುಂಟಾಗುವುದಲ್ಲ ಎಂಬುದನ್ನು "ತತ್ವಮಸಿ" (ಛಾಂ. ೬-೮-

ವೇದಾನ್ತಪ್ರತಿಪಾದ್ಯಂ ಶಾರೀರಕಸ್ಯ ಬ್ರಹ್ಮಾತ್ಮತ್ವಂ ನ್ಯಾಯಪೂರ್ವಕಂ ಮೀಮಾಂಸಿತ್ವಾ ನಿರ್ಣೀಯತೇಽನಯೇತೀಯಂ ಶಾರೀರಕಮಿಮಾಂಸಾ । ಅಸ್ಯಾಂ ಹಿ ಮೀಮಾಂಸಾಯಾಂ ಸರ್ವೇಷಾಂ ವೇದಾನ್ತಾನಾಂ ಸಾಕ್ಷಾ-ದಾರಾದ್ವಾ ಬ್ರಹ್ಮಾತ್ಮೈಕತ್ವೇ ತಾತ್ಪರ್ಯಂ ನಿರ್ಣೀಯತ ಇತಿ ವಯಮೇ-ತದ್ಭಾಷ್ಯೇ ಪರ್ದರ್ಶಯಿಷ್ಯಾಮ ಇತ್ಯರ್ಥಃ ॥

ತತ್ರಾಽಽತ್ಮಜ್ಞಾನಸ್ಯ ಕರ್ಮಶೇಷತ್ವವಾದಃ "ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್" (೩-೪-೮) ಇತ್ಯಾದಿಸೂತ್ರಭಾಷ್ಯೇ ನಿರಸಿಷ್ಯತೇ । ಕರ್ಮಮಾತ್ರೇಣಾಽಽತ್ಮನ್ಯವಸ್ಥಾನಂ ಮುಕ್ತಿರಿತಿ ವಾದಸ್ತು ಯುಕ್ತ್ಯಾಭಾಸಕಲ್ಪಿತೋಽವೈದಿಕ ಇತಿ ಕಾರ್ಯಾಧಿಕರಣಭಾಷ್ಯೇ ಪ್ರಾಸಙ್ಗಿಕಸಙ್ಗತ್ಯಾ ಪರಾಕರಿಷ್ಯತೇ । ಉಪಾಸನಾವಾಕ್ಯಾನಾಮುಪಾಸನವಿಧಿ-

---

೭) ಎಂದು ಮುಂತಾಗಿರುವ ವೇದಾಂತವಾಕ್ಯಗಳಲ್ಲಿ ಉಪದೇಶಿಸಿರುತ್ತದೆ. ಈ ವೇದಾಂತಪ್ರತಿಪಾದ್ಯವಾದ ಜೀವನ ಬ್ರಹ್ಮಾತ್ಮತ್ವವನ್ನು ಯುಕ್ತಿ-ಪೂರ್ವಕವಾಗಿ ವಿಚಾರಮಾಡಿ ಇದರಿಂದ ನಿರ್ಣಯಮಾಡುತ್ತದೆಯಾದ್ದರಿಂದ ಇದು ಶಾರೀರಕಮೀಮಾಂಸೆಯು. ಈ ಮೀಮಾಂಸೆಯಲ್ಲಿ ಎಲ್ಲ ವೇದಾಂತಗಳಿಗೂ ನೇರಾಗಿಯಾಗಲೀ ಪರಂಪರೆಯಿಂದಾಗಲೀ ಬ್ರಹ್ಮವೂ ಆತ್ಮನೂ ಒಂದೇ ಎಂಬ ವಿಷಯದಲ್ಲಿ ತಾತ್ಪರ್ಯವಿದೆ ಎಂಬುದನ್ನು ನಿರ್ಣಯಮಾಡಲಾಗುತ್ತದೆ, ಎಂಬುದನ್ನು ನಾವು ಈ ಭಾಷ್ಯದಲ್ಲಿ ತೋರಿಸಿಕೊಡುವೆವು ಎಂದರ್ಥವು.

ಅಲ್ಲಿ ಆತ್ಮಜ್ಞಾನವು ಕರ್ಮಶೇಷವಾಗಿದೆ ಎಂಬ ವಾದವನ್ನು "ಆದರೆ ಹೆಚ್ಚಾಗಿ ಉಪದೇಶವಿರುವುದರಿಂದ ಬಾದರಾಯಣರಿಗೂ ಇದು ಸಂಮತವೇ" (೩-೪-೮) ಎಂದು ಮುಂತಾಗಿರುವ ಸೂತ್ರದ ಭಾಷ್ಯದಲ್ಲಿ ತೆಗೆದುಹಾಕ-ಲಾಗುತ್ತದೆ. ಕರ್ಮಮಾತ್ರದಿಂದಲೇ ತನ್ನಲ್ಲಿ ತಾನು ನೆಲೆ ನಿಲ್ಲುವುದೆಂಬ ಮೋಕ್ಷವಾಗುತ್ತದೆ ಎಂಬ ವಾದವನ್ನು – ಇದು (ಕೇವಲ) ಯುಕ್ತಿಯ ಆಭಾಸದಿಂದ ಕಲ್ಪಿತವಾದ ಅವೈದಿಕವಾದದ್ದು – ಎಂದಾದ್ದರಿಂದ "ಕಾರ್ಯಾಧಿಕರಣ" (೪-೩-೭) ಎಂಬುದರ ಭಾಷ್ಯದಲ್ಲಿ ಪ್ರಾಸಂಗಿಕ ಸಂದರ್ಭದಿಂದ (ಇದನ್ನು) ತೆಗೆದುಹಾಕಲಾಗುತ್ತದೆ. ಉಪಾಸನಾವಾಕ್ಯಗಳು

ಪರತ್ವೇಽಪಿ ತದ್ವ್ಯತಿರಿಕ್ತಾನ್ಯಪಿ ಬ್ರಹ್ಮವಾಕ್ಯಾನಿ ಚಿನ್ಮಾತ್ರವಸ್ತುಪರಾಣಿ ಸನ್ತೀತಿ ಸಮನ್ವಯಾಧಿಕರಣಭಾಷ್ಯೇ, ಉಭಯಲಿಙ್ಗಾಧಿಕರಣಭಾಷ್ಯೇ ಚ (೩-೨-೧೧, ೨೧) ಸ್ಥಾಪಯಿಷ್ಯತೇ । ಬ್ರಹ್ಮಣಶ್ಚೋಪಾಸನಾವಿಧಿಶೇಷತ್ವೇನೋಪದೇಶ ಇತಿ ವಾದಸ್ತೂಕ್ತಾಧಿಕರಣನ್ಯಾಯೇನೋಪಾಸನಾವಾಕ್ಯಾನಾಂ ಬ್ರಹ್ಮವಾಕ್ಯಾನಾಂ ಚ ಪಾರ್ಥಗರ್ಥ್ಯದರ್ಶನಾತ್ ಸ್ವತಃಸಿದ್ಧಬ್ರಹ್ಮಸ್ವರೂಪಸಮರ್ಪಕವಾಕ್ಯಾನಾಂ ಚಾನ್ಯಾಕಾಙ್ಕ್ಷಾವಿರಹಾತ್ ನಿಶ್ಚಿತಫಲವದ್ವಿಜ್ಞಾನಜನಕತ್ವಾಚ್ಚ ನ ಯುಕ್ತ ಇತಿ ಸಮನ್ವಯಾಧಿಕರಣಭಾಷ್ಯೇ ಪ್ರದರ್ಶಯಿಷ್ಯತೇ। ಪ್ರಪಞ್ಚಪ್ರವಿಲಯವಾದಸ್ತು ಬ್ರಹ್ಮವಾಕ್ಯೇಷು ನಿಯೋಗಾಸಂಭವಾದಧ್ಯಾಸರೂಪಾವಿದ್ಯಾನಿರಸನವ್ಯತಿರೇಕೇಣ ಪ್ರಪಞ್ಚಪ್ರವಿಲಯಸ್ಯೈವಾಸಂಭವಾಚ್ಚಾಸಙ್ಗತ ಇತ್ಯುಭಯಲಿಙ್ಗಾಧಿಕರಣಭಾಷ್ಯೇ ದರ್ಶಯಿಷ್ಯತೇ । ಪದಾರ್ಥ-

---

ಉಪಾಸನಾವಿಧಿಪರವಾಗಿದ್ದರೂ ಅದಕ್ಕಿಂತ ಬೇರೆಯಾದ ಚಿನ್ಮಾತ್ರವಾದ ವಸ್ತುವಿನಲ್ಲಿ ತಾತ್ಪರ್ಯವಿರುವ ಬ್ರಹ್ಮವಾಕ್ಯಗಳು ಇವೆ ಎಂಬುದನ್ನು ಸಮನ್ವಯಾಧಿಕರಣಭಾಷ್ಯದಲ್ಲೂ (೧-೧-೪) ಉಭಯಲಿಂಗಾಧಿಕರಣಭಾಷ್ಯದಲ್ಲೂ(೩-೨-೧೧,೨೧) ತೋರಿಸಲಾಗುತ್ತದೆ. ಬ್ರಹ್ಮವನ್ನು (ವೇದಾಂತಗಳಲ್ಲಿ) ಉಪಾಸನಾವಿಧಿಗೆ ಶೇಷವಾಗಿಯೇ ಹೇಳಿದೆ ಎಂಬ ವಾದವನ್ನಾದರೋ ಮೇಲೆ ಹೇಳಿದ ಅಧಿಕರಣದ ನ್ಯಾಯದಿಂದ ಉಪಾಸನಾ ವಾಕ್ಯಗಳಿಗೂ ಬ್ರಹ್ಮವಾಕ್ಯಗಳಿಗೂ ಬೇರೆ ಬೇರೆ ಅರ್ಥಗಳು ಕಂಡುಬರುತ್ತಿರುವುದರಿಂದಲೂ, ಸ್ವತಃಸಿದ್ಧವಾದ ಬ್ರಹ್ಮಸ್ವರೂಪವನ್ನು ಸಮರ್ಪಣೆ ಮಾಡುವ (ವೇದಾಂತ)ವಾಕ್ಯಗಳಿಗೆ ಬೇರೆಯ ಆಕಾಂಕ್ಷೆಯು ಇಲ್ಲದಿರುವುದರಿಂದಲೂ, ನಿಶ್ಚಿತವಾದ ಫಲವನ್ನುಳ್ಳ ಅರಿವನ್ನುಂಟು ಮಾಡುವದಾದ್ದರಿಂದಲೂ – ಅದು ಸರಿಯಲ್ಲ ಎಂಬುದನ್ನು ಸಮನ್ವಯಾಧಿಕರಣದ ಭಾಷ್ಯದಲ್ಲೇ ತೋರಿಸಿಕೊಡಲಾಗುತ್ತದೆ. ಪ್ರಪಂಚಪ್ರವಿಲಯವಾದವನ್ನಾದರೋ ಬ್ರಹ್ಮವಾಕ್ಯದಲ್ಲಿ ನಿಯೋಗವೇ ಹೊಂದುವುದಿಲ್ಲವಾದ್ದರಿಂದಲೂ, ಅಧ್ಯಾಸರೂಪವಾದ ಅವಿದ್ಯೆಯನ್ನು ಕಳೆಯುವುದಕ್ಕಿಂತ ಬೇರೆಯಾಗಿ ಪ್ರಪಂಚಪ್ರವಿಲಯವೆಂಬುದೇ ಹೊಂದುವುದಿಲ್ಲವಾದ್ದರಿಂದ ಸರಿಯಲ್ಲವೆಂದು ಉಭಯಲಿಂಗಾಧಿಕರಣ ಭಾಷ್ಯದಲ್ಲಿ ತೋರಿಸಿಕೊಡಲಾಗುತ್ತದೆ. ಪದಾರ್ಥವನ್ನು ವಿಂಗಡವಾಗಿ

ವಿವೇಕಾರ್ಥಂ ಪ್ರಸಙ್ಖ್ಯಾನಸ್ಯೇಷ್ಟತ್ವೇಽಪಿ ವಾಕ್ಯಾರ್ಥಜ್ಞಾನೋದಯೇ ಸತಿ ಮುಮುಕ್ಷೋಃ ಕೃತಕೃತ್ಯತ್ವಾತ್ ನ ಕರ್ತವ್ಯಶೇಷೋ ವಿದ್ಯತ ಇತಿ ಪ್ರಸಙ್ಖ್ಯಾನವಾದೋಽಪ್ಯಾವೃತ್ತ್ಯಧಿಕರಣೇ ವ್ಯುದಸಿಷ್ಯತೇ । ದ್ವೈತವಾದಾಸ್ತು ಸಾಙ್ಖ್ಯಯೋಗವೈಶೇಷಿಕಬೌದ್ಧಾರ್ಹತಪ್ರಭೃತಯೋಽವಿರೋಧಲಕ್ಷಣಭಾಷ್ಯೇ ನಿರಾಕರಿಷ್ಯನ್ತೇ । ಸಿದ್ಧಾನ್ತೇ ತೈಃ ಪ್ರಕ್ಷಿಪ್ತಾ ದೋಷಾಶ್ಚ ತತ್ರೈವೋದ್ಧರಿಷ್ಯನ್ತೇ। ಭೇದಾಭೇದವಾದೋಽಪಿ ಭೇದದರ್ಶನನಿನ್ದಾವಾಕ್ಯೈರ್ವಿರುದ್ಧತ್ವಾತ್, ಸಮ್ಯಗ್ಜ್ಞಾನಾಪನೋದ್ಯಸ್ಯ ಮಿಥ್ಯಾಜ್ಞಾನಸ್ಯೈವಾಽಭಾವೇಽನಿರ್ಮೋಕ್ಷ- ಪ್ರಸಙ್ಗಾಚ್ಚಾಽಯುಕ್ತ ಏವೇತಿ ತದನನ್ಯತ್ವಾಧಿಕರಣೇಽಧ್ಯವಸಾಸ್ಯತೇ । ಯೇ ತ್ವಧುನಾತನದ್ವೈತವೇದಾನ್ತಿನೋಽಹಂಪ್ರತ್ಯಯಗಮ್ಯಾತ್ಮವಾದತಟಸ್ಥೇಶ್ವರವಾದ- ಜಗತ್ಸತ್ಯತ್ವವಾದಬ್ರಹ್ಮಾತ್ಮಶೇಷಶೇಷಿವಾದಮುಕ್ತಿತಾರತಮ್ಯವಾದಾದಿಪಙ್ಕಿಲಂ ಸಿದ್ಧಾನ್ತಾಭಾಸಂ ವೇದಾನ್ತಾರ್ಥತ್ವೇನ ಕಲ್ಪಯನ್ತಃ ಪ್ರಾಚೀನದ್ವೈತಿಯುಕ್ತಿ-

---

ಅರಿಯುವುದಕ್ಕೆ ಪ್ರಸಂಖ್ಯಾನವೆಂಬುದು ಇಷ್ಟವಾದದ್ದಾದರೂ ವಾಕ್ಯಾರ್ಥ ಜ್ಞಾನೋದಯವಾದಮೇಲೆ ಮುಮುಕ್ಷುವಾದವನು ಕೃತಕೃತ್ಯನಾಗುವುದರಿಂದ ಮಾಡಬೇಕಾದದ್ದೇನೂ ಉಳಿಯುವುದಿಲ್ಲವಾದ್ದರಿಂದ ಪ್ರಸಂಖ್ಯಾನವಾದವನ್ನೂ ಸಹ ಆವೃತ್ತ್ಯಧಿಕರಣದ (೪-೧-೧) (ಭಾಷ್ಯದಲ್ಲಿ) ತೆಗೆದುಹಾಕಿದೆ. ಸಿದ್ಧಾಂತದ ಮೇಲೆ ಅವರು ಹಾಕಿರುವ ದೋಷಗಳನ್ನು ಅಲ್ಲಿಯೇ ತೆಗೆದುಹಾಕಲಾಗುತ್ತದೆ. ಭೇದಾಭೇದವಾದವೂ ಕೂಡ ಭೇದವನ್ನು ಕಾಣುವುದನ್ನು ನಿಂದೆಮಾಡುವ ವಾಕ್ಯಗಳಿಗೆ ವಿರುದ್ಧವಾದ್ದರಿಂದಲೂ ಸಮ್ಯಗ್ಜ್ಞಾನದಿಂದ ಕಳೆಯಬೇಕಾದ ಮಿಥ್ಯಾಜ್ಞಾನವೆಂಬುದೇ ಅವರ ಪ್ರಕಾರ ಇಲ್ಲದಿರುವಾಗ ಮೋಕ್ಷವೇ ಇಲ್ಲವೆಂದಾಗುವುದರಿಂದಲೂ ಈ ಪಕ್ಷವು ಸರಿಯುಲ್ಲವೆಂದು "ತದನನ್ಯತ್ವಾಧಿಕರಣ" (೨-೧-೧೪) ದಲ್ಲಿ ನಿಶ್ಚಯಮಾಡಲಾಗುತ್ತದೆ. ಈಗಿನ ದ್ವೈತವೇದಾಂತಿಗಳೆಂಬುವರು ಯಾರಿದ್ದಾರೆ – ಅವರು, ಅಹಂಪ್ರತ್ಯಯದಿಂದ ತಿಳಿದುಬರುವ ಆತ್ಮವಾದ, ತಟಸ್ಥೇಶ್ವರವಾದ, ಜಗತ್ತು ಸತ್ಯವೆಂಬವಾದ, ಬ್ರಹ್ಮಾತ್ವಸ್ವರೂಪದಲ್ಲಿ ಶೇಷಶೇಷಿ ಇದೆ ಎಂಬ ವಾದ, ಮುಕ್ತಿಯಲ್ಲಿ ತಾರತಮ್ಯವಿದೆ ಎಂಬ ವಾದವೇ ಮೊದಲಾದವುಗಳಿಂದ ಕೊಳೆಯಾದ ಸಿದ್ಧಾಂತದಂತೆ ತೋರುತ್ತಿರುವುದನ್ನೇ ವೇದಾಂತಾರ್ಥವೆಂದು ಕಲ್ಪಿಸುತ್ತಿದ್ದಾರೆ. ಹಿಂದಿನ (ಸಾಂಖ್ಯ ವೈಶೇಷಿಕಾದಿಗಳ) ದ್ವೈತಯುಕ್ತಿಗಳಿಂದ

ಪ್ರಚ್ಛರ್ದಿಕಾವಷ್ಟಮ್ಭಾ ವೇದಾನ್ತವಾಕ್ಯಾನ್ಯನ್ಯಥಾ ಅನ್ಯಥಾ ನಯನ್ತೋಽ-ವಿದ್ಯಾಮಾನವಾಕ್ಯಾನ್ಯಪಿ ಚ ಕಲ್ಪಯನ್ತಃ ಕದರ್ಥಯನ್ತಿ ವಿಶುದ್ಧಾ-ದ್ವೈತಸಿದ್ಧಾನ್ತಗಙ್ಗಾಂ ವಿವಿಧಾಕ್ಷೇಪಪ್ರಕ್ಷೇಪೇಣಾವಿಲಯಿತುಮೀಹನ್ತೇ ಚ ತೇ ವ್ಯರ್ಥಪ್ರಯಾಸಾ ಭಾಷ್ಯೋದಿತವಿದ್ಯಾವಿದ್ಯಾವಿವೇಕಪ್ರಕ್ರಿಯಾನ-ಭಿಜ್ಞತ್ವಾದೇವೋಪೇಕ್ಷಣೀಯಾಃ । ತದೇವಂ ವಾದಿವಿಪ್ರತಿಪತ್ತೇಸ್ತಾವನ್ನಾಸ್ತಿ ಕೋಽಪ್ಯಾತಙ್ಕ ಆತ್ಮೈಕತ್ವವಿದ್ಯಾಪ್ರತಿಜ್ಞಾಯಾಃ ॥

ಯದ್ಯಪಿ ಕೇಚಿದ್ವೇದಾನ್ತಾಃ ಸಗುಣೋಪಾಸನಾಪರಾಃ ಕೇಚಿಚ್ಚಾಬ್ರಹ್ಮ-ಭೂತಪ್ರಾಣಾದ್ಯುಪಾಸ್ತೀನಾಂ ವಿಧಾಯಕಾಶ್ಚ, ತಥಾ ಚ ನ ಸರ್ವೇಷಾಂ ವೇದಾನ್ತಾನಾಮಾತ್ಮೈಕತ್ವೋಪದೇಶಪರತ್ವಂ ಶಕ್ಯಪ್ರತಿಜ್ಞಾನಮಿವ । ತಥಾಪಿ ಕಾರ್ಯವಿಧಾಯಕಾನಾಂ ಶ್ರುತೀನಾಂ ವಸ್ತುಸ್ವರೂಪನಿರ್ಧಾರಣೇ ತಾತ್ಪರ್ಯಾಭಾವಾತ್ ತಾತ್ಪರ್ಯೇಣೈಕ್ಯಂ ನಿರಾಕಾಙ್ಕ್ಷಂ ಬೋಧಯನ್ತೀ-

---

ಮುಸುಕು ಹಾಕಿಕೊಂಡವರಾಗಿ ವೇದಾಂತವಾಕ್ಯಗಳನ್ನು ಬೇರೆ ಬೇರೆಯಾಗಿ ಒಯ್ಯುತ್ತಾ, (ಯಾವ ಶ್ರುತಿಯಲ್ಲಿ)ಲ್ಲದ ವಾಕ್ಯಗಳನ್ನು ಕಲ್ಪಿಸುತ್ತಾ ಪರಿಶುದ್ಧವಾದ ವೇದಾಂತದ ಗಂಗೆಯನ್ನು ಕೆಡಿಸಿರುತ್ತಾರೆ. ಬೇರೆ ಬೇರೆ ತರಹದ ಆಕ್ಷೇಪಗಳನ್ನು ಹಾಕುವುದರಿಂದ ಮುಳುಗಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಅವರ ಪ್ರಯಾಸವು ವ್ಯರ್ಥವಾದದ್ದು, ಭಾಷ್ಯದಲ್ಲಿ ಹೇಳಿರುವ ವಿದ್ಯಾವಿದ್ಯೆಗಳನ್ನು ವಿಂಗಡಮಾಡುವ ಪ್ರಕ್ರಿಯೆಯನ್ನು ತಿಳಿಯದವರಾದ್ದರಿಂದ (ಅವರನ್ನು) ಉಪೇಕ್ಷಿಸಬೇಕು. ಹೀಗೆ ವಾದಿಗಳಲ್ಲಿ ವಿಪ್ರತಿಪತ್ತಿ ಇದೆ ಎಂಬ ಕಾರಣದಿಂದ ಆತ್ಮೈಕತ್ವದ ವಿದ್ಯೆಯನ್ನರಿಯುವುದಕ್ಕೆ ಯಾವ ಆತಂಕವೂ ಇರುವುದಿಲ್ಲ.

ಕೆಲವು ವೇದಾಂತವಾಕ್ಯಗಳು ಸಗುಣೋಪಾಸನೆಯನ್ನು ಹೇಳುವುದರಲ್ಲಿ ತಾತ್ಪರ್ಯವಾದವುಗಳು, ಕೆಲವು ವಾಕ್ಯಗಳು ಬ್ರಹ್ಮವಲ್ಲದ ಪ್ರಾಣವೇ ಮುಂತಾದವುಗಳನ್ನು ವಿಧಿಸುವುದರಲ್ಲಿ ತಾತ್ಪರ್ಯವುಳ್ಳವುಗಳು ಎಂದಾಗಿ ಎಲ್ಲ ವೇದಾಂತಗಳೂ ಆತ್ಮೈಕತ್ವೋಪದೇಶವನ್ನು ಮಾಡುವುದರಲ್ಲಿಯೇ ತಾತ್ಪರ್ಯವುಳ್ಳದ್ದೆಂದಾಗದೇ ಇದ್ದರೂ, ಮಾಡಬೇಕಾದದ್ದನ್ನು ವಿಧಿಸುವ ಶ್ರುತಿಗಳಿಗೆ ವಸ್ತುಸ್ವರೂಪವನ್ನು ನಿರ್ಧಾರಣೆ ಮಾಡುವುದರಲ್ಲಿ ತಾತ್ಪರ್ಯವಿಲ್ಲದ್ದರಿಂದಲೂ (ಆತ್ಮೈಕತ್ವದಲ್ಲಿ) ತಾತ್ಪರ್ಯವುಳ್ಳ (ಜೀವ

ನಾಮನುಭವಪರ್ಯವಸಾಯಿನೀನಾಂ ಶ್ರುತೀನಾಂ ಪ್ರಾಮಾಣ್ಯಂ ನಿಷ್ಪ್ರತ್ಯೂಹಮೇವ । ನ ಚೈವಂ ವಿಧಾಯಕಶ್ರುತೀನಾಮಪ್ರಾಮಾಣ್ಯಮ್ । ಚಿತ್ತಶುದ್ಧಿಚಿತ್ತೈಕಾಗ್ರ್ಯಕ್ರಮಮುಕ್ತ್ಯಾದಿಪ್ರಾಪ್ತಿದ್ವಾರಾ ತೇಷಾಮಪ್ಯಾತ್ಮೈಕ್ಯಜ್ಞಾನಪ್ರಾಪ್ತ್ಯರ್ಥತ್ವಸ್ಯ ಸುವಚತ್ವಾತ್ । ತಥಾ ಹಿ ಶ್ರುತಿಃ – "ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾಽನಾಶಕೇನ" (ಬೃ. ೪–೪–೨೨) "ತಸ್ಮಾದೇವಂವಿಚ್ಛಾನ್ತೋ ದಾನ್ತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾತ್ಮನ್ಯೇವಾತ್ಮಾನಂ ಪಶ್ಯತಿ" (ಬೃ. ೪–೪–೨೩) ಇತಿ ಸರ್ವಾಪೇಕ್ಷಾಧಿಕರಣಭಾಷ್ಯೇ ವಿದ್ಯಾಜ್ಞಾನಸಾಧನಾಧಿಕರಣಭಾಷ್ಯೇ ಚ ನಿರ್ಧಾರಯಿಷ್ಯತೇ ॥

ತದೇವಂ ಸರ್ವೇ ವೇದಾನ್ತಾ ಅನಾದ್ಯವಿದ್ಯಾನಿರಾಸಿಕಾತ್ಮೈಕತ್ವ-

---

ಬ್ರಹ್ಮ) ಐಕ್ಯವನ್ನು ಹೇಳುವ ವಾಕ್ಯಗಳು, ಬೇರೆ ಏನನ್ನೂ ಅಪೇಕ್ಷಿಸದೇ ಅನುಭವದಲ್ಲಿ ಕೊನೆಗಾಣುವ (ವಿಷಯವನ್ನು ಹೇಳುವುದರಿಂದಲೂ), (ವೇದಾಂತ) ಶ್ರುತಿಗಳ ಪ್ರಾಮಾಣ್ಯಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ. ವಿಧಿಯನ್ನು ತಿಳಿಸುವ ಶ್ರುತಿಗಳಿಗೆ ಅಪ್ರಾಮಾಣ್ಯವೂ ಇಲ್ಲ. ಏಕೆಂದರೆ (ವಿಹಿತಾನುಷ್ಠಾನದಿಂದ) ಚಿತ್ತಶುದ್ಧಿ, ಚಿತ್ತೈಕಾಗ್ರತೆ (ಜ್ಞಾನ, ಅನಂತರ) ಕ್ರಮಮುಕ್ತಿಯ ಪ್ರಾಪ್ತಿ ಮೊದಲಾದವುಗಳ ಮೂಲಕ ಅವುಗಳೂ ಆತ್ಮೈಕ್ಯಜ್ಞಾನ ಪ್ರಾಪ್ತಿಗಾಗಿವೆ ಎಂದು ಹೇಳಬಹುದಾಗಿದೆ. ಹಾಗೆಯೇ ಶ್ರುತಿ ಇದೆ "ಆ ಈ ಪರಮಾತ್ಮನನ್ನು ವೇದಾನುವಚನದಿಂದ ತಿಳಿಯಲಿಚ್ಛಪಡುತ್ತಾರೆ, (ಹಾಗೆಯೇ) ಯಜ್ಞದಿಂದಲೂ ದಾನದಿಂದಲೂ ತಪಸ್ಸಿನಿಂದಲೂ ಉಪವಾಸದಿಂದಲೂ (ತಿಳಿಯಲಿಚ್ಛಪಡುತ್ತಾರೆ)" (ಬೃ. ೪–೪–೨೨), "ಆದ್ದರಿಂದ ಹೀಗರಿತವನು ಶಾಂತನೂ ದಾಂತನೂ ಉಪರತನೂ ತಿತಿಕ್ಷುವೂ ಸಮಾಧಾನಿಯೂ ಆಗಿ ತನ್ನಲ್ಲಿಯೇ ತನ್ನನ್ನು ಕಾಣುತ್ತಾನೆ" (ಬೃ. ೪–೪–೨೩) ಎಂದು ಸರ್ವಾಪೇಕ್ಷಾಧಿಕರಣಭಾಷ್ಯದಲ್ಲೂ, ವಿದ್ಯೆ ಎಂಬ ಜ್ಞಾನಸಾಧನಾಧಿಕರಣಭಾಷ್ಯದಲ್ಲೂ ನಿರ್ಧಾರಮಾಡಲಾಗುತ್ತದೆ.

ಆದ್ದರಿಂದ ಹೀಗೆ ಎಲ್ಲಾ ವೇದಾಂತಗಳು ಅನಾದಿಯಾದ ಅವಿದ್ಯೆಯನ್ನು ತೆಗೆದುಹಾಕುವ ಆತ್ಮೈಕತ್ವವಿದ್ಯೆಗಾಗಿಯೇ (ಹೊರಟಿರುತ್ತವೆ). ಆ (ವಿದ್ಯೆಯ)

ವಿದ್ಯಾರ್ಥಾಃ, ತನ್ನಿರ್ಣಯಶ್ಚಾಸ್ಯಾಂ ಶಾರೀರಕಮೀಮಾಂಸಾಯಾಂ ಭವಿತೇತಿ ಸರ್ವಂ ಸುಸ್ಥಮ್ ॥

**೭೧. ಅವಿದ್ಯಾಂ ಪ್ರತಿ ವಿವಿಧಶಙ್ಕಾಸ್ತತ್ಪರಿಹಾರಾಶ್ಚ** – ನನು ಚ ಶ್ರುತೌ ತಾವತ್ "ಯತೋ ವಾ ಇಮಾನಿ ಭೂತಾನಿ ಜಾಯನ್ತೇ । ಯೇನ ಜಾತಾನಿ ಜೀವನ್ತಿ । ಯತ್ಪ್ರಯಂತ್ಯಭಿಸಂವಿಶನ್ತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ॥" (ತೈ. ೩–೧) ಇತಿ ಬ್ರಹ್ಮಣೋ ಜಿಜ್ಞಾಸ್ಯತ್ವಮುಕ್ತಮ್ । ಇಹಾಪಿ ಚ "ಅಥಾತೋ ಬ್ರಹ್ಮಜಿಜ್ಞಾಸಾ" ಇತಿ ತದನುಗುಣಮೇವ ಬ್ರಹ್ಮಜಿಜ್ಞಾಸಾ ಪ್ರಸ್ತುತಾ । ಯುಕ್ತಂ ಚೈತತ್ । ನ ಹಿ ಜಿಜ್ಞಾಸುರೇವ ಜಿಜ್ಞಾಸ್ಯೋ ಭವೇತ್ । ಜಿಜ್ಞಾಸುರ್ಹಿ ನಾಮಾಽಜ್ಞಾತತತ್ತ್ವೋ ಯಸ್ತತ್ತ್ವ-ಜ್ಞಾನಮೀಪ್ಸತಿ । ಅತೋ ಜಿಜ್ಞಾಸೋರಾತ್ಮನಃ ಸಕಾಶಾದ್ಭಿನ್ನಮೇವ ಬ್ರಹ್ಮೇತಿ ಯುಕ್ತಮ್ । ಅನ್ಯಥಾ ಹಿ "ಅಥಾತೋ ಬ್ರಹ್ಮಾತ್ಮೈಕ್ಯಜಿಜ್ಞಾಸಾ" ಇತಿ

---

ನಿರ್ಣಯವು ಈ ಶಾರೀರಕ ಮೀಮಾಂಸೆಯಲ್ಲಿ ಆಗುವದು (ಎಂದಾದ್ದರಿಂದ) ಎಲ್ಲವೂ ಸರಿಯಾಗಿದೆ.

**೭೧. ಅವಿದ್ಯೆಯ ಬಗ್ಗೆ ನಾನಾ ಪ್ರಕಾರವಾದ ಸಂದೇಹವೂ ಅದರ ಪರಿಹಾರವೂ.** ಅಲ್ಲ ! ಮೊದಲನೆಯದಾಗಿ ಶ್ರುತಿಯಲ್ಲಿ ಹೇಳಬೇಕಾದರೆ "ಯಾವುದರಿಂದ ಈ ಭೂತಗಳು ಹುಟ್ಟುತ್ತವೆಯೋ, ಯಾವುದರಿಂದ ಹುಟ್ಟಿದ್ದಾಗಿಯೇ ಬದುಕಿವೆಯೋ, ಯಾವುದರಲ್ಲಿ (ಕೊನೆಗೆ) ಸೇರುವವೋ, ಅದನ್ನೇ ತಿಳಿಯಲು ಇಷ್ಟಪಡು, ಅದು ಬ್ರಹ್ಮ" (ತೈ. ೩–೧) ಎಂದು ಬ್ರಹ್ಮವು ಜಿಜ್ಞಾಸ್ಯವಾಗಿದೆ ಎಂದು ಹೇಳಿದೆ. ಇಲ್ಲೂ ಸಹ "ಇನ್ನು ಆದ್ದರಿಂದ ಬ್ರಹ್ಮಜಿಜ್ಞಾಸೆ ಮಾಡಬೇಕು" (೧–೧–೧) ಎಂದು ಅದಕ್ಕನುಗುಣವಾಗಿಯೇ ಬ್ರಹ್ಮಜಿಜ್ಞಾಸೆಯು ಆರಂಭವಾಗಿದೆ. ಇದು ನ್ಯಾಯವೂ ಆಗಿದೆ. ಏಕೆಂದರೆ ಜಿಜ್ಞಾಸುವೇ ಜಿಜ್ಞಾಸ್ಯನಾಗುವುದಿಲ್ಲವಲ್ಲವೆ? ಜಿಜ್ಞಾಸು ಎಂದರೆ ತತ್ತ್ವವನ್ನರಿಯದವನಾಗಿ, ತತ್ತ್ವಜ್ಞಾನವನ್ನು ಪಡೆಯಲು ಯಾವನು ಇಷ್ಟಪಡುವನೋ ಅವನು. ಆದ್ದರಿಂದ ಜಿಜ್ಞಾಸುವಾದ ಆತ್ಮನಿಗಿಂತ ಬ್ರಹ್ಮವು ಭಿನ್ನವೇ ಆಗಿದೆ ಎಂಬುದು ಸರಿಯಾದದ್ದು. ಹೀಗಲ್ಲದೇ ಹೋದರೆ – "ಇನ್ನು ಆದ್ದರಿಂದ ಬ್ರಹ್ಮಾತ್ಮೈಕ್ಯಜಿಜ್ಞಾಸೆಯು" ಎಂದು ಸೂತ್ರವಾಗ-

ಸೂತ್ರಂ ಸ್ಯಾತ್ । ಜಿಜ್ಞಾಸೋರಾತ್ಮೈವ ಬ್ರಹ್ಮ ಚೇತ್ ತಸ್ಯೈವಾವಿದ್ಯಾ ಸ್ಯಾತ್ । ನ ವಾ ಕಸ್ಯಚಿತ್ । ತಥಾ ಚ ಜಿಜ್ಞಾಸಾನಾರಮ್ಭ ಏವ । ಅತೋ ನ ಯುಕ್ತೇಯಂ ಭಾತಿ ಭಾಷ್ಯಪ್ರತಿಜ್ಞಾ ಆತ್ಮೈಕ್ಯವಿಷಯಿಣೀತಿ ಚೇತ್ ॥

ನ । ಬ್ರಹ್ಮಣ ಏವಾತ್ಮತ್ವಾತ್ । ಸರ್ವತ್ರ ಹಿ ವೇದಾನ್ತೇಷು "ತಸ್ಮಾದ್ವಾ ಏತಸ್ಮಾದಾತ್ಮನಃ" (ತೈ. ೨-೧), "ತತ್ಸತ್ಯಂ ಸ ಆತ್ಮಾ" (ಛಾಂ. ೬-೮-೭) ಇತ್ಯೇವಂ ಬ್ರಹ್ಮಣ್ಯೇವಾತ್ಮಶಬ್ದಪ್ರಯೋಗೋ ದೃಶ್ಯತೇ । ಏಕಂ ಚ ಬ್ರಹ್ಮ। ಅತ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಇತಿ ಪ್ರತಿಜ್ಞಾ ತಾವನ್ನಾಯುಕ್ತಾ। ನನ್ವಾತ್ಮೈವ ಬ್ರಹ್ಮ ಚೇತ್ "ಅಥಾತ ಆತ್ಮಜಿಜ್ಞಾಸಾ" ಇತ್ಯೇವಾಸ್ತು ಕಿಮನೇನ ಬ್ರಹ್ಮಜಿಜ್ಞಾಸೋಪನ್ಯಾಸೇನೇತಿ ಚೇತ್ । ನ । ಆತ್ಮನ ಏವ ಬ್ರಹ್ಮತ್ವೇನೋಪದಿಶ್ಯಮಾನತ್ವಾತ್ । ಯದ್ಯಪ್ಯಾತ್ಮೈವ ಬ್ರಹ್ಮ, ಬ್ರಹ್ಮೈವ ಚಾತ್ಮಾ । ತಥಾಪ್ಯೇತದ್ಯಾಥಾತ್ಮ್ಯಾಪ್ರಬೋಧಾದಾತ್ಮಾ ಸದ್ವಿತೀಯಃ ಸಂಸಾರೀವ, ಬ್ರಹ್ಮ

---

ಬೇಕಾಗಿತ್ತು. ಜಿಜ್ಞಾಸುವಿನ ಆತ್ಮವೇ ಬ್ರಹ್ಮವೆಂದಾದರೆ ಅವನಿಗೆ ಅವಿದ್ಯೆ ಎಂದಾಗುತ್ತದೆ. ಅಥವಾ ಯಾರಿಗೂ ಇಲ್ಲವೆಂದಾದರೂ ಆಗಬೇಕು. ಹಾಗಾಗಿ ಜಿಜ್ಞಾಸಾರಂಭವು ಸರಿಯಾಗುವುದಿಲ್ಲ. ಆದ್ದರಿಂದ ಆತ್ಮೈಕತ್ವಪ್ರತಿಪಾದನೆಗಾಗಿ (ವೇದಾಂತಗಳು ಆರಂಭವಾಗಿವೆ) ಎಂಬ ಭಾಷ್ಯದ ಪ್ರತಿಜ್ಞೆಯು ಸರಿಯಾಗಲಿಲ್ಲ.

(ಸಿದ್ಧಾಂತ) – ಹಾಗಲ್ಲ, ಏಕೆಂದರೆ ಬ್ರಹ್ಮವೇ ಆತ್ಮವಾಗಿರುವುದರಿಂದ (ಇದು ಸರಿಯಾಗಿದೆ). "ಆ ಈ ಆತ್ಮನಿಂದ" (ತೈ. ೨-೧) "ಅದು ಸತ್ಯವು ಅವನು ಆತ್ಮನು" (ಛಾಂ. ೬-೮-೭) ಎಂಬುದಾಗಿ ಬ್ರಹ್ಮದ(ವಿಷಯ)ದಲ್ಲೇ ಎಲ್ಲಾ ವೇದಾಂತಗಳಲ್ಲೂ ಆತ್ಮಶಬ್ದ ಪ್ರಯೋಗವಿರುತ್ತದೆ. ಬ್ರಹ್ಮವು ಒಂದೇ ಇರುವುದು. ಆದ್ದರಿಂದ ಆತ್ಮೈಕತ್ವವಿದ್ಯಾಪ್ರತಿಪತ್ತಿಗಾಗಿ ಎಂಬ ಪ್ರತಿಜ್ಞೆಯು ಮೊಟ್ಟಮೊದಲು ಹೊಂದುವುದಿಲ್ಲವೆಂಬುದಿಲ್ಲ. (ಆಕ್ಷೇಪ)- ಆತ್ಮವೇ ಬ್ರಹ್ಮವಾಗಿದ್ದರೆ "ಇನ್ನು ಆತ್ಮನ ಜಿಜ್ಞಾಸೆಯು" ಎಂದೇ ಸೂತ್ರವಿರಲಿ, ಬ್ರಹ್ಮಜಿಜ್ಞಾಸೆಯನ್ನು ಹೇಳುವದರಿಂದ ಏನಾಗಬೇಕಾಗಿದೆ ? (ಎಂದರೆ) ಹಾಗಲ್ಲ, ಆತ್ಮನಿಗೇ ಬ್ರಹ್ಮತ್ವವನ್ನು ಉಪದೇಶ ಮಾಡಬೇಕಾಗಿರುವುದರಿಂದ (ಇದು ಹೀಗೆಯೇ). ಆತ್ಮನೇ ಬ್ರಹ್ಮವು, ಬ್ರಹ್ಮವೇ ಆತ್ಮವೆಂಬುದಾದರೂ ಇದರ ನಿಜವನ್ನು ತಿಳಿಯದೇ ಇರುವುದರಿಂದ ಆತ್ಮನು ಸದ್ವಿತೀಯನೆಂತಲೂ,

ಚ ಸತ್ಯಜ್ಞಾನಾನನ್ದರೂಪಂ ಪರೋಕ್ಷಮಿವ ಚ । ವೇದಾನ್ತವಾಕ್ಯಜನ್ಯ-ಜ್ಞಾನೇನಾಪ್ರಬೋಧಹಾನೌ ತ್ವಾತ್ಮೈವಾದ್ವಿತೀಯಂ ಬ್ರಹ್ಮೇತಿ ಜ್ಞಾಯತೇ। ಅತೋಽತ್ರಾತ್ಮನ ಏವ ಬ್ರಹ್ಮಸ್ವರೂಪತಾಪ್ರತಿಪತ್ತಯೇ ಶ್ರುತಿಬೋಧಿತಂ ಬ್ರಹ್ಮಸ್ವರೂಪಮಜ್ಞಾತಂ ಜಿಜ್ಞಾಸ್ಯತ ಇತಿ ನ ಕಿಂಚಿದನುಪಪನ್ನಮ್ । ಯಥೋಕ್ತಂ **ವಾರ್ತಿಕಕಾರೈಃ** – "ಬ್ರಹ್ಮತಾ ನಾಽಽತ್ಮನೋಽನ್ಯತ್ರ ನಾಽಽತ್ಮತಾ ಬ್ರಹ್ಮಣೋಽನ್ಯತಃ । ತದ್ಯಾಥಾತ್ಮ್ಯಾಪ್ರಬೋಧಾತ್ತು ತಯೋರೇಷ ವಿಪರ್ಯಯಃ ॥ ಆತ್ಮಾಪಿ ಸಾಕ್ಷಾತ್ತದ್ಬ್ರಹ್ಮ ಪರೋಕ್ಷಂ ತದಬೋಧತಃ । ಬ್ರಹ್ಮೈವ ತದ್ವದಾತ್ಮಾಪಿ ಸದ್ವಿತೀಯವದೀಕ್ಷ್ಯತೇ । ವಾಕ್ಯೋತ್ಥ-ಸಮ್ಯಗ್ವಿಜ್ಞಾನಪ್ರಧ್ವಸ್ತತಮಸೋ ಯತೇಃ । ವಿಭಾಗಹೇತೋರುಚ್ಛಿತ್ತೇಃ ಸರ್ವಮಾತ್ಮೈವ ಶಿಷ್ಯತೇ ॥" (ಬೃ. ವಾ. ೧–೪–೧೩೯೦, ೧೩೯೧,

---

ಸಂಸಾರಿಯೆಂತಲೂ, ಸತ್ಯಜ್ಞಾನಾನಂದರೂಪವಾದ ಬ್ರಹ್ಮವು ಸಹ ಪರೋಕ್ಷದಂತಾಗಿದೆ. ವೇದಾಂತವಾಕ್ಯದಿಂದುಂಟಾಗುವ ಜ್ಞಾನದಿಂದ ಅಜ್ಞಾನವು ಹೋದಾಗಲಾದರೋ ಆತ್ಮನೇ ಅದ್ವಿತೀಯವಾದ ಬ್ರಹ್ಮವೆಂದು ಗೊತ್ತಾಗುತ್ತದೆ. ಆದ್ದರಿಂದ ಆತ್ಮನಿಗೇ ಬ್ರಹ್ಮಸ್ವರೂಪವೆಂಬುದನ್ನು ತಿಳಿಸುವುದಕ್ಕಾಗಿ, ಶ್ರುತಿಯು ತಿಳಿಸಿದ ಅಜ್ಞಾತವಾದ ಬ್ರಹ್ಮಸ್ವರೂಪವನ್ನು ವಿಚಾರಮಾಡಲಾಗುತ್ತದೆ ಎಂದಾದ್ದರಿಂದ ಇಲ್ಲಿ ಏನೂ ಹೊಂದದೇ ಇರುವುದಿಲ್ಲ. **ವಾರ್ತಿಕಕಾರರೂ** ಸಹ ಇದನ್ನು ಹೇಳಿದ್ದಾರೆ – "ಆತ್ಮನಿಗಿಂತ ಮತ್ತೊಂದು ಕಡೆಯಲ್ಲಿ ಬ್ರಹ್ಮತ್ವವೆಂಬುದಾಗಲೀ ಬ್ರಹ್ಮಕ್ಕಿಂತ ಬೇರೆಯಾದುದ್ದಕ್ಕೆ ಆತ್ಮತ್ವವೆಂಬುದಾಗಲೀ ಇರುವುದಿಲ್ಲ. ಅವುಗಳ ನಿಜಸ್ವರೂಪವನ್ನು ಅರಿಯದೇ ಇರುವುದರಿಂದಲಾದರೋ ಅವುಗಳ ವಿಷಯಕ್ಕೆ ತಪ್ಪುತಿಳಿವಳಿಕೆ ಉಂಟಾಗಿದೆ. ಬ್ರಹ್ಮವೂಕೂಡ ನೇರಾಗಿ ಆತ್ಮನೇ ಆಗಿರುತ್ತದೆ. ಆದರೂ ಆ (ಬ್ರಹ್ಮವು) ಪರೋಕ್ಷವೆಂಬುದು ಅದರ ತಿಳಿವಳಿಕೆ ಇಲ್ಲದ್ದರಿಂದಾಗಿರುತ್ತದೆ. ಹಾಗೆಯೇ ಆತ್ಮನೇ ಬ್ರಹ್ಮವಾಗಿದ್ದರೂ ಅದು ಸದ್ವಿತೀಯವೆಂಬಂತೆ ಕಾಣುತ್ತಿದೆ. (ವೇದಾಂತ) ವಾಕ್ಯದಿಂದುಂಟಾದ ಸಮ್ಯಗ್ಜ್ಞಾನದಿಂದ ಅಜ್ಞಾನವನ್ನು ಕಳೆದುಕೊಂಡ ಸಂನ್ಯಾಸಿಗೆ ಭೇದಕ್ಕೆ ಕಾರಣವಾದ ಅಜ್ಞಾನವು ಹೋಗುವುದ-ರಿಂದ ಎಲ್ಲವೂ ಆತ್ಮವೇ ಎಂಬ ಜ್ಞಾನವು ಉಳಿಯುತ್ತದೆ" (ಬೃ.ವಾ ೧–

೧೩೯೨) ಇತಿ । ಅತಃ ಶ್ರುತಿಸೂತ್ರಾಕ್ಷರಾನುಗುಣಮೇವ ಪ್ರಕ್ರಿಯಾರಚನಂ ಭಾಷ್ಯಕೃತಃ ॥

ಬ್ರಹ್ಮಣ ಏವ ತರ್ಹೀಯಮವಿದ್ಯೇತ್ಯಾಪನ್ನಮ್ । ನ ಹ್ಯನ್ಯದ್ಬ್ರಹ್ಮಣಃ ಸಕಾಶಾದಸ್ತೀತಿ ಚೇತ್ । ಭ್ರಾನ್ತೋಽಸಿ । ಬ್ರಹ್ಮಣಃ ಸಕಾಶಾಚ್ಚೇದನ್ಯನ್ನಾಸ್ತಿ ಕಥಂ ಹ್ಯವಿದ್ಯಾ ವಿದ್ಯಾ ವಾ ಕಸ್ಯಚಿದ್ಭವೇತ್ । ಕಸ್ಮಿಂಶ್ಚಿದ್ವಿಷಯೇ ಹಿ ಕಸ್ಯಚಿದನ್ಯಸ್ಯ ಪ್ರತಿಪತ್ತುರವಿದ್ಯೇತಿ । ಅವಿದ್ಯಾಭ್ಯುಪಗಮಾತ್ ತರ್ಹಿ ದ್ವೈತವಾದಪ್ರಸಙ್ಗಃ । ನ ಹ್ಯನಭ್ಯುಪಗಮೇಽವಿದ್ಯಾಪ್ರಹಾಣಾಯ ವೇದಾನ್ತಾರಮ್ಭ ಇತಿ ಯುಜ್ಯತ ಇತಿ ಚೇತ್ । ನ । ಅಭ್ಯುಪಗತದ್ವೈತಸತ್ಯತ್ವ-ಸ್ಯೈವಾವಿದ್ಯಾವತ್ತ್ವಾವಷ್ಟಮ್ಭಾತ್ । ನ ಹಿ ವಯಮವಿದ್ಯಾಂ ವ್ಯಸನಿತಯಾ ರೋಚಯಾಮಹೇ । ಅಭ್ಯುಗತದ್ವೈತಸತ್ಯತ್ವಸ್ಯ ತು ಪುರುಷಸ್ಯಾವಿದ್ಯಾಸಂಬನ್ಧಂ

---

೪-೧೩೯೦, ೧೩೯೧, ೧೩೯೨). ಆದ್ದರಿಂದ ಭಾಷ್ಯಕಾರರ ಪ್ರಕ್ರಿಯಾ-ರಚನೆಯು ಶ್ರುತಿಗಳಿಗೂ ಸೂತ್ರಗಳಿಗೂ ಅನುಗುಣವಾಗಿಯೇ ಇದೆ.

(ಪೂ. ಪ)- ಹಾಗಾದರೆ ಬ್ರಹ್ಮಕ್ಕೇ ಈ ಅವಿದ್ಯೆ ಎಂದಾಗುತ್ತದೆಯಲ್ಲಾ! ಏಕೆಂದರೆ ಬ್ರಹ್ಮಕ್ಕಿಂತ ಬೇರೆ ಇನ್ನೊಂದಿಲ್ಲವಲ್ಲ ? (ಸಿದ್ಧಾಂತ) - ಭ್ರಾಂತನಾಗಿರುವೆ. ಏಕೆಂದರೆ ಬ್ರಹ್ಮಕ್ಕಿಂತ ಬೇರೆಯಾದದ್ದಿಲ್ಲವೆಂದು (ತಿಳಿದಿರುವೆಯಾದರೆ) ಹೇಗೆ ತಾನೆ ಅವಿದ್ಯೆಯಾಗಲೀ ವಿದ್ಯೆಯಾಗಲೀ ಯಾರಿಗಾದರೂ ಇದ್ದೀತು ? ಒಂದಾನೊಂದು ವಿಷಯದಲ್ಲಲ್ಲವೆ ಬೇರೆ ಎಂದಾದ ಒಬ್ಬಾನೊಬ್ಬ ತಿಳಿಯುವವನಿಗೆ ಅವಿದ್ಯೆ ಎಂದಾಗುವುದು ! (ಪೂ.ಪ)- ಅವಿದ್ಯೆಯನ್ನು ಒಪ್ಪಿರುವುದರಿಂದಲೇ ದ್ವೈತವಿದೆ ಎಂಬ ಸಂದರ್ಭವು ಬಂದೊದಗುವುದಲ್ಲವೆ ? (ಅಷ್ಟೇ ಅಲ್ಲ) ಅವಿದ್ಯೆಯನ್ನು ಒಪ್ಪದೇ ಹೋದರೆ ಅವಿದ್ಯೆಯನ್ನು ಕಳೆಯುವದಕ್ಕಾಗಿ ವೇದಾಂತವು ಆರಂಭವಾಗಿದೆ ಎಂಬುದು ಹೊಂದುವುದಿಲ್ಲವಲ್ಲವೆ ? (ಸಿದ್ಧಾಂತ) - ಹಾಗಲ್ಲ, ದ್ವೈತವು ಸತ್ಯವಾಗಿದೆ ಎಂದು ಒಪ್ಪಿರುವವನಿಗೇ ಅವಿದ್ಯೆ ಇದೆ ಎಂಬುದನ್ನು ಒಪ್ಪಿಕೊಂಡಿರುತ್ತದೆ. ನಾವೇನೂ ಅವಿದ್ಯೆಯನ್ನು ಬೇಕೆಂದೇ ಇಷ್ಟಪಡುವವರಲ್ಲ! (ಮತ್ತೇನೆಂದರೆ) ದ್ವೈತದ ಸತ್ಯತ್ವವನ್ನು ಒಪ್ಪಿಕೊಂಡ ಪುರುಷನಿಗೆ ಅವಿದ್ಯಾಸಂಬಂಧವಿದೆ

ಬ್ರೂಮಹೇ । ತಥಾ ಹಿ । ದ್ವೈತಾಭ್ಯುಪಗಮೇ ಕೋಽವಿದ್ಯಾಂ ನಿವಾರ-ಯೇತ್ ? ಅದ್ವೈತೇ ಚ ಕಸ್ತಸ್ಯ ಪ್ರಸಙ್ಗಃ ? ಏತೇನ ಯದಿ ನ ಕಸ್ಯಚಿದವಿದ್ಯಾ ಜಿಜ್ಞಾಸಾನಾರಮ್ಭ ಏವೇತಿ ಚೋದ್ಯಂ ನಿರಸ್ತಮ್ । ನ ಹಿ ವಯಂ ವಿದ್ಯೋದಯೇ ಸತ್ಯಪಿ ಜಿಜ್ಞಾಸಾ ಭಾವಿನೀತಿ ಬ್ರೂಮಹೇ ಯೇನೇತ್ಥ-ಮುಪಾಲಮ್ಭಃ ಸ್ಯಾತ್ ॥

ಯದಪಿ ಚೋದ್ಯತೇ ಕೈಶ್ಚಿತ್ – ಕಿಂಕೃತೇಯಮವಿದ್ಯಾ ? ನ ಹಿ ಕಾರಣಾನ್ತರಮಸ್ತಿ ಯೇನ ಸ್ವಪ್ನಾದಿವದಾಗನ್ತುಕೀ ಸ್ಯಾದವಿದ್ಯಾ ಶುದ್ಧಬ್ರಹ್ಮಸಂಸರ್ಗಿಣೀ । ಕಾರಣಾನ್ತರಾಭ್ಯುಪಗಮೇ ಚ ದ್ವೈತವಾದಪ್ರಸಙ್ಗಃ। ನೈಸರ್ಗಿಕೀಂ ತ್ವವಿದ್ಯಾಂ ಬ್ರುವಾಣಸ್ಯ ಕಥಮಸ್ಯಾಃ ಪ್ರಹಾಣಮುಪಪದ್ಯತೇ? ನ ಹಿ ನೈಸರ್ಗಿಕ್ಯಾಃ ಸಮುಚ್ಛಿತ್ತಿರವಕಲ್ಪತೇ । ಅವಿದ್ಯಾಪ್ರಹಾಣಿಶ್ಚ ಕೀದೃಶೀ? ಕಿಮವಿದ್ಯಾರೂಪಿಣ್ಯೇವ, ಕಿಂ ವಾ ವಿಲಕ್ಷಣಾ? ಯದ್ಯವಿದ್ಯಾರೂಪಿಣ್ಯೇವ, ನ

---

ಎಂಬುದನ್ನು (ಮಾತ್ರ) ಹೇಳುವೆವು. ಹಾಗೆಯೇ ಅಲ್ಲವೆ? ದ್ವೈತವನ್ನು ಒಪ್ಪಿಕೊಂಡರೆ ಅವಿದ್ಯೆಯನ್ನು ಯಾವನು (ತಾನೆ) ತಡೆಗಟ್ಟಿಯಾನು ? ಅವನಿಗೆ ಅದ್ವೈತದ ಪ್ರಸಂಗವಾದರೂ ಯಾವುದು? ಇಷ್ಟು ಹೇಳಿದ್ದರಿಂದ ಅವಿದ್ಯೆಯು ಯಾರಿಗೂ ಇಲ್ಲದಿದ್ದರೆ (ಬ್ರಹ್ಮ) ಜಿಜ್ಞಾಸೆಯು ಆರಂಭವನ್ನು ಮಾಡಲೇಬಾರದಾಗಿತ್ತು ಎಂಬ ಆಕ್ಷೇಪವನ್ನು ತಳ್ಳಿಹಾಕಿದಂತಾಯಿತು. ನಾವೇನೂ ವಿದ್ಯೋದಯವಾದಮೇಲೂ ಜಿಜ್ಞಾಸೆಯು ಇದ್ದೇ ಇರುತ್ತದೆ ಎಂದು ಹೇಳುತ್ತಲಿಲ್ಲ, ಹಾಗೇನಾದರೂ ಇದ್ದಿದ್ದರೆ ಈ ರೀತಿ ಆಕ್ಷೇಪಿಸ-ಬಹುದಾಗಿತ್ತು.

ಈ ಅವಿದ್ಯೆಯು ಯಾವುದರಿಂದ ಆದದ್ದು ? ಏಕೆಂದರೆ ಇದಕ್ಕೆ ಯಾವ ಕಾರಣಾಂತರವಿರುವುದಿಲ್ಲ, ಹಾಗಿದ್ದರೆ ಅವಿದ್ಯೆಯು ಸ್ವಪ್ನಾದಿಗಳಂತೆ ಆಗಂತುಕವೂ (ಆಗಿ) ಶುದ್ಧವಾದ ಬ್ರಹ್ಮಕ್ಕೆ ಸೇರಿಕೊಂಡದ್ದೂ ಎಂದಾಗುತ್ತಿತ್ತು. ಬೇರೆ ಕಾರಣವನ್ನು ಒಪ್ಪಿಕೊಂಡರೆ ದ್ವೈತವಾದವು ಬಂದೊದಗುತ್ತದೆ. ಈ ಅವಿದ್ಯೆಯು ಸ್ವಾಭಾವಿಕವಾದದ್ದು ಎಂದು ಹೇಳುವ (ನಿನಗೆ) ಇದರ ಬಿಡುಗಡೆ ಹೇಗಾಗುತ್ತದೆ ? ಸ್ವಾಭಾವಿಕವಾದದ್ದಕ್ಕೆ ನಾಶವು ಹೊಂದುವುದಿಲ್ಲವಷ್ಟೆ ? ಅವಿದ್ಯೆಯು ಹೋಗುವುದಾದರೂ ಯಾವ ತರಹದ್ದು? ಅದೂ ಅವಿದ್ಯಾರೂಪವಾದದ್ದೋ ಅಥವಾ ವಿಲಕ್ಷಣವಾದದ್ದೋ? ಅದೂ

ತರ್ಹಿ ತಸ್ಯಾಃ ಪ್ರಹಾಣಿಃ । ವಿಲಕ್ಷಣಾ ಚೇತ್ ತಸ್ಯಾಃ ಪರಮಾರ್ಥತ್ವಪ್ರಸಙ್ಗ ಇತಿ ಸಿದ್ಧಾನ್ತಹಾನಿಃ ಸ್ಯಾತ್ – ಇತಿ । ತದಪ್ಯೇತೇನೈವ ಪ್ರತ್ಯುಕ್ತಂ ಭವತಿ। ಅವಿದ್ಯಾದೃಷ್ಟ್ಯೈವಾವಿದ್ಯಾಭ್ಯುಪಗಮಾತ್ । ತತ್ಪ್ರಹಾಣೇಶ್ಚಾನಾವಿದ್ಯಕಾಯಾಃ ಕಸ್ಯಾಶ್ಚಿದನಭ್ಯುಪಗಮಾತ್ । ಯಾದೃಶೋ ಹಿ ಯಕ್ಷಸ್ತಾದೃಶೋ ಬಲಿಃ । ವಸ್ತುತಸ್ತು ನಾವಿದ್ಯಾತತ್ಪ್ರಹಾಣಿಪ್ರಯುಕ್ತಃ ಕಶ್ಚಿದಪಿ ವಿಶೇಷೋಽಸ್ತ್ಯ-ದ್ವಿತೀಯಾತ್ಮನಃ । ತಯೋರಪ್ಯಾತ್ಮೈಕಸ್ವಾಭಾವ್ಯಾತ್ । ತದುಕ್ತಂ ಬೃಹದಾರಣ್ಯಕಭಾಷ್ಯೇ – "ಅವಿದ್ಯಾವತೋಽವಿದ್ಯಾನಿವೃತ್ತ್ಯನಿವೃತ್ತಿ-ಕೃತೋ ವಿಶೇಷ ಆತ್ಮನಃ ಸ್ಯಾದಿತಿ ಚೇತ್ । ನ । ಅವಿದ್ಯಾಕಲ್ಪನಾವಿಷಯತ್ವಾ-ಭ್ಯುಪಗಮಾತ್ ರಜ್ಜೂಷರಶುಕ್ತಿಕಾಗಗನಾನಾಂ ಸರ್ಪೋದಕರಜತಮಲಿನ-

---

ಅವಿದ್ಯಾರೂಪವೇ ಎಂದರೆ ಅದರ ನಾಶವೆಂಬುದು (ಹೊಂದುವು)ದಿಲ್ಲ. ವಿಲಕ್ಷಣವಾದದ್ದು ಎಂದರೆ (ಆ ವಿಲಕ್ಷಣವಾದದ್ದು) ನಿಜವಾದದ್ದು ಎಂದಾಗಿ ಸಿದ್ಧಾಂತವನ್ನು ಕೈಬಿಡಬೇಕಾಗುತ್ತದೆ ಎಂದು ಕೆಲವರು ಏನು ಆಕ್ಷೇಪಿಸುತ್ತಾರೆ, ಅದನ್ನೂ ಕೂಡ ಇಷ್ಟು ಹೇಳಿದ್ದರಿಂದಲೇ ತಿರಸ್ಕರಿಸಿದಂತಾಯಿತು. ಏಕೆಂದರೆ (ಅವಿದ್ಯೆಯನ್ನು) ಅವಿದ್ಯಾದೃಷ್ಟಿಯಿಂದಲೇ ಒಪ್ಪಿರುವುದರಿಂದ (ಹೀಗೆಂದರಿಯಬೇಕು). ಅವಿದ್ಯೆಯು ನಾಶವಾಗುವುದರಿಂದ ಆವಿದ್ಯಕವಲ್ಲದ ಯಾವುದನ್ನೂ (ನಾವು) ಒಪ್ಪಿಕೊಳ್ಳದೇ ಇರುವುದರಿಂದಲೂ (ಇದು ಹೀಗೆಯೇ). ಯಕ್ಷವು ಯಾವತರಹದ್ದೋ ಬಲಿಯು ಆ ತರಹದ್ದೇ ಎಂದಲ್ಲವೆ (ನ್ಯಾಯವಿರುವುದು?) (ಅದರಂತೆ ಇದು). ನಿಜವಾಗಿ ಹೇಳಬೇಕಾದರೆ ಅದ್ವಿತೀಯಾತ್ಮನಿಗಿಂತ ಬೇರೆಯಾಗಿ ಅವಿದ್ಯೆಯಾಗಲೀ ಅದರ ನಾಶದಿಂದಾಗುವ ವಿಶೇಷವಾಗಲೀ ಯಾವುದೂ ಇರುವುದಿಲ್ಲ. ಏಕೆಂದರೆ ಅವೆರಡಕ್ಕೂ ಆತ್ಮವೇ ಸ್ವಭಾವವಾಗಿರುವುದರಿಂದ (ಹೀಗೆಂದರಿಯಬೇಕು). ಅದನ್ನು ಬೃಹದಾರಣ್ಯಕ-ಭಾಷ್ಯದಲ್ಲಿ ಹೇಳಿರುತ್ತದೆ –(ಪೂ.ಪ) ಅವಿದ್ಯಾವಂತನಾದ (ಆತ್ಮನಿಗೆ) ಅವಿದ್ಯೆಯು ತೊಲಗುವುದು ತೊಲಗದಿರುವುದು ಎಂಬುವುದರಿಂದಾದ ವಿಶೇಷವು ಉಂಟಾಗಬಹುದಲ್ಲಾ? ಎಂದರೆ (ಸಿದ್ಧಾಂತ) – ಹಾಗೇನಿಲ್ಲ, ಏಕೆಂದರೆ ಇದು ಅವಿದ್ಯಾಕಲ್ಪನೆಯ ವಿಷಯವೆಂದು ನಾವು ಇಟ್ಟುಕೊಂಡಿರು-ವೆವು. ಹಗ್ಗ, ಚೌಳುನೆಲ, ಕಪ್ಪೆಯಚಿಪ್ಪು, ಆಕಾಶ, ಇವುಗಳು ಹಾವು, ನೀರು, ಬೆಳ್ಳಿ, ತಳವು ಮಲಿನವಾಗಿದೆ ಎಂದು ಮುಂತಾದ ರೂಪದವುಗಳೆಂಬುದು

ತ್ವಾದಿವದದೋಷ ಇತ್ಯವೋಚಾಮ । ತಿಮಿರಾತಿಮಿರದೃಷ್ಟಿವದವಿದ್ಯಾ-ಕರ್ತೃತ್ವಾಕರ್ತೃತ್ವಕೃತ ಆತ್ಮನೋ ವಿಶೇಷಃ ಸ್ಯಾದಿತಿ ಚೇತ್ । ನ । 'ಧ್ಯಾಯತೀವ ಲೇಲಾಯತೀವ' ಇತಿ ಸ್ವತೋಽವಿದ್ಯಾಕರ್ತೃತ್ವಸ್ಯ ಪ್ರತಿಷಿದ್ಧ-ತ್ವಾತ್, ಅನೇಕವ್ಯಾಪಾರಸನ್ನಿಪಾತಜನಿತತ್ವಾಚ್ಚಾವಿದ್ಯಾಭ್ರಮಸ್ಯ" (ಬೃ. ಭಾ. ೪-೪-೬ ಭಾ.ಭಾ ೨೭೪) ಇತಿ । **ವಾರ್ತಿಕೇ ಚಾಪ್ಯುಕ್ತಮ್** - "ಚೈತನ್ಯ-ಮಾತ್ರರೂಪಂ ಸತ್ಪ್ರಥತೇಽಜ್ಞಾನಮಾತ್ಮನಿ । ಪ್ರತ್ಯಕ್ಕೂಟಸ್ಥನಿಷ್ಠತ್ವಾತ್ ತದ್ಬಾಧ್ಯಂ ಕಾರಣೇತರತ್" (ಬೃ.ವಾ. ೧-೪-೩೦೬) ಇತಿ, "ನಿವೃತ್ತಿಃ ಕೇವಲಾತ್ಮತಾ" (ಬೃ. ವಾ. ೧-೩-೧೮೮) ಇತಿ ಚ । ತದೇವಮ-ವಿದ್ಯಾನಿವೃತ್ತಿತದ್ಧೇತುವಿಷಯೇಽಪಿ ನಾಸ್ತಿ ಕಿಞ್ಚಿದಸಾಮಞ್ಜಸ್ಯಮ್ ॥

---

ಹೇಗೋ ಹಾಗೆಯೇ ಇಲ್ಲಿ ಯಾವ ದೋಷವೂ ಇಲ್ಲ ಎಂದು ಹೇಳಿರುತ್ತೇವೆ. (ಪೂ. ಪ)- ಕಣ್ಣು ಪರೆ ಇರುವುದು, ಪರೆ ಇಲ್ಲದಿರುವುದು ಇವುಗಳಿಂದ ದೃಷ್ಟಿಗೆ ಹೇಗೋ ಹಾಗೆ ಅವಿದ್ಯೆಯಿಂದಾದ ಕರ್ತೃತ್ವ ಮತ್ತು ಅಕರ್ತೃತ್ವ ಇವುಗಳಿಂದಾದ ವಿಶೇಷವು ಆತ್ಮನಿಗೆ ಉಂಟಾಗಬಹುದಲ್ಲ ! ಎಂದರೆ (ಸಿದ್ಧಾಂತ)- ಹಾಗಲ್ಲ, (ಏಕೆಂದರೆ) "ಧ್ಯಾನಮಾಡುವವನಂತಿರುತ್ತಾನೆ, ಚಲಿಸುವವನಂತಿರುತ್ತಾನೆ" ಎಂದು ಸ್ವತಃ (ಆತ್ಮನಲ್ಲಿ) ಅವಿದ್ಯಾಕರ್ತೃತ್ವ-ವಿಲ್ಲವೆಂದು (ಶ್ರುತಿಯಲ್ಲಿ) ಹೇಳಿದೆ. ಅವಿದ್ಯಾಭ್ರಾಂತಿಯು, ಅನೇಕವ್ಯಾಪಾರ-ಗಳು ಒಟ್ಟುಗೂಡಿಯೇ ಉಂಟಾಗುವುದರಿಂದಲೂ ಹೀಗೆಂದು ತಿಳಿಯಬೇಕು (ಬೃ. ಭಾ. ೪-೪-೬). ವಾರ್ತಿಕದಲ್ಲೂ ಹೇಳಿರುತ್ತದೆ - "ಅಜ್ಞಾನವು ಚೈತನ್ಯ ಮಾತ್ರರೂಪದಿಂದಲೇ ಇದ್ದು ಆತ್ಮನಲ್ಲಿ ತೋರುತ್ತಿರುತ್ತದೆ". (ಅಜ್ಞಾನವು) ಒಳಗಿನ ಕೂಟಸ್ಥವಾದ (ಆತ್ಮನಲ್ಲಿ) ನಿಷ್ಠವಾಗಿರುವುದರಿಂದ ಕಾರ್ಯವು (ಬಾಧೆಯಾಗುವಂತೆ) - (ಅದೂ) ಬಾಧಿತವಾಗುತ್ತದೆ". (ಬೃ. ವಾ ೧-೪-೩೦೬). ಆ ಅಜ್ಞಾನದ ನಿವೃತ್ತಿ ಎಂದರೆ ಕೇವಲನಾದ ಆತ್ಮರೂಪದಿಂದಿರುವುದು. (ಬೃ.ವಾ. ೧-೩-೧೮೮) ಹೀಗೆ ಅವಿದ್ಯೆಯು ತೊಲಗುವುದು ಅದರ ಕಾರಣವಾದ (ಶಾಸ್ತ್ರೋಪದೇಶ ಮತ್ತು ಜ್ಞಾನ) ಇದರ ವಿಷಯದಲ್ಲಿ ಹೊಂದದೇ ಇರುವುದು ಯಾವುದೂ ಇರುವುದಿಲ್ಲ.

ನನು ಚಾತ್ಮೈಕತ್ವವಿದ್ಯಾ ಕಿಂರೂಪಿಣೀ ಭವತೋಽಭಿಮತಾ? ವಾಕ್ಯಾರ್ಥ-ಜ್ಞಾನರೂಪಾ ಚೇತ್ ಬ್ರಹ್ಮಣೋ ಶಬ್ದವಿಷಯತ್ವಪ್ರಸಙ್ಗಃ । ತಥಾ ಚ "ಯತೋ ವಾಚೋ ನಿವರ್ತನ್ತೇ" (ತೈ. ೨-೯) ಇತ್ಯಾದಿಶ್ರುತಿಭಿರ್ವಿರೋಧಃ। ವಾಕ್ಯಜ್ಞಾನಾಭ್ಯಾಸರೂಪತ್ವೇಽಪಿ ದೋಷಾದನಿಸ್ತಾರ ಏವ । ವಾಕ್ಯಾರ್ಥ-ಜ್ಞಾನಾದನ್ಯಾ ಚೇತ್ ತದರ್ಥಂ ವೇದಾನ್ತಾ ಆರಭ್ಯನ್ತ ಇತ್ಯುಕ್ತಿರ್ವ್ಯಾಹತಾ ಸ್ಯಾತ್ । ತಥಾ ಚಾಽತ್ಮನ ಉಪನಿಷದೇಕಪ್ರಕಾಶ್ಯತ್ವಮಪಿ ತ್ಯಕ್ತಂ ಸ್ಯಾತ್ । "ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" (ಬೃ. ೩-೯-೨೬) ಇತ್ಯಾದಿಶ್ರುತಿವಿರೋಧಶ್ಚ ಪ್ರಸಜ್ಯೇತೇತಿ ಚೇತ್ । ತದಪಿ ನ । ವಾಕ್ಯ-ಜ್ಞಾನೇನಾವಿಷಯತ್ವೇನೈವ ಬ್ರಹ್ಮಣಃ ಸಮರ್ಪಣಾತ್ । ಉಕ್ತಂ ಚ ಪ್ರಾಗ್ಯಥಾ ಶ್ರುತಿವಾಕ್ಯಮಾತ್ಮನೋಽತದ್ಧರ್ಮಪ್ರತಿಷೇಧೇನೈವ ಪ್ರಾಮಾಣ್ಯಂ ಭಜತ ಇತಿ। ಅತೋ ನಾಯಮಪಿ ದೋಷಃ ॥

---

ಆತ್ಮೈಕತ್ವವಿದ್ಯೆಯು ಯಾವ ತರಹದ್ದೆಂದು ನಿಮ್ಮ ಅಭಿಪ್ರಾಯವು? ವಾಕ್ಯಾರ್ಥರೂಪವಾದದ್ದು ಎಂದರೆ ಬ್ರಹ್ಮವು ಶಬ್ದಾದಿಗಳಿಗೆ ವಿಷಯ-ವೆಂದಾಗುವುದು. ಆಗ "ಯಾವಾತನಿಂದ ವಾಕ್ಕು ಹಿಂತಿರುಗುತ್ತದೋ" ಎಂದು-ಮುಂತಾಗಿರುವ ಶ್ರುತಿಗೆ ವಿರೋಧವಾಗುತ್ತದೆ. ವಾಕ್ಯಜ್ಞಾನದ ಅಭ್ಯಾಸ ರೂಪವೆಂದರೂ ದೋಷದಿಂದ ದಾಟಲಾಗುವುದಿಲ್ಲ. ವಾಕ್ಯಾರ್ಥಜ್ಞಾನಕ್ಕಿಂತ ಬೇರೆ ಎಂದಾದರೆ ಅದಕ್ಕಾಗಿ ವೇದಾಂತಗಳು ಆರಂಭವಾಗಿವೆ ಎಂಬುದು ವಿರುದ್ಧವಾಗುತ್ತದೆ. ಆಗ ಆತ್ಮನು ಉಪನಿಷನ್ಮಾತ್ರಪ್ರಕಾಶನೆಂಬುದನ್ನು ಕೈಬಿಟ್ಟಂತಾಗುತ್ತದೆ. "ಉಪನಿಷತ್ತಿನಲ್ಲಿ ಮಾತ್ರ ತಿಳಿದುಬರುವ ಆ ಆತ್ಮನನ್ನು ಕೇಳುತ್ತೇನೆ" (ಬೃ. ೩-೯-೨೬), ಎಂದುಮುಂತಾಗಿರುವ ಶ್ರುತಿಗೆ ವಿರೋಧವೂ ಬಂದೊದಗುತ್ತದೆ ಎಂದು ಆಕ್ಷೇಪಿಸಿದರೆ, ಅದೂ ಸರಿಯಲ್ಲ, ಏಕೆಂದರೆ ವಾಕ್ಯಜ್ಞಾನದಿಂದಲೂ ಅವಿಷಯವಾಗಿಯೇ ಬ್ರಹ್ಮವನ್ನು ತಿಳಿಸಿರುತ್ತದೆ. ಶ್ರುತಿವಾಕ್ಯವು ಹೇಗೆ ಆತ್ಮನದಲ್ಲದ ಧರ್ಮವನ್ನು ಅಲ್ಲಗಳೆಯುವುದರ ಮೂಲಕವಾಗಿಯೇ ಪ್ರಾಮಾಣ್ಯವನ್ನು ಹೊಂದಿರುತ್ತದೆ ಎಂಬುದನ್ನು ಹಿಂದೆ ತಿಳಿಸಿರುತ್ತೇವೆ. ಆದ್ದರಿಂದ ಇದೂ ದೋಷವಲ್ಲ.

ನನು – ವಿದುಷಾಮಪಿ ದ್ವೈತಪ್ರಪಞ್ಚೋ ಭಾಸತೇ ನ ವಾ ? ಭಾಸತೇ ಚೇತ್ತೇಷಾಂ ಕಾ ವಿದ್ವತ್ತಾ ? ನ ಭಾಸತೇ ಚೇತ್, ಕಥಂ ಸಮ್ಪ್ರದಾಯಪ್ರವರ್ತಕಾಚಾರ್ಯಭಾವತ್ವಮ್? ಅಥ ಪ್ರಾರಬ್ಧಕರ್ಮಶೇಷೇಣ ತತ್ಫಲಭೋಗಾರ್ಥಂ ದ್ವೈತಾನುವೃತ್ತಿಃ ಸ್ವೀಕ್ರಿಯೇತ । ತದಾ ತದಾಕ್ಷಿಪ್ತಾವಿದ್ಯಾಲೇಶೋಽಪ್ಯವಶ್ಯಮಾಕ್ಷಿಪ್ಯೇತ । ತಥಾ ಚ ವಿದ್ವತ್ತ್ವಮವಿದ್ವತ್ತ್ವಂ ಚೈಕಸ್ಯೈವ ಪುರುಷಸ್ಯ ಸಹ ಭವೇತಾಮ್ । ತದೇವಂ ಸರ್ವಥಾಪ್ಯಸಮಞ್ಜಸೈವೇಯಂ ಪ್ರಕ್ರಿಯಾ ಭಾತೀತಿ ಚೇತ್ । ನ । ಪ್ರಾರಬ್ಧಕರ್ಮಶೇಷೇಣ ಬಾಧಿತದ್ವೈತಪ್ರತಿಭಾಸಸ್ಯೈವ ದ್ವಿಚನ್ದ್ರಜ್ಞಾನವದನುವೃತ್ತಿರಿತಿ ಪ್ರಾಗೇವಾऽऽವೇದಿತತ್ವಾತ್ । ಅವಿದ್ಯಾಲೇಶಸ್ತ್ವನಭ್ಯುಪಗಮಾದೇವ ನಿರಸ್ತಃ। ಕಾ ತರ್ಹಿ ದ್ವೈತಜ್ಞಾನಸ್ಯ ವಿದುಷ್ಯಪ್ಯನುವರ್ತಮಾನಸ್ಯ ಗತಿಃ ? ನ ಹಿ ದ್ವೈತಜ್ಞಾನಂ ವಿನಾ ಗುರುಶಿಷ್ಯಾದಿವ್ಯವಹಾರಃ ಸೇತ್ಸ್ಯತೀತಿ ಚೇತ್ । ಬಾಧಿತಾನುವೃತ್ತಿರೇವ ಗತಿಃ । ಉಕ್ತಂ ಹಿ **ಬೃಹದಾರಣ್ಯಕಭಾಷ್ಯೇ** – "ನ

---

ಜ್ಞಾನಿಗಳಿಗೂ ದ್ವೈತಪ್ರಪಂಚವು ತೋರುತ್ತದೆಯೋ ಇಲ್ಲವೋ ? ತೋರುತ್ತದೆ ಎಂದಾದರೆ ಆ ಜ್ಞಾನಿತ್ವಕ್ಕೆ ಏನು ಬಂತು ? ತೋರುವುದಿಲ್ಲ ಎಂದಾದರೆ ಸಂಪ್ರದಾಯಪ್ರವರ್ತಕರಾದ ಆಚಾರ್ಯರು(ಎಂಬುವವರು) ಹೇಗಿದ್ದಾರು ? ಇನ್ನು ಪ್ರಾರಬ್ಧಕರ್ಮದ ಶೇಷವಾಗಿ ಆ ಫಲವನ್ನನ್ನುಭವಿಸುವುದಕ್ಕಾಗಿ ದ್ವೈತದ ಅನುವೃತ್ತಿಯು ಇರುತ್ತದೆ ಎಂಬುದನ್ನು ಸ್ವೀಕರಿಸುವುದಾದರೆ, ಆಗ ಪ್ರಾರಬ್ಧಕರ್ಮದಿಂದ ಉಂಟಾದ ಅವಿದ್ಯಾಲೇಶವನ್ನೂ ಸಹ ಅವಶ್ಯವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಆಗ ವಿದ್ವತ್ತ್ವ, ಅವಿದ್ವತ್ತ್ವ ಎಂಬುದೆರಡೂ ಒಬ್ಬನೇ ಪುರುಷನಿಗೆ ಒಟ್ಟಿಗೇ ಇದೆ ಎಂದಾಗುವುದು. ಹೀಗಾಗಿ ಹೇಗೂ ಈ ಪ್ರಕ್ರಿಯೆಯು ಹೊಂದುಗಡೆಯಾಗದೇ ಇರುವದೆಂದಾಗುವುದಲ್ಲಾ! ಎಂದರೆ ಹಾಗಲ್ಲ, ದ್ವಿಚಂದ್ರಜ್ಞಾನದಂತೆ ಪ್ರಾರಬ್ಧಕರ್ಮಶೇಷದಿಂದ ಬಾಧಿತವಾದ ದ್ವೈತ ಪ್ರತಿಭಾಸದ ಅನುವೃತ್ತಿ ಇರುತ್ತದೆ ಎಂದು ಹಿಂದೆಯೇ ತಿಳಿಸಿಕೊಟ್ಟಾಗಿದೆ. ಅವಿದ್ಯಾಲೇಶವನ್ನಾದರೋ ಒಪ್ಪಿಕೊಂಡಿಲ್ಲವಾದ್ದರಿಂದಲೇ ತಳ್ಳಿಹಾಕಿದ್ದಾಗಿದೆ. ಜ್ಞಾನಿಯಲ್ಲೂ ಅನುವೃತ್ತವಾಗುತ್ತಿರುವ ದ್ವೈತಜ್ಞಾನಕ್ಕೆ ಗತಿ ಏನು? (ಏಕೆಂದರೆ) ದ್ವೈತಜ್ಞಾನವಿಲ್ಲದಿದ್ದರೆ ಗುರು, ಶಿಷ್ಯ ಮುಂತಾದ ವ್ಯವಹಾರವೇ ಹೊಂದುವುದಿಲ್ಲ ಅಲ್ಲವೆ ? ಎಂದರೆ – ಬಾಧಿತಾನುವೃತ್ತಿಯೇ

ಚ ವಿಪರೀತಪ್ರತ್ಯಯೋ ವಿದ್ಯಾವತ ಉತ್ಪದ್ಯತೇ । ನಿರ್ವಿಷಯತ್ವಾತ್। ಅನವಧೃತವಿಷಯವಿಶೇಷಸ್ವರೂಪಂ ಹಿ ಸಾಮಾನ್ಯಮಾತ್ರಮಾಶ್ರಿತ್ಯ ವಿಪರೀತಪ್ರತ್ಯಯ ಉತ್ಪದ್ಯಮಾನ ಉತ್ಪದ್ಯತೇ, ಯಥಾ ಶುಕ್ತಿಕಾಯಾಂ ರಜತಮಿತಿ । ಸ ಚ ವಿಷಯವಿಶೇಷಾವಧಾರಣವತೋಽಶೇಷವಿಪರೀತ-ಪ್ರತ್ಯಯಾಶ್ರಯಸ್ಯೋಪಮರ್ದಿತತ್ವಾನ್ನ ಪೂರ್ವವತ್ ಸಂಭವತಿ । ಶುಕ್ತಿಕಾದೌ ಸಮ್ಯಕ್ಪ್ರತ್ಯಯೋತ್ಪತ್ತೌ ಪುನರದರ್ಶನಾತ್ । ಕ್ವಚಿತ್ತು ವಿದ್ಯಾಯಾಃ ಪೂರ್ವೋತ್ಪನ್ನವಿಪರೀತಪ್ರತ್ಯಯಜನಿತಸಂಸ್ಕಾರೇಭ್ಯೋ ವಿಪರೀತಪ್ರತ್ಯಯಾವ-ಭಾಸಾಃ ಸ್ಮೃತಯೋ ಜಾಯಮಾನಾ ವಿಪರೀತಪ್ರತ್ಯಯಭ್ರಾನ್ತಿಮಕಸ್ಮಾತ್ ಕುರ್ವನ್ತಿ । ಯಥಾ ವಿಜ್ಞಾತದಿಗ್ವಿಭಾಗಸ್ಯಾಪ್ಯಕಸ್ಮಾದ್ದಿಗ್ವಿಪರ್ಯಯಭ್ರಮಃ । ಸಮ್ಯಗ್ಜ್ಞಾನವತೋಽಪಿ ಚೇತ್ ವಿಪರೀತಪ್ರತ್ಯಯ ಉತ್ಪದ್ಯತೇ,

---

ಗತಿಯು.ಇದನ್ನು ಬೃಹದಾರಣ್ಯಕ ಭಾಷ್ಯದಲ್ಲಿ ಹೇಳಿದೆ.- "ವಿಪರೀತ-ಪ್ರತ್ಯಯವು ಜ್ಞಾನಿಗೆ ಉಂಟಾಗುವುದೂ ಇಲ್ಲ ಏಕೆಂದರೆ (ವಿಪರೀತಪ್ರತ್ಯಯಕ್ಕೆ ಅಲ್ಲಿ) ವಿಷಯವೇ ಇರುವುದಿಲ್ಲ. ಇಂಥ ವಿಷಯವೆಂದು ವಿಶೇಷವಾಗಿ ಗೊತ್ತಾಗದೇ ಇರುವಾಗ ಸಾಮಾನ್ಯಮಾತ್ರವನ್ನು ಆಶ್ರಯಿಸಿ ಅಲ್ಲವೆ, ಹುಟ್ಟಬಹುದಾದ ವಿಪರೀತಪ್ರತ್ಯಯವು ಕಪ್ಪೇಚಿಪ್ಪಿನಲ್ಲಿ ಬೆಳ್ಳಿ ಎಂಬ ಪ್ರತ್ಯಯವು ಹುಟ್ಟುವಂತೆ - ಹುಟ್ಟುತ್ತದೆ. ಆದರೆ ಆ ವಿಪರೀತಪ್ರತ್ಯಯವು ಇಂಥ ವಿಷಯವೆಂದು ನಿಶ್ಚಯವಾಗಿರುವ ಜ್ಞಾನಿಗೆ ವಿಪರೀತಪ್ರತ್ಯಯಗಳಿಗೆಲ್ಲಾ ಆಶ್ರಯವಾಗಿರುವ (ಕೇವಲ ಸಾಮಾನ್ಯಜ್ಞಾನವು) ನಾಶವಾಗಿಬಿಟ್ಟಿರುವುದರಿಂದ ಮೊದಲಿನಂತೆ ಆಗುವುದಿಲ್ಲ. ಏಕೆಂದರೆ ಕಪ್ಪೇಚಿಪ್ಪು ಮುಂತಾದದ್ದರಲ್ಲಿ ಸರಿಯಾದ ಜ್ಞಾನವು ಉಂಟಾದ ಬಳಿಕ (ವಿಪರೀತ ಜ್ಞಾನವು) ಮತ್ತೆ ಕಾಣುವುದಿಲ್ಲ. ಆದರೆ ಒಂದೊಂದು ಕಡೆಯಲ್ಲಿ ಜ್ಞಾನಕ್ಕಿಂತ ಮೊದಲು ವಿಪರೀತಪ್ರತ್ಯಯದಿಂದುಂಟಾದ ಸಂಸ್ಕಾರಗಳಿಂದ ವಿಪರೀತಪ್ರತ್ಯಯದಂತೆ ಕಾಣುವ ಸ್ಮೃತಿಗಳು ಹುಟ್ಟಿ (ಅದು) ವಿಪರೀತ ಪ್ರತ್ಯಯವೆಂಬ ಭ್ರಾಂತಿಯನ್ನು ಅಕಸ್ಮಾತ್ತಾಗಿ ಉಂಟುಮಾಡುವವು. ಹೇಗೆಂದರೆ ದಿಗ್ವಿಭಾಗವನ್ನರಿತುಕೊಂಡವ-ನಿಗೂ ಅಕಸ್ಮಾತ್ತಾಗಿ ಬೇರೆ ದಿಕ್ಕೆಂಬ ಭ್ರಮೆಯುಂಟಾಗುತ್ತದೆ. ಸರಿಯಾಗಿ ತಿಳಿದುಕೊಂಡಿರುವವನಿಗೂ ಮೊದಲಿನಂತೆ ವಿಪರೀತಪ್ರತ್ಯಯ(ವುಂಟಾಗುವ)-

ಸಮ್ಯಗ್ಜ್ಞಾನೇಽಪ್ಯವಿಸ್ರಂಭಾತ್ ಶಾಸ್ತ್ರಾರ್ಥವಿಜ್ಞಾನಾದೌ ಪ್ರವೃತ್ತಿರಸಮಞ್ಜಸಾ ಸ್ಯಾತ್ । ಸರ್ವಂ ಚ ಪ್ರಮಾಣಮಪ್ರಮಾಣಂ ಸಂಪದ್ಯೇತ, ಪ್ರಮಾಣಾ-ಪ್ರಮಾಣಯೋರ್ವಿಶೇಷಾನುಪಪತ್ತೇಃ"(ಬೃ.ಭಾ. ೧-೪-೧೦, ಭಾ.ಭಾ ೧೭೩) ಇತಿ ॥

ನನು ಚೈವಂ ಬಾಧಕೇನ ಜ್ಞಾನೇನ ಭೇದಜ್ಞಾನಕಾರಣಸ್ಯಾನಾದ್ಯಜ್ಞಾನಸ್ಯ ಸರ್ವಥಾ ವಿನಷ್ಟತ್ವಾತ್ ಕಥಂ ಭೇದಜ್ಞಾನಾನುವೃತ್ತಿಃ ? ತದಭಾವೇ ಚ ಕಥಂ ಶಿಷ್ಯೇಭ್ಯಸ್ತತ್ತ್ವಜ್ಞಾನೋಪದೇಶಃ ? ತದನುವೃತ್ತೌ ಸ್ವಯಮಜ್ಞಸ್ಯ ಕಥಮಾಚಾರ್ಯತ್ವಮ್? ಬಾಧಿತಾನುವೃತ್ತಿಸ್ವೀಕಾರೇಽಪಿ ಕಥಂ ಮಿಥ್ಯಾ-ವಿಷಯತ್ವನಿಶ್ಚಯೇ ಸತ್ಯುಪದೇಶಾಯ ಪ್ರವೃತ್ತಿಃ? ಕಥಂ ಚ ನಿತ್ಯನಿ-ವೃತ್ತಾಜ್ಞಾನಸ್ಯ ಭಗವತೋಽರ್ಜುನಂ ಪ್ರತಿ ಗೀತೋಪದೇಶಃ ? ತಸ್ಮಾದ್ವಿದ್ಯಾ-

---

ದಾದರೆ ಸರಿಯಾದ ತಿಳಿವಳಿಕೆಯಲ್ಲೂ ವಿಶ್ವಾಸವಿಲ್ಲದೇ ಹೋಗುವುದರಿಂದ ಶಾಸ್ತ್ರಾರ್ಥವನ್ನರಿತುಕೊಳ್ಳುವುದೇ ಮುಂತಾದದ್ದರಲ್ಲಿ ತೊಡಗುವುದು ಸಮಂಜಸವಲ್ಲದೇ ಹೋಗುವುದು. ಪ್ರತಿಯೊಂದು ಪ್ರಮಾಣವೂ ಅಪ್ರಮಾಣವೇ ಆಗಿಬಿಟ್ಟೀತು ! ಏಕೆಂದರೆ ಆಗ ಪ್ರಮಾಣಕ್ಕೂ ಅಪ್ರಮಾಣಕ್ಕೂ ಯಾವ ವಿಶೇಷವೂ ಯುಕ್ತವಾಗುವುದಿಲ್ಲ. (ಬೃ. ಭಾ. ೧-೪-೧೦,ಭಾ ಭಾ. ೧೭೩).

ಹೀಗೆ ಬಾಧಕವಾದ ಜ್ಞಾನದಿಂದ ಭೇದಜ್ಞಾನಕ್ಕೆ ಕಾರಣವಾದ ಅನಾದಿಯಾದ ಅಜ್ಞಾನವು ಸಂಪೂರ್ಣವಾಗಿ ನಾಶವಾಗುವುದರಿಂದ (ಪುನಃ) ಭೇದಜ್ಞಾನದ ಅನುವೃತ್ತಿಯು ಹೇಗೆ ಸಾಧ್ಯ ? ಅದಿಲ್ಲದಿದ್ದರೆ ಶಿಷ್ಯರಿಗೆ ತತ್ತ್ವಜ್ಞಾನದ ಉಪದೇಶವೆಂಬುದು ಹೇಗಾದೀತು ! ಆ (ಅಜ್ಞಾನದ) ಅನುವೃತ್ತಿಯೂ ಇದ್ದುಬಿಟ್ಟರೆ ಅಜ್ಞಾನಿಯಾದ ತನಗೆ ಆಚಾರ್ಯತ್ವವೆಂಬು-ದಾದರೂ ಹೇಗೆ ? ಬಾಧಿತಾನುವೃತ್ತಿಯಿಂದ (ದ್ವೈತಜ್ಞಾನವಿರಬಹು-ದಾದರೋ ಅದು) ಸುಳ್ಳಾದದ್ದೆಂಬ ನಿಶ್ಚಯವಿದ್ದ ಮೇಲೆ ಉಪದೇಶಕ್ಕಾಗಿ ಪ್ರವರ್ತಿಸುವುದಾದರೂ ಹೇಗಾದೀತು ! ಎಂದೆಂದಿಗೂ ಅವಿದ್ಯೆಯನ್ನು ತೊಲಗಿಸಿಕೊಂಡ ಭಗವಂತನಿಗಾದರೂ ಅರ್ಜುನನ್ನು ಕುರಿತು ಗೀತೋಪ-ದೇಶವನ್ನು ಮಾಡಿದ್ದಾದರೂ ಹೇಗೆ (ಹೊಂದುತ್ತದೆ) ? ಆದ್ದರಿಂದ

ವಿದ್ಯಾಸ್ವರೂಪವಿಭಾಗೋಽಯಮಸಮಞ್ಜಸ ಏವೇತಿ ನಃ ಪ್ರತಿಭಾತೀತಿ ಚೇತ್। ಅತ್ರ ಪ್ರಷ್ಟವ್ಯೋ ಭವಾನ್ । ಕಿಂ ದ್ವೈತಸತ್ಯತ್ವಬಾಧಕಮದ್ವೈತಜ್ಞಾನಮಙ್ಗೀಕೃತ್ಯೇದಂ ಪ್ರಶ್ನಜಾಲಂ ಪ್ರತಾಯತೇಽಥವಾ ಅನಭ್ಯುಪಗಮ್ಯೇತಿ । ತತ್ರ ಪ್ರಥಮೇ ಕಲ್ಪೇ ತಾವನ್ನ ಪ್ರಶ್ನೋ ನಾಪಿ ಚೋತ್ತರಮ್ । ನ ಹ್ಯದ್ವಿತೀಯತತ್ತ್ವಜ್ಞಾನೇ ಸತಿ ಪುನರಪಿ ಕಿಂಚಿಚ್ಚೋದ್ಯಂ ಭವತಿ । ದ್ವಿತೀಯೇ ತು ಕಲ್ಪೇಽಜ್ಞದೃಷ್ಟ್ಯಾ ಸರ್ವೋಽಪ್ಯಯಂ ವ್ಯವಹಾರೋಽವಕಲ್ಪತ ಏವೇತಿ ನ ಕಸ್ಯಚಿದಾಕ್ಷೇಪಸ್ಯಾವಕಾಶಃ । ನ ಹ್ಯದ್ವೈತಸಿದ್ಧಾನ್ತೇ ಜ್ಞಾನೋತ್ಪತ್ತ್ಯಜ್ಞಾನಬಾಧಗುರುಶಿಷ್ಯಭೇದೋಪದೇಶಾದಿಕಂ ಪರಮಾರ್ಥ ಇತ್ಯಭ್ಯುಗಮ್ಯತೇ ಪ್ರಪಞ್ಚಸದ್ಭಾವತನ್ನಿವೃತ್ತೀ ವಾ ಪಾರಮಾರ್ಥಿಕೇ ಇತಿ । ದ್ವೈತಜ್ಞಾನಸನ್ದೂಷಿತಚಿತ್ತಾನಾಂ ತು ಶಿಷ್ಯಾಣಾಂ ಕ್ರಮೇಣ ಬೋಧನಾಯೇದಂ ಸರ್ವಂ ಪ್ರಕ್ರಿಯಾರಚನಮಿತಿ ನಾತ್ರ ಕಿಂಚಿದಸಾಮಞ್ಜಸ್ಯಮ್ । ಯಥಾಽಽಹ ಭಗವಾನ್

---

ವಿದ್ಯಾವಿದ್ಯೆಗಳ ಸ್ವರೂಪದ ವಿಭಾಗವೇನುಂಟು, ಇದು ಹೊಂದದೇ ಇರುವದೆಂದು ನಮಗೆ ತೋರುತ್ತದೆ ಎಂದರೋ ? ನಿನ್ನನ್ನು ಈ (ಸ್ಥಳದಲ್ಲಿ) ಕೇಳಬೇಕು, (ಈ ಪ್ರಶ್ನೆಗಳೇನಿವೆ) ಇದು ದ್ವೈತವು ಸತ್ಯವಾಗಿದೆ ಎಂಬ ಜ್ಞಾನವನ್ನು ಬಾಧೆಮಾಡುವ ಅದ್ವೈತಜ್ಞಾನವನ್ನು ಒಪ್ಪಿಕೊಂಡು ಕೇಳಲಾಗುತ್ತಿದೆಯೋ ಅಥವಾ ಒಪ್ಪಿಕೊಳ್ಳದೆಯೋ ? ಮೊದಲನೆಯ ಪಕ್ಷದಂತಾದರೆ ಪ್ರಶ್ನೆಯೂ ಹೊಂದುವುದಿಲ್ಲ ಉತ್ತರವೂ ಹೊಂದುವುದಿಲ್ಲ. ಏಕೆಂದರೆ ಅದ್ವಿತೀಯತತ್ತ್ವಜ್ಞಾನವಾದ ಮೇಲೆ ಮತ್ತೆ ಯಾವ ಆಕ್ಷೇಪವೂ ಇರುವುದಿಲ್ಲ. ಎರಡನೆಯ ಪಕ್ಷದಲ್ಲಾದರೆ ಅಜ್ಞಾನದೃಷ್ಟಿಯಿಂದ ಎಲ್ಲಾ ಈ ವ್ಯವಹಾರವೂ ಹೊಂದಿಯೇ ತೀರುತ್ತದೆಯಾದ್ದರಿಂದ ಅಲ್ಲೂ ಯಾವ ಆಕ್ಷೇಪಕ್ಕೂ ಅವಕಾಶವಿಲ್ಲ. ಅದ್ವೈತಸಿದ್ಧಾಂತದಲ್ಲಿ (ನಿಜವಾಗಿ) ಜ್ಞಾನದ ಉತ್ಪತ್ತಿಯು, ಅಜ್ಞಾನದ ಬಾಧೆಯು, ಗುರುಶಿಷ್ಯರು ಬೇರೆಬೇರೆ ಎಂಬ ಉಪದೇಶವೇ ಮೊದಲಾದವುಗಳನ್ನು ನಿಜವಾಗಿಯೇ ಇರತಕ್ಕದ್ದೆಂದಾಗಲೀ (ಹಾಗೆಯೇ) ಪ್ರಪಂಚವು ಇದ್ದು, (ಅನಂತರ) ತೊಲಗುವುದು ಎಂಬುದನ್ನಾಗಲೀ ಒಪ್ಪಿರುವುದಿಲ್ಲ. ದ್ವೈತ (ಸತ್ಯತ್ವ) ಜ್ಞಾನದಿಂದ ಕಲುಷಿತರಾದ ಮನಸ್ಸುಳ್ಳ ಶಿಷ್ಯರಿಗೆ (ಕ್ರಮ) ಕ್ರಮವಾಗಿ ತಿಳಿಸಿಕೊಡುವುದಕ್ಕಾಗಿ ಈ ಎಲ್ಲಾ ಪ್ರಕ್ರಿಯೆಯನ್ನೂ ರಚನೆಮಾಡಿರುತ್ತದೆಯಾದ್ದರಿಂದ ಇಲ್ಲಿ ಯಾವುದೂ

**ಭಾಷ್ಯಕಾರಃ** – "ಏಕಸ್ಮಿನ್ ಬ್ರಹ್ಮಣಿ ನಿರುಪಾಧಿಕೇ ನೋಪದೇಶೋ ನೋಪದೇಷ್ಟಾ ನ ಚೋಪದೇಶಗ್ರಹಣಫಲಮ್" (ಬೃ. ಭಾ. ೨-೧-೨೦ ಭಾ.ಭಾ. ೩೨೬) ಇತಿ । **ಶ್ರೀಮದ್ಗೌಡಪಾದಾಶ್ಚ** – "ಪ್ರಪಞ್ಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ । ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ॥ ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ । ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ ॥" (ಮಾಂ. ಕಾ. ೧-೧೭, ೧೮) ಇತಿ । ಏತೇನ ಭ್ರಾನ್ತಿಬಾಧಯೋರಸ್ತಿತ್ವನಾಸ್ತಿತ್ವ-ವಿಕಲ್ಪನಮಪಿ ಪ್ರತ್ಯುಕ್ತಂ ವೇದಿತವ್ಯಮ್ । ತಯೋರಪ್ಯಧ್ಯಾರೋಪದೃಷ್ಟ್ಯೈವ ಸತ್ತ್ವಾತ್, ಪರಮಾರ್ಥತಶ್ಚಾನಙ್ಗೀಕಾರಾತ್ । ಕಿಂ ಬಹುನಾ ಯದ್ಯದಾಕ್ಷಿಪ್ಯತೇಽತ್ರ ಪ್ರಕ್ರಿಯಾಯಾಂ ಯದ್ಯಚ್ಚ ಪರಿಹ್ರಿಯತೇ ತದುಭಯಮಪ್ಯಧ್ಯಾರೋಪದೃಷ್ಟ್ಯೈವ ಶಿಷ್ಯವ್ಯುತ್ಪಾದನಾರ್ಥಮ್, ನ ತು

---

ಹೊಂದದೇ ಇರುವುದು ಇಲ್ಲ. ಈ (ವಿಷಯಕ್ಕೆ) ಪೂಜ್ಯರಾದ **ಭಾಷ್ಯಕಾರರು** ಹೇಳಿರುತ್ತಾರೆ – ನಿರುಪಾಧಿಕವಾದ ಅದ್ವಿತೀಯಬ್ರಹ್ಮದಲ್ಲಿ ಉಪದೇಶ-ವಾಗಲೀ, ಉಪದೇಶ ಮಾಡುವವನಾಗಲೀ ಉಪದೇಶವನ್ನು ಗ್ರಹಣೆ ಮಾಡಿದ್ದರ ಫಲವಾಗಲೀ ಇರುವುದಿಲ್ಲ. (ಬೃ. ೨-೧-೨೦) (ಎಂದಿದ್ದಾರೆ). **ಶ್ರೀಗೌಡಪಾದರೂ** ಸಹ "ಪ್ರಪಂಚವು ಒಂದು ವೇಳೆ ಇದ್ದಿದ್ದರೆ ಹೋದೀತು! (ಇದರಲ್ಲಿ) ಸಂಶಯವಿಲ್ಲ. ಇದೆಲ್ಲವೂ ಮಾಯಮಾತ್ರವಾಗಿದೆ, ಅದ್ವೈತವೇ ಪರಮಾರ್ಥವಾದದ್ದು", "(ಶಿಷ್ಯಾದಿ) ವಿಕಲ್ಪವು ಯಾರಿಂದಲಾದರೂ (ನಿಜವಾಗಿ) ಕಲ್ಪಿಸಿದ್ದಾಗಿದ್ದರೆ ಅದು ತೊಲಗಬೇಕು. (ಆದರೆ) ಇದು (ಕೇವಲ) ಉಪದೇಶಕ್ಕಾಗಿ (ಹೇಳಿದ್ದು), (ತತ್ತ್ವವು) ಗೊತ್ತಾದರೆ ದ್ವೈತವು ಇರುವುದಿಲ್ಲ" – (ಮಾಂ. ಕಾ ೧-೧೭,೧೮) ಎಂದಿದ್ದಾರೆ. ಇಷ್ಟು ಹೇಳಿದ್ದರಿಂದ ಭ್ರಾಂತಿ ಮತ್ತು ಬಾಧೆಗಳು "ಇದೆ, ಇಲ್ಲ" ಎಂಬ ವಿಕಲ್ಪನೆಗೂ ಉತ್ತರವನ್ನು ಕೊಟ್ಟಂತಾಯಿತೆಂದು ತಿಳಿಯಬೇಕು. (ಏಕೆಂದರೆ) ಅವೆರಡನ್ನೂ ಅಧ್ಯಾರೋಪದೃಷ್ಟಿಯಿಂದಲೇ ಒಪ್ಪಿದ್ದಾಗಿರುತ್ತದೆ. ನಿಜವಾಗಿ ಒಪ್ಪಿರುವುದೇ ಇಲ್ಲ. ಹೆಚ್ಚೇನು ಹೇಳುವುದು! ಈ ಪ್ರಕ್ರಿಯೆಯಲ್ಲಿ ಏನೇನು ಆಕ್ಷೇಪಗಳಿವೆಯೋ ಹಾಗೆಯೇ ಏನೇನು ಪರಿಹಾರವಿರುತ್ತದೋ ಅವೆರಡೂ ಅಧ್ಯಾರೋಪ-ದೃಷ್ಟಿಯಿಂದಲೇ – ಶಿಷ್ಯರಿಗೆ ತಿಳಿವಳಿಕೆಯುಂಟಾಗುವುದಕ್ಕಾಗಿ – ಹೇಳಿದ್ದೇ

ವಾಸ್ತವಿಕತ್ವಮಭಿಪ್ರೇತ್ಯೇತ್ಯೇಷ ಅಧ್ಯಾಸಭಾಷ್ಯಸಾರಃ । ಅತ ಏವಾಹುಃ ಸಾಂಪ್ರದಾಯಿಕಾಃ – "ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ"(ಗೀ.ಭಾ ೧೩-೧೩, ಭಾಭಾ. ೭೯೭) ಇತಿ ॥

**೭೨. ಉಪಸಂಹಾರಃ –** ತದೇವಂ ಸರ್ವೇಽಪಿ ವೇದಾನ್ತಾ ಆತ್ಮೈಕತ್ವ-ವಿದ್ಯಾಪ್ರತಿಪತ್ತಯ ಆರಭ್ಯನ್ತೇ । ವಿದ್ಯಾಯಾಶ್ಚ ಫಲಂ ಸಂಸಾರಾನರ್ಥ-ಹೇತೋರವಿದ್ಯಾಯಾಃ ಪ್ರಹಾಣಮ್ । ತದೇತದುಭಯಮತ್ರ ಶಾರೀರಕಮೀಮಾಂಸಾಯಾಂ ನ್ಯಾಯತೋ ನಿರ್ಣೇಷ್ಯತ ಇತಿ ಸೂಚಿತಮ್ "ಅಥಾತೋ ಬ್ರಹ್ಮಜಿಜ್ಞಾಸಾ" ಇತಿ ಸೂತ್ರೇಣ । ಅತ್ರ ಚ ವಿದ್ಯಯಾ ಪ್ರಹಾತವ್ಯತ್ವೇನ ಸೂತ್ರಿತಾ ಯೇಯಮವಿದ್ಯಾ ಸಾ ಸತ್ಯಾನೃತಯೋ-ರಾತ್ಮಾನಾತ್ಮನೋರನ್ಯೋನ್ಯಾಧ್ಯಾಸರೂಪೈವ, ವಿದ್ಯಾ ಚಾಽಽತ್ಮನೋಽ-ದ್ವಿತೀಯಬ್ರಹ್ಮರೂಪೇಣ ನಿರ್ಧಾರಣಮೇವೇತಿ ವಿಶದಯಿತುಮಯಂ ಭಗವತೋ ಭಾಷ್ಯಸನ್ದರ್ಭಃ ಸಕಲಶಾಸ್ತ್ರೋಪೋದ್ಘಾತರೂಪಃ, ತಥಾ ಚ

---

ಹೊರತು ನಿಜವಾಗಿಯೇ ಇದೆ ಎಂಬ ಅಭಿಪ್ರಾಯದಿಂದಲ್ಲ ಎಂಬುದು ಅಧ್ಯಾಸಭಾಷ್ಯದ ಸಾರವು. ಆದ್ದರಿಂದಲೇ ಸಾಂಪ್ರದಾಯಿಕರು (ಈ ಮಾತನ್ನು) ಹೇಳಿರುತ್ತಾರೆ. "ಅಧ್ಯಾರೋಪಾಪವಾದಗಳಿಂದ ನಿಷ್ಪ್ರಪಂಚವಾದ ಬ್ರಹ್ಮವನ್ನು ವಿವರಿಸಲಾಗುತ್ತದೆ" (ಗೀ. ಭಾ. ೧೩-೧೩, ಭಾ.ಭಾ ೭೯೭) ಎಂದು.

**೭೨. ಉಪಸಂಹಾರ –** ಹೀಗೆ ಎಲ್ಲಾ ವೇದಾಂತಗಳೂ ಆತ್ಮೈಕತ್ವ-ವಿದ್ಯಾಪ್ರತಿಪಾದನೆಗಾಗಿಯೇ ಹೊರಟಿರುತ್ತವೆ. ವಿದ್ಯೆಯ ಫಲವಾದರೋ ಸಂಸಾರಾನರ್ಥಕ್ಕೆ ಕಾರಣವಾದ ಅವಿದ್ಯೆಯನ್ನು ಕಳೆಯುವುದೇ ಆಗಿದೆ. ಆ ಈ ಎರಡನ್ನೂ ಶಾರೀರಕಮೀಮಾಂಸೆಯಲ್ಲಿ ಯುಕ್ತಿಯಿಂದ ನಿರ್ಣಯಿಸ-ಲಾಗುತ್ತದೆ ಎಂದು, "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರದಿಂದ ಸೂಚಿಸಿದೆ. ಇಲ್ಲಿ ವಿದ್ಯೆಯಿಂದ ಕಳೆದುಕೊಳ್ಳಬೇಕೆಂದು ಯಾವ ಅವಿದ್ಯೆಯು ಸೂತ್ರ (ಪ್ರಾಯವಾಗಿ) ಹೇಳಲ್ಪಟ್ಟಿದೆಯೋ ಅದು ಸತ್ಯಾನೃತವಾದ ಆತ್ಮಾನಾತ್ಮರುಗಳ ಅನ್ಯೋನ್ಯಾಧ್ಯಾಸರೂಪವೇ ಆಗಿರುವದು, ವಿದ್ಯೆಯಾದರೋ ಆತ್ಮನು ಅದ್ವಿತೀಯರೂಪವಾದ ಬ್ರಹ್ಮವೆಂದು ನಿರ್ಧಾರಣೆ ಮಾಡುವುದೇ ಆಗಿದೆ ಎಂಬುದನ್ನು ಸ್ಪಷ್ಟಪಡಿಸುವುದಕ್ಕೆ ಈ ಸಕಲ ಶಾಸ್ತ್ರಕ್ಕೂ ಉಪೋದ್ಘಾತ-

ವ್ಯಾಖ್ಯಾತಮಸ್ಮಾಭಿರಿತಿ ಸರ್ವಂ ಶಿವಮ್ ॥

೧. ಅಧ್ಯಸ್ತಮಾತೃಮಾನಾದಿಪ್ರಪಞ್ಚೋಽಯಂ ಪರಃ ಪುಮಾನ್ ।
ಸ್ವತಃಸಿದ್ಧಶ್ಚ ಸರ್ವಾತ್ಮಾ ಶಙ್ಕರಃ ಶ್ರುತಿಗೋಚರಃ ॥
ಅಹಂ ದೇಹೀ ಸ್ವೇಚ್ಛಾಕಲಿತವಿಷಯಗ್ರಾಹಿಕರಣಸ್ತಥಾ
ಕರ್ತಾ ಭೋಕ್ತಾ ವಿವಿಧಫಲವತ್ಕರ್ಮನಿರತಃ ।
ಸುಖೀ ದುಃಖೀ ಜೀರ್ಣೋ ಮರಣಮುಪಗನ್ತೇತಿ ತಮಸಾ
ವಿಮೂಢೋ ಲೋಕೋಽಯಂ ಸ್ವಮಿಹ ಪರರೂಪಂ ಸ್ಥಗಯತಿ ॥೧॥

೨. ಸತ್ಯಂ ಜ್ಞಾನಮನನ್ತಮೇಕಮಮಲಂ ಸರ್ವಾತ್ಮಭೂತಂ ಚ ಯತ್
ಸ್ವಾತ್ಮಸ್ಥಂ ಸದಪೀಹ ನೈಚ್ಯಮಗಮನ್ಮಿಥ್ಯಾಮನೀಷಜುಷಾಮ್ ।
ಜಿಜ್ಞಾಸ್ಯಂ ಜಗತೋಽಸ್ಯ ಕಾರಣಮಿತಿ ತ್ರಯ್ಯನ್ತಮೇಯಂ ಚ ಯ-
ನ್ನಿರ್ದಿಶ್ಯಾಪವದನ್ತಿ ನೇತಿ ನಿಗಮಾಸ್ತಚ್ಛಾಙ್ಕರಂ ಸ್ವಂ ಮಹಃ ॥೨॥

---

ರೂಪವಾದ (ಅಧ್ಯಾಸ) ಭಾಷ್ಯದ ಸಂದರ್ಭವು, ಅದೇ ರೀತಿಯಾಗಿಯೇ ನಾವು ವ್ಯಾಖ್ಯಾನವನ್ನು ಮಾಡಿರುತ್ತೇವಾದ್ದರಿಂದ ಸರ್ವವೂ ಮಂಗಲವು.

೧. ಹುಟ್ಟು ಹಾಕಿದ್ದಾದ ಪ್ರಮಾತೃಪ್ರಮಾಣವೇ ಮುಂತಾದ ರೂಪವಾಗಿದೆ ಈ ಪ್ರಪಂಚವು. ಪುರುಷನು (ಇದಕ್ಕಿಂತ) ಮಿಗಿಲಾದವನು ಮತ್ತು ಸ್ವತಃಸಿದ್ಧನೂ, ಸರ್ವಾತ್ಮನೂ, ಸುಖವನ್ನುಂಟುಮಾಡುವವನೂ (ಆದ ಈತನು) (ಕೇವಲ) ಶ್ರುತಿಯಿಂದ ತಿಳಿದುಬರುವವನು. ನಾನು ದೇಹವುಳ್ಳವನು, ತನ್ನ ಇಚ್ಛೆಯಿಂದ ಸ್ವೀಕರಿಸಿದ್ದಾದ ವಿಷಯವನ್ನು ತಿಳಿಯುವ ಇಂದ್ರಿಯವುಳ್ಳವನು, ಹಾಗೆಯೇ ಕರ್ತೃವೂ , ಭೋಕ್ತೃವೂ, ನಾನಾ ಫಲವುಳ್ಳ ಕರ್ಮದಲ್ಲಿ ತೊಡಗಿರುವಾತನು, ಸುಖಿಯು, ದುಃಖಿಯು, ಜೀರ್ಣನು, ಮರಣವನ್ನು ಹೊಂದುವವನು ಎಂದು ಈ ಜನರು ಅಜ್ಞಾನದಿಂದ ಮೂಢರಾಗಿ ಇಲ್ಲಿ ತಮ್ಮ ಹೆಚ್ಚಿನ (ಸ್ವ) ರೂಪವನ್ನು ತಡೆಗಟ್ಟಿರುತ್ತಾರೆ. (ತಮ್ಮ ನಿಜ ರೂಪವನ್ನು ಮರೆತಿರುತ್ತಾರೆ).

೨. ಸತ್ಯವೂ, ಜ್ಞಾನವೂ, ಅನಂತವೂ, ಏಕವೂ, ಪರಿಶುದ್ಧವೂ ಮತ್ತು ಸರ್ವಾತ್ಮಕಭೂತವಾದ ಯಾವ ರೂಪವುಂಟೋ ಅದು ತನ್ನಲ್ಲೇ ಇದ್ದರೂ ಇಲ್ಲಿ ಮಿಥ್ಯಾಜ್ಞಾನವುಳ್ಳವರಿಗೆ (ಇದು) ಕೀಳುರೂಪವನ್ನು ಪಡೆದಿದೆ. (ಈ)

ಖ. ಏಕಂ ತತ್ತ್ವಂ ಯದಿಹ ಸಕಲಂ ದೃಶ್ಯತೇ ಶ್ರೂಯತೇ ವಾ
ಸತ್ಯಂ ಸತ್ಯಂ ತ್ವಮಸಿ ತದಿತಿ ಶ್ರಾವಯದ್ ವೇದವಾಕ್ಯಮ್ ।
ಭಾಷ್ಯವ್ಯಾಖ್ಯಾಂ ವಿಮೃಶ ಸುಗಮಾಮೇತದರ್ಥಾವಗತ್ಯೈ
ಮೂಲಾವಿದ್ಯಾಂ ಜಹಿಹಿ ವಿತತಾಂ ಸಚ್ಚಿದಾನನ್ದದೃಷ್ಟ್ಯಾ ॥ಖ॥

---

ಜಿಜ್ಞಾಸ್ಯವಾದ ಜಗತ್ತಿಗೆಲ್ಲಾ ಕಾರಣವಾದ ವೇದಾಂತಗಳಿಂದ ತಿಳಿದುಬರುವ ಯಾವ ತತ್ತ್ವವುಂಟೋ, ಅದನ್ನು ತೋರಿಸಿ, "ಇದಲ್ಲ, (ಇದಲ್ಲ)", ಎಂಬೀ ರೂಪವಾಗಿ ವೇದಗಳು ಅಪವಾದಮಾಡುವವೋ ಅದು ತನ್ನದೇ ಆದ ಹೆಚ್ಚಿನ ಸುಖಕರರೂಪವು.

ಖ. ಈ ಯಾವ ಎಲ್ಲಾ (ಸುತ್ತಲೂ) ಕೇಳಿಬರುತ್ತಲೂ ಕಾಣಬರುತ್ತಲೂ ಇರುವ ಸಕಲ (ಜಗತ್ತುಂಟೋ) ಅದೆಲ್ಲಾ ಒಂದೇ ತತ್ತ್ವವು. "ಅದೇ ನೀನಾಗಿರುವೆ" ಇದು ಸತ್ಯ ಸತ್ಯ ಎಂದು ವೇದವಾಕ್ಯವು ಕೇಳಿಸುತ್ತಿದೆ. ಭಾಷ್ಯದ ಅರ್ಥವನ್ನು ಗೊತ್ತುಮಾಡಿಕೊಳ್ಳುವುದಕ್ಕಾಗಿ ಭಾಷ್ಯದವ್ಯಾಖ್ಯಾನವಾದ "ಸುಗಮಾ" ಎಂಬ ಹೆಸರಿನ ವ್ಯಾಖ್ಯಾನವನ್ನು ವಿಮರ್ಶಿಸುವವನಾಗು. (ಹಾಗೆಯೇ) ಸಚ್ಚಿದಾನಂದನಾದ ಪರಮಾತ್ಮದೃಷ್ಟಿಯನ್ನವಲಂಬಿಸುವ ಮೂಲಕ (ಅಥವಾ- ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ತಿಳಿಸಿಕೊಟ್ಟ ದೃಷ್ಟಿಯನ್ನವಲಂಬಿಸುವ ಮೂಲಕ) ಈ ಹರಡಿದ್ದಾದ ಮೂಲಾವಿದ್ಯೆಯನ್ನು ಬಿಟ್ಟುಬಿಡು.

ಇತಿ ಶ್ರೀಮತ್ಪೂಜ್ಯಪಾದಶಙ್ಕರಭಗವಚ್ಚರಣನಿರನ್ತರಸ್ಮರಣ-
ಪರಿಚಯಾವಾಪ್ತವೇದಾನ್ತಪ್ರವೇಶೇನ
ಶ್ರೀ ಸಚ್ಚಿದಾನಂದೇಂದ್ರಸರಸ್ವತೀಭಿಕ್ಷುಣಾ ನಿರ್ಮಿತಾ
ಸುಗಮಾಖ್ಯಾ ವ್ಯಾಖ್ಯಾ
ಸಮಾಪ್ತಿಮಗಮತ್
ಓಂ ತತ್ಸತ್

*****

---

ಇತಿ ಶ್ರೀಮತ್ಪೂಜ್ಯಪಾದರಾದ ಶಂಕರಭಗವಚ್ಚರಣದ ನಿರಂತರ
ಸ್ಮರಣೆಯಿಂದ ಪರಿಚಯವಾದದ್ದರಿಂದುಂಟಾದ ವೇದಾಂತಪ್ರವೇಶವನ್ನು
ಹೊಂದಿದ ಶ್ರೀಸಚ್ಚಿದಾನಂದೇಂದ್ರಸರಸ್ವತಿ ಎಂಬ ಸಂನ್ಯಾಸಿಯಿಂದ
ರಚಿಸಿದ್ದಾದ ಸುಗಮಾ ಎಂಬ ಹೆಸರಿನ ವ್ಯಾಖ್ಯಾನವು
ಸಮಾಪ್ತಿಯಾಯಿತು.
ಓಂ ತತ್ ಸತ್

# ತಿದ್ದುಪಡಿ

| ಪುಟ | ಸಾಲು | ತಪ್ಪು | ಸರಿ |
|---|---|---|---|
| ಮೊದಲ ಮಾತು | ಕೆ – 5 | ಮಾರು | ಮೂರು |
| ಪರಿಚಯ | ಮೇ – 8 | ಕದೆಗೆ | ಕಡೆಗೆ |
| ಪರಿಚಯ | ಮೇ – 11 | ಕ್.ಜಿ | ಕೆ.ಜಿ. |
| ಪರಿಚಯ | ಕೆ –11 | ಹೊಳೇನಸೀಪುರ | ಹೊಳೇನರಸೀಪುರ |
| 4 | ಟಿಪ್ಪಣಿ | ನೊಡಿಕೊಳ್ಳಬೇಕು | ನೋಡಿಕೊಳ್ಳಬೇಕು. |
| 7 | ಕೆ – 9 | ಆನಾತ್ಮ | ಅನಾತ್ಮ |
| 13 | ಮೇ – 15 | ಸಂಕ್ರಾತಿ | ಸಂಕ್ರಾಂತಿ |
| 14 | ಕೆ – 5 | ಅವಕ್ಕೆ ಅನರ್ಥವು | ಆ ಈ ಅನರ್ಥವು |
| 14 | ಕೆ – 4<br>ಕೆ – 1ರ ವರೆಗೆ | ಆತ್ಮಾನಾತ್ಮರುಗಳಿಗೆ...<br>..... ಆಗುತ್ತಿರುತ್ತದೆ. | ಎಲ್ಲಿಯವರೆಗೆ ಸಂಸಾರದಲ್ಲಾಗುತ್ತಿರುವ ಅನರ್ಥವು ತಪ್ಪು ತಿಳಿವಳಿಕೆಯಿಂದಾದದ್ದಲ್ಲ, ಮತ್ತೇನೆಂದರೆ ನಿಜವಾಗಿಯೇ ಆಗುತ್ತಿರುತ್ತದೆ (ಎಂದಾಗುವುದೋ) ಅಲ್ಲಿಯವರೆಗೆ ಆತ್ಮಾನಾತ್ಮರುಗಳಿಗೆ ಅನ್ಯೋನ್ಯಾಧ್ಯಾಸವಾಗಿದೆ ಎಂಬುದು ಸುಳ್ಳು ಎಂದಾಗುತ್ತದೆ. |
| 16 | ಮೇ – 7 | ಅಹಂಬ್ರಾಹ್ಮಣಃ | ಅಹಂ ಬ್ರಾಹ್ಮಣಃ |
| 17 | ಮೇ – 3 | ಅಸ್ಮಪ್ರತ್ಯಯಗೋಚರ | ಅಸ್ಮತ್ಪ್ರತ್ಯಯಗೋಚರ |
| 18 | ಕೆ – 9 | ವಿಷಯಿಯಾದದ್ದನು | ವಿಷಯಿಯಾದದ್ದನ್ನು |

| ಪುಟ | ಸಾಲು | ತಪ್ಪು | ಸರಿ |
|---|---|---|---|
| 18 | ಮೇ–4 | ...ನ್ಯೋನ್ಯಧರ್ಮಾಶ್ಚಾ | ...ನ್ಯೋನ್ಯಧರ್ಮಾಂಶ್ಚಾ |
| 20 | (ಕನ್ನಡಭಾಗ)ಮೇ–3 | ಕ್ಷೇತ್ರಕ್ಲೇತ್ರಜ್ಞ | ಕ್ಷೇತ್ರಕ್ಷೇತ್ರಜ್ಞ |
| 22 | ಮೇ–5 | ತರ್ಹ್ಯತ್ತ್ಯೈವ | ತರ್ಹ್ಯಾತ್ತ್ಯೈವ |
| 44 | ಮೇ–5 | ಸಾನಿಧ್ಯವಶಾತ್ | ಸಾಂನಿಧ್ಯವಶಾತ್ |
| 58 | ಮೇ–7 | ದುಜ್ಞಾರ್ನತ್ವಾತ್ | ದುರ್ಜ್ಞಾನತ್ವಾತ್ |
| 59 | (ಕನ್ನಡಭಾಗ)ಮೇ–4 | (ಭಾಂತಿಕಾಲ) | (ಭ್ರಾಂತಿಕಾಲದಲ್ಲಿ) |
| 68 | (ಕನ್ನಡಭಾಗ)ಮೇ–7 | ೨–೪–೧೯೫ | ೩–೪–೧೯೫ |
| 73 | (ಕನ್ನಡಭಾಗ)ಮೇ–6 | ಸ್ಮತಿರೂಪಃ | ಸ್ಮೃತಿರೂಪಃ |
| 81 | (ಕನ್ನಡ) ಕೆ–2 | ನೈಷ್ಕರ್ಮ | ನೈಷ್ಕರ್ಮ್ಯ |
| 93 | (ಕನ್ನಡ) ಮೇ–6 | ಸಂಭಂಧ | ಸಂಬಂಧ |
| 99 | (ಕನ್ನಡ) ಕೆ–9 | ಕಾರಣವಿದ್ಯೆ | ಕಾರಣಾವಿದ್ಯೆ |
| 154 | (ಕನ್ನಡ) ಕೆ –12 | ಬಿದಿರುಕಂಬ | ತೊಲೆಕಂಬ |

*****

# ಸಂಸ್ಥಾಪಕರ ಸ್ಮರಣೆ

ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯವು ಸರ್ವದಾ ಸಂಸ್ಮರಣೀಯರಾದ ಶ್ರೀ ಶಂಕರಭಗವತ್ಪಾದರದು. ಬ್ರಹ್ಮೀಭೂತ ಶ್ರೀ **ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು** (ಪೂರ್ವಾಶ್ರಮದ ಶ್ರೀ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು - ವೈ.ಸುಬ್ಬರಾಯರು, ಜನನ - ೫-೦೧-೧೮೮೦) ಶ್ರೀ ಶಂಕರರ ವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನಮಂಥನಗಳಿಂದ ತಮ್ಮ ವಿಶಿಷ್ಟ ಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು ಮುತ್ತಿದ್ದ ಧೂಳನ್ನು ತೊಡೆದು ಶಾಂಕರವೇದಾಂತದ ನೈಜ ತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ ೨೦ನೇ ಶತಮಾನದ ಅಧಿಕೃತವಕ್ತಾರರಾದರು, ಪ್ರತಿಪಾದಕರಾದರು, "**ಅಭಿನವಶಂಕರರಾದರು**".

'ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ ೯೬ನೆಯ ವಯಸ್ಸಿನವರೆಗೂ ವೇದಾಂತ ಗ್ರಂಥದ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು '**ಪುರುಷಸರಸ್ವತಿ**' ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಆಂಗ್ಲ ಮತ್ತು ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮಜಿಜ್ಞಾಸುಗಳಿಗೆ ಇದು ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿದ್ದಾಗಲೂ ನಿರಂತರ ಅಧ್ಯಾತ್ಮ ಚಿಂತನೆಯಿಂದಲೇ ಜೀವನವನ್ನು ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ ಶ್ರೀ ಕೆ.ಎ. **ಕೃಷ್ಣಸ್ವಾಮಿ ಅಯ್ಯರ್**‌ರವರ, **ವೇ। ಬ್ರ। ಶ್ರೀ ಹಾನಗಲ್ಲು ವಿರೂಪಾಕ್ಷಶಾಸ್ತ್ರಿ**ಗಳವರ, **ಶ್ರೀಹೊಸಕೆರೆಚಿದಂಬರಯ್ಯ**ನವರ, **ಶ್ರೀಮಹಾಭಾಗವತರ**ವರ ಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ ಅನಂತರ ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹ ಭಾರತೀಮಹಾಸ್ವಾಮಿಗಳವರಿಂದ ಭಾಷ್ಯಶಾಂತಿ ಪಾಠ, ಶ್ರೀ ಗೋಂದಾವಲಿ ಮಹಾರಾಜರಿಂದ ಶ್ರೀರಾಮತಾರಕ ಮಂತ್ರೋಪದೇಶ, ಇವುಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

೧೯೩೭ರಲ್ಲಿ ಹೊಳೆನರಸೀಪುರದಲ್ಲಿ ನೆಲಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. ೧೯೪೮ ಸನ್ಯಾಸ ಸ್ವೀಕಾರ ಮಾಡಿದರು. ಶುದ್ಧತತ್ತ್ವನಿಷ್ಠರಾಗಿ ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಶಾಸ್ತ್ರೀಯ ನಿಯಮಪಾಲನೆಗೆ ಶ್ರೀಶ್ರೀಗಳವರು ಹೆಸರಾದವರು. ಅವರು ೧೯೨೦ರಲ್ಲಿ ಸ್ಥಾಪಿಸಿರುವ **ಅಧ್ಯಾತ್ಮಪ್ರಕಾಶಕಾರ್ಯಾಲಯವು** ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರಕೇಂದ್ರವಾಗಿದೆ.

ಪೂಜ್ಯರು ೧೯೭೫ನೇ ಆಗಸ್ಟ್ ೫ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಅವರು ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲಶಕ್ತಿಯಾಗಿದ್ದಾರೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥